The time should come all over the country very soon when all farmers, or at least a major portion of them, must transform this stagnant agriculture, this time-honoured subsistence form of agriculture into a commercial from of agriculture based on science and technology. Then alone I could congratulate the Minister and take him to my farm I know, or Hon. Minister, has some energy because you spring from a place form where I do. I have some soft corner for you, but the point is you are caught in the net. Your energies cannot come out ; you are surrouned by an atmosphere which renders you incapable of doing anything in spite of your energies and in spite of your willingness to do something. For instance, take this food policy. Do you think the food policy is something different from agriculture policy ? Your food policy in this country is only distribution oriented and not production oriented. Don't you think so ? He is nodding his head and so he is in agreement with me. So you agree that this food policy is detrimental to or inhibits production and it is not helpful to enthuse the farmers. Then what is it that you have done so far ? If some people in Bangalore or Mysore take a banner and go about in the streets, you simply begin to shiver and you forget that there are millions of people in this country who are suffering and still you do not turn your attention to them. But if 100 people go about in Bangalore with a banner, you straightaway run up to them and say 'I will do what you want.' But here is a price policy for which you have done nothing. The price policy in this country is not helpful to the producers. The Minister could have used all his influence at the inter-State Ministerial level to give a good price to the farmers. Unfortunately the price policy in this country is not production-oriented. I was very sorry to read a number of statements coming out from the inter-State Ministerial Conference. Unfortunately our Minister cannot change a full-stop or comma in them because everything is done by the Agricultural Price Commissioner who has to determine the prices in this country. He moves about in helicopters and aeroplanes and then even weeds look green to him and so he says that everything looks green and there is a green revolution and so he brings down the price from Rs. 50 to Rs. 40. He gives a report accordingly. By such a report the Agricultural Price Commissioner seals the fate of millions of agriculturists in this country. They simply copy the norms and formula adopted in other countries There are different formula adopted in different countries. Simply because a formula is is adopted in a particular country, it may not necessarily be good in India. We have got to evolve our own formula. Have you made any attempt to fix up the cost of cultivation here ? If you add the interest on capital invested and a reasonable margin of profit you can arrive at a fair price and declare your price policy. Here I may quote the price of rice that you are importing from outside. The import price is Rs. 102.5 and you are selling it here between Rs. 50 and 70. Actually you are subsidizing it between Rs. 32 and Rs. 44 for every quintal. In this way you are trying to fatten the foreign grower and giving only a

paltry sum of Rs. 40 or so to the indigenous grower. In this way you are doing a great injustice to our indigenous farmers who are actually maintaining our nation. At least give them their actual cost if not a profit. What is it that you have been doing for the past two decades? You have been importing huge quantities of rice and in this way you must have lost Rs. 3,500 crores to the nation. At next time if I be here and you be there, please do not leave any occasion for me to charge you in this way. Either you function properly or you resign: These are the only two things open to a Minister in a democratic set-up. You are spending so much of money on fanciful programmes. I ask, why on earth are you carrying on this policy of co-operative farming: So much of money is being sunk on these fanciful policies which have not yet added anything to production. The only thing is they have been able to employ some people and pay them something. I am saying this because I have got occasion to see the working of these co-operative farming societies. Even the special Commissions that have been appointed to go into this question have opined that the amounts spent on these co-operative farming societies are all a waste. Still for the fancy of it, you have been carrying on with these schemes. Tell me with your hand on your heart whether the co-operative farming societies are doing any good. If not, close them down.

Sri B. RACHIAH. What about your Society:

Sri H. M. CHANNABASAPPA. I have formed this society for a different purpose altogether. It is because I do not want farms to be small and petty; I have formed this society to increase production obviously to reduce the expenditure and obviously to bring science and technology in the functioning of farms. This society is functioning because of me. The moment I die, I assure you, this society also will die. You may ask me what about other societies. There leadershaip is wanting and therefore they cannot function efficiently. Don't go no presumptions which are not correct. In this country co-operative farming societies will not suceed unless we have proper climate for it. It may have succeeded elsewhere. In India in spite of all our experience, co-operative farming societies have not functioned well and they will not succeed and will not bring about the desired result. All the money that is spent on these societies is going waste and it is like throwing water into the gutter.

Sri. D. S. GOWDA. Will you accept the idea of co-operative farming societies if it is mooted by Smt. Indira Gandhi and Sri Jagjivan Ram:

Sri H. M. CHANNABASAPPA :— Whoever may say, I am definitely of the opinion that it is not a success and it is not going to be a success.

(SRI H. M. CHANNABASAPPA)

Therefore I am not hereto be guided or noseled by anybody, much less by big men or small men. I will be guided by reason and reason alone. So, by the time he comes next, if he continues to be the Minister for Agriculture, he must be bold enough to tell me, "I have examined these co-operative farming societies" and tell us that they have added to the production or else he must say, "I have taken your advice and closed them and saved so much of precious money".

The farmers' organisations are the only panacea for all their evils they are suffering from. In shaping policies on agriculture, price policy, food policy, production policy, land development policy, land utilisation policy- in all these matters the man who is actualy functioning as a farmer on the soil must participate and must be involved. Then alone you will have a realistic agricultural approach. If people who have nothing to do with agriculture, who have no knowledge of land and agriculteural problems begin to get involved in agricultral activities, I am fraid this will gave a death blow to agriculture Today the farmers' borums have become political bodies, only to catch power and money. Organisations of farmers must be built up at different levels and for different purposes. I was very happy when the other day the areca farmers came and told me that they have formed a union and apprised me of their problems. All over the country, the growers of sugar-cane and foodcrops must all unite and not act as politicians and interject politics but must become actualy the agents to speak on behalf of the farmers about their problems. Only when the Government is guided by peoply who can speak with authority on agriculture there is scope for development of agriculture in this c untry. If there is a best Extension Officer you post him in Delhi or in Bangalore. Extension work is at the level of the field and not in Bangalore. So, the best man in the State mnst be put at the lowest level in agriculture. I would be the most happy man if people who can speak with authority on extension work and people who are very well versed in all problems of agriculture are put as Extension Officers at the taluka level or district level. What is the good of having an Extension Officer who goes all over India and all over the world, accumulates knowledge and comes back and sits in Delhi, what can he do? The Delhi agricultural administration has grown beyond limits; probably it is going to the skies. If everybody wants to go to Delhi and become a supreme authority on agriculture, woe be to our agriculture. They will not know what is the difference between red soil and black soil. You must tell the Government of India that they shall have nothing to do with agriculture, that they shall not make any inroad into the functions and duties and responsibilities that have been rightly vested in the State under the Constitution. Have you got the guts, capacity and abilty to say that?

Traditional agriculture has to be transformed into agriculture based on technology and science. Your slogan is, "subsistence farming must become commercial farming ; it must become industrial farming" but have you implemented it ? Unless and unt l in this country agriculture is given a status of an industry and it is transformed from subsistence farming into industrial farming, there is no hope for the development of agriculture and production will not be commensurate with the increase in population. Instead of programmes of fit and jerk nature or touch and go nature, you must have a sustained policy and programme in agriculture. If there is any one sector which has been most talked of and least acted upon, it is agriculture. I have heard brilliant speechees by brilliant men on extension, education, research, co-operation and so on but if I ask them, "Have you done anything on the soil ?" ", they say that that is all for the Village level worker.

Production programmes are associated with panchayatiraj institutions. But who is the man who has got to produce ? It is the farmer. It is the soil which has got to lend itself for production and not your panchayatiraj institutions or your village level worker. So, this is not a battle of wits to be fought at Delhi or at Bangalore. Agriculture is a hard job, It is not a battle of wits to be fought by white-collared people at Delhi or at Bangalore. It is a very grim battle of freedom from hunger and battle of freedom from scarcity whilh can only be fought by the man behind the plough and non else. All that I and you have to do is to assist him and streangthen him, assist the soil and strengthen the soil. This is the guideline for the progress of agriculture. But whst is happening today? Only yesterday I heard a very disquieting news that the Reserve Bank of India has given a direction that all agricultural credit must be choked up. Nothing can be more dangerous than this one thing. It is for the Government immediately without losing even a second to find out what exactly is the cause for it.

Nationalisation of banks came as a boon to the farmers They were hoping that they would get some monetary help to put some fertilizers to the soil and grow something more. I learnt yesterday that for some reason or other, vested interests and interested people are trying to influence people to withdraw their deposits. The Reserve Bank of India will have no option but to do something in this matter. The Government of India is determined to pull up the lowest class of farmers who have been hit economically and other wise. If the Government is not going to remedy this situation immediately and forthwith, I am afraid Government will have a different story to tell when the Assembly meets next. Agriculture will be choked up for want of money by tho agriculturists. I am told from authoritative sources that the Reserve Bank and the 14 nationalised banks have stopped advancing money to the agri-

(Sri H. M. CHANNABASAPPA)

culturists. This is the most disquieting news; and probaly no news could be more disquieting than this. I want the Hon. Minister for Agriculture to take note of this and at least within 24 hours enlighten us what exactly is the reason for this move and what is the remedy for this.

Sri S. M. GURADDI:— What can this Government do?

Sri H. M. CHANNABASAPPA:— We are living in a unitary Government as part of a federal structure. Whatever the facts be, whoever may be the authority to remedy the situation, this Minister must have the drive and use his influence to provide farmers with the wherewitha- for carrying on their agricultural operations. Otherwise, he should cease to be in power. There is no meaning in telling: "I will try, I will consider." etc. These were all the stock answers given when Sir Mirze Ismail was the head of the Government and those answers will not do now.

As my time is running out, here are a few suggestions I am making Don't lose time. Make all arrangements to draw up electric lines on either side of Hemavathi, Cauvery and Lakshamanathirtha. Let the Minister not say that people are not coming forwad once you open the shop, the customers will there if you say: 'I will open the shop if the customers come', that is foolish. Power is one of the most essential things for the development of agriculture. Water is also very essential for agriculture. If water is not there in abundance and if power is not placed at the disposal of the agriculturists, what is the fun in expecting development in agriculture? Therefore, let the Minister make up his mind to provide these two requisites. There are people anxious to utillise water and power; I am sure there are. Therefore, on either side of these rivers, please take action to see that power lines are drawn and invite all people who want to take power, to do so. Let the Minister also take action to see that no pumpset is removed on either side of the river, for whatever reason it may be

There is no use giving Rs. 3,000 lons for wells. It is not going to bring about the desired effect. We must build up an organisation to see that wherever underground water is available, it could be drawn up. The Government must have an organisation to put up wells. Debit the entire cost to the farmer. Then automatically water will be available. No fool will misuse that water. He will use it and grow more food What is the good of the Government giving Rs. 2 or 30 thousand to the farmer. He spends it on somethingelse and will become pauper; he will become worse. Insufficient and inadequate loan will make a man in agriculture worse.

Once for all, you wind up these collective farms and save that money and use it for productive purposes.

I tell the Government that the Field Officers must be strengthened Thereby, I do not mean the appointment of more village workers, who are a drain upon the Treasury. One or two village Workers here and there would do; they are not at all suited for the purpose The village worker does not know the A, B, C, D, of agriculture. What is the scientific agriculture that Government expect from him. The pattern must be immediately changed. The worker on the farm must be able to help the farmer and he must bear the responsibility for production. Who is responsible for production in the Taluk ? If we ask the B. D.O he shows the Agricultural Officer. If we ask the Agricultural Extension Officer, he says: "What am I to do ? I am just moving between the Distrist Officer and the president." Therefore, the best man must be put at the Taluk level. That man must be given independence, he must be able to deliver the goods. He must know every bit of the soil an devery problem of the place. He must be the friend, philosopher and guide of the farmers in discharging their functions. Otherwise, your Agriculture Department is something which does not appeal to me.

Now about credit facility. For getting credit cards, the farmer has to spend Rs. 50 to 100 running about from Shekdar to the Patel, and from patel to the Shanbhoge and from there to the Amildar to get a certificate about his lands Unless a certificate is furnished to the banks, the banks will not give loans. Your Department must straight-way take the responsibility of furnishing him with the necessary certificates regarding his lands, their description and creditworthiness. The certificates must be so self-contained that the farmer must be able to secure the necessary loans to the extent necessary. Immediately the Bank sees the card it must be able to grant the loan.

MR. SPEAKEE.—The Hon. Member has already taken 50 minutess At this rate it would not be possible to accommodate other Member. of this party. Hon, Members should follow the time limit.

Sri H. M. CHANNABASAPPA: I wanted to speak about the policies. Within a minute or two, I will conclude.

With these few observation I would like to make a fervent appeal to you. This is an undertaking which cannot be neglected. If it is neglected it will lead to ruinous result. Therefore, don't pat yourself if a few people have made a good stride It is not enough to take us a loing way. Unless 80 per cent of our famers switch on to scientific faming and produce maximum possible per acre, this country will not have any future. Therefore, I love to discuss with your

(SRI H. M. CHANNABASAPPA)

officers at any time. Within the short time available here, it is difficult to say what all I wish to say. Now I do not want to further poceed and say what is done and what is not done for the development agriculture and invigorate the profession so that this country may have an atmosphere of plenty and prosperity.

With this words I would like to close my spech.

3-30 P.M.

ಶ್ರೀ. ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ) ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ೧೧,೧೯,೫೪,೦೦೦ ರೂ. ಗಳ ವ್ಯವಸಾಯ ಬೇಡಿಕೆಯನ್ನು ಒಪ್ಪುತ್ತಾ ಕೆಲವು ಸಲಹೆಗಳನ್ನು ಹೇಳಲು ಇಚ್ಛಿಸುತ್ತೇನೆ. ನಮ್ಮ ದೇಶ ವ್ಯವಸಾಯಗಾರರ ದೇಶ. ನೂರರಲ್ಲಿ ಎಂಬತ್ತೆಂಟು ಜನರು ವ್ಯವಸಾಯದಿಂದಲೇ ಜೀವನ ಮಾಡುತ್ತಾರೆ. ನಮ್ಮ ದೇಶ ವ್ಯವಸಾಯದಲ್ಲಿ ಸ್ವಯಂಪರಿಪೂರ್ಣತೆ ಪಡೆಯದೇ ಹೋದರೆ ನಮ್ಮ ದೇಶ ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಿಲ್ಲ. ವ್ಯವಸಾಯಗಾರರ ಪರಿಸ್ಥಿತಿ ನಿಜವಾಗಿಯೂ ಬಹಳ ಕಳವಳವನ್ನುಂಟುಮಾಡುವ ಸ್ಥಿತಿಯಲ್ಲಿದೆ. ವ್ಯವಸಾಯಗಾರರರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು ಹೆಚ್ಚು ಉತ್ಪನ್ನಗಳನ್ನು ಬೆಳೆಯಲು ಸಹಾಯಮಾಡದೇ ಹೋದರೆ ಆರ್ಥಿಕವಾಗಿ ವ್ಯವಸಾಯಗಾರರಾನವರು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ವ್ಯವಸಾಯಗಾರರಿಗೆ ಮುಖ್ಯವಾಗಿ ಏನೇನು ಸವಲತ್ತುಗಳು ಬೇಕೋ ಅವುಗಳು ಸಕಾಲದಲ್ಲಿ ದೊರೆಯುವ ವ್ಯವಸ್ಥೆ ಮಾಡಬೇಕು. ವ್ಯವಸಾಯಗಾರರಿಗೆ, ವ್ಯವಸಾಯ ಉತ್ಪನ್ನವನ್ನು ಹೆಚ್ಚು ಮಾಡಬೇಕಾದರೆ ಸಕಾಲದಲ್ಲಿ ಸಾಕಷ್ಟು ಉತ್ತಮ ದರ್ಜೆಯ ಬೀಜಗಳನ್ನು ಹಾಗೂ ಕೃತಕ ಗೊಬ್ಬರಗಳನ್ನು ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡಬೇಕು ಮತ್ತು ವ್ಯವಸಾಯ ಪದ್ಧತಿಯಲ್ಲಿ ಯಾಂತ್ರೀಕರಣ ಪದ್ಧತಿಯನ್ನು ಅಳವಡಿಸಿಕೊಂಡು ವ್ಯವಸಾಯ ಮಾಡುವುದಾದರೆ ಉತ್ತಮವಾದ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ಕೃತಕ ಗೊಬ್ಬರ ವಿಚಾರ ಪರಿಶೀಲನೆ ಮಾಡುವುದಾದರೆ ೬೬-೬೭ ರಲ್ಲಿ ಅಗತ್ಯವಾದಷ್ಟು ಗೊಬ್ಬರ ಸಿಗಲಿಲ್ಲ, ೬೮-೬೯ ರಲ್ಲಿ ಮತ್ತು ೬೯-೭೦ನೇ ಸಾಲುಗಳಲ್ಲಿ ಸರಬರಾಜು ಆದರೂ ಅದು ಜನರಿಗೆ ಸಾಕಷ್ಟು ಸಿಗಲಿಲ್ಲ. ಸಾಕಷ್ಟು ಗೊಬ್ಬರವನ್ನು ಉತ್ಪಾದನೆ ಮಾಡುವ ಕಾರ್ಖಾನೆಗಳು ಕೆಲವು ಕಡೆ ಮಾತ್ರ ಇವೆ. ಈಗ ಇರುವ ಗೊಬ್ಬರದ ಫ್ಯಾಕ್ಟರಿಗಳಿಂದ ಹೆಚ್ಚು ಉತ್ಪನ್ನವಾಗುತ್ತಿಲ್ಲ. ನಮಗೆ ಒದಗಿಸಿರುವ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಕೃತಕ ಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ಉತ್ಪತಿಯಾಗುತ್ತಿಲ್ಲ ಮತ್ತು ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಸಕಾಲದಲ್ಲಿ ಗೊಬ್ಬರ ಸಿಗುತ್ತಿಲ್ಲ. ಈಗಾಗಲೇ ಮಂಗಳೂರಿನಲ್ಲಿ ಒಂದು ಕೃತಕ ಗೊಬ್ಬರದ ಕಾರ್ಖಾನೆ ಆರಂಭವಾಗುವುದರಲ್ಲಿದೆ. ಇಂಡಿಯಾ ದೇಶದಲ್ಲೂ ಬೇರೆ ಬೇರೆ ಕಡೆಗಳಲ್ಲಿ ಗೊಬ್ಬರದ ಕಾರ್ಖಾನೆಗಳಿರುವ ಕಡೆಗಳಲ್ಲಿ ಕೃತಕ ಗೊಬ್ಬರದ ಉತ್ಪಾದನೆಯನ್ನು ಹೆಚ್ಚು

[MR CHAIRMAN : —(SRI M. A. AMALORPOVAM) in the Chair]

ಮಾಡಿ ವ್ಯವಸಾಯಗಾರರಿಗೆ ಹೆಚ್ಚು ಸಿಗುವಂತೆ ಸರಬರಾಜು ಮಾಡಬೇಕು. ಈಗ ಶೇಕಡಾ ಹತ್ತರಷ್ಟು ಕೂಡ ಕೃತಕ ಗೊಬ್ಬರ ರೈತರಿಗೆ ಸಿಗುತ್ತಿಲ್ಲ. ಇದರ ಜೊತೆಗೆ ಕೃತಕ ಗೊಬ್ಬರದ ಬೆಲೆಯನ್ನು ನೋಡುವಾಗ ಇದರ ಮೂಲ ಬೆಲೆಗೂ ರೈತರು ಕೊಡುವ ಬೆಲೆಗೂ ಬಹಳ ಹೆಚ್ಚಾಗಿರುವುದು ಕಂಡು ಬರುತ್ತದೆ. ಸುಮಾರು ಕೃತಕ ಗೊಬ್ಬರದ ಬೆಲೆಯ ಮೂಲ ಬೆಲೆಗೂ ರೈತರ ಬೆಲೆಗೂ ಪರಿಶೀಲನೆ ಮಾಡಿದರೆ ಮೂಲ ಬೆಲೆ ಟನ್ನಿಗೆ ೫೫ ರೂಪಾಯಿಗಳಿದ್ದರೆ ರೈತನ ಮನೆ ಬಾಗಿಲಿಗೆ ಗೊಬ್ಬರ ಬರುವ ವೇಳೆಗೆ ಟನ್ನಿಗೆ ೭೫ ರೂಪಾಯಿವರೆಗೆ ಬರುತ್ತದೆ. ಇದರಿಂದಾಗಿ ಬೆಳೆಯುವ ಆಹಾರಪದಾರ್ಥಗಳ ಬೆಲೆಯೂ ಹೆಚ್ಚಾಗುತದೆ. ಬಹುಭಾಗ್ಗದ ರೈತರಿಗೆ ವ್ಯವಸಾಯ ಮಾಡಲು ಸುಲಭ ಬೆಲೆಯಲ್ಲಿ ಗೊಬ್ಬರ ಸಾಕಷ್ಟು ಸಿಗುತ್ತಿಲ್ಲ. ಕೃತಕ ಗೊಬ್ಬರವನ್ನು ಹೆಚ್ಚು ಲಾಭವಿಲ್ಲದೆ, ಬೆಳೆಯುವ ರೈತರಿಗೆ ಸುಲಭವಾಗಿ ಸಿಗುವ ವ್ಯವಸ್ಥೆ ಮಾಡುವುದು ಅಗತ್ಯ. ಗ್ರಾಮಾಂತರಗಳಲ್ಲಿರುವ ರೈತರು ಯಾವ ರೀತಿ ವ್ಯವಸಾಯಕ್ಕಾಗಿ ಹೆಚ್ಚು ಖರ್ಚು ಮಾಡುತ್ತಾರೋ ಅದಕ್ಕೆ ತಕ್ಕಂತೆ ಅವರಿಗೆ ಸೌಕರ್ಯಗಳು ದೊರೆತರೆ ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ವ್ಯವಸಾಯಗಾರರು ತಮ್ಮ ಜೀವನ ಸಾಗಿಸಲು ವ್ಯವಸಾಯದಿಂದ ಬರುವ ಉತ್ಪತ್ತಿಯನ್ನೇ ನಂಬಿಕೊಂಡಿರುತ್ತಾರೆ. ಅವರು ತಮ್ಮ ಜೀವನ ನಡೆಸುವುದಕ್ಕೆ ಖರ್ಚು ಮಾಡಬೇಕು, ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಬೇಕು ಮತ್ತು ರೋಗರುಜಿನಗಳಿಗೆ ಖರ್ಚು ಮಾಡಬೇಕು. ಇವೆಲ್ಲಾ ವ್ಯವಸಾಯ ಮಾಡಿ

([illegible])
ಪ್ರತಿ ಕ್ರಮಾಂಕ Accession No.... 48813
ದಿನಾಂಕ Date

ಬೆಳೆಯುವ ಉತ್ಪತ್ತಿ ಮೇಲೆ ಅವನ ಶಕ್ತಿ ಇರುತ್ತದೆ. ಇದಕ್ಕಾಗಿ ರೈತರಿಗೆ ಸುಲಭ ಬೆಲೆಯಲ್ಲಿ ಗೊಬ್ಬರ ಇತ್ಯಾದಿಗಳು ಸಿಗಬೇಕು. ಇಲ್ಲದಿದ್ದರೆ ವ್ಯವಸಾಯದ ಪ್ರಗತಿಗೆ ಧಕ್ಕೆ ಬರುತ್ತದೆ ಹೈಬ್ರಿಡ್ ಸೀಡ್ಸ್, ಶಕ್ತಿಮಾನ್ ಬೀಜಗಳನ್ನು, ಹೆಚ್ಚು ಉತ್ಪಾದನೆ ಮಾಡಿ ರೈತರಿಗೆ ಸಕಾಲದಲ್ಲಿ ಸಿಗುವಂತೆ ಹಂಚುವ ವ್ಯವಸ್ಥೆ ಮಾಡಬೇಕು. ಈಗೇನೋ ರೈತರಿಗೆ ಶಕ್ತಿಮಾನ್ ಬೀಜಗಳ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಮೊದಲಿಗೆ ಈ ಬೀಜಗಳನ್ನು ಸರ್ಕಾರದವರೇ ನೇರವಾಗಿ ರೈತರಿಗೆ ಒದಗಿಸುತ್ತಿದ್ದರು ಮತ್ತು ಸುಲಭ ಬೆಲೆಯಲ್ಲೂ ಸಿಗುತ್ತಿತ್ತು. ಆದರೆ ಈಚೆಗೆ ಸರ್ಕಾರ ಬೀಜಗಳ ಹಂಚುವಿಕೆಯಲ್ಲವನ್ನೂ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕವೇ ಮಾಡಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಈ ಕಾರ್ಪೊರೇಷನ್ನಿನವರಿಗೆ ರೈತರ ಹಿತರಕ್ಷಣೆ ಬೇಕಾಗಿಲ್ಲ. ಇವರಿಗೆ ಬೇಕಾಗಿರುವುದು ಬರೀ ವ್ಯಾಪಾರ ಮತ್ತು ಲಾಭ. ಸರಕಾರದವರೇ ಮೊದಲು ಟ್ರಾಕ್ಟರುಗಳು ಸಹಾಯವನ್ನು ಕೊಡುತ್ತಿದ್ದರು. ಈಗ ರೈತರಿಗೆ ಟ್ರಾಕ್ಟರು ಬೇಕಾದರೆ ಅದನ್ನು ಈ ಕಾರ್ಪೊರೇಷನ್ ಮೂಲಕ ಬಾಡಿಗೆ ಕೊಟ್ಟು ಪಡೆಯಬೇಕು. ಬೀಜಗಳು ಬೇಕಾದರೂ ಕಾರ್ಪೊರೇಷನ್ ಮೂಲಕವೇ ತೆಗೆದುಕೊಳ್ಳಬೇಕು ನಮ್ಮ ರಾಜ್ಯದಲ್ಲಿ ಸಾಕಷ್ಟು ಶಕ್ತಿಮಾನ್ ಬೀಜಗಳ ಸ್ಟಾಕು ಇಲ್ಲ. ಸುಮಾರು ೧೨ ಸಾವಿರ ಟನ್ನುಗಳಷ್ಟು ಇರಬಹುದು. ಆದರೆ ಮಹಾರಾಷ್ಟ್ರದಲ್ಲಿ ನಾವು ನೋಡಿದರೆ ಅಲ್ಲಿನ ಸರ್ಕಾರದವರು ಸುಮಾರು ಒಂದು ಲಕ್ಷ ಟನ್ನುಗಳಷ್ಟು ಸುಧಾರಿತ ಬೀಜಗಳನ್ನು ಸ್ಟಾಕ್‌ನಲ್ಲಿಟ್ಟು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಿದ್ದಾರೆ. ನಮ್ಮ ಸರ್ಕಾರದವರು ಹಿಂದೆ ಅವರೇ ಮಾರುತ್ತಿದ್ದಾಗ ಬೀಜದ ಮೂಲ ಬೆಲೆ ೫ ರೂಪಾಯಿ ಇದ್ದರೆ ಇದನ್ನು ಏಳು ರೂಪಾಯಿಯಂತೆ ಮಾರುತ್ತಿದ್ದರು ಅನಂತರ ಇದನ್ನು ರೈತರಿಗೆ ಇನ್ನೂ ಕಡಿಮೆ ಬೆಲೆಯಲ್ಲಿ ಕೊಡಬೇಕೆಂದು ಆರು ರೂಪಾಯಿಗಳಂತೆ ಕೊಡುತ್ತಿದ್ದರು ಈಗ ಕಾರ್ಪೊರೇಷನ್ನಿನವರು ರೈತರಿಗೆ ಸುಲಭ ಬೆಲೆಯಲ್ಲಿ ಸುಧಾರಿತ ಬೀಜಗಳನ್ನು ಒದಗಿಸುತ್ತಿಲ್ಲ. ಇವರಿಗೆ ಲಾಭವೇ ಮುಖ್ಯವಾಗಿ ಬೇಕು. ನಮ್ಮ ರೈತರ ಸ್ಥಿತಿ ಈಗ ಹೇಗಿದೆ ಎನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ರೈತರಿಗೆ ಬೇಕಾಗುವ ಒಳ್ಳೆಯ ಸುಧಾರಿತ ಬೀಜಗಳು, ಕೃತಕ ಗೊಬ್ಬರ ಹಾಗೂ ಇನ್ನಿತರ ಸಲಕರಣೆಗಳನ್ನು ಸುಲಭ ಬೆಲೆಗೆ ದೊರಕುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರದ ನೌಕರರುಗಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಕೊಡುತ್ತಿದ್ದಾರೆ. ಅವರಿಗೆ ಆಸ್ಪತ್ರೆಗಳ ಸೌಲಭ್ಯ ಇದೆ ರಜಾ ಸೌಲಭ್ಯ ಇದೆ. ಇದೇ ರೀತಿ ಯಾವ ಸೌಲಭ್ಯಗಳೂ ರೈತರಿಗೆ ಇಲ್ಲ. ರೈತರಾದವರು ಸದಾಕಾಲದಲ್ಲೂ ವ್ಯವಸಾಯ ಮಾಡುತ್ತಿರುವಾಗ ಅವನಿಗೆ ಸುಲಭ ಬೆಲೆಯಲ್ಲಿ ಎಲ್ಲ ಸಾಮಗ್ರಿಗಳೂ ದೊರಕುವಂತೆ ಬೀಜಗಳು ಗೊಬ್ಬರ ಹಾಗೂ ಪಂಪುಸೆಟ್ಟುಗಳು ಸಿಗುವಂತೆ ಅನುಕೂಲ ಮಾಡಿಕೊಡಬೇಕು. ಟ್ರಾಕ್ಟರುಗಳನ್ನು ಹಿಂದೆ ಸರ್ಕಾರದವರೇ ನೇರವಾಗಿ ಶೇಕಡಾ ಆರರಂತೆ ಬಡ್ಡಿ ಮೇಲೆ ಕೊಡುತ್ತಿದ್ದರು. ಈಗ ಟ್ರಾಕ್ಟರುಗಳನ್ನು ಆಗ್ರೊ ಇಂಡಸ್ಟ್ರೀಸ್ ಮೂಲಕ ಪಡೆಯಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಆದರೆ ಈ ಕಾರ್ಪೊರೇಷನ್‌ನವರು ಶೇಕಡ ೯ ರಂತೆ ಬಡ್ಡಿ ಕೊಡಬೇಕು ಮತ್ತು ಕಂತುಗಳಲ್ಲಿ ಇದನ್ನು ಪಡೆಯಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಮೊದಲು ಸಬ್ಸಿಡಿ ಕೊಟ್ಟು ಪಂಪುಸೆಟ್ಟುಗಳನ್ನು ಕೊಡುತ್ತಿದ್ದರು. ಈಗ ಇದನ್ನು ಬದಲಾವಣೆ ಮಾಡಿ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಪಡೆಯಬೇಕೆಂದು ಮಾಡಿದ್ದಾರೆ. ಆದರೆ ಇವರ ಬಹಳ ಹೆಚ್ಚಿನ ರೀತಿಯಲ್ಲಿರುವುದರಿಂದ ರೈತರು ಇವರ ಮೂಲಕ ಪಡೆಯಲು ಅವರಿಗೆ ಶಕ್ತಿ ಇರುವುದಿಲ್ಲ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ ನಾನು ಸಲಹೆ ಮಾಡುವುದು ಮೊದಲು ಇದ್ದಂತೆಯೇ ಸರ್ಕಾರದವರೇ ನೇರವಾಗಿ ರೈತರಿಗೆ ಸುಧಾರಿತ ಬೀಜಗಳನ್ನು ಸುಲಭ ಬೆಲೆಗೆ ಕೊಡುವುದು. ಟ್ರಾಕ್ಟರುಗಳನ್ನು ಸಬ್ಸಿಡಿ ಮೂಲಕ ಸುಲಭ ಧರದಲ್ಲಿ ಒದಗಿಸುವುದು ಮತ್ತು ಗೊಬ್ಬರವನ್ನು ಸುಲಭ ದರದಲ್ಲಿ ಕೊಡುವುದು ಈ ರೀತಿ ಮಾಡಿದರೆ ಸ್ವಲ್ಪಮಟ್ಟಿನ ಅನುಕೂಲಗಳು ರೈತರಿಗೆ ಸಿಗುತ್ತವೆ ಮತ್ತು ಹೆಚ್ಚು ಬೆಳೆ ಬೆಳೆಯಲೂ ಅನುಕೂಲವಾಗುತ್ತದೆ.

ಇನ್ನು ವ್ಯವಸಾಯದ ಅಭಿವೃದ್ಧಿಗಾಗಿ ಬೋರಿಂಗ್ ಮೆಷಿನ್‌ಗಳನ್ನು ತರಿಸಿ ಹಿಂದೆ ಸರ್ಕಾರದವರು ಕೊಡುತ್ತಿದ್ದಾಗ ಒಂದು ಅಡಿ ಆಳ ತೋಡಬೇಕಾದರೆ ಏಳೂವರೆ ರೂಪಾಯಿ ದರ ತೆಗೆದುಕೊಳ್ಳುತ್ತಿದ್ದರು. ಈಚೆಗೆ ಬೋರಿಂಗ್ ಮೆಷಿನ್‌ಗಳನ್ನೂ ಆಗ್ರೊ ಇಂಡಸ್ಟ್ರೀಸ್ ಮೂಲಕ ಪಡೆಯಬೇಕೆಂದು ಮಾಡಿದ್ದಾರೆ. ಇವರು ಒಂದು ಅಡಿ ಆಳ ತೋಡಬೇಕಾದರೆ ಮೂವತ್ತು ರೂಪಾಯಿಗಳು ಕೊಡಬೇಕೆಂದು ಮಾಡಿದ್ದಾರೆ. ಹಿಂದೆ ಭಾವಿ ತೋಡಲು ೨೫ ರೂಪಾಯಿಗಳಷ್ಟು ಆಗುತ್ತಿದ್ದುದು ಇಂದು ೫೫ ರೂಪಾಯಿಗಳವರೆಗೆ ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ರೈತರಿಗೆ ಏನು ಸಹಾಯ ಮಾಡಿದಂತಾಗುತ್ತದೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಇನ್ನು ಅಗ್ರಿಕಲ್‌ಚರಲ್ ಇಂಜಿನೀಯರಿಂಗು ಏಜನ್ಸಿ ಎಂದು ಬೇರೆ ಮಾಡಿದ್ದಾರೆ, ಇವರ ಮೂಲಕ ಟೆಕ್ನಿಕಲ್ ಸಲಹೆಗಳನ್ನು ಪಡೆಯಬೇಕೆಂದೂ ಇದೆ.

ಶ್ರೀ ಬಿ. ವೆಂಕಟರಾಯಪ್ಪ:—

ಅವರಿಂದ ರೈತರಿಗೆ ಯಾವ ಅನುಕೂಲಗಳು ಸಹ ಸಿಗುತ್ತಿಲ್ಲ. ಈ ಕಾರಣದಿಂದ ಸರ್ಕಾರದವರು ರೈತರಿಗೆ ಅವರಿಂದ ಹೆಚ್ಚಿನ ಅನುಕೂಲವಾಗುವಂತೆ ಮತ್ತು ಸುಲಭವಾಗಿ ಯಂತ್ರಗಳು ಸಿಗುವಂತೆ ಏರ್ಪಾಡು ಮಾಡಬೇಕು. ಮೊದಲು ಸಾಲಗಳನ್ನು ಸರ್ಕಾರದವರು ಸಹಕಾರ ಸಂಘಗಳ ಮೂಲಕ ಕೊಡಿಸುತ್ತಿದ್ದರು. ಈಗ ಬ್ಯಾಂಕ್‌ಗಳ ಮೂಲಕ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಶೇಕಡಾ ೭೫ರಷ್ಟು ಜನರಿಗೆ ೫ ಎಕರೆಗಿಂತ ಕಡಿಮೆ ಜಮೀನು ಇದೆ. ಇವತ್ತು ಬ್ಯಾಂಕ್‌ಗಳಲ್ಲಿ ಹೆಚ್ಚಿನ ಜಮೀನು ಇರುವವರಿಗೆ ಸಾಲ ಸುಲಭವಾಗಿ ಸಿಗುತ್ತಿದೆಯೇ ಹೊರತು ಕಡಿಮೆ ಜಮೀನು ಇರುವವರಿಗೆ ಸಿಗುತ್ತಿಲ್ಲ. ಇಂತಹವರಿಗೆ ಹಣವನ್ನು ಸಾಲವಾಗಿ ಕೊಟ್ಟರೆ ವಾಪಸ್ ಬರುತ್ತದೋ ಇಲ್ಲವೋ ಎಂಬ ಕಾರಣದಿಂದ ಬ್ಯಾಂಕ್‌ನವರು ಸಾಲ ಕೊಡುತ್ತಿಲ್ಲ ಮೊದಲಾದರೆ ಸರ್ಕಾರದವರು ಗ್ಯಾರಂಟಿ ಕೊಟ್ಟು ಸಹಕಾರ ಸಂಘಗಳ ಮೂಲಕ ಕಡಿಮೆ ಹಿಡುವಳಿದಾರರಿಗೆ ಸಾಲ ಸಿಗುವುದಕ್ಕೆ ಏರ್ಪಾಡು ಮಾಡಿದ್ದರು. ಈ ಒಂದು ಅವಕಾಶ ಇವತ್ತಿನದಿವಸ ತಪ್ಪಿದೆ. ಈ ಕಾರಣದಿಂದ ರೈತರಿಗೆ ಬಾವಿ ತೋಡಿಸಲು, ಪಂಪ್‌ಸೆಟ್ಟು ಹಾಕಿಸಲು ಸಕಾಲದಲ್ಲಿ ಗೊಬ್ಬರ ಮತ್ತು ಬೀಜ ಕೊಳ್ಳಲು ಬೇಕಾದಂಥ ಸಾಲ ಸಿಗುವುದು ಕಷ್ಟವಾಗಿದೆ. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಕಡಿಮೆ ಹಿಡುವಳಿದಾರರಿಗೆ ಸಾಲಸಿಗುವ ಏರ್ಪಾಡು ಮಾಡಬೇಕು.

ತೋಟಗಾರಿಗೆಯ ಇಲಾಖೆಯಲ್ಲಿ ಅನೇಕ ಕೆಲಸಗಳಾಗುತ್ತಿವೆ. ಇವತ್ತು ತಾಲ್ಲೂಕ್ ಮಟ್ಟದಲ್ಲಿ ಫಾರಮ್‌ಗಳನ್ನು ಮಾಡಿ ಅಲ್ಲಿಗೆ ಒಳ್ಳೆಯ ತರಕಾರಿ ಬೀಜಗಳನ್ನು, ಉತ್ತಮತಳಿಯ ಬೀಜಗಳನ್ನು ಒದಗಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಹಿಂದಿನ ರೀತಿಯಲ್ಲಿ ಕೆಲಸಗಳು ನಡೆಯದೆ ಕುಂಠಿತವಾಗುತ್ತಿದೆ ಹಿಂದಿನ ರೀತಿಯಲ್ಲಿಯೇ ಕೆಲಸನಡೆದರೆ ಇನ್ನೂ ಹೆಚ್ಚಿನ ಪ್ರಗತಿಯಾಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಪಶುಸಂಗೋಪನೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಇಲಾಖೆಯವರು ಇವತ್ತು ಬೆಂಗಳೂರಿನಲ್ಲಿ ಒಂದು ಡೈರಿಯನ್ನು ನಡೆಸುತ್ತಿದ್ದಾರೆ. ಹಳ್ಳಿಯವರಿಂದ ಹಾಲನ್ನು ಪಡೆದುಕೊಂಡು ಬೆಂಗಳೂರಿನ ನಾಗರೀಕರಿಗೆ ಹಂಚುತ್ತಿದ್ದಾರೆ. ಹಿಂದೆ ಈ ಡೈರಿಯಲ್ಲಿ ಹಲವಾರು ಲೋಪದೋಷಗಳು ಮತ್ತು ದೂರುಗಳು ಇದ್ದವು. ಈಗಿನ ಡೈರೆಕ್ಟರ್ ಅವರು ಅಧಿಕಾರಕ್ಕೆ ಬಂದಮೇಲೆ ಅಲ್ಲಿ ಉತ್ತಮವಾಗಿ ಕೆಲಸವಾಗುತ್ತಿದೆ. ಇವತ್ತು ಡೈರಿಯಲ್ಲಿ ಕೆಲವೊಂದು ಸುಧಾರಣೆಗಳು ಆಗಿದ್ದರೂ ಕೂಡ ಅವು ಸಾಲದು ಎಂದು ನನ್ನ ಭಾವನೆ. ಹಾಲನ್ನು ಸರಬರಾಜು ಮಾಡುತ್ತಿರುವ ಸಹಕಾರ ಸಂಘಗಳಿಗೆ ಹೆಚ್ಚಿನ ರಿಯಾಯಿತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಇವತ್ತು ವಾರದಲ್ಲಿ ಎರಡು ದಿವಸ ಅಂದರೆ ಶನಿವಾರ ಸಾಯಂಕಾಲ ಮತ್ತು ಭಾನುವಾರ ಬೆಳಿಗ್ಗೆ ಡೈರಿಯವರು ಹಾಲನ್ನು ತೆಗೆದುಕೊಳ್ಳದೆ ನಿರಾಕರಿಸುತ್ತಿದ್ದಾರೆ. ಇದರಿಂದ ಸಹಕಾರ ಸಂಘದವರಿಗೆ ಮತ್ತು ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಈ ರೀತಿ ನಿರಾಕರಿಸುತ್ತಿರುವುದು ಸರಿಯಲ್ಲ. ಎಲ್ಲಾ ದಿನಗಳಲ್ಲಿಯೂ ಕೂಡ ಹಾಲನ್ನು ನಿರಾಕರಿಸದೆ ತೆಗೆದುಕೊಳ್ಳಬೇಕು. ಮೊದಲು ಡೈರಿಯವರು ಹಾಲನ್ನು ಒದಗಿಸುವವರಿಗೆ ಅಲ್ಯೂಮಿನಿಯಂ ಕ್ಯಾನ್‌ಗಳನ್ನು ಒದಗಿಸುತ್ತಿದ್ದರು. ಆ ಕ್ಯಾನ್‌ಗಳು ಚೆನ್ನಾಗಿದ್ದವು. ಆದರೆ ಇತ್ತೀಚೆಗೆ ಒದಗಿಸುತ್ತಿರುವ ಕ್ಯಾನ್‌ಗಳು ಬಹಳ ಭಾರವಾಗಿವೆ. ಇಬ್ಬರು ಹೊರ ಬೇಕಾಗಿದೆ. ಮತ್ತು ಕ್ಯಾನ್‌ಗಳ ಬಣ್ಣ ಕಪ್ಪಾಗುತ್ತಿವೆ. ಈ ಡಬ್ಬಗಳಲ್ಲಿ ಹಾಲನ್ನು ಶೇಖರಣೆ ಮಾಡಿದರೆ ವಾಸನೆ ಬರುತ್ತದೆ ಎಂದು ಹೇಳುತ್ತಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳಿಗೂ ಕೂಡ ತಿಳಿಸಿದ್ದೇನೆ. ಈ ಕಾರಣದಿಂದ ಒಳ್ಳೆಯ ಕ್ಯಾನ್‌ಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಸಹಕಾರ ಸಂಘಗಳು ಹಾಲನ್ನು ಒದಗಿಸಿದ ಮೇಲೆ ಬಿಲ್ ಹಣವನ್ನು ಜಾಗ್ರತೆ ಕೊಡುತ್ತಿಲ್ಲ. ನಿರ್ದಿಷ್ಟ ಕಾಲದಲ್ಲಿ ಬಿಲ್‌ಹಣವನ್ನು ಪಾವತಿ ಮಾಡುವ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಇನ್ನು ಮುಂದೆ ಬೆಂಗಳೂರು ನಗರದಲ್ಲಿ ದನಗಳನ್ನು ಸಾಕುವವರು ಲೈಸನ್ಸ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಈ ಒಂದು ದಿಶೆಯಲ್ಲಿ ಹೇಳುವುದಾದರೆ ಬೆಂಗಳೂರು ನಗರ ಕಾರ್ಪೊರೇಷನ್ ಏರಿಯಾದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ದೃಷ್ಟಿ ಸರ್ಕಾರಕ್ಕೆ ಇದ್ದರೆ ದನಗಳನ್ನೇ ಸಾಕದ ಹಾಗೆ ಮಾಡುವುದು ಒಳ್ಳೆಯದು. ಶುಲ್ಕವನ್ನು ಹಾಕುವುದಕ್ಕೆ ಹೊರಟರೆ ಲಂಚರುಷುವತ್ತಿಗೆ ಅವಕಾಶವಾಗುತ್ತದೆ. ಆರೋಗ್ಯ ದೃಷ್ಟಿಯಿಂದ ದನಗಳನ್ನು ಸಾಕುವುದು ಸರಿಯಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಆರೋಗ್ಯ ರಕ್ಷಣೆಗೂ ದನಸಾಕಲು ಲೈಸನ್ಸ್ ತೆಗೆದುಕೊಳ್ಳಬೇಕು ಎಂದು ಮಾಡಿರುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲವೆಂದು ಹೇಳುತ್ತೇನೆ. ನಗರ ನೈರ್ಮಲ್ಯದ ದೃಷ್ಟಿಯಿಂದ ದನಗಳನ್ನು ಸಾಕುವುದು ಬೇಡ ಎಂದು ಬೇಕಾದರೆ ಮಾಡಿ, ಆದರೆ ದನಗಳನ್ನು ಸಾಕುವವರು ಲೈಸನ್ಸ್ ತೆಗೆದುಕೊಳ್ಳಬೇಕೆಂದು ಹೇಳುತ್ತಿರುವುದು ಸರಿಯಲ್ಲವೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈ ಮಾನ್ಯ ಸಭೆಯ ಮುಂದೆ ನಾಲ್ಕು ಜನ ಮಂತ್ರಿಗಳಿಗೆ ಸಂಬಂಧಪಟ್ಟಂತೆ ೨೧ ಕೋಟಿ ೫ ಲಕ್ಷದ ೨೫ ಸಾವಿರ ರೂಪಾಯಿಗಳ ನಾಲ್ಕು ಡಿಮ್ಯಾಂಡ್ ಗಳನ್ನು ಮಂಡಿಸಲಾಗಿದೆ. ಈ ಡಿಮ್ಯಾಂಡ್‌ಗಳನ್ನು ನಾನು ವಿರೋಧ ಮಾಡುತ್ತಾ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಮೈಸೂರು ರಾಜ್ಯ ಕೃಷಿ ಪ್ರಧಾನವಾದ ರಾಜ್ಯ. ಮೈಸೂರು ರಾಜ್ಯದಲ್ಲಿರುವ ಸುಮಾರು ಎರಡೂವರೆ ಕೋಟಿ ಜನಸಂಖ್ಯೆಯಲ್ಲಿ ಎರಡು ಕೋಟಿ ಜನರು ಕೃಷಿಗೆ ಸಂಬಂಧ ಪಟ್ಟಂತಹ ಉದ್ಯೋಗನನ್ನು ಅವಲಂಬಿಸಿದ್ದಾರೆ. ಮಾತ್ರವಲ್ಲದೆ ಈ ದೇಶದ ಅತಿ ದೊಡ್ಡ ಕೈಗಾರಿಕೆ ಎಂದರೆ ವ್ಯವಸಾಯವೆಂದು ಹೇಳಬಹುದು. ವ್ಯವಸಾಯದಿಂದ ೧೪.೫೦೦ ಕೋಟಿ ರೂಪಾಯಿಗಳಷ್ಟು ದವಸಧಾನ್ಯಗಳು ಉತ್ಪತ್ತಿಯಾಗುತ್ತಿದೆ. ವ್ಯವಸಾಯ ಇಲಾಖೆ ಒಂದು ವೇಳೆ ಪ್ರಗತಿಯನ್ನು ಸಾಧಿಸದೇ ಹೋದಲ್ಲಿ ಆರ್ಥಿಕ ಪರಿಸ್ಥಿತಿ ಕೂಡ ಅಲ್ಲೋಲಕಲ್ಲೋಲವಾಗುವ ಸಂದರ್ಭ ಬರುತ್ತದೆ. ಎಷ್ಟು ದಕ್ಷತೆ ಯಿಂದ ವ್ಯವಸಾಯ ಇಲಾಖೆಯಲ್ಲಿ ಕೆಲಸ ಮಾಡಬಹುದು ಎಂಬುದನ್ನು ನಾವು ಆಲೋಚನೆ ಮಾಡಿ ನೋಡಬೇಕಾಗಿದೆ. ನಮ್ಮ ವ್ಯವಸಾಯ ಇಲಾಖೆಯಲ್ಲಿರುವ ಮಂತ್ರಿಗಳು ಯಾವ ಇಲಾಖೆಗೆ ಹೋದರೂ ಕೂಡ ಹುರುಪಿನಿಂದಲೇ ಕೆಲಸ ಮಾಡುತ್ತಾರೆ. ಇವತ್ತು ವ್ಯವಸಾಯ ಇಲಾಖೆಯಲ್ಲಿ ಸರಿಪಡಿಸಬೇಕಾಗಿರು ವಂತಹ ಕೆಲವು ಮೂಲಭೂತವಾದಂಥ ಪ್ರಶ್ನೆಗಳು ಇವೆ. ಸಾಲ ಕೊಡುತ್ತೇವೆ, ಬೀಜ ಕೊಡುತ್ತೇವೆ, ಗೊಬ್ಬರ ಕೊಡುತ್ತೇವೆಂದ ಮಾತ್ರಕ್ಕೆ ವ್ಯವಸಾಯ ಇಲಾಖೆ ಪ್ರಗತಿಯಾಗುವುದಿಲ್ಲ. ಮತ್ತು ಪ್ರಗತಿಪಥದಲ್ಲಿ ಸಾಗುವುದಿಲ್ಲವೆಂದು ಹೇಳುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ಹವಾಮಾನ ಪರಿಸ್ಥಿತಿ ಮತ್ತು ಪ್ರಕೃತಿ ಪ್ರಕೋಪಕ್ಕೆ ಹೋಗದೆ ಇದ್ದರಿಂದ ಒಳ್ಳೆಯ ಬೆಳೆಯಾಯಿತು. ಇದನ್ನೇ ಕಾರಣ ಇಟ್ಟುಕೊಂಡು ವ್ಯವ ಸಾಯ ಇಲಾಖೆಯವರು ಕಳೆದ ಎರಡು ವರ್ಷಗಳಲ್ಲಿ ನಾವು ಒಳ್ಳೆಯ ಪ್ರಗತಿ ಸಾಧಿಸಿದ್ದೇವೆಂದು ಭುಜತಟ್ಟಿ ಕೊಳ್ಳಬಾರದು. ನಮ್ಮ ರಾಜ್ಯ ವಿಭಿನ್ನ ಹವಾಗುಣ ಮತ್ತು ಪ್ರಕೃತಿಯನ್ನು ಹೊಂದಿದೆ, ಪ್ರತಿ ಜಿಲ್ಲೆ ಯಲ್ಲಿಯೂ ಕೂಡ ಒಂದೊಂದು ರೀತಿಯ ಹವಾಮಾನ ಮತ್ತು ಪ್ರಕೃತಿ ಸ್ವರೂಪ ಇದೆ. ೧೯೬೮ನೇ ಇಸವಿಯಲ್ಲಿ ೧೭ ಜಿಲ್ಲೆಗಳಲ್ಲಿ ಅನಾವೃಷ್ಟಿ ತುಂಬಿತುಳುಕಾಡುತ್ತಿತ್ತು. ಮತ್ತೆ ಕೆಲವು ಜಿಲ್ಲೆಗಳಲ್ಲಿ ಅತಿ ವೃಷ್ಟಿಯೂ ಕೂಡ ಇತ್ತು. ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿ ಯಾಗುವುದು ಹೆಚ್ಚು. ಇದನ್ನು ಸರಿಪಡಿಸುವ ಬಗ್ಗೆ ಆಳವಾಗಿ ಯೋಚನೆಮಾಡುವ ಸಂಭವ ಬಂದಿದೆ. ಇಡೀ ಭಾರತದೇಶದಲ್ಲಿರುವ ೧೫೫ ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಯಾಗುತ್ತಿರುವುದು ೩೬ ಮಿಲಿಯನ್ ಹೆಕ್ಟೇರ್ ಪ್ರದೇಶ ಮಾತ್ರ. ನಮ್ಮ ಮೈಸೂರು ಜಿಲ್ಲೆ ತೆಗೆದುಕೊಂಡರೆ ೧೦.೮ ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಯಾಗು ತ್ತಿರುವುದು ಹತ್ತನೇ ಒಂದು ಭಾಗ ಮಾತ್ರ. ೩.೭೧ ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಾವಿಗಳ ನೀರಿನಿಂದ ವ್ಯವಸಾಯ ಮಾಡಲಾಗುತ್ತಿದೆ. ಕೆರೆಗಳ ಆಧಾರದ ಮೇಲೆ ೧.೭೩ ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ವ್ಯವ ಸಾಯ ಮಾಡಲಾಗುತ್ತಿದೆ. ವರುಣನ ಶಾಪದಿಂದ ಮಳೆಯಾಗದಿದ್ದರೆ ಕೆರೆ ಮತ್ತು ಬಾವಿಗಳಲ್ಲಿ ನೀರು ಇಲ್ಲದೆ ಇಷ್ಟೊಂದು ಪ್ರದೇಶಗಳಲ್ಲಿ ವ್ಯವಸಾಯ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಈ ಪ್ರದೇಶಗಳನ್ನು ನೀರಾವರಿ ಪ್ರದೇಶಗಳೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಅನಾವೃಷ್ಟಿ ಜಾಸ್ತಿ ಇರುವುದರಿಂದ ಕಡಿಮೆ ಅವಧಿಯಲ್ಲಿ ಮತ್ತು ಕಡಿಮೆ ನೀರಿನ ಆಶ್ರಯದಲ್ಲಿ ಯಾವ ಬೆಳೆ ತೆಗೆಯಬಹುದು ಎಂಬ ಬಗ್ಗೆ ಆಳವಾಗಿ ಆಲೋಚನೆ ಮಾಡಬೇಕಾಗಿದೆ.

ವ್ಯವಸಾಯ ಕೇಂದ್ರಗಳಿವೆ, ವ್ಯವಸಾಯ ಕ್ರಾಂತಿಕಾರರಿದ್ದಾರೆ. ಬೇರೆ ಬೇರೆ ವಿಜ್ಞಾನಿಗಳು ಇದ್ದಾರೆ. ಇವರೆಲ್ಲರೂ ಸೇರಿ ವ್ಯವಸಾಯ ಇಲಾಖೆಯಲ್ಲಿ ತ್ರೀವ್ರವಾದ ಪರಿಶೋಧನೆ ಮಾಡಬೇಕು. ಅನಾವೃಷ್ಟಿ ಪ್ರದೇಶದಲ್ಲಿ ಕಡಿಮೆ ನೀರಿನಲ್ಲಿ ಯಾವ ಬೆಳೆಯನ್ನು ಜಾಗ್ರತೆಯಾಗಿ ತೆಗೆಯಬಹುದು ಮತ್ತು ಕಡಿಮೆ ನೀರಿನಲ್ಲಿ ಹೆಚು ಬೆಳೆಯನ್ನು ಹೇಗೆ ತೆಗೆಯಬಹುದು ಎನ್ನುವಂಥಾದ್ದನ್ನು ವ್ಯವಸಾಯ ಇಲಾಖೆಯವರು, ತಜ್ಞರು, ಸಂಶೋಧನೆ ಮಾಡಿ ನೋಡುವಂಥಾ ಕಾಲ ಬಂದಿದೆ ಮೈಸೂರು ರಾಜ್ಯದಲ್ಲಿ ಸರಿಯಾಗಿ ಮಳೆ ಬರುವ ಜಿಲ್ಲೆಗಳು ಬಹಳ ಕಡಿಮೆ ಇವೆ. ಆದ್ದರಿಂದ ತಜ್ಞರು ಸಂಶೋಧನೆ ಮಾಡಿ ಅತಿ ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವ ಬಗ್ಗೆ ಇಲಾಖೆಯವರು ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೆನೆ. ಕೆಲವು ಜಿಲ್ಲೆಗಳಲ್ಲಿ ಎಂದರೆ ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ, ಸೌತ್‌ಕೆನರಾ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿಪರೀತ ವಾಗಿ ಮಳೆ ಬರುತ್ತದೆ. ಅಂಥಾ ಕಡೆ ನೀರೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಿದುಹೋಗುತ್ತದೆ. ಆದ್ದರಿಂದ ಆ ನೀರನ್ನು ಹೇಗೆ ಹಿಡಿದು ವ್ಯವಸಾಯಕ್ಕೆ ಉಪಯೋಗಿಸಬೇಕು ಎನ್ನುವ ಸಂಶೋಧನೆ ಮಾಡಬೇಕು. ಅಂಥಾ ಸಂಶೋಧನೆಯನ್ನು ಮಾಡಿ ರೈತರಿಗೆ ಬೇಕಾದ ಬೀಜ, ಗೊಬ್ಬರ ವ್ಯವಸಾಯದ ಉಪಕರಣಗಳು ಇತ್ಯಾದಿಗಳನ್ನೆಲ್ಲಾ ಸಕಾಲದಲ್ಲಿ ಒದಗಿಸಿದರೆ ಮಾತ್ರ ನಾವು ನಿರೀಕ್ಷಿಸಿದಷ್ಟು ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ. ಇಲ್ಲದೇ ಹೋದರೆ ನಾವು ವ್ಯವಸಾಯದಲ್ಲಿ ನಿರೀಕ್ಷಿಸಿದಷ್ಟು ಪ್ರಗತಿಯನ್ನು ಪಡೆಯುದಕ್ಕೆ ಸಾಧ್ಯವಿಲ್ಲ ಈ ದೃಷ್ಟಿಯಿಂದ ವ್ಯವಸಾಯ ಇಲಾಖೆಯಲ್ಲಿ ಸಂಶೋಧನೆಯನ್ನು ಮಾಡಬೇಕು. ಆ ರೀತಿ ಸಂಶೋಧನೆ

(ಶ್ರೀ ಬಿ. ಭಾಸ್ಕರಶೆಟ್ಟಿ)

ಯನ್ನು ಮಾಡಿದರೆ ಮಾತ್ರ ನಾವು ವ್ಯವಸಾಯದಲ್ಲಿ ಪ್ರಗತಿಯನ್ನು ಪಡೆಯುವುದಕ್ಕೆ ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ. ನಾನು ಸೂಚಿಸಿದ ಹಾಗೆ ಸರ್ಕಾರದವರು ಪ್ರಯತ್ನ ಮಾಡಿದರೆ ನಾವು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿ ನಮ್ಮ ಗುರಿಯನ್ನು ಮುಟ್ಟಿ ಬೇರೆ ಕಡೆಗೆ ಆಹಾರವನ್ನು ಕೊಡಬಹುದು. ಆದ್ದರಿಂದ ಈ ಕಡೆ ಸರ್ಕಾರದವರು ತೀವ್ರವಾದ ಗಮನವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಸರ್ಕಾರದವರು ದೊಡ್ಡ ನೀರಾವರಿಯನ್ನು ಮಾಡುವುದಕ್ಕಿಂತ, ಶೀಘ್ರವಾಗಿ ಬೆಳೆಯನ್ನು ಕೊಡುವ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ತೆಗೆದುಕೊಂಡು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳವಾಗಿ ನೀರು ಹರಿಯುತ್ತದೆ. ಮಳೆಯೂ ಬರುತ್ತದೆ. ಆದರೆ ಅದೆಲ್ಲವೂ ಸಮುದ್ರಕ್ಕೆ ಹರಿದು ಹೋಗುತ್ತದೆ. ಇಂಥಾ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ಕಡಿಮೆ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ಒಟ್ಟು ನೀರಾವರಿ ೧೦ ಪರ್ಸೆಂಟ್ ಇದೆ ಇದರ ಪ್ರಕಾರ ನೋಡಿದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬.೪ ಪರ್ಸೆಂಟ್ ಮಾತ್ರ ನೀರಾವರಿಯಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರು ಬೇಕಾದಷ್ಟು ಇದೆ. ಆದರೆ ಅದೆಲ್ಲವೂ ಸಮುದ್ರಕ್ಕೆ ಹರಿದು ಹೋಗುತ್ತದೆ. ಆದ್ದರಿಂದ ಆ ನೀರನ್ನು ಸಣ್ಣ ನೀರಾವರಿ ಯೋಜನೆಗಳ ಮುಖಾಂತರ ಉಪಯೋಗ ಮಾಡಿಕೊಳ್ಳಲು ಅಣೆಕಟ್ಟುಗಳನ್ನು ನಿರ್ಮಾಣ ಮಾಡಬೇಕು. ಇದನ್ನು ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯದಲ್ಲಿ ಪ್ರಗತಿಯನ್ನು ಪಡೆಯಬಹುದು, ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯ ಲೆಕ್ಕಾಚಾರವನು ತೆಗೆದು ಕೊಂಡರೆ ನಮ್ಮ ರಾಜ್ಯದ ಅತಿ ಮುಖ್ಯವಾದ ಆಹಾರವಾದ ಬತ್ತವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಹೆಚ್ಚಾಗಿ ಬೆಳೆಯುತ್ತಾರೆ. ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಬತ್ತವನ್ನು ಬೆಳೆಯುತ್ತಾರೆಯೋ ಅದರಲ್ಲಿ ೧/೫ ಭಾಗದಷ್ಟು ಬತ್ತ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಇದರ ಒಂದು ಲೆಕ್ಕಾಚಾರವನ್ನು ಹೇಳುವುದಾದರೆ ಒಟ್ಟು ನಮ್ಮ ದೇಶದಲ್ಲಿ ಬತ್ತ ಬೆಳೆಯತಕ್ಕ ಪ್ರದೇಶ ೧೨,೧೩,೫೮೩, ಹೆಕ್ಟಾರ್ ಇದೆ. ಅದರಲ್ಲಿ ಸೌತ್ ಕೆನರಾ ಡಿಸ್ಟ್ರಿಕ್ಟಿನಲ್ಲಿ ೨,೦೪,೬೧೪, ಹೆಕ್ಟಾರಿನಲ್ಲಿ ಬತ್ತವನ್ನು ಬೆಳೆಯುತ್ತಾರೆ. ಎಂದರೆ ಶೇಕಡಾ ೨೦-೨೭ ಪರ್ಸೆಂಟ್ ಬತ್ತ ಬೆಳೆಯುವ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ನಮ್ಮ ಜಿಲ್ಲೆಯಲ್ಲಿ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಾಕಷ್ಟು ಕೆಲಸ ಆಗಿಲ್ಲ. ಇನ್ನೂ ಬೇಕಾದಷ್ಟು ಕೆಲಸಗಳು ಆಗಬೇಕಾಗಿದೆ. ಸರ್ಕಾರದವರು ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ನಾನು ಈ ವಿಷಯವನ್ನು ಹೇಳಬಾರದು, ಆದರೆ ಅದನ್ನು ಹೇಳದೇ ಗತ್ಯಂತರವಿಲ್ಲ. ೧೯೫೬-೫೭ ರಿಂದ ೧೯೬೭-೬೮ರ ವರೆಗೆ ವ್ಯವಸಾಯಗಾರರಿಗೆ ಒಟ್ಟು ರಾಜ್ಯದಲ್ಲಿ ಕೊಟ್ಟ ಸಾಲ ೩೨-೫೯ ಕೋಟಿ ರೂಪಾಯಿಗಳು. ಅದರಲ್ಲಿ ೧,೧೨,೦೦,೦೦೦ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವ್ಯವಸಾಯಗಾರರಿಗೆ ಸಾಲವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಬೆಳೆಯುತಕ್ಕ ಬತ್ತದಲ್ಲಿ ೧/೫ ಭಾಗದಷ್ಟು ಬತ್ತವನ್ನು ಬೆಳೆಯುತಕ್ಕ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಕೋಟಿ ೧೨ ಲಕ್ಷ ರೂಪಾಯಿಗಳನ್ನು ಮಾತ್ರ ಅಗ್ರಿಕಲ್‌ಚರಲ್ ಲೋನ್ಸ್ ಕೊಟ್ಟಿದ್ದಾರೆ. ಈ ರೀತಿಯಾಗಿ ಸರ್ಕಾರದವರು ನಮ್ಮ ಜಿಲ್ಲೆಗೆ ಸಹಾಯ ಮಾಡುತ್ತಾ ಹೋದರೆ ಇನ್ನು ೧೦ ವರ್ಷಗಳಾದರೂ ನಮ್ಮ ಜಿಲ್ಲೆ ವ್ಯವಸಾಯದಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ನಮ್ಮ ಜಿಲ್ಲೆಯ ರೈತರು ಬಹಳ ಉತ್ಸಾಹದಿಂದ ಮೈ ನೋಯಿಸಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಜನಗಳು, ರೈತರು ನೆತ್ತರು ಸುರಿಸಿ ಎದೆಯಲ್ಲಿ ಏತದ ಹಗ್ಗಗಳನ್ನು ಹಿಡಿದು ನೀರು ಎತ್ತಿ ೩ನೇ ಬೆಳೆಯನ್ನು ತೆಗೆಯುತ್ತಿದ್ದಾರೆ. ಉತ್ಪಾದಕರಿಗೆ ಖರ್ಚು ಹೋಗಿ ಏನಾದರೂ ಲಾಭ ಇದೆಯೇ? ವ್ಯವಸಾಯದಲ್ಲಿ ಲಾಭ ಇಲ್ಲ ಎಂದರೆ ಯಾರೂ ವ್ಯವಸಾಯವನ್ನು ಮಾಡುವುದಿಲ್ಲ. ಈಗ ವ್ಯವಸಾಯಗಾರನು ಬಹಳ ಕಷ್ಟಪಟ್ಟು ವ್ಯವಸಾಯವನ್ನು ಮಾಡುತ್ತಿದ್ದಾನೆ. ಅವನಿಗೆ ತನ್ನ ಕುಟುಂಬದ ಪೋಷಣೆ ಈ ವ್ಯವಸಾಯದಿಂದ ಆಗಬೇಕು. ಹಾಗಿದ್ದರೆ ಮಾತ್ರ ಅವನು ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯ. ಅವನ ಕಷ್ಟಕ್ಕೆ ಅನುಗುಣವಾಗಿ ಅವನು ಬೆಳೆದಂತಹ ಬೆಳೆಗೆ ದರ ಸಿಕ್ಕುವಂತಾಗಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮುಡಿ ಅಕ್ಕಿಗೆ ೩೫ ರೂಪಾಯಿಗಳು ಇದೆ. ಈ ರೀತಿ ಬೆಲೆ ಇರುವುದಾದರೆ ವ್ಯವಸಾಯಗಾರನಿಗೆ ಅವನು ವ್ಯವಸಾಯಕ್ಕೆ ಖರ್ಚು ಮಾಡಿದ ಬೀಜ ಗೊಬ್ಬರ, ಕೂಲಿ ಇವುಗಳೂ ಕೂಡ ಅವನಿಗೆ ಸಿಕ್ಕುವುದಿಲ್ಲ, ಈ ದೃಷ್ಟಿಯಿಂದ ಅವನು ಬೆಳೆದ ಬೆಳೆಗೆ ಸರಿಯಾದಂತಹ ಬೆಲೆ, ಪ್ರತಿಫಲ ಸಿಕ್ಕುವುದಿಲ್ಲ. ಬೇರೆ ದೇಶದಲ್ಲಿ ವ್ಯವಸಾಯಕ್ಕೆ ಎಷ್ಟರಮಟ್ಟಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಜಪಾನ್ ದೇಶ ವ್ಯವಸಾಯಕ್ಕೆ ಅತಿ ಪ್ರಾಮುಖ್ಯವಾದ ದೇಶ. ಅಲ್ಲಿ ಬಂಪರ್ ಕ್ರಾಪ್ ಬಂದಾಗ ಹೆಚ್ಚು ಬೆಳೆ ಬೆಳೆದಾಗ ರೈತರ ಶಕ್ತಿ ಕುಂದದ ಹಾಗೆ ಅವನು ವ್ಯವಸಾಯಕ್ಕೆ ಹಿಂದೇಟು ಹಾಕದ ಹಾಗೆ ಅವನಿಗೆ ಪ್ರೋತ್ಸಾಹ ಕೊಟ್ಟು ಆಹಾರ ಪದಾರ್ಥಗಳ ಬೆಲೆಯನ್ನು ಮಾರ್ಕೆಟ್ಟಿನಲ್ಲಿ ೩ ಸಲ

ಏರಿಸಿದ್ದಾರೆ. ಅಲ್ಲಿ ಸರ್ಕಾರದವರು ಸಬ್ಸಿಡಿ ಕೊಟ್ಟು ರೈತರ ಉತ್ಸಾಹ ಕಡಿಮೆಯಾಗಬಾರದು ಎಂದು ರೈತ ಬೆಳೆದಂತಹ ಬೆಳೆಗೆ ಸರಿಯಾದಂತಹ ಬೆಲೆ ಸಿಕ್ಕುವಂತೆ ಮಾಡಿದ್ದಾರೆ. ಅಂಥಾ ಒಂದು ಕೆಲಸವನ್ನು ನಮ್ಮ ಸರ್ಕಾರದವರು ಮಾಡಬೇಕು. ರೈತ ತಾನು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಕ್ಕದೇ ಹೋದರೆ ಅವನು ವ್ಯವಸಾಯಕ್ಕೆ ಯಾವ ಗೊಬ್ಬರವನ್ನೂ ಹಾಕುವುದಿಲ್ಲ. ಯಾವ ಹಣವನ್ನೂ ವ್ಯವಸಾಯಕ್ಕೆ ಹೆಚ್ಚು ಉಪಯೋಗ ಮಾಡುವುದಿಲ್ಲ. ಆದ್ದರಿಂದ ರೈತರ ಉತ್ಸಾಹ ಕುಗ್ಗದ ಹಾಗೆ ಮಾರ್ಕೆಟ್ ದರವನ್ನು ಹೆಚ್ಚು ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ರೈತರಿಗೆ ಬೇರೆ ಬೇರೆ ಬ್ಯಾಂಕುಗಳಿಂದ, ಕೋ-ಆಪರೇಟಿವ್ ಸೊಸೈಟಿಗಳಿಂದ, ಇತರ ಸಂಘಸಂಸ್ಥೆಗಳಿಂದ ಹಣವನ್ನು ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅಂದರೆ ರೈತ ಅದನ್ನು ಪಡೆಯಬೇಕಾದರೆ ೧೦೦ ಆಫೀಸುಗಳ ಬಾಗಿಲನ್ನು ಹತ್ತಬೇಕು. ಇದರ ಜೊತೆಗೆ ವಿದ್ಯಾವಂತರ ಸಹಾಯವನ್ನು ಕೂಡ ಪಡೆಯಬೇಕು. ರೈತ ಸರ್ಕಾರದಿಂದ ಈ ಹಣವನ್ನು ಪಡೆಯುವುದರಲ್ಲಿ ಅರ್ಧ ಮುಕ್ಕಾಲು ಹಣ ಆಫೀಸುಗಳಲ್ಲಿ ಲಂಚವನ್ನು ಕೊಡುವುದಕ್ಕೆ ಆಗುತ್ತದೆ. ಅದೂ ಅಲ್ಲದೆ ವ್ಯವಸಾಯ ಸಂದರ್ಭದಲ್ಲಿ ಆ ಸಹಾಯ ಬೇಗನೆ ಸಿಕ್ಕುವುದಿಲ್ಲ. ವ್ಯವಸಾಯ ಕಾಲದಲ್ಲಿ ರೈತನಿಗೆ ಹಣದ ಅಗತ್ಯತೆ ಇರುತ್ತದೆ. ಆದ್ದರಿಂದ ರೈತ ಹಣದ ಸಹಾಯಕ್ಕೆ ಸರ್ಕಾರಕ್ಕೆ ಅರ್ಜಿಯನ್ನು ಹಾಕಿದ ಕೂಡಲೆ ಅವನಿಗೆ ಸಹಾಯ ಸಿಕ್ಕುವಂತಾಗಬೇಕು. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಸೇವಕರನ್ನಾಗಲೀ, ಇತರ ಅಧಿಕಾರಿಗಳನ್ನಾಗಲೀ ನೇಮಿಸಿ ಪ್ರತಿ ರೈತ ಕುಟುಂಬಕ್ಕೂ ಅವರ ಉತ್ಪತ್ತಿ ಎಷ್ಟು, ಅವರ ಸಾಲ ಎಷ್ಟು, ಅವನು ಎಷ್ಟು ಹಣವನ್ನು ಸಾಲವಾಗಿ ಪಡೆಯಬಹುದು ಎನ್ನುವ ಬಗ್ಗೆ 'ಕ್ರೆಡಿಟ್ ವರ್ದಿನೆಸ್' ಕಾರ್ಡನ್ನು ಪ್ರತಿ ಕುಟುಂಬಕ್ಕೆ ಕೊಡಬೇಕು. ಅವರು ಸರ್ಕಾರಕ್ಕೆ ಅರ್ಜಿ ಹಾಕಿದ ಕೂಡಲೇ ಅವರಿಗೆ ಸಾಲ ಹಣಸಹಾಯ ಸಿಕ್ಕಬೇಕು. ಅಂಥಾ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಹೇಳುತ್ತೇನೆ. ಇವೊತ್ತು ಒಂದು ಎಮ್ಮೆಗೆ ೭೦೦–೮೦೦ ರೂಪಾಯಿಗಳಾಗುತ್ತದೆ, ಒಂದು ದನಕ್ಕೆ ೧೦೦–೩೦೦ ರೂಪಾಯಿಗಳಾಗುತ್ತದೆ. ಒಂದು ಕತ್ತೆಗೆ ೨೦ ರೂಪಾಯಿಗಳಾಗುತ್ತದೆ, ಆದರೆ ಇವೊತ್ತು ರೈತನಿಗೆ ಒಂದು ಪೈ ಯಾರೂ ಸಾಲ ಕೊಡುವುದಿಲ್ಲ, ಈ ರೈತ ಕತ್ತೆಗಿಂತ ಕಡೆಮೆಯಾಗಿದ್ದಾನೆ.

ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಅತಿ ಮುಖ್ಯವಾದ ಇಲಾಖೆಯೆಂದರೆ, ಮೀನುಗಾರಿಕೆಯ ಇಲಾಖೆ. ಮೀನುಗಾರಿಕೆಯ ಬಗ್ಗೆ ನಾನು ಇಲ್ಲಿ ಮಾತನಾಡದಿದ್ದರೆ, ಊರಿಗೆ ಹೋದಾಗ ಜನರು ಏನಾದರೂ ಹೇಳಬಹುದು. ಈ ಇಲಾಖೆಯಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಪ್ಲಾನ್ಡ್ಸ್ಕೀಂಗೆ ೮೦ ಲಕ್ಷ, ನಾನು ಪ್ಲಾನ್‌ಸ್ಕೀಂಗೆ ೬೭ ಲಕ್ಷದ ೮೭ ಸಾವಿರದ ೧೦೦ ಇದೆ. ಆ ಮೇಲೆ ಸೆಂಟ್ರಲಿಸ್ಪೋನ್ಸರ್ಡ್‌ಸ್ಕೀಂಗೆ ೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಬಹಳ ಸಂತೋಷ. ಇನ್ನೂ ಹೆಚ್ಚಿಗೆ ಇಡಬೇಕಾಗಿತ್ತು, ಆದರೂ ಇಷ್ಟು ಹಣವನ್ನು ಇಟ್ಟಿದ್ದಾರೆ. ನಮ್ಮ ಮಾನ್ಯ ಮಂತ್ರಿಯವರು ಮೀನಿನ ಇಲಾಖೆಯ ಪೋರ್ಟ್‌ಫೋಲಿಯೋ ತೆಗೆದು ಕೊಂಡ ನಂತರ ಒಂದು ನಿಮಿಷ ಕೂಡ ಹಾಳು ಮಾಡುತ್ತಾ ಇಲ್ಲ. ಬಹಳ ಟೂರ್ ಮಾಡುತ್ತಾರೆ. ಇವರು ಟೂರ್ ಮಾಡುವುದರಲ್ಲಿ ಯಾವ ಆಫೀಸರಿಗೂ ಕೆಲಸ ಮಾಡದ ಹಾಗೆ ಮಾಡಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಲೆಜಿಸ್ಲೇಟರ್ಸ್‌ಡೇ ದಿವಸ ಎಲ್ಲರಿಗೂ ಒಂದೊಂದು ಬಿರುದನ್ನು ಕೊಟ್ಟಿದ್ದರು. ಹಾಗೇನಾದರೂ ಇವರಿಗೆ ಒಂದು ಬಿರುದನ್ನು ಕೊಡುವುದಾದರೆ, ಸಮಾರಂಭ ಶೂರರು, ಮಾತಿನ ಮಲ್ಲರು, ಊಟದ ಉಪಾಸಕರು ಎಂದು ಕೊಡಬಹುದು. ನಾನು ಕೇಳಿದೆ, ಇವರು ಮಂತ್ರಿಯಾದ ಮೇಲೆ, ಕೆಲವು ಕಡೆ ಒಂದೇ ಯೋಜನೆಗೆ ೧೦–೧೫ ಕಲ್ಲುಗಳು ಬಿದ್ದಿವೆ. ಮೊನ್ನೆ ರಾಜ್ಯಪಾಲರನ್ನು ಕರೆದುಕೊಂಡು ಹೋದರು. ಗಂಗೊಳ್ಳಿಯಲ್ಲಿ ಜಟ್ಟಿಕೆಲಸ ಮಾಡುತ್ತಾ ಇತ್ತು, ಅದನ್ನು ಇನಾಗ್ಯುರೇಷನ್ ಮಾಡಿದ್ದಾರೆ. ಮಲ್ಪೆ ಬಂದರಿಗೆ ಕೇಂದ್ರ ಸರ್ಕಾರದ ಸ್ಯಾಂಕ್ಷನ್ ದೊರೆತಿಲ್ಲ. ಸರ್ವೆ ಕೆಲಸ ಮುಗಿದಿದೆ, ಅದನ್ನು ಕೂಡ ಶ್ರೀ ಮರ್ಾ ಸಿಂಧೆಯವರು ಇನಾಗ್ಯುರೇಟ್ ಮಾಡಿದ್ದಾರೆ, ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ, ಸಿಂಧೆಯವರು ಇನಾಗ್ಯುರೇಟ್ ಮಾಡಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ, ನಾನು ಆಧಾರವಿಲ್ಲದೆ ಹೇಳುತ್ತಿಲ್ಲ. ನಿಜಲಿಂಗಪ್ಪನವರು ಅವರನ್ನು ಕರೆದುಕೊಂಡು ಹೋಗಿಲ್ಲವೆ ? ಆದ್ದರಿಂದ ನಾನು ಮಂತ್ರಿಯವರಿಗೆ ಹೇಳುವುದೇನೆಂದರೆ, ಈ ಪ್ರವಾಸವನ್ನು ಆದಷ್ಟು ಕಡಿಮೆ ಮಾಡಿ ಇದನ್ನು ನಾನು ಮಾತ್ರ ಹೇಳುತ್ತಿರುವುದಿಲ್ಲ; ಎಲ್ಲಾ ಕಡೆಯೂ ಹೇಳುತ್ತಿದ್ದಾರೆ. ಇವರು ತಿಂಗಳಿಗೆ ೨೯ ದಿವಸವೂ ಪ್ರವಾಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ, ಇಷ್ಟೆಲ್ಲಾ ಇವರು ಟೂರ್ ಮಾಡಿದರೂ ಹೋದ ವರ್ಷ ಕೇಂದ್ರ ಸರ್ಕಾರದವರು ೩೫ ಲಕ್ಷ ರೂಪಾಯಿ

(ಶ್ರೀ ಬಿ. ಭಾಸ್ಕರಶೆಟ್ಟಿ)

ಕೊಟ್ಟಿದ್ದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆ? ಅದರಲ್ಲಿ ಕೇವಲ ೫ ಲಕ್ಷ ರೂಪಾಯಿಯೂ ಕೂಡ ಖರ್ಚಾಗಿಲ್ಲ. ಮೀನುಗಾರಿಕೆಯ ಬಂದರುಗಳಿಗಾಗಿ, ಜೆಟ್ಟಿಗಳಿಗಾಗಿ ೫ ಲಕ್ಷ ರೂಪಾಯಿ ಕೂಡ ಒಂದು ವರ್ಷದಲ್ಲಿ ಖರ್ಚು ಮಾಡಿಲ್ಲ ಈ ತಿಂಗಳು ಮಾರ್ಚ್ ಅಂತ್ಯದೊಳಗೆ ೧೦ ಪರ್‌ಸೆಂಟ್ ಕೆಲಸಕ್ಕೆ ಆದರೂ ಟೆಂಡರ್ ಕರೆದು ಕೆಲಸ ಮಾಡಿಸಿದ್ದೀರಾ ? ನೀವು ನಿಮ್ಮ ಈ ಕೆಲಸವನ್ನು ಮೈಸೂರು ರಾಜ್ಯಕ್ಕೋಸ್ಕರ ಏಕೆ ಮಾಡಿಲ್ಲ ? ನೀವು ಒಂದು ವರ್ಷದಲ್ಲಿ ಇಷ್ಟು ಪ್ರವಾಸ ಮಾಡಿದರೂ, ಇದರಲ್ಲಿ ೫ ಲಕ್ಷ ರೂಪಾಯಿಯಾದರೂ ಖರ್ಚು ಮಾಡದಿರುವುದು ಏಕೆ ? ಇನ್ನು ಮಾನ್ಯ ಶಿಂಧೆಯವರು ನಾಲ್ಕನೆಯ ಯೋಜನೆಯಲ್ಲಿ ೩೦೦ ಟ್ರಾಲರಗಳನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದರಲ್ಲಿ ನಿಮ್ಮ ಮೈಸೂರು ರಾಜ್ಯಕ್ಕೆ ಎಷ್ಟು ಬಂದಿದೆ ? ಇನ್ನು ಸಣ್ಣ ಮೀನುಗಾರಿಕೆಯ ಬಂದರುಗಳಿಗಾಗಿ ನಾಲ್ಕನೆಯ ಯೋಜನೆಯಲ್ಲಿ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರಲ್ಲಿ ಎಷ್ಟು ಹಣವನ್ನು ಮೈಸೂರು ಸರ್ಕಾರಕ್ಕೆ ತಂದಿದ್ದಾರೆ ? ನೀವು ಮಾಡಿದ ಪ್ರಗತಿಯನ್ನು ಹೇಳಿರಿ. ಇನ್ನು ನನಗೆ ತಿಳಿದ ಮಟ್ಟಿಗೆ ಮಾನ್ಯ ರಾಚಯ್ಯನವರು ಇದರ ಮಂತ್ರಿಯವರಾಗಿದ್ದಾಗ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಐದಾರು ಐಸ್‌ಪ್ಲಾಂಟ್ ಬಂತು. ಈ ಮೀನುಗಾರಿಕೆಯ ಅಭಿವೃದ್ಧಿಯನ್ನು ಆದಷ್ಟು ಹುಮ್ಮಸ್ಸು ತೆಗೆದುಕೊಂಡು ಮಾಡಬೇಕು. ಏಕೆಂದರೆ ಇದರಿಂದ ಫಾರಿನ್ ಎಕ್ಸ್‌ಚೇಂಜನ್ನು ನಾವು ಗಳಿಸುತ್ತೇವೆ. ನಮಗೆ ಎಷ್ಟು ಮೀನು ಉತ್ಪತ್ತಿ ಜಾಸ್ತಿಯಾಗುತ್ತದೋ, ಅಷ್ಟು ಫಾರಿನ್ ಎಕ್ಸ್‌ಚೇಂಜನ್ನು ನಾವು ಪಡೆಯಬಹುದು. ಕ್ಯಾಪ್ಟನ್ ಜಾನ್ ಎಂಬುವರು, ಅರಬ್ಬಿ ಸಮುದ್ರವು ಇಡೀ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಮೀನಿನ ಬಂಗಾರ ಇರುವ ಸ್ಥಳವಾಗಿದೆ ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅರಬ್ಬಿ ಸಮುದ್ರದಲ್ಲಿ ಆಳವಾದ ಜಾಗಗಳಿಗೆ ಹೋಗಿ ಸರ್ಕಾರದವರು ಹೆಚ್ಚು ಹೆಚ್ಚು ಮೀನನ್ನು ಹಿಡಿಯುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದಕ್ಕೋಸ್ಕರ ದೊಡ್ಡ ದೊಡ್ಡ ಟ್ರಾಲರುಗಳನ್ನು ತಂದು ಹೆಚ್ಚು ಮೀನು ಹಿಡಿಯುವ ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಫಿಶರೀಸ್ ರಸ್ತೆಗಳು ಎಂದು ಇವೆ. ಅದನ್ನ ಸರಿಪಡಿಸಿದೆ ಹಾಗೆಯೇ ಇವೆ ತಾವು ಇಷ್ಟು ಸಲ ಟೂರ್ ಮಾಡುವಾಗ ಅದನ್ನು ಒಂದು ಸಲವಾದರೂ ನೋಡಿದ್ದೀರಾ ? ಇದನ್ನು ಸರಿಪಡಿಸುವುದಕ್ಕೆ ಒಂದು ಪೈಸೆ ಕೂಡ ಖರ್ಚು ಮಾಡಿಲ್ಲ. ಆದ್ದರಿಂದ ಈ ರಸ್ತೆ ಯಾರಿಗೆ ಸಂಬಂಧಪಟ್ಟದ್ದು ಎಂದು ತಿಳಿದುಕೊಂಡು, ಫಿಶರಿಸ್ ರಸ್ತೆಗಳನ್ನು ದುರಸ್ತಿ ಪಡಿಸುವ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತು ಈ ಇಂಜಿನುಗಳಿಗೆ ಸಬ್ಸಿಡಿ ಕೊಡುವುದನ್ನು ೨೫ ಪರ್‌ಸೆಂಟಿಗೆ ಕಡಿಮೆ ಮಾಡಬೇಕೆಂದು ಏನು ಹೇಳುತ್ತೀರಿ. ಅದನ್ನು ಆ ರೀತಿ ಮಾಡಬಾರದು. ಏಕೆಂದರೆ, ಇವತ್ತು ಕೆಲವು ಜನರು ಇದರಲ್ಲಿ ದೊಡ್ಡವರು ಇರಬಹುದು, ಆದರೆ ಬಹು ಭಾಗ ಜನರ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ತಾವು ಚೆನ್ನಾಗಿದೆ ಎಂದು ತಿಳಿಯಬಾರದು. ಆದ್ದರಿಂದ ೫೦ ಪರ್‌ಸೆಂಟ್ ಸಬ್ಸಿಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಮೀನು ಹಿಡಿಯುವ ದೋಣಿಯ ಇಂಜಿನನ್ನು ಫಾರಿನ್ನಿಂದ ತರಿಸಿದರೆ, ಅದರ ಬೆಲೆ ಮೂರು ಪಾಲಿನಷ್ಟು ಜಾಸ್ತಿಯಾಗುತ್ತದೆ. ಇದು ಮೀನುಗಾರರಿಗೆ ಬಹಳ ದುಬಾರಿಯಾಗುತ್ತದೆ. ಆದರೆ ಫಾರಿನ್ ಇಂಜಿನ್ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಹೆಚ್ಚು ಹೆಚ್ಚು ಫಾರಿನ್ ಇಂಜಿನ್ ತರಿಸಿ. ನ್ಯಾಯವಾದ ಬೆಲೆಗೆ ಮೀನುಗಾರರಿಗೆ ಸಿಗುವಂತೆ ಮಾಡಿಕೊಡಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಚಯ್ಯನವರು ತಂದಿರುವಂತಹ ೧೧ ಕೋಟಿ ೧೯ ಲಕ್ಷ ೫೪ ಸಾವಿರ ರೂಪಾಯಿ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತಕ್ಕಂತಹ ಬೆಳೆಯೆಂದರೆ, ಆಲೂಗೆಡ್ಡೆ ಅಲ್ಲಿ ಅದಕ್ಕೆ ಎರಡು ಹದ ಮಳೆ ಬಿದ್ದರೆ ಸಹಾ ಸುಮಾರು ೮ ಆಣೆಯ ಬೆಳೆ ಕೂಡ ಆಗುವ ಪರಿಸ್ಥಿತಿ ಇಲ್ಲ. ಈ ರೀತಿಯಾದರೆ, ರೈತರಿಗೆ ಮೂರು ನಾಲ್ಕು ವರ್ಷ ಸುಧಾರಿಸುವುದಕ್ಕಾಗುವುದಿಲ್ಲ. ಆದ್ದರಿಂದ ಕ್ರಾಪ್ ಇನ್ಷೂರೆನ್ಸ್ ಜಾಗ್ರತೆಯಾಗಿ ಜಾರಿಗೆ ತಂದರೆ ರೈತರಿಗೆ ಅನುಕೂಲವಾಗುತ್ತದೆ. ಒಂದು ವೇಳೆ ಬೆಳೆ ಹೋದರೂ, ಅದರಿಂದ ರೈತರಿಗೆ ಸ್ವಲ್ಪ ರಿಲೀಫ್ ಸಿಕ್ಕಿ ರೈತ ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ. ಇವತ್ತಿನ ದಿವಸ ರೈತರಿಗೆ ಬಹಳ ಕಷ್ಟ ಇದೆ. ಇಂಡಿಯಾ ದೇಶದಲ್ಲಿ ಸುಮಾರು ೮೫ ಪರ್‌ಸೆಂಟ್ ಜನರು ರೈತ ಕೆಲಸದಿಂದ ಜೀವನ ಮಾಡುತ್ತಿದ್ದಾರೆ.

ಇದನ್ನು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. ದೊಡ್ಡದೊಡ್ಡ ಪ್ಲಾಟ್‌ಫಾರಂಗಳಲ್ಲಿ ನಿಂತುಕೊಂಡು ಜನಗಳನ್ನು ಒಲಿಸಿಕೊಳ್ಳುವುದಕ್ಕೋಸ್ಕರ ನಾವು ರೈತರೇ ದೇಶದ ಬೆನ್ನುಮೂಳೆಯೆಂದು ಹೇಳುತ್ತಿದ್ದೇವೆ. ಈಗ ಏನಾಗಿದೆಯೆಂದರೆ, ರೈತನ ಬೆನ್ನುಮೂಳೆ ಮುರಿದು ಅವನ ಮೇಲೆ ರಾಜ್ಯ ಕಟ್ಟುವುದಕ್ಕೆ ಹೊರಟಿದ್ದೇವೆ. ರೈತರಿಗೆ ಈ ದಿವಸ ಸರಿಯಾದ ರಿಲೀಫ್ ಸಿಗದೇ ಹೋಪರೆ ಪಟ್ಟಣಗಳಲ್ಲಿರತಕ್ಕ ಜನ, ಉಪವಾಸಪಡ್ದು ಸಾಯಬೇಕಾಗುತ್ತದೆ. ಇದನ್ನು ನಾವು ಮನದಟ್ಟುಮಾಡಿಕೊಂಡು ರೈತರಿಗೆ ಏನೇನು ಅನುಕೂಲಗಳು ಬೇಕೋ ಆ ಅನುಕೂಲಗಳನ್ನು ಮಾಡಿಕೊಡುವವರೆಗೂ ಈ ದೇಶ ಮುಂದುವರಿಯುವುದಿಲ್ಲ. ಅಮೇರಿಕಾ ದೇಶದವರ ಹತ್ತಿರ ಸೆರಗೊಡ್ಡಿ ತಿಂಡಿ ಬೇಡಬೇಕೇ? ಇದಕ್ಕಿಂತ ಹೀನಾಯವಾದ ಕಾರ್ಯ ನಮ್ಮ ದೇಶದಲ್ಲಿ ಯಾವುದೂ ಇಲ್ಲ. ನಮ್ಮ ಇಂಡಿಯಾ ದೇಶವೇ ಈ ರೀತಿ ಪರದೇಶದವರನ್ನು ಆಶ್ರಯಿಸತಕ್ಕಂಥ ದೇಶವೆಂದು ನಾನು ಹೇಳಬಹುದು. ಇದನ್ನು ನಮ್ಮ ಸರ್ಕಾರದವರು ಕೂಡಲೇ ತಪ್ಪಿಸಬೇಕಾಗಿದೆ. ಇವತ್ತಿನ ದಿವಸ ಕೆಲವು ಹಳ್ಳಿಗಳಲ್ಲಿ ಅದರಲ್ಲಿಯೂ ನನ್ನ ಕ್ಷೇತ್ರದಲ್ಲಿ ಹೋಗಿ ನೋಡಿದರೆ, ರೈತನಿಗೆ ನೀರು ಕುಡಿಯುವುದಕ್ಕೆ ಚೆಂಬು ಇಲ್ಲ, ಲೋಟವಿಲ್ಲ, ಅನ್ನ ತಿನ್ನುವುದಕ್ಕೆ ತಟ್ಟೆ ಇಲ್ಲ, ವಾಸಮಾಡುವುದಕ್ಕೆ ಮನೆ ಇಲ್ಲ, ಒಂದು ಗುಡಿಸಲು ಇದ್ದರೆ ಹೆಚ್ಚು. ಅವನು ಆಕಾಶವನ್ನೇ ನಂಬಿ ಬೆಳೆಮಾಡಬೇಕೆಂದರೆ, ಪ್ರಕೃತಿಯೇ ಅವನಿಗೆ ವಿರೋಧವಾಗಿ ಸಕಾಲಕ್ಕೆ ಮಳೆ ಬಾರದೆ ತೊಂದರೆಯಾಗಿದೆ. ಹಿಂದೆ ರೈತರು ದೇವರ ಪೂಜೆಮಾಡಿ ಮಳೆ ಬೇಕು ಎಂಬುದಾಗಿ ಹೇಳುತ್ತಿದ್ದರು. ಆಗ ಮಳೆಯೂ ಬರುತ್ತಿತ್ತು. ಈಗ ಆ ರೀತಿ ಮಳೆ ಬರುತ್ತಾ ಇಲ್ಲ. ಮಳೆಯೇನೋ ಹೋಗಿದೆ. ಸಕಾಲಕ್ಕೆ ಮಳೆ ಬರುವುದು ಬಹಳ ಅಪರೂಪ. ಆದರಿಂದಾಗಿ ಅವನು ಬೆಳೆಯನ್ನು ಬೆಳೆಯುತ್ತಾ ಇಲ್ಲ ಅವನು ಜೀವನವನ್ನು ಸಹ ನಡೆಸುವುದಕ್ಕೆ ಆಗುತ್ತಾ ಇಲ್ಲ. ಆದ್ದರಿಂದ ಈಗ ಸರ್ಕಾರದವರು ಯಾವ ಇಲಾಖೆಗೂ ಹೆಚ್ಚಿಗೆ ಖರ್ಚುಮಾಡದೆ, ವ್ಯವಸಾಯ ಇಲಾಖೆಗೆ ಹೇರಳವಾಗಿ ಹಣವನ್ನು ಕೊಟ್ಟು, ರೈತರಿಗೆ ಅನುಕೂಲ ಮಾಡಿಕೊಡಬೇಕು ರೈತರು ಯಾವ ದಿವಸ ನಮ್ಮ ಸರ್ಕಾರವನ್ನು ಸಹಾಯಮಾಡಿ ಎಂದು ಕೇಳುವ ಮಾತು ಹೋಗುತ್ತದೋ ಆ ಹೊತ್ತಿನದಿವಸ ರೈತರು ಚೆನ್ನಾಗಿದ್ದಾರೆ, ಬೆಳೆ ಚೆನ್ನಾಗಿ ಆಗುತ್ತಿದೆ ಎಂಬ ಭಾವನೆ ಬರುತ್ತದೆ. ಮಾನ್ಯ ಶ್ರೀ ವೆಂಕಟಗಿರಿಯಪ್ಪನವರು ಹೇಳಿದಂತೆ ಹೊರದೇಶದಲ್ಲಿ ಅಂದರೆ ಬೇರೆ ಕಡೆಯಲ್ಲಿರುವ ಗೊಬ್ಬರದ ದರಕ್ಕೂ ನಮ್ಮ ಇಂಡಿಯಾದೇಶದ ಗೊಬ್ಬರದ ದರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಂಥಾದ್ದರಲ್ಲಿ ನಮ್ಮ ರೈತರಿಂದ ಗೊಬ್ಬರಕ್ಕಾಗಿ ಹೆಚು ಹಣವನ್ನು ಸುಲಿಗೆ ಮಾಡಿದರೆ ಅವರು ಯಾವ ರೀತಿ ಊರ್ಜಿತವಾಗಬೇಕು? ಸರ್ಕಾರದವರು ಅರ್ಧ ಬೆಲೆಗೆ ಅದನ್ನು ಕೊಡಬೇಕು. ನಮ್ಮ ಇಂಡಿಯಾ ದೇಶದಲ್ಲಿ ಫರ್ಟಿಲೈಜರ್ಸ್ ಕಂಪೆನಿಗಳಿವೆ. ಅವರು ಗೊಬ್ಬರವನ್ನು ತಯಾರುಮಾಡುತ್ತಿದ್ದಾರೆ. ಅದನ್ನು ಸರ್ಕಾರದವರು ತೆಗೆದುಕೊಂಡು ರೈತರಿಗೆ ಅರ್ಧ ಬೆಲೆಗೆ ಸರಬರಾಜು ಮಾಡಿದರೆ ಆಗ ರೈತನಿಗೆ ಅನುಕೂಲವಾಗುತ್ತದೆ. ನಮ್ಮ ಮೈಸೂರು ಸರ್ಕಾರದಲ್ಲಿ ಅಧಿಕಾರಿಗಳು ರಾಜ್ಯದ ಪ್ರಜಾ ಸಂಖ್ಯೆಯಲ್ಲಿ ಸುಮಾರು ಸೇಕಡ ಎರಡರಷ್ಟು ಇದ್ದಾರೆ. ಅವರಿಗೆ ೧೨—೧೨ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಟ್ಟು ನೀವು ಸುಖವಾಗಿರಿ ಪೇಪರ್ ಎಲ್ಲಿ ಇರುತ್ತದೋ ಅಲ್ಲಿಯೇ ಇರಲಿ, ಮುಂದಕ್ಕೆ ಬಿಡಬೇಡಿ ಎಂದು ಸಹಾಯ ಮಾಡಿದಿರಿ. ಆದರೆ ರೈತನಿಗೆ ನೀನು ಹೇಗಿದ್ದೀಯ, ನಿನ್ನ ಜೀವನ ಏನು ಎಂಬುದಾಗಿ ಸರ್ಕಾರ ಕೇಳಲಿಲ್ಲ. ಅವರು ಆ ರೀತಿ ಕೇಳಿದ್ದು ನನಗೆ ಕಾಣಿಸಲಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಶ್ರೀ ರಾಚಯ್ಯನವರು ವ್ಯವಸಾಯ ಇಲಾಖೆಯ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ರೈತರನ್ನು ಸರಿಯಾಗಿ ನೋಡಿಕೊಂಡರೆ ಆಗ ರೈತ ಚೆನ್ನಾಗಿ ಬೆಳೆದು ನಿಮ್ಮನ್ನು ಸುಖವಾಗಿಡುವುದಕ್ಕೆ ಒಂದು ಮಾರ್ಗವಾಗುತ್ತದೆ. ಆದರಲ್ಲಿಯೂ ವ್ಯವಸಾಯ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ಇದ್ದಾರೆ. ಅವರು ಬಹಳ ಪ್ರೀತಿಯಿಂದ ರೈತರನ್ನು ನೋಡುತ್ತಿದ್ದಾರೆ. ಬಹಳ ಅನ್ಯೋನ್ಯದಿಂದ ಮಾತನಾಡುತ್ತಾರೆ. ನಿಮ್ಮ ಬೆಳೆ ಹೇಗಿದೆ, ನೀವು ಏನು ಮಾಡುತ್ತಿದ್ದೀರಿ, ಬೆಳೆಗೆ ರೋಗ ಬಂದಿದ್ದರೆ ಇಂತಹ ರೋಗಕ್ಕೆ ಇಂತಹ ಔಷಧಿಯನ್ನು ಹೊಡೆಯಿರಿ ಎಂಬುದಾಗಿ ಬಹಳ ಪ್ರೀತಿಯಿಂದ ಅವರು ನೋಡಿಕೊಳ್ಳುತ್ತಿದ್ದಾರೆ. ಹಾರ್ಟಿಕಲ್‌ಚರ್ ಡಿಪಾರ್ಟ್‌ಮೆಂಟಿನವರೂ ಕೂಡ ೧೯ ಜಿಲ್ಲೆಗಳಲ್ಲಿಯೂ ಅನೇಕ ಉದ್ಯಾನವನಗಳನ್ನು ನಿರ್ಮಿಸಿ ಜನಗಳಿಗೆ ಒಂದು ಸಂತೋಷವನ್ನು ಉಂಟುಮಾಡುವುದಕ್ಕೆ ಬಹಳವಾಗಿ ಕಷ್ಟಪಡುತ್ತಿದ್ದಾರೆ. ಅಗ್ರಿಕಲ್‌ಚರ್ ಮತ್ತು ಹಾರ್ಟಿಕಲ್‌ಚರಲ್ ಇಲಾಖೆಗಳಲ್ಲಿರತಕ್ಕ ಮುಖ್ಯಸ್ಥರು ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಹೆಚ್ಚಿನ ಪ್ರೀತಿಯಿಂದ ರೈತರನ್ನು ಮಾತನಾಡಿಸಿದರೆ ಸಾಕು, ಅದೇ ಅವರಿಗೆ ಸೊಗಸು. ರೈತರಿಗೆ ಸಹಾಯಮಾಡುವುದಕ್ಕೆ ಈಗಾಗಲೇ ಕೆಲವು ಅಧಿಕಾರಿಗಳು ತಯಾರಾಗಿದ್ದಾರೆ. ಅವರನ್ನು ಪ್ರೀತಿಯಿಂದ ನೋಡಿಕೊಂಡು ಅವರಲ್ಲಿ ಒಳ್ಳೆಯ ವಾತಾವರಣವನ್ನು ಉಂಟುಮಾಡಿ ಒಳ್ಳೆಯ ಸ್ಥಿತಿಯಲ್ಲಿ ಅವರನ್ನು ಇಟ್ಟರೆ ನಮ್ಮ ರೈತರಿಗೆ ಬೇಕಾದಷ್ಟು ಅನುಕೂಲವಾಗುತ್ತದೆ.

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಇನ್ನು ಟ್ರಾಕ್ಟರ್ಸ್ ವಿಷಯ. ಇವನ್ನು ಹಿಂದೆ ವ್ಯವಸಾಯ ಇಲಾಖೆಯಿಂದ ರೈತರಿಗೆ ಒದಗಿಸುತ್ತಿದ್ದರು. ಹಿಂದೆ ಶೇಕಡ ೬ ರಂತೆ ಬಡ್ಡಿ ವಸೂಲು ಮಾಡುತ್ತಿದ್ದರು. ಇಲ್ಲಿಯೂ ಕೂಡ ಸರ್ಕಾರ ಈಗ ಆದಾಯವನ್ನು ಸಂಪಾದನೆ ಮಾಡುವುದಕ್ಕೆ ಹೊರಟಿದೆ. ಮೈಸೂರು ಆಗ್ರೋ ಇಂಡಸ್ಟ್ರೀಸ್ ಅವರು ಒಂದು ನಿರ್ಣಯವನ್ನು ಪಾಸ್ ಮಾಡಿ ಸೇಕಡ ೧೦ ರೂಪಾಯಿವರೆಗೂ ವಸೂಲು ಮಾಡಿ ಎಂದು ಹೇಳಿದ್ದಾರೆ. ಅಂದಮೇಲೆ ಸರ್ಕಾರದವರು ಇದರಲ್ಲಿ ಹೆಚ್ಚು ಆದಾಯವನ್ನು ಸಂಪಾದನೆ ಮಾಡುವುದೇ ಗುರಿಯಾಗಿದೆ. ಇವರಿಗೆ ರೈತರು ಹೋದರೂ ಚಿಂತೆ ಇಲ್ಲ, ರೈತನ ಮನೆ ಇಲ್ಲದಿದ್ದರೂ ಸಹ ನಮಗೆ ಹಣಬೇಕೆಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ರೈತರು ಸುಭಿಕ್ಷರಾಗುವವರೆಗೂ ಸರ್ಕಾರ ಸುಭಿಕ್ಷವಾಗುವುದಿಲ್ಲ. ಸರ್ಕಾರದವರು ಮೈಸೂರು ಆಗ್ರೋ ಇಂಡಸ್ಟ್ರೀಸ್ ನವರಿಂದ ಬಿತ್ತನೆ ಬೀಜಗಳನ್ನು ಪಡೆದು ವ್ಯವಸಾಯ ಇಲಾಖೆಯ ಮೂಲಕ ರೈತರಿಗೆ ಕೊಡಬೇಕೆಂದು ನಾನು ಮಾನ್ಯ ಶ್ರೀ. ರಾಚಯ್ಯ ನವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಫಿಷರೀಸ್ ವಿಷಯ, ನಮ್ಮ ಜಿಲ್ಲೆಯಲ್ಲಿ ವರ್ಷದ ಕೇವಲ ೧೯ ಇಂಚು ಅಥವಾ ೨೦ ಇಂಚುಗಳಷ್ಟು ಮಳೆ ಬರುವುದಿಲ್ಲ. ಇಂಥಾದ್ದರಲ್ಲಿ ಕೆರೆಗಳಲ್ಲಿ ಮೀನು ಬಿಟ್ಟರೆ ಅವು ದೊಡ್ಡವಾಗುವ ಮುಂಚೆಯೇ ಹಿಡಿದು ತಿನ್ನುತ್ತಾರೆ. ಕೆರೆಗಳು ಒಣಗಿ ಹೋದ ಮೇಲೆ ಅಲ್ಲಿದ್ದ ಮೀನುಗಳನ್ನು ಯಾರೋ ಹಿಡಿದುಕೊಂಡು ತಿನ್ನುತ್ತಾರೆ. ಎಲ್ಲಿ ಮೀನು ಹೆಚ್ಚಿಗೆ ತಯಾರಾಗುತ್ತದೋ ಅಲ್ಲಿ ರೈತರಿಗೆ ಹೆಚ್ಚಿಗೆ ಸೌಲಭ್ಯವನ್ನು ಒದಗಿಸಿಕೊಟ್ಟು ಅಲ್ಲಿಯೇ ಹೆಚ್ಚು ಮೀನು ಬೆಳೆಯುವಂತೆ ಮಾಡಿ ಇಡೀ ಮೈಸೂರು ಸಂಸ್ಥಾನದಿಂದ ಮೀನನ್ನು ಎಲ್ಲಾ ಕಡೆಯೂ ಸರಬರಾಜು ಮಾಡುವಂತೆ ವ್ಯವಸ್ಥೆ ಮಾಡಬೇಕು. ಅವನ್ನು ಬಿಸಿಲಿಗೆ ಒಣಗಿ ಹೋಗುವ ಕೆರೆಗಳಲ್ಲಿ ಬಿಟ್ಟರೆ ಅದು ಸರಿಹೋಗುವುದಿಲ್ಲ. ಎಲ್ಲಿ ಹೆಚ್ಚಿಗೆ ಮೀನು ಬೆಳೆಯುತ್ತಾರೆಯೋ ಅಲ್ಲಿರತಕ್ಕವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಮೀನು ಬೆಳವಣಿಗೆಯ ವಿಷಯದಲ್ಲಿ ತಜ್ಞರಾದವರು ಅಲ್ಲಿದ್ದರೂ ಅಂತಹವರನ್ನು ಡೈರೆಕ್ಟರನ್ನಾಗಿ ಮಾಡಲಿಲ್ಲ. ಯಾರೋ ಹೊರದೇಶದವರನ್ನು ತಂದು ಅವರನ್ನು ಡೈರೆಕ್ಟರನ್ನಾಗಿ ಮಾಡಿದ್ದಾರೆ. ಅದು ಸರಿಯಲ್ಲ. ಮೀನು ಬೆಳವಣಿಗೆಯಲ್ಲಿ ತಜ್ಞರಾದವರನ್ನೇ ಇನ್ನು ಮುಂದೆ ಡೈರೆಕ್ಟರನ್ನಾಗಿ ಮಾಡಿ ಆ ಇಲಾಖೆಯಲ್ಲಿ ಹೆಚ್ಚಿಗೆ ಮುತುವರ್ಜಿ ವಹಿಸಿ ಕೆಲಸಮಾಡುವ ಜನರನ್ನು ನೇಮಿಸಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಪಶುಸಂಗೋಪನೆ ವಿಷಯದಲ್ಲಿ ಬಹಳ ಮುತುವರ್ಜಿವಹಿಸಿ ಶಂಕರರಾಯರು ಅದನ್ನು ಅಭಿವೃದ್ಧಿಗೊಳಿಸಿದ್ದಾರೆ ಇಂಡೋಡೇನೀಷ್ ಪ್ರಾಜೆಕ್ಟನ್ನು ಮಾದರಿಯಾಗಿ ಮಾಡಿದ್ದಾರೆ. ನಮ್ಮಲ್ಲಿ ಅನೇಕ ವಿದ್ವಾಂಸರು ಮತ್ತು ವಿದ್ಯಾವಂತರು ಇದ್ದಾರೆ ಅವರಿಗೇ ಕೆಲಸ ಇಲ್ಲದೆ ಇರುವಾಗ ಡೆನಮಾರ್ಕ್ ದೇಶದವರು ಬಂದು ಇಲ್ಲಿ ಕೇಂದ್ರದ ಆಡಳಿತ ನಡೆಸುತ್ತಿದ್ದಾರೆ. ಅವರು ನಮಗೆ ಹಣ ಕೊಟ್ಟಿದ್ದಾರೆಂದು ಹೇಳಿ ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದಾರೆ. ೬೦,೦೦೦ ರೂಪಾಯಿನ ಹಾಲನ್ನು ಮಾರಾಟ ಮಾಡಿ ಅದಕ್ಕೆ ಸರಿಯಾದ ಲೆಕ್ಕ ಇಡುತ್ತಾ ಇಲ್ಲ. ಇದರ ಬಗ್ಗೆ ನಾವು ಲೆಕ್ಕ ಕೇಳುವಹಾಗಿಲ್ಲ.

SRI G. B. SHANKAR RAO.—Without having facts and figures to support his argument, he is making vague allegations.

ಶ್ರೀ ಕೆ. ಎಂ. ಪುಟ್ಟಸ್ವಾಮಿ —ನಮ್ಮ ಮೈಸೂರು ದೇಶದಲ್ಲಿ ಡೇನಿಷರಿಗಿಂತ ಅತಿ ಬುದ್ಧಿವಂತರೂ ಮತ್ತು ವಿದ್ಯಾವಂತರೂ ಇದ್ದಾರೆ. ಹಿಂದೆ ಮಿರ್ಜಾರವರ ಕಾಲದಲ್ಲಿ ಡಾ॥ ರೇಲಿ ಅವರು ಚೀಫ್ ಜಸ್ಟೀಸ್ ಆಗಿದ್ದರು. ನನ್ನ ಹೆಂಡತಿ ಮೈಸೂರು ರೆಪ್ರಸೆಂಟೇಟಿವ್ ಅಸೆಂಬ್ಲಿಯೊಳಗೆ ಸದಸ್ಯರಾಗಿದ್ದರು. ಅವರು ಮೈಸೂರಿನಲ್ಲಿ ಅವರಿಗಿಂತ ವಿದ್ಯಾವಂತರು ಇರಲಿಲ್ಲವೇ, ಹೊರಗಡೆಯವರನ್ನು ಏಕೆ ಹೆಚ್ಚು ಹಣ ಕೊಟ್ಟು ಇಲ್ಲಿ ತಂದು ಹಾಕಬೇಕು ಎಂದು ಟೀಕೆ ಮಾಡಿದರು. ನಮ್ಮಲ್ಲಿ ಬೇಕಾದಷ್ಟು ವಿದ್ಯಾವಂತರಿದ್ದಾರೆ, ಬುದ್ಧಿವಂತರು ಇದ್ದಾರೆ. ಒಳ್ಳೆಯ ಶಿಲ್ಪಿಗಳು ಇದ್ದಾರೆ. ಸರ್. ಎಂ. ವಿಶ್ವೇಶ್ವರಯ್ಯನಂತ ವಿದ್ಯಾವಂತರು ಇದ್ದಾರೆ. ನಮ್ಮ ಜೊತೆಗೆ ಕೊಲಾಬರೇಷನ್ ಮಾಡುವ ಹೊರಗಿನವರು ನಮ್ಮ ದೇಶದ ಜನರಿಗೆ ಸರಿಯಾದ ಟ್ರೀಟ್‌ಮೆಂಟ್ ಕೊಡುತ್ತಾ ಇಲ್ಲ. ಆರು ತಿಂಗಳ ಹಿಂದೆ ಈ ಡೇನಿಷ್ ಎಕ್ಸ್‌ಪರ್ಟ್ಸ್ ಅವರ ಕಾಂಟ್ರಾಕ್ಟ್ ಮುಗಿದುಹೋಗಿ ಅವರು ಕೆಲಸದಿಂದ ಬಿಟ್ಟು ಹೋಗಬೇಕಾಗಿತ್ತು. ಅವರನ್ನು ಇನ್ನೂ ೪ ೫ ವರ್ಷಗಳ ಕಾಲ ಇಲ್ಲೇ ಇಟ್ಟುಕೊಳ್ಳುವಂತಹ ಒಂದು ಕ್ರಮವನ್ನು ಮಾಡಿಕೊಂಡಿದ್ದಾರೆ ಎಂದು ಕೇಳಿದ್ದೇನೆ. ಇದು ಸರಿಯಲ್ಲ. ಆಮೇಲೆ ಈಗ ಡೈರಿ ಹಿಂದಿನಷ್ಟು ಹೊಲಸಾಗಿಲ್ಲವೆಂದು ಕೇಳಿದ್ದೇವೆ. ಆದರೆ ರೈತರಿಗೆ ಅವರು

ಹಾಲಿನ ರೇಟನ್ನು ಕಡಿಮೆಮಾಡುತ್ತಿದ್ದಾರೆ. ಈ ರೇಟನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಮೈಸೂರು ಸರಕಾರ ಸರಿಯಾಗಿ ನಡೆಯುತ್ತಾ, ಇಲ್ಲ ಬಿಟ್ಟು ಹೋಗಿ ಎಂದು ಇಂಡಿಕೇಟ್ ಸದಸ್ಯರು ಹೇಳುತ್ತಿದ್ದಾರೆ.

SRI AZEEZ SAIT.—I strongly protest againt that remark. None of the members on this side has ever said like that. Hon member should withdraw that remark. It is only his dream. They are afraid of us even in their sleep.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಈ ಸರಕಾರ ಹೊರಟು ಹೋಗಲಿ, ನಾವು ಆಡಳಿತ ನಡೆಸುತ್ತೇವೆ. ಎಂದು ಜಬರದಸ್ತಿನಿಂದ ನಮ್ಮ ಮಾನ್ಯ ಚನ್ನಬಸಪ್ಪನವರು, ಸಿದ್ದವೀರಪ್ಪನವರು ಹೇಳುತ್ತಿದ್ದಾರೆ. ಹಿಂದೆ ಸಿದ್ದವೀರಪ್ಪನವರು ಹೋಂ ಮಿನಿಷ್ಟರ ಆಗಿದ್ದ ಕಾಲದಲ್ಲಿ ಏನು ಮಾಡಿದರು ಕೇಳುತ್ತೇನೆ.

SRI AZEEZ SAIT,—I rise to a point of order. The member is deviating from the point. The demands before the House are Agriculture, Animal Husbandry and Forest, but the member is speaking about Indicate members. I do not know why he should be scared of us. We are only 26 members.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಅವರು ಆಡಳಿತ ನಡಸತಕ್ಕ ವೈಖರಿ ಹೇಳುತ್ತೇನೆ. ಚನ್ನಬಸಪ್ಪನವರು ದಸರಾ ಪ್ರೊಸೆಷನ್‌ನಲ್ಲಿ.........

SRI AZEEZ SAIT.—I rise to a point of order. The member is deviating from the subject matter which consists of demands for Agriculture, Animal Husbandry and Forest. He is speaking about Sri Channabasappa and Sri Siddaveerappa. What have they got to do with the subject matter before the House ?

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸ್ವಾಮಿ ಆಮೇಲೆ ಈ ಸಂಬಂಧವಾಗಿ ಕೇಸು ಹಾಕಿದರು.............

SRI AZEEZ SAIT.—He is more worried about the Indicate. He is afraid of us. We will always keep him afraid of us.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನಿಮ್ಮವರು ಯಾವ ರೀತಿ ಆಡಳಿತ ನಡೆಸುತ್ತಿದ್ದರು ಎಂದು ಹೇಳುತ್ತಿದ್ದೇನೆ.

ಶ್ರೀ ಅಜೀಜ್ ಸೇಟ್.—ಈವೊತ್ತು ನೀವು ಮಾಡುವ ಅನಾಹುತಗಳನ್ನು ಬೇಕಾದರೆ ಚರ್ಚೆ ಮಾಡೋಣ. ಏನೇನು ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಆಮೇಲೆ ಎರಡು ಎಫ್.ಐ.ಆರ್. ಹಾಕಿದರು. ಸಾಬೀತು ಆಗಲಿಲ್ಲ. ಮೋದಪ್ಪನವರು ೧೯೫೬ನೇ ಇಸವಿಯಲ್ಲಿ ಈ ಕೇಸಿನ ಸಂಬಂಧವಾಗಿ ಒಂದು ಜಜ್‌ಮೆಂಟ್ ಕೊಟ್ಟರು. ಇವರಿಗೆ ಯಾವ ಜವಾಬ್ದಾರಿ ಕೆಲಸ ಕೊಟ್ಟರೂ ನಿರ್ವಹಿಸುವುದಿಲ್ಲ, ಇವರು ಜವಾಬ್ದಾರಿ ಕೆಲಸಕ್ಕೆ ನಾಲಾಯಕ್ಕು ಎಂದು ಬರೆದಿದ್ದಾರೆ. ಈ ಸರಕಾರ ಕಟ್ ಅಂಡ್ ಡ್ರೈ ಆಗಿ ಕೆಲಸ ಮಾಡುತ್ತಾ ಇದೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು, ಅವರೂ ಒಪ್ಪಿಕೊಳ್ಳಬೇಕು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

4-30 P. M.

ಶ್ರೀ ಜಿ. ಅಮರೇಗೌಡ (ಸಿಂಧನೂರು).—ಮಾನ್ಯ ಅಧ್ಯಕ್ಷರೇ, ಈ ವ್ಯವಸಾಯಕ್ಕೆ ಸಂಬಂಧಿಸಿದಂತೆ ಮಂಡಿಸಿದ ಬೇಡಿಕೆಯನ್ನು ವಿರೋಧಿಸುತ್ತಾ, ವಿರೋಧಿಸಿದ ಕಾರಣ ಹಣವನ್ನು ಹೆಚ್ಚು ಒದಗಿಸಿದೆ ಅಂತ ಅಲ್ಲ ಒಕ್ಕಲುತನಕ್ಕೆ ಹಣ ಕಡಿಮೆಯಾಗಿದೆ ಅಂತ ಭಾವಿಸಿ, ನಾಲ್ಕು ಮಾತನಾಡಲು ಬಯಸುತ್ತೇನೆ.

ನಮ್ಮ ಬರೇ ಮೈಸೂರು ರಾಜ್ಯವೇ ಅಲ್ಲ, ಸಂಪೂರ್ಣ ಭಾರತದ ಬಹು ದೊಡ್ಡ ಭಾಗ ಒಕ್ಕಲಿಗ ನಿಂದಲೇ ಹಣ ತುಂಬಿದೆ. ಅವನು ನಮ್ಮ ರಾಜ್ಯದ ಒಂದು ದೊಡ್ಡ ಸಮಸ್ಯೆ, ಸಮಸ್ಯೆ ಅಂದರೆ ಪರಿಹಾರ ವಿಲ್ಲದ ಸಮಸ್ಯೆ ಅವನು. ಅದಕ್ಕೆ ಕಾರಣಗಳು ಇವೆ. ಅವನಿಗೆ ವಿಶೇಷವಾಗಿ ಔಷಧಿ ಇಲ್ಲದಂತಹ ವಸ್ತು ಎಂದರೆ ಪ್ರಕೃತಿ. ಅವನು ಪ್ರಕೃತಿಯ ಸಂಗಡ ಸೆಣದಾಡಬೇಕಾಗುತ್ತದೆ. ನಾವು ಎಷ್ಟೇ ಪ್ರಯತ್ನ ಮಾಡಿ, ಎಷ್ಟೇ ಹೋರಾಡಿ, ವಿಜ್ಞಾನದ ಮೇಲೆ ಆಕ್ರಮಣ ಮಾಡಿ ಜಯಗಳಿಸಿದರೂ ಅದು ಕಡಿಮೆ ಎಂದೇ ಭಾವಿಸುತ್ತೇನೆ. ಮಳೆಯ ಮೇಲೆ ನಿರ್ಭರವಾದ ಭೂಮಿಯನ್ನು ನಾವು ಕಡಿಮೆ ಮಾಡಿದರೂ ಎಲ್ಲಿಯವರೆಗೆ ಮಾಡಿದ್ದೇವೆ ಎಂಬುದು ದೊಡ್ಡ ಪ್ರಶ್ನೆ, ಇದುವರೆಗೂ ಪ್ರಯತ್ನ ಮಾಡಿದರೂ ಕೃಷಿಗೆ ಯೋಗ್ಯವಾದ ಭೂಮಿಯಲ್ಲಿ ೨೬೨ ಲಕ್ಷ ಎಕರೆಯಲ್ಲಿ ೨೬ ಲಕ್ಷ ಎಕರೆ ಎಂದರೆ ಹತ್ತು ಪರ್ಸೆಂಟ್ ಭೂಮಿ ಯನ್ನು ನೀರಾವರಿಯ ಅಂತರ್ಗತದಲ್ಲಿ ತರಲು ಸಾಧ್ಯವಾಗಿದೆ. ಇದರ ಜೊತೆಗೆ ಪ್ರಕೃತಿಯಲ್ಲಿನ ರೋಗ, ರುಜಿನ ಈ ಒಕ್ಕಲುತನಕ್ಕೆ ಅಂಟಿಕೊಂಡಿದೆ. ಇದರ ಜೊತೆಗೆ ನಾವು ಸಾಕಾದಷ್ಟು ಹೋರಾಡಬೇಕಾಗಿದೆ. ನೀರಾವರಿಯ ಭೂಮಿಯನ್ನು ಹೆಚ್ಚಿಸಿದಂತೆ ಬೆಳೆಗಳಿಗೆ ರೋಗಗಳೂ ಹೆಚ್ಚಾಗುತ್ತಿವೆ. ಈ ರೋಗಗಳನ್ನು ದೂರ ಮಾಡುವುದಕ್ಕೆ ನಾವು ಮತ್ತಷ್ಟು ವೈಜ್ಞಾನಿಕ ಶಕ್ತಿಗಳನ್ನು ಬಳಸಲೇಬೇಕಾಗಿದೆ. ಅದನ್ನು ಎಲ್ಲಿಯ ವರೆಗೆ ಬಳಸಬೇಕು ಎಂಬ ಪ್ರಶ್ನೆ ನಮ್ಮ ಮುಂದೆ ಇದೆ.

ಎರಡನೆಯದಾಗಿ ಹಣ ಮತ್ತು ಮಾರ್ಕೆಟ್ಟಿನ ಮೇಲೆ ಅವನ ಹತೋಟಿ ಇಲ್ಲ. ನಾವು ಇವತ್ತಿನ ದಿವಸ ಎಷ್ಟೇ ಪ್ರಯತ್ನ ಮಾಡಿದರೂ ಅವನಿಗೆ ಸಾಕಾದಷ್ಟು ಸುಲಭ ರೀತಿಯಲ್ಲಿ ಹಣವನ್ನು ಒದಗಿಸಿರು ತ್ತೇವೆಯೇ ಎಂಬುದು ಒಂದು ದೊಡ್ಡ ಪ್ರಶ್ನೆ. ಇದುವರೆಗೂ ಕೋ-ಆಪರೇಟೀವ್ ಸೊಸೈಟಿಗಳು ಎಷ್ಟು ಸವಲತ್ತಿನೊಳಗೆ ಹಣವನ್ನು ಒದಗಿಸಿವೆ ಎಂಬುದನ್ನು ನೋಡಬೇಕು. ಒದಗಿಸಿದ ಹಣವನ್ನು ಅವನು ಸಂಪೂರ್ಣವಾಗಿ ತೆಗೆದುಕೊಂಡು ಅದರಿಂದ ಕೆಲಸಕಾರ್ಯಗಳು ಆಗಿದೆಯೇ ಇಲ್ಲವೇ ಎಂಬುದು ಎರಡನೆಯ ಪ್ರಶ್ನೆ. ಮೂರನೆಯದು ಮಾರ್ಕೆಟ್ಟು ಅವನ ಕೈಯಲ್ಲಿ ಇಲ್ಲ. ಎಲ್ಲಿಯವರೆಗೆ ಈ ಅನುಕೂಲತೆಗಳು ಅವನಿಗೆ ಆಗುವುದಿಲ್ಲವೋ ಅಲ್ಲಿಯವರೆಗೂ ಅವನ ಪರಿಸ್ಥಿತಿ ನೆಟ್ಟಗೆ ಆಗುವುದಿಲ್ಲ. ಮಾರ್ಕೆಟ್ಟಿಗೆ ಹೋದ ತಕ್ಷಣ ಅವನ ಸರಕು ಮಾರಾಟವಾಗಬೇಕು, ಅವನು ಒಯ್ದ ಸರಕಿಗೆ ಕನಿಷ್ಟಪಕ್ಷ ಬಿತ್ತುವುದಕ್ಕೆ, ಬೆಳೆಯು ವುದಕ್ಕೆ ಉಪಯೋಗ ಮಾಡಿದ ಹಣದ ಕೂಲಿ ಆದರೂ ಅವನಿಗೆ ದೊರೆಯಬೇಕು. ಅದು ಆಗುತ್ತಿದೆಯೇ? ಇದು ಒಂದು ದೊಡ್ಡ ಪ್ರಶ್ನೆ. ವಾಸ್ತವಿಕ ಮಾರುಕಟ್ಟೆಯ ಸವಲತ್ತು ನಮ್ಮ ದೇಶದಲ್ಲಿ ಇವತ್ತು ಕಂಡು ಬರುವುದಿಲ್ಲ. ಇದು ಆಗಬೇಕಾದರೆ ಸಾಕಾದಷ್ಟು ರಸ್ತೆಗಳ ವ್ಯವಸ್ಥೆಯಾಗಬೇಕು. ಮಾಲುಗಳನ್ನು ತರಲು ಸಾಕಾದಷ್ಟು ಲಾರಿ ಮತ್ತು ಬೇರೆ ಬೇರೆ ವೈಜ್ಞಾನಿಕ ಉಪಕರಣಗಳನ್ನು ಉಪಯೋಗ ಮಾಡಿದರೆ ರೈತ ತನ್ನ ಸರಕನ್ನು ತರುತ್ತಾನೆ, ಇಲ್ಲದೇ ಇದ್ದರೆ ಅವನಿಗೆ ಶಕ್ಯವಾಗುವುದಿಲ್ಲ.

[MR. SPEAKER *in the Chair*]

ಆ ರೀತಿ ಮಾರುಕಟ್ಟೆಗೆ ಬಂದ ಸರಕು ತಕ್ಷಣವೇ ಮಾರಾಟವಾಗುತ್ತದೆಯೇ ಅಥವಾ ಮಾರಾಟವಾಗ ದಿದ್ದರೆ ಅವನು ಅದನ್ನು ಎಲ್ಲಿ ಇಡಬೇಕು ಎಂಬುದು ಒಂದು ದೊಡ್ಡ ಪ್ರಶ್ನೆ. ಕೆಲವು ಭಾಗದಲ್ಲಿ ಗೋಡೌನ್ ಇರಬಹುದು. ಅಂತಹ ಕಡೆ ಅವನ ಸರಕನ್ನು ಒಳ್ಳೆಯ ರೀತಿಯಲ್ಲಿ ಇಟ್ಟು ಅವನು ಅದಕ್ಕೆ ಉತ್ತಮವಾದ ಕ್ರಯವನ್ನು ಪಡೆಯಲಿಕ್ಕೆ ವ್ಯವಸ್ಥೆ ಇದೆಯೇ ಇಲ್ಲವೇ ಎಂಬುದು ಎರಡನೆಯ ಪ್ರಶ್ನೆ. ಈ ಬಗ್ಗೆ ನಾವು ಎಷ್ಟೇ ಕಾನೂನು ಮಾಡಿದರೂ ಮಾರುಕಟ್ಟೆ ಮತ್ತು ಹಣದ ನಿರ್ಧಾರ ಕೇವಲ ಒಂದು ವರ್ಗದ ಮೇಲೆ ಅವಲಂಬಿಸಿದೆ. ಮಾರ್ಕೆಟ್ಟು ಮತ್ತು ಕ್ರಯದ ನಿರ್ಧಾರ ಕಲ್ಕತ್ತಾ ಮತ್ತು ಮದ್ರಾಸಿನಲ್ಲಿ ಮಾರಾಟ ಮಾಡುವಂತಹ ಒಂದು ವರ್ಗ ಏನಿದೆ ಎಂದು ನಿರ್ಧರಿಸುತ್ತದೆ. ಇದುವರೆಗೂ ಎಷ್ಟೇ ಸಬ್ಸಿಡಿ ಕೊಟ್ಟರೂ ಕೂಡ ಅದನ್ನು ಪರಿಹಾರ ಮಾಡಲಿಕ್ಕೆ ಶಕ್ಯವಾಗಿಲ್ಲ.

ಲೋಕಲೈಸೇಷನ್ ಪ್ಯಾಟ್ರನ್ ನಮ್ಮ ತುಂಗಭದ್ರಾ ಯೋಜನೆಯ ಭಾಗದಲ್ಲಿ ಇದೆ. ಲೋಕ ಲೈಸೇಷನ್ ಎಂದರೆ ಯಾವ ಭೂಮಿ ಯಾವ ಬೆಳೆಗೆ ಯೋಗ್ಯವೋ ಅದನ್ನೇ ಬೆಳೆಯಬೇಕೆಂಬ ಒಂದು ನಿಗದಿ

ಇತ್ತು. ಇದರಿಂದ ಸಾಕಾದಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಬೆಳೆಯನ್ನೇ ಬೆಳೆಯ ಬೇಕೆಂದು ಅವನನ್ನು ಒತ್ತಾಯಮಾಡಿದ ಮೇಲೆ ಅವನು ಬೆಳೆದಂತಹ ವಸ್ತುಗಳಿಗೆ ಸರಿಯಾದಂತಹ ಹಣ ವನ್ನು ಮಾರುಕಟ್ಟೆಯಲ್ಲಿ ಕೊಡಬಹುದೇ ? ಅವನ ಕಾಸ್ಟ್ ಆಫ್ ಪ್ರೊಡಕ್ಷನ್ ಅವನಿಗೆ ಕೊಡದಿದ್ದರೆ ಅವನು ಬದುಕಬಹುದೇ ? ಅವನನ್ನು ನಾವು ಒತ್ತಾಯಮಾಡಲಿಕ್ಕೆ ಯೋಗ್ಯರೇ ? ಇಂತಹ ಪರಿಸ್ಥಿತಿ ನಮ್ಮ ತುಂಗಭದ್ರಾ ಆಯಕಟ್ಟಿನ ಪ್ರದೇಶದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ. ಇದು ನೈಜಾಮರ ಕಾಲಕ್ಕೆ ಆದ ಯೋಜನೆ. ಇದನ್ನು ಪ್ರೊಟೆಕ್ಟೀವ್ ಇರಿಗೇಷನ್ ಅಂತ ಮಾಡಿದ್ದು ಆಗಿದೆ. ಮಳೆಯು ಬಾರದೆ ಇದ್ದಾಗ ಈ ನೀರನ್ನು ಉಪಯೋಗಿಸುವುದು ಅಂತ. ಮಳೆಯು ಬಂದ ಕಾಲಕ್ಕೆ ಈ ನೀರನ್ನು ದುರುಪಯೋಗ ಮಾಡಬೇಕೇ ಎಂಬ ಪ್ರಶ್ನೆ ಬರುತ್ತದೆ. ಯಾವುದೋ ಒಂದು ಕಾಲದಲ್ಲಿ ಮಾಡಿದ ಈ ಯೋಜನೆ ಎಷ್ಟೋ ವರ್ಷಗಳ ಮೇಲೆ ಬದಲಾವಣೆಯಾದ ಪರಿಸ್ಥಿತಿಯಲ್ಲಿ ಅದೇ ತತ್ವವನ್ನು ಉಪಯೋಗ ಮಾಡಬೇಕೇ ಅಥವಾ ಬದಲಾದ ಪರಿಸ್ಥಿತಿಯಲ್ಲಿ ಅದಕ್ಕನುಗುಣವಾಗಿ ಏನಾದರೂ ಬದಲಾವಣೆಯಾದ ಮಾರ್ಗವನ್ನು ಅನುಸರಿಸಬೇಕೇ ಎಂಬುದು ಎರಡನೆಯ ಪ್ರಶ್ನೆ. ಎಲ್ಲಿಯವರೆಗೂ ನಮ್ಮ ಒಕ್ಕಲುತನ ಬದಲಾದ ಪರಿಸ್ಥಿತಿಗೆ ಅನುಸಾರವಾಗಿ ನಡೆಯುವುದಿಲ್ಲವೋ ಅಲ್ಲಿಯವರೆಗೂ ಅದನ್ನು ಮುಂದುವರಿಸಿ ಕೊಂಡು ಹೋಗುವುದು ಕಷ್ಟ. ತುಂಗಭದ್ರಾ ಆಯಕಟ್ಟಿನಲ್ಲಿ ೫ ಲಕ್ಷ ಎಕರೆ ಭೂಮಿ ನೀರಾವರಿಯ ಅಂತರ್ಗತದಲ್ಲಿ ಬಂದಿದೆ. ಅದರಲ್ಲಿ ೩೦-೪೦ ಸಾವಿರ ಎಕರೆ ಭೂಮಿ ಡೆವಲಪ್ ಆಗಿರಬಹುದು ? ಸಮಂ ತಳವಾಗಿ ನೀರು ಉಪಯೋಗ ಮಾಡುತ್ತಾ ಇರಬಹುದು. ಉಳಿದ ನೀರು ದುರುಪಯೋಗವಾಗುತ್ತಾ ಇದೆ. ಹಾಗಿದ್ದರೂ ನಾವು ಕುರುಡು ರೀತಿಯಲ್ಲಿ ಲೋಕಲೈಸೇಷನ್ ಮಾಡಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. ಅವನು ಬೆಳೆಯುತ್ತಾನೆಯೋ ಅಥವಾ ನೀರು ಉಪಯೋಗ ಮಾಡುತ್ತಾನೆಯೇ ಎಂಬ ಪ್ರಶ್ನೆ ವಿಚಾರ ಮಾಡುವುದಿಲ್ಲ. ಹೊಲಕ್ಕೆ ಬೆಳೆಗೆ ನೀರು ಮುಟ್ಟಿದ ತಕ್ಷಣ ಅವನು ನೀರಾವರಿಯ ಟ್ಯಾಕ್ಸ್ ಕೊಡಬೇಕು. ಒಂದು ಎಕರೆಯಲ್ಲಿ ಉತ್ತಮವಾಗಿ ಒಕ್ಕಲುತನ ಮಾಡಬೇಕಾದರೆ ಒಂದು ಸಾವಿರ ರೂಪಾಯಿ ಕನಿಷ್ಟ ಮೊದಲನೆಯ ವರ್ಷ ಬೇಕಾಗುತ್ತದೆ. ಅಷ್ಟಾದರೂ ಎರಡನೆಯ ವರ್ಷ ಸಂಪೂರ್ಣ ಬೆಳೆ ಬರುವ ಪರಿಸ್ಥಿತಿ ಇರುವುದಿಲ್ಲ. ಮನಿಲೆಂಡರ್‍ಸ್ ಹತ್ತಿರ ಸಾಲಕ್ಕೆ ಹೋಗಬೇಕು, ಕೆಲವು ವರ್ಷಗಳಾದ ಮೇಲೆ ಅದೇ ಭೂಮಿ ನಿಮ್ಮ ಅಧೀನವಾಗುತ್ತದೆ. ಆದ್ದರಿಂದ ಈ ಲೋಕಲೈಸೇಷನ್ ಪ್ಯಾಟ್ರನ್ ಬದ ಲಾಯಿಸಬೇಕು. ಯಾವುದಾದರೂ ಬೆಳೆಯನ್ನು ಬೆಳೆಯಬೇಕೆಂದು ಒತ್ತಾಯವಾಗಿ ನಿರ್ಧಾರ ಮಾಡಿದರೆ ವಾಸ್ತವಿಕವಾಗಿ ಅವನಿಗೆ ಅದಕ್ಕೆ ಬರಬೇಕಾದ ಹಣವನ್ನು ಮಾರುಕಟ್ಟೆಯಲ್ಲಿ ಕೊಡುವುದು ನಿಮ್ಮ ಕರ್ತವ್ಯ. ಈಗ ಮೇಜ್ ಬೆಳೆಯುತ್ತವೆ. ಅದನ್ನು ತಿನ್ನಲಿಕ್ಕೆ ಯಾರೂ ಇಚ್ಛೆಪಡುವುದಿಲ್ಲ. ಆದ್ದರಿಂದ ನಮ್ಮ ಫುಡ್ ಹ್ಯಾಬಿಟ್ಸ್‌ನ್ನೂ ಕೂಡ ಬದಲಾಯಿಸಬೇಕು. ಮತ್ತು ಸಪ್ಲಿಮೆಂಟರಿ ಇನ್‌ಕಂ ಇರುವಂತೆ ಸಹ ಒಂದು ಪ್ರೋತ್ಸಾಹ ಕೊಡುವಂತಹ ಕಾರ್ಯಕ್ರಮವನ್ನು ಅವನಿಗೆ ರೂಪಿಸಿಕೊಡಬೇಕು.

ಏಕೆಂದರೆ ಮೊದಲೇ ಹೇಳಿದಹಾಗೆ ಒಕ್ಕಲಿಗರ ಹಣೆಯ ಬರಹವೆಲ್ಲಾ ಪ್ರಕೃತಿಯ ಮೇಲೆ ಅವಲಂಬಿಸಲ್ಪಟ್ಟಿದೆ. ಸಕಾಲದಲ್ಲಿ ಮಳೆ ಬಂದು ರೋಗರುಜಿನಗಳಿಲ್ಲದಿದ್ದರೆ ಬೆಳೆ ಚೆನ್ನಾಗಿ ಆಗಬಹುದು, ಇಲ್ಲದಿದ್ದರೆ ಇಲ್ಲ. ಆದುದರಿಂದ ಅವರಿಗೆ ಸಪ್ಲಿಮೆಂಟರಿ ಇನ್‌ಕಂ ಬೆಳೆಸಬೇಕು. ಎರಡನೆಯದಾಗಿ ಒಕ್ಕ ಲಿಗನಿಗೆ ರೊಕ್ಕ ಒಂದು ಕೊಟ್ಟರೆ ಸಾಲದು, ಬೇಕಾದ ಉಪಕರಣಗಳು, ಒಳ್ಳೆಯ ಬೀಜ, ಗೊಬ್ಬರ ಒದಗಿಸಿ ಅವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿಸಬೇಕು. ಕೇವಲ ಪೇಟೆಗಳಲ್ಲಿ, ತಾಲ್ಲೂಕು ಗಳಲ್ಲಿ ಕುಳಿತು ಉಪದೇಶಮಾಡಿದರೆ ಸಾಲದು, ವ್ಯವಸಾಯ ಇಲಾಖೆಯ ಅಧಿಕಾರಿಗಳು ರೈತರ ಬಳಿಗೆ ಹೋಗಿ ವಿಚಾರ ತಿಳಿಸಬೇಕು. ಹಾಗೆ ಮಾಡಿ ಸಹಕರಿಸದಿದ್ದರೆ ಬೆಳವಣಿಗೆಯಾಗುವುದಿಲ್ಲ. ಒಕ್ಕಲಿಗ ಹಳೆಯ ಕಾಲದ ಪದ್ಧತಿಯನ್ನನುಸರಿಸಿದರೆ ಸಾಲದು, ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡದಿದ್ದರೆ ಹೆಚ್ಚು ಬೆಳೆಯಾಗುವುದಿಲ್ಲ, ಸ್ಥಿತಿ ನೆಟ್ಟಗಾಗುವುದಿಲ್ಲ, ಭೂಮಿಯಲ್ಲಿ ಇಂದು ಬೆಳೆಯುವುದು ಸಾಲದು, ವ್ಯವಸಾಯಾಭಿವೃದ್ಧಿಯಾಗುವುದಿಲ್ಲ. ದೃಷ್ಟಿಕೋಣ ಬದಲಾಯಿಸದಿದ್ದರೆ ಮುಂದುವರೆಯುವುದಿಲ್ಲ. ತುಂಗಭದ್ರ ಅಯಕಟ್ಟನ್ನು ತೆಗೆದುಕೊಂಡರೆ ಅಲ್ಲಿ ಸೀಪೇಜ್ ಬಹಳವಿದೆ, ಆದರಿಂದ ೧೦-೧೫ ವರ್ಷಗಳಿಂದ ಕೆಲವು ಭಾಗ ಭೂಮಿ ನಿರುಪಯುಕ್ತವಾಗಿದೆ. ಅದರೂ ತೆರಿಗೆಕೊಡಬೇಕು. ಇದಕ್ಕೆ ರೈತರು ಕಾರಣರಲ್ಲ, ಸರಕಾರ ಕಾರಣ. ಪ್ರಾಕೃತಿಕವಾದ ಕೆಲವು ಕಾರಣಗಳಿವೆ. ಹೀಗಿರುವಾಗ ರೈತರ ಕಡೆಯಿಂದ ತೆರಿಗೆ ವಸೂಲಿ ಮಾಡುವುದು ಸರಿಯಲ್ಲ. ಸೀಪೇಜ್ ಭೂಮಿಯನ್ನು ನೆಟ್ಟಗೆ ಮಾಡದಿದ್ದರೆ ಪರಿಸ್ಥಿತಿ ಸುಧಾರಿಸುವುದಿಲ್ಲ. ದೊಡ್ಡ ಮಾಲಿಕರಾದರೆ ೧೦-೧೫ ಎಕರೆ ಸೀಪೇಜ್ ಅವರಿಗಿದ್ದರೂ ಪರವಾಗಿಲ್ಲ, ಅದೇ ಬಡವರಿಗೆ ಅಷ್ಟು ಭೂಮಿ ಸೀಪೇಜ್‌ಗೆ ಒಳಗಾದರೆ ಕಷ್ಟವಾಗುವುದು. ಜಾಗ್ರತೆ ಈ ಬಗ್ಗೆ ನಿಗಾ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡುವರೆಂದು ಆಶಿಸುತ್ತೇನೆ.

(ಶ್ರೀ ಜಿ. ಅವಂರೇಗೌಡ)

ನಮ್ಮಲ್ಲಿ ಕೆಲವು ಕಡೆ ಪೆನಾಲ್ಟಿ ಹಾಕುತ್ತಿದ್ದಾರೆ. ಸಿಂಧನೂರು ತಾಲ್ಲೂಕಿನಲ್ಲಿ ಇರುವ ೨ ಲಕ್ಷ ಚಿಲ್ಲರೆ ಎಕರೆ ಪೈಕಿ ಸುಮಾರು ೪೫ ಸಾವಿರ ಎಕರೆಗಳಲ್ಲಿ ಮಾತ್ರ ಸರಿಯಾಗಿ ಬೆಳೆಯಾಗುವುದು ಉಳಿದ ಭೂಮಿಯನ್ನು ಉಪಯೋಗಮಾಡುವುದಕ್ಕಾಗಿಲ್ಲ.

ರೈತರು ಏನುಮಾಡುವುದಕ್ಕೂ ಅಧಿಕಾರವಿಲ್ಲ ಅಧಿಕಾರಗಳೊಂದಿಗೆ ಮಾತನಾಡಿದ್ದೇನೆ ಇದುವರೆಗೆ ೩೦ ಸಾವಿರ ಎಕರೆ ಅಭಿವೃದ್ಧಿ ಮಾಡಿದ್ದೇನೆ, ಉಳಿದ ಭೂಮಿಯನ್ನು ಅಭಿವೃದ್ಧಿ-ಮಾಡಲು ಸಾಧ್ಯವಾಗಿಲ್ಲ, ಲೋಕಲೈಜ್ಡ್ ಪ್ಯಾಟ್ರನ್ ಬದಲಾಯಿಸಬೇಕು. ಕೆಲವು ಭೂಮಿ ನೀರನ್ನು ತಿನ್ನುವುದಿಲ್ಲ. ಅಂಥ ಕಡೆ ಬದಲಾವಣೆ ಮಾಡದೆ ಬೆಳೆಯಬೇಕೆಂದು ಒತ್ತಾಯಮಾಡಬಾರದು. ಚನ್ನಬಸಪ್ಪನವರು ಹೇಳಿದಂತೆ ಯೋಜನೆಯನ್ನು ಮೈಸೂರಿನಲ್ಲಿ ಅಥವ ದೆಹಲಿಯಲ್ಲಿ ಮಾಡಿದರೆ ಪರಿಹಾರವಾಗುವುದಿಲ್ಲ. ರೈತರೊಡನೆ ಸಹಕರಿಸಿ ಅವರ ಕಷ್ಟ ಸುಖಗಳನ್ನರಿತು ತಕ್ಕ ವ್ಯವಸ್ಥೆ ಮಾಡಿದರೆ ಮಾತ್ರ ವಕ್ಕಲತನ ಮುಂದುವರೆಯುವುದು. ಹಾಗೆ ಮಾಡುವವರೆಗೂ ಮಾಡುವ ಯೋಜನೆ ಸಫಲ-ವಾಗುವುದಿಲ್ಲ. ಅದಕ್ಕಾಗಿ ಆದಷ್ಟು ಪ್ರಯತ್ನಮಾಡಿ ಲೋಕಲೈಜ್ಡ್ ಪ್ಯಾಟ್ರನ್ ಬದಲಾಯಿಸಲೇಬೇಕು. ಸಂಪೂರ್ಣವಾಗಿ ಇದನ್ನು ಪರಿಶೀಲಿಸಬೇಕು, ಏನೇ ಇರಲಿ, ಪೆನಾಲ್ಟಿ ಬಂದು ಮಾಡಬೇಕು.

ಸ್ಟ್ಯಾಟ್ಯೂಟರಿ ಡೆವಲಪ್‌ಮೆಂಟ್ ಬೋರ್ಡು ಅವಶ್ಯಕ, ಅದನ್ನು ಮಾಡುವುದು ಒಳ್ಳೆಯದು ಇದನ್ನು ಪರಿಶೀಲಿಸಬೇಕು. ಭೂ ಸುಧಾರಣಾ ಕಾನೂನನ್ನು ಒಳ್ಳೆಯ ರೀತಿಯಿಂದ ಜಾರಿಗೆ ತರಬೇಕು. ಎಕ್ಸ್‌ಪೆರಿಮೆಂಟ್ ಮತ್ತು ರೀಸರ್ಚ್ ಇನ್ನೂ ಆಗಬೇಕು. ನಮ್ಮದು ದೊಡ್ಡ ದೇಶ, ಹೆಚ್ಚು ಭೂಮಿಯಿದೆ, ಅದನ್ನು ಸಾಗುವಳಿಗೆ ತರಲು ಅವಕಾಶವಾಗುವಂತೆ ಮಾಡುವುದು ಅವಶ್ಯಕ ಎಲ್ಲಿಯವರೆಗೆ ಹೆಚ್ಚು ಪ್ರಮಾಣದಲ್ಲಿ ಟ್ರಾಕ್ಟರು ಮತ್ತು ಬುಲ್‌ಡೋಜರುಗಳನ್ನು ಕೊಡುವುದಿಲ್ಲ ಅಲ್ಲಿಯವರೆಗೆ ಸಂಪೂರ್ಣವಾಗಿ ಇರುವ ಭೂಮಿಯೆಲ್ಲಾ ಸಾಗುವಳಿಯಾಗಿ ಒಳ್ಳೆಯ ಬೆಳೆಯಾಗುವುದಿಲ್ಲ. ಇಷ್ಟು ಹೇಳಿ ನಾನು ಕೊಟ್ಟಿರುವ ಸಲಹೆಗಳನ್ನು ಸರಕಾರ ಪರಿಶೀಲಿಸಬೇಕು. ಹೆಚ್ಚು ಹಣ ಕೊಟ್ಟು ವ್ಯವಸಾಯವನ್ನು ಮುಂದುವರಿಸಬೇಕು ಎಂದು ಸೂಚಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದ ವರದಿಗಳನ್ನರ್ಪಿಸುತ್ತೇನೆ.

ಶ್ರೀ ಜಿ. ಆರ್. ಹಾಲಸ್ವಾಮಿ (ಜಗಳೂರು):—ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನಮ್ಮ ವ್ಯವಸಾಯ ಮಂತ್ರಿಗಳಾದ ಶಾಚಯ್ಯನವರು ಮಂಡಿಸಿರುವ ೧೧ ಕೋಟಿ ಚಿಲ್ಲರೆ ವ್ಯವಸಾಯದ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವರು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳ-ಬಯಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ ೭೦ ರಿಂದ ೭೫ರ ವರೆಗಿರುವ ರೈತರ ಪ್ರಗತಿ ಬಗ್ಗೆ ವ್ಯವಸಾಯ ಮಂತ್ರಿಗಳು ೧೧ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿರುವುದು ಏನೇನು ಸಾಲದು, ಹೆಚ್ಚು ಹಣವನ್ನು ರೈತರ ಹಿತಕ್ಕಾಗಿ ಮೀಸಲಾಗಿಡಬೇಕೆಂದು ಸೂಚಿಸಲುದ್ದೇಶಿಸುತ್ತೇನೆ.

ನಮ್ಮ ವ್ಯವಸಾಯದ ಇಲಾಖೆಯ ರೀ ಆರ್ಗನೈಜೇಷನ್ ಆದಮೇಲೆ ಉತ್ತಮವಾದ ಪ್ರಗತಿಯನ್ನು ನಿಜವಾಗಿಯೂ ಸಾಧನೆಮಾಡಿದೆ ಎಂದು ಹೇಳುವುದಕ್ಕೆ ಸಂತೋಷವಾಗುತ ದೆ. ರೈತರು ಕೂಡ ಸರಕಾರ ಕಂಡು ಹಿಡಿದಿರುವ ಹೊಸ ವಿಧಾನಗಳೇನಿವೆ ಅವುಗಳನ್ನು ವಿಶಾಲ ಭಾವನೆಯಿಂದ ಗ್ರಹಿಸಿ ಅವಕ್ಕೆ ಸಾಕಷ್ಟು ಪ್ರೋತ್ಸಹ ಕೊಡುತ್ತಿರುವುದು ಶ್ಲಾಘನೀಯವಾಗಿದೆ. ಸರಕಾರದೊಡನೆ ರೈತರು ಹೆಚ್ಚಾಗಿ ಸಹಕರಿಸುತ್ತಿರುವುದರಿಂದ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರಕಾರ ಇದುವರೆಗೆ ಲ್ಯಾಂಡ್ ರಿಕ್ಲಮೆಷನ್, ಸಾಯಿಲ್ ಕನ್‌ಸರ್ವೇಷನ್, ಹೆಚ್ಚು ಉತ್ಪತ್ತಿ ಕೊಡುವ ಬೀಜಗಳನ್ನೊದಗಿಸುವುದು, ಉತ್ತಮವಾದ ಗೊಬ್ಬರ, ಪ್ಲಾಂಟ್ ಪ್ರೊಟೆಕ್‌ಷನ್ ಮುಂತಾದುವುಗಳಿಗೆಲ್ಲಾ ಹೆಚ್ಚು ಗಮನ ಕೊಡುತ್ತಿರುವುದರಿಂದ ಎಲ್ಲಾ ಹಂತದಲ್ಲೂ ಪ್ರಗತಿ ಸಾಧಿಸಿದೆಯೆಂದು ಹೇಳಿದರೆ ತಪ್ಪಾಗಲಾರದು. ೭೦-೭೧ರಲ್ಲಿ ಸುಮಾರು ೩ ೯೦ ಲಕ್ಷ ಎಕರೆಗಳಲ್ಲಿ ಹೆಚ್ಚು ಉತ್ಪತ್ತಿ ಕೊಡುವ ಬತ್ತ ಬೆಳೆಸುವ ಯೋಜನೆ ಇದೆ, ೫.೪೫ ಲಕ್ಷ ಎಕರೆಗಳಲ್ಲಿ ಹೈಬ್ರಿಡ್ ಜೋಳ ಬೆಳೆಯುವ ಯೋಜನೆ ಇದೆ, ೨.೫೫ ಲಕ್ಷ ಎಕರೆಯಲ್ಲಿ ಹೈಬ್ರಿಡ್ ಮೈಜ್, ೧.೨೭ ಲಕ್ಷ ಎಕರೆಯಲ್ಲಿ ಹೈಬ್ರಿಡ್ ಸಜ್ಜೆ ಬೆಳೆಯುವ ಯೋಜನೆ ಇದೆ. ೧.೭೪ ಲಕ್ಷ ಎಕರೆಯಲ್ಲಿ ಮೆಕ್ಸಿಕನ್ ಗೋಧಿ ಬೆಳೆಯುವ ಯೋಜನೆಯನ್ನು ಹಾಕಿ-ಕೊಂಡಿದ್ದಾರೆ. ಇವೆಲ್ಲವೂ ಕೂಡ ಪ್ರಕೃತಿಯ ದಯೆಯಿಂದ, ದೇವರ ಕೃಪೆಯಿಂದ ಸಾಕಷ್ಟು ಮಳೆ ಬಂದು ಯಶಸ್ವಿಯಾದರೆ ನಿಜವಾಗಿಯೂ ೪ ಲಕ್ಷ ಟನ್ ಹೆಚ್ಚು ಬರತಕ್ಕ ಆಶಾಭಾವನೆಯನ್ನು ಸರ್ಕಾರ ಹೊಂದಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸಾಯಿಲ್ ಕನ್‌ಸರ್ವೇಷನ್‌ನಲ್ಲಿ ಕೂಡ ಬಹಳ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ. ೧೯೬೬-೬೭ರಿಂದ ೧೯೬೯-೭೦ರ ವರೆಗೆ ೧೧ ಲಕ್ಷ ಎಕರೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಸಾಧಿಸಿರುವುದು ನಿಜವಾಗಿ ಪ್ರಶಂಸನೀಯವಾದ ವಿಷಯ. ಚಿತ್ರದುರ್ಗ ಜಿಲ್ಲೆಯಲ್ಲಿ ಬಹಳ ಚೆನ್ನಾಗಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ನಡೆಯುತ್ತ ಇದೆ. ೧೯೭೦-೭೧ನೇ ಸಾಲಿನಲ್ಲಿ ಸುಮಾರು ೭೫,೦೦೦ ಎಕರೆಯನ್ನು ನೀರಾವರಿಗೆ ಅಳವಡಿಸತಕ್ಕ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಈ ರೀತಿ ಸರ್ಕಾರ ಸಾಕಷ್ಟು ಪ್ರಗತಿಯನ್ನು ಸಾಧಿಸುತ್ತಿದೆ ಆದರೂ ಕೂಡ ನಮ್ಮ ದೇಶದಲ್ಲಿ ಒಣ ಬೇಸಾಯ ಮಾಡತಕ್ಕ ರೈತರು ೯೦ ಪರ್ಸೆಂಟ್ ಇದ್ದಾರೆ. ಅವರ ಕಡೆಗೆ ಸಾಕಷ್ಟು ಗಮನ ಸರ್ಕಾರ ಹರಿಸಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವರ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಮಾನ್ಯ ವ್ಯವಸಾಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳ ತಾಲ್ಲೂಕಿನಲ್ಲಿ ಕೂಡ ಖುಷ್ಕಿ ಬೆಳೆ ತೆಗೆಯುತಕ್ಕ ರೈತರು ಹೆಚ್ಚಾಗಿರುವುದರಿಂದ, ಅವರ ಕಷ್ಟವೇನು ಎನ್ನುವುದು ಅವರಿಗೂ ಗೊತ್ತಿದೆ, ಆದುದರಿಂದ ಒಣ ಬೆಳೆ ಬೆಳೆಯುವ ರೈತರ ಕಡೆಗೆ ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಈಗ ಇರುವ ರೀಸರ್ಚ್ ಸ್ಟೇಷನ್‌ಗಳಲ್ಲಿ ನೀರಾವರಿಯಿಂದ ಬೆಳೆಯತಕ್ಕ ಬೆಳೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದಾರೆಯೇ ವಿನಾ ಡ್ರೈ ಫಾರ್ಮಿಂಗ್ ಬೆಳೆಗಳ ಬಗ್ಗೆ ಸಾಕಷ್ಟು ಗಮನ ಹರಿಸಿಲ್ಲ. ಧಾರವಾಡ, ರಾಯಚೂರು, ಮಂಡ್ಯ ಹೀಗೆ ಅನೇಕ ಕಡೆ ರೀಸರ್ಚ್ ಸ್ಟೇಷನ್‌ಗಳಿವೆ. ಅಲ್ಲೆಲ್ಲ ನೀರಾವರಿ ಬೆಳೆಗಳ ತಳಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಅಲ್ಪಸ್ವಲ್ಪ ಮಳೆ ಬಂದರೆ ಏನು ಬೆಳೆಯಬೇಕು ಎನ್ನುವುದರ ಬಗ್ಗೆ ಉತ್ತಮವಾದ ತಳಿಗಳನ್ನು ಕಂಡುಹಿಡಿಯುವುದಕ್ಕೆ ಸಂಶೋಧನೆಯಲ್ಲಿ ಗಮನ ಕೊಡಬೇಕು. ವಿಶ್ವವಿದ್ಯಾಲಯದವರಿಗೆ ಡ್ರೈ ಫಾರ್ಮಿಂಗ್ ಬಗ್ಗೆ ಸಂಶೋಧನೆ ಮಾಡಲು ಎರಡು ಲಕ್ಷ ರೂಪಾಯಿಗಳನ್ನು ಟೋಕನ್ ಗ್ರಾಂಟ್ ಆಗಿ ಕೊಟ್ಟಿರುವುದು ಏತಕ್ಕೂ ಸಾಲದು. ಅವರಿಗೆ ಇದಕ್ಕಾಗಿ ಹೆಚ್ಚು ಹಣವನ್ನು ಕೊಟ್ಟು ಉತ್ತಮವಾದ ತಳಿಯನ್ನು, ಕಡಮೆ ಮಳೆ ಬಂದರೆ ಏನು ಬೆಳೆಗಳನ್ನು ತೆಗೆಯಬೇಕು ಎನ್ನುವುದನ್ನು ಕಂಡು ಹಿಡಿಯುವುದಕ್ಕೆ ಸರ್ಕಾರ ಗಮನ ಕೊಡಬೇಕು. ರೈತರು ಪ್ರತಿ ದಿವಸ ಮುಗಿಲು ನೋಡುತ್ತ, ಮಳೆ ಬಾರದೆ ನಿಟ್ಟುಸಿರು ಬಿಟ್ಟು, ಕಣ್ಣೀರಿನಲ್ಲಿ ಕೈ ತೊಳೆಯುತ್ತಾರೆ. ಅಂಥವರ ಕಡೆಗೆ ಸರ್ಕಾರ ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಡೀಪ್ ರೂಟಿಂಗ್ ಇನ್‌ಸ್ಟ್ರುಮೆಂಟ್ಸ್ ಕೂಡ ಸಾಕಷ್ಟು ಒದಗಿಸಿಲ್ಲ. ಧಾರವಾಡ ರೀಸರ್ಚ್ ಸ್ಟೇಷನ್‌ನಲ್ಲಿ ಒಂದು ಇನ್‌ಸ್ಟ್ರುಮೆಂಟನ್ನು ಮಾಡಿದ್ದಾರೆ. ಅದು ಕಪ್ಪು ಭೂಮಿಯಲ್ಲಿ ಯಶಸ್ವಿಯಾಗಿದೆಯೇ ಹೊರತು, ಕೆಂಪು ಮತ್ತು ಮರಳು ಮಿಶ್ರಿತ ಭೂಮಿಯಲ್ಲಿ ಮತ್ತು ಗಟ್ಟಿ ಭೂಮಿಯಲ್ಲಿ ಸಾಕಷ್ಟು ಕೆಲಸ ಮಾಡುವುದಿಲ್ಲ, ಮುರಿದು ಹೋಗುತ್ತವೆ ಎಂದು ಕೇಳಿದ್ದೇನೆ. ಒಳ್ಳೆಯ ಡೀಪ್ ರೂಟೆಡ್ ಉಪಕರಣಗಳ ಬಗ್ಗೆ ಸರ್ಕಾರ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬಿತ್ತಿದ ಕೂಡಲೇ ಆದಷ್ಟು ಶೀಘ್ರವಾಗಿ ಬೆಳೆ ಬರತಕ್ಕ ತಳಿಯನ್ನು ಕೂಡ ಕಂಡು ಹಿಡಿಯಬೇಕಾಗಿದೆ. ವಿಜ್ಞಾನ ಯುಗದಲ್ಲಿ ಯಾವುದೂ ಕಷ್ಟವಿಲ್ಲ. ಬೀಜವನ್ನು ೧೨ ಗಂಟೆಗಳ ಕಾಲದಲ್ಲಿ ನೀರಿನಲ್ಲಿ ನೆನೆಸಿ, ಅದನ್ನು ನೆರಳಿನಲ್ಲಿ ಒಣಗಿಸಿ ಬಿತ್ತಿದರೆ ಬಹಳ ಶೀಘ್ರವಾಗಿ ಬೆಳೆ ಬರುತ್ತದೆ ಎಂದು ಕೇಳಿದ್ದೇನೆ. ಪರಿಣತರು ರೀಸರ್ಚ್ ಮಾಡಿ, ಈ ತರಹ ಮಾಡುವುದರಿಂದ ಶೀಘ್ರ ಬೆಳೆ ಬರುವುದು ಸಾಧ್ಯವಿದ್ದರೆ ಅದರ ಬಗ್ಗೆ ರೈತರಿಗೆ ತಿಳುವಳಿಕೆ ಕೊಡಬೇಕೆಂದೂ ಅದರ ಬಗ್ಗೆ ಪ್ರಚಾರ ಮಾಡಬೇಕೆಂದೂ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಕಡಲೆಯನ್ನು ನೆನಸಿ ಬಿತ್ತುತ್ತೇವೆ.

ಶ್ರೀ ಜಿ.ಆರ್. ಹಾಲಸ್ವಾಮಿ.—ಅದೇ ರೀತಿ ಬೇರೆ ಧಾನ್ಯಗಳನ್ನೂ ಬಿತ್ತುವುದಕ್ಕೆ ಸಾಧ್ಯವೇ ಎನ್ನುವುದನ್ನು ಕಂಡು ಹಿಡಿಯಬೇಕು ಎಂದು ಕೇಳಿಕೊಳ್ಳುತ್ತೇನೆ.

ರೈತರು ಬೆಳೆದ ಪದಾರ್ಥಗಳಿಗೆ ಉತ್ತಮವಾದ ಬೆಲೆ ಸಿಕ್ಕುತ್ತಿಲ್ಲ ಎಂದು ಅನೇಕ ಸದಸ್ಯರು ಅಸೆಂಬ್ಲಿಯಲ್ಲಿ ಮತ್ತು ಹೊರಗಡೆ ಹೇಳುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ನೀತಿ ಎಂದು ನಮ್ಮ ಸರ್ಕಾರದವರು ಹೇಳುತ್ತಾರೆ, ಅದನ್ನು ಒಪ್ಪಿಕೊಂಡರೂ ಸಹಿತ, ಸರ್ಕಾರ ಇದರ ಕಡೆಗೆ ಹೆಚ್ಚು ಗಮನವನ್ನು ಹರಿಸಿ, ರೈತರಿಗೆ ಉತ್ತಮವಾದ ಬೆಲೆ ಸಿಕ್ಕುವ ಹಾಗೆ ಮಾಡದೆ ಹೋದರೆ ಅವರ ಪರಿಸ್ಥಿತಿ ಬಹಳ ಕಠಿಣವಾಗುತ್ತದೆ. ಆದ್ದರಿಂದ ಉತ್ತಮವಾದ ಬೆಲೆ ದೊರೆಯುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರದವರು ರಿಗ್ಸ್ ಮತ್ತು ಶೀಘ್ರವಾಗಿ ಬಾವಿ ತೋಡತಕ್ಕ ಆಧುನಿಕ ಸಲಕರಣೆಗಳನ್ನು ತರಿಸಬೇಕು. ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನಲ್ಲಿ ಒಂದು ಇದೆ. ಅದಕ್ಕೆ ಒಂದು ಅಡಿಗೆ ೩೫ ರೂಪಾಯಿ ಚಾರ್ಜ್ ಮಾಡುತ್ತಾರೆ. ಇದರಿಂದ ರೈತರಿಗೆ ಬಹಳ ಹೊರೆಯಾಗುತ್ತದೆ. ಸಬ್ಸಿಡೈಸ್ಡ್ ದರದಲ್ಲಿ ಒದಗಿಸಲು ಹೆಚ್ಚು ರಿಗ್ಸ್ ತರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ. ಬಿ. ರಾಚಯ್ಯ.—ನಮ್ಮಲ್ಲಿ ಮೂರು ರಿಗ್ಸ್ ಬಂದಿವೆ. ಅವುಗಳನ್ನು ಮೂರು ಡಿವಿಜನ್‌ಗಳಿಗೆ ಕೊಡಲಾಗಿದೆ. ಒಂದು ಅಡಿಗೆ ಹದಿನೇಳುವರೆ ರೂಪಾಯಿ ಚಾರ್ಜ್ ಮಾಡುತ್ತೇವೆ.

ಶ್ರೀ ಜಿ ಆರ್. ಹಾಲಸ್ವಾಮಿ.—ವ್ಯವಸಾಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಗಮನ ಕೊಡುಬೇಕೆಂದು ಹೇಳುತ್ತೇನೆ.

ಪಶುಪಾಲನೆ ಮತ್ತು ಮೀನುಗಾರಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ ಇತ್ತೀಚೆಗೆ ಈ ಎರಡೂ ಇಲಾಖೆಗಳಲ್ಲಿ ಸ್ವಲ್ಪ ಪೈಪೋಟಿಯಿಂದ ಕೆಲಸ ನಡೆಯುತ್ತಿದೆ ಎಂದು ಹೇಳಬಹುದು. ಒಂದು ಕಡೆ ಮೀನುಗಾರಿಕೆಯ ಮಂತ್ರಿಗಳು ಮೀನು ಬಹಳ ಒಳ್ಳೆಯ ಆಹಾರ, ಎಲ್ಲರೂ ಅದನ್ನು ಊಟ ಮಾಡಬೇಕು, ಮೀನು ತಿಂದರೆ ಬುದ್ಧಿಯ ಬೆಳವಣಿಗೆಯಾಗುತ್ತದೆ ಎಂದು ಮಾನ್ಯ ಸಚಿವರಾದ ಎಚ್.ಸಿ. ಲಿಂಗಾರೆಡ್ಡಿಯವರು ಪ್ರಚಾರ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಪಶುಪಾಲನೆ ಶಾಖೆಯ ಮಂತ್ರಿಗಳಾದ ಶ್ರೀಮಾನ್ ಶಂಕರರಾಯರು ತತ್ತಿ ಕೂಡ ವೆಜಿಟೇರಿಯನ್ ಆಹಾರ, ಅದು ಪೌಷ್ಟಿಕವಾದ ಆಹಾರ, ಅದನ್ನು ಉಪಯೋಗ ಮಾಡಿ ಎಂದು ಹೇಳುತ್ತಿದ್ದಾರೆ. ಪ್ರತಿಯೊಬ್ಬ ರೈತರೂ ಕೂಡ ಈ ಉದ್ಯಮವನ್ನು ಪ್ರಾರಂಭಮಾಡಬೇಕೆಂದು ಹೇಳಿದ್ದಾರೆ. ಎರಡೂ ಇಲಾಖೆಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಕೋಳಿ ಸಾಕಣೆಯ ಜೊತೆಗೆ ಹೈನು ಅಭಿವೃದ್ಧಿಯೂ ಆಗಬೇಕು. ಅದಕ್ಕಾಗಿ ಉತ್ತಮವಾದ ಹಾಲನ್ನು ಕೊಡುವ ತಳಿಗಳ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಗಮನ ಕೊಡುತ್ತಿದೆ. ಪೌಲ್ಟ್ರಿಯಲ್ಲಿ ಸರ್ಕಾರ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ನಮ್ಮ ತಾಲ್ಲೂಕಿನಲ್ಲಿ ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಂ ಪ್ರಕಾರ ಪ್ರತಿಯೊಂದು ಹಳ್ಳಿಯಲ್ಲಿ ಕೂಡ ಪೌಲ್ಟ್ರಿ ಯೂನಿಟ್ ಪ್ರಾರಂಭವಾಗಿದ್ದು ಅದು ಚೆನ್ನಾಗಿದೆ ಎಂದು ಸಂತೋಷದಿಂದ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀಮಾನ್ ಲಿಂಗಾರೆಡ್ಡಿಯವರು ಮೀನುಗಾರಿಕೆಯ ಬಗ್ಗೆ ಬಹು ಆಸಕ್ತಿ ವಹಿಸುತ್ತಿದ್ದಾರೆ. ಇಂದಿನ ಆಹಾರದ ಕೊರತೆ ನಿವಾರಿಸಲು ಮೀನುಗಾರಿಕೆಯು ಪ್ರಾಮುಖ್ಯತೆ ಪಡೆದಿದೆ. ಒಳನಾಡಿನಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಸಾಕಷ್ಟು ಅವಕಾಶ ಇರುವುದರಿಂದ ಇದರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕು ಎಂದು ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ಸಾಕಷ್ಟು ಪ್ರಚಾರ ಮಾಡಬೇಕಾದುದು ಕೂಡ ಅವಶ್ಯಕ. ಚಿತ್ರದುರ್ಗ ಜಿಲ್ಲೆಯಲ್ಲಿಯ ವಾಣಿ ವಿಲಾಸ ಸಾಗರದಲ್ಲಿ ಇದನ್ನು ಅಭಿವೃದ್ಧಿಪಡಿಸಲು ಅವಕಾಶ ಇದೆ. ಆದುದರಿಂದ ಇದಕ್ಕೆ ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದ ಕಾರಣ ಪ್ರಗತಿ ಕುಂಠಿತವಾಗಿದೆ. ಆದುದರಿಂದ ಈ ಇಲಾಖೆಯನ್ನು ಒಂದು ಮೇಜರ್ ಡಿಪಾರ್ಟಮೆಂಟನ್ನಾಗಿ ಮಾಡಿ ಹೆಚ್ಚಿನ ಸಿಬ್ಬಂದಿ ಕೊಡಬೇಕು ಎಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

೫–೦೦ P. M.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮಂಡಿಸಿದ ವ್ಯವಸಾಯ, ಪಶುಸಂಗೋಪನ, ಅರಣ್ಯ ಮತ್ತು ಇನ್ನಿತರ ಬೇಡಿಕೆಗಳನ್ನು ವಿರೋಧಿಸುತ್ತಾ ನನ್ನ ಕೆಲವು ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತೇನೆ. ಒಕ್ಕಲತನದ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಈ ಬೇಡಿಕೆಗೆ ಕೊಟ್ಟಿರತಕ್ಕಂಥ ಹನ್ನೊಂದು ಕೋಟಿ ಚಿಲ್ಲರೆ ಹಣ ಬಹಳ ಕಡಿಮೆಯಾದುದು ಎಂದು ಕೆಲವರು ಹೇಳಿದ್ದಾರೆ. ಇದಕ್ಕೆ ಸರಿಯಾದ ಹಣ ಒದಗಿಸಬೇಕು ಎಂದು ಅಭಿಪ್ರಾಯ ವ್ಯಕ್ತ ಪಡಿಸಿರುವುದಕ್ಕೆ ಯಾರಾದರೂ ಎರಡು ಅಭಿಪ್ರಾಯವಿಲ್ಲ. ನಮ್ಮ ದೇಶದಲ್ಲಿ ೧೦೦ಕ್ಕೆ ೭೦ರಷ್ಟು ಜನ ವ್ಯವಸಾಯದಲ್ಲಿ ನಿರತರಾಗಿ ಹೊಟ್ಟೆ ತುಂಬಿಕೊಳ್ಳುತ್ತಾರೆ ಎನ್ನುವುದಕ್ಕೆ ಯಾವ ಭಿನ್ನಾಭಿಪ್ರಾಯವಿಲ್ಲ. ಅದಕ್ಕಾಗಿ ಈಗ ಕೊಟ್ಟಿರತಕ್ಕಂಥ ಹಣವನ್ನು ಸರಿಯಾಗಿ ಉಪಯೋಗಿಸಿದರೆ ಎಷ್ಟೋ ಸೌಲಭ್ಯಗಳನ್ನು ರೈತರಿಗೆ ಕೊಟ್ಟಂತೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ

ಸರಕಾರವು ಈ ಬಾಬಿಗೆ ಅನೇಕ ಸಲ ಸಾಲದ ರೂಪದಲ್ಲಿ ಹಣ ಕೊಟ್ಟಿದ್ದಾರೆ. ಉದಾಹರಣೆಗಾಗಿ ೧೯೬೫ರಲ್ಲಿ ಸಾಧಾರಣವಾಗಿ ಒಂದು ಕೋಟಿ ರೂಪಾಯಿ ಸಾಲ ಕೊಟ್ಟಿದೆ. ಆದರೆ ಒಂದು ಡಿಪಾರ್ಟ ಮೆಂಟಿಗೆ ಇನ್ನೊಂದು ಡಿಪಾರ್ಟಮೆಂಟಿನ ಸಂಗಡ ಹೊಂದಾಣಿಕೆ ಇಲ್ಲದ ಮೂಲಕ ೩. ೭ ಲಕ್ಷ ರೂಪಾಯಿ ಬಡ್ಡಿ ರೂಪದಲ್ಲಿ ಹಣ ವಾಪಸ್ಸು ಕೊಡುತ್ತಾರೆ. ಪ್ರಥಮತಃ ಸರಕಾರದಲ್ಲಿ ದುಡ್ಡು ಇಲ್ಲ, ದುಡ್ಡಿನ ಸೌಕರ್ಯ ದೊರೆತರೂ ಸರಿಯಾಗಿ ಉಪಯೋಗ ಮಾಡಿಕೊಳ್ಳುವಂಥ ಶಕ್ತಿ ಸರಕಾರಕ್ಕಿಲ್ಲ, ಇನ್ನು ಎರಡನೇ ಉದಾಹರಣೆ ಕೊಡುವುದಾದರೆ ಜುಲೈ ೧೯೬೮ರಲ್ಲಿ ಕೇಂದ್ರ ಸರಕಾರದಿಂದ ೫೦ ಲಕ್ಷ ರೂ. ಸಾಲ ತೆಗೆದುಕೊಂಡರು. ಇದರಲ್ಲಿ ಉಪಯೋಗಿಸಿಕೊಂಡಿರುವುದು ೯.೧೧ ಲಕ್ಷ ಮಾತ್ರ. ಬಾಕಿ ಉಳಿದ ಸುಮಾರು ೪೧ ಲಕ್ಷ ರೂಪಾಯಿ ಮೇಲೆ ೮೨ ಸಾವಿರ ರೂಪಾಯಿ ಬಡ್ಡಿ ಕೊಟ್ಟಿದಾರೆ. ಹಣ ಇಲ್ಲ ಎಂದು ಹೇಳತಕ್ಕ ಸರಕಾರ, ಹಣ ಕೊಟ್ಟರೂ ಉಪಯೋಗ ಮಾಡಿಕೊಳ್ಳತಕ್ಕಂಥ ಶಕ್ತಿ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ ೧೧ ಕೋಟಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊಡುವುದು ೪ ಕೋಟಿ ಮಾತ್ರ. ಈ ಸಂಬಂಧದಲ್ಲಿ ಎರಡು ವಿಷಯಗಳನ್ನು ಸ್ಪಷ್ಟಪಡಿಸುತ್ತೇನೆ. ಕೊಟ್ಟಂಥ ಹಣ ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಆಗುತ್ತಿಲ್ಲ. ಇನ್ನೊಂದು ವಿಷಯ ಹಸಿರು ಕ್ರಾಂತಿ ಸಾಧಿಸುತ್ತೇವೆ ಎಂದು ಹೇಳುತ್ತೀರಿ. ಆದರೆ ಕರ್ನಾಟಕ ಯೂನಿವರ್ಸಿಟಿ ಮೈಸೂರು ಯೂನಿವರ್ಸಿಟಿ, ಬೆಂಗಳೂರು ಯೂನಿವರ್ಸಿಟಿಗಳಿಗೆ ಬಜೆಟ್ಟಿನಲ್ಲಿ ಹಣ ಹೆಚ್ಚು ಮಾಡಿಲ್ಲ. ಆದರಲ್ಲಿಯೂ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಹೋದ ವರ್ಷದಷ್ಟೇ ಹಣ ಈ ವರ್ಷ ಕೊಟ್ಟಿದೆ. ಹಾಗಾದರೆ ಹಸಿರು ಕ್ರಾಂತಿ ಹೇಗೆ ಮಾಡುತ್ತೀರಿ ? ಹಣ ಹೆಚು ಒದಗಿಸದೇ ಇರುವುದರಿಂದ ಪ್ರಗತಿಯಾಗಬೇಕೆಂಬ ಉದ್ದೇಶ ಸರಕಾರಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ ಈಗ ಟ್ರ್ಯಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್ ಬಗ್ಗೆ ಸಾಕಷ್ಟು ಹಣ ಖರ್ಚು ಮಾಡಿದ್ದೀರಿ. ಆದರೆ ಅದರ ಉಪಯೋಗ ಎಷ್ಟರ ಮಟ್ಟಿಗೆ ಸಾಧಿಸಿದೆ ಎಂದು ನೋಡಬೇಕು. ೧೯೬೨ ರಿಂದ ೧೯೬೮ರ ವರೆಗೆ ಮಾಡಿದಂಥ ಕೆಲಸ ಏನೂ ಇಲ್ಲ. ಈ ಡಿಪಾರ್ಟಮೆಂಟಿನ ಅಂಕಿಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಇದರಲ್ಲಿ ೬೦ ಪರ್ಸೆಂಟ ಪೇಸ್ಟೇಜ ಇದೆ. ಇವುಗಳಿಂದ ಕೆಲಸ ಕಾರ್ಯಗಳನ್ನು ತೆಗೆದು ಕೊಳ್ಳದೆ ಇಟ್ಟಂಥ ಸ್ಥಳದಲ್ಲಿಯೇ ಇದ್ದುದರಿಂದ ವೇಸ್ಟೇಜ ಆಗಿದೆ, ನೌಕರರ ಸಂಬಳ ಮಾತ್ರ ಕೊಟ್ಟಿದ್ದಾರೆ. ಬುಲ್‌ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್ ಯೋಜನೆ ಸರಿಯಾದದ್ದು ಆಗಿಲ್ಲ. ೫, ೧೦ ಎಕರೆ ೧೫ ಎಕರೆ ಜಮೀನು ಇರುವ ಸಣ್ಣ ಹಿಡುವಳಿದಾರರಿಗೆ, ಅವರು ಶೇಕಡ ೬೦ರಷ್ಟು ಜನ ಇದ್ದರೂ ಏನೂ ಉಪಯೋಗವಾಗಿಲ್ಲ. ಎಲ್ಲಿಯವರೆಗೆ ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಆಗುವುದಿಲ್ಲವೋ ಅಲ್ಲಿಯವರೆಗೆ ಇದರ ಉಪಯೋಗ ಸರಿಯಾಗಿ ಆಗುವುದಿಲ್ಲ. ರೈತನಿಗೆ ಕೊಡುವ ಸಾಲವನ್ನು ರೈತನ ಕೈಗೆ ಕೊಡದೆ, ಈ ಹಣವನ್ನು ಡಿಪಾರ್ಟಮೆಂಟಿನವರೇ ಖರ್ಚು ಮಾಡಿ ಇಲಾಖೆಯವರೇ ಕೆಲಸ ಮಾಡಿದರೆ ಹಣದ ಸದುಪಯೋಗವಾಗುತ್ತದೆ, ರಾಜ್ಯಕ್ಕೆ ಲಾಭವಾಗುತ್ತದೆ.

ಎರಡನೆಯದಾಗಿ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ ಹೆಚ್ಚುಚ್ಚು ನೀರಾವರಿ ಯೋಜನೆ ಮಾಡಿದರೂ ಕೂಡ ೨೮ ಪರ್ಸೆಂಟಿಗಿಂತ ಹೆಚ್ಚಾಗಿ ನೀರಾವರಿಯಾಗುವುದು ಸಾಧ್ಯವಾಗಿಲ್ಲ. ಉಳಿದಂಥ ೭೨ ಪರ್ಸೆಂಟ್ ಜಮೀನಿನಲ್ಲಿ, ಸಾಧಾರಣವಾಗಿ ಇದು ಖುಷ್ಕಿ ಜಮೀನು ಆಗಿರುತ್ತದೆ, ಇದರಲ್ಲಿ ವ್ಯವಸಾಯ ಮಾಡುತ್ತಾರೆ. ೨೦ ಲಕ್ಷ ಎಕರೆ ಜಮೀನಿನಲ್ಲಿ ೫ ಲಕ್ಷ ಎಕರೆ ಜಮೀನಿಗೆ ಎ. ಆರ್. ಸಿ. ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ದೊರೆಯುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಉತ್ಪನ್ನ ಹೆಚ್ಚಾಗ ಬೇಕಾದರೆ ಇದನ್ನು ನಿರ್ಲಕ್ಷ್ಯ ಮಾಡಕೂಡದು. ಈ ಬಗ್ಗೆ ದಿಲ್ಲಿಯಲ್ಲಿ ಸಿಂಪೋಸಿಯಂ ಮಾಡಿ ತಜ್ಞರೊಡನೆ ವಿಚಾರ ವಿನಿಯಮ ಮಾಡಿದ್ದಾರೆ. ಖುಷ್ಕಿ ಜಮೀನಿನಲ್ಲಿ, ಮಳೆ ಸಾಧಾರಣವಾಗಿ ಬಂದರೆ ಒಂದು ಎಕರೆಯಲ್ಲಿ ೩೦೦ ಕೆಜಿ ಬೆಳೆಯುತ್ತದೆ. ಆದರೆ ಇದನ್ನು ೨೦೦೦ ಕೆ.ಜಿ ಬೆಳೆಯಲಿಕ್ಕೆ ಸಾಧ್ಯವಿದೆ ಎಂದು ಇಂಡಿಯನ್ ಅಗ್ರಿಕಲ್ಚರಲ್ ರೀಸರ್ಚ ಇನ್‌ಸ್ಟಿಟ್ಯೂಟ್‌ನವರು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿಯಾಗಿ ಶೇಕಡ ೭೨ ಭಾಗ ಜಮೀನಿನಲ್ಲಿ ಯಾವ ಉತ್ಪತ್ತಿ ಪಡೆಯಬೇಕಾಗಿತ್ತೋ ಅಂಥ ಉತ್ಪತ್ತಿ ಇಂದು ಪಡೆದಿಲ್ಲ ಇದನ್ನು ದಯವಿಟ್ಟು ಗಮನಿಸಬೇಕು. ಹಸಿರು ಕ್ರಾಂತಿ ಮಾಡುತ್ತೇವೆ ಎಂದು ಇರಿಗೇಟೆಡ್ ಲ್ಯಾಂಡ್‌ಗಾಗಿ ಕೋಟಿ ಗಟ್ಟಲೆ ಹಣ ಖರ್ಚು ಮಾಡುತ್ತಿದ್ದೇವೆ. ಈ ಹಣವನ್ನು ಈ ಭಾಗಕ್ಕೆ ಉಪಯೋಗಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ನಮ್ಮ ಸರ್ಕಾರದವರು ನಾವು ಬಹಳ ಪ್ರಗತಿಯನ್ನು ವ್ಯವಸಾಯ ರಂಗದಲ್ಲಿ ಸಾಧಿಸಿದ್ದೇವೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಇವರು ಹಾಗೆ ಸಾಧಿಸಿರತಕ್ಕ ಪ್ರಗತಿಯೇನು, ನಾವು ಖರ್ಚುಮಾಡಿರತಕ್ಕ ಹಣವೆಷ್ಟು ಮತ್ತು ಅದರಿಂದ ನಮಗೆ ಬಂದಿರತಕ್ಕ ಪ್ರತಿಫಲ

(ಶ್ರೀ ಎಂ. ನಾಗಪ್ಪ)

ವೇನು ಎಂಬುದನ್ನು ನೋಡಿದರೆ ನಾವು ಸಾಧಿಸಿರತಕ್ಕ ಪ್ರಗತಿಯೇನೆಂಬುದು ತಾನೇ ವ್ಯಕ್ತವಾಗುತ್ತದೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಇಲ್ಲಿ ನಾವು ಯಾವ ಪ್ರಗತಿಯನ್ನಾದರೂ ಸಾಧಿದ್ದೇವೆಯೋ ಎಂದರೆ ಇಲ್ಲ ಎಂಬುದು ನನ್ನ ಭಾವನೆ. ಈಗ ನಮ್ಮ ಇಡೀ ಭಾರತದಲ್ಲಿ ಒಂದು ಹೆಕ್ಟಾರಿಗೆ ನಾವು ಖರ್ಚುಮಾಡತಕ್ಕ ಹಣವೆಷ್ಟು ಮತ್ತು ಅದರಲ್ಲಿ ಬೆಳೆಯತಕ್ಕ ಬೆಳೆಯೆಷ್ಟು ಎಂಬುದನ್ನು ವಿಚಾರ ಮಾಡೋಣ. ನಾನು ಈಗ ಕೊಡತಕ್ಕ ಅಂಕಿಸಂಖ್ಯೆಗಳು ಇಡೀ ಭಾರತಕ್ಕೆ ಸಂಬಂಧಪಟ್ಟುವುಗಳು. ಒಂದು ಹೆಕ್ಟಾರ್ ಭೂಮಿಯಲ್ಲಿ ಬೆಳೆಯುತ್ತಿರುವ ಭತ್ತ ೧೩೭೦ ಕೆ.ಜಿ. ಒಂದು ಹೆಕ್ಟಾರಿನಲ್ಲಿ ಬೆಳೆಯತಕ್ಕ ಗೋಧಿ ೭೯೦ ಕೆ ಜಿ. ೧ ಹೆಕ್ಟಾರಿನಲ್ಲಿ ಬೆಳೆಯತಕ್ಕ ಮೈಜ್ ೯೯೦ ಕೆ.ಜಿ. ಮತ್ತು ಒಂದಹೆಕ್ಟಾರಿನಲ್ಲಿ ಬೆಳೆಯತಕ್ಕ ಕಾಟನ್ ೧೨೨ ಕೆ.ಜಿ. ಇವು ಭಾರತಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳಾದರೆ ನಮ್ಮ ಮೈಸೂರಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡೋಣ ಒಂದು ಹೆಕ್ಟಾರಿನಲ್ಲಿ ಬೆಳೆಯುತ್ತಿರುವ ಭತ್ತ ೧೬೫೦ ಕೆ.ಜಿ. ಈ ಒಂದು ವಿಚಾರದಲ್ಲಿ ಮಾತ್ರ ನಮ್ಮ ರಾಜ್ಯ ಭಾರತಕ್ಕಿಂತ ಸ್ವಲ್ಪ ಮುಂದಿದೆ. ಆದರೆ ಇನ್ನುಳಿದ ಬಾಬಂಗಳಲ್ಲಿ ಹಾಗಿಲ್ಲ. ಒಂದು ಹೆಕ್ಟಾರ್ ಭೂಮಿಯಲ್ಲಿ ಬೆಳೆಯುತ್ತಿರುವ ಗೋಧಿ ೫೯೦ ಕೆ.ಜಿ. ಮೈಜ್ ೬೯೦ ಕೆ.ಜಿ. ಮತ್ತು ಕಾಟನ್ ೧೦೦ ಕೆಜಿ. ಇದನ್ನು ನೋಡಿದರೆ ಪ್ರಗತಿ ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ಸಾಧಿಸಿರತಕ್ಕ ಪ್ರಗತಿ ಹಾಗಿರಲಿ, ನಮ್ಮ ಪಕ್ಕದ ರಾಜ್ಯವಾದ ಪಾಕೀಸ್ತಾನವನ್ನು ನೋಡಿ ; ಅಲ್ಲಿ ಒಂದು ಹೆಕ್ಟಾರಿನಲ್ಲಿ ೧೫೧೦ ಕೆ.ಜಿ. ಭತ್ತವನ್ನು ಬೆಳೆದಿದ್ದಾರೆ; ಹೆಕ್ಟಾರಿಗೆ ೮೨೦ ಕೆ.ಜಿ. ಗೋಧಿಯನ್ನೂ; ೧೦೬೦ ಕೆ.ಜಿ. ಮೈಜನ್ನೂ ಮತ್ತು ೧೫೦ ಕೆ.ಜಿ. ಹತ್ತಿಯನ್ನೂ ಬೆಳೆದಿದ್ದಾರೆ. ಹೀಗೆ ನಮ್ಮ ಪ್ರಗತಿಯನ್ನು ಪಕ್ಕದ ರಾಜ್ಯಕ್ಕೆ ಹೋಲಿಸಿ ಸಮತೋಲಿನ ಮಾಡಿ ನೋಡಿದಾಗ ನಾವು ಎಷ್ಟು ಪ್ರಗತಿಯ ಮಟ್ಟವನ್ನು ಮುಟ್ಟಬೇಕಾಗಿತ್ತೋ ಅಷ್ಟನ್ನು ಮುಟ್ಟಿಲ್ಲ ಎಂದು ಹೇಳುತ್ತೇನೆ.

ಇನ್ನು ಬೋರ್ ವೆಲ್ಲುಗಳ ವಿಚಾರಕ್ಕೆ ಬಂದರೆ ಮಾನ್ಯ ಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲೇ ಹೇಳಿರುವಂತೆ ೧೯೭೦–೭೦ನೇ ಅವಧಿಯಲ್ಲಿ ಒಂದು ಲಕ್ಷ ಬಾವಿಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ತೋಡಿಸಲಾಗಿದೆ ಎಂದು ಹೇಳಿದ್ದಾರೆ. ನಮ್ಮ ರಾಯಚೂರು ಜಿಲ್ಲೆಗೆ ೧೯೬೩ರಿಂದ ೧೯೬೭ರ ವರೆಗೂ ಒಂದೂ ರಿಗ್‌ನ್ನು ಕೊಡಲಿಲ್ಲ ನಮ್ಮಲ್ಲಿ ಮಳೆ ಬೀಳುವುದು ಬಹಳ ಕಡಮೆ. ಅಲ್ಲಿ ಒಂದು ವರ್ಷದಲ್ಲಿ ೯೧ ಬಾವಿಗಳನ್ನು ಖುಷ್ಕಿ ಭೂಮಿಗಳಲ್ಲಿ ತೆಗೆಯಲಾಗಿದೆ. ಅಂಥ ಅಗತ್ಯವಿರುವ ಕಡೆಗೆ ಸರ್ಕಾರದವರು ರಿಗ್ಸ್‌ಗಳನ್ನು ಒದಗಿಸುತ್ತಿಲ್ಲ. ಆದರೆ ಸರ್ಕಾರದವರಲ್ಲಿ ೧೧೦೦ ರಿಗ್ಸ್‌ಗಳಿದ್ದೂ ನಮ್ಮ ಜಿಲ್ಲೆಗೇನೂ ಪ್ರಯೋಜನವಾಗುತ್ತಿಲ್ಲ. ಯಾವ ಜಿಲ್ಲೆಯಲ್ಲಿ ಖುಷ್ಕಿ ಭೂಮಿ ಹೆಚ್ಚಿಗೆ ಇರುತ್ತದೋ ಅಂಥ ಜಿಲ್ಲೆಗಳಿಗೆ ರಿಗ್‌ಗಳ ಅಗತ್ಯ ಹೆಚ್ಚಿಗೆ ಇರುತ್ತದೆ. ನಮ್ಮ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಒಂದು ತಿಂಗಳಲ್ಲಿ ೬೫ ಬಾವಿಗಳನ್ನು ತೋಡಿದ್ದಾರೆ ಅಂದಾಗ ಅಲ್ಲಿ ಈ ರಿಗ್‌ಗಳ ಅಗತ್ಯ ಎಷ್ಟಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ ಆದರೆ ಇವುಗಳ ಹಂಚಿಕೆಯಲ್ಲೂ ರಾಜಕೀಯ ನಡೆಯುತ್ತಿದೆ. ಇದರಿಂದ ನಮ್ಮ ಪ್ರಗತಿ ಕುಂಠಿತವಾಗುತ್ತಿದೆ.

ಶ್ರೀ ಬಿ ರಾಚಯ್ಯ (ವ್ಯವಸಾಯ ಮಂತ್ರಿಗಳು) :—ಈಗಾಗಲೇ ತಮ್ಮ ಜಿಲ್ಲೆಗೆ ಒಂದು ಪೋಲಿಷ್ ರಿಗ್ಸ್‌ನ್ನೂ ಮತ್ತು ಗುಲ್ಬರ್ಗಾಕ್ಕೆ ಈಗತಾನೆ ಒಂದು ಎಲ್ಗೋಕ್ಕೀ ಮೈನರ್ ಬಂದಿದೆ ಅದನ್ನು ಕಳುಹಿಸಲಾಗುತ್ತದೆ. ನಾವು ಇತ್ತೀಚಿಗೆ ೪೪ ಯಂತ್ರಗಳಿಗೆ ಆರ್ಡರನ್ನು ಕೊಟ್ಟಿದ್ದೇವೆ. ಅವುಗಳಲ್ಲಿ ಈಗಾಗಲೇ ೨೫ ಬಂದಿವೆ. ನಿಮ್ಮ ಜಿಲ್ಲೆಗೂ ಕಳುಹಿಸಿದ್ದೇವೆ.

ಶ್ರೀ ಎಂ. ನಾಗಪ್ಪ : ಹಾಗಾದರೆ ನಾನು ಸರ್ಕಾರಕ್ಕೆ ಬಹಳ ಅಭಾರಿಯಾಗಿದ್ದೇನೆ. ಇನ್ನು ನಾನು ಅರಣ್ಯದ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ. ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಅಭಿವೃದ್ಧಿಗೆ ಒಂದು ಸ್ಥಳವನ್ನು ಗೊತ್ತುಮಾಡಿಕೊಂಡಿದ್ದಾರೆ. ಅದು ಎಲ್ಲಿ ಎಂದರೆ ಆ ಸ್ಥಳ ರಾಯಚೂರು ಮುನಿಸಿಪಾಲಿಟಿಗೆ ಹೊಂದಿಕೊಂಡಿದೆ. ಆಕ್ಸಾಯಿ ಗಡೀ ಸಹಾ ಇದರಲ್ಲೇ ಸೇರಿಹೋಗಿದೆ ಆದರೆ ಸರ್ಕಾರದವರು ದಯವಿಟ್ಟು ಇಂಥ ಯೋಜನೆಗಳನ್ನು ಮಾತ್ರ ಹಾಕಬಾರದೆಂದು ಕೇಳಿಕೊಳ್ಳುತ್ತೇನೆ ಹೀಗಾಗಿ ರಾಜ್ಯದಲ್ಲಿ ಸಾಕಷ್ಟು ಅರಣ್ಯಾಭಿವೃದ್ಧಿ ಆಗಿಲ್ಲ ಎಂದು ಹೇಳುತ್ತೇನೆ. ರಾಜ್ಯದಲ್ಲಿ ಯಾರೂ ಬೆಳಸಿದ ಗಡಿಗಳ ಅಂಕಿ ಅಂಶಗಳನ್ನು ಯಾರೋ ತಂದು ಇಲ್ಲಿ ಮಂತ್ರಿಗಳಿಗೆ ಕೊಡುತ್ತಾರೆ ಅದನ್ನು ನೋಡಿಕೊಂಡು ಮಂತ್ರಿಗಳು ಹೇಳಿಬಿಡುತ್ತಾರೆ. ಅಷ್ಟೇ ವಿನಾ ಇಲ್ಲಿ ನಿಜವಾಗಿಯೂ ಅರಣ್ಯಾಭಿವೃದ್ಧಿಯಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ವ್ಯವಸಾಯಕ್ಕೆಜಮೀನು ಹೋಗುತ್ತಾ ಉಳಿಯುವುದು ಸುಮಾರು ೧೫ ಲಕ್ಷ ಎಕರೆ ಆಗಬಹುದು. ಅಲ್ಲಿ ಈ ಅರಣ್ಯವನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮಲ್ಲಿ ಜಾನುವಾರುಗಳಿಗೆ ತೀವ್ರ ರೋಗರುಜಿನಗಳು ಬಂದಾಗ ಅವುಗಳನ್ನು ಗುಣಪಡಿಸುವುದಕ್ಕೆ ಅಲ್ಲಿ ಜಾನುವಾರು ಆಸ್ಪತ್ರೆಗಳ ಸಂಖ್ಯೆ ಏನೇನೂ ಸಾಲದು. ಅನೇಕ ಕಡೆ ೨೦ ಮೈಲಿ ಫಾಸಲೆಯಲ್ಲಿ ಕೂಡ ಒಂದು ಆಸ್ಪತ್ರೆಯಿರುವುದಿಲ್ಲ. ಅಂಥ ಸಂದರ್ಭದಲ್ಲಿ ಆ ಕಾಯಿಲೆ ದನಗಳನ್ನು ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಸರ್ಕಾರದವರು. ಅಲ್ಲಿಗೆ ಹೆಚ್ಚು ಜಾನುವಾರು ಆಸ್ಪತ್ರೆಗಳನ್ನು ಕೊಡಬೇಕೆಂದು ಕೇಳಿಕೊಂಡು ನನಗಿಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ಸನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) :—ಮಾನ್ಯ ಸಭಾಪತಿಗಳೇ : ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಡೆಯುತ್ತಿರುವ ಚರ್ಚೆಯಲ್ಲಿ ನಾನು ಭಾಗ ವಹಿಸತಕ್ಕ ಕಾಲದಲ್ಲಿ ಸರ್ಕಾರದವರು ಈ ದಿವಸ ಹಾಕಿಕೊಂಡಿರತಕ್ಕ ಯೋಜನೆಗಳೇನಿವೆ ಅವುಗಳಿಂದ ನಿಜವಾಗಿಯೂ ರೈತರಿಗೆ ಎಷ್ಟರ ಮಟ್ಟಿನ ಉಪಯೋಗವಾಗುತ್ತದೆ ಎಂಬುದನ್ನು ಸ್ಥೂಲವಾಗಿ ಪರಿಶೀಲನೆ ಮಾಡಿದರೆ ಸಾಮಾನ್ಯವಾಗಿ ಆ ಯೋಜನೆಗಳಿಂದ ಸಣ್ಣ ಸಣ್ಣ ರೈತರಿಗೇನೂ ಅಷ್ಟು ಪ್ರಯೋಜನವಾಗುವುದಿಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಶ್ರೀ ಎಚ್ ಎಂ ಚನ್ನಬಸಪ್ಪನವರು ಮಾತನಾಡುತ್ತ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ರಾಜ್ಯ ಸರ್ಕಾರಗಳು ತಮಗೆ ತಾವೇ ಯೋಜನೆಗಳನ್ನು ನಿರೂಪಣೆ ಮಾಡಿಕೊಂಡಿದ್ದರೂ ಅವುಗಳನ್ನು ಕಾರ್ಯಗತ ಮಾಡುವುದರಲ್ಲಿ ರಾಜ್ಯ ಸರ್ಕಾರಗಳು ಕೇಂದ್ರದ ಒಂದು ಹಿಡಿತಕ್ಕೆ ಸಿಕ್ಕಿರುವ ಕಾರಣದಿಂದ ರಾಜ್ಯಗಳಲ್ಲಿ ಸರಿಯಾಗಿ ಕೆಲಸ ಕಾರ್ಯಗಳು ನಡೆಯುದಕ್ಕೆ ಸಾಧ್ಯವಾಗಿಲ್ಲ ಎಂದೂ, ಅದನ್ನು ನಿವಾರಣೆ ಮಾಡತಕ್ಕ ಹಾದಿಯಲ್ಲಿ ನಮ್ಮ ರಾಜ್ಯ ಸರ್ಕಾರದವರೇನೂ ಪ್ರಯತ್ನ ನಡೆಸಿಲ್ಲ ಎಂಬುದಾಗಿ ಆಪಾದನೆಮಾಡಿದ್ದಾರೆ.

ಶ್ರೀಮಾನ್ ಚನ್ನಬಸಪ್ಪನವರು ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಟಿಯ ಅಗ್ರಿಕಲ್ಚರಲ್ ಪ್ರೊಡಕ್ಷನ್ ಉಪ-ಸಮಿತಿಯ ಛೇರ್ಮನ್ ಆಗಿ ಕೆಲಸ ಮಾಡಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರ ರಿಪೋರ್ಟಿನಲ್ಲಿ ಈ ಅಗ್ರಿಕಲ್ಚರ್ ಮೇಲೆ ಏನು ಒಂದು ಸಲಹೆ ಕೊಟ್ಟರು ಎಂಬುದು ಗೊತ್ತಿಲ್ಲ. ಬಹುಶಃ ಈ ಒಂದು ಸಲಹೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ ಆ ರೀತಿ ಕೊಟ್ಟಿದ್ದರೆ ಒಳ್ಳೆಯದು. ಈ ರೀತಿ ಸಲಹೆ ಕೊಟ್ಟಿದ್ದರೆ ಕೇಂದ್ರ ಸರ್ಕಾರದವರು ಅದನ್ನು ಒಪ್ಪಿ ರಾಜ್ಯ ಸರ್ಕಾರದ ಪೂರ್ಣ ಹತೋಟಿಯಲ್ಲಿರುವ ಈ ವ್ಯವಸಾಯ ಇಲಾಖೆಯ ಮೂಲಕ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಹೊತ್ತು ನಮ್ಮ ವ್ಯವಸಾಯ ಹೇಗಿದೆ ಎಂದರೆ ೧೦೦ಕ್ಕೆ ೮೦ ಜನ ಈ ದೇಶದಲ್ಲಿ ವ್ಯವಸಾಯವನ್ನು ಅವಲಂಬನೆ ಮಾಡತಕ್ಕಂಥ ಸನ್ನಿವೇಶ ಇರುವಾಗ ಸುಮಾರು ೮ ರಿಂದ ೯ ಪರ್ಸೆಂಟು ನೀರಾವರಿ ಪ್ರದೇಶ ಮೈಸೂರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ೯೨ ಪರ್ಸೆಂಟು ಜನ ಖುಷ್ಕಿ ಜಮೀನಿನ ಆಧಾರದ ಮೇಲೆ ಜೀವನ ನಡೆಸಬೇಕಾಗಿದೆ. ಆದುದರಿಂದ ಅವರ ಜೀವನವನ್ನು ಉತ್ತಮಸ್ಥಿತಿಗೆ ತರಬೇಕು ಎನ್ನುವ ಸಮಸ್ಯೆಯೂ ಇದೆ. ಇದು ಬಹಳ ಕಷ್ಟಕರವಾದ ಸಮಸ್ಯೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ವ್ಯವಸಾಯವನ್ನು ಉತ್ತಮಗೊಳಿಸಬೇಕು. ಬ್ಯಾಂಕ್‌ನವರೂ ಕೂಡ ಇದಕ್ಕೆ ಸಹಾಯ ಮಾಡುತ್ತಾರೆ. ಮಳೆ ಬಂದು ಒಳ್ಳೆ ಬೆಳೆ ಆದರೆ ಅಂತಹ ಟೈಂನಲ್ಲಿ ನಾವು ಬೆನ್ನು ತಟ್ಟಿಕೊಂಡರೆ ಏನು ಪ್ರಯೋಜನ? ಮಳೆ ಬಾರದೆ ಹೋದರೆ ಬೆಳೆಯೂ ಕೆಟ್ಟು ಹೋಗಿ ಜನ ಸಂಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. It is a natural calamity ಎಂದು ಹೇಳುತ್ತೇನೆ. ಈಹೊತ್ತು ದೇಶದಲ್ಲಿ ೯೨ ಪರ್ಸೆಂಟು ಜನ ಖುಷ್ಕಿ ಜಮೀನಿನ ಮೇಲೆ ಅವಲಂಭಿಸಿಕೊಂಡಿರುತ್ತಾರೆ. ಅವರ ಸಮಸ್ಯೆಗಳಿಗೂ ಗಮನ ಕೊಡುವುದನ್ನು ಆಲೋಚನೆ ಮಾಡಬೇಕಾಗಿದೆ. ಈಹೊತ್ತು ಅವರ ಕಡೆ ಗಮನ ಕೊಡದೇ ಹೋದರೆ ಈ ನ್ಯಾಚುರಲ್ ರಿಸೋರ್ಸಸ್ ಏನು ಇದೆ ಅದು ೨೫-೩೦ ಪರ್ಸೆಂಟು ಮೇಲೆ ಬರಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ ಶ್ರೀಮಾನ್ ದೇವರಾಜ್ ಅರಸ್‌ರವರು ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಮಾಡಬೇಕು ಎಂದು ಹೇಳಿದರು. ಇದರಿಂದ ಸಣ್ಣ ಸಣ್ಣ ಹಿಡುವಳಿದಾರರಿಗೆ ಕಷ್ಟವಾಗುತ್ತದೆ. ಆದುದರಿಂದ ಇವರ ಬಗ್ಗೆ ಸರ್ಕಾರ ತೀವ್ರಗತಿಯಲ್ಲಿ ಆಲೋಚನೆ ಮಾಡಬೇಕು. ಶ್ರೀ ದೇವರಾಜ್ ಅರಸ್‌ರವರು ಮಾಡಿರುವುದೇನೋ ಉತ್ತಮವಾದ ಸಲಹೆ, ಆದರೆ ಕಾರ್ಯಗತ ಮಾಡುವುದರ ಬಗ್ಗೆ ಅವರು ಮಂತ್ರಿಗಳಾಗಿದ್ದಾಗಲೇ ಇದನ್ನು ಮಾಡುವುದು ಕಷ್ಟವಾಗಿತ್ತು. ಆದುದರಿಂದ ಇವಾಗ ಈ ಕೆಲಸ ಮಾಡುವುದು ಕಷ್ಟವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಆ ಕಾರ್ಯ ಉಪಯುಕ್ತವಾದರೂ ಕೂಡ ಅದನ್ನು ಕಾರ್ಯಾಚರಣೆಗೆ ತರುವುದು ಕಷ್ಟ.

ಶ್ರೀ ಡಿ. ದೇವರಾಜ್ ಅರಸ್.—ಸರ್ಕಾರದವರು ಕಲೆಕ್ಟಿವ್ ಆಗಿ ಕೆಲಸ ಮಾಡಿದರೆ ಸಾಧ್ಯವಾಗುತ್ತದೆ. ಕ್ಯಾಬಿನೆಟ್ ಒಂದಾಗಿ ಕೆಲಸ ಮಾಡಿದರೆ ಸರಿಹೋಗುತ್ತದೆ. ವ್ಯವಸಾಯ ಮಂತ್ರಿಗಳು ಒಬ್ಬರೇ ಕೆಲಸ

(ಶ್ರೀ ಡಿ. ದೇವರಾಜ್ ಅರಸ್)

ಮಾಡಿದರೆ ಆಗುವುದಿಲ್ಲ. ಸರ್ಕಾರದವರು ಇದಕ್ಕೆ ತೀವ್ರ ಗಮನ ಕೊಟ್ಟು ಅದಕ್ಕೆ ಸಂಬಂಧಪಟ್ಟ ಇಲಾಖೆಯವರನ್ನೆಲ್ಲಾ ಕ್ರೋಢೀಕರಿಸಿ ತಮ್ಮ ಶಕ್ತಿಯನ್ನೂ ಉಪಯೋಗಿಸಿದರೆ ಈ ಸ್ಕೀಮನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಇದನ್ನು ಮಾಡಿಸುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಮನಸ್ಸು ಇದ್ದರೂ ಹಣದ ಕೊರತೆಯಿಂದ ಸ್ವಲ್ಪ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ. ಈ ಹೊತ್ತಿನ ದಿವಸ ಗ್ರೌಂಡ್ ವಾಟರ್ ಎಲ್ಲಿ ದೊರೆಯುತ್ತದೆ ಎನ್ನುವುದರ ಬಗ್ಗೆ ಸರ್ವೆ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಇದನ್ನು ಸರ್ವೆ ಮಾಡಿಸಬೇಕಾದರೆ ಡೈರೆಕ್ಟರ್ ಆಫ್ ಮೈನ್ಸ್ ಅಂಡ್ ಜಿಯಾಲಜಿಗೆ ಅರ್ಜಿ ಹಾಕಬೇಕು ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ವಿನಂತಿ ಮಾಡಿಕೊಳ್ಳ ಬೇಕಾಗಿದೆ. ಈಹೊತ್ತಿನ ದಿವಸ ನಾವು ಮಾತನಾಡುತ್ತೇವೆ, ದೇಶದಲ್ಲಿ ಬ್ಯಾಂಕ್ ನ್ಯಾಷನಲೈಸ್ ಆದಮೇಲೆ ವ್ಯವಸಾಯ ರಂಗದಲ್ಲಿ ರೈತರಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತದೆ ಎಂದು ಮತ್ತು ಅದರ ಜೊತೆಗೆ ಕ್ರಾಂತಿಕಾರಕ ಬದಲಾವಣೆಯೂ ಕೂಡ ಆಗುತ್ತದೆ ಎಂದು. ನಾವು ದೈನಂದಿನ ಪತ್ರಿಕೆಯಲ್ಲೂ ಓದುತ್ತಾ ಇದ್ದೇವೆ. ಮಾನ್ಯ ಸಚಿವರು ಈ ವಿಷಯವನ್ನು ತಿಳಿಸಬೇಕು. ೫ ಎಕರೆ ಇರುವ ಸಣ್ಣ ಹಿಡುವಳಿದಾರರಿಗೆ ಬ್ಯಾಂಕ್ ನ್ಯಾಷನಲೈಸ್ ಆದಮೇಲೆ ಏನು ಫೆಸಿಲಿಟೀಸ್ ಕೊಟ್ಟಿದ್ದಾರೆ? ಇದರಿಂದ ಹಣವಂತರಿಗೆ, ಬೇಕಾದಂಥವರಿಗೆ ಸುಮಾರು ೫ ಎಕರೆ ಮೇಲ್ಪಟ್ಟು ಇರುವವರಿಗೆ ಈ ಫೆಸಿಲಿಟೀಸ್ ಸಿಕ್ಕುತ್ತದೆಯೇ ಹೊರತು ಸಣ್ಣ ಹಿಡುವಳಿದಾರರಿಗೆ ನ್ಯಾಷನಲೈಸೇಷನ್ ಆದ ಬ್ಯಾಂಕ್‌ನಲ್ಲಿ ಏನೂ ಫೆಸಿಲಿಟೀಸ್ ಸಿಕ್ಕುತ್ತಾ ಇಲ್ಲ. ಅವರಿಗೆ ಬಡವರ ಮೇಲೆ ಅನುಕಂಪವಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಎಂ. ನಾಗಪ್ಪ.—ಮೊದಲು ಅವರಿಗೆ ಸರ್ಕಾರದಲ್ಲಿ ಏನು ಫೆಸಿಲಿಟೀಸ್ ಸಿಕ್ಕುತ್ತಿತ್ತು ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ.— ಸರ್ಕಾರದ ಧೋರಣೆಯನ್ನಾಗಲಿ ಬಹುಶಃ ಸರ್ಕಾರ ತಪ್ಪು ಮಾಡಿದರೆ ಅದು ತಪ್ಪು ಎಂದಾಗಲೀ ಪ್ರತಿಭಟನೆ ಮಾಡುವುದಕ್ಕೆ ಹೋಗುವುದಿಲ್ಲ. ಈಹೊತ್ತಿನ ದಿವಸ ದೇಶದಲ್ಲಿ ೧೦೦ಕ್ಕೆ ೭೦–೮೦ ರಷ್ಟು ಜನ ಸಣ್ಣ ಹಿಡುವಳಿದಾರರು ಇದ್ದಾರೆ. ಅವರಿಗೆ ಏನು ಸೌಲಭ್ಯ ಸಿಕ್ಕುತ್ತದೆ ಎನ್ನುವುದನ್ನು ತಾವು ಗಮನಿಸಬೇಕು. ಏತಕ್ಕೆಂದರೆ ಯಾವುದೇ ತರಹ ಸೌಲಭ್ಯವಾಗಲಿ ಈಹೊತ್ತಿನ ದಿವಸ ಅವರಿಗೆ ಸಿಕ್ಕುತ್ತಾ ಇಲ್ಲ. ನನ್ನ ಅನುಭವದ ಪ್ರಕಾರ ದೊಡ್ಡ ದೊಡ್ಡ ರೈತರಿಗೆ ಆ ಸೌಲಭ್ಯಗಳು ದೊರಕುತ್ತವೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ರೀತಿ ಆದರೆ ಸಣ್ಣ ರೈತರಿಗೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಆದುದರಿಂದ ಇವರ ಬಗ್ಗೆ ಸರ್ಕಾರದವರು ಎಚ್ಚರಿಕೆ ವಹಿಸಬೇಕಾಗಿದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈಹೊತ್ತಿನ ದಿವಸ ನಮ್ಮ ಉತ್ಪತ್ತಿ ಏನು ಇದೆ ಅದನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸದಿದ್ದರೂ ಕೂಡ ಸರ್ಕಾರ ಈ ವ್ಯವಸಾಯದಲ್ಲಿ ಏನೂ ಕೆಲಸ ಮಾಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ಬಿತ್ತನೆ ಬೀಜ, ಫರ್ಟಿಲೈಸರ್ಸ್ ಕೊಡುವುದರಲ್ಲಿ ಇನ್ನೂ ಇತರ ಸಮಸ್ಯೆಗಳಲ್ಲಿ ಸರ್ಕಾರದವರು ಸಹಾಯ ಮಾಡತಕ್ಕಂಥ ಧೋರಣೆ ಇಟ್ಟುಕೊಂಡಿದ್ದಾರೆ. ಆದರೆ ರೈತನು ಬೆಳೆದಂಥ ಪದಾರ್ಥಕ್ಕೆ ಸರಿಯಾದ ರೇಟು ಇಟ್ಟಿಲ್ಲ; ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ನಿರೂಪಣೆ ಮಾಡಬೇಕು. ಈಹೊತ್ತು ತಪ್ಪು ಯಾರದೇ ಇರಲಿ ರಾಜ್ಯ ಸರ್ಕಾರದವರು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಒತ್ತಾಯ ಹಾಕಿದ್ದಾರೆ ಎಂದು ಕೇಳಬೇಕಾಗಿದೆ ಉದಾಹರಣೆಗೆ ಹೇಳುವುದಾದರೆ ಈಹೊತ್ತು ಬೆಲ್ಲದ ಬೆಲೆ ಏನಾಗಿದೆ ಎಂದರೆ ರೈತನು ಬೆಳೆಯುವಂಥ ಬೆಲ್ಲಕ್ಕೆ ಒಂದು ಸರಿಯಾದ ಬೆಲೆ ಬರಬೇಕಾಗಿದೆ. ಇದರಲ್ಲಿ ಸರ್ಕಾರದವರು ಏನಾದರೂ ಪ್ರೋತ್ಸಾಹ ಮಾಡುವುದಕ್ಕೆ ಸಾಧ್ಯ ಇದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಮಾನ್ಯ ಅರ್ಥ ಮಂತ್ರಿಗಳು ತುಕೋಳ ಕಮೀಷನ್ನಿನ ಶಿಫಾರಸ್ಸುಗಳನ್ನು ಇಂಪ್ಲಿಮೆಂಟ್ ಮಾಡಿದ್ದಾರೆ. ಅದಕ್ಕೆ ೮–೧೦ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. It is inevitable on our part ಎಂದು ಹೇಳಿದರು. ನಾನಾದರೂ ಕೂಡ ಹೇಳುತ್ತೇನೆ. ಸರ್ಕಾರದಲ್ಲಿ ಇರತಕ್ಕಂಥ ೧ ಲಕ್ಷ ಅಥವಾ ೨ ಲಕ್ಷ ಜನಗಳಿಗೆ ಅವರಿಗೆ ಇಷ್ಟೊಂದು ಸವಲತ್ತು ಕೊಡತಕ್ಕಂಥ ಕಾಲದಲ್ಲಿ ೧೦೦ ಕ್ಕೆ ೭೦–೮೦ ರಷ್ಟು ಇರುವ ಸಣ್ಣ ಹಿಡುವಳಿದಾರರಿಗೆ, ಏನು ಸವಲತ್ತುಗಳನ್ನು ಕೊಟ್ಟಿದೀರಿ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈಹೊತ್ತು ಕೇಂದ್ರ ಸರ್ಕಾರದವರು ಫರ್ಟಿಲೈಸರ್ಸ್ ಟ್ರಾನ್ಸ್‌ಪೋರ್ಟೇಷನ್ನಿಗೆ ೧೦ ಪರ್ಸೆಂಟ್ ಟ್ಯಾಕ್ಸ್ ಇಂಪೋಸ್ ಮಾಡಿದ್ದಾರೆ ಇದು ಪಾಪದ ಕೆಲಸ. ಎಂದು ಹೇಳುತ್ತೇನೆ. ಇನ್ನು ಪ್ರಧಾನ ಮಂತ್ರಿಗಳು ಹಿನೇ ಪೇ ಕಮೀಷನ್‌ನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ಈವೊತ್ತು

ಇಂಡಿಕೇಟ್ ಸರ್ಕಾರವೇ ಇರಲಿ, ಸಿಂಡಿಕೇಟ್ ಸರ್ಕಾರವೇ ಇರಲಿ ಅದು ಮುಖ್ಯವಲ್ಲ. ಈಹೊತ್ತು ಇನೇ ಪೇ ಕಮೀಷನ್ನನ್ನು ನೇಮಕ ಮಾಡುವುದಾದರೆ ಅದರ ಪರಿಣಾಮ ರಾಜ್ಯಸರ್ಕಾರಕ್ಕೂ ಬೀಳುತ್ತದೆ. ಅದಕ್ಕೆ ಕೊನೆ ಮೊದಲು ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ಕೇವಲ ಅಧಿಕಾರಿಗಳಿಗೆ ಮಾತ್ರ ಈರೀತಿ ಪ್ರೋತ್ಸಾಹ ಕೊಡುವುದಾದರೆ ಇನ್ನು ವ್ಯವಸಾಯ ಮಾಡುವ ಜನ ಏನು ಇದ್ದಾರೆ ಬಹುಶಃ ಅವರು ತಮ್ಮ ಮೇಲೆ ಬೀಳುವ ಕಾಲ ದೂರವಾಗಿಲ್ಲ. ಇದರ ಬಗ್ಗೆ ಸರ್ಕಾರದವರು ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕಾಗಿದೆ; ಎಂದು ಹೇಳುತ್ತೇನೆ. ಲೇಬರ್ ಕಾಸ್ಟ್, ಫರ್ಟಿಲೈಸರ್ಸ್ ಕಾಸ್ಟ್, ಇಂಪ್ಲಿಮೆಂಟ್ ಕಾಸ್ಟ್ ನೋಡಿಕೊಂಡು ರೈತರಿಗೆ ಕೊಡಬೇಕು ರೈತರು ಈಹೊತ್ತಿನ ದಿವಸ ಬಹಳ ಕಷ್ಟ ಕಾಲದಲ್ಲಿದ್ದಾರೆ. ಆದುದರಿಂದ ಅವರು ಬೆಳೆದಂಥ ಬೆಲ್ಲಕ್ಕೆ ಸರಿಯಾದ ಒಂದು ರೇಟನ್ನು ಕೊಡುವುದಕ್ಕೆ ಸರ್ಕಾರದ ಗಮನ ಹರಿಯದೇ ಹೋದರೆ ಕಷ್ಟವಾಗುತ್ತದೆ ಎಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ತಾವು ಅಗ್ರಿಕಲ್ಚರಲ್ ಇಂಜನಿಯರಿಂಗ್ ವಿಭಾಗವನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ವರ್ಗಾಯಿಸಬೇಕೆಂದು ನಿರ್ಣಯ ಮಾಡಿದ್ದೀರಿ ಮತ್ತು ಇದನ್ನು ೧-೪-೧೯೭೦ ರಿಂದ ಜಾರಿಗೆ ತರಬೇಕೆಂದೂ ಇದ್ದೀರಿ. ಆದರೆ ಹೀಗೆ ಮಾಡುವುದರಿಂದ ಸಣ್ಣ ಸಣ್ಣ ರೈತರು ಹಾಗೂ ಬಳಕೆದಾರರಿಗೆ ಅನುಕೂಲವಾಗುತ್ತದೆಯೇ ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಂಡಿದ್ದೀರಾ ಎಂದು ನಾನು ಕೇಳಬೇಕಾಗಿದೆ. ಈ ಹೊತ್ತು ದೇಶದಲ್ಲಿ ನೂರಕ್ಕೆ ನೂರರಷ್ಟು ರೈತಾಪಿ ಜನರು ಬಡ ಜನರೇ ಆಗಿರುತ್ತಾರೆ ಇವರುಗಳಿಗೆ ಹೆಚ್ಚು ಬೆಲೆ ಕೊಟ್ಟು ಇಲ್ಲಿ ಸಹಾಯ ಪಡೆಯಲು ಸಾಧ್ಯವೇ ಇದನ್ನು ಸರ್ಕಾರದವರು ಏಕೆ ಆಲೋಚನೆ ಮಾಡುತ್ತಿಲ್ಲ ? ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅನ್ನು ನೋ ಲಾಸ್ ನೋ ಪ್ರಾಫಿಟ್ ಬೇಸಿಸ್ ಮೇಲೆ ನಡೆಸಬೇಕೆಂದು ಮಾಡಿರುವಾಗ ಇದಕ್ಕೆ ಬೇಕಾದರೆ ಸರ್ಕಾರವೇ ಒಂದು ರೀತಿಯಾಗಿ ಸಬ್‌ಸಿಡಿ ಕೊಟ್ಟು ಇದರ ನಷ್ಟ ಸರಿದೂಗಿಸಿ ರೈತಾಪಿ ಬಡಜನಕ್ಕೆ ಅನುಕೂಲವಾಗುವಂತೆ ಸುಲಭ ದರದಲ್ಲಿ ಎಲ್ಲ ಸೌಕರ್ಯಗಳು ಸಿಗುವಂತೆ ಏಕೆ ವ್ಯವಸ್ಥೆ ಮಾಡಬಾರದು ? ಇದರ ಮೂಲ ಉದ್ದೇಶ ರೈತರಿಗೆ ಅನುಕೂಲ ಮಾಡಬೇಕೆಂದು ಇರುವಾಗ ತಾವು ಈ ರೀತಿ ಮಾಡಿದರೆ ಇದರಿಂದ ಬಡ ಜನಕ್ಕೆ ಅನುಕೂಲ ಮಾಡಿದಂತಾಗುತ್ತದೆಯೇ ? ಹೀಗೆ ಮಾಡುವುದಾದರೆ ಇದರ ಮೂಲ ಉದ್ದೇಶಕ್ಕೆ ಧಕ್ಕೆ ತಗಲುತ್ತದೆ ಎಂದು ನಾನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಇನ್ನು ನಮ್ಮ ಹಾಸನ ಜಿಲ್ಲೆಯ ಬಗ್ಗೆ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಕೋಲ್ಡ್ ಸ್ಟೋರೇಜು ಪ್ಲಾಂಟು ಮತ್ತು ಡೀ ಹೈಡ್ರೇಷನ್ ಪ್ಲಾಂಟು ಹಾಕುತ್ತೇವೆಂದು ಮಾನ್ಯ ವ್ಯವಸಾಯ ಸಚಿವರು ಹೇಳುತ್ತಿದ್ದರೂ ಇದುವರೆಗೆ ಇದು ಯಾವ ಹಂತದಲ್ಲಿದೆ ಎನ್ನುವುದೇ ಗೊತ್ತಾಗುತ್ತಿಲ್ಲ. ಈಗ ಸಣ್ಣ ಪ್ರಮಾಣದ ಒಂದು ಕೋಲ್ಡ್ ಸ್ಟೋರೇಜು ಪ್ಲಾಂಟು ಇರುವುದರಿಂದ ಇದು ಇಲ್ಲಿಗೆ ಸಾಲುವುದಿಲ್ಲ. ಇಲ್ಲಿಗೆ ಸ್ವಲ್ಪ ಹೆಚ್ಚು ಗಮನ ಕೊಟ್ಟು ಸರ್ಕಾರ ಈಗಲಾದರೂ ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಸ್ಟೋರೇಜು ಪ್ಲಾಂಟು ಮತ್ತು ಡೀ ಹೈಡ್ರೇಷನ್ ಪ್ಲಾಂಟನ್ನು ಮಾಡಿಸಿಕೊಡಬೇಕೆಂದು ಕೇಳುತ್ತೇನೆ ಮತ್ತು ಇಲ್ಲಿಗೆ ಒಂದು ಸಾಯಿಲ್ ಟೆಸ್ಟಿಂಗು ಲ್ಯಾಬರೇಟರಿಯನ್ನು ಕೊಡುತ್ತೇವೆಂದು ಹೇಳಿದ್ದರು. ಏನು ಕಾರಣವೋ ನಮ್ಮ ಹಾಸನ ಜಿಲ್ಲೆಗೆ ಯಾವ ಕೆಲಸಗಳೂ ಆಗುತ್ತಿಲ್ಲ. ಬೇರೆ ಕಡೆಗಳಲ್ಲಿ ಆಗುತ್ತಿವೆ. ಆದರೆ ನಮ್ಮ ಕಡೆ ಏಕೆ ಆಗುತ್ತಿಲ್ಲ ಎನ್ನುವುದನ್ನು ತಿಳಿಯದಾಗಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಏರಿಯ ಡೆವಲಪ್‌ಮೆಂಟು ಸ್ಕೀಂ ಮತ್ತು ಆಯಕಟ್ ಡೆವಲಪ್‌ಮೆಂಟ್ ಸ್ಕೀಂ ಮಾಡುತ್ತೇವೆಂದು ಮಾನ್ಯ ವ್ಯವಸಾಯ ಸಚಿವರು ಇಲ್ಲಿಗೆ ಬಂದಿದ್ದಾಗ ಹೇಳಿದರು, ಆದರೆ ಇದು ಯಾವ ಹಂತದಲ್ಲಿದೆ ಎನ್ನುವುದೇ ನಮಗೆ ಗೊತ್ತಾಗುತ್ತಿಲ್ಲ. ಇದೇನು ಕಾರಣವೋ ನಮ್ಮ ವ್ಯವಸಾಯದ ಸಚಿವರು ಪ್ರಾಯಶಃ ನಮ್ಮ ಹಾಸನ ಜಿಲ್ಲೆಯ ಜನರು ಆರ್ಥಿಕವಾಗಿ ಪ್ರಗತಿ ಹೊಂದುತ್ತಿದ್ದಾರೆ ಎಂದು ಭಾವಿಸಿದ್ದಾರೇನು ? ಇದು ಅಂಕೆ ಅಂಶಗಳನ್ನು ಕೊಟ್ಟು ಸುಮಾರು ನಾಲ್ಕೈದು ವರ್ಷಗಳಿಂದಲೂ ಇದೇ ಏರಿಯಾ ಡೆವೆಲಪ್‌ಮೆಂಟು ಸ್ಕೀಂ ಮತ್ತು ಆಯಕಟ್ ಡೆವೆಲಪ್‌ಮೆಂಟು ಸ್ಕೀಂ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತಿದ್ದರೂ ಇದುವರೆಗೆ ಯಾವ ಡವಲಪ್‌ಮೆಂಟ್ ಕೂಡ ಹಾಸನ ಜಿಲ್ಲೆಯಲ್ಲಿ ಆಗಲಿಲ್ಲ.

ಇನ್ನು ಅನಿಮಲ್ ಹಸ್‌ಬೆಂಡ್ರಿ ಇಲಾಖೆ ಬಗ್ಗೆ ನಮ್ಮ ಜಿಲ್ಲೆಯ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಪಶುಸಂಗೋಪನ ಇಲಾಖಾ ಮಂತ್ರಿಗಳು ಬಹಳ ದೊಡ್ಡದಾಗಿ ಎಲ್ಲ ಕಡೆಯಲ್ಲೂ ಭಾಷಣ ಮಾಡುತ್ತಿದ್ದಾರೆ ಎಲ್ಲ ಕಡೆಯಲ್ಲೂ ಕುರಿ ಸಾಕಾಣಿಕೆ ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕುವಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿ ಅಲ್ಲಲ್ಲಿ ಮಾಡುತ್ತಿದ್ದಾರೆ. ಆದರೆ ನಮ್ಮ ಹಾಸನ ಜಿಲ್ಲೆಯಲ್ಲಿ ಇನ್ನೂ ಯಾವುದೂ ಆಗಿಲ್ಲ. ಇಲ್ಲೂ ಕೋಳಿ ಸಾಕಾಣಿಕೆ ಕೇಂದ್ರ,

(ಶ್ರೀ ಎಚ್. ಡಿ. ದೇವೇಗೌಡ)

ಕುರಿ ಸಾಕಾಣಿಕೆ ಇವುಗಳ ಕೆಲಸಗಳನ್ನು ಮಾಡಿದರೆ ಇಲ್ಲಿನ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದರೂ ಇನ್ನೂ ಆಗಲಿಲ್ಲ, ರೈತರಿಗೆ ಇದೂ ಒಂದು ಉಪಕಸಬು ಆಗಿ ಅವರಿಗೆ ಬಹಳ ಅನುಕೂಲ ವಾಗುತ್ತದೆ. ಆದರೆ ಈ ಕಾರ್ಯಕ್ರಮಗಳೆಲ್ಲಾ ಬರೀ ಪೇಪರಿನಲ್ಲೇ ಉಳಿದಿವೆ. ಇನ್ನೂ ಯಾವುದೂ ಕಾರ್ಯಗತವಾಗುತ್ತಿಲ್ಲ. ಅದೇನೋ ನಮ್ಮ ಮಾನ್ಯ ಮಂತ್ರಿಗಳ ಕ್ಷೇತ್ರ ರಾಣಿಬೆನ್ನೂರು ಎಂತಲೋ ಏನೋ ಇಲ್ಲಿಗೆ ಕುರಿ ಸಾಕಾಣಿಕೆ ಕೇಂದ್ರ ಮಾಡಲು ಸುಮಾರು ಐದು ಲಕ್ಷದಷ್ಟು ಹಣ ಕೊಟ್ಟು ಸಹಾಯ ಮಾಡಿ ಕೆಲಸಗಳನ್ನು ಮಾಡುತ್ತಿದಾರೆ. ಇದನ್ನು ಅವರು ಒಬ್ಬರೇ ನೋಡಿಕೊಂಡು ಸಂತೋಷಪಡ ಬೇಕೆಂದು ಕಾಣುತ್ತದೆ. ಇವರ ಕಾರ್ಯಕ್ರಮಗಳೆಲ್ಲಾ ಸರಿಯಾಗಿ ಆಗದೆ ಹಾಗೆ ಸ್ಥಗಿತವಾಗಿದೆ. ಇದಕ್ಕೆ ಕಾರಣವೇನು ಎನ್ನುವುದು ಗೊತ್ತಾಗಲಿಲ್ಲ ಮತ್ತು ಇದರ ಕಾರ್ಯಕ್ರಮಗಳು ಕೂಡ ನಿರೀಕ್ಷಿಸಿದಷ್ಟು ರೀತಿಯಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದು, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಕೇಂದ್ರ ಹಾಗೂ ಹಂದಿ ಸಾಕುವಿಕೆ ಕೇಂದ್ರಗಳನ್ನು ತ್ವರಿತವಾಗಿ ಆಗುವಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಬೇಕು. ಇನ್ನೊಂದು ತೊಂದರೆ ನಮ್ಮ ರೈತರಿಗೆ ಬಂದಿದೆ. ರೈತ ಸಹಾಯಕ್ಕಾಗಿ ಯಾವುದಾದರೂ ಬ್ಯಾಂಕಿಗೆ ಹೋದರೆ ಅವರು ಕೊಡತಕ್ಕ ಸೆಕ್ಯೂರಿಟಿ ಅನ್‌ಎನ್‌ಕಂಬರ್ಡ್ ಸೆಕ್ಯೂರಿಟಿ ಆಗಿರಬೇಕು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಈಗ ರೈತ ಆ ಆಸ್ತಿ ಎಲ್ಲವನ್ನೂ ಸರ್ಕಾರಕ್ಕೆ ಈಡು ಮಾಡಿರುತ್ತಾನೆ. ಹೀಗಿರುವಾಗ unencumbered Security ಅವನು ಹೇಗೆ ಕೊಡಲು ಸಾಧ್ಯ ಎನ್ನುವುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡ ಹಾಗೆ ತೋರಲಿಲ್ಲ. ಇವನ ವೃತ್ತಿಯ ಆಧಾರದ ಮೇಲೆ ಏಕೆ ಇವನಿಗೆ ಸಾಲ ಕೊಡುವಂತೆ ವ್ಯವಸ್ಥೆ ಮಾಡ ಬಾರದು ? ಸರ್ಕಾರ ಈಗ ಟ್ಯಾಕ್ಸಿ ತೆಗೆದುಕೊಳ್ಳಲು ಒಬ್ಬರು ಡ್ರೈವನು ಬಂದರೆ ಅವರ ವೃತ್ತಿಯ ಮೇಲೆ ಕಾರು ಕೊಂಡುಕೊಳ್ಳಲು ಅವರಿಗೆ ಇಪ್ಪತ್ತು ಸಾವಿರದವರೆಗೆ ಸಾಲ ಕೊಡುತ್ತಾರೆ. ಇದೇ ರೀತಿ ಯಲ್ಲಿ ರೈತ ವ್ಯವಸಾಯ ವೃತ್ತಿಯನ್ನು ಅವಲಂಬನೆ ಮಾಡುತ್ತಿರುವುದರಿಂದ ಇವರಿಗೂ ಇದೇ ವೃತ್ತಿಯ ಮೇಲೆ ಸಾಲ ಕೊಡುವ ವ್ಯವಸ್ಥೆ ಏಕೆ ಮಾಡಬಾರದು ? ರೈತರಿಗೆ ಅನ್‌ಎನ್‌ಕಂಬರ್ಡ್ ಆಗಿ ಸಾಲ ಕೊಡುವುದಕ್ಕೆ ಆಗುವುದಿಲ್ಲ ಎಂದು ಇರುವಾಗ ಕೇಂದ್ರ ಸರ್ಕಾರದವರು ಟ್ಯಾಕ್ಸಿಗಳಿಗೆ ಯಾವ ರೀತಿ ವೃತ್ತಿಯ ಮೇಲೆ ಸಾಲ ಕೊಡಲು ಸಹಾಯ ಮಾಡುತ್ತಾರೋ ಅದೇ ರೀತಿ ಬ್ಯಾಂಕುಗಳ ಮೂಲಕ ರೈತರಿಗೆ ಅವರ ವೃತ್ತಿಯ ಮೇಲೆ ಸಾಲ ಕೊಡುವಂತೆ ಏಕೆ ವ್ಯವಸ್ಥೆ ಮಾಡಬಾರದು ? ನಮ್ಮ ಹಾಸನ ಜಿಲ್ಲೆಯಲ್ಲಿ ಮಾನ್ಯ ಸಚಿವರು ಕುರಿ ಸಾಕಾಣಿಕೆ ಕೇಂದ್ರ ಕೋಳಿ ಸಾಕುವಿಕೆ ಕೇಂದ್ರ ಹಾಗೂ ಇನ್ನಿತರ ಡೆವೆಲಪ್‌ಮೆಂಟು ಸ್ಕೀಂಗಳನ್ನು ಮಾಡುತ್ತೇವೆಂದು ದೊಡ್ಡದಾಗಿ ಬರೀ ಬಾಯಲ್ಲಿ ಹೇಳುತ್ತಿದ್ದಾರೆಯೇ ವಿನಾ ಯಾವುದೂ ಕಾರ್ಯತಃ ಆಗಿಲ್ಲ. ಇನ್ನು ಇಲ್ಲಿಗೆ ಮಿಲ್ಕ್ ಡೇರಿ ಸ್ಕೀಂ ತರುತ್ತೇವೆಂದು ಹೇಳಿದರು. ಇವರ ದೃಷ್ಟಿ ಗುಲ್ಬರ್ಗಾ ಹಾಗೂ ಇನ್ನಿತರ ಕಡೆಗಳಲ್ಲಿದೆಯೇ ವಿನಾ ಇನ್ನೂ ಹಾಸನ ಜಿಲ್ಲೆಯ ಜನರ ಕಡೆಗೆ ತಿರುಗಿದಂತೆ ಕಾಣಲಿಲ್ಲ. ಇನ್ನು ನಮ್ಮ ಅನಿಮಲ್ ಹಸ್‌ಬೆಂಡ್ರಿ ಕಾಲೇಜಿನ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಇವರ ವಿಚಾರಗಳು ತುಕೋಳ ಕಮಿಷನ್‌ಗೆ ಏಕೆ ಸರಿಯಾಗಿ ಗಮನಕ್ಕೆ ಬರಲಿಲ್ಲವೋ ಗೊತ್ತಾಗಲಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಇವರು ಸ್ಟ್ರೈಕ್‌ನ್ನು ಕಾಲ್‌ಆಫ್ ಮಾಡುವುದಕ್ಕೆ ಅನುಕೂಲವಾಗಿ ಇಲ್ಲಿ ಒಂದು ನಿರ್ದಿಷ್ಟವಾದ ಹೇಳಿಕೆ ಕೊಡಬೇಕೆಂದು ಅವರಲ್ಲಿ ನಾನು ಪ್ರಾರ್ಥಿಸುತ್ತೇನೆ. ಫ್ರೀ ಯೂನಿವರ್ಸಿಟಿ ಮಾಡಿಕೊಂಡು ಇಂಜನೀಯರಿಂಗ್ ಪದವಿ ಮಾಡಿಕೊಂಡು ಬಂದಿರುವವರಿಗೂ ವೆಟರ್ನರಿ ಡಿಗ್ರಿ ಪಡೆದಿರುವವರಿಗೂ ಒಂದೇ ರೀತಿಯಾದ ವೇತನ ವ್ಯವಸ್ಥೆ ಇರಬೇಕು. ಇದರಲ್ಲಿ ತಾರತಮ್ಯ ಮಾಡುವುದು ಸಮಂಜಸವಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡಿ ಇಲ್ಲಿ ಸತ್ಯಾಗ್ರಹ ಮಾಡುತ್ತಿರುವವರು ತಮ್ಮ ಸತ್ಯಾಗ್ರಹವನ್ನು ವಾಪಸು ತೆಗೆದುಕೊಳ್ಳುವಂತೆ ಅನುಕೂಲವಾಗುವಂತೆ ಸರ್ಕಾರ ಸಹಾಯ ಮಾಡಬೇಕೆಂದು ಅವರಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಿಸತ್ಗಿ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರುವ ವ್ಯವಸಾಯ, ಪಶುಸಂಗೋಪನೆ ಮತ್ತು ಅರಣ್ಯ ಬಾಬುಗಳ ಮಾಗಣಿಯನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ವ್ಯವಸಾಯಕ್ಕೆ ಬಹಳ ಮಹತ್ವ ಕೊಟ್ಟು ಇದರ ಬಗ್ಗೆ ನಿಗಾವಹಿಸಬೇಕು ಎಂದು ಹೇಳುತ್ತಿದ್ದಾರೆ. ಆದರೆ ಅವರ ನಿರೀಕ್ಷೆಯಂತೆ ಸಾಕಷ್ಟು ನಿಗಾವಹಿಸಿಲ್ಲ ಎನ್ನುವುದನ್ನು ಕಂಡು ಬರುತ್ತಿದೆ. ಇದಕ್ಕೆ ಕಾರಣ ಇವರಿಗೆ ಹೆಚ್ಚು ಕೊಡಲಿಕ್ಕೆ ಇಷ್ಟವಿಲ್ಲವೋ ಏನೋ ನನಗೆ ತಿಳಿಯದಾಗಿದೆ. ನಮ್ಮ ಜೀವನಕ್ಕೆ ವ್ಯವಸಾಯ ದಂಧೆ ಎಷ್ಟು ಮಟ್ಟಿಗೆ ಮುಖ್ಯವೋ ಅಷ್ಟೇ ಮುಖ್ಯವಾದುದು ಮೀನಿನ ವ್ಯವಸಾಯ ಸಹಿತ. ಇದರ ಕಡೆಗೆ ಎಷ್ಟು ಹಣ ಒದಗಿಸಬೇಕು ಎಷ್ಟು

ಲಕ್ಷ್ಯಕೊಡಬೇಕು ಅಷ್ಟನ್ನೂ ಕೊಟ್ಟು ಪ್ರೋತ್ಸಹಿಸದೇ ಇರುವುದು ತುಂಬಾ ವಿಷಾದದ ಸಂಗತಿ. ಏಕೆಂದರೆ ಇದು ನಮ್ಮ ಜೀವನಕ್ಕೆ ಸಂಬಂಧಪಟ್ಟ ವಿಷಯ ಬೇಸಾಯಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಅನೇಕರು ಹೇಳಿರುವುದರಿಂದ, ನಾನು ನನಗೆ ಬಹು ಮುಖ್ಯವಾದ ಮೀನು ವ್ಯವಸಾಯದ ಉದ್ಯಮ ಹಾಗೂ ಅರಣ್ಯದ ಬಗ್ಗೆ ಇಲ್ಲಿ ಹೇಳುತ್ತೇನೆ. ಮೀನಿನ ವ್ಯವಸಾಯ ನಮ್ಮ ಅಸ್ತಿತ್ವಕ್ಕೆ ಹಾಗೂ ಉಳಿವಿಗೆ ಒಂದು ವಿಶೇಷವಾದ ಮಾರ್ಗ ಸರ್ಕಾರಿ ಇದರ ಕಡೆಗೆ ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲ. ಇದರಲ್ಲಿ ಬರೀ ಹನ್ನೆರಡು ಕೋಟಿಯವರೆಗೆ ವ್ಯವಸಾಯಕ್ಕಾಗಿಯೇ ಖರ್ಚು ಎಂದು ತೋರಿಸಿದ್ದಾರೆ. ಆದರೆ ಮೀನು ಬಾಬಿಗೆ ಸಾಕಷ್ಟು ಹಣದ ಖರ್ಚು ತೋರಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಪ್ರಾಮುಖ್ಯವಾಗಿರುವುದು, ವ್ಯವಸಾಯ, ಪಶುಸಂಗೋಪನೆ ಮತ್ತು ಅರಣ್ಯ ಇವುಗಳನ್ನೇ ಕೇಂದ್ರೀಕೃತವಾಗಿ ಇಟ್ಟುಕೊಂಡು ಇವುಗಳ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮೀನು ಒಂದು ಪೌಷ್ಟಿಕವಾದ ಆಹಾರ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಮೀನನ್ನು ತಿನ್ನುವವರು ಬಹಳ ಹುಷಾರಿ ಎಂದು ಹೇಳುತ್ತಾರೆ. ಇದೇ ರೀತಿ ಇಂದು ಜಪಾನಿನವರು ಹೆಚ್ಚು ಮೀನು ತಿನ್ನುವವರು ಎಂದೂ ಕೇಳುತ್ತೇವೆ ಮೀನನ್ನು ತಿನ್ನದೇ ಹೋದರೆ ಸಾಕಷ್ಟು ಪುಷ್ಟಿಯಾದ ಆಹಾರ ಸಿಗುವುದಿಲ್ಲ ಎನ್ನುತ್ತಾರೆ. ಅಕ್ಕಿ ಒಂದು ಬ್ಯಾಲೆನ್ಸ್ ಡಯಟ್ ಆಗುವುದಿಲ್ಲ. ಅನ್ನದ ಜೊತೆಗೆ ಮೀನು ಉಪಯೋಗಿಸಿದರೆ ಇದು ಒಂದು ರೀತಿಯಾದ ಬ್ಯಾಲೆನ್ಸ್ ಡಯೆಟ್ ಆಗುತ್ತದೆ. ನಮ್ಮ ಕಡೆ ಮೀನು ತಿಂದವರು ಹುಷಾರಿ ಇರುತ್ತಾರೆ ಎಂದು ಹೇಳುತ್ತಾರೆ.

ಶ್ರೀ ಎ. ಪಿ. ಅಪ್ಪಣ್ಣ :—ಮೀನು ತಿಂದರೆ ಮೆದಳು ಜಾಸ್ತಿಯಾಗುತ್ತವೆ.

ಶ್ರೀ ಎಂ. ಎಂ. ಜಾಲಿಸತ್ಗಿ ;—ಇನ್ನು ಮೇಲೆ ನೀವು ಸಹ ತಿನ್ನುವುದಕ್ಕೆ ಜಾಸ್ತಿ ಮಾಡಿ ಮೀನು ತಿಂದವರು ಹುಷಾರಿ ಎಂದು ಹೇಳುವುದು ತೆಗಳಲಿಕ್ಕೋ ಏನೋ ಗೊತ್ತಿಲ್ಲ. ಆದರೆ ಈ ಹೊತ್ತು ಮೀನನ್ನು ರಫ್ತು ಮಾಡುತ್ತಿರುವುದರಿಂದ ನಮಗೆ ಡಾಲರ್ ಅರ್ನಿಂಗ್ ಮಾಡುವುದಕ್ಕೆ ಅವಕಾಶವಾಗಿದೆ. ಮೀನಿನ ರಫ್ತಿನಿಂದ ನಮ್ಮ ದೇಶಕ್ಕೆ ಹೊನ್ನಿನ ಹೊಳೆಯೇ ಹರಿದು ಬರುತ್ತಿದೆ ಎಂದು ಹೇಳಬಹುದು. ದೇವರೇ ನಿರ್ಮಾಣ ಮಾಡಿರತಕ್ಕಂಥ ಮೀನನ್ನು ಹಿಡಿಯುವದು ಕಷ್ಟ ಇಲ್ಲ. ಸುಲಭವಾಗಿ ಹಿಡಿದು ತಿನ್ನಬಹುದು. ಈ ಹೊತ್ತು ಒಂದು ಬೆಳೆ ಬೆಳೆಯಬೇಕಾದರೆ ನೀರಿನ ಆಶ್ರಯ ಬೇಕಾಗುತ್ತವೆ. ಕ್ರಿಮಿಕೀಟಗಳ ಹಾವಳಿ ಇರುತ್ತದೆ. ಮತ್ತು ಬೆಳೆ ಬರಬೇಕಾದರೆ ಮೂರು ತಿಂಗಳು ಕಾಯಬೇಕಾಗುತ್ತದೆ. ಆದರೆ ಮೀನಿನ ಉದ್ಯಮದಲ್ಲಿ ಈ ಕಷ್ಟವಿಲ್ಲ. ಹೋಗಿ ಹಿಡಿದುಕೊಂಡು ಬಂದು ತಿನ್ನಬಹುದು. ಮೀನಿನ ಉದ್ಯಮಕ್ಕೆ ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕೆಂದು ಶ್ರೀ ದಯಾನಂದ ನಾಡಕರ್ಣಿ ಅವರು ಬಹಳವಾಗಿ ಹೇಳಿದ್ದಾರೆ, ಮೀನಿನ ಉದ್ಯಮದಲ್ಲಿ ಜಪಾನ್ ದೇಶದವರು ಬಹಳ ಮುಂದೆ ಇದ್ದಾರೆ. ನಮ್ಮ ರಾಜ್ಯದಲ್ಲಿ ೪೦೦ ಮೈಲಿಗಳವರೆಗೆ ಕರಾವಳಿ ಪ್ರದೇಶದಲ್ಲಿ ಮೀನನ್ನು ಹಿಡಿಯುವುದಕ್ಕೆ ಅವಕಾಶ ಇದೆ ಈ ಒಂದು ಉದ್ಯಮಕ್ಕೆ ಸರ್ಕಾರದವರು ಕೇವಲ ೨ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ೧೨ ಕೋಟಿ ರೂಪಾಯಿಗಳವರೆಗೆ ವಿನಿಯೋಗಿಸಬಹುದೆಂದು ಎಕ್ಸ್‌ಪರ್ಟ್ ಆದವರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಈ ಹೊತ್ತು ೧೨ ಕೋಟಿ ರೂಪಾಯಿಗಳನ್ನು ಈ ಉದ್ಯಮದಲ್ಲಿ ತೊಡಗಿಸಿದರೆ ಮುಂದಿನ ವರ್ಷ ೧೨ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತದೆ. ಇಷ್ಟೊಂದು ವರಮಾನ ತರುವಂತಹ ಉದ್ಯಮ ಇನ್ನೊಂದು ಇಲ್ಲ. ಆದರೆ ಸರ್ಕಾರದವರು ಈ ಉದ್ಯಮದ ಬಗ್ಗೆ ಅಷ್ಟೊಂದು ನಿಗಾವಹಿಸುತ್ತಿಲ್ಲ ನಿದ್ದೆ ಹೋದವರನ್ನು ಬೇಕಾದರೆ ಎಬ್ಬಿಸಬಹುದು, ಆದರೆ ನಿದ್ದೆ ಹೋದಂತೆ ಸೋಗು ಮಾಡುವವರನ್ನು ಎಬ್ಬಿಸುವುದು ಕಷ್ಟದ ಕೆಲಸ. ಈ ಒಂದು ಉದಾಹರಣೆಯನ್ನು ಈ ಸರ್ಕಾರಕ್ಕೆ ಹೋಲಿಸಬಹುದು. ಡಾಲರ್ ಅರ್ನಿಂಗ್ ಮಾಡತಕ್ಕಂಥ ಉದ್ಯಮದ ಬಗ್ಗೆ ಸರ್ಕಾರದವರು ನಿಗಾ ಕೊಡುತ್ತಿಲ್ಲ. ಈ ಉದ್ಯಮದಂದ ಜನರಿಗೆ ಪೌಷ್ಟಿಕವಾದಂಥ ಆಹಾರವು ಸಹ ಸಿಗುತ್ತದೆ. ಈ ಹೊತ್ತು ಸರ್ಕಾರದವರು ಸಣ್ಣ ಕಾರು ಯೋಜನೆಗೆ ಹಣ ಇಲ್ಲವೆಂದು ಕೇಂದ್ರ ಸರ್ಕಾರದ ಕಡೆ ನೋಡುತ್ತಿದ್ದಾರೆ. ಈ ಮೀನಿನ ಉದ್ಯಮಕ್ಕೆ ೧೨ ಕೋಟಿ ರೂಪಾಯಿಗಳನ್ನು ತೊಡಗಿಸಿದರೆ ಮುಂದಿನ ವರ್ಷವೇ ೧೨ ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ಈ ಹಣವನ್ನೇ ಬೇಕಾದರೆ ಸಣ್ಣ ಕಾರು ಯೋಜನೆಗೆ ಉಪಯೋಗಿಸಬಹುದು. ಮೀನುಗಾರಿಕೆ ಬಗ್ಗೆ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿದ್ದರೆ ಚನ್ನಾಗಿರುತ್ತಿತ್ತು ಇಂದು ನನ್ನ ಅಭಿಪ್ರಾಯ. ಇದು ಬಹಳ ಮುಖ್ಯವಾದ ಉದ್ಯಮವಾದ್ದರಿಂದ ಇದಕ್ಕೇ ಎಂದು ಪ್ರತ್ಯೇಕ ಇಲಾಖೆ ಮಾಡಿ, ಆ ಇಲಾಖೆಗೆ ಸಾಕಷ್ಟು ಹಣವನ್ನು ಒದಗಿಸಿದರೆ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಅವಕಾಶವಾಗುತ್ತಿತ್ತು. ೧೯೬೪ನೇ ಇಸವಿಯಲ್ಲಿ ಮಳೆ ಇಲ್ಲದೆ ಬಹಳ ಕಷ್ಟದ ಪರಿಸ್ಥಿತಿ ಬಂದಿತ್ತು. ಆ ಸಮಯದಲ್ಲಿಯೇ ಸರ್ಕಾರದವರು ೧೨ ಕೋಟಿ ರೂಪಾಯಿಗಳನ್ನು ಈ ಉದ್ಯಮಕ್ಕೆ ತೊಡಗಿಸಿದರೆ ಆಹಾರದ ಕೊರತೆಯನ್ನು ಬಹಳಷ್ಟು ಕಡಮೆ ಮಾಡಬಹುದಾಗಿತ್ತು.

(ಶ್ರೀ ಎಂ. ಎಂ. ಜಾಲಿಸತ್ಗಿ)

ಮೀನಿನ ಉದ್ಯಮದ ಬಗ್ಗೆ ನಮ್ಮ ಸರ್ಕಾರದವರು ಏತಕ್ಕೆ ಲಕ್ಷ್ಯಕೊಡುತ್ತಿಲ್ಲವೋ ನನಗೆ ತಿಳಿಯುತ್ತಿಲ್ಲ. ಡಾಲರ್ ಅರ್ನಿಂಗ್ ಆಗತಕ್ಕಂತಹ ಈ ಉದ್ಯಮದ ಬಗ್ಗೆ ಕೇರಳ ಮದ್ರಾಸ್ ಮತ್ತು ಮುಂಬೈ, ರಾಜ್ಯಗಳು ಎಷ್ಟು ಪ್ರೋತ್ಸಾಹ ಕೊಡುತ್ತಾ ಇವೆ ಎಂಬುದನ್ನು ನಮ್ಮ ಸರ್ಕಾರದವರು ನೋಡಿಯೂ ಕೂಡ ಏತಕ್ಕೆ ನಮ್ಮ ರಾಜ್ಯದಲ್ಲಿ ಪ್ರೋತ್ಸಾಹ ಕೊಡುತ್ತಿಲ್ಲವೋ ನನಗೆ ತಿಳಿಯದಾಗಿದೆ. ಇದೇ ನನಗೆ ಕೊರಗಾಗಿದೆ. ಬಹಳಷ್ಟು ಕಲ್ಯಾಣ ಕಾರ್ಯಗಳನ್ನು ಮಾಡುತ್ತೇವೆಂದು ಹೇಳುವ ಈ ಸರ್ಕಾರದವರು ಇದರ ಅಭಿವೃದ್ಧಿಗೂ ಕೂಡ ಗಮನ ಕೊಡಬೇಕು. ಇವತ್ತು ನಾನಾ ಉದ್ಯಮದ ಬಗ್ಗೆ ಸರ್ಕಾರದವರು ೧೫೦ ಕೋಟಿ ರೂಪಾಯಿಗಳವರೆಗೆ ಬಂಡವಾಳ ತೊಡಗಿಸಿದ್ದಾರೆ. ಆದರೆ ಯಾವ ಉದ್ಯಮದಲ್ಲಿಯೂ ಕೂಡ ಲಾಭ ಬರುತ್ತಿಲ್ಲ. ಇವತ್ತು ರೆಂಕೋ ಕಾರ್ಖಾನೆಯಲ್ಲಿ ಲಾಭ ಬರುತ್ತಿಲ್ಲವೆಂಬ ಕಾರಣದಿಂದ ಅದನ್ನು ಖಾಸಗೀಯವರಿಗೆ ಕೊಡುವುದಕ್ಕೆ ಹೊರಟಿದ್ದಾರೆ. ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಯಲ್ಲಿ ನಷ್ಟವಾಗುತ್ತಿದೆ. ಆದರೂ ಕೂಡ ಕೋಟ್ಯಾಂತರ ರೂಪಾಯಿಗಳನ್ನು ಆ ಉದ್ಯಮಗಳ ಬಗ್ಗೆ ಖರ್ಚು ಮಾಡುತ್ತಿದ್ದಾರೆ. ಆದರೆ ಲಾಭ ತರುವಂತಹ ಈ ಉದ್ಯಮದ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಡುತ್ತಿಲ್ಲ. ಈ ವರ್ಷ ೧೨ ಕೋಟಿ ರೂಪಾಯಿಗಳನ್ನು ಈ ಉದ್ಯಮಕ್ಕೆ ತೊಡಗಿಸಿದರೆ ಮುಂದಿನ ವರ್ಷವೇ ೧೨ ಕೋಟಿ ರೂಪಾಯಿಗಳಷ್ಟು ಲಾಭ ಬರುತ್ತದೆ. ಅಂತಹ ಉದ್ಯಮದ ಬಗ್ಗೆ ಸರ್ಕಾರ ಕಣ್ಣು ತೆರೆಯಬೇಕೆಂದು ಹೇಳುತ್ತೇನೆ. ಇದೇ ವಿಚಾರದಲ್ಲಿ ಶ್ರೀ ದಯಾನಂದ ನಾಡಕರ್ಣಿಯವರು ಸರ್ಕಾರಕ್ಕೆ ಕಿವಿಹಿಂಡಿ ಹೇಳಿದ್ದಾರೆ. ಆದರೂ ಪ್ರಯೋಜನವಾಗಿಲ್ಲ. ಈ ಉದ್ಯಮದ ಬಗ್ಗೆ ಒಂದು ಪ್ರತ್ಯೇಕ ಇಲಾಖೆ ಮಾಡಿ ಒಬ್ಬ ಮಂತ್ರಿಯನ್ನು ನೇಮಕ ಮಾಡಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ :—ಈಗಿರುವ ಮಂತ್ರಿಗಳಿಗೆ ಪ್ರಮೋಷನ್ ಕೊಡಬೇಕೆಂದು ಹೇಳುತ್ತೀರಾ.

ಶ್ರೀ ಎಂ. ಎಂ. ಜಾಲಿಸತ್ಗಿ :—ಲಕ್ಷ್ಯಕೊಟ್ಟು ಕೆಲಸ ಮಾಡಿದರೆ ನಾವು ಯಾರನ್ನೂ ತೆಗಳುವುದಿಲ್ಲ. ಈ ಹೊತ್ತು ಸರ್ಕಾರದವರು ದುಡ್ಡು ಇಲ್ಲ ಎಂದು ಹೇಳುತ್ತಾರೆ. ಮತ್ತು ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇದೇ ಕಾರಣ ಇಟ್ಟುಕೊಂಡು ಮತ್ಸ್ಯೋದ್ಯಮದ ಅಭಿವೃದ್ಧಿ ಬಗ್ಗೆ ಒಂದು ಕಾರ್ಪೊರೇಷನ್ ಮಾಡಿ ಡಿಬೆಂಚರ್ ಸಾಲ ಎತ್ತಲು ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ ಆ ರೀತಿ ಮಾಡುವುದಿದ್ದರೆ ಕೂಡಲೇ ಮಾಡಲಿ. ಪಕ್ಷಾಂತರ ಮಾಡುವವರಿಗೆ ಅನುಕೂಲ ಮಾಡಿಕೊಡಲು ಏನಾದರೂ ನಿಧಾನ ಮಾಡುತ್ತಿದ್ದಾರೋ ಗೊತ್ತಿಲ್ಲ. ನೆರೆ ರಾಜ್ಯಗಳು ಈ ಉದ್ಯಮದ ಬಗ್ಗೆ ಪ್ರಗತಿ ಹೊಂದಿರುವಂತೆ ನಮ್ಮ ರಾಜ್ಯವು ಅಭಿವೃದ್ಧಿ ಹೊಂದಬೇಕಾದರೆ ಕೂಡಲೇ ಹೆಚ್ಚು ಹಣ ಒದಗಿಸಬೇಕು. ಮುಖ್ಯ ಮಂತ್ರಿಗಳಿಗೆ ಈ ವಿಷಯ ಹೇಳಬೇಕೆಂದು ಇದ್ದೆ, ಆದರೆ ಅವರು ಈಗ ಇಲ್ಲಿ ಇಲ್ಲ ವ್ಯವಸಾಯ ಕ್ಷೇತ್ರಕ್ಕೆ ಹಣ ಒದಗಿಸುವಂತೆ ಈ ಕ್ಷೇತ್ರಕ್ಕೂ ಹೆಚ್ಚು ಹಣ ಒದಗಿಸಿದರೆ ಬಡವರಿಗೆ ಉದ್ಯೋಗ ದೊರಕುವುದಲ್ಲದೆ ಇಡಿ ಶ್ರೀಸಾಮಾನ್ಯರಿಗೆ ಒಳ್ಳೆಯ ಆಹಾರ ಸಿಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಫಾರೆಸ್ಟ್ ಎಂದರೆ ಅದು ನಮ್ಮ ಜೀವಾಳದ ಪ್ರಶ್ನೆಯಾಗಿದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡಾ ೮೯ ರಷ್ಟು ಫಾರೆಸ್ಟ್ ಇದೆ. ಇಂಡಿಯನ್ ಫಾರೆಸ್ಟ್ ಪಾಲಿಸಿ ಪ್ರಕಾರ ಶೇಕಡಾ ೬೦ ರಷ್ಟು ಫಾರೆಸ್ಟ್ ಇರಬೇಕೆಂದು ಇದೆ. ಆದ್ದರಿಂದ ಈ ಫಾರೆಸ್ಟ್‌ನಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು ೫ ಲಕ್ಷ ಎಕರೆ ಫಾರೆಸ್ಟ್ ಜಮೀನನ್ನು ವ್ಯವಸಾಯಕ್ಕೆ ಬಿಡುಗಡೆ ಮಾಡಿಕೊಡುವುದಕ್ಕೆ ಬರುತ್ತದೆ. ಆ ರೀತಿ ಮಾಡಿಕೊಟ್ಟರೆ ಉತ್ತರ ಕನ್ನಡ ಜಿಲ್ಲೆಯ ಜನಗಳಿಗೆ ಅನುಕೂಲವಾಗುತ್ತದೆ. ನಮ್ಮ ಮೈಸೂರು ರಾಜ್ಯವನ್ನು ಎರಡು ಭಾಗ ಮಾಡಬಹುದು. ಒಂದು ಅತಿ ವೃಷ್ಟಿಯಾಗುವ ಪ್ರದೇಶ. ಇನ್ನೊಂದು ಅನಾವೃಷ್ಟಿಯಾಗುವ ಪ್ರದೇಶ ಅದರ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಆಗುತ್ತದೆ. ಆ ಕಾರಣ ನಮ್ಮಲ್ಲಿ ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಬಿಡುಗಡೆ ಮಾಡುವುದಾದರೆ ಅದರಲ್ಲಿ ಹೆಚ್ಚು ಆಹಾರ ಧಾನ್ಯವನ್ನು ಉತ್ಪಾದನೆ ಮಾಡಿ ಜನಗಳಿಗೆ ಒದಗಿಸಬಹುದು. ಅಷ್ಟು ಮಾತ್ರವಲ್ಲದೆ ೫ ಲಕ್ಷ ಎಕರೆ ಅರಣ್ಯ ಜಮೀನನ್ನು ವ್ಯವಸಾಯಕ್ಕೆ ಬಿಡುಗಡೆ ಮಾಡಿಕೊಟ್ಟರೆ ಉತ್ತರ ಕನ್ನಡ ಜಿಲ್ಲೆ ಧಾನ್ಯದ ಕಣಜವಾಗುತ್ತದೆ. ಈ ೫ ಲಕ್ಷ ಎಕರೆಯಲ್ಲಿ ೨ ಲಕ್ಷ ಎಕರೆ ಬತ್ತವನ್ನು ಬೆಳೆಯಬಹುದು. ಒಂದು ಲಕ್ಷ ಎಕರೆಯಲ್ಲಿ ರಬ್ಬರ್ ಬೆಳೆಯಬಹುದು ಒಂದು ಲಕ್ಷ ಎಕರೆಯಲ್ಲಿ ಹಣ್ಣು ಬೆಳೆಯಬಹುದು. ಒಂದು ಲಕ್ಷ ಎಕರೆಯಲ್ಲಿ ಕೋಕೋ ಬೆಳೆಯಬಹುದು; ಆಯಿಲ್ ಸೀಡ್ಸ್ ಬೆಳೆಯಬಹುದು. ಈ ರೀತಿಯಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಫಾರೆಸ್ಟ್ ಜಮೀನಿನಿಂದ ಉತ್ಪಾದನೆ ಮಾಡುವುದಕ್ಕೆ ಅವಕಾಶ ಇದೆ. ಅಲ್ಲಿ ಬೀಳುವಂಥ ಮಳೆಯ ನೀರು ಎಲ್ಲವೂ

ಉಪಯೋಗವಾಗದೆ ಸಮುದ್ರಕ್ಕೆ ಹರಿದು ಹೋಗುತ್ತದೆ. ಸರ್ಕಾರದವರು ೧೯೬೬ನೇ ಇಸವಿಯಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಂಜೂರು ಮಾಡಿದ್ದರು. ಆದರೆ ಅದನ್ನು ಕಾರ್ಯಗತ ಮಾಡಲಿಲ್ಲ. ಮಾನ್ಯ ಆರ್ಥಿಕ ಮಂತ್ರಿಗಳು ೧೯೬೭-೬೮ನೇ ಇಸವಿಯ ತಮ್ಮ ಬಡ್ಜೆಟ್ ಭಾಷಣದಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಲಿಫ್ಟ್ ಇರಿಗೇಷನ್ ಯೋಜನೆ ಮಂಜೂರಾಗಿದೆ ಎಂದು ಹೇಳಿದ್ದಾರೆ, ಅಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ ನೀರನ್ನು ಉಪಯೋಗ ಮಾಡಿಕೊಂಡರೆ ೩ ಬೆಳೆ ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಆದರೆ ಅಲ್ಲಿ ಈ ಯೋಜನೆಗಳನ್ನು ಸರ್ಕಾರದವರು ಕೈಗೊಳ್ಳದೆ ನಾವು ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿ, ನೀರನ್ನು ಉಪಯೋಗ ಮಾಡಿ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶವಾಗದೆ ನಾವು ತೊಂದರೆಯನ್ನು ಅನುಭವಿಸುತ್ತಿದ್ದೇವೆ. ನಮ್ಮಲ್ಲಿರತಕ್ಕಂಥ ಸಿಹಿ ನೀರಿನ ಸರೋವರಗಳು ಸಮುದ್ರಕ್ಕೆ ಹರಿದು ಹೋಗುತ್ತಿವೆ. ಅದನ್ನು ಉಪಯೋಗ ಮಾಡಬೇಕೆಂದು ಶ್ರೀಮಾನ್ ಆಲೂರು ಹನುಮಂತಪ್ಪನವರು ಮೈನರ್ ಇರಿಗೇಷನ್ ಡೆಪ್ಯುಟಿ ಮಿನಿಸ್ಟರಾಗಿದ್ದಾಗ ನಮ್ಮ ಜಿಲ್ಲೆಗೆ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಂಜೂರು ಮಾಡಿದ್ದರು. ಅದಕ್ಕೆ ಪ್ಲಾನು ಮತ್ತು ಎಸ್ಟಿಮೇಟನ್ನು ತಯಾರು ಮಾಡಲಾಗಿತ್ತು. ೧೯೬೬ನೇ ಇಸವಿ ಹೋಗಿ ೧೯೭೦ನೇ ಇಸವಿ ಬಂದರೂ ಕೂಡ ನಮ್ಮ ಜಿಲ್ಲೆಯ ಲಿಫ್ಟ್ ಇರಿಗೇಷನ್ ಯೋಜನೆ ಕಾರ್ಯಗತವಾಗಲಿಲ್ಲ.

ಶ್ರೀ ಆಲೂರು ಹನುಮಂತಪ್ಪ :—ಈಗಲೂ ಸರ್ಕಾರದವರು ಲಿಫ್ಟ್ ಇರಿಗೇಷನ್ ಯೋಜನೆಯನ್ನು ಕೈ ಬಿಟ್ಟಿಲ್ಲ. ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಈ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿ ಇಡೀ ರಾಜ್ಯಾದ್ಯಂತ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಾಡಿದ್ದಾರೆ.

ಶ್ರೀ ಎಂ. ಪಿ. ಜಾಲಿಸತ್ಗಿ :—ಶ್ರೀಮಾನ್ ಆಲೂರು ಹನುಮಂತಪ್ಪನವರು ನಮ್ಮ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಬರುವ ಮೇ ಆಖೈರಿನಲ್ಲಿ ೧೦ ಸಾವಿರ ಎಕರೆ ಜಮೀನನ್ನು ಒದಗಿಸುತ್ತೇನೆ. ಎಂದು ಹೇಳಿದ್ದರು. ಆದರೆ ಒಂದು ವರ್ಷವಾದರೂ ಆ ಒಂದು ಕೆಲಸವನ್ನು ಮಾಡಲಿಲ್ಲ ಟುಮಾರೋ ಕಂಸ್‌ನೆವರ್ ಎನ್ನುವ ಹಾಗೆ ಮುಂದಿನ ಬಡ್ಜೆಟ್ಟಿನಲ್ಲಿಯೂ ಇದೇ ರೀತಿ ಹೇಳುತ್ತಾರೆಯೋ ಏನೋ ಗೊತ್ತಿಲ್ಲ.

ನಮ್ಮಲ್ಲಿ ಬೇಕಾದಷ್ಟು ಫಾರೆಸ್ಟನ್ನು ಬೆಳೆಸಿದ್ದಾರೆ ನಮ್ಮ ಮನೆ ಜಮೀನಿನ ಪಕ್ಕದವರೆಗೂ ಕಾಡು, ಯೂಕಲಿಫ್ಟ್ಸ್ ಮರಗಳು ಬೆಳವಣಿಗೆಯಾಗಿ ಬಂದಿವೆ. ನಮ್ಮಲ್ಲಿ ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಅವರು ನೋಡಿ ನಾವು ಎಲ್ಲಿಯವರೆಗೂ ಫಾರೆಸ್ಟ್ ತಂದಿದ್ದೇವೆ ಎಂದು ತೋರಿಸುತ್ತಿದ್ದಾರೆ. ಹಿಂದೆ ನಮ್ಮ ಜಿಲ್ಲೆಯಲ್ಲಿ ಒಂದು ರೇಯಾನ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದರು. ಈಗ ಅದು ಚಿತ್ರದುರ್ಗದಲ್ಲಿ ಆಗುತ್ತದೆ ಎಂದು ನಮಗೆ ತಿಳಿದು ಬಂದಿದೆ. ಅದಕ್ಕೆ ಬೇಕಾದಂತಹ ಪಲ್ಪ್ ಎಲ್ಲಿಂದ ತರುತ್ತಾರೆ ? ನಮ್ಮ ಜಿಲ್ಲೆಗೆ ಬರುವಂಥಾದ್ದು ಬೇರೆ ಜಿಲ್ಲೆಗೆ ಹೋಗುವುದಕ್ಕೆ ಕಾರಣವೇನು? ಇದು ಯಾವ ನ್ಯಾಯ ? ಈಗ ನಮ್ಮಲ್ಲಿ ಬೇಕಾದಷ್ಟು ಯೂಕಲಿಫ್ಟ್ಸ್ ಮರಗಳನ್ನು ಬೆಳೆಸಿದ್ದಾರೆ. ಅದನ್ನು ಬೇರೆ ಯಾರಿಗೊ ಪೇಪರ್ ಮಿಲ್ಲಿಗೆ ಕೊಡುತ್ತಾರೆಂದು ತಿಳಿದು ಬಂದಿದೆ. ನಮ್ಮ ನಾಡಿನಲ್ಲಿ ಬೆಳೆಯುವಂಥಾದ್ದು ನಮ್ಮವರಿಗೆ ಉಪಯೋಗ ಮಾಡಬೇಕು. ಅದನ್ನು ಬಿಟ್ಟು ನಮ್ಮಲ್ಲಿ ಅರಣ್ಯ ಬೆಳೆಸಿ ಅದನ್ನು ಬೇರೆ ಯಾರಿಗೊ ಫಾರೆಸ್ಟ್ ಇಂಡಸ್ಟ್ರಿ ಸ್ಟಾರ್ಟ್ ಮಾಡುವುದಕ್ಕೆ ಕೊಟ್ಟು ಬೇರೆಯವರ ಕೊಬ್ಬನ್ನು ಬೆಳೆಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ ?

ಇನ್ನೊಂದು ವಿಷಯ ಸರ್ಕಾರದವರು ಫಾರೆಸ್ಟ್ ಅಭಿವೃದ್ಧಿಗಾಗಿ ಒಂದು ಫಾರೆಸ್ಟ್ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ಯಾರಿಗೋ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಇದನ್ನು ಮಾಡಬೇಡಿ. ಯಾರೋ ತಮ್ಮ ಬಾಲಬಡುಕರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಕೆಲಸವನ್ನು ಮಾಡಬೇಡಿ. ಫಾರೆಸ್ಟ್ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸವನ್ನು ಮಾಡುವಂತೆ ವ್ಯವಸ್ಥೆ ಮಾಡಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6 P. M.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇದ್ದಂತಹ ಬೇಡಿಕೆಯನ್ನು ಅನುಮೋದಿಸುತ್ತಾ, ಒಂದರೆಡು ವಿಚಾರಗಳನ್ನು ಹೇಳಬಯಸುತ್ತೇನೆ. ಈ ವಕ್ಕಲುತನ ಖಾತೆಯನ್ನು ನಾವು ಎರಡು ಭಾಗವಾಗಿ ವಿಂಗಡಿಸಬಹುದು. ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ನಾವು ವಕ್ಕಲುತನದ ಪ್ರಗತಿಯನ್ನು ಸಾಧಿಸಿದರೆ, ಆಹಾರದ ಪ್ರಗತಿಯನ್ನು ಸಾಧಿಸಲು ಸಾಧ್ಯವೆಂಬುದನ್ನು ಹಲವು ಸದಸ್ಯರು ಹೇಳಿದ್ದಾರೆ. ಅದಕ್ಕೆ ನಾನೂ ಕೂಡ ಒಪ್ಪಿಗೆಯನ್ನು ಕೊಡುತ್ತೇನೆ. ನಮ್ಮ ವಕ್ಕಲುತನವು ಆಧುನಿಕ ರೀತಿಯಲ್ಲಿ ಸುಧಾರಣೆಯಾಗಬೇಕಾದರೆ, ಎರಡು ಮುಖ್ಯವಾದಂತಹ ಪಾತ್ರಗಳಿವೆ. ರೈತರಿಗೆ ಸರಿಯಾದಂತಹ ತರಬೇತಿಯನ್ನು ಕೊಡುವಂತಹ ಸಿಬ್ಬಂದಿ ಮತ್ತು ಆಧುನಿಕ ಸಲಕರಣೆಗಳನ್ನು ಉಪಯೋಗಮಾಡಲು ಅವರನ್ನು ತರಬೇತಿ ಮಾಡುವಂತದ್ದು. ಈಗ ವಕ್ಕಲುತನದ ಖಾತೆಯಲ್ಲಿ ಒಂದು ತರದ ಜಿಗುಪ್ಸೆಯುಂಟಾಗಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಮುಖ್ಯವಾದಕಾರಣ ಅವರ ಸಿನಿಯಾರಿಟಿ ಪ್ರಶ್ನೆ. ಈ ಡೆಮೊನ್‌ಸ್ಟ್ರೇಟರ್ಸ್ ಎನಿಸಿದ್ದಾರೆ, ಅವರ ಪ್ರಮೋಷನ್ಸ್ ಇತ್ಯಾದಿ, ೧೪ ವರ್ಷವಾದರೂ ಇನ್ನೂ ಬಗೆಹರಿಯದಿರುವುದರಿಂದ, ಸಿಬ್ಬಂದಿಯವರಲ್ಲಿ ಒಂದು ರೀತಿಯ ಜಿಗುಪ್ಸೆ ಉಂಟಾಗಿದೆ ಮತ್ತು ಸರ್ಕಾರದವರು ಅವರಿಗೆ ಏನೇನ ಸೌಲಭ್ಯಗಳನ್ನು ಒದಗಿಸ-ಬೇಕೋ ಅದನ್ನು ಒದಗಿಸಿಲ್ಲಾ, ಮಾಡಿಲ್ಲ. ಯಾವ ಮನುಷ್ಯ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಬೇಕೋ ಅದಕ್ಕೆ ತಕ್ಕಂತೆ ಪ್ರೋತ್ಸಾಹ ಅವನಿಗೆ ಕೊಡಬೇಕಾಗುತ್ತದೆ. ಅಂಥ ಪ್ರೋತ್ಸಾಹ ಇಲ್ಲದಿದ್ದರೆ ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲ. ಇದ್ದರಿಂದ ಅವರ ಬೇಡಿಕೆ ಏನಿದೆ, ಅದು ನೀಜವಾದ ಬೇಡಿಕೆ. ಅದರ ಬಗ್ಗೆ ಕೋರ್ಟಿನಲ್ಲೂ ಹೇಳಿದ್ದಾರೆ. ಫೈನಲ್ ಲಿಸ್ಟ್ ಮಾಡಿರಿ ಎಂದು ಹೇಳಿದ್ದಾರೆ. ಇಷ್ಟಾದರೂ ಲಿಸ್ಟ್ ಇನ್ನೂ ಇಂಪ್ಲಿಮೆಂಟ್ ಆಗದಿರುವುದು, ನಮ್ಮ ವಕ್ಕಲುತನದ ಅಭಿವೃದ್ಧಿಗೆ ಒಂದು ಕೊರತೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದ್ದರಿಂದ ಈ ಖಾತೆಯನ್ನು ವಹಿಸಿಕೊಂಡ ಮಂತ್ರಿಯವರು ಇದನ್ನು ಬಹಳ ತ್ವರಿತವಾಗಿ ಮಾಡಬೇಕು. ಆದರಿಂದ ನಮ್ಮ ರೈತರಿಗೂ ಹೆಚ್ಚಿನ ಅನುಕೂಲವಾಗುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಹೊತ್ತು ನಾವು ಒಕ್ಕಲುತನ ಬಗ್ಗೆ ಬಹಳವಾಗಿ ಹೇಳುತ್ತಿದ್ದೇವೆ. ಇದು ರೈತರ ದೇಶ ಇದು ರೈತರ ನಾಡು, ಹಾಗೆ ಹೀಗೆ ಇತ್ಯಾದಿ. ಇಲ್ಲಿಯವರೆಗೆ ರೈತರ ಏಳಿಗೆಗಾಗಿ ಸಾಕಷ್ಟು ಖರ್ಚು ಮಾಡಿದ್ದೇವೆ. ಈಗ ಏನು ಖರ್ಚು ಮಾಡಿದ್ದೇವೆ, ಅದಕ್ಕೆ ಪ್ರತಿಫಲ ಬರುತ್ತಿದೆ. ಇಷ್ಟಕ್ಕೆ ನಾವು ತೃಪ್ತಿ ಪಟ್ಟುಕೊಳ್ಳಬಾರದು. ನಾವು ಇನ್ನೂ ಸಾಕಷ್ಟು ಕಾರ್ಯಗಳನ್ನು ಮಾಡಬೇಕಾಗಿದೆ. ಈ ದೆಸೆಯಲ್ಲಿ ನಾನು ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಈ ವಕ್ಕಲುತನ ಇಲಾಖೆಯಲ್ಲಿ ಕೆಲವು ಡೆಮಾನ್‌ಸ್ಟ್ರೇಟರ್ಸ್, ಅಗ್ರಿಕಲ್ಚರಲ್ ಅಸಿಸೆಂಟ್ಸ್ ಮತ್ತು ವೆಟರಿನರಿ ಕ್ಲಾಸ್ I ಪೋಸ್ಟುಗಳು ಹಾಗೆಯೆ ಉಳಿದಿವೆ. ಅವುಗಳನ್ನು ತೀವ್ರವಾಗಿ ಭರ್ತಿ ಮಾಡಬೇಕು. ಈ ಹೊತ್ತು ನಾವು ಹೈಬ್ರಿಡ್ ಯುಗದಲ್ಲಿದ್ದೇವೆ. ಪ್ರತಿಯೊಂದು ಮಾತಿಗೂ, ಹೈಬ್ರಿಡ್ ಜೋಳ, ಹೈಬ್ರಿಡ್ ಮುಸಕಿನ ಜೋಳ ಹೀಗೆ ನಾನಾ ರೀತಿಯ ಹೈಬ್ರಿಡ್‌ಗಳನ್ನು ತಯಾರು ಮಾಡುತ್ತಿದ್ದೇವೆ. ಅವುಗಳ ಪ್ರಗತಿ ಏನೋ ಚೆನ್ನಾಗಿದೆ. ಆದರೆ ಇದರ ಸಂಬಂಧದಲ್ಲಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ, ಇದರ ಕ್ವಾಲಿಟಿ ಕೂಡ ಇಂಪ್ರೂವ್‌ಮಾಡುವದಕ್ಕೆ ಹೆಚ್ಚಿನ ಗಮನ ಕೊಡಬೇಕು. ಈಗ ಹೈಬ್ರಿಡ್ ಜೋಳವಾಗಲಿ ಮುಸಕಿನ ಜೋಳವಾಗಲಿ, ಬಹುದಿನ ಇಡುವ ಪರಿಸ್ಥಿತಿಯಲ್ಲಿಲ್ಲ. ಎರಡು ಮೂರು ತಿಂಗಳು ಇಟ್ಟರೆ ಅವುಗಳು ಕೆಡುತ್ತವೆ. ಮೊನ್ನೆ ಬೆಳೆದಂತಹ ಜೋಳ ಇವತ್ತು ಉಪಯೋಗ ಮಾಡದಂತಹ ಪರಿಸ್ಥಿತಿಗೆ ಬರುತ್ತದೆ. ಆದ್ದರಿಂದ ಅದರ ಕ್ವಾಲಿಟ್ಟಿ ಕಡೆಗೆ ಹೆಚ್ಚಿನ ಗಮನವನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅದರಂತೆ ವಕ್ಕಲುತನಕ್ಕೆ ಮುಖ್ಯವಾಗಿ ಬೇಕಾಗಿರುವುದು, ನೀರು, ಗೊಬ್ಬರ, ಮಣ್ಣು ಮತ್ತು ಕ್ರಿಮಿ ನಾಶಕ ವಸ್ತುಗಳು. ಇವುಗಳಲ್ಲಿ ಮಣ್ಣಿನ ಸಂರಕ್ಷಣೆ ಬಹಳ ಪ್ರಾಮುಖ್ಯವಾದದು. ಇದರ ಸಲುವಾಗಿ ರಾಜ್ಯಸರ್ಕಾರದವರು ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇದು ಬಹಳ ಸ್ತುತ್ಯಾರ್ಹವಾದದು. ಈ ಭೂಮಿಯ ಸಂಪತ್ತು ಏನಿದೆ, ಅದನ್ನು ಕಾಯ್ದುಕೊಳ್ಳುವುದು, ಅದು ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಷಯವಲ್ಲ. ಇದು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಷಯ. ಈಗ ಈ ಸಮಪಾತಳಿ ಒಡ್ಡುಗಳ ಕೆಲಸ ಕೇವಲ ಮರೆಡಿ ಮತ್ತು ಮಸಾರಿ ಭೂಮಿಯಲ್ಲಿ ನಡೆದಿದೆ. ಈ ಕೆಲಸದಿಂದ ರೈತರಿಗೆ ಏನು ಲಾಭವಾಗಿದೆ ಅಂದರೆ, ಕೇವಲ ಒಂದರೆಡು ಪರೆಸೆಂಟ್ ಆಗಿರಬಹುದು. ಈ ಸಂದರ್ಭದಲ್ಲಿ ನಾನು ಕೇಳುವುದು ಇಷ್ಟೆ. ಈ ಮಣ್ಣಿನ ಸಂರಕ್ಷಣೆಯ ಕೆಲಸ ಅದು ಸರ್ಕಾರದ ಕೆಲಸವೆಂದು ತಿಳಿದುಕೊಳ್ಳಿ. ಯಾವ ಭೂಮಿಯಲ್ಲಿ, ಹೆಚ್ಚು ಉತ್ಪತ್ತಿ ಬರುತ್ತದೆ, ಯಾವ ಭೂಮಿ ಉತ್ಕೃಷ್ಟವಾದ ಭೂಮಿಇದೆ. ಅಲ್ಲಿ ಸರ್ಕಾರದವರು ಹಣವನ್ನು ವಸೂಲು ಮಾಡುವುದಕ್ಕೆ ಹಿಂಜರಿಯಬೇಕಾಗಿಲ್ಲ, ಆದರೆ ತಾವು ಏನು ಈ ಕಂಟೂರ್ ಬಂಡಿಂಗ್‌ನ ಸಲುವಾಗಿ ಲೆಕ್ಕ ಇಟ್ಟುಕೊಂಡು, ಅದನ್ನು ಅಲ್ಲಿರತಕ್ಕ ಬಡ ಜನರಿಂದ ಕಸಿದು ಕೊಳ್ಳಲು ನೋಡುತ್ತಿದ್ದೀರಿ, ಅದು ಸರಿಯಲ್ಲ, ಮತ್ತು ಅದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಅಲ್ಲಿ ಒಡ್ಡು ಹಾಕಿದ ಭೂಮಿಗೆ ಮಾಫಿ

ಮಾಡಬೇಕು. ಉದಾಹರಣೆಗೆ ಇವತ್ತು ನೂರಾರು ಕೋಟಿ ರೂಪಾಯಿ ರಸ್ತೆಗಳಿಗೆ ಎಲ್ಲಾ ಖರ್ಚು ಮಾಡುತ್ತಿದ್ದೀರಿ. ಅದು ಜನರಿಗೆ ಉಪಯೋಗವಾಗಲಿ ಎಂದು ಖರ್ಚು ಮಾಡುವಂತದ್ದು ಆ ರೀತಿ ಖರ್ಚು ಮಾಡಿದರೆ, ಅದನ್ನು ತಿರುಗಿ ಪಡೆದು ಕೊಳ್ಳುವುದಕ್ಕೆ ಮನಸ್ಸು ಮಾಡಬಾರದೆಂದು ಕೇಳಿ-ಕೊಳ್ಳುತ್ತೇನೆ. ಅದರ ಜೊತೆಗೆ ಈ ಸಮಪಾತಳಿ ಒಡ್ಡನ್ನು ಕೇವಲ ಮಸಾರಿ ಮತ್ತು ಮರಡಿ ಭೂಮಿ-ಯಲ್ಲಿ ಮಾಡಿ ಹೆಚ್ಚು ಮಳೆ ಬಂದಾಗ, ಅದು ಮಣ್ಣನ್ನು ತಡೆಯದೆ ಹೋದರೆ ನಮ್ಮ ಭೂಮಿ ಸಂಪತ್ತನ್ನು ನಾವು ಕಳೆದುಕೊಂಡ ಹಾಗೆ ಆಗುತ್ತದೆ. ಇದನ್ನು ಎರೆ ಮಣ್ಣಿನ ಭೂಮಿಗೆ ಅನ್ವಯಿಸಬಹುದು. ಅಂಥ ಒಡ್ಡುಗಳಿಗೆ ಖರ್ಚು ಮಾಡಿದ ಹಣವನ್ನು ಯಾವ ದಾಕ್ಷಿಣ್ಯವು ಇಲ್ಲದೆ ವಸೂಲು ಮಾಡಹುದು. ಈಗ ಬಿಜಾಪುರದ ಕೆಲವು ಭಾಗಗಳಲ್ಲಿ ಉತ್ತಮವಾದ, ಉತ್ಕೃಷ್ಟವಾದ ಭೂಮಿಗಳು ಸವುಳು ಭೂಮಿಗಳಾಗಿವೆ ೧೦೦ ಚೀಲ ಬೆಳೆ ಬೆಳೆಯುವಂತಹ ಪ್ರದೇಶದಲ್ಲಿ ಒಂದು ಚೀಲ ಕೂಡ ಬೆಳೆಯದಂತಹ ಪರಿಸ್ಥಿತಿಗೆ ಬಂದಿದೆ. ಇದಕ್ಕೆ ನಿಮ್ಮ ಸಂಶೋಧನ ಎಲ್ಲಿ ಹೋಯ್ತು, ಮತ್ತು ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ನಾನು ಕೇಳುತ್ತೇನೆ.

ಇನ್ನು ಕ್ರಿಮಿನಾಶಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ವಿಚಾರವಾಗಿ ಹೆಳುವುದಾದರೆ, ನಮ್ಮಲ್ಲಿ ಗೊಬ್ಬರ ಮೊದಲಿಗಿಂತಲೂ ಹೆಚಾಗಿ ಆಗುತ್ತದೆ. ಗೊಬ್ಬರದಲ್ಲಿ ನಾವು ಪ್ರಗತಿ ಹೊಂದಿದ್ದೇವೆ. ಕ್ರಿಮಿನಾಶಕದ ವಿಷಯವಾಗಿ ಹೇಳುವುದಾದರೆ, ಇದು ಬಹಳ ದುಬಾರಿಯಾಗಿದೆ. ಇದನ್ನು ಕೊಂಡುಕೊಂಡು ಉಪಯೋಗ ಮಾಡುವ ಶಕ್ತಿ ರೈತರಿಗೆ ಇದೆಯೋ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಅವರಿಗೆ ಕ್ರೀಮಿನಾಶಕವಸ್ತುಗಳ ಬಗ್ಗೆ ದುಬಾರಿ ದರವಾಗದೇ ಇರುವಂತೆ ಅರ್ಧ ಬೆಲೆ-ಯನ್ನು ಸಬ್ಸಿಡಿ ರೂಪವಾಗಿ ಕೊಡಬೇಕು. ಇಲ್ಲದೇ ಹೋದರೆ ಶೇಕಡ ೭೫ರಷ್ಟು ಹಣ ಕೊಟ್ಟು ಅವರಿಗೆ ಸಹಾಯ ಮಾಡಬೇಕು. ರೈತ ತಾನು ಬೆಳೆದಂಥ ಪದಾರ್ಥಗಳಿಗೆ ಕಡಿಮೆ ಬೆಲೆ ಬಂದರೂ ಮೊದಲಗಿಂತ ಹೆಚ್ಚಿನ ಅಸಕ್ತಿಯಿಂದ ಭೂಮಿಯಲ್ಲಿ ಕೆಲಸಮಾಡುತ್ತಿದ್ದಾನೆ. ಆದರೆ ಅವನಿಗೆ ತಕ್ಕ ಪ್ರತಿಫಲ ಬರುತ್ತದೆಯೆ ಎಂಬುದನ್ನು ವಿಚಾರಮಾಡಬೇಕು. ಇನ್ನುಮುಂದೆ ರೈತ ಬೆಳೆದಂಥ ಮಾಲುಗಳಿಗೆ ಯೋಗ್ಯ ಬೆಲೆ ದೊರೆಯುವಂತೆ ಒಂದು ಏರ್ಪಾಡು ಮಾಡಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ.

ಇನ್ನೊಂದು ವಿಷಯ ಈಗ ವ್ಯವಸಾಯ ಮಾಡುವವರಿಗೆ ಕೃಷಿ ತೆರಿಗೆ ಹಾಕಬೇಕೆಂದು ಹೇಳಿದ್ದಾರೆ. ಇಲ್ಲಿಯವರೆಗೂ ಅವರು ಬಹಳ ಉತ್ಸಾಹದಿಂದ ಕೆಲಸಮಾಡಿದ್ದಾರೆ. ಇದರಿಂದ ಅವರ ಉತ್ಸಾಹ ಕುಂಠಿತವಾಗಿ ಅವರ ಪ್ರಗತಿಗೆ ಧಕ್ಕೆ ಬರುತ್ತದೆ. ಆದ್ದರಿಂದ ಈಗ ಈ ಕೃಷಿ ತೆರಿಗೆಯನ್ನು ಒಕ್ಕಲುತನದ ಮೇಲೆ ಹಾಕುವುದನ್ನು ಇನ್ನೂ ಕೆಲಕಾಲ ಮುಂದೂಡಬೇಕು ನಮ್ಮ ರಾಜ್ಯದ ಪ್ರಗತಿಯನು ಕುಠಿತ ಮಾಡುವುದು ಅಷ್ಟು ವಿಹಿತವಾದುದಲ್ಲವೆಂದು ನಾನು ಈಗ ಹೇಳಬಯಸುತ್ತೇನೆ.

ಇನ್ನು ಪಶುಸಂಗೋಪನ ವಿಚಾರವಾಗಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ ಡಾಕ್ಟರು-ಗಳು ಮನುಷ್ಯರಿಗೆ ಯಾವ ರೀತಿ ಔಷಧಿಗಳನು ಕೊಡುತ್ತಾರೊ ಅದರಂತೆ ಪಶುಗಳಿಗೆ ಔಷಧಿಗಳನ್ನು ಕೊಡುವುದು ಮುಖ್ಯ ಏಕೆಂದರೆ- ಒಕ್ಕಲಿಗರ ಸಂಪತ್ತು, ಪಶುಗಳು ಅವುಗಳಿಗೆ ಬರುವ ರೋಗಗಳಿಗೆ ಸರಿಯಾದ ರಕ್ಷಣೆ ಔಷಧಿ ಕೊಡದೇ ಹೋದರೆ ರೈತರ ಸ್ವತ್ತಿಗೆ ಉಂಟಾಗುತ್ತದೆ ಆದ್ದರಿಂದ ಪ್ರತಿಯೊಂದು ಹೋಬಳಿಯಲ್ಲಿಯೂ ಪಶುವೈದ್ಯಶಾಲೆಗಳನ್ನು ತೆಗೆಯಬೇಕು. ಕೆಲವುಕಡೆಗಳಲ್ಲಿ ಪಶುಗಳಿಗೆ ದೊಡ್ಡರೋಗ ವೆಂಬ ಕಾಯಿಲೆ ಬರುತ್ತದೆ ಅಂಥಕಡೆ ಪ್ರತಿಯೊಂದು ಹಳ್ಳಿಯಲ್ಲಿಯೂ ಆ ಕಾಯಿಲೆಯನ್ನು ಹೋಗ-ಲಾಡಿಸುವುದಕೋಸ್ಕರ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಇದು ಬಹಳ ಅಗತ್ಯವಿದೆ ಇನೊಂದು ವಿಷಯ ಪ್ರತಿಯೊಂದು ಹಳ್ಳಿಯಲ್ಲಿಯೂ (ಸ್ಟಾಕ್‌ಮೆನ್) ಸೆಂಟರುಗಳನ್ನು ತೆಗೆದು ರೈತರಿಗೆ ಅನುಕೂಲವಾಗುವಂತೆ ಮಾಡಬೇಕು. ಪಶುಸಂಗೋಪನೆಯಲ್ಲಿ ತಳಿ ಅಭಿವೃದ್ಧಿ ವಿಷಯವಾಗಿ ಸಾಕಷ್ಟು ಹೇಳಿದ್ದೇನೆ. ನಮ್ಮಲ್ಲಿ ಅಂಥಾದ್ದು ೪ ಸೆಂಟರುಗಳನ್ನು ಮಾಡಿದ್ದಾರೆ. ಆದರ ಪ್ರಯೋಜನ ಯಾವ್ಯಾವ ಜನತೆಗೆ ಮುಟ್ಟಿದೆ, ಯಾವ ಹಳ್ಳಿಗಳಿಗೆ ಮುಟ್ಟಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಲೋಕಲ್ ಬ್ರೀಡ್ಸ್ ಚೆನ್ನಾಗಿ ಬೆಳೆಯುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಅರಣ್ಯ ವಿಚಾರ ವನ ಬೆಳೆಸುವುದು ಕೇವಲ ಶಿವಮೊಗ್ಗ ಅಥವಾ ಕಾರವಾರ ಸೈಡ್‌ಗಳಲ್ಲಿ ಎಂದು ಹೇಳುವುದು ತಪ್ಪು. ಅರಣ್ಯ ಸಂಪತ್ತು ಎಲ್ಲರಿಗೂ ಬೇಕು. ಇವರು ಕಾರ್ಯಕ್ರಮ ಹಾಕಿರುವುದನ್ನು ನೋಡಿದರೆ ಕೆಲವು ಜಿಲ್ಲೆಗಳಿಗೆ ಇದರ ಕಾರ್ಯಕ್ರಮ ಮುಟ್ಟಿಲ್ಲ. ಎಲ್ಲಿ ಸರ್ಕಾರದ ಭೂಮಿ ಇದೆಯೋ ಅಲ್ಲಿ

(ಶ್ರೀ ಎಸ್. ಎಂ. ಗುರೆಡ್ಡಿ)

ಅದನ್ನು ಬೆಳೆಸಬೇಕು. ವನಸಂಪತ್ತು ಬೆಳೆಸುವುದರ ಜೊತೆಗೆ ಅದರ ಸಂರಕ್ಷಣೆಮಾಡುವುದು ಅಷ್ಟೇಕೆ ಮುಖ್ಯವಾಗಿದೆ. ಇದಕ್ಕೆ ಒಂದು ಸರಿಯಾದಂಥ ಕಾನೂನು ಮಾಡಬೇಕು. ಯಾರಾದರೂ ಕಾಡುಗಳನ್ನು ಕಡಿದರೆ, ಅಂತವಹರ ಮೇಲೆ ಉಗ್ರ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ಕಾನೂನನ್ನು ಮಾಡಬೇಕು.

ಇನ್ನು ಹಾಲಿನ ವಿಚಾರವಾಗಿ ಹೇಳುವುದಾದರೆ, ಈಗ ಹಾಲಿನ ಕೇಂದ್ರಗಳನ್ನು ಕಾರವಾರ ಮತ್ತು ಗುಲ್ಬರ್ಗಾಗಳಲ್ಲಿ ತೆಗೆದಿದ್ದಾರೆ. ಬಿಜಾಪುರದಲ್ಲಿ ಅವನ್ನು ನೆಗ್‌ಲೆಕ್ಟ್ ಮಾಡಿದ್ದಾರೆ. ಬರಗಾಲದ ಪ್ರದೇಶಗಳಲ್ಲಿ ಹಾಲಿನ ಕೇಂದ್ರಗಳನ್ನು ಕೊಡಬಾರದೆಂದು ಸರ್ಕಾರದ ಉದ್ದೇಶವೇ ? ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಹಾಲಿನ ಕೇಂದ್ರವನ್ನು ತೆಗೆಯುವ ಹಾಗೆ ವ್ಯವಸ್ಥೆಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು) — ಅಧ್ಯಕ್ಷರೇ, ಈ ದಿವಸ ಈ ಸದನದಲ್ಲಿ ಮೂವರು ಸಚಿವರ ಅಂದರೆ, ಪಶುಸಂಗೋಪನಾ ಸಚಿವರು, ಅರಣ್ಯ ಶಾಖಾಸಚಿವರು ಮತ್ತು ವ್ಯವಸಾಯ ಇಲಾಖೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ.

ಸ್ವಾಮಿ, ಈ ಬೇಡಿಕೆಗಳನ್ನು ನೋಡುವಾಗ ವ್ಯವಸಾಯ ಇಲಾಖೆಯ ಸಚಿವರು ಮಂಡಿಸಿರುವ ಬೇಡಿಕೆಗಳ ಬಗ್ಗೆ ಹೇಳುವುದಾದರೆ ವ್ಯವಸಾಯ ಹಾಗೂ ವ್ಯವಸಾಯಗಾರರ ಸ್ಥಿತಿಯನ್ನು ಉತ್ತಮಪಡಿಸಲು ಯಾವ ಒಂದು ಹೊಸ ಆಕರ್ಷಕ ಯೋಜನೆಗಳನ್ನೂ ಕೂಡ ಸರ್ಕಾರದವರು ನಿರೂಪಿಸಿಲ್ಲ. ರೈತರು ಹೆಚ್ಚಾಗಿರುವ ಈ ದೇಶದಲ್ಲಿ ರೈತರ ಪ್ರತಿನಿಧಿಗಳಾದವರು ರೈತರ ಉದ್ಧಾರಕ್ಕಾಗಿ, ಅಭಿವೃದ್ಧಿಗಾಗಿ ಮತ್ತು ಅವರ ಆಶೋತ್ತರಗಳನ್ನು ಯೋಚಿಸಬೇಕಾಗಿತ್ತು ಎಂಬುದಾಗಿ ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಸಣ್ಣ ಹಿಡುವಳಿದಾರರಿಗೆ ಅಂದರೆ ಕೇವಲ ೫ ಅಥವಾ ೧೦ ಎಕರೆ ಇರತಕ್ಕ ರೈತರಿಗೆ ಅದರಲ್ಲಿಯೂ ಭೂಹೀನ ರೈತರಿಗೆ ಬಹಳ ಕಷ್ಟವಾಗಿ ಅವರ ಸ್ಥಿತಿಗತಿಗಳು ಸರಿಯಾಗಿಲ್ಲದೆ ಇವತ್ತಿನ ದಿವಸ ಹೇಳಲಾರದಷ್ಟು ತೊಂದರೆಗಳು ಆಗಿವೆ ಅಂತಹವರ ಯೋಗಕ್ಷೇಮದ ಬಗ್ಗೆ ಬಡ್ಜೆಟ್ಟಿನಲ್ಲಿರತಕ್ಕ ಬೇಡಿಕೆಗಳಲ್ಲಿ ಯಾವ ಒಂದು ಹೊಸ ನಿರೂಪಣೆ ಇಲ್ಲದೇ ಇರುವುದು ದುರದೃಷ್ಟಕರ. ರೈತರಿಗೆ ಸರ್ಕಾರದವರು ಕೊಡಬೇಕಾದ ಸೌಕರ್ಯಗಳು ಅನೇಕ ಇವೆ. ಮೊದಲನೆಯದಾಗಿ ಅವರಿಗೆ ಉತ್ತಮವಾದ ಬೀಜಗಳನ್ನು ಒದಗಿಸಿ ಕೊಡಬೇಕು ಎಲ್ಲಾ ತಾಲ್ಲೂಕು ಮಟ್ಟದಲ್ಲಿಯೂ ಕೂಡ ರೈತರಿಗೆ ಅಗತ್ಯವಾಗಿ ಬೇಕಾದಂಥ ಉತ್ತಮವಾದ ಬೀಜ ಮತ್ತು ಗೊಬ್ಬರಗಳನ್ನು ಒದಗಿಸಬೇಕು. ಈಗ ಇರತಕ್ಕ ಗೊಬ್ಬರದ ಬೆಲೆಯನ್ನು ನೋಡಿದರೆ ಸಾಮಾನ್ಯ ರೈತನಾದವನು ಅದನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿದೆ ಆದ್ದರಿಂದ ಅಂತಹವರಿಗೆ ರಿಯಾಯಿತಿ ರೂಪದಲ್ಲಿ ಗೊಬ್ಬರವನ್ನು ಕೊಡಬೇಕು. ಸಣ್ಣ ರೈತರ ಅಭಿವೃದ್ಧಿಗಾಗಿ ಅವರು ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗುವಹಾಗೆ ವ್ಯವಸ್ಥೆ ಮಾಡಿದರೆ, ಆಗ ಅವರಿಗೆ ಅನುಕೂಲವಾಗುತ್ತದೆ, ಅಂತಹ ಅನುಕೂಲಗಳು ಇವತ್ತಿನ ದಿವಸ ಇಲ್ಲ. ಗೊಬ್ಬರದ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ಅವರಿಗೆ ಬೇಕಾದಷ್ಟು ಹಣವನ್ನು ಕೊಡುತ್ತಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿಯೂ ಕೂಡ ಆ ವಿಚಾರ ಚರ್ಚೆಗೆ ಬಂದಿದೆ. ಇವರು ಕೊಡುವ ಬಡ್ಡಿಗೆ ಬದಲಾಗಿ ಆ ಹಣದಿಂದ ಗೊಬ್ಬರವನು ಸಣ್ಣಪುಟ್ಟ ರೈತರಿಗೆ ಒದಗಿಸಿದ್ದರೆ ನಿಜವಾಗಿ ಅವರ ಸ್ಥಿತಿ ಇನ್ನೂ ಉತ್ತಮವಾಗುತ್ತಿತ್ತು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಬಗ್ಗೆ ಮಾಡಿರತಕ್ಕ ವರದಿಯನ್ನು ನೋಡಿದರೆ ಗೊಬ್ಬರದ ಬಗ್ಗೆ ಖರ್ಚು ಮಾಡಿದ ಹಣ ರೈತರಿಗೆ ಮುಟ್ಟಿಲ್ಲ: ಅನುಪಯೋಗವಾಗಿದೆಯೆಂಬುದು ಗೊತ್ತಾಗುತ್ತದೆ.

"The Committee reiterates their earlier observations and desire that action be taken on the officers responsible for defeating the object of the scheme and incurring unnecessary expenditure on interest charges. The Committee may be informed of the action taken on their recommendations ಅವರು ಹೇಳಿರತಕ್ಕ ರೀತಿಯಲ್ಲಿ ನೋಡಿದರೆ "the Khariff season beving over by the time the loan was sanctioned" ರೈತರಿಗೆ ಸೌಲಭ್ಯ ಒದಗಿಸಬೇಕು ಅಂತ ಹಣವನ್ನು ಕೊಡುತ್ತೇವೆ ಅದರೆ ಆ ಹಣ ಬಂದಾಗ ರೈತರಿಗೆ ಸೌಲಭ್ಯ ಲಭಿಸದೆ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಮಾನ್ಯ ಮಿತ್ರರು ಆ ಕಡೆ ಹೇಳಿದರು ವ್ಯವಸಾಯದ ಇಲಾಖೆ ಪುನರ್‌ರಚನೆಯಾಗಿದೆ, ಇದರಿಂದ ಬಹಳ ಅನುಕೂಲವಾಗಿದೆ ಎಂದು. ಅನುಕೂಲ ಯಾರಿಗೆ ಆಗಿರತಕ್ಕದ್ದು?

ಖಂಡಿತವಾಗಿಯೂ ರೈತರಿಗೆ ಆಗಿಲ್ಲ. ಡೈರೆಕ್ಟರ್ ಒಬ್ಬೊಬ್ಬರ ಜೊತೆಗೆ ನಾಲ್ಕಾರು ಜಾಯಿಂಟ್ ಡೈರೆಕ್ಟರ್ಸ್ ಆಗಿರಬಹುದು, ಪ್ರತಿಯೊಂದು ಜಿಲ್ಲೆಗೂ ಒಬ್ಬ ಡೆಪ್ಯೂಟಿ ಡೈರೆಕ್ಟರು ಆಗಿರಬಹುದು, ಅಸಿಸ್ಟೆಂಟ್ ಡೈರೆಕ್ಟರ್ ಆದವರು ಡೆಪ್ಯುಟಿ ಡೈರೆಕ್ಟರ್ ಆಗಿರಬಹುದು. ಅವರಿಗಿಂತ ಕೆಳದರ್ಜೆಯಲ್ಲಿರುವವರು ಅಸಿಸ್ಟೆಂಟ್ ಡೈರೆಕ್ಟರಾಗಿರಬಹುದೇ ಹೊರತು ರೈತರಿಗೆ ಯಾವ ವಿಧವಾದ ಅನುಕೂಲವೂ ಆಗಿಲ್ಲ ಎಂದು ಹೇಳ ಬಯಸುತ್ತೇನೆ. ಬರೀ, ಆಫೀಸರುಗಳನ್ನು ಹೆಚ್ಚು ಮಾಡಿದರೆ ಇಲಾಖೆ ಬೆಳಸಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆಯೇ ಎಂದರೆ ಖಂಡಿತ ಆಗುವುದಿಲ್ಲ. ನಮಗೆ ಮನಸ್ಸು ಬೇಕು. ಈ ಹೊತ್ತು ಹೇಳುವುದಾದರೆ ಬುಲ್‌ಡೋಜರ್, ಟ್ರಾಕ್ಟರುಗಳನ್ನು ರೈತರಿಗೆ ಒದಗಿಸುತ್ತೇವೆಂದು ಹೇಳುತ್ತೀದ್ದೀರಿ. ದೇವರೇ ಕಾಪಾಡಬೇಕು. ಅವರಿಗೆ ಟ್ರಾಕ್ಟರು ಸಿಕ್ಕುತ್ತಾ ಇಲ್ಲ ಬುಲ್‌ಡೋಜರು ಸಿಕ್ಕುತ್ತಾ ಇಲ್ಲ, ಬೋರಿಂಗ ಮಷಿನ್ ಬೇಕು ಎಂದರೆ ಆಫೀಸರನ್ನು ಇನ್‌ಫ್ಲೂಯನ್ಸ್ ಮಾಡಬೇಕು. ಎಲ್ಲಿಯವರೆಗೆ ಎಂ.ಎಲ್.ಎ. ಹೋಗಿ ನಮ್ಮ ರೈತರಿಗೆ ಅನುಕೂಲಗಳನ್ನು ಒದಗಿಸಬೇಕು ಎನ್ನುವ ಆಡಳಿತ ಕ್ರಮವನ್ನು ಇಟ್ಟು ಕೊಂಡಿರುತ್ತಾರೆಯೋ ಅಲ್ಲಿಯವರೆಗೆ ರೈತರಿಗೆ ಉದ್ಧಾರವಿಲ್ಲ. ಸಣ್ಣಪುಟ್ಟ ರೈತರಿಗೆ ಟ್ರಾಕ್ಟರ್‌ಕೊಂಡು ಕೊಳ್ಳುವುದಕ್ಕೆ ಶಕ್ತಿ ಇಲ್ಲ. ಅವರಿಗೆ ೨೦-೩೦ ಸಾವಿರ ಕೊಟ್ಟು ಸಾಲದ ರೂಪದಲ್ಲಿ ಪಡೆಯಿರಿ ಎಂದು ೯-೧೦ ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಇದರಿಂದ ರೈತನಿಗೆ ಏನು ಅನುಕೂಲವಾಯಿತು ? ಟ್ರಾಕ್ಟರ್ ಕೊಂಡು ಕೊಳ್ಳುವುದಕ್ಕೆ ಪತ್ರ ಬರೆಯಬೇಕು, ಅದಕ್ಕೆ ಎರಡು ಮೂರು ಸಾವಿರ ರೂಪಾಯಿಗಳ ಸ್ಟಾಂಪ್ ಫೀಸ್ ಕೊಡಬೇಕು, ಆ ಸ್ಟಾಂಪ್ ಫೀಜನ್ನು ರಿಯಾಯಿತಿ ಮಾಡುವುದಕ್ಕೂ ಕೂಡ ಸರ್ಕಾರಕ್ಕೆ ಮನಸ್ಸು ಇಲ್ಲ. ಇದರಿಂದ ರೈತರ ಆರ್ಥಿಕ ಮಟ್ಟ ಉತ್ತಮವಾಗುತ್ತದೆಯೇ ?

ಆಗುತ್ತಾ ಇಲ್ಲ ಎಂದುಹೇಳುತ್ತೇನೆ. ಒಂದು ಲಕ್ಷ ಬಾವಿ ತೆಗೆಯುತ್ತೇವೆ ಎಂದು ಪ್ರತಿಯೊಂದು ಬಜೆಟ್ ಭಾಷಣದಲ್ಲಿ ಹೇಳಿದ್ದೇ ಹೇಳಿದ್ದು. ಮೂರು ಸಲ ಕೇಳಿದೆ. ಎಷ್ಟು ಬಾವಿತೆಗೆದಿದ್ದಾರೆ ಎಂದರೆ ನಿಜವಾಗಿಯೂ ನಾವು ನಾಚಿಕೆ ಪಡಬೇಕಾಗಿದೆ. ಬೇಕಾದಷ್ಟು ಹಣ ಒದಗಿಸಬಹುದು ಆದರೆ ಅದನು ಕಾರ್ಯಗತ ಮಾಡುತ್ತಾ ಇಲ್ಲ ಮನಸ್ಸಿಟ್ಟು ಮಾಡತಕ್ಕ ಅಧಿಕಾರವರ್ಗ ಇಲ್ಲ. ಬಜೆಟ್ಟನಲ್ಲಿ ಹಣವನ್ನೇನೋ ಒದಗಿಸುತ್ತೇವೆ. ಆದರೆ ಆ ಹಣ ಖರ್ಚಾಗದೆ ಉಳಿಯುವುದು ಸರ್ವೇ ಸಾಮಾನ್ಯವಾದ ನೀತಿ ಆಗಿದೆ. ರೈತನ ಸ್ಥಿತಿ ಉತ್ತಮವಾಗ ಬೇಕಾದರೆ ರೈತನಿಗೆ ಬೀಜ, ಗೊಬ್ಬರ, ಕ್ರಿಮಿನಾಶಕವನ್ನು ರಿಯಾಯಿತಿ ದರದಲ್ಲಿ ಕೊಡಬೇಕು. ಸಣ್ಣಪುಟ್ಟ ರೈತರಿಗೆ ಒಣ ಜಮೀನು ಹೊಂದಿರತಕ್ಕ ರೈತರಿಗೆ ಬೋರ್ ವೆಲ್ ತೆಗಸಿ ನೀರನ್ನು ಒದಗಿಸಬೇಕು. ಬೋರ್ ವಲ್ ಡ್ರಿಲ್ಲಿಂಗ್ ಮಷಿನ್ ಸಿಗುವುದೇ ಬಹಳ ಕಷ್ಟ. ಆರ್ಡರ್ ಕೊಟ್ಟಿದ್ದೇವೆ, ಬಂದ ಕೂಡಲೇ ಕೊಡುತ್ತೇವೆ ಎಂದು ಹೇಳಿ ಒಂದು ವರ್ಷವಾಯಿತು. ಇನುವರೆಗೂ ಕೊಟ್ಟಿಲ್ಲ. ಹಸಿರು ಕ್ರಾಂತಿ ಎಂದು ಹೇಳುತ್ತಾರೆ. ಅದು ನಿಮ್ಮ ಪ್ರಯತ್ನದಿಂದ ಆದದ್ದು ಅಲ್ಲ. ಪ್ರಕೃತಿ ರೈತನ ನೆರವಿಗೆ ಬಂದದ್ದರಿಂದ ಬೆಳೆಗೆ ಹೆಚ್ಚಾಯಿತೇ ಹೊರತು ನಿಮ್ಮ ಪ್ರಯತ್ನದಿಂದ ಆಗಿಲ್ಲ. ಆದುದರಿಂದ ನೀವು ಭುಜ ತಟ್ಟಿಕೊಳ್ಳುವ ಪ್ರಮೇಯವಿಲ್ಲ. ರೈತರ ಅಭಿವೃದ್ಧಿಗಾಗಿ ನೀವು ಏನೂ ಸಹಾಯ ಮಾಡಲಿಲ್ಲ ಎಂದು ಖಡಾಖಂಡಿತವಾಗಿ ಹೇಳ ಬಯಸುತ್ತೇವೆ. ಹಿಂದೆ ಕ್ರಿಮಿನಾಶಕ ಒದಗಿಸುತ್ತಿರುವಾಗ ಸರ್ಕಾರದವರು ಶೇಕಡಾ ೫೦ ಸಬ್ಸಿಡಿ ಕೊಡುತ್ತಿದ್ದರು ಆ ರಿಯಾಯಿತಿಯನ್ನು ಈಗ ನಿಲ್ಲಿಸಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ವರದಿಯನ್ನು ನೋಡಿದರೆ ಬೋರ್‌ವೆಲ್ ತೆಗೆಯುವುದಕ್ಕೆ ಎಷ್ಟು ಹಣವನ್ನು ಪೋಲು ಮಾಡಿದ್ದಾರೆ, ಎಷ್ಟು ಅನ್ಯಾಯವಾಗಿದೆ ಎಂಬುದು ನಮಗೆ ಗೊತ್ತಾಗುತ್ತದೆ. ಆದಕ್ಕೋಸ್ಕರ ವ್ಯವಸಾಯದಲ್ಲಿ ನಿಜವಾದ ಕ್ರಾಂತಿ ಆಗಬೇಕಾದರೆ ಸಣ್ಣಪುಟ್ಟ ರೈತರ ಹಿತರಕ್ಷಣೆ ಮಾಡಬೇಕು ಈ ಹೊತ್ತು ಸಣ್ಣ ಹಿಡುವಳಿದಾರರ ಸಮಸ್ಯೆ, ಭೂರಹಿತ ರೈತರ ಸಮಸ್ಯೆ ಇದೆ. ಅದನ್ನು ಬಗೆಹರಿಸದ ಹೊರತು ಗತ್ಯಂತರವಿಲ್ಲವೆಂದು ಹೇಳಬಯಸುತ್ತೇನೆ. ಇಲ್ಲಿಗೆ ವ್ಯವಸಾಯದ ಮಾತು ಮುಗಿಯಿತು.

ಇನ್ನು ಪಶುಸಂಗೋಪನೆ ಮತ್ತು ಪಶು ಅಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪಶುಸಂಗೋಪನ ಪಶುಗಳ ಅಭಿವೃದ್ಧಿ ವಿಷಯದಲ್ಲಿ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಹಳ್ಳಿಗಾಡಿನಲ್ಲಿ ಹೆಚ್ಚಿನ ಆಸ್ಪತ್ರೆಗಳನ್ನು ಒದಗಿಸಿದ್ದಾರೆ. ಬರೀ ಆಸ್ಪತ್ರೆಗಳನ್ನು ಹೆಚ್ಚಿಸಿದರೇ ಸಾಲದು. ಅಲ್ಲಿ ಎಷ್ಟೋ ಔಷಧಿಗಳು ಇಲ್ಲ. ಈ ಮಾರ್ಚಿ ತಿಂಗಳಿನಲ್ಲಿಯೂ ಔಷಧಿ ಕೇಳಿದರೂ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಆದಕ್ಕೋಸ್ಕರ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಿಗಳು ಸಕಾಲದಲ್ಲಿ ಒದಗಿಸಬೇಕು ಎಂದು ಬಿನ್ನವಿಸುತ್ತೇನೆ. ಪಶುಸಂಗೋಪನ ಅಭಿವೃದ್ಧಿಗಾಗಿ ಅಮೃತಮಹಲ್ ಕಾವಲಿನಲ್ಲಿ ಜಮೀನು ಇಟ್ಟು ಕೊಂಡಿದ್ದಾರೆ. ಅದರಿಂದ ಉಪಯೋಗವೇನೂ ಆಗಿಲ್ಲ. ಅದನ್ನು ರೈತರಿಗೆ ಕೊಟ್ಟುಬಿಟ್ಟರೆ ಅವರು ಅದನ್ನು ಉತ್ತು ಬಿತ್ತಿ ಬೇಕಾದಷ್ಟು ಅನುಕೂಲವನ್ನು ಹೊಂದುತ್ತಾನೆ. ಎಷ್ಟೋ ಲಕ್ಷ ಎಕರೆ ಜಮೀನು ಅಲ್ಲಿ ಇದೆ. ನಾವು ಅಲ್ಲಿ ಹುಲ್ಲು ಬೆಳೆಸಿದರೆ ಅದರಿಂದ ಅನುಕೂಲವಾಗುತ್ತದೆ. ಬೀರೂರಿನಲ್ಲಿ ಒಂದು ಬುಲ್‌ರೇಸಿಂಗ್ ಸೆಂಟರ್ ಫೇಲ್ ಆಗಿರುವುದಕ್ಕೆ ಕಾರಣ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಸ್ಕೀಂ ಅನ್ನು ಸರಿಯಾಗಿ

(ಶ್ರೀ ಎಂ. ಮಲ್ಲಪ್ಪ)

ಕಾರ್ಯಗತಮಾಡತಕ್ಕ ಮನಸ್ಸು ಇಲ್ಲದೇ ಇರುವುದು. ರೈತರಿಗೆ ಹೋರಿಗಳು ಬೇಕು. ಈ ಬುಲ್ ರೈಸಿಂಗ್ ಸೆಂಟರನ್ನು ತಾವು ಇಟ್ಟುಕೊಂಡು ಅದು ಫಲಕಾರಿಯಾಗುವ ರೀತಿಯಲ್ಲಿ ಕೆಲಸ ಮಾಡದಿದ್ದರೆ ಅದಕ್ಕೆ ಆಡಳಿತದ ಅದ್ಯಕ್ಷತೆಯೇ ಕಾರಣ ಹೊರತು ಬೇರೆ ಯಾವುದೂ ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಅರಣ್ಯ ಇಲಾಖೆಯ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಅರಣ್ಯ ಇಲಾಖೆಯವರು ಅರಣ್ಯ ಗಳನ್ನು ಹೆಚ್ಚಿಗೆ ಬೆಳಸಬೇಕಾಗಿಲ್ಲ. ಇರುವ ಅರಣ್ಯವನ್ನು ಉಳಿಸಿದರೆ ಸಾಕು. ಬೆಂಗಳೂರಿಗೆ ಸೌದೆ ಸಾಗಿಸಲು ಚಿಕ್ಕಮಗಳೂರಿನ ಕಾಡುಗಳಲ್ಲಿ ಪರ್ಮಿಟ್ ಕೊಡುತ್ತಾರೆ. ಅದರಿಂದಾಗಿ ಅಲ್ಲಿ ಮಳೆ ಬರುವುದು ನಿಂತು ಹೋಗಿದೆ. ಇನ್ನೂ ಚಾನಲ್ ಭಾಗದಲ್ಲಿ ಮರ ಬೆಳೆಸುತ್ತೇವೆ ಎಂದು ಹೋಗಿದ್ದಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಹಾಳು ಮಾಡುತ್ತಾರೆ. ಮರಗಳೇ ಇರುವುದಿಲ್ಲ. ಸ್ಕೀಂ ಮಾತ್ರ ಇರುತ್ತದೆ. ದುಡ್ಡು ಖರ್ಚು ಮಾಡುತ್ತಾರೆ. ಅದರಿಂದ ರೈತರಿಗೆ ಪ್ರಯೋಜನ ಆಗುವ ಕೆಲಸ ಮಾಡಲು ಯಾತಕ್ಕೆ ಹಿಂದೆ ಬೀಳುತ್ತಾರೋ ಗೊತ್ತಿಲ್ಲ. ಬೇಜವಾಬ್ದಾರಿ ಸರ್ಕಾರದ ಕಾಲದಲ್ಲಿಯೂ ಕೂಡ ರೈತರಿಗೆ ಅನುಕೂಲ ಮಾಡುತ್ತಾ ಇದ್ದರು. ಆಕ್ಟ್ ಬದಲಾವಣೆ ಮಾಡಿದ ಮೇಲೆ ಹೊಸ ರೂಲ್ಸ್ ಜಾರಿಗೆ ಬರಲಿಲ್ಲ. ಹಳೇ ರೂಲ್ಸ್ ಜಾರಿಯಲ್ಲಿ ಇಲ್ಲ. ರೈತರ ಹಿತಸಾಧನೆ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲವೆಂದು ಕಾಣುತ್ತದೆ. ಮಂತ್ರಿಗಳು ಹೊಸರೂಲ್ಸನ್ನು ಜಾರಿಗೆ ಕೊಟ್ಟಿದ್ದೇವೆ ಎಂದು ಹೇಳಿ ಈವೊತ್ತಿನವರೆಗೂ ಕೊಟ್ಟಿಲ್ಲ. ಸಣ್ಣಪುಟ್ಟ ಅನುಕೂಲಗಳು ಇವೆ ಅದನ್ನು ಕೊಡುವುದಕ್ಕೆ ಯಾಕೆ ಹಿಂಜರಿಯುತ್ತಾರೊ ? ಮಲೆನಾಡು ರೈಟ್ಸ್ ಅಂಡ ಪ್ರಿವಿಲೇಜಸ್ ಏನಿದೆ ಅದನ್ನು ದಯವಿಟ್ಟು ಜಾರಿಗೆ ಕೊಟ್ಟು ಇದರಿಂದ ರೈತರಿಗೆ ಅನುಕೂಲ ಗಳನ್ನು ಕಲ್ಪಿಸಿಕೊಡಬೇಕು. ಅರಣ್ಯ ಸಂಪತ್ತನ್ನು ಉಳಿಸಲು ಪ್ರಯತ್ನ ಮಾಡಬೇಕು. ಅರಣ್ಯವನ್ನು ಬೆಳೆಸುತ್ತೇವೆ ಎಂದು ಹೇಳಿ ಅದಕ್ಕೆ ಅಂದಾಜು ಮಾಡಿ ದುಡ್ಡು ಹಾಳು ಮಾಡುವುದಕ್ಕೆ ಅವಕಾಶವಾಗು ತ್ತದೆ. ಅರಣ್ಯ ಬೆಳೆಸುವುದಿಲ್ಲ. ಆದ್ದರಿಂದ ಇರತಕ್ಕ ಮರಗಳನ್ನು ಕೊಯ್ಯದೆ ಹಿಂದೆ ಇದ್ದ ಅರಣ್ಯ ಸಂಪತ್ತನ್ನು ಉಳಿಸಿದರೆ ಸಾಕು.

ಇನ್ನು ಮತ್ಸ್ಯ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಮೀನು ತಿನ್ನುವವರಿಗೆ ಹೆಚ್ಚಿಗೆ ಉತ್ತೇಜನ ಕೊಟ್ಟರೆ ನಮ್ಮವರಿಗೆ ತರಕಾರಿ ಸಿಕ್ಕುತ್ತದೆ. ಅವರು ಚೆನ್ನಾಗಿ ಕೆಲಸ ಮಾಡಿ ಅದರಿಂದ ಉಪಯೋಗ ಪಡೆಯಲಿ ಎಂದು ಹೇಳಿ ಅಧ್ಯಕ್ಷರು ಎರಡು ನಿಮಿಷ ಹೆಚ್ಚಾಗಿ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈ ಅರಣ್ಯ ಇಲಾಖೆಯ ಸಚಿವರು ಇಟ್ಟಿರತಕ್ಕಂಥ ಈ ಬೇಡಿಕೆಗೆ ಸ್ವಾಗತ ಮಾಡುತ್ತಾ ಈ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ನಮ್ಮ ರಾಜ್ಯದ ವಿಸ್ತೀರ್ಣ ಒಂದುಕೋಟಿತೊಂಭತ್ತೆರಡು ಸಾವಿರ ಇನ್ನೂರನಾಲ್ಕು ಸ್ಕ್ವೇಯರ್ ಕಿಲೋ ಮೀಟರ್ಸ್ ಇದೆ. ನಮ್ಮ ರಾಜ್ಯದಲ್ಲಿ ೩೫ ಸಾವಿರ ೨೭೯ ಸ್ಕಯರ್ ಕಿಲೋ ಮೀಟರ್ಸ್ ಕಾಡು ಇದೆ. ಅದನ್ನು ನಾವು ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಸುಮಾರು ಶೇಕಡಾ ೧೮ರಷ್ಟು ಕಾಡು ಪ್ರದೇಶವಾಗಿದೆ. ಅದನ್ನು ಭಾರತ ದೇಶದ ಅಂಕಿ ಅಂಶಗಳೊಡನೆ ತುಲನೆ ಮಾಡಿ ನೋಡಿದರೆ, ಇಡೀ ಭಾರತ ದೇಶದಲ್ಲಿ ಶೇಕಡಾ ೨೨ರಷ್ಟು ಕಾಡು ಇದ್ದರೆ ನಮ್ಮ ರಾಜ್ಯದಲ್ಲಿ ಸುಮಾರು ಶೇಕಡಾ ನಾಲ್ಕರಷ್ಟು ಕಾಡು ಇದೆ. ಈಗ ಇರತಕ್ಕಂಥ ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ಮೂರನೇ ಒಂದು ಭಾಗದಷ್ಟು ಕಾಡು ಇರಬೇಕೆಂದು ಇದೆ. ಆದರೆ ನಮ್ಮಲ್ಲಿ ಕೇವಲ ಶೇಕಡಾ ೧೮ರಷ್ಟು ಮಾತ್ರ ಕಾಡು ಇದೆ.

೬–೩೦ P.M.

ಎಂದರೆ ಸುಮಾರು ೧೫ ಪರ್ಸೆಂಟ್‌ನಷ್ಟು ಕಾಡನ್ನು ಬೆಳಸಬೇಕಾಗಿದೆ. ಅದರ ಬಗ್ಗೆ ನಮ್ಮ ಸರ್ಕಾರದವರು ತೆಗೆದುಕೊಂಡಿರತಕ್ಕ ಕ್ರಮ ಏನೆಂಬುದನ್ನು ನೋಡಬೇಕಾಗಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಮೈಸೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಶೇಕಡ ೨೦ಕ್ಕಿಂತ ಹೆಚ್ಚು ಕಾಡು ಪ್ರದೇಶ ಇದೆ. ಬೆಂಗಳೂರು, ಕೋಲಾರ, ಬಳ್ಳಾರಿ ಜಿಲ್ಲೆಗಳಲ್ಲಿ ಶೇಕಡ ೧೦ ಪರ್ಸೆಂಟ್ ಇದೆ, ಬಿದರ್‌ನಲ್ಲಿ ಕೇವಲ ೪.೨ ಪರ್ಸೆಂಟ್ ಇದೆ, ಗುಲ್ಬರ್ಗದಲ್ಲಿ ೪.೨ ಪರ್ಸೆಂಟ್ ಇದೆ. ರಾಯಚೂರಿನಲ್ಲಿ ೪.೯ ಪರ್ಸೆಂಟ್ ಇದೆ. ಅತಿ ಕಡಿಮೆ ಪ್ರದೇಶದ ಕಾಡು ಇರತಕ್ಕ ಜಿಲ್ಲೆ ಎಂದರೆ ಮಂಡ್ಯ

ಜಿಲ್ಲೆ ಅಲ್ಲಿ ಕೇವಲ ೨ ಪರ್ಸೆಂಟ್ ಇದೆ. ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ಮೂರನೇ ಒಂದು
ಭಾಗದ ಕಾಡನ್ನು ಬೆಳೆಸಬೇಕಾದರೆ ನಮ್ಮ ರಾಜ ದಲ್ಲಿ ಇನ್ನೂ ೨೭ ಸಾವಿರದ ೮೨೦ ಸ್ಕ್ವೇರ್ ಕಿಲೋ
ಮೀಟರ್ ಕಾಜನ್ನು ಬೆಳೆಸಬೇಕಾಗಿದೆ. ನಮ್ಮ ಅರಣ್ಯ ಇಲಾಖೆಯವರು ಯಾವ ಪ್ರಮಾಣದಲ್ಲಿ ಕಾಡನ್ನು
ಕಡಿಯುತ್ತಾ ಇದ್ದಾರೋ ಅದೇ ಪ್ರಮಾಣದಲ್ಲಿ ಅಫಾರೆಸ್ಟೇಷನ್ ಮಾಡುತ್ತಾ ಇಲ್ಲ. ಇಷ್ಟು ಪ್ರದೇಶ
ಎಂದರೆ ೨೭,೮೨೦ ಸ್ಕ್ವೇರ್ ಕಿಲೋ ಮೀಟರ್ ಕಾಡನ್ನು ಬೆಳೆಸುವುದಕ್ಕೆ ಒಂದು ಯೋಜನೆ
ಇದೆಯೇ ? ಇದ್ದರೆ ಎಷ್ಟು ವರ್ಷ ಬೇಕು ? ಎಷ್ಟು ಕೋಟಿ ರೂಪಾಯಿನ ಅಂದಾಜಾಗಿದೆ ಎಂದು
ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಅಂಥಾ ಯೋಜನೆ ಇದ್ದು ಅಂದಾಜಾಗಿರುವುದು ಇದ್ದರೆ
ಈ ಸದನದ ಮುಂದೆ ಇಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ಲಾಂಟೇಷನ್ ಬೆಳೆಸಲು ಒಂದು
ಕಾರ್ಪೊರೇಷನ್ ಮಾಡಬೇಕೆಂಬ ಯೋಜನೆ ಸರ್ಕಾರದ ಮುಂದೆ ಇದೆಯೇ ? ಇದ್ದರೆ ಅದರ ರೂಪರೇಖೆ
ಏನು, ಯಾವ ಉದ್ದೇಶಕ್ಕಾಗಿ ಮಾಡಲಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ಈ ಬೇಡಿಕೆಗೆ
ಉತ್ತರ ಕೊಡುವಾಗ ಹೇಳಬೇಕೆಂದು ಇಚ್ಛಿಸುತ್ತೇನೆ.

ನಾನು ಮಲೆನಾಡು ಜಿಲ್ಲೆಯಿಂದ ಬರುತ್ತಾ ಇದ್ದೇನೆ. ರೈತರಿಗೆ ಈ ಇಲಾಖೆಯವರು ಮಾಡತಕ್ಕ
ಉಪಕಾರದ ಬಗ್ಗೆ ಒಂದೆರಡು ಮಾತು ಹೇಳುವುದು ಅನಿವಾರ್ಯವಾಗಿದೆ. ಅನೇಕ ಶತಮಾನಗಳಿಂದ,
ರಾಜಮಹಾರಾಜರ ಕಾಲದಿಂದ ಮಲೆನಾಡಿನ ರೈತರು ಕೆಲವು ಪ್ರಿವಿಲೇಜಸ್ ಅನುಭವಿಸಿಕೊಂಡು
ಬಂದಿದ್ದಾರೆ, ಹೊನ್ನೆ, ಮತ್ತಿ ಮತ್ತು ಇತರ ವಿವಿಧ ಜಾತಿಯ ಮರಗಳನ್ನು ಡಿಪೋಗಳಿಗೆ ಸಾಗಿಸಿ
ಹಣ ಪಡೆಯುತ್ತಾ ಇದ್ದರು, ನಮ್ಮ ರಾಜ್ಯ ಸರ್ಕಾರಕ್ಕೆ ಅವರಿಂದ ೧೦ ರಿಂದ ೧೫ ಕೋಟಿ ರೂಪಾಯಿ
ಗಳವರೆಗೂ ವರಮಾನ ಬರುತ್ತಾ ಇತ್ತು. ಆದರೆ ಯಾವ ಪ್ರದೇಶದಿಂದ ಇಷ್ಟು ವರಮಾನವನ್ನು
ಪಡೆಯುತ್ತಾ ಇದ್ದಾರೋ ಆ ಪ್ರದೇಶಕ್ಕೆ ತಾವು ಮಾಡಿದ್ದಾದರೂ ಏನು ? ಎಂದು ಹೇಳಿ ಮಾನ್ಯ
ಅರಣ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಆದಾಯದಲ್ಲಿ ಯಾವುದಾದರೂ ಒಂದು ಭಾಗವನ್ನು
ಅಲ್ಲಿರತಕ್ಕ ತಾಲ್ಲೂಕು ಬೋರ್ಡಿಗಾಗಲಿ, ಪಂಚಾಯ್ತಿಗಾಗಲಿ ಒದಗಿಸಿದ್ದೀರಾ ? ಮಲೆನಾಡಿನ ರೈತರ
ಪರಿಸ್ಥಿತಿ ಏನು ಎಂಬುದು ಇವತ್ತು ನಮಗೆಲ್ಲಾ ಗೊತ್ತು ? ಆ ಜನತೆಯ ಉದ್ಧಾರದ ಬಗ್ಗೆ ಏನು
ಯೋಚನೆ ಮಾಡಿದ್ದೀರಿ, ಇದರ ಬಗ್ಗೆ ಅರಣ್ಯ ಇಲಾಖೆಯಲ್ಲಿ ಏನಾದರೂ ಒಂದು ಅಂಕಿಅಂಶ
ಇಟ್ಟಿದ್ದಿರಾ ? ಎಂದು ಕೇಳುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಿಗೆ ಕೊಡುತ್ತಾ
ಇದ್ದೀರಿ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ ಅಥವಾ ಚಿಕ್ಕಮಗಳೂರು ಜಿಲ್ಲೆಗಳು ಮಾಡಿದಂಥ ಪಾಪ
ಏನು ಎಂಬುದನ್ನು ತಿಳಿಸಬೇಕು. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಈ ರೀತಿ ಖಂಡಿತ ಮಾಡ
ಬಾರದು ಮಲೆನಾಡಿನಲ್ಲಿರತಕ್ಕ ಜನರು ಬಹಳ ಸಹನೆಯಿಂದ ಇರತಕ್ಕವರು, ಅಂಥವರ ಬಗ್ಗೆ
ಯಾವ ರೀತಿ ಇರಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕು.

ಇನ್ನು ಪ್ಲಾಂಟೇಷನ್ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ರಬ್ಬರ್ ಪ್ಲಾಂಟೇಷನ್ ೬೧-೬೨ರಲ್ಲಿ
ಪ್ರಾಯೋಗಿಕ ರೂಪವಾಗಿ ಪ್ರಾರಂಭವಾಯಿತು. ಇವತ್ತಿನವರೆಗೂ ಕೇವಲ ೮ ಸಾವಿರ ಎಕರೆ ಕೂಡ
ಪ್ಲಾಂಟೇಷನ್ ಆಗಿಲ್ಲ. ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಈ ಬಗ್ಗೆ
ಬೃಹತ್ ಯೋಜನೆಯನ್ನು ತಯಾರು ಮಾಡಿದ್ದೇವೆ ಒಂದು ಲಕ್ಷ ಎಕರೆ ರಬ್ಬರ್ ಪ್ಲಾಂಟೇಷನ್
ಮಾಡಬೇಕೆಂದಿದ್ದೇವೆ, ಇದು ೧೨ ಕೋಟಿ ರೂಪಾಯಿಗಳ ಒಂದು ಯೋಜನೆ ಎಂದು ಹೇಳಿದರು.
ಇದನ್ನು ಪ್ರಿಂಟ್ ಮಾಡಿಸಿ ಮಾನ್ಯ ಸದಸ್ಯರಿಗೆ ಹಂಚಿದರೆ ನಿಜವಾಗಿಯೂ ಅನುಕೂಲವಾಗುತ ದೆ.
ಇಂಡಿಯನ್ ರಬ್ಬರ್ ಬೋರ್ಡಿನ ಶಿಫಾರಸಿನಂತೆ ಇದರ ಕಾರ್ಯಕ್ರಮ ನಡೆಸಬೇಕಾಗುತ್ತದೆ ಎಂದು
ಮಾನ್ಯ ಸಚಿವರು ಹೇಳಿದರು, ರಬ್ಬತ್ ಪ್ಲಾಂಟೇಷನ್ ಬಗ್ಗೆ ನಮ್ಮಲ್ಲಿ ಸಾಕಾದಷ್ಟು ಯಾರಿಗೂ
ಟ್ರೈನಿಂಗ್ ಇಲ್ಲ. ಸಿಲೋನ್ ಮತ್ತು ಜಪಾನ್‌ಗಳಿಗೆ ಹೋಗಿ ಇದರಲ್ಲಿ ಶಿಕ್ಷಣ ಪಡೆಯುವುದು ಬಹಳ
ಅವಶ್ಯಕ. ಮಾನ್ಯ ಸಚಿವರು ಹೇಳಿದಂತೆ ಬೃಹತ್ ಯೋಜನೆ ಇದು, ಒಂದು ಲಕ್ಷ ಎಕರೆ ರಬ್ಬರ್
ಪ್ಲಾಂಟೇಷನ್ ಮಾಡಬೇಕಾಗಿರುವಾಗ ಇದಕ್ಕೆ ತಜ್ಞರು ಬೇಕಾಗುತ್ತದೆ. ಇದರಲ್ಲಿ ತರಪೇತಾದ ತಜ್ಞರು
ಇಲ್ಲದೇ ಯೋಜನೆಯನ್ನು ಮಾಡಿದ್ದೇ ಆದರೆ ನಿಜವಾಗಿಯೂ ಅದು ಫೈಲ್ಯೂರ್ ಆಗಬಹುದು ಎಂದು
ಹೇಳಬಯಸುತ್ತೇನೆ. ಇನ್ನು ಮಲೆನಾಡು ಪ್ರದೇಶದಲ್ಲಿ ಪ್ರತಿ ತಾಲ್ಲೂಕಿನಲ್ಲೂ ಪ್ರಾಯೋಗಿಕವಾಗಿ ಒಂದು
ಎಕರೆಯನ್ನು ತೆಗೆದುಕೊಂಡು ಅದರಲ್ಲಿ ರಬ್ಬರ್ ಪ್ಲಾಂಟೇಷನ್ ಮಾಡಿ, ಆ ಪ್ರದೇಶ ಉತ್ತಮವಾದುದೇ
ಅಲ್ಲವೇ ಎಂಬುದನ್ನು ನಿರ್ಧಾರಮಾಡಬೇಕೆಂದು ತಿಳಿಸಬಯಸುತ್ತೇನೆ.

ಇನ್ನು ಕಾಡಿನಲ್ಲಿ ನಡೆಯತಕ್ಕ ಗಂಧದಮರದ ಕಳ್ಳ ಸಾಗಾಣಿಕೆ ಬಗ್ಗೆ ಹೇಳುವುದಾದರೆ ಇದು ಎಲ್ಲ
ಪ್ರದೇಶದಲ್ಲೂ ನಡೆಯುತ್ತಾ ಇದೆ. ಇದನ್ನು ಕಂಡುಹಿಡಿಯುವುದಕ್ಕೆ ಬರೀ ಸ್ಕ್ವಾಡ್ಸ್ ಮಾಡಿದರೆ

(ಶ್ರೀ ಐ. ಸೋಮಶೇಖರಪ್ಪ)

ಸಾಕಾಗುವುದಿಲ್ಲ. ಕಳ್ಳತನ ಮಾಡಿದಂತಹ ವ್ಯಕ್ತಿಗೆ ಕನಿಷ್ಟ ಪಕ್ಷ ೩ ವರ್ಷ ಕಠಿಣ ಶಿಕ್ಷೆಯಾಗಬೇಕು. ಆ ರೀತಿ ಆದರೆ ಅದನ್ನು ಸ್ವಲ್ಪ ಮಟ್ಟಿಗೆ ತಡೆಯುವುದಕ್ಕೆ ಸಾಧಕವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಫಾರಂ ಫಾರೆಸ್ಟ್ರೀ ಬಗ್ಗೆ ಹೇಳುವುದಾದರೆ ಪಂಚಾಯ್ತಿಗಳಿಗೆ ಮತ್ತು ತಾಲ್ಲೂಕು ಬೋರ್ಡು ಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಿಕೊಡಬೇಕೆಂದು ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೀರಿ. ಮಲೆನಾಡಿನಲ್ಲಿ ಒಂದೊಂದು ತಾಲ್ಲೂಕಿಗೆ ಕೇವಲ ಒಂದು ಒಂದೂವರೆ ಸಾವಿರ ರೂಪಾಯಿ ಮಾತ್ರ ಕೊಡುತ್ತಾ ಇದ್ದೀರಿ. ಇದರಿಂದ ಯಾವ ಪಂಚಾಯ್ತಿ ಆಗಲಿ ತಾಲ್ಲೂಕು ಬೋರ್ಡು ಆಗಲಿ ಯಾವ ಪ್ರಮಾಣದ ಫಾರಂ ಫಾರೆಸ್ಟ್ರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳಬೇಕೆಂದರೆ ನಮ್ಮಲ್ಲಿ ಅಂಕಿಅಂಶ ಇಲ್ಲ. ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಎನ್‌ಇಎಸ್ ಪ್ರೋಗ್ರಾಂ ಪೀರಿಯಡ್‌ನಲ್ಲಿ ಇದಕ್ಕಾಗಿ ಎಷ್ಟು ಹಣ ಖರ್ಚುಮಾಡಿದ್ದೀರಿ ? ಎಷ್ಟು ಎಕರೆ ಪ್ಲಾಂಟೇಷನ್ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಆಲೂರು ಹನುಮಂತಪ್ಪ.—೧೯೭೦–೭೧ಕ್ಕೆ ೧೫ ಲಕ್ಷ ಇದೆ, ನಾನು ಡೆವಲಪ್‌ಮೆಂಟ್ ಮಿನಿಸ್ಟರ ಸಂಗಡ ಮಾತನಾಡಿದ್ದೇನೆ. ತಾಲ್ಲೂಕುಬೋರ್ಡ್ ಸೇಕಡ ೨೦, ಗ್ರಾಮ ಪಂಚಾಯಿತಿ ಸೇಕಡ ೩೦, ಸಹಕಾರ ಸೇಕಡ ೫೦ ಭಾಗ ಕಟ್ಟಬೇಕು, ಸುಮಾರು ೩೦ ಲಕ್ಷ ಫಾರಂ ಫಾರೆಸ್ಟ್ರಿಗೆ ಬೇಕಾಗುವುದು.

ಶ್ರೀ ಐ. ಸೋಮಶೇಖರಪ್ಪ:— ಇನ್ನೂ ಫಾರಂ ಫಾರೆಸ್ಟಿನ ಬಗ್ಗೆ ಅವರಿಗೆ ಅನುಭವ ಇಲ್ಲವೆಂದು ಕಾಣುತ್ತದೆ. ಅವರ ತಾಲ್ಲೂಕಿನಲ್ಲಿ ಕಾಡೇ ಇಲ್ಲದಿರಬಹುದು. ನಮ್ಮ ಜಿಲ್ಲೆಯಲ್ಲಿ ಅನೇಕ ಫಾರಂ ಫಾರೆಸ್ಟ್ ಮಾಡಿದ್ದಾರೆ. ತಾಲ್ಲೂಕು ಬೋರ್ಡಿನಲ್ಲಿ ಸಾಕಷ್ಟು ಸಿಬ್ಬಂದಿಯಿಲ್ಲ, ಹಾಗಿದ್ದಮೇಲೆ ವಾಚ್ ಮಾಡುವವರು ಯಾರು? ಫಾರೆಸ್ಟ್ ಇಲಾಖೆಯವರು ತಾಲ್ಲೂಕು ಬೋರ್ಡಿಗೆ ಸಂಬಂಧಪಟ್ಟಿದೆ ಎಂದು ಹೇಳುವುದು. ಎಲ್ಲಾ ಗಿಡಗಳನ್ನೂ ಕಿತ್ತುಕೊಂಡುಹೋಗಿದ್ದಾರೆ. ಇಂಥ ಫಾರಂ ಫಾರೆಸ್ಟ್ ಮಾಡದಿದ್ದರೆ ಒಳ್ಳೆಯದು. ಮಲೆನಾಡಿನಲ್ಲಿ ಮಾಡುವುದನ್ನು ಮುಂದುವರಿಸಬೇಕು ನಮ್ಮ ರೈತರಿಗೆ ಈಗ ಕಿರುಕುಳವಿದೆ, ನನ್ನ ಕ್ಷೇತ್ರದಲ್ಲಿ ಅನ್ಯಾಯವಾಗುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೫ ಲಕ್ಷ ಎಕರೆ ಗೋಮಾಳವಿದೆ. ಆದರೆ ನನ್ನ ಕ್ಷೇತ್ರದಲ್ಲಿ ೧ ಲಕ್ಷ ೫೫ ಸಾವಿರ ಎಕರೆ ಗೋಮಾಳವನ್ನು ಅರಣ್ಯಕ್ಕೆ ತೆಗೆದುಕೊಂಡಿದ್ದಾರೆ. ಯಾವ ಪಂಚಾಯಿತಿಯನ್ನೂ ಕೇಳಿಲ್ಲ, ಅದು ಪಂಚಾಯಿತಿಗೆ ಸೇರಿದ್ದು. ಹೊಸ ನಗರದಲ್ಲಿ ಹೀಗೆ ಪಡೆದು ರೈತರ ಮನೆಯ ಮುಂದೆ ಟ್ರೆಂಚಸ್ ಮಾಡಿದ್ದಾರೆ. ಆದರಿಂದ ರೈತರ ದನಗಳು ಆ ಟ್ರೆಂಚ್‌ಗಳಲ್ಲಿ ಬಿದ್ದು ಸಾಯುತ್ತಿವೆ. ಫಾರೆಸ್ಟ್ ಇಲಾಖೆ ತೆಗೆದುಕೊಳ್ಳಬೇಕಾದರೆ ಕಾನೂನು ಪ್ರಕಾರ ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕ ಮಾಡಬೇಕಾಗುತ್ತದೆ ಅವರು ರೈತರ ಕುಂದುಕೊರತೆಗಳನ್ನು ವಿಚಾರಮಾಡುತ್ತಾರೆ. ಇಂದು ಅನೇಕ ರಿಟ್ ಅರ್ಜಿಗಳು ಮಲೆನಾಡಿನಲ್ಲಿ ನನ್ನ ತಾಲ್ಲೂಕಿನಿಂದ ಬಂದಿವೆ. ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕ ಮಾಡಿದ್ದರೆ ಅವರು ದೂರುಗಳಿದ್ದರೆ ಕೇಳಿ ಒಂದು ಸರಿಯಾದ ತೀರ್ಮಾನಮಾಡುತ್ತಿದ್ದರು. ಈ ದಿವಸದವರೆಗೆ ಶಿವಮೊಗ್ಗ ಜಿಲ್ಲೆ ಸಾಗರ ಡಿವಿಜನ್ನಿನಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕ ಮಾಡಿರುವುದಿಲ್ಲ ಕಣ್ಣುಮುಚ್ಚಿ ಸರಕಾರ ಸೌಜನ್ಯಶೀಲರನ್ನು ಹಾಳುಮಾಡಿದೆ. ಇಂದು ಟ್ರೆಂಚಸ್ ಮಾಡುತ್ತಾ ಇದ್ದಾರೆ. ಪಂಚಾಯಿತಿಯಲ್ಲಿರುವ ೧ ಲಕ್ಷ ೫೫ ಸಾವಿರ ಎಕರೆಯನ್ನು ಯಾವ ನೈತಿಕ ತಳಹದಿಯಮೇಲೆ ಅರಣ್ಯಕ್ಕೆ ತೆಗೆದುಕೊಂಡರು? ಅನೇಕ ಶತಮಾನಗಳಿಂದ ಅದರ ಮೇಲೆ ಪಂಚಾಯಿತಿಯ ಹಕ್ಕಿತ್ತು. ಅದರಲ್ಲಿ ದನ ಮೇಯಿಸುತ್ತಿದ್ದರು. ಇಂದು ಅಲ್ಲಿ ಪ್ಲಾಂಟೇಷನ್ ಮಾಡುತ್ತಿದ್ದಾರೆ, ಹೀಗೆ ಮಾಡುವಾಗ ಯಾವ ಸರಿಯಾದ ನೀತಿಯನ್ನೂ ಅನುಸರಿಸುತ್ತಿಲ್ಲ. ಸಿಸ್ಟಮ್ಯಾಟಿಕ್ ಮೆಥೆಡ್ ಇಲ್ಲದೆ, ಸೈಂಟಿಫಿಕ್ಕಾಗಿ ಮಾಡದೆ ಬೇಕಾದ ಕಡೆ ಪ್ಲಾಂಟೇಷನ್ ಮಾಡುತ್ತಿದ್ದಾರೆ. ಗೋಮಾಳದ ಬಗ್ಗೆ ಹೇಳುವುದಾದರೆ ಎಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿದೆ ಅಂಥ ಕಡೆ ಅರ್ಜಿ ಕೊಟ್ಟರೆ ರಿಜೆಕ್ಟ್ ಮಾಡಿದ್ದಾರೆ. ತಹಸೀಲ್ದಾರರ ಮಟ್ಟದಲ್ಲಿ ಡಿ.ಸಿ. ಮಟ್ಟದಲ್ಲಿ ಮತ್ತು ಮಂತ್ರಿಗಳ ಮಟ್ಟದಲ್ಲಿ ರಿಜೆಕ್ಟ್ ಮಾಡಿದ್ದಾರೆ ಅದಕ್ಕೆ ಕಾರಣ ಗೋಮಾಳ ಇಲ್ಲ, ರೈತರ ತಕರಾರಿದೆ ಎಂಬುದು. ಹಿಂದೆ ವ್ಯವಸಾಯಕ್ಕೆ ಯೋಗ್ಯವಾಗಿ ಇರುವ ಪ್ರದೇಶ ಡಿಸ್ಟ್ರಿಕ್ಟ್ ಫಾರೆಸ್ಟ್ ಮತ್ತು ಗೋಮಾಳಗಳಲ್ಲಿ ಕೇಳಿರುವವರಿಗೆ ಗೋಮಾಳ ಸಾಕಷ್ಟಿಲ್ಲ, ಆದುದರಿಂದ ಒಂದು ಎಕರೆ ಕೂಡ ಕೊಡುವುದಕ್ಕಾಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ, ಸಾವಿರಾರು ಜನರಿಗೆ ಹೀಗಾಗಿದೆ. ಅದೇ ಅರಣ್ಯ ಇಲಾಖೆಯವರು ಅಲ್ಲಿ ನೀಲಗಿರಿ ಮರ ಮತ್ತು ಸಾಗುವಾನಿ ಮರಗಳನ್ನು ಬೆಳೆಸುತ್ತಿದ್ದಾರೆ. ಜನರು ಭೂಮಿ ಕೇಳಿದರೆ ಕೊಡದೆ ಹೀಗೆ ಮಾಡುತ್ತಿದ್ದಾರೆ. ಇಂದು ನೀಲಗಿರಿ ಪ್ಲಾಂಟೇಷನ್, ಸಾಗುವಾನಿ ಪ್ಲಾಂಟೇಷನ್, ಗೇರುಬೀಜ ಪ್ಲಾಂಟೇಷನ್ ಮಾಡುತ್ತಿದ್ದಾರೆ. ಇದಕ್ಕೆ ನೈತಿಕ ಬೆಂಬಲವಿದೆಯೇ ಎಂಬುದನ್ನು ಹೇಳಬೇಕು.

ಇನ್ನು ಶ್ರೀ ಹನುಮಂತಪ್ಪನವರ ಬಗ್ಗೆ ಹೇಳುವುದಾದರೆ ಅವರು ಅರಣ್ಯ ಇಲಾಖೆ ಮಂತ್ರಿಗಳಾಗಿರುವಾಗ ಅನೇಕ ದೂರುಗಳು ನಮಗೆ ಬಂದಿವೆ. ಅವು ಅರಣ್ಯ ಇಲಾಖೆಯು ಸಂಪರ್ಕವಿರುವ ಕಂಟ್ರಾಕ್ಟರಿಂದ ಮತ್ತು ರೈತರಿಂದ ಬಂದಿವೆ. ಅವರು ತಮ್ಮ ಮುಂದಿರುವ ಫೈಲುಗಳನ್ನು ಜಾಗ್ರತೆ ಇತ್ಯರ್ಥಮಾಡುತ್ತಿಲ್ಲ ಎಂಬ ದೂರಿದೆ. He has become hamlet. He dreams and dreams, but never puts it into action. ಎಂದು ಅನೇಕ ರೈತರಿಂದ ಕೇಳಿದ್ದೇವೆ. ಆದುದರಿಂದ ಶ್ರೀ ಹನುಮಂತಪ್ಪನವರು ತಮ್ಮ ಮುಂದಿರುವ ಫೈಲುಗಳನ್ನು ಜಾಗ್ರತೆಯಾಗಿ ಇತ್ಯರ್ಥ ಮಾಡಬೇಕು. ಮಂತ್ರಿಗಳು ಕನಸು ಕಾಣುತ್ತಿದ್ದಾರೆಯೇ ಎಂದು ರೈತರು ಕೇಳುತ್ತಿದ್ದಾರೆ. ಇನ್ನು ಒಂದೇ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI ALUR HANUMANTHAPPA.— Sir, let the Hon. Member quote the specific instances.

SRI H. SIDDAVEERAPPA.— I would like to ask the Hon. Minister, whether I had not brought to his notice about the grave injustice done in the matter of Indian Forest Services. This matter was brought to your notice more than a year back. The High Court gave its final verdict in favour of these officers. I want to know what action you have take in this matter?

SRI ALUR HANUMANTHAPPA.— Regarding the allegation made by Hon. Member Sri Siddaveerappa, the Hon. House is aware that the policy of I. F. S. has been adopted by Government of Mysore prior to 1956 the list of selected I.F.S. had been published as per the selection list of the Government of India. The persons aggrieved and not selected filed a writ in the High Court and on technical grounds the High Court struck down the entire list. We have referred the matter to the Government of India to clarify the position. This is a question pertaining to Indian Forest Services. There was no fault on the part of any officers. Only on technical grounds the list was struck down by the High Court, since the Chief Conservator of Forests in Mysore was the Member of the Selection Committee. Now the matter is pending before the Government of India. Also a leave to appeal to the Supreme Court in the matter has been filed in the High Court of Mysore. The matter was also discussed in the cabinet and we extended the period of service up to 31st March 1970.

Sri H. SIDDAVEERAPPA.—I want you to get the file and examine it. These people with a view to favour some of their own favourites, have continued some persons by giving extension at the cost of our officers who have to get promotions. Still, this Minister stands before this House and he has the temerity to say that the delay is due to something else. This itself shows how incompetent heis.!

Sri ALUR HANUMANTAPPA.—Has the Hon-Member any proof to show that any favourtism is shown to anybody? We have to go according to the rules of procedure. When the policy has been adopted by the Government of Mysore we have accepted the policy like the other States in India. The Government of India is asked to clarify, and we are waiting for their communication. we wanted to know whether they are going in appeal to the Supreme Court. Recently we have received a communication from the Government of India. The matter is before the Cabinet. I cannot say today what will be the final decision in the matter.

ಶ್ರೀ ಐ. ಸೋಮಶೇಖರಪ್ಪ.—ಮಾನ್ಯ ಸಿದ್ಧವೀರಪ್ಪನವರು ಸಹ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಅದನ್ನು ನಾನೂ ಸಹ ಒತ್ತಿ ಹೇಳುತ್ತೇನೆ.

ಅರಣ್ಯ ಇಲಾಖೆಯಲ್ಲಿ ಕೆಲವು ಜೂನಿಯರ್ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಸೀನಿಯರ್ ಅಧಿಕಾರಿಗಳ ಮೇಲೆ ತರತಕ್ಕ ಪ್ರಯತ್ನ ನಡೆದಿದೆ ಎಂದು ನಾನು ಕೇಳಿದ್ದೇನೆ. ಉಪಾಧ್ಯಾಯರಾಗಿ ಯಾರಿದ್ದರು ಅಂಥ ಸೀನಿಯರ್ ಆಗಿರುವ ಅಧಿಕಾರಿಗಳ ಮೇಲೆ ಅವರ ಶಿಷ್ಯರನ್ನು ತರತಕ್ಕ ಪ್ರಯತ್ನ ನಡೆದಿದೆ ಎಂದು ನಾನು ಕೇಳಿದ್ದೇನೆ. ಇಂಥ ಅನ್ಯಾಯವಾಗದಂತೆ ಮಂತ್ರಿಗಳು ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅರಣ್ಯದಿಂದ ಭದ್ರಾವತಿ ಕಾರ್ಖಾನೆಗೆ ಸೌದೆ ಮತ್ತು ಇದ್ದಿಲು ಸರಬರಾಜು ಮಾಡುತ್ತಿದ್ದಾರೆ. ಸುಮಾರು ೧೪ ಲಕ್ಷ ಚೀಲ ಇದ್ದಿಲು ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಒದಗಿಸಬೇಕು ಎನ್ನುವ ಯೋಜನೆ ಇದೆ. ಮಾನ್ಯ ಕೈಗಾರಿಕಾ ಮಂತ್ರಿಗಳೂ ಈಗ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅಲ್ಲಿ ನಡೆಯತಕ್ಕ ದುರ್ವ್ಯವಹಾರವನ್ನು ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಲಾರಿಗೆ ಚೀಲಗಳನ್ನು ತುಂಬುವಾಗ ಕಂಟ್ರಾಕ್ಟರು ಏನು ಮಾಡುತ್ತಾರೆಂದರೆ ೧೪೦ ಅಥವಾ ೧೫೦ ಚೀಲಗಳನ್ನು ತುಂಬಿ ೨೦೦ ಚೀಲ ತುಂಬಿರುವುದಾಗಿ ಅಲ್ಲಿರುವಂಥ ಫಾರೆಸ್ಟ್ ಗಾರ್ಡ್‌ನಿಂದ ಬರೆಸಿಕೊಳ್ಳುತ್ತಾರೆ. ಫಾರೆಸ್ಟ್ ಗಾರ್ಡ್ ಕಂಟ್ರಾಕ್ಟರ ಕ್ಯಾಂಪಿನಲ್ಲಿಯೇ ಊಟ ಮಾಡಿಕೊಂಡು ಅಲ್ಲಿಯೇ ಇರುತ್ತಾನೆ. ಅವನಿಗೆ ಇರುವುದಕ್ಕೆ ಒಂದು ಷೆಡ್ ಸಹ ಅರಣ್ಯ ಇಲಾಖೆಯವರು ಕೊಟ್ಟಿರುವುದಿಲ್ಲ. ಆದ್ದರಿಂದ ಗಾರ್ಡ್ ಕಂಟ್ರಾಕ್ಟರ ಮುಲಾಜಿನಲ್ಲಿ ಇರುತ್ತಾನೆ. ರಾತ್ರಿ ಮೂರು ಗಂಟೆ ನಾಲ್ಕು ಗಂಟೆ, ಯಾವಾಗ ಬೇಕಾದರೂ ಪರ್ಮಿಟ್ ಕೊಡುತ್ತಾನೆ. ಲಾರಿಯಲ್ಲಿ ೨೦೦ ಚೀಲ ತುಂಬಿರುವುದಾಗಿ ಪರ್ಮಿಟ್ ಕೊಡುತ್ತಾನೆ. ಆದರೆ ಅಲ್ಲಿರುವುದು ೧೪೦-೧೫೦ ಚೀಲ ಇದ್ದಿಲು ಮಾತ್ರ. ೪೦—೫೦ ಖಾಲಿ ಗೋಣಿ ಚೀಲಗಳನ್ನು ತುಂಬಿರುತ್ತಾರೆ. ಇದನ್ನು ಕಬ್ಬಿಣದ ಕಾರ್ಖಾನೆಗೆ ಸರಬರಾಜು ಮಾಡುತ್ತಾರೆ. ಕಾರ್ಖಾನೆಯಲ್ಲಿ ೨೦೦ ಚೀಲ ಬಂದಿರುವುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ೧೪೦ ಚೀಲ ಇದ್ದಿಲು ಬಂದರೂ ಸಹಿತ ಖಾಲಿ ಚೀಲಗಳನ್ನೂ ಲೆಕ್ಕಕ್ಕೆ ಸೇರಿಸಿಕೊಂಡು ೨೦೦ ಚೀಲ ಎಂದು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಎಂದರೆ ಒಂದು ಲಾರಿಗೆ ೪೦-೫೦ ಖಾಲಿ ಚೀಲಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಪೂರ್ತಿ ಹಣವನ್ನು ಪಾವತಿ ಮಾಡುತ್ತಾರೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಅನೇಕ ಕೇಸುಗಳು ಸಿಕ್ಕಿದ್ದು ಅದರ ಸಂಬಂಧದಲ್ಲಿ ೨೫ ರೂಪಾಯಿ, ೫೦ ರೂಪಾಯಿ ೧೦೦ ರೂಪಾಯಿ ದಂಡ ಹಾಕಿ, ಪುನಃ ಅದೇ ಕಂಟ್ರಾಕ್ಟರನಿಂದ ಸಪ್ಲೈ ತೆಗೆದುಕೊಳ್ಳುತ್ತಿದ್ದಾರೆ. ಇದೇ ರೀತಿಯಲ್ಲಿ ಸೌದೆ ಸರಬರಾಜಿನಲ್ಲಿಯೂ ನಡೆಯುತ್ತ ಇದೆ. ಕಾಗದದ ಕಾರ್ಖಾನೆಗೆ ಬೊಂಬನ್ನು ಸರಬರಾಜು ಮಾಡುವುದರಲ್ಲಿಯೂ ಇಂಥ ದುರ್ವ್ಯವಹಾರ ನಡೆಯುತ್ತಿದೆ. ಒಂದೇ ಲಾರಿಗೆ ಎರಡು ಮೂರು ಸಲ ಬಿಲ್ ಕೊಡುವಂಥ ಪ್ರಕರಣಗಳು ನಡೆಯುತ್ತಿವೆ. ಮಾನ್ಯ ಮಂತ್ರಿಗಳಿಗೆ ಬೇಕಾದರೆ ಅಂಕಿ ಅಂಶಗಳನ್ನು ಕೊಡುತ್ತೇನೆ. ಲಾರಿ ನಂಬರು ಕೊಡುತ್ತೇನೆ. ಪೇಪರ್ ಮಿಲ್ಲಿಗೆ ಬೊಂಬು ತೆಗೆದುಕೊಂಡು ಬೆಳಿಗ್ಗೆ ಎಂಟು ಗಂಟೆಗೆ ಲಾರಿ ಬರುತ್ತದೆ. ಪುನಃ ಮಧ್ಯಾಹ್ನ ಮತ್ತು ಸಾಯಂಕಾಲ ಬಂದಂತೆ ಅದೇ ಲಾರಿ ನಂಬರನ್ನು ನಮೂದು ಮಾಡಿ ಬಿಲ್ ಕೊಡುತ್ತಿದ್ದಾರೆ. ಈ ರೀತಿಯ ದುರ್ವ್ಯವಹಾರಗಳು ಇದ್ದಿಲು, ಸೌದೆ ಮತ್ತು ಬೊಂಬು ಸರಬರಾಜು ಮಾಡುವುದರಲ್ಲಿ ನಡೆಯುತ್ತಿವೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಿಶೀಲನೆ ಮಾಡಿ, ಈ ದುರ್ವ

ವಹಾರಗಳಲ್ಲಿ ಪಾತ್ರವಿರುವವರನ್ನು ಕಂಡುಹಿಡಿದು, ಕಂಟ್ರಾಕ್ಟರನ್ನು ವಜಾ ಮಾಡಿ ದಂಡ ವಿಧಿಸುವುದಲ್ಲದೆ, ಸಂಬಂಧಪಟ್ಟ ಇತರರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೆ ಇದ್ದರೆ ರಾಜ್ಯದ ಹಣ ಮೋಸವಾಗುತ್ತದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House now stands adjourned to meet tomorrow at 1-00 P. M.

The House adjourned at fifty-five Minutes past 6 of the Clock to meet again at One of the Clock on Tuesday, the 10th March 1970.

WD 14716—GPB—550—11-8-70

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 10th March 1970.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTION

(to which oral answers were given)

CONTRACT FOR THE CONSTRUCTION OF THE BRIDGE ACROSS THE RIVER TUNGABHADRA.

290. Sri H. SIDDAVEERAPPA (Harihar)—

will the Minister for Public Works be pleased to state :—

(*a*) whether the Karnatak Construction Company is the Contractor entrusted with the construction of the bridge across the River Tungabhadra at Harihar ;

(*b*) the value of the work for which contract is given ;

(*c*) when was the contract given and the period within which the work had to be completed;

(*d*) the reports of the concerned officer regarding the performance of these Contractors in the construction of this bridge ?

SRI K. LAKKAPPA (Minister for Public Works)

(*a*) no ; the contractors are M/s. Karnatak Traders.

(*b*) Rs. 19.98 lakhs.

(*c*) In May 1965.

Within a period of three years.

(*d*) The reports indicate that there has been delay on the part of the Contractors in the completion of the work.

Sri H. SIDDAVEERAPPA.—Is it not a fact that this bridge is for connecting the road to National Highway No. 4 between Bangalore and Poona and this bridge was sanctioned because the old bridge that we are now using was broken in the year 1924 and on account of urgency this work was taken up ?

Sri K. LAKKAPPA : It is true, Sir.

Sri H. SIDDAVEERAPPA.—Knowing the performance of these contractors as was brought to the notice of the Government during the last few days, is it advisable to continue them as contractors for the completion of this work, or do you think it advisable to change the contractors and give the work to contractors who can do this work satisfactorily ?

Sri K. LAKKAPPA.—The estimate of this bridge comes to Rs. 19 lakhs and odd. So far, they have already completed 93 per cent of the work amounting to Rs. 18,47,447, and only a small portion of the work is now left over. At this stage, I feel it is not desirable to take any step against the contractors. They have also undertaken to finish the work by June 1970.

Sri H. SIDDAVEERAPPA.—What is the penalty, if any, you have imposed on the contractors for failure on their part to have completed this contract work in time ?

Sri K. LAKKAPPA.—This question will have to be examined taking into account some of the delays on the part of the Department also. Government of India made lot of delay in giving designs, etc. Also, to start with it was contemplated to have open foundations, but afterwards it came to the notice of the Department that deep-well foundations will have to be done, and again there was some delay. If any penalty is to be imposed, we have to take all these things into consideration. The matter is under consideration and we will examine it.

ಶ್ರೀ ಜಿ. ಆರ್. ಹಾಲಸ್ವಾಮಿ.—ಕರ್ಣಾಟಕ ಟ್ರೇಡರ್ಸಿಗೆ ವರ್ಕ್ ಆರ್ಡರ್ ಕೊಟ್ಟಿದ್ದು ಯಾವಾಗ ಮತ್ತು ಅವರಿಗೆ ಕೆಲಸವನ್ನು ಯಾವ ವರ್ಷದಲ್ಲಿ ಕೊಡಲಾಯಿತು ?

Sri K. LAKKAPPA.—The work order was issued on 15th May 1965 They had to complete the work by 16th May 1968. They did not do it in time.

Sri D. B. KALMANKAR.—May I know how many contractors had come forward for this particular work and what was the lowest bid ?

Sri K. LAKKAPPA.—The tender of these contractors was the lowest, their rate was even below the schedule rate and it was 2.69 per cent less than the amount of the estimate, and therefore we had to consider this case.

ಶ್ರೀ ಎಂ. ನಾಗಪ್ಪ.— ಮಾನ್ಯ ಮಂತ್ರಿಗಳು ಹಾಲಸ್ವಾಮಿಯವರ ಪ್ರಶ್ನೆಗೆ ವರ್ಕ ಆರ್ಡರ್ ಬೇಸಿಸ್ ಮೇಲೆ ಕೆಲಸಕೊಡಲಾಯಿತೆಂದೂ ಮತ್ತು ಕಲ್ಮನ್‌ಕರ್ ಅವರ ಪ್ರಶ್ನೆಗೆ ಕೆಲಸವನ್ನು ಟೆಂಡರ್ ಬೇಸಿಸ್ ಮೇಲೆ ಕೊಡಲಾಯಿತೆಂದು ಎರಡು ರೀತಿಯಲ್ಲಿ ಉತ್ತರ ಹೇಳಿದ್ದಾರೆ. ಇವುಗಳಲ್ಲಿ ಯಾವುದು ಸರಿ ? ಇನ್ನು ಆ ಕಂಟ್ರಾಕ್ಟರು ತಮ್ಮ ಕಂಡೀಷನ್‌ಗಳಿಗೆ ತಪ್ಪಿನಡೆದಾಗ ಅವರಿಂದ ಬರಿ ಜುಲ್ಮಾನೆ ಒಂದನ್ನು ಮಾತ್ರ ವಸೂಲ್ಮಾಡಬೇಕೆಂಬುದು ಇದೆಯೇ ಅಥವಾ ಸರ್ಕಾರದವರು ಅವರಿಂದ ಕಾಸ್ಟಿನಲ್ಲಿ ಎಷ್ಟು ಹೆಚ್ಚುತ್ತದೋ ಅಷ್ಟನ್ನೂ ವಸೂಲ್ಮಾಡುವುದಕ್ಕೆ ಅವಕಾಶವಿಲ್ಲವೇ ?

Sri K. LAKKAPPA.—Sir, the details are hot before me. If the Hon. Member wants that information, I will furnish it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿತ್ಯವೂ ನಮ್ಮ ಮುಖ್ಯ ಮಂತ್ರಿಗಳು ಹೇಳಿದಂತೆ ಇವರು ಸುಪ್ರಭಾತವನ್ನು ಹಾಡಿದಂತಾಗುತ್ತಿದೆ. ಈ ಇಲಾಖೆಗೆ ಸಂಬಂಧಪಟ್ಟಹಾಗೆ ಇವರಿಗೆ ಎಷ್ಟು ಕೆಲಸಗಳನ್ನು ಕೊಡಲಾಗಿತ್ತು, ಅವುಗಳ ಬಗ್ಗೆ ಏನು ಕಂಡೀಷನ್‌ಗಳನು ಸ್ಟಿಪ್ಯುಲೇಟ್ ಮಾಡಿದ್ದರು, ಇವರಿಗೆ ಕೊಟ್ಟ ಕೆಲಸಗಳಲ್ಲಿ ಎಷ್ಟನ್ನು ಕೆಡಿಸಿದ್ದಾರೆ ಎಂಬ ಬಗ್ಗೆ ವಿವರಗಳನ್ನು ಸಭೆಯ ಮುಂದಿಡಲಾಗುವುದೇ ?

ಅಧ್ಯಕ್ಷರು.—ಈ ಉಪಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri BAPU GOWDA.—Will the Minister for Public Works take necessary measures and precautions to see that questions relating to Karnataka Traders may not be asked in this House ?

Mr. SPEAKER.—The supplementary is disallowed as it is besides the scope of the main Question.

ಶ್ರೀ ದೊಡ್ಡ ಬೋರೆಗೌಡ—ಸರ್ಕಾರದವರು ಕರ್ಣಾಟಕ ಟ್ರೇಡರ್ಸಿಗೆ ಇಲ್ಲಿಯವರೆಗೂ ಈ ಮೈಸೂರು ರಾಜ್ಯದಲ್ಲಿ ಎಷ್ಟು ಕೆಲಸಗಳನ್ನು ಕೊಟ್ಟಿದ್ದರು? ಅವರು ಹಾಗೆ ಕೊಟ್ಟ ಕೆಲಸಗಳಲ್ಲಿ ಯಾವುದನ್ನಾದರೂ ಪೂರ್ಣ ಮಾಡಿದ್ದಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಆ ವಿವರಗಳೆಲ್ಲಾ ಸದ್ಯಕ್ಕೆ ನನ್ನಲ್ಲಿಲ್ಲ. ಅವರ ಮೇಲೆ ಡಿಲೆ ಅಪಾದನೆ ಒಂದನ್ನು ಬಿಟ್ಟರೆ ಬೇರೆ ಯಾವ ಆಪಾದನೆಯೂ ಇಲ್ಲ.

Sri SIDDAIAH KASHIMATH.—May I know the amount paid to the contractors until now and whether the time limit has been extended ?

Sri K. LAKKAPPA.—They have asked for extension of time till June 1970 and the matter /s under consideration.

Sri H. N. NANJE GOWDA : It seems many works are given to these contractors. I want to know whether they purposely quote low rates with a view only to get the work, and if so, are they not doing it intentionally ?

Sri K. LAKKAPPA.—Sir, I do not know that.

Sri R. DAYANANDA SAGAR.—Have you received any complaint that the workmanship of these contractors has been difective in this project and what action have you taken ?

Sri K. LAKKAPPA.—Practically no such defects have been noticed nor complaints received.

CLOSURE OF K. C. T. MILLS, HUBLI

296. Sri S. R. BOMMAI—(Kundgol).— Will the Minister for Development be pleased to state :—

(*a*) whether it has come to the notice of the Government that about five thousand workers are unemployed due to the closing of the K. C. T. Mill at Hubli and the steps Government has taken to provide employment to these workers ;

(*b*) whether the Government is thinking of starting the Mill or selling it or handing management to anybody ;

(*c*) the loss incurred from the date of starting up to closing of the K. C. T. Mill ;

(*d*) whether the Government has taken any step for recovery of this loss from the body responsible for it, if not reasons for it ;

(*e*) whether the Government has dissolved the body which mismanaged and caused heavy loss in K. C. T. Mill administration, if not, reasons for the same ?

Sri P. M. NADGOUDA (Minister for Development).—

(*a*) 1,886 workers are unemployed due to the closure of the Mills. Workers have been given compensation as per rules. The question of providing employment does not arise.

(*b*) It has been decided to hand over the Mills to Messrs. G. Mahadevappa & Sons, Hubli, for running it on lease.

(*c*) Rs. 66,69,397-15 (approximately) as at the end of 30th June 1969.

(*d*) The losses are working losses and as such the questiou of the recovery does not arise.

(*e*) Does not arise in view of reply to clause (*d*) above.

Sri S. R. BOMMAI.—May I know whether the Government has adopted negotiation method or tender method in granting the management of this Mill to M/s. G. Mahadevappa & Sons and if so, whether there is any difficulty in the Agreement to reinstate all the workers of the Mill ?

Sri P. M. NADGOUDA.—The Government has adopted open negotiation method and the Government has paid all the liabilities to the labour under the Labour Act, and therefore the Government cannot empose any condition that the labour should be employed by them However. I assure the Hon. Member that the Government will advise the lease to, employ as much labour as possible.

Sri AZEEZ SAIT :— Is it not a fact that the existing labour laws contemplate that the new management should first take the consent of the workers and if they do not agree to work under him, then appoint new workers?

Sri P. M. NADGOUDA:— When new management comes new labour laws will come into force.

ಶ್ರೀ ಎಂ. ಎಸ್. ಕೃಷ್ಣನ್ :— ಸ್ವಾಮಿ, ಹುಬ್ಬಳ್ಳಿಯ ಕೆ.ಸಿ.ಟಿ. ಗಿರಣಿಯನ್ನು ಜಿ. ಮಹದೇವಪ್ಪ ಅಂಡ್ ಸನ್ಸ್ ಅವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದಕ್ಕೆ ಮೊದಲು ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆ ಮತ್ತು ಆ ಹಣವನ್ನು ರಿಕವರಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೇ? ಈ ಅಗ್ರಿಮೆಂಟ್‌ನಲ್ಲಿ ಆ ಹಣವನ್ನು ಕಲೆಕ್ಟ್ ಮಾಡುವುದಕ್ಕೆ ಕಂಡೀಷನ್ಸ್ ಹಾಕಿರಲಿಲ್ಲವೇ?

ಶ್ರೀ ಪಿ.ಎಂ. ನಾಡಗೌಡ :– ಇದಕ್ಕೆ ಬೇರೆ ಯಾವ ಹಣವನ್ನೂ ಸರ್ಕಾರದವರೇ ನೇರವಾಗಿ ಕೊಡಲಿಲ್ಲ. ಲೇಬರ್ಸ್ ಕಾಂಪನ್ಸೇಷನಗೆ ಎಂದು ಸುಮಾರು ೧೬–೧೭ ಲಕ್ಷರೂಪಾಯಿಯಷ್ಟು ಕೊಟ್ಟಿದ್ದೇವೆ. ಮತ್ತು ಕೆ. ಸಿ. ಟಿ. ಮಿಲ್ಸ್‌ನವರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ತೆಗೆದು ಕೊಂಡಿದ್ದಾರೆ. ಅದಕ್ಕೆ ಮಾತ್ರ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ.

ಶ್ರೀ ಐ. ಸೋಮಶೇಖರಪ್ಪ :— ಕೆ.ಸಿ.ಟಿ. ಮಿಲ್ಸ್‌ನವರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಿಂದ ಎಷ್ಟು ಹಣವನ್ನು ತೆಗೆದುಕೊಂಡಿದ್ದಾರೆ.?

ಶ್ರೀ ಪಿ. ಎಂ. ನಾಡಗೌಡ :— ಎರಡೂ ಬ್ಯಾಂಕುಗಳಿಂದ ೮೦ ಲಕ್ಷ ರೂಪಾಯಿ ಸಾಲವನ್ನು ತೆಗೆದು ಕೊಂಡಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ :— ಕೆ.ಸಿ.ಟಿ ಮಿಲ್ಸ್‌ನ್ನು ಕೋ ಆಪರೇಟಿವ್ ಸೆಕ್ಟಾರ್‌ಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಅದು ಪ್ರೈವೇಟ್ ಆಗಿ ಇಂಡಿವಿಜ್ಯುಯಲ್‌ಗೆ ಸೇರಿದ್ದು ನಿಜವೇ? ಅದನ್ನು ಸರ್ಕಾರದವರು ತೆಗೆದುಕೊಂಡು ಮತ್ತೆ ಅದರ ಮೇಲೆ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿ ಪುನಃ ಸರ್ಕಾರದವರು ಅದನ್ನು ಪ್ರೈವೇಟ್ ಇಂಡಿವಿಜು ಯಲ್‌ಗೆ ಕೊಡುವುದಕ್ಕೆ ಕಾರಣ ಏನು?

ಶ್ರೀ ಪಿ ಎಂ. ನಾಡಗೌಡ :— ಇದನ್ನು ಸರ್ಕಾರದವರೇ ನೇರವಾಗಿ ತೆಗೆದುಕೊಂಡಿಲ್ಲ. ಈ ಮಿಲ್ಲನ್ನು ಕೋ ಆಪರೇಟೀವ್ ಸೆಕ್ಟ್ರಾರ್‌ನಿಂದ ಒಬ್ಬ ಕಲ್ಕತ್ತಾ ಪಾರ್ಟಿ ತೆಗೆದು ಕೊಂಡಿದ್ದರು. ಅದರಲ್ಲಿ ಎರಡು ಸೆಕ್ಷನ್ ಇತ್ತು. (೧) ಡಿಲಾಪಿಟೇಡ್ ಸೆಕ್ಷನ್ ಮತ್ತು (೨) ೧೨ ಸಾವಿರದಷ್ಟು ಹೊಸ ಸ್ಪಿಂಡಲ್ಸ್ ಹಾಕಿತ್ತು. ಇದಕ್ಕೆ

(ಶ್ರೀ ಪಿ. ಎಂ. ನಾಡಗೌಡ)

ಸರ್ಕಾರದವರೇ ನೇರವಾಗಿ ರೊಕ್ಕ ಕೊಟ್ಟಿಲ್ಲ. ಅವರು ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ. ಅದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ.

ಶ್ರೀ ಆರ್. ಜಿ. ವಾಲಿ :— ಈ ಮಿಲ್‌ನಲ್ಲಿ ಲಾಸ್ ಆಗಿದೆ ಎಂದು ಹೇಳಿದ್ದೀರಿ. ಇಷ್ಟು ಲಾಸ್ ಏತಕ್ಕೆ ಆಯಿತು ಎಂದು ತಿಳಿದುಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಒಂದು ವೇಳೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಕಾರಣದಿಂದ ಲಾಸ್ ಆಗಿದ್ದರೆ ಅವರನ್ನು ರಿಸೈನ್ ಮಾಡಿ ಎಂದು ಏತಕ್ಕೆ ಹೇಳಲಿಲ್ಲ ಮತ್ತು ಈ ನಷ್ಟವನ್ನು ಯಾವರೀತಿ ತುಂಬಬಹುದು ಎಂದು ಆಲೋಚಿಸಿದ್ದೀರಾ?

ಶ್ರೀ ಪಿ.ಎಂ. ನಾಡಗೌಡ :— ಇದರ ಲಾಸ್ ಆಗಿರುವ ಕಾರಣದಿಂದಲೇ ಈ ಮಿಲ್ಲನ್ನು ಮುಚ್ಚಿದ್ದೇವೆ ಈಗ ಇದನ್ನು ೨೦ ವರ್ಷ ಲೀಸ್‌ಗೆ ಕೊಟ್ಟಿದ್ದೇವೆ. ಆ ಪೀರಿಯಡ್ ಒಳಗಾಗಿ ನಮ್ಮ ಲಯಬಿಲಿಟೀಸ್ ಏನು ಇದೆಯೋ ಅದು ಮುಗಿದು ಅದರಲ್ಲಿರುವ ಮಿಷನರಿ ಮತ್ತು ನಿವೇಶನ ಸರ್ಕಾರಕ್ಕೆ ಉಳಿದು, ೨೪ ಲಕ್ಷ ರೂಪಾಯಿ ಸಿಕ್ಕಬಹುದು ಎಂದು ನಮಗೆ ಅನ್ನಿಸುತ್ತದೆ.

ಶ್ರೀ ಬಿ ಭಾಸ್ಕರ ಶೆಟ್ಟಿ :— ಎಷ್ಟು ವರ್ಷಕ್ಕೆಂದು ಈ ಲೀಸನ್ನು ಫಿಕ್ ಮಾಡಿದ್ದೀರಾ ಮತ್ತು ಅದರ ಕಂಡೀಷನ್ಸ್ ಏನು?

Sri P.M. NADGOUDA :— The mill has been given to Messrs. G. Mahadevappa & Sons., Hubli, on the following conditions.

The lease is given for a total period of 20 years without reserving any right of option on their part to renew the agreement at the end of first ten years.

For the first five years at Rs. 6·10 lakhs per year;

For the Second five years at Rs. 7·00 lakhs per year;

For the Third five years at Rs. 7.25 lakhs per year; and

For the fourth five years at Rs. 8·17 lakhs per year;

This was a profitable proposition and the Government have accepted it by open negotiations.

ಶ್ರೀ ಬಾಪೂಗೌಡ :— ಈಗ ಕಂಡೀಷನ್ಸ್ ಹಾಕಿರುವುದರಲ್ಲಿ ಆ ಮಿಲ್ಲಿನವರು ಹೆಚ್ಚಿಗೆ ಪ್ರಾಫಿಟ್ ಮಾಡಿದರೆ ಅದರಲ್ಲಿ ಏನಾದರೂ ಕಮೀಷನ್ ಕೊಡಬೇಕೆಂದು ಕಂಡೀಷನ್ ಹಾಕಿದ್ದೀರಾ? ಹಾಗೆ ಇದ್ದರೆ ಆ ಪರ್ಸೆಂಟೇಜ್ ಕಮೀಷನ್ ಎಷ್ಟು?

ಶ್ರೀ ಪಿ. ಎಂ. ನಾಡಗೌಡ :— ಮಾನ್ಯ ಸದಸ್ಯರು ಹೇಳಿದ ಪಾಯಿಂಟ್ ಇದರಲ್ಲಿ ಬರಲಿಕ್ಕಿಲ್ಲ.

Sri C K. RJAAIAH SHETTY:— What is the value of assets as per book value at present and what is the amount to be realised according to the statement you have made just now?

Sri P. M. NAD GOUDA :— The following is the detailed position :

V-31'N70 N70-25-14 (B) 4883

Payments :

1.	Share Capital :		Rs.
	Government	...	40.00 lakhs
	Members	...	15.37 ,,
2.	Loans : Government (already paid)	...	8.00 ,,
	agreed to be paid)	...	9.00 ,,
2.	K. C. C. Bank and Apex Bank (under Government guarantee)	...	80.00 ,,
3.	Other claims	...	10.00 ,,
		Total :	Rs. 162.37 lakhs

The balance of Government guaranteed loans after adjustment of the receipts and a sum of Rs. 10.00 lakhs to be paid to other claimants is Rs. 77-00 lakhs.

Sri R. DAYANANDA SAGAR.— Were there other applicants and if so, the nature of their offer?

Sri P.M. NAD Gouda :— There were 11 parties who gave their offer. Out of these, the offers of the following three important parties were considered by open negotiations:—

I MESSRS. DAVANAGERE COTTON MILLS LIMITED, DAVANAGERE.

(for a total period of 20 years reserving the right of option in their part to renew the agreement at the end of the first ten years)

Their offer consists of two parts:

1. Taking on lease the 12,000 new spindles and 300 looms and other required ancillary machinery:

for the first half year ... ... nil
for the first year thereafter ... ... Rs. 2 50 lakhs
for the next four years at Rs. 5 lakhs per year
for the subsequent four years at Rs. 5 50 lakhs per year
for the nextfive years at Rs. 7.25 lakhs per year
for the subsequent five years at Rs. 8.25 lakhs per year

. NAD GOWDA)

2. Offer for outright sale of the remaining 300 looms and other pindles and machinery found surplus for their use Rs. 8.15 lakhs.

II SHRI P. R. DAMANI, OF M/s JAM SHRI RANJIT SINGHJI SPINNING AND WEAVING MILLS LIMITED, No. 11, BANK STREET, FORT BOMBAY.

(for a total pericd of 20 years reserving the right of option on their part to renew the agreement at the end of first ten years)

for the first five years at Rs. 6.00 lakhs per year
for the second five years at Rs. 7.00 lakhs per year
for the third five years at Rs. 7.50 lakhs per year
for the fourth five years at Rs. 8.00 lakhs per year.

III MESSRS. G. MAHADEVAPPA & SONS, HUBLI

(for a total period of 20 years without reserving any right of option on their part to renew the agreement at the end of first ten years).

for the first five years at Rs. 6.10 lakhs per year
for the second five years at Rs. 7.00 lakhs per year
for the third five years at Rs. 7.80 lakhs per year
for the fourth five years at Rs. 8.17 lakhs per year.

ಶ್ರೀ ಎಂ. ನಾಗಪ್ಪ:—ಇಲ್ಲಿರುವ ಲೇಬರರ್ಸ್‌ಗಳಿಗೆ ಕಾಂಪನ್ಸೇಷನ್ ಕೊಟ್ಟು ಇವರನ್ನು ಡಿಸ್‌ಮಿಸ್ ಮಾಡಲಾಗಿದೆ ಎಂದು ಹೇಳಿದಿರಿ. ಆದರೆ ಲೇಬರು ಕಾಯುದೆ ಪ್ರಕಾರ ಪುನಃ ಇದೇ ಮಿಲ್ಲನ್ನು ತೆರೆದರೆ ಹಿಂದೆ ಯಾವ ಲೇಬರರುಗಳು ಇದ್ದರೋ ಅವರನ್ನೇ ಪುನಃ ಇಲ್ಲಿಗೆ ಕೆಲಸ ತೆಗೆದುಕೊಳ್ಳಬೇಕು ಎಂದು ಕಾಯುದೆಯಲ್ಲಿದೆ. ಆ ರೀತಿ ಇಲ್ಲೂ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಇದೇ ಲೇಬರರು-ಗಳನ್ನು ಇಲ್ಲಿ ನೇಮಕ ಮಾಡಲು ಆಗುವುದಿಲ್ಲವೇ?

ಶ್ರೀ ಪಿ. ಎಂ. ನಾಡಗೌಡ:—ಹೊಸ ಟರ್ಮ್ಸ್ ಆಫ್ ರೆಫರೆನ್ಸ್ ಮೇಲೆ ಹೊಸ ಲೆಸ್ಸೀ ಬರುತ್ತಾರೆ. ಹೊಸ ಕಾಯುದೆ ಪ್ರಕಾರ ಇದನ್ನು ಒತ್ತಾಯ ಮಾಡಲು ಬರುವುದಿಲ್ಲ.

SRI S. R. BOMMAI:—As per agreement now read out Government is getting 7 lakhs from M/s Mahadevappa & Co., What is the arrangement to pay off the liabilities that are due from the Mill to Banks and other institutions?

SRI P. M. NAD GOUDA:—Government has taken the responsibility to pay them now.

ಶ್ರೀ ಎಲ್. ಶ್ರೀಕಂಠಯ್ಯ.—ತಮ್ಮ ಹೇಳಿಕೆ ಪ್ರಕಾರ ಸರಕಾರ ಸುಮಾರು ೮೦ ಲಕ್ಷಕ್ಕೂ ಮೇಲ್ಪಟ್ಟು ಗ್ಯಾರಂಟೀ ಆಗಿರುವುದರಿಂದ ಇಷ್ಟು ಹಣವನ್ನು ಇಲ್ಲಿಂದ ವಾಪಸ್ ಪಡೆಯಲು ಆಗುತ್ತದೆಯೆ? ಮತ್ತು ಈಗಿರುವ ಟೆಕ್ಸ್‌ಟೈಲ್ ಇಂಡಸ್ಟ್ರೀಯಲ್ಲಿ ಒಂದು ರೀತಿಯಾದ ಕ್ರೈಸಿಸ್ ಬಂದು ಇರುವುದರಿಂದ ಯಾವ ಭರವಸೆಯಿಂದ ಮತ್ತು ಯಾರಿಂದ ಟೆಕ್ನಿಕಲ್ ಅಡ್ವೈಸು ಪಡೆದು ಇವರಿಗೆ ಗ್ಯಾರಂಟೀ ಆಗಿದ್ದೀರಿ?

ಶ್ರೀ ಪಿ. ಎಂ. ನಾಡಗೌಡ:—ಇದು ೧೯೬೦ ರಿಂದ ನಡೆದು ಬಂದಿರುವ ವ್ಯವಹಾರ. ನಾವು ಆರಂಭ ಮಾಡಿರುವುದಲ್ಲ. ೧೯೬೦ ರಿಂದ ಇಲ್ಲಿಯವರೆಗೆ ಗ್ಯಾರಂಟೀ ಕೊಟ್ಟಿರುವದು ಸುಮಾರು ೮೦ ಲಕ್ಷದವರೆಗೆ ಬರುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ:—ಇದರಲ್ಲಿ ಸುಮಾರು ೬೬.೭೦ ಲಕ್ಷದಷ್ಟು ನಷ್ಟವಾಗಿರುವುದನ್ನು ಯಾವ ರೀತಿ ಸರಕಾರದವರು ಭರ್ತಿ ಮಾಡಿಕೊಳ್ಳಬೇಕೆಂದು ಇದ್ದಾರೆ?

ಶ್ರೀ ಪಿ. ಎಂ. ನಾಡಗೌಡ:—ಈಗ ಮಾಡಿರುವ ಇಪ್ಪತ್ತು ವರ್ಷಗಳ ಅಗ್ರಿಮೆಂಟು ಪ್ರಕಾರ ನಮಗೆ ಇಲ್ಲಿ ಸುಮಾರು ೪೦ ಎಕರೆ ಭೂಮಿ ಹಾಗೂ ಲ್ಯಾಂಡು ನಮಗೇ ಉಳಿಯುತ್ತದೆ ಮತ್ತು ಇವರ ಲೀಸ್ ಪೀರಿಯಡ್ ಮುಗಿಯುವುದರೊಳಗೆ ಸರಕಾರಕ್ಕೆ ಸುಮಾರು ೨೨ ಲಕ್ಷದಷ್ಟು ಬಡ್ಡಿ ಕೂಡ ಉಳಿಯುತ್ತದೆ

LIFT IRRIGATION SCHEME ON RIGHT BANK OF CAUVERY RIVER IN T-NARASIPUR TALUK

331. Sri T. P. BORAIAH (Bannur) —Will the Minister of State for minor Irrigation be pleased to state :—

(*a*) the stage at which the Lift Irrigation Schemes on the right bank of Cauvery river in T. Narasipur taluk stands at present,

(*b*) the extent of atchkat under each project ;

(*c*) the village that come under the said scheme ;

(*d*) the estimated amount of each project ;

(*e*) when the said works will be commenced ;

A.—Smt. BASAVARAJESWARI Deputy Minister for Social Welfare)

[on behalf of Sri A. J. DODDAMETI (Minister of State for Minor Irrigation]

(*a*) Works relating to Malangi and Channabasavana Hundi Lift Irrigation Schemes are on the verge of completion. Mavinahalla Lift Irrigation Scheme is under reconsideration.

(*b*) Malangi scheme	...	490 acres
Channabasavana Hundi scheme	...	300 acres
Mavinahalli scheme	...	280 acres

(*c*) Malangi, Mavinahaili, Akkur, Chandahalli, Maradipur and Channabasavana Hundi.

(SMT. BASAVARAJESWARI)

			Rs.
(d)	Malangi scheme	...	1,93,000
	Basavana Hundi scheme	...	96,000
	Mavinahalli scheme	...	75,000

(e) Malangi and Channabasavana Hundi Lift Irrigation schemes have already been taken up and they are on the verge of completion. After reconsideration of Mavinabole Scheme, the question of undertaking the said work will be considered.

ಶ್ರೀ ಟಿ. ಪಿ. ಬೋರಯ್ಯ :—ಮಾವಿನಹಳ್ಳಿ ಯೋಜನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ ? ಇದಕ್ಕೆ ಕಾರಣವೇನು ?

ಶ್ರೀಮತಿ ಬಸವರಾಜೇಶ್ವರಿ :—ಮೊದಲು ಇದರ ಅಂದಾಜು ತಯಾರು ಮಾಡಿದ ಪ್ರಕಾರ ಈ ಯೋಜನೆಯಲ್ಲಿ ಅಚ್ಚುಕಟ್ಟು ಸುಮಾರು ೮೦ ಎಕರೆ ಬರುತ್ತದೆ ಎಂದು ಇತ್ತು. ಮತ್ತು ಇದರಲ್ಲಿ ಕೆಲವರು ಪ್ರೈವೇಟ್ ಓನರುಗಳು ಇಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ವ್ಯವಸಾಯ ಮಾಡಬೇಕೆಂದು ಪಂಪುಸೆಟ್ಟುಗಳನ್ನು ಹಾಕಿಸಿಕೊಂಡಿದ್ದಾರೆ. ಇದಕ್ಕಾಗಿ ಇದನ್ನು ಈಗ ಯಾವ ರೀತಿ ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

WAGES OF THE WORKERS OF INDIAN PLYWOOD LTD. DANDELI.

48. SRI M. S. KRISHNAN (Malleswaram.):-

Will the Minister for Law, Labour and Parliamentary Affairs be pleased to state :-

(a) whether the workmen of Indian Plywoods Ltd., Dandeli had made a representation to the Chief Minister and Finance Minister to persuade the Management to revise the low wages ;

(b) whether the Chief Minister had assured that he would do the needful in the matter :

(c) the rates of wages, D. A., etc., obtaining in the said Company (wage statement may be given separately) ;

(d) whether these wages are the lowest in the region ;

(e) whether there was any strike by workmen in the beginning of 1969 for enhancement of wages, etc., if so, the dates and period of the strike ;

(f) whether there is any settlement (copy of settlement may be provided) ?

SRI K. PUTTASWAMY.– (Minister for Law, Labour and Parliamentary Affairs);

(*a*) Yes, A memorandum was presented to the Chief Minister.

(*b*) No.

(*c*) *Unskilled*:

Minimum Rs. 2·10 per day to Rs. 3.00 per day. Free accommodation, electricity, water supply, fuel, etc.

No separate D A.

Every year, an increment of 10 paise per day.

Semi-sikilled:

Minimum of Rs. 2.60 to Rs. 3·50 per day.

Free accommodatien, electricity, water and fuel.

Increment–10 to 15 paise per day.

No separate D. A.

Skilled:

Minimum Rs. 3 to Rs. 7 per day and free accommodation.

Increment 15 paise to 25 paise per day every year for daily wage workers.

Clerical and Supervisory:–

80–6–110–7½–170–10–250 and free accommodation, electricity, water, fuel, etc.

Note:– There are no scales of pay for skilled, semi-skilled and unskilled workers and no separate D. A. is fixed for any class of employees and workers.

(*d*) Yes.

(*e*) Yes. The workmen were on strike from 12th June 1969 to 29th June 1969.

(*f*) Yes. Copy of settlement appended.

APPENDIX

BEFORE THE COMMISSIONER OF LABOUR IN MYSORE, BANGALORE

MEMORANDUM OF SETTLEMENT

(Under Section 12 (3) of the Industrial Disputes Act, 1947)

Representing Employers	*Representing Workmen*	
1 Shri K. S. Lauly, General Manager, Indian Plywood Manufacturing Co. Ltd., Dandeli	1 Shri M. A. Kutty, General Secretary. 2 Sri G. N. Desai, Asst. Secretary.	Indian Plywood Employees' Union.
2 Shri B. M. Sapat, Manager, Indian Plywood Manufacturing Co. Ltd., Dandeli.	3 Shri K. Siviah, Secretary 4 Shri James Yesudass, Asst. Secretary.	Plywood Employee's Association, Dandeli.
	5 Shri N. K. Upadyaya, President. 6 Sri S. Suryanarayana Rao, Vice-President.	Plywood Workers' Union, Dandeli.

Short Recital of the Case

Whereas the workmen of the Indian Plywood Manufacturing Co. Ltd., struck work from 12th June 1969 alleging that the management did not consider the demands preferred by the Plywood Workers' Union, Dandeli:

Whereas the management maintained to say that the demands were not suitainable in view of a subsisting settlement:

And whereas the matter was taken up for discussion, to day by the Commissioner of Labour and State Conciliation Officer at Bangalore:

Now, Therefore, the parties to the dispute have arrived at the following settlement on this 28th day of June, 1969.

Terms of Settlement

(1) The Plywood Workers' Union, Dandeli, agrees to call off the strike immediately and accepts the validity of conciliation settlement dated 21st September 1968.

(2) The striking workmen shall not be entiled to wages for the period of strike. The absence during the strike period shall however, not be treated as break in service of the workmen:

(3) After the calling off of the strike and normalisation of working conditions, the existing three unions may after completion of the first year of the agreement, discuss with the management the question of payment of *ad hoc* relief to the workmen on account of rise in the cost of living since the settlement dated 21st September 1958, wi h the good officers and advice of the Commissioner of Labour, if need be.

(4) All the unions agree to co-operate fully with the management for incresed production so that full advantages of the existing production bonus system is availed of by the workmen and the company.

(5) The Plywood Workers' Union expresses regret for the assault on Shri Jetly and Sri Kanyadi.

(6) The management agrees not to victimise any worker for going on strike.

(7) Cases of assault and other acts of misconduct during the period of strike may be dealt with by the managemement according to the standing orders. However the management shall attempt a compromise between the concerned persons.

(8) Both the management and the unions agree that all attempts shall be made to settle any future differences and disputes by mutual negotiations, failing which through the Governmental machinery and as far as possible agitational and coercive measures shall be avoided.

Representing Employers	Representing workmen
1. Sd.	1. Sd.
2. Sd.	2. Sd.
	3. Sd.
	4. Sb.
	5. Sd.
	6. Sd.

Witnesses

1. Sd.
2. Sd.

Karnataka State Archives,
(Departmental Library)
Accession No. 4883
Date........................

ಶ್ರೀ ಎಂ. ಎಸ್. ಕೃಷ್ಣನ್ :—ಮೆಮೊರ್ಯಾಂಡಂನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟ ತಾರೀಖು ಯಾವುದು ?

ಶ್ರೀ ಕೆ. ಪುಟ್ಟಸ್ವಾಮಿ :— ೯-೧೦-೧೯೬೯.

ಶ್ರೀ ಎಂ. ಎಸ್. ಕೃಷ್ಣನ್ :— (ಬಿ)ಗೆ ಉತ್ತರವಾಗಿ ಯಾವ ಭರವಸೆಯನ್ನೂ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ನನಗೆ ಬಂದಿರುವ ವರದಿ ಪ್ರಕಾರ ಮುಖ್ಯ ಮಂತ್ರಿಗಳಿಗೆ ಕೆಲಸಗಾರರು ಮೆಮೋರ್ಯಾಂಡಂನ್ನು ಕೊಟ್ಟಾಗ ಇದರ ಚಾರ್ಜುಗಳನ್ನು ಪರಿಶೀಲಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು ಈಗ ಇಲ್ಲ ಎಂದು. ಇಲ್ಲಿ ಹೇಳಲು ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ :— ಅದು ನನಗೆ ಗೊತ್ತಿಲ್ಲ,

Sri M. S. Krishnan :— I want a clarification whether the Chief Minister has given the assurance. The Hon. Minister is saying no. We would like to know from the Chief Minister whether the assurance was given or not.

Mr. Speaker :— I cannot compel the Chief Minister to be present in the House to reply to this question.

Sri K. Puttaswamy :— This answer is given on behalf of the Government which includes the Chief Minister.

ಶ್ರೀ ಎಂ. ಎಸ್. ಕೃಷ್ಣನ್ ;— ತಾವು (ಡಿ)ಗೆ ಉತ್ತರವಾಗಿ ಇಲ್ಲಿ ಕೊಡುವ ವೇತನಗಳು ಬಹಳ ಕಡಿಮೆ ಎಂದು ಒಪ್ಪಿದ್ದೀರಿ. ಇದರಿಂದ ತಾವು ಇದನ್ನು ಪುನರ್ವಿಮರ್ಶೆ ಮಾಡಿ ಇವರಿಗೆ ಮಿನಿಮಂ ವೇಜಸ್ ದೊರಕುವಂತೆ ಮಾಡಿ ಇದನ್ನು ಇತ್ಯರ್ಥ ಮಾಡಲು ಸಾಧ್ಯವಾಗುವುದಿಲ್ಲವೇ?

Sri K. Puttaswamy :— In this industry, unfortunately the minimum wages have not been fixed. Now Government will have to consider whether under the existing state of affairs it requires consideration of fixing minimum wages for this industry also.

ಶ್ರೀ ಎಂ. ಎಸ್. ಕೃ ಣ್ಣನ್ :— ಮಿನಿಮಂ ವೇಜಸ್ ಎಂದು ಬೆಂಗಳೂರಿನಲ್ಲಿರುವ ಪ್ಲೈವುಡ್ ಕಮರ್ಷಿಯಲ್. ಯೂನಿಯನ್, ಹಾಗೂ ಇನ್ನಿತರ ಕಡೆಗಳಲ್ಲಿ ಕೆಲಸಗಾರರಿಗೆ ಒಂದಕ್ಕೆ ನಾಲ್ಕರಷ್ಟು ಐದರಷ್ಟು ಡಿ. ಎ. ಎಂದು ಹೆಚ್ಚಾಗಿ ಕೊಡುತ್ತಿದ್ದಾರೆ. ಇವರಿಗೂ ಅದೇ ರೀತಿ ಜಾಸ್ತಿ ಮಾಡಲು ಸರಕಾರ ಸ್ವಲ್ಪ ಆಸಕ್ತಿ ವಹಿಸಿ ಸಹಾಯ ಮಾಡಲು ಆಗುವುದಿಲ್ಲವೇ ?

Sri K. Puttaswamy :— I cannot give such an assurance to the Hon. Member.

TAKING OVER OF MUNICIPAL HIGH SCHOOLS

353. Sri K. M. Thammaiah (Kadur).—Will the Minister for Education be pleased to state.—

(*a*) the authority under whom the Head Master and staff of Municipal High Schools are working;

(b) the transferring authority in respect of Head Masters and staff of these High Schools whether it is the Chairman of the Municipal High School or the D. P. I.

(c) whether there is any proposal before Government to take over all the Municipal High Schools in the State under the administrative control of Government.

A.—Sri. N. M. KOTRABASIAH SOGI Deputy Minsiter for Education.

(a) The Head Masters and other staff members of the Municipal High Schools in ex-Mysore are under the control of the Mangement Committees and the respective Deputy Commissioners who are the Unit Officers.

The Head Masters and other staff members of Municipal High Schools in other areas are under the control of the Town Municipal Council.

(b) Divisional Commissioners are empowered to transfer Municipal employees (including those appointed in Municipal Schools) within their respective Divisions So far as inter divsional transfers of Municipal employees are concerned, Government is the competent authority to order them.

(c) Yes.

ಶ್ರಿ ಕೆ ಎಂ ತಮ್ಮಯ್ಯ ; ಹಳೆಯ ಮೈಸೂರಿನಲ್ಲಿರುವ ಪ್ರೌಡ ಶಾಲೆಗಳು ಮತ್ತು ಇದರಲ್ಲಿರುವ ಉಪಾಧ್ಯಾಯುರಗಳು ಆಡಳಿತಮಂಡಲಿಗಳ ಅಧಿಕಾರಕ್ಕೆ ಒಳಪಟ್ಟಿದೆ ಎಂದು ಹೇಳುತ್ತೀರಿ. ಆದರೆ ಇಲ್ಲಿರುವ ಆಡಳಿತಮಂಡಲಿಗಳು ಸರಕಾರಕ್ಕೆ ವರದಿ ಕಳುಹಿಸಿ ತುರ್ತಾಗಿ ಇಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು.?

†ಶ್ರೀ ಎನ್ ಎಂ ಕೊಟ್ರಬಸಯ್ಯ ಸೋಗಿ : ಅಂತಹ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತಂದರೆ, ಕಾಯದೆ ಪ್ರಕಾರ ಏನು ಕ್ರಮ ತೆಗೆದುಕೊಳ್ಳ ಬಹುದೋ ಅವನ್ನು ತಗೆದುಕೊಳ್ಳಲು ಆಗುತ್ತದೆ.

ಶ್ರೀ ಕೆ ಎಂ ತಮ್ಮಯ್ಯ : ಇಲ್ಲಿನ ಮ್ಯಾನೇಜುಮೆಂಟಿನವರು ಸರ್ಕಾರಕ್ಕೆ ಹೇಳಿ ಸುಮಾರು ಒಂದೆರಡು ವರ್ಷಗಳಾದರೂ ಸರಕಾರ ಇದರ ಬಗ್ಗೆ ಯೂವ ಉತ್ತರವನ್ನೂ ಇದುವರೆಗೆ ಕಳುಹಿಸಲಿಲ್ಲ ಈಗಲಾದರೂ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್ ಎಂ ಕೊಟ್ರಬಸಯ್ಯ ಸೋಗಿ : ಈಗ ಇಂತಹ ಶಾಲೆಗಳ ಶಿಕ್ಷಕರ ಬಗ್ಗೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಡಿವಿಜನಲ್ ಕಮೀಷನರ್‌ರವರ ಕಡೆಗೆ ಇದೆ. ಡಿವಿಜನಲ್ ಕಮೀಷನರವರು ಪರಿಶೀಲಿಸಿದ ನಂತರ ಸರಕಾರಕ್ಕೆ ಬರುವ ವಿಚಾರ ಇದ್ದರೆ ನಮಗೆ ಬರುತ್ತದೆ. ಇಲ್ಲದೇ ಇದ್ದರೆ ಅವರೇ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಡಿವಿಜನಲ್ ಕಮೀಷನರವರು ಸರಕಾರಕ್ಕೆ ಕಳುಹಿಸಿದ್ದರೆ ಇದರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳಲು ಬರುತ್ತದೆ.

Asterisks indicates that remarks or speaches have not been revised by the member concerned.

ಶ್ರೀ ಜಿ. ಆರ್. ಹಾಲಸ್ವಾಮಿ.—(ಇ) ಪ್ರಶ್ನೆಗೆ ಉತ್ತರವಾಗಿ ಇದೆ ಎಂದು ಹೇಳಿದ್ದೀರಿ. ಈ ಸಲಹೆಯನ್ನು ಜಾಗ್ರತೆ ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ : ಆ ಬಗ್ಗೆ ವಿವರಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ. ವಿವರಗಳು ದೊರಕಿದ ನಂತರ ಪರಿಶೀಲನೆ ಮಾಡಬೇಕಾಗುತ್ತದೆ. ಸೀನಿಯಾರಿಟಿ ವಿವರಗಳು, ಹಣಕಾಸಿನ ವಿವರಗಳು ಮುಂತಾದ ನಾನಾ ರೀತಿಯ ಅಂಶಗಳನ್ನು ಪರಿಶೀಲನೆ ಮಾಡಿದ ನಂತರ ಸೂಕ್ತ, ತೀರ್ಮಾನ ಕೈಕೊಳ್ಳುತ್ತೇವೆ.

ಶ್ರೀ ಎಚ್. ಎಂ. ನಂಜೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಹಳೆಯ ಮೈಸೂರು ಪ್ರದೇಶಕ್ಕೆ ಒಂದು ರೀತಿಯ ನಿಯಮ ಇದೆ, ಇತರ ಪ್ರದೇಶಗಳಿಗೆ ಒಂದು ರೀತಿಯ ನಿಯಮ ಇದೆ ಎಂದು ಹೇಳಿದ್ದೀರಿ ಎಲ್ಲವನ್ನು ಸೇರಿಸಿ ಒಂದು ಏಕ ರೀತಿಯ ನಿಯಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

1-30 P. M.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅದನ್ನು ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ ಮತ್ತು ಆ ಬಗ್ಗೆ ರೂಲ್ಸನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ವರ್ಗಾವಣೆ ವಿಚಾರದಲ್ಲಿ ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಇತ್ತು, ಈ ರೀತಿ ರಿಟ್ ಅರ್ಜಿ ಇದ್ದುದರಿಂದ ಹೈಕೋರ್ಟಿನವರು ಪುರಸಭೆಯ ಕಮಿಟಿಯವರಿಗೆ ಆಗಲಿ ಅಥವಾ ಪುರಸಭೆಯ ಸೆಕ್ರೆಟರಿಯವರಿಗಾಗಲೀ ವರ್ಗಾವಣೆ ಮಾಡುವ ಅಧಿಕಾರ ಇಲ್ಲ ಎಂದು ಹೇಳಿದ್ದು ನಿಜವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಹೈಕೋರ್ಟಿನಲ್ಲಿ ಕೇಸ್ ಇದ್ದರೆ ಆ ಬಗ್ಗೆ ಸರ್ಕಾರಕ್ಕೆ ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಸರ್ಕಾರದವರು ಏನಾದರು ತಪ್ಪು ಮಾಡಿದ್ದರೆ ಅದನ್ನು ಹೈಕೋರ್ಟಿನಲ್ಲಿ ಛಾಲೆಂಜ್ ಮಾಡುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಅಧಿಕಾರ ಇದೆ. ಮತ್ತು ಕಾಯಿದೆ ಪ್ರಕಾರ ಈ ರೀತಿ ನಡೆದುಕೊಳ್ಳಬೇಕೆಂದು ಹೈಕೋರ್ಟಿನವರು ಸರ್ಕಾರಕ್ಕೆ ಆದೇಶ ಕೊಟ್ಟರೆ ಅದರಂತೆ ನಾವು ನಡೆದುಕೊಳ್ಳುತ್ತೇವೆ.

TRANSFER OF ASSETS OF AGRICULTURE DEPARTMENT TO AGRO INDUSTRIES CORPORATION.

360. Sri 1. Somasekharappa (Hosanagar).—

Will the Minister for Agriculture be pleased to state :—

(*a*) whether the Government has taken a decision to transfer the assets of the Agriculture Engineering Section of the Agriculture Department to the Agro Industries Corporation ;

(*b*) if so, the value of the assets of the Agriculture Engineering Section as per the books of the Department ;

(*c*) the authority for assessing the value of the assets of the Agriculture Engineering Section before it is handed over to the Agro-Industries Corporation ;

(*d*) whether the Agro-Industries Corporation would be accepting the assets of Agriculture Engineering Section on 'Cash and carry basis' or the Government is going to treat the value as its share contribution to the Agro Industries Corporation ;

(*e*) reasons that have compelled the Government to take such a decision ?

Sri B. RACHIAH (Deputy Minister for Agriculture).—

(*a*) Yes.

(*b*) It is being determined.

(*c*) A Committee consisting of the following officers has been constituted for assessing the value of the existing machinery with land and buildings.

(i) One representative from the Agro Industries Corporation.

(ii) The Controller, State Accounts Department or his Representative.

(iii) The Joint Director of Agriculture (Agriculture Engineering), Hebbal or his Representative.

(iv) One Representative from the Government of India.

(*d*) The assets of the Agriculture Engineering Section will be added on as the share capital of the Agro Industries Corporation as if it were the share contribution of the Mysore Government.

(*e*) The transfer was decided having regard to (i) the observations of the Public Accounts Committee of the Legislature that the Bulidozers Service Organisation had been incurring losses continuously and that this should be placed under an independent autonomous organisation so that the machinery may be efficiently utilised and service rendered to agriculturists on commercial lines and, (ii) Since the Mysore State Agro Industries Corporation has been engaged in similar work as is being done by the Engineering Wing of the Agriculture Department in addition to several other works, it was considered that two parallel organisations are not necessary.

ಶ್ರೀ ಐ. ಸೋಮಶೇಖರಪ್ಪ :—ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರ ಅಭಿಪ್ರಾಯದ ಪ್ರಕಾರ ಈ ರೀತಿ ಮಾಡಲಾಗಿದೆ ಎಂದು ಹೇಳಿದ್ದೀರಿ. ಹಿಂದೆ ಇದೇ ಮಾನ್ಯ ಸಭೆಯಲ್ಲಿ ನನ್ನ ಒಂದು ಕಾಲ್-ಅಟೆಂಷನ್ ನೋಟೀಸ್‌ಗೆ ಉತ್ತರ ಕೊಡುವಾಗ ಕೃಷಿ ಉದ್ಯಮ ಸಂಸ್ಥೆಗೆ ವರ್ಗಾಯಿಸುವುದಿಲ್ಲ, ವ್ಯವಸಾಯ ಇಂಜಿನಿಯರಿಂಗ್ ವಿಭಾಗದವರೇ ಎಫಿಷಿಯೆಂಟ್ ಆಗಿ ಕೆಲಸ ಮಾಡುತ್ತಾರೆ ಎಂದು ಹೇಳಿದ್ದಿರಿ. ಈ ಬಗ್ಗೆ ಇಷ್ಟು ಜಾಗ್ರತೆ ಬದಲಾವಣೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ :—ಇವತ್ತು ವ್ಯವಸಾಯ ಇಂಜಿನಿಯರಿಂಗ್ ವಿಭಾಗದವರು ಏನು ಕೆಲಸ ಮಾಡುತ್ತಿದ್ದಾರೋ ಅದೇ ಕೆಲಸವನ್ನು ಕೃಷಿ ಉದ್ಯಮ ಸಂಸ್ಥೆಯವರು ಲಾಭ ಮತ್ತು ನಷ್ಟ ಇಲ್ಲದೆ ಮಾಡುತ್ತಿದ್ದಾರೆ. ನಾವು ಕಡಿಮೆ ದರದಲ್ಲಿ ವ್ಯವಸಾಯಗಾರರಿಗೆ ಅನುಕೂಲಗಳನ್ನು ಒದಗಿಸಿಕೊಡುತ್ತಿರು-

(ಶ್ರೀ ಬಿ. ರಾಚಯ್ಯ)

ವುದರಿಂದ ನಷ್ಟವಾಗುವುದಕ್ಕೆ ಅವಕಾಶವಾಗಿದೆ. ಇದರಿಂದ ನಾವು ಎಫಿಸಿಯೆಂಟ್ ಆಗಿ ಕೆಲಸ ಮಾಡುವದಕ್ಕಾಗುತ್ತಿಲ್ಲ. ಕೃಷಿ ಉದ್ಯಮ ಸಂಸ್ಥೆಗೆ ಈ ವಿಭಾಗವನ್ನು ಟ್ರಾನ್ಸ್‌ಫರ್ ಮಾಡುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಮತ್ತು ಷೇರ್ ಕ್ಯಾಪಿಟಲನ್ನು ಸಹ ಹೆಚ್ಚು ಮಾಡಿದ್ದೇವೆ.

ಶ್ರೀ ಐ. ಸೋಮಶೇಖರಪ್ಪ:—ಇವತ್ತು ರಾಸಾಯನಿಕ ಗೊಬ್ಬರವನ್ನು ಸಹಕಾರ ಸಂಘಗಳ ಮೂಲಕ ರೈತರಿಗೆ ವಿತರಣೆ ಮಾಡಲಾಗುತ್ತಿದೆ. ಕೃಷಿ ಉದ್ಯಮ ಸಂಸ್ಥೆಯವರು ಸಹ ಗೊಬ್ಬರವನ್ನು ರೈತರಿಗೆ ವಿತರಣೆ ಮಾಡುತ್ತಿದ್ದಾರೆ. ಒಂದೇ ಕೆಲಸಕ್ಕೆ ಎರಡು ಸಂಸ್ಥೆಗಳ ಅವಶ್ಯಕತೆ ಇಲ್ಲ ಎಂದು ತಾವು ಹೇಳಿರುವುದರಿಂದ ಈ ಗೊಬ್ಬರದ ಮಾರಾಟದ ಕೆಲಸವನ್ನು ಕೃಷಿ ಉದ್ಯಮ ಸಂಸ್ಥೆಯವರಿಗೆ ವಹಿಸುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ:—ಸಹಕಾರ ಇಲಾಖೆಯವರು ಕೃಷಿ ಉದ್ಯಮ ಸಂಸ್ಥೆಯವರನ್ನು ಗೊಬ್ಬರದ ಮಾರಾಟದ ಬಗ್ಗೆ ಸಬ್-ಏಜೆಂಟ್ ಆಗಿ ನೇಮಕ ಮಾಡಿಕೊಂಡಿದ್ದಾರೆ. ಕೃಷಿ ಉದ್ಯಮ ಸಂಸ್ಥೆಗೆ ಎಲ್ಲ ಮಾರಾಟದ ಹಕ್ಕನ್ನು ವರ್ಗಾಯಿಸಬೇಕಾದರೆ ಅವರಲ್ಲಿ ಸಾಕಷ್ಟು ಗೋಡೌನ್‌ಗಳು ಮತ್ತು ಏಜೆನ್ಸಿಗಳು ಇದ್ದರೆ ಕನ್ಸಿಡರ್ ಮಾಡುತ್ತೇವೆ.

SRI H. N. NANJE GOWDA:—May I know whether you have allocated any amount for the expenditure of this Committee ; if so, what is the amount spent by the Committee and when the report of the Committee is expected ?

SRI B. RACHAIAH:—The Government of India did not nominate their representative. Therfore the Committee could not meet and so the time has been extended.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ:—ಕೃಷಿ ಉದ್ಯಮ ಸಂಸ್ಥೆಯವರು ಎಫಿಸಿಯೆಂಟ್ ಆಗಿ ಕೆಲಸ ಮಾಡುವುದರಿಂದ ವರ್ಗಾ ಮಾಡಲಾಯಿತು ಎಂದು ಈಗತಾನೆ ಹೇಳಿದಿರಿ. ಅಂದರೆ ಸರ್ಕಾರ ಇನ್-ಎಫಿಸಿಯೆಂಟ್ ಆಗಿ ಕೆಲಸ ಮಾಡುತ್ತಿದ್ದಿಯೇ ?

ಶ್ರೀ ಬಿ. ರಾಚಯ್ಯ:—ಕಾರ್ಪೊರೇಷನ್‌ನಲ್ಲಿ ಆದರೆ ಕೆಲಸ ಜಾಗ್ರತೆ ಆಗುತ್ತದೆ ಮತ್ತು ಜಾಗ್ರತೆ ತೀರ್ಮಾನ ಕೈಕೊಳ್ಳಬಹುದು. ರೈತರಿಗೂ ಕೂಡ ಒಳ್ಳೆಯ ಅನುಕೂಲಗಳುಸಿಗುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರಿ ಮೆಷಿನರಿಯಲ್ಲಿಯಾದರೆ ನಾನಾ ಕಾರಣಗಳಿಗೋಸ್ಕರ ನಾನಾ ಹಂತಹಂತಗಳಲ್ಲಿ ತಡವಾಗುವುದಕ್ಕೆ ಅವಕಾಶವಿದೆ. ಇವತ್ತು ಅಸೆಂಬ್ಲಿಯಲ್ಲಿ ನಮ್ಮ ಭಾಗದ ಹಣಮಂಜೂರಾದರೂ ಕೂಡ ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಮತ್ತೆ ಆರ್ಥಿಕ ಇಲಾಖೆಯ ಒಪ್ಪಿಗೆ ಬೇಕಾಗುತ್ತದೆ. ಈ ರೀತಿಯಿಂದ ನಾನಾ ರೀತಿಯಲ್ಲಿ ತಡವಾಗುವುದರಿಂದ ರೈತರಿಗೆ ಸಕಾಲದಲ್ಲಿ ಬೀಜ, ಗೊಬ್ಬರ ಮುಂತಾದವನು ಒದಗಿಸುವುದು ಕಷ್ಟವಾಗುತ್ತದೆ. ಅದೇ ಅಟಾನಮಸ್ ಬಾಡಿ ಆದರೆ ಜಾಗ್ರತೆ ತೀರ್ಮಾನ ಕೈಕೊಳ್ಳುವುದಕ್ಕೆ ಮತ್ತು ಅನುಕೂಲಗಳನ್ನು ರೈತರಿಗೆ ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಈ ಕಾರಣದಿಂದ ವರ್ಗಾವಣೆ ಮಾಡಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ:—ಈ ರೀತಿ ವರ್ಗಾವಣೆ ಮಾಡಿದರೆ ರೈತರಿಗೆ ಕಷ್ಟವಾಗುತ್ತದೆ. ಏಕೆಂದರೆ ವ್ಯವಸಾಯ ಇಂಜಿನಿಯರಿಂಗ್ ವಿಭಾಗದವರು ಬಾವಿ ತೋಡುವ ವಿಚಾರದಲ್ಲಿ ಕೆಲವು ದರಗಳನ್ನು ನಿಗದಿ ಮಾಡಿದ್ದರು. ಈ ದರ ರೈತರಿಗೆ ಅನುಕೂಲವಾಗಿತ್ತು. ಇನ್ನು ಮುಂದೆ ಕೃಷಿ ಉದ್ಯಮ ಸಂಸ್ಥೆಯವರು ಕಮರ್ಷಿಯಲ್ ಬೇಸಿಸ್ ಮೇಲೆ ಯೋಚನೆ ಮಾಡಿ ದರವನ್ನು ಜಾಸ್ತಿ ಮಾಡಿದರೆ ರೈತರಿಗೆ ತೊಂದರೆಯಾಗುವುದಿಲ್ಲವೇ ? ಎರಡನೆಯದಾಗಿ ಈ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದವರನ್ನು ಕೃಷಿ ಉದ್ಯಮ ಸಂಸ್ಥೆಗೆ ಸೇರಿಸುತ್ತೀರೋ, ಡೆಪ್ಯುಟೇಷನ್ ಮೇಲೆ ಕೆಲಸ ಮಾಡುವಂತೆ ಏರ್ಪಾಡು ಮಾಡುತ್ತೀರೋ, ಅಥವಾ ಯಾವ ರೀತಿ ರಕ್ಷಣೆ ಕೊಡಬೇಕೆಂದು ಯೋಚನೆ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕೃಷಿ ಉದ್ಯಮ ಸಂಸ್ಥೆಯವರು ಹೊಸ ಯಂತ್ರಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಅದನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಕೊಡುತ್ತಿದ್ದಾರೆ. ಇದರಿಂದ ಆ ಸಂಸ್ಥೆಗೆ ಸ್ವಲ್ಪ ಮಟ್ಟಿಗೆ ಲಾಭ ಬರುತ್ತಿದೆ. ನಾವು ಇದುವರೆಗೆ ಏನು ದರವನ್ನು ನಿಗದಿ ಮಾಡಿದ್ದೆವೋ ಅದೇ ದರವನು ಲೆಕ್ಕಕ್ಕೆ ತೆಗೆದುಕೊಂಡು ಸ್ವಲ್ಪ ಮಟ್ಟಿಗೆ ಹೆಚ್ಚಿಸಿದ್ದಾರೆ, ಇದರಿಂದ ರೈತರಿಗೆ ಏನೂ ಅನಾನುಕೂಲವಾಗುವುದಿಲ್ಲ. ಸರ್ವಿಸ್ ಕಂಡಿಷನ್ ಬಗ್ಗೆ ಹೇಳುವುದಾದರೆ ಹಿಂದೆ ವಿದ್ಯುಚ್ಛಕ್ತಿ ಬೋರ್ಡ್ ಮಾಡಿದಾಗ ಯಾವ ಕಂಡೀಷನನ್ನು ಬೋರ್ಡ್‌ಗೆ ಸರ್ಕಾರದವರು ಹಾಕಿದ್ದರೋ ಅದೇ ಕಂಡೀಷನನ್ನು ಇಲ್ಲಿಯೂ ಕೂಡ ಹಾಕಲಾಗಿದೆ. ಅದರ ಪ್ರಕಾರ ವ್ಯವಸಾಯ ಇಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದವರು ಕೃಷಿ ಉದ್ಯಮ ಸಂಸ್ಥೆಯಲ್ಲಿಯೇ ಇರುತ್ತಾರೆ.

INCOME OF ANNUAL CATTLE SHOW AT CHICKNAYAKANAHALLI TOWN MUNICIPALITY

380. Sri C.K. RAJAIAH SHETTY (Chiknayakanahalli):—

Will the Minister of State for Municipal Administration be pleased to state.—

(*a*) whether they are aware that Chicknayakanahalli Town Municipality is conducting annua cattle show during Jatra time, if so, since how many years ;

(*b*) whether the Municipality is paying regularly 90 per cent of the net income as per rules to the Prasanna Rameshwara Swamy's temple, if not the arrears due ?

Sri B.M. PATIL.— (Minister of State for Municipal Administration).—

(*a*) Yes, since 1939.

(*b*) No. Arrears due is Rs. 6,967–20.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಇದು ಮುಜರಾಯಿ ದೇವಸ್ಥಾನವಾದ್ದರಿಂದ ಸರ್ಕಾರದ ಆಡಳಿತದಲ್ಲಿ ಇರಬೇಕಾಗುತ್ತದೆ. ಇಷ್ಟೊಂದು ಬಾಕಿ ಹಣವನ್ನು ಕೊಡದಿರುವುದಕ್ಕೆ ಕಾರಣ ಏನು ? ದೇವಸ್ಥಾನ ಬಿದ್ದು ಹೋಗುವ ಸ್ಥಿತಿಯಲ್ಲಿ ಇದೆ. ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಬಿ.ಎಂ. ಪಾಟೀಲ್.—ಈಗಿನ ಸರ್ಕಾರೀ ಆಜ್ಞೆ ಪ್ರಕಾರ ನಿವ್ವಳ ಆದಾಯದ ಶೇಕಡ ೯೦ ರಷ್ಟನ್ನು ನಗರ ಸಭೆಯವರು ಕೊಡಬೇಕೆಂದು ಇದೆ. ತಾವು ಕೂಡ ಆ ನಗರ ಸಭೆಯ ಅಧ್ಯಕ್ಷರಾಗಿದ್ದಾಗ ಬಾಕಿ ಇದ್ದ ಹಣವನ್ನು ಕೊಟ್ಟಿಲ್ಲ.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಆ ವಿಚಾರ ಬೇಡ. ೧೯೩೯ನೇ ಇಸವಿಯಿಂದ ಬಾಕಿ ನಿಂತಿರುವ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ.ಎಂ. ಪಾಟೀಲ್.—ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಹೇಳಲಾಗಿದೆ.

ಶ್ರೀ ಅಜೀಜ್‌ಸೇಠ್.—ಶ್ರೀ ರಾಜಯ್ಯಶೆಟ್ಟರು ಅಧ್ಯಕ್ಷರಾಗಿದ್ದಾಗ ಬಾಕಿ ಹಣ ಕೊಡಲಿಲ್ಲ ಎಂದು ಹೇಳಿದಿರಿ. ಅವರು ಈಗ ಅಧಿಕಾರದಲ್ಲಿ ಇಲ್ಲ. ರೂಲ್ಸ್ ಪ್ರಕಾರ ವಸೂಲಿ ಮಾಡದೇ ಇದ್ದ ಅಧಿಕಾರಿಗಳ

(ಶ್ರೀ ಅಜೀಜ್ ಸೇಠ್)

ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ತಮ್ಮ ಅಧಿಕಾರಿಗಳು ಎಫಿಸಿಯೆಂಟ್ ಆಗಿ ಇದ್ದಾರೆ ಎಂದು ಹೇಳುವಾಗ ಅವರಿಗೆ ಈ ಸಂಬಂಧದಲ್ಲಿ ಕ್ರಮತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೇ ?

ಶ್ರೀ ಬಿ.ಎಂ. ಪಾಟೀಲ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಈಗಾಗಲೇ ಜಿಲ್ಲಾಧಿಕಾರಿಯವರು ಅಸಿಸ್ಟೆಂಟ್ ಕಮೀಷನರ್ ಅವರಿಗೆ ಮತ್ತು ತಹಶೀಲ್ದಾರರಿಗೆ ಆದೇಶ ಕೊಟ್ಟಿದ್ದಾರೆ. ಅದರಂತೆ ಅವರು ಈ ಹಣವನ್ನು ಅಡ್ಜಸ್ಟ್ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಂಡಿದ್ದಾರೆ.

ಶ್ರೀ ಸಿ ಕೆ. ರಾಜಯ್ಯಸೆಟ್ಟಿ... ದೇವಸ್ಥಾನದ ಕಾಂಪೌಂಡ್ ಗೋಡೆ ಬಿದ್ದು ಹೋಗಿರುವುದರಿಂದ ಅಲ್ಲಿ ನಾಯಿ, ಕತ್ತೆ ಮುಂತಾದವು ಸೇರಿಕೊಂಡಿವೆ. ಈ ಸರ್ಕಾರಕ್ಕೆ ದೇವರಲ್ಲಿ ಭಕ್ತಿ ಇದೆಯೇ, ಈ ಒಂದು ದೃಶ್ಯವನ್ನು ನೋಡುವುದಕ್ಕೆ ಸರ್ಕಾರದವರಿಗೆ ಇಷ್ಟವೇ ?

Mr. SPEAKER —That question does not arise.

CONSTRUCTION OF A BRIDGE NEAR NANJANGUD

396. Sri D.M. SIDDAIAH (Biligere):—

Will the Minister for Public Works be pleased to state :—

(*a*) whether an estimate for the construction of the bridge over Kapini near Nanjangud has been prepared ;

(*b*) whether it has come to the notice of the Government that on account of the present bridge being narrow and running parallel to the Railway line, lot of inconvenience is caused to the vehicles while passing through the bridge ;

(*c*) whether the Minister for Public Works had this experience once when he visited Nanjangud ;

(*d*) whether it has come to the notice of the Government that the number of accidents that took place near this bridge are frequent ;

(*e*) whether the Government would take up this work and complete it in view of its importance even if no assistance is received from Centeral Government ?

Sri K. LAKKAPPA— (Minister for Public Works).—

(*a*) Yes.

(*b*) Yes.

(*c*) Yes.

(*d*) One accident had occurred on this bridge during the previous year.

(SRI K. LAKKAPPA)

(*e*) The work can be taken up after the approval of Government of India is received. If not, the question of taking up this work out of State Funds, will be considered at a later date, subject to the availabilty funds.

ಶ್ರೀ ಡಿ.ಎಂ. ಸಿದ್ದಯ್ಯ.—ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಒಂದು ಸೇತುವೆಯ ಅಗತ್ಯ ಇದೆ ಎಂದು ಒಪ್ಪಿಕೊಂಡಿದ್ದೀರಿ. ಮತ್ತು ತಾವು ಅಲ್ಲಿಗೆ ಬಂದು ಕಣ್ಣಾರೆ ನೋಡಿದ ಮೇಲೆ ಕೂಡ ಸೇತುವೆಯ ಅಗತ್ಯ ಇದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಅದೇ (ಉ) ಪ್ರಶ್ನೆಗೆ ಉತ್ತರ ಕೊಡುತ್ತಾ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ಈ ಕಾಮಗಾರಿಯನ್ನು ಕೈಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಈ ವಿಚಾರದಲ್ಲಿ ತಮ್ಮ ಖಚಿತವಾದ ನಿಲುವು ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಇಂಟರಸ್ಟೇಟ್ ಇಂಪಾರ್ಟೆಂಟ್ ರೋಡ್ಸ್ ಅಂಡ್ ಬ್ರಿಡ್ಜೆಸ್ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆದು ಸೇತುವೆ ಅಥವಾ ರಸ್ತೆಗಳ ಕೆಲಸವನ್ನು ಕೈಕೊಳ್ಳುವುದು ಸರ್ಕಾರದ ಪದ್ಧತಿಯಾಗಿದೆ. ಇದೇ ವಿಚಾರದಲ್ಲಿ ಅನೇಕ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಕೈಕೊಳ್ಳುವ ಬಗ್ಗೆ ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ ಅಲ್ಲಿಂದ ಇದುವರೆಗೆ ಸರಿಯಾದ ಉತ್ತರ ಬಂದಿಲ್ಲ. ಮೊನ್ನೆ ಒಂದು ತಿಂಗಳ ಹಿಂದೆ ನಾನು ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗಿಗೆ ಹೋದಾಗ ಸಂಬಂಧಪಟ್ಟ ಮಂತ್ರಿಗಳನ್ನು ಮತ್ತು ಉಪ-ಮಂತ್ರಿಗಳನ್ನು ಕಂಡು ಅವರಲ್ಲಿ ಈ ಬಗ್ಗೆ ದೀರ್ಘವಾಗಿ ಪ್ರಸ್ತಾಪ ಮಾಡಿ ಈ ಕೆಲಸವನ್ನು ಕೈಕೊಳ್ಳಲು ಕೂಳ್ಳಲು ಕೂಡಲೇ ಒಪ್ಪಿಗೆ ಕಳಿಸಿಕೊಡ ಬೇಕೆಂದು ಹೇಳಿದ್ದು ಅಲ್ಲದೆ ನಮ್ಮ ಅಧಿಕಾರಿಗಳು ಕೂಡ ಅಲ್ಲಿಯ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಜಾಗ್ರತೆ ಒಪ್ಪಿಗೆ ಕೊಡುವಂತೆ ಒತ್ತಾಯಪಡಿಸಿದ್ದಾರೆ. ಅವರ ಉತ್ತರವನ್ನು ಎದುರು ನೋಡುತ್ತಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ :— ಈ ಸೇತುವೆ ನಂಜನಗೂಡು ಮತ್ತು ಮೈಸೂರಿನ ಮಧ್ಯದಲ್ಲಿದೆ. ಬಹಳ ಟ್ರಾಫಿಕ್ ಇದೆ. ಅಲ್ಲಿ ಎಂ.ಎಸ್.ಆರ್.ಟಿ.ಸಿಯವರು ರೋಡ್ ಟ್ರೇನ್ ಬಿಡುತ್ತಾರೆಂದು ನಾನು ಕೇಳಿದ್ದೇನೆ. ಹೀಗಿರುವಾಗ ಅದಕ್ಕೆ ಕೇಂದ್ರ ಸರ್ಕಾರದವರ ಮಂಜೂರಾತಿ ಸಿಕ್ಕದಿದ್ದರೂ ಕೂಡ ರಾಜ್ಯ ಸರ್ಕಾರದವರೇ ಇದನ್ನು ಮಾಡತಕ್ಕಂಥ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ :— ಸರ್ಕಾರದವರು ಇದರ ಆದ್ಯತೆಯನ್ನು ಪೂರ್ಣವಾಗಿ ಮನಗಂಡಿದ್ದಾರೆ. ಶಾಸನ ಸಭಾಸದಸ್ಯರಾದ ಶ್ರೀಮಾನ್ ಸಿದ್ದಯ್ಯನವರು ಮತ್ತು ಶ್ರೀಕಂಠಯ್ಯನವರು, ಶ್ರೀ ಪುಟ್ಟಸ್ವಾಮಿಯವರು ಎಲ್ಲರೂ ಸಹ ಈ ಸೇತುವೆ ಆಗಬೇಕೆಂದು ಪದೇ ಪದೇ ಒತ್ತಾಯ ಮಾಡುತ್ತಿದ್ದಾರೆ. ನಾನೂ ಕೂಡ ಖುದ್ದು ಸ್ಥಳಕ್ಕೆ ಹೋಗಿ ಅದನ್ನು ಪರಿಶೀಲನೆ ಮಾಡಿ ಅದನ್ನು ತಿಳಿದುಕೊಂಡಿದ್ದೇನೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಸಕಾಲದಲ್ಲಿ ಬಾರದಿದ್ದರೆ ರಾಜ್ಯ ಸರ್ಕಾರದವರು ಇದನ್ನು ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ :— ಈ ವಿಚಾರದಲ್ಲಿ ನಮಗೆ ಬಂದಿರುವ ವರ್ತಮಾನದ ಪ್ರಕಾರ ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರಕ್ಕೆ ಇದರ ಬಗ್ಗೆ ೫೦ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಸಾಲ ಕೊಡುತ್ತೇವೆಂದು ಹೇಳಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ೫೦ ಲಕ್ಷ ರೂಪಾಯಿಗಳು ದೊರೆತರೆ ಆ ಸೇತುವೆ ಕೆಲಸವನ್ನು ಆರಂಭ ಮಾಡುತ್ತೀರಾ ? ಮತ್ತು ಈಗ ಎರಡು ವರ್ಷಗಳ ಹಿಂದೆಯೇ ಇದು ಬಜೆಟ್ಟಿನಲ್ಲಿ ಅಪ್ರೂವ್ ಆಗಿದೆ. ಆದ್ದರಿಂದ ಸ್ಟೇಟ್ ಫಂಡಿನಿಂದ ಟೋಕನ್ ಗ್ರಾಂಟಿನಲ್ಲಿ ಈ ಕೆಲಸವನ್ನು ಆರಂಭ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ :— ಕೇಂದ್ರ ಸರ್ಕಾರದವರು ಕೊಡತಕ್ಕಂಥ ಫೈನಾನ್ಸಿಯಲ್ ಅಸಿಸ್ಟೆಂಟ್ ಪ್ಯಾಟರನ್ ಈಗ ಚೇಂಜ್ ಆಗಿದೆ. ಅವರು ಲೋನ್ ರೂಪದಲ್ಲಿ ಹಣವನ್ನು ಕೊಡುತ್ತಾರೆ. ರಾಜ್ಯ ಸರ್ಕಾರದವರು ಯಾವುದಕ್ಕೆ ಮೊದಲು ಆದ್ಯತೆ ಕೊಡಬೇಕು ಎಂಬುದನ್ನು ವಿಚಾರ ಮಾಡಿ ಒಂದು

(ಶ್ರೀ ಕೆ. ಲಕ್ಕಪ್ಪ)

ನಿರ್ಧಾರಕ್ಕೆ ಬಂದಿದ್ದೇವೆ. ಇದಕ್ಕೆ ಕಡೆಯಲ್ಲಿ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಇದು ಬಹಳ ಮುಖ್ಯವಾದದ್ದು ಎಂದು ನಾವು ಮನಗಂಡಿದ್ದೇವೆ. ಜನಗಳೂ ಸಹ ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಆ ಕೆಲಸವನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ದೊಡ್ಡಬೋರೇಗೌಡ :— ಈ ಸೇತುವೆ ನಂಜನಗೂಡಿಗೂ ಮತ್ತು ಮೈಸೂರಿಗೂ ಮಧ್ಯದಲ್ಲಿದೆ. ನಂಜನಗೂಡು ಯಾತ್ರಾ ಸ್ಥಳ. ಅಲ್ಲಿಗೆ ಲಕ್ಷಗಟ್ಟಲೆ ಜನಗಳು ಹೋಗಿ ಬರುತ್ತಾರೆ. ಇಂಥಾದ್ದರಲ್ಲಿ ಆ ಸೇತುವೆಯ ಮೇಲೆ ಒಂದು ಅಪಘಾತವಾಗಿದೆ ಎಂದು ಹೇಳಿದ್ದೀರಿ. ಆ ಸೇತುವೆ ಮೇಲೆ ಅನೇಕ ಅಪಘಾತಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಸೇತುವೆ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡಿ ಎಂದು ಕೇಳಿದರೆ ಕೇಂದ ಸರ್ಕಾರದವರ ಮೇಲೆ ಕೈ ತೋರಿಸುತ್ತೀರಿ, ಅಂಥಾ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡಬೇಕಾದಂತಹ ಅವಶ್ಯಕತೆ ಬಂದಾಗ ಹಣವಿಲ್ಲ, ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ಬಹಳ ಮುಖ್ಯವಾದ ಸೇತುವೆ. ಈ ಸೇತುವೆಯನ್ನು ಆದಷ್ಟು ಜಾಗ್ರತೆ ಕಟ್ಟಿಸಿಕೊಟ್ಟರೆ ನಂಜನಗೂಡಿಗೆ ಭಕ್ತಾದಿಗಳು ಹೋಗಿ ಬರುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ :— ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸೇತುವೆ ಚಿಕ್ಕದು, ಅಲ್ಲಿ ೨೪ ಅಡಿ ಸೇತುವೆ ಮಾಡಬೇಕು, ಅಲ್ಲಿ ಎರಡು ಕಡೆಗಳಲ್ಲಿ ಸುಮಾರು 5½ ಅಡಿ ಫುಟ್ ಪಾತ್ ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ನಮ್ಮ ಗಮನಕ್ಕೆ ಬಂದಿರುವ ಹಾಗೆ ಆ ಸೇತುವೆಯ ಮೇಲೆ ಒಂದು ಆಕ್ಸಿಡೆಂಟ್ ಆಗಿದೆ. ಅಲ್ಲಿ ಹೆಚ್ಚು ಆಕ್ಸಿಡೆಂಟ್ ಆಗುವುದಿಲ್ಲ. ಕಾರಣವೇನೆಂದರೆ ಆ ಕಡೆಯಿಂದ ಬರತಕ್ಕಂತ ವಾಹನಗಳು ಈ ಕಡೆ ಬಂದ ಮೇಲೆ ಈ ಕಡೆಯ ವಾಹನಗಳು ಮುಂದೆ ಹೋಗುತ್ತವೆ. ಆದ್ದರಿಂದ ಅಲ್ಲಿ ಹೆಚ್ಚು ಆಕ್ಸಿಡೆಂಟ್ ಆಗುವುದಿಲ್ಲ. ಈ ಸೇತುವೆ ಉತ್ತಮ ಸ್ಥಿತಿಯಲ್ಲಿ ಇಲ್ಲ ಎನ್ನುವ ಕಾರಣದಿಂದ ಇದಕ್ಕೆ ಮೊದಲು ಆದ್ಯತೆ ಕೊಟ್ಟು ಮಾಡಿಸಬೇಕು ಎಂದು ಸರ್ಕಾರದ ಗಮನದಲ್ಲಿದೆ, ಆದಷ್ಟು ಜಾಗ್ರತೆ ಇದನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಶ್ರೀಮಾನ್ ಚನ್ನಬಸಪ್ಪನವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಾಗಿದ್ದಾಗ ಇದನ್ನು ರೈಲ್ವೆ ಇಲಾಖೆಯವರಿಗೆ ವಹಿಸಬೇಕು, ಅವರಿಂದ ಕಾಂಪೆನ್ಸೇಷನ್ ತೆಗೆದುಕೊಂಡು ಇವರು ಹೊಸದಾಗಿ ಸೇತುವೆಯನ್ನು ನಿರ್ಮಿಸಬೇಕು, ಅಥವಾ ಅವರು ಹೊಸದಾಗಿ ಸೇತುವೆಯನ್ನು ಮಾಡಬೇಕೆಂದು ಅಗ್ರಿಮೆಂಟ್ ಆಗಿತ್ತು. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ :— ಅದಕ್ಕೆ ಅವರು ಒಪ್ಪಲಿಲ್ಲ. ರೈಲ್ವೆಯವರೇ ಪ್ರತ್ಯೇಕವಾಗಿ ಅದನ್ನು ನಾವು ಮಾಡಿಕೊಳ್ಳುತ್ತೇವೆ, ಇದು ಸರಿ ಹೋಗುವುದಿಲ್ಲ ಎಂದು ಹೇಳಿದ್ದಾರೆ.

NON-FILLING UP OF VACANT POST IN THE DEPARTMENT OF TECHNICAL EDUCATION

408 Sri P. VENKATAGIRIYAPPA (Kolar) :—

Will the Minister for Education be pleased to state :-

(*a*) the numder of posts of Heads of Sections of Eectrical Engineering in the Department of Technical Education remaining vacant;

(*b*) since how long these posts have been kept vacant and the reasons for keeping these posts vacant for so long ?

SRI N.M. KOTRABASAIAH SOGI (DEPUTY MINISTER FOR EDUCATION)

(a) Six.

(b) 1 post from May 1962
1 post from August 1962
1 post from October 1966
2 posts from June 1968
1 post from May 1969

Two persons appointed in January 1967 did not report for duty. In the meanwhile, the question of amending the cadre and recruitment rules providing for subjectwise classfication of vacancies is under consideration. The vacant posts will be filled up soon after this amendment is finalised.

ಶ್ರೀ ಪಿ. ವೆಂಕಟಗಿರಿಯಪ್ಪ :—ಸ್ವಾಮಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಶಾಖಾ ಮುಖ್ಯಾಧಿಕಾರಿಗಳ ಎರಡು ಹುದ್ದೆಗಳನ್ನು ೧೯೬೨ನೇ ಇಸವಿಯಿಂದಲೂ ಭರ್ತಿಮಾಡಿಲ್ಲ ಎಂದು ತಿಳಿಸಿದ್ದೀರಿ, ಈ ಸ್ಥಾನಗಳಿಗೆ ೧೯೬೨ನೇ ಇಸವಿಯಿಂದಲೂ ಭರ್ತಿ ಮಾಡದೇ ಇರುವುದಕ್ಕೆ ಸರ್ಕಾರದಲ್ಲಿ ಅಥವಾ ಸರ್ಕಾರವನ್ನು ನಡೆಸತಕ್ಕ ಒಂದು ಮುಖ್ಯ ಜಾತಿಯ ಕ್ಯಾಂಡಿಡೇಟ್‌ಗಳು ಇಲ್ಲ ಎನ್ನುವ ಕಾರಣದಿಂದ ಇದುವರೆಗೂ ಆ ಸ್ಥಾನಗಳನ್ನು ಭರ್ತಿಮಾಡಿಲ್ಲ ಎನ್ನುವುದು ನಿಜವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ ;—ಅಂಥಾ ಕಾರಣ ಯಾವುದೂ ಇಲ್ಲ. ಇಂತಹ ನೇಮಕಗಳನ್ನು ಮಾಡುವಾಗ ಯಾವ ವಿಚಾರಕ್ಕೂ ಗಮನ ಕೊಡುತ್ತಿಲ್ಲ. ಈ ಸ್ಥಾನಗಳನ್ನು ಭರ್ತಿ ಮಾಡಬೇಕೆಂದು ೧೯೬೫ ಮತ್ತು ೧೯೬೬ನೇ ಇಸವಿ ಎರಡು ಸಲ ಅಡ್ವರ್ಟೈಜ್ ಮಾಡಿದ್ದೆವು. ಅದಕ್ಕೆ ಸಾಕಷ್ಟು ಕ್ಯಾಂಡಿಡೇಟ್ಸ್ ಬರಲಿಲ್ಲ. ಅದೂ ಅಲ್ಲದೆ ಆ ಸ್ಥಾನಕ್ಕೆ ನೇಮಕ ಮಾಡಿಕೊಂಡಂತಹ ಕ್ಯಾಂಡಿಡೇಟ್ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳಲಿಲ್ಲ. ಆದ್ದರಿಂದ ಆ ಸ್ಥಾನಗಳು ಹಾಗೆಯೇ ಖಾಲಿಯಾಗಿ ಉಳಿದುಕೊಂಡು ಬಂದಿವೆ: ಅಲ್ಲಿ ಕೆಲಸ ಸಫರ್ ಆಗಿಲ್ಲ. ಅಲ್ಲಿ ಡೆಪ್ಯೂಟೆಡ್ ಹ್ಯಾಂಡ್ಸ್ ಕೆಲಸ ಮಾಡುತ್ತಿದ್ದಾರೆ.

ಶ್ರೀ ಪಿ ವೆಂಕಟಗಿರಿಯಪ್ಪ:—ತಾವು ಜಾತಿಯ ವಿಚಾರ ಸರ್ಕಾರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಬಹಳ ಸಂತೋಷ ೧೯೬೨ನೇ ಇಸವಿಯಿಂದಲೂ ಈ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೇ,? ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಇಷ್ಟು ವರ್ಷ ಕಾಲಾವಕಾಶ ಬೇಕಾಗುತ್ತದೆಯೇ ?

ಶ್ರೀ ಎನ್. ಎಂ, ಕೊಟ್ರಬಸಯ್ಯ ಸೋಗಿ :—ಈ ಹುದ್ದೆಗೆ ಹೆಚ್ಚಿನ ಕ್ವಾಲಿಫಿಕೇಷನ್ ಫಿಕ್ಸ್ ಮಾಡಿ ಕಡಿಮೆ ಸಂಬಳವನ್ನು ಇಟ್ಟಿದ್ದಾರೆ. ಆದ್ದರಿಂದ ಇದು ಅಷ್ಟು ಆಕರ್ಷಣೀಯವಾಗಿಲ್ಲ ಎಂದು ಇದಕ್ಕೆ ಕ್ಯಾಂಡಿಡೇಟ್ಸ್ ಬರುತ್ತಿಲ್ಲ. ಇದನ್ನು ಪರಿಶೀಲನೆ ಮಾಡಿ ಸೂಕ್ತ ಪ್ರೋತ್ಸಾಹವನ್ನು ಕೊಟ್ಟು ತೀವ್ರವಾಗಿ ಈ ಸ್ಥಾನಗಳನ್ನು ಭರ್ತಿಮಾಡುತ್ತೇವೆ. ಈಗ ಆ ಸ್ಥಾನಗಳು ಖಾಲಿ ಇಲ್ಲ. ಅಲ್ಲಿ ಕೆಲವು ಲೆಂಟ್ ಹ್ಯಾಂಡ್ಸ್ ಕೆಲಸ ಮಾಡುತ್ತಿದ್ದಾರೆ. ಕೆಲಸ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್ ;—ಈಗತಾನೆ ತಾವು ಹೇಳಿದಿರಿ, ಬಂದಂತಹ ಕ್ಯಾಂಡಿಡೇಟ್ಸ್ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳಲಿಲ್ಲ ಎಂದು. ಅವರು ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳದೇ ಇರುವುದಕ್ಕೆ ಕಾರಣವೇನು ? ಅದಕ್ಕೆ ಮೂಲಭೂತವಾದ ಸರ್ವೀಸ್ ಕಂಡೀಷನ್ ಏನಿದೆ, ಕ್ವಾಲಿಫಿಕೇಷನ್ ಏನು ಪ್ರಿಸ್‌ಕ್ರೈಬ್ ಮಾಡಿದ್ದಾರೆ ಅದಕ್ಕೆ ಸರಿಯಾದ ಸರ್ವಿಸ್ ಅಲ್ಲಿ ಇಲ್ಲದೇ ಇರುವುದರಿಂದ ಅವರು ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳಲಿಲ್ಲ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :– ಹಾಗೇನು ಇಲ್ಲ. ಅದಕ್ಕೆ ಎಂ.ಎಸ್.ಸಿ.ಕ್ವಾಲಿಫಿಕೇಷನ್ ಫಿಕ್ಸ್ ಮಾಡಿದೆ. ಟೀಚಿಂಗ್ ಎಕ್ಸ್‌ಪೀರಿಯನ್ಸ್ ಇರಬೇಕು ಎಂದು ಹೇಳಿದೆ. ಅದು ೩೦೦ ರೂಪಾಯಿಗಳಿಂದ ೭೦೦ ರೂಪಾಯಿ ಗ್ರೇಡು ಇದೆ. ಅದು ಅಷ್ಟು ಆಕರ್ಷಣೀಯವಾಗಿ ಕಾಣುವುದಿಲ್ಲ ಎಂದು ಬಹುಶಃ ಯಾರೂ ಕ್ಯಾಂಡಿಡೇಟ್ ಆ ಹುದ್ದೆಗೆ ಬರಲಿಲ್ಲ ಎಂದು ಕಾಣುತ್ತದೆ. ಈಗ ಪಾಲಿಟೆಕ್ನಿಕ್‌ಗಳಲ್ಲಿ ಸ್ಟ್ರೆಂತ್ ಕಡಿಮೆ ಇರುವುದರಿಂದ ಹೆಚ್ಚಿಗೆ ಪೋಸ್ಟ್‌ಗಳನ್ನು ನೇಮಕ ಮಾಡುವ ಅವಶ್ಯಕತೆ ಕಂಡಂ ಬರುವುದಿಲ್ಲ. ಈಗ ಅಲ್ಲಿ ಪಾಠಕ್ಕೆಯಾವ ವಿಧವಾದ ತೊಂದರೆಯಾಗಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ರಿಕ್ವೈರ್ಡ್ ಕ್ವಾಲಿಫಿಕೇಷನ್ ಇರುವವರನ್ನು ಕಳಿಹಿಸಿದರೆ ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಪರಿಶೀಲನೆ ಮಾಡುತ್ತೇವೆ.

SRI AZEEZ SAIT :—It is not a fact that the Head of Departments at the instance of the Government prescribe certain conditions to suit their own candidate which the other candidate could not fulfil ?

SRI N. M. KOTRABASIAH SOGI :—It is not a fact. We prescribe general rules which are applicable to all.

BOOK PUBLISHED BY DIRECTORATE OF TEXT BOOKS

413 SRI N. A. CHANNE GOWDA (Pandavapura).—
Will the Minister for Education be pleased to state :—

(a) the personnel of the Directorate of Text Books ;

(b) the number of Primary and Secondary Text Book published by the above Directorate ;

(c) whether the above Directorate is taking help guidance and assistance from the Central Directorate of Nationalised Text Books ;

(d) the annual budget for the State Directorate of Text Boooks ;

(e) the relationship between the above Directorate and the Text Book Committee ?

SRI K. V. SHANKARA GOWDA (Minister for Education).—

(a) *Vide* Statement appended.

(b) The number of text books published upto 31st March 1969 is as follows ;

1.	Primary Standard ...	134
2.	Secondary Standand ...	59
	Total ...	193

(c) Assistance of the National Council of Educational Research and Training, which is handing this programme at the Centre, is being availed. A "Central Directorate of Nationalised Text Books" does not appear to be in existence.

(d) No separate provision exists in the current years's budget (except a token grant of Rs. 100) as the Directorate came into existence only from September 1969 However, it is estimated that the annual budget would be in the vicinity of Rs. one crore covering both expenditure on establishment and on the production of Text-books.

(e) The Text Book Committee is one of the essential organs of the Directorate of Text Books. The Director of Text Books is *ex ffi cio* Chairman of the Text Book Committee.

STATEMENT

Statement showing the personnel of the Directorate of the Text Books.

1	Director	...	1
2	Administrative Assistant	...	1
3	Deputy Director	...	1
4	Text Book Officer	...	1
5	Special Officer	...	1
6	Assistant Directors	...	3
7	Senior Assistant Directors (Art)	...	1
8	Stenographers	...	4
9	Manager	...	1
10	Office Assistant	...	1
11	Peons	...	14
12	Audit and Accounts Superintendent	...	1
13	Academic Assistants	...	2
14	Superintendents	...	2
15	First Division Clerks	...	6
16	Second Division Clerks	...	3
17	II Grade Typists	...	2
18	Attenders	...	4
19	Librarian	...	1
20	Research Assistants	...	10
21	Artist	...	1
22	Sweeper and Watchman	...	1

ಶ್ರೀ ಎನ್. ಎ. ಚನ್ನೇಗೌಡ :— ಸ್ವಾಮಿ ಡೈರೆಕ್ಟೊರೇಟ್ ಆಫ್ ಟೆಕ್ಸ್ಟ್ ಬುಕ್ಸ್ ಅವರು ಪುಸ್ತಕಗಳನ್ನು ಬರೆಯುವುದಕ್ಕೆ ಪ್ಯಾನಲ್ ನೇಮಿಸಿದ್ದಾರೆಯೇ ಅಥವಾ ವ್ಯಕ್ತಿಗಳು ಬರೆದಿರತಕ್ಕ ಪುಸ್ತಕಗಳನ್ನೇ ನ್ಯಾಷನಲೈಜ್ಡ್ ಟೆಕ್ಸ್ಟ್ ಬುಕ್ಸ್ ಎಂದು ಪಬ್ಲಿಷ್ ಮಾಡಿದ್ದಾರೆಯೇ ?

ಶ್ರೀ ಎನ್. ಎಂ ಕೊಟ್ರಬಸಯ್ಯ ಸೋಗಿ :— ಕೆಲವು ವ್ಯಕ್ತಿಗಳು ಬರೆದಿರತಕ್ಕ ಪುಸ್ತಕಗಳನ್ನು ಟೆಕ್ಸ್ಟ್ ಬುಕ್ ಕಮಿಟಿಯವರು ಪರಿಶೀಲನೆ ಮಾಡುತ್ತಾರೆ. ಅವಶ್ಯಕತೆ ಕಂಡುಬಂದರೆ ಟೆಕ್ಸ್ ಬುಕ್ಸ್ ಬರೆಯುವುದಕ್ಕೆ ಪ್ಯಾನಲ್ ನೇಮಕ ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ :— ಈಗ ಟೆಕ್ಸ್ಟ್ ಬುಕ್ ಕಮಿಟಿಯಲ್ಲಿರುವ ಸದಸ್ಯರ ಪೈಕಿ ಯಾರಾದರೂ ಸೆಂಟ್ರಲ್ ಡೈರೆಕ್ಟೊರೇಟ್ ಆಫ್ ನ್ಯಾಷನಲೈಜ್ಡ್ ಟೆಕ್ಸ್ಟ್ ಬುಕ್ಸ್ ಕಮಿಟಿಯಲ್ಲಿ ಕೆಲಸ ಮಾಡಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :— ಕಮಿಟಿಯ ಸದಸ್ಯರ ಹೆಸರಿನಲ್ಲಿ ಆ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಕಮಿಟಿಯ ಬಗ್ಗೆ ಪ್ರಶ್ನೆಯನ್ನು ಕೇಳಿಲ್ಲ. ಡೈರೆಕ್ಟೊರೇಟ್ ವಿಷಯ ಕೇಳಿದ್ದಾರೆ.

ಶ್ರೀ ಎನ್.ಎ. ಚನ್ನೇಗೌಡ :— ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಸೆಪ್ಟೆಂಬರ್ ೧೯೬೯ ರಿಂದ ಮಾತ್ರ ಸಂಚಾಲಕಾಲಯವು ಅಸ್ತಿತ್ವದಲ್ಲಿ ಬಂದಿದೆ ಎಂದು ಹೇಳಿದ್ದಾರೆ ಡೈರೆಕ್ಟೊರೇಟ್ ಅವರು ೩೧ನೇ ಮಾರ್ಚಿ ೧೯೬೯ ರವರೆಗೆ ೧೩೪೪ ಪ್ರಾಥಮಿಕ ಪುಸ್ತಕಗಳು, ಮತ್ತು ಸೆಕೆಂಡರಿ ತರಗತಿಗಳ ೫೯ ಪುಸ್ತಕಗಳನ್ನೂ ಪಬ್ಲಿಷ್ ಮಾಡಿದ್ದಾರೆಂದು ಕೊಟ್ಟಿದ್ದಾರೆ. ಇದರಲ್ಲಿ ಯಾವುದು ನಿಜ ?

ಶ್ರೀ ಎನ್ ಎಂ ಕೊಟ್ರಬಸಯ್ಯ ಸೋಗಿ:—ವಿವರದಲ್ಲಿ ಕಾಣಿಸಿರುವುದು ನಿಜ. ಇದರಲ್ಲಿ ಏನೊ ಸಂಶಯ ಬಂತೆಂಬುದು ನನಗೆ ಗೊತ್ತಾಗಲಿಲ್ಲ.

SRI J. P. SARWASH:—I wish to know whether the Government has made any effort to find out whethsr such a Central Directorate mentioned in (c) is exisiting or not?

SRI N. M. KOTRA BASAIAH SOGI:— There is no Central Directorate. There is what is called N. C. E. R. T. National Council of Educational Research and Traning.

SRI H. SIDDAVEERAPPA:—What is the percentage of text-books that are published by this Directorate in that State?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಅದರ ಬಗ್ಗೆ ನನ್ನೊಡನೆ ಮಾಹಿತಿ ಇಲ್ಲ ಯಾವ್ಯಾವ ತರಗತಿಗೆ ಎಷ್ಟೆಷ್ಟೋ ವಿಷಯಗಳಲ್ಲಿ, ಎಷ್ಟು ಪುಸ್ತಕಗಳನ್ನು ಪಬ್ಲಿಷ್ ಮಾಡಿದ್ದಾರೆಂಬುದನ್ನು ಹೇಳಬಲ್ಲೆ. ಪರ್ಸೆಂಟೇಜ್ ಮಾಹಿತಿ ಇಲ್ಲ.

ಶ್ರೀ ಎಂ. ಜಯಪ್ರಕಾಶ್ ನಾರಾಯಣ:— ಈ ಪಠ ಪುಸ್ತಕಗಳಲ್ಲಿರತಕ್ಕಂತಹ ಲೋಪದೋಷಗಳನ್ನು ತೋರಿಸಿದಂತವರಿಗೆ ಬಹುಮಾನಗಳನ್ನು ಕೊಡುತ್ತೇವೆಂದು ನೀವು ಹೇಳಿದ್ದಿರಿ. ಆ ರೀತಿ ಎಷ್ಟು ಲೋಪದೋಷಗಳು ವರದಿಯಾಗಿವೆ. ಮತ್ತು ಎಷ್ಟು ಜನರಿಗೆ ಬಹುಮಾನ ಕೊಟ್ಟಿದ್ದೀರಿ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಐ ಪಾಯಿಂಟ್ ನೋಟೀಸ್.

ಶ್ರಿ ಎಸ್ ಎಚ್ ಪುಟ್ಟರಂಗನಾಥ್:— ಈಗ ಈ ಕಮಿಟಿಯಲ್ಲಿರತಕ್ಕ ಸದಸ್ಯರು ಬರೆದಂತಹ ಪುಸ್ತಕಗಳನ್ನು ಪಬ್ಲಿಷ್ ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದರು.

ಇದರಲ್ಲಿ ಬಹುಭಾಗ ಟೆಕ್ಸ್ಟ್ ಪುಸ್ತಕ ಕಮಿಟಿಯಲ್ಲಿರತಕ್ಕ ಸದಸ್ಯರು ಬರೆದಂತವುಗಳನ್ನೇ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗೇ ಮಾಡಿದುದರಿಂದ ಬೇರೆಯವರಿಗೆ ಬಹಳ ತೊಂದರೆಯಾಗುತ್ತದೆಂಬುದನ್ನು ತಾವು ಗಮನಕ್ಕೆ ತೆಗೆದುಕೊಂಡಿದ್ದೀರಾ?

ಶ್ರೀ ಎನ್. ಎಂ ಕೊಟ್ರಬಸಯ್ಯ ಸೋಗಿ—: ಟೆಕ್ಸ್ಟ್ ಪುಸ್ತಕ ಕಮಿಟಿಯ ಸದಸ್ಯರ ಪುಸ್ತಕಗಳನ್ನೇ ಮಾಡಬೇಕೆಂದು ಸರ್ಕಾರದ ನೀತಿಯಲ್ಲ. ಆ ಟೆಕ್ಸ್ಟ್ ಬುಕ್ ಕಮಿಟಿಯಲ್ಲಿರತಕ್ಕಂತಹ ಸದಸ್ಯರು ಬರೆದ ಕೆಲವು ಪುಸ್ತಕಗಳು ಟೆಕ್ಸ್ಟ್ ಪುಸ್ತಕಗಳಾಗಿ ಪ್ರಿಸ್ಕ್ರೈಬ್ ಆಗಿರಬಹುದು. ಅವರು ಬರೆದ ಪುಸ್ತಕ ಯೋಗ್ಯವೆಂದು ಕಂಡುಬಂದರೆ, ಕಮಿಟಿ ಅದನ್ನು ಪ್ರಿಸ್ಕ್ರೈಬ್ ಮಾಡುತ್ತಾರೆ.

SUGAR FACTORIES IN THE STATE

418 SRI N. A. CHANNE GOWDA (Pandavapura).—Will the Minister for Industries, Information and Publicity be pleased to state :—

(a) the number of sugar factories in the State;

(b) the total molasses produced in the above factories ;

(c) how the molasses is disposed off and whether the Government is the sole authority to issue purchase permit ;

(d) the rates at which the factories are selling the molasses to other factories owned by the State and individuals and to the Breweries.

(e) whether there are any fresh applicants for licence to purchase the molasses at a higher rate ;

(f) whethee the Government has any proposal before it for allowing the factories to determine the price and the purchaser :

SRI M. RAJASEKHARA MURTHY (MINISTER FOR INDUSTRIES, INFORMATION AND PUBLICIGY :

(a) Ten

(b) During	1966-67	51915	tonnes
	1967-68	42126	tonnes
	1968-69	78,800	tonnes

(c) About 85 to 90 percent of the total production of the molasses is allotted to Distilleries for manufacture of Alcohol. The remaining is allotted to manufacturers of Cattle and Poultry feed and or oil crushers and foundries. The Excise Commissioner, is also he Molasses Controller in the State for allotment of molasses.

(SRI M. RAJASEKHARA MURTHY)

(d) The selling price is fixed at Rs. 6–70 per tonne as per the Molasses Control order.

(d) No

(e) No.

ಶ್ರೀ ಎನ್ ಎ ಚನ್ನೇಗೌಡ : ತಾವು ಡಿಸ್ಟಿಲರೀಸ್‌ಗೆ ಟನ್ನಿಗೆ ೬–೭೦ರ ಪ್ರಕಾರ ಕೊಡುತ್ತಿದ್ದಾರೆಂದು ಹೇಳಿದ್ದೀರಿ. ಆದರೆ ಈ ಕಂದಸಾರಿ ಸಕ್ಕರೆ ಮಾಡುವವರು ಅದನ್ನು ೧೪೦, ೧೬೦ಕ್ಕೆ ತೆಗೆದು ಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ? ಈ ರೀತಿ ಪ್ರೈಸ್ ಕಂಟ್ರೋಲ್ ಮಾಡಿದುದರಿಂದ ಅದರಲ್ಲೂ ಸಹಕಾರಿ ಸಕ್ಕರೆ ಕಾರ್ಖಾನೆ ಮುಂತಾದವುಗಳಿಗೆ ನಷ್ಟವಾಗುವುದಿಲ್ಲವೆ ಇದನ್ನು ತೆಗೆದುಹಾಕಬೇಕೆಂದು ಬಿದರ್ ಸ್ಟೇಟ್ ಫೆಡರೇಶನ್ ಆಫ್ ಶುಗರ್ ಇಂಡಸ್ಟ್ರೀಸ್ ಅರಿಕೆ ಮಾಡಿಕೊಂಡಿದ್ದಾರೆಯೆ ?

Sri M. RAJASEKARA MURTHY :—This is being controlled by the Molasses Control Order, and the Government of India have powers. The representatives of the members of the Association have already represented to the Government of India for the upward revision. That is under the active control of the Government of India.

ಶ್ರೀ ಎನ್ ಎ ಚನ್ನೇಗೌಡ : ತಮಗೆ ಮೈಸೂರು ರಾಜ್ಯದಲ್ಲಿ ಬ್ರೆಡ್ ಈಸ್ಟ್ ತಯಾರಿಕೆಗೋಸ್ಕರ ಮೊಲಾಸಸ್ ಸಪ್ಲೈ ಮಾಡಬೇಕೆಂದು ಯಾರಾದರೂ ಕೇಳಿಕೊಂಡಿದ್ದಾರೆಯೇ ?

Shri M. RAJASEKARA MURTHY : We cannot issue these molasses to other people. ಪ್ರೈವೇಟ್ ಜನರಿಗೆ ಅದನ್ನು ಕೊಡುವುದಿಲ್ಲ. ಯಾರು ಪರ್ಮಿಟ್ ಇಟ್ಟು ಕೊಂಡಿರುತ್ತಾರೆ ಅವರಿಗೆ ಕೊಡುತ್ತೇವೆ.

ಶ್ರೀ ಬಿ ದೊಡ್ಡಬೋರೇಗೌಡ : ನೀವು ೬–೭೦ ಒಂದು ಟನ್ನಿಗೆ ಬೆಲೆ ಎಂದು ಹೇಳಿದ್ದೀರಿ ಮಾರ್ಕೆಟಿನಲ್ಲಿ ೧೫೦–೨೦೦ ರೂಪಾಯಿಗಳವರೆಗೆ ಬೆಲೆ ಇದೆ. ಇವರಿಂದ ಖಾಸಗಿ ವತಿಯಿಂದಾಗಲಿ, ಸಹಕಾರೀ ವತಿಯಿಂದಾಗಲಿ ನಡೆಸುವಂತಹ ಕಾರ್ಖಾನೆಗಳಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುವುದಿಲ್ಲವೆ?

ಶ್ರೀ ಎಂ ರಾಜಶೇಖರಮೂರ್ತಿ : ನಾನು ಮೊದಲೇ ಹೇಳಿದೆ. ಕೇಂದ್ರ ಸರ್ಕಾರದವರು ಇದರ ಬೆಲೆಯನ್ನು ನಿಗದಿ ಮಾಡುವುದು, ಎಂದು. ಸಕ್ಕರೆ ಕಾರ್ಖಾನೆಯವರನ್ನು ಲೆಕ್ಕಕ್ಕೆ ತೆಗೆದು ಇದರ ಬೆಲೆ ಫಿಕ್ಸ್ ಮಾಡಿದರೆ, ನಾಳೆ ಸಕ್ಕರೆ ಬೆಲೆ ರೆಡ್ಯೂಸ್ ಆಗುತ್ತದೆ.

ಶ್ರೀ ಎಚ್ ಡಿ ದೇವೇಗೌಡ ; ಮೊಲೇಸಸ್ ಉಪಯೋಗ ಮಾಡಿ ನಾವು ಡಿಸ್ಟಿಲರಿ ಓಪನ್ ಮಾಡುವುದು ಸೂಕ್ತವೆಂದು ಡೈರಕ್ಟರ್ ಆಫ್ ಇಂಡಸ್ಟ್ರೀಸ್ ಒಂದು ಪ್ರೊಪೋಸಲ್ಸ್ ಕೊಟ್ಟು ಆದನ್ನು ಸರ್ಕಾರದವರು ಅಂಗೀಕಾರ ಮಾಡದೆ, ಅದು ಮೂರು ನಾಲ್ಕು ವರ್ಷಗಳಿಂದ ನಿಂತುಹೋಗಿರುವುದು ನಿಜವೆ?

ಶ್ರೀ ಎಂ. ರಾಜಶೇಖರಮೂರ್ತಿ :—ನೋಟೀಸ್.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ಇಲ್ಲಿ ಕಾಕಂಬಿಯನ್ನು ಜಾನುವಾರುಗಳ ಹಾಗೂ ಕೋಳಿಗಳ ಮೇವಿನ ಉತ್ಪಾದಕರುಗಳಿಗೆ ಗೊತ್ತು ಮಾಡಿ ಕೊಡಲಾಗುತ್ತದೆ ಎಂದು ಹೇಳಿದ್ದೀರಿ, ಆದ್ದರಿಂದ ಇದನು ಉತ್ಪಾದನೆ ಮಾಡತಕ್ಕವರು ಯಾರು, ಮತ್ತು ಎಲ್ಲೆಲ್ಲಿ ಅದನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ !

ಶ್ರೀ ಎಂ. ರಾಜಶೇಖರಮೂರ್ತಿ :—ಅದರ ಕೆಲವು ಕಾರ್ಖಾನೆಗಳು ಇವೆ. ಮೈಸೂರು-ಬೆಂಗಳೂರು ರೋಡಿನಲ್ಲಿ ಒಂದು ಇದೆ. ಹಾಗೆ ಹೊಸದಾಗಿ ಮಂಡ್ಯದಲ್ಲಿ ಮಾಡಲು ಪ್ರಯತ್ನ ನಡೆಯುತ್ತಿದೆ. ಬಾಕಿ ಎಲ್ಲಾ ಸಣ್ಣ ಪುಟ್ಟವುಗಳು, ಅದರ ಡೀಟೈಲ್ಸ್ ನನ್ನಲ್ಲಿ ಇಲ್ಲ.

ಶ್ರೀ ಎಂ. ನಾಗಪ್ಪ :—ತಾವು ಸಪ್ಲಿಮೆಂಟರಿಗೆ ಉತ್ತರ ಕೊಡುತ್ತಾ, ಕಾಕಂಬಿಗೆ ಕೇಂದ್ರ ಸರ್ಕಾರದವರು ಬೆಲೆ ನಿಗದಿ ಮಾಡಿದ್ದಾರೆ. ಕಾರ್ಖಾನೆಯು ಸಕ್ಕರೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಇದರ ಬೆಲೆ ನಿಗದಿ ಮಾಡಿದರೆ, ಶುಗರ್ ರೇಟ್ ಕಡಿಮೆಯಾಗಬಹುದು ಎಂದು ಹೇಳಿದ್ದೀರಿ. ಇದರಿಂದ ನಿಮ್ಮ ನೀತಿ ಏನು ತೋರಿಸುತ್ತದೆ ಅಂದರೆ, ಸಕ್ಕರೆ ತಿನ್ನುವವರಿಗೆ ರೇಟ್ ಜಾಸ್ತಿಯಾದರೂ ಪರವಾ ಇಲ್ಲ. ಸರಾಯಿ ಕುಡಿಯತಕ್ಕವರಿಗೆ ಪ್ರೋತ್ಸಾಹ ಕೊಡಬೇಕೆಂದು, ಇದರ ರೇಟ್ ಜಾಸ್ತಿ ಮಾಡಿದರೆ, ಸಕ್ಕರೆ ಧಾರಣೆ ಕಡಿಮೆಯಾಗುತ್ತದೆಂದು ಈ ರೀತಿ ಮಾಡುವುದು ನಿಮ್ಮ ನೀತಿಯೇ?

ಶ್ರೀ ಎಂ. ರಾಜಶೇಖರಮೂರ್ತಿ ;—ಬೆಲೆ ನಿಗದಿ ಮಾಡತಕ್ಕದ್ದು ಕೇಂದ್ರ ಸರ್ಕಾರಕ್ಕೆ ಸೇರಿದ್ದು, ನಮಗೆ ಸೇರಿದ್ದಲ್ಲ

TAKING OVER FISHERY AND LOCAL BODY SCHOOLS

427. SRI B. BHASKARA SHETTY (Kaup). —

Will the Minister for Education be pleased to state :—

(a) whether the Cabinet has decided to take over the schools which are under the control of Fisheries Department and Local Bodies to the control of Education Department from next year :

(b) whether there is a chance of of leaving some of the schools with the respective departments which taking over the said schools.

(c) if so, the compelling reasons for the same

(d) whether there is a proposal to open a sparate administrative division for the administration of the schools so taken over,

SRI N. M. KOTRABASAIAH SOGI (Deputy Minister for Education:

(a) This is under the consideration of the Government.

(b) Does not arise in view of reply to clause (a) above-

(c) Does not arise-

(d) Does not aries.

ಶ್ರೀ ಬಿ. ಭಾಸ್ಕರ ಶೆಟ್ಟಿ :—ಈ ಮೀನುಗಾರಿಗೆ ಇಲಾಖೆಯಲ್ಲಿರುವ ಶಾಲೆಗಳನ್ನು ಮತ್ತು ಇನ್ನಿತರ ಶಾಲೆಗಳನ್ನು ವಿದ್ಯಾಭ್ಯಾಸ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಏನಾದರೂ ಮಂತ್ರಿಮಂಡಲದಲ್ಲಿ ನಿರ್ಧಾರವಾಗಿದೆಯೇ? ಹಾಗಿದ್ದರೆ ಯಾಕೆ ತೆಗೆದುಕೊಳ್ಳಲಿಲ್ಲ ಮತ್ತು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ ;—ಅದನ್ನು ಉತ್ತರದಲ್ಲಿ ಹೇಳಿದ್ದೇನೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ ; - ಪರಿಶೀಲನೆ ಎಷ್ಟು ವರ್ಷಗಳ ತನಕ ಹೋಗಬಹುದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ ;—ಇದನ್ನು ಒಳಗೊಂಡಂತಹ ಅಂಶ ಬಹಳ ಇದೆ. ಪರಿಶೀಲನೆ ಆದಷ್ಟು ಜಾಗ್ರತೆ ಮುಗಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

Mr. SPEAKER ;—Question hour is over.

ಶ್ರೀ ಎನ್. ಹುಚ್ಚುಮಾಸ್ತಿಗೌಡ ;—ಇಲ್ಲಿ ಶ್ರೀ ಟಿ. ಆರ್. ಶಾಮಣ್ಣನವರ ಪ್ರಶ್ನೆ ಇದೆ. ಆದ್ದರಿಂದ ತಾವು ಇದನ್ನು ಹೆಲ್ಡ್ ಓವರ್ ಮಾಡುವುದು ಅಗತ್ಯ.

Mr. SPEAKKR;—Now I have called the short notice} quostion.

SHORT NOTICE QUESTION AND ANSWER

FIRE ACCIDENT IN MULBAGAL

6. SRI M. H. JAYAPRAKASH NARAYAN (Sirsi):—

Will the Minister for Revenue be pleased to state—

(*a*) the number of huts destroyed in fire accident in Mulbagal on Wednesday the 18th February 1970;

(*b*) the estimates loss;

(*c*) the immediate relief given to the affected families?

Sri H. V. KOUJALGI (Minister for Revenue):—

(*a*) Two.

(*b*) Rs. 2,000.

(*c*) A sum of Rs. 50 has been given to each of the 2 suffers as an immediate relief.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್:—(ಇ)ಗೆ ಉತ್ತರವಾಗಿ ೫೦ ರೂಪಾಯಿಗಳಂತೆ ಪರಿಹಾರ ನೀಡಲಾಗಿದೆಯೆಂದು ಹೇಳಿದೆ. ಮೊದಲೇ ಅವರ ನಷ್ಟ ೨ ಸಾವಿರ ರೂಪಾಯಿಗಳಿಗೆ ಮೀರಿರುವುದರಿಂದ, ಅವರು ಬಡವರಾಗಿರುವುದರಿಂದ ಈಗ ಅವರಿಗೆ ವಿಶೇಷ ಸಹಾಯವನ್ನು ಏನು ಮಾಡಿದ್ದೀರಿ?

೨-೦೦ P.M.

ಶ್ರೀ ಎಚ್. ವಿ. ಕೌಜಲಗಿ:—ಈಗ ಇಮ್ಮಿಡಿಯಟ್ ರಿಲೀಫ್ ಎಂದು ಅವರಿಗೆ ಅಷ್ಟು ಮೊಬಲಗನ್ನು ಕೊಟಿದೆ. ನಷ್ಟ ಎಷ್ಟಾಗಿದೆಯೆಂಬ ಬಗ್ಗೆ ಚೌಕಸಿ ನಡೆದಿದೆ. ಹೆಚ್ಚು ನಷ್ಟವಾಗಿದ್ದರೆ, ೨೦೦ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳು ಕೊಡುತ್ತಾರೆ.

Sri J. P. SARWESH:—Tbe amount of Rs. 50 given to persons woh suffer from fire accident is a very small amount. Will the Government consider and issue orders to enhance the amount to at least Rs. 500?

SRI H. V. KOUJALGI:—Formerly the maximum was only Rs. 50. It is only during the last year that the amount has been enhanced Rs. 200.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್:—ಈ ರೀತಿಯಾಗಿ ಗುಡಿಸಲುಗಳಿಗೆ ಬೆಂಕಿ ಬಿದ್ದು ಅನಾಹುತಕ್ಕೆ ತುತ್ತಾಗತಕ್ಕಂಥವರು ಬಹಳ ಜಾಸ್ತಿಯಾಗುತ್ತಾ ಇರುವುದರಿಂದ ಅವರ ರಕ್ಷಣೆಗಾಗಿ ಎಷ್ಟು ನಷ್ಟವಾಗುತ್ತದೋ ಅದರ ಅರ್ಧಭಾಗದಷ್ಟು ಹಣವನ್ನು ಸರ್ಕಾರದವರು ಕೊಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ?

SRI H. V. KOUJALGI:—The unfortunate incidents do occour every year and therefore it becomes very difficult to give half the amount of damages as compensation.

ಶ್ರೀ ಚಿಕ್ಕೇಗೌಡ : ಸಾಮಾನ್ಯವಾಗಿ ಬೆಂಕಿ ಬೀಳತಕ್ಕ ಗುಡಿಸಲುಗಳಲ್ಲಿ ಬಹಳವಾಗಿ ಬಡವರು ಮತ್ತು ಹರಿಜನರು ಇರುತ್ತಾರೆ. ಅಂತಹವರಿಗೆ ಗುಡಿಸಲು ಹೋದ ತಕ್ಷಣ ಅಷ್ಟೇ ಬೆಲೆಯುಳ್ಳ ಜೋಪಡಿ ಅಥವಾ ಮನೆಯನ್ನು ಕಟ್ಟಿಕೊಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆಯೇನು ?

SRI H. V. KOUJALGI :—In order to avoid such hardships the Government is giving free sites to poor people and some help is given by the Social Welfare Department.

ಶ್ರೀ ಜಿ. ದುಗ್ಗಪ್ಪ :—ಇತ್ತೀಚೆಗೆ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮೊದಲು ಈ ರೀತಿಯಾಗಿ ಮನೆಗೆ ಬೆಂಕಿ ಬಿದ್ದರೆ ಕೇವಲ ೧೦ ರೂಪಾಯಿಗಳನ್ನು ಕೊಡುತ್ತಿದ್ದರು. ಆಮೇಲೆ ಅದನ್ನು ೫೦ ರೂಪಾಯಿಗಳಿಗೆ ಏರಿಸಿದರು. ಈಗ ೨೦೦ ರೂಪಾಯಿಗಳೆಂದು ಮಾಡಿದ್ದಾರೆ. ಸರ್ಕಾರದವರು ಈಗ ಮತ್ತೊಂದು ತೀರ್ಮಾನವನ್ನು ತೆಗೆದುಕೊಂಡು ಎಷ್ಟು ಲುಕ್ಸಾನು ಆಗುತ್ತದೋ ಅದರಲ್ಲಿ ೫೦೦ ರೂಪಾಯಿಗಳನ್ನು ಅಥವಾ ಸಾವಿರ ರೂಪಾಯಿಗಳನ್ನು ಕೊಡಬೇಕು, ಅವಶ್ಯಕತೆ ಬಿದ್ದರೆ ಅದರ ಅರ್ಧದಷ್ಟಾದರೂ ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂದುಕೇಳಿದ್ದೇನೆ, ಅದನ್ನು ನೀವು ಯಾವಾಗ ಜಾರಿಗೆ ಕೊಡುತ್ತೀರಿ ? ಆ ರೀತಿಯಾಗಿ ತೀರ್ಮಾನ ತೆಗೆದುಕೊಂಡಿರುವುದು ನಿಜವಾದರೆ ಸ್ವಲ್ಪವಿವರವಾಗಿ ಅದನ್ನು ಸಭೆಯಮುಂದೆ ಹೇಳುತ್ತೀರಾ ?

SRI H. V. KOUJALGI :—I have already said that such unfortunate incidents occur every year. But the Government have taken a decision to compensate only upto Rs. 200.

MR. SPEAKER :—Question time is over.

QUESTION FOR ANSWER ON THE DAY
(But Not Taken up)

CAUVERY SCHEME FOR WATER SUPPLY TO BANGALORE CITY

513 SRI T. R SHARMANNA (FORT) :—

Will the Minister of State for Municipal Administration be pleased to state :

(*a*) the steps taken by the Bangalore Water Supply and Sewrage Board to implement Cauvery Scheme to get drinking water to Bangalore from the year 1964 *i.e.*, when the Board came into existence;

(SRI T. R. SHAMANNA)

(*b*) whether an assurance was not given at the time of inauguration of the Board that the scheme would be completed in 5 to 6 years;

(*c*) if so, the stage of the work now;

(*d*) the definite period by which the Cauvery Water will be brought to Bangalore ?

SRI B. M. PATIL MINISTER OF STATE FOR MUNICIPAL ADMINISTRATION,;-

(*a*) Since negotiations made with the World Bank to get I.D.A. credit for the implementation of the 60 MGD Cauvery Scheme had failed, an alternative 30 MGD scheme costing Rs. 22·32 Crores for I Stage of the Cauvery Scheme was got sanctioned in September 1967.

The first stage of the project has already commenced and preliminary works in this connection have been taken up. Construction of staff quarters at treatment plant site, including formation of layouts and construction of service roads along the gravity main is nearing completion. In addition, land acquisition for transmission main from Thorekadanahalli to Bangalore is also nearing completion. Remodelling the distribution mains in the City is also under progress. Acquisition of land required for sewerage treatment site, outfall sewers, mains and sub-mains, is under various stages of progress.

Tenders for laying gravity, transmission and trunk mains in the City have been precessed and just finalised.

Tenders for pumping machinery, construction of pumping stations at Tatguni, Harohalli and at treatment plant site at Thorekadanahalli are being called.

(*b*) Yes

(*c*) *Vide* reply to Clause (*a*)

(*d*) It is expected that the project would be completed by the end of 1973 and Cauvery Water would be made available to Bangalore in 1974.

HIGH LEVEL CAUSEWAYS AND BRIDGES IN TIPTUR TALUK

603. SRI V. L. SHIVAPPA (Tiptur):—

Will the Minster for Public Works be pleased to state:—

(*a*) the number of High Level Causeways or bridges constructed in Tiptur taluk during 1968-69 and 1969-70;

(*b*) whether it is a fact that a causeway near Sasalahally Tiptur Taluk was estimated 8 years ago and it is still pending sanction,

SRI K. LAKKAPPA (Minister for Public Works):—

(a) Nil.

(b) It was estimated during 1967 by the Superinteding Engineer and it is pending sanction with the Chief Engineer.

NEW GRANT-IN-AID CODE

606. SMT. WINNIFRED F. FERNANDES (Coondapur):—

Will the Minister for Education be pleased to state:—

(a) whether the new uniform Grant-in-Aid Code, for aided Primary Schools in the State was issued without inviting suggestions or opinion from the public or the management of Schools;

(b) if so, whether Government would be pleased to recodsider the Code, after taking into cousideration, objections, snggestions and opinion, from the public and represantatives of aided school managements?

SRI K. V. SHANKARA GOWDA (Minister for Education).—

(a) Suggestions from the Managements or from the public were not formally invited, but the Code has been promulgated to satisfy a longstanding demand from the teachers concerned.

(b) Government are already considering the suggestions made by certain representatives of aided school managements in respect of the new Code.

Leave of absence to Sri D. S. NADKARNI—grant of—

MR. SPEAKER:—I have received a letter from Sri D. S. Nadkarni Member, Legislative Assembly, requesting for leave of abscence under sub-rule (2) of Rule 188 of the Rules of procedure and conduct of business in the L. A. from attending the current sittings of the House upto 12th March 1970 due to his ill health.

Is it the pleasure of the Assembly that permission be granted te Shri D. S. Nadkarni to remain absent from attending the current sittings of the Assembly upto 12th March 1970?

HON. MEMBERS : Yes.

MR. SPEAKER : Permission to remain absent is granted.

REQUESTS TO HOLD OVER QUESTIONS OF MEMBER'S WHO HAVE GONE AS DELEGATION TO DELHI.

Sri M. S. Krishnan :—On a point of order.

Mr. Speaker :—There cannot be any point of order in a vacuum.

ಶ್ರೀ ಎಂ. ಎಸ್. ಕೃಷ್ಣನ್ : ಈಗ ಏನಾಗಿದೆ ಅಂದರೆ ಕೆಲವರು ಡೆಲ್ಲಿಗೆ ನಿಯೋಗ ಹೋಗಿದ್ದಾರೆ. ನಿನ್ನೆ ದಿವಸ ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರ ಮತ್ತು ಶ್ರೀ ಕೆ. ಎಚ್. ಪಾಟೀಲ್ ಅವರ ಪ್ರಶ್ನೆಗಳು ಇದ್ದುವು. ಅವರು ಆತರೈಜ್ ಮಾಡಿದ್ದಾರೆಂದು ಹೇಳಿದ್ದೀರಿ. ರೂಲ್ ೪೩ರ ಪ್ರಕಾರ ಆತರೈಜ್ ಮಾಡಬೇಕಾದರೆ ಯಾವಾಗ ಅವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತಾರೆಂಬುದು ಅವರಿಗೆ ಗೊತ್ತಿಲ್ಲ. ಈಗಾಗಲೇ ಒಂದನೇ ನಿಯೋಗ ಡೆಲ್ಲಿಗೆ ಹೋಗಿದ್ದಾಯಿತು. ಎರಡನೇ ಮತ್ತು ಮೂರನೇ ನಿಯೋಗ ಮುಂದೆ ಹೋಗುತ್ತದೆ. ಆದ್ದರಿಂದ ಅಂತಹವರ ಪ್ರಶ್ನೆಗಳನ್ನೆಲ್ಲಾ ಹೋಲ್ಡ್ ಓವರ್ ಮಾಡಬೇಕು, ಆದ್ದರಿಂದ ಈ ಪ್ರಶ್ನೆಯನ್ನು ಹೋಲ್ಡ್ ಓವರ್ ಮಾಡಬೇಕೆಂದು ಪ್ರಾರ್ಥನೆ.

Mr. Speaker :—These questions could not be put as the question hour was over. Therefore, there is no point of order.

SURVEY OF DEVELOPMENT OF DIFFERENT REGIONS

(Motion to be considerd)

Sri H. N. Nanje Gowda :—I gave a notice for a discussion on the statement placed on the table of the House by the Chief Minister on 9th September 1969 in regard to facts relating to survey of development of Different Regions.

Mr. Speaker :—There is consensus opinion about taking it up for discussion. Both sides of the House want to discuss it. It is only a question of finding time. I will consider it.

ಶ್ರೀ ಎಚ್. ಎನ್. ನಂಜೇಗೌಡ :—ನಾನು ಈಗ ಅರಿಕೆಮಾಡಿದ ಕಾರಣವೇನೆಂದರೆ, ಹೋದ ಸಾರಿ ಇದರ ಮೇಲೆ ಚರ್ಚೆಮಾಡಬೇಕೆಂದು ಒಂದು ಸೂಚನೆ ತಮಗೆ ಕಳುಹಿಸಿದೆ. ಅದು ಏನಾಯಿತೋ ಗೊತ್ತಿಲ್ಲ. ಈ ಸಾರಿಯೂ ಆ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ಜೀವಂತವಾಗಿಟ್ಟು ಚರ್ಚೆಮಾಡಬೇಕು. ಕೊನೆಯಲ್ಲಿ ಅದನ್ನು ಕೈಬಿಡಬಾರದು.

Mr. Speaker :—The importance of that matter is not underrated at all. But it is only a question of finding time. Probably it may be possible to have it in the first week of April. Now we go to next item.

CALLING ATTENTION TO A MATTER OF URGENT PUBLIC IMPORTANCE

Re : Police Excesses in Dharwar.

SRI M. NAGAPPA :—I call the attention of the Chief Minister to the Police excesses in Dharwar.

SRI VEERENDRA PATIL (Chief Minister) :—There is no truth in the allegation that the Police entered the premises of the Boys' Hostel at Dharwar. The Police did not enter Ziegier Hostel, but the crowd which had collected nearby was only chased away. The Jawali Building is not a students' Hostel building, but it is a private building where many others also reside. On 28th February 1970, some persons who were damaging the P & T poles and wires and setting fire to the cable rollers and wooden logs, tried to take refuge inside the Jawali building. The Police ran after them and brought them out. While dispersing the crowd which indulged in arson in front of the Jawali building, minor injuries were caused to a few persons. No person by name Sri Sayanagouda received any injuries. However, one person by name Sri Sanganagouda of Karnatak College received minor injuries. He along with others was arrested under the Mysore Police Act near the Jawali building. He was examined at Civil Hospital at 19-35 hours on the same day and his general condition was quite normal. At 2200 hours, this person was released on bail at the hospital itself. Thereafter, he was discharged from the hospital at his own request and he is reported to have gone to his native place.

According to information so far available, no student has died and no person has recived serious injuries. However, in view of apprehensions expressed by Hon'ble Members, further enquires are being pursued.

The situation in Hubli-Dharwar at the moment is reported to be normal.

ಶ್ರೀ ಎಂ. ನಾಗಪ್ಪ :— ಸಂಗನಗೌಡ ಎನ್ನುವ ವಿದ್ಯಾರ್ಥಿ ರಾಯಚೂರು ಜಿಲ್ಲೆಗೆ ಸೇರಿದ ಸಿಂಧನೂರು ಹೋಬಳಿಯಲ್ಲಿ ವಾಸಮಾಡುವನೆಂದು ನನಗೆ ಸಮಾಚಾರ ಗೊತ್ತಾಗಿದೆ. ತಾವು ಹೇಳತಕ್ಕದ್ದು ಹಾಸ್ಪಿಟಲ್‌ನಲ್ಲಿ ಅಡ್‌ಮಿಟ್ ಆಗಿ ಈ ಹೊತ್ತಿನ ದಿವಸ ಡಿಸಚಾರ್ಜ್ ಮಾಡಲಾಯಿತು ಎಂದು. ಅದರ ಬಗೆ ಪುನಃ ಪರಿಶೀಲನೆ ಮಾಡಲಿಕ್ಕೆ ಯೋಚನೆ ಮಾಡುತ್ತೀರಾ? ಎರಡನೆಯದಾಗಿ ಜವಳಿ ಬಿಲ್ಡಿಂಗ್ಸ್‌ನಲ್ಲಿ ಟೈಫಾಯಿಡ್‌ನಿಂದ ಮಲಗಿದ್ದ ಆತನನ್ನು ಪೋಲೀಸಿನವರು ಜಬರದಸ್ತಿನಿಂದ ಕರೆದುಕೊಂಡುಹೋಗಿ ಹೊಡೆದು ಬಡಿದು ಹಾಸ್ಪಿಟಲಿಗೆ ಅಡ್‌ಮಿಟ್ ಮಾಡಿದ್ದಾರೆ. ಅವನಿಗೆ ಬೆನ್ನು ಮೂಳೆ ಮುರಿದಿದೆ ಎಂದು ಹೇಳಿದ್ದಾರೆ. ಈ ಎರಡೂ ವಿಷಯಗಳು ನನಗೆ ತಿಳಿದು ಬಂದಿದೆ. ಆದುದರಿಂದ ಇದನ್ನು ಸರಕಾರದವರು ಪರಿಶೀಲನೆ ಮಾಡಿ ಹೇಳಿಕೆ ಕೊಡುತ್ತಾರೆಯೇ ?

ಶ್ರೀ ಎಂ, ಎಸ್. ಕೃಷ್ಣನ್ :— ನನಗೆ ಈ ಸಂದರ್ಭದಲ್ಲಿ ಹುಬ್ಬಳ್ಳಿಯಿಂದ ಟೆಲಿಗ್ರಾಂ ಬಂದಿದೆ. ಪೋಲೀಸಿನವರು ಕೆಲವು ಕಡೆ ಲಾಟಿ ಚಾರ್ಜ್ ಮಾಡಿರುವುದಲ್ಲದೆ, ವಿದ್ಯಾರ್ಥಿಗಳ ಹಾಸ್ಟಲ್ಲಿನಲ್ಲಿ ನುಗ್ಗಿ ಹೊಡೆದಿದ್ದಾರೆ. ಅದರ ಪರಿಣಾಮವಾಗಿ ಸಂಗನಗೌಡ ಎನ್ನುವನು ಮೃತನಾದನು ಎಂದು ವರದಿ ಬಂದಿದೆ. ದಯವಿಟ್ಟು ಇದನ್ನು ಪುನಃ ತನಿಖೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ :— ಈ ಕಡೆಯುಲ್ಲಿರುವ ಮಾನ್ಯ ಸದಸ್ಯರಾದ ಅಗ್ನಿಹೋತ್ರಿ, ಬೊಮ್ಮಾಯಿ ಮತ್ತು ದಾಸನಕೊಪ್ಪ ಮೊದಲಾದವರು ನಾಲ್ಕೈದು ದಿವಸಗಳ ಹಿಂದೆ ಒಬ್ಬ ಹುಡುಗನನ್ನು ಪೋಲೀಸರು ಲಾಟಿಯಿಂದ ಬಡಿದುದರಿಂದ ಸತ್ತುಹೋಗಿದ್ದಾನೆ ಎಂದು ವರ್ತಮಾನ ಕೊಟ್ಟರು. ನಾನು ಈ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಇನ್‌ಫರ್‌ಮೇಷನ್ ಕಲೆಕ್ಟ್‌ಮಾಡುತ್ತಿದ್ದೇನೆ. ಕರ್ಣಾಟಕ ಯೂನಿವರ್ಸಿಟಿಯಲ್ಲಿ ಸಂಗನಗೌಡ ಎನ್ನುವ ವಿದ್ಯಾರ್ಥಿ ಓದುತ್ತಿದ್ದಾನೆಯೋ ಎಂದು ರಾಯಚೂರು ಎಸ್. ಪಿ. ಅವರನ್ನು ಕೇಳಿದ್ದೇನೆ. ಧಾರವಾಡ್ ಎಸ್. ಪಿ. ಅವರನ್ನು ಕೂಡ ವಿಚಾರಿಸಿ ಎಂದು ಹೇಳಿದ್ದೇನೆ ಕೆ. ಎಂ. ಸಿ. ಹಾಸ್ಪಿಟಲಿನಲ್ಲಿರುವವರನ್ನು ಯಾರಾದರೂ ಹುಡುಗ ಬಡಿದು ಇನಜೂರಿ ಆಗಿ ಸತ್ತಿದ್ದಾನೆಯೇ ಎಂದು ಕೇಳಿದ್ದೇವೆ. ಎಲ್ಲಾ ಕಡೆಯೂ ವಿಚಾರಿಸಿದ್ದೇವೆ. ರಾಯಚೂರು ಎಸ್. ಪಿ. ಯವರು ಆ ರೀತಿ ಸಂಗನಗೌಡ ಎನ್ನುವವನು ಇಲ್ಲವೆಂದು ಹೇಳಿದ್ದಾರೆ. ಭಾನಾಪುರ ಎಲಬುರ್ಗಿಯಲ್ಲಿರ ಬೇಕು ಎಂದು ಅನ್ನಿಸುತ್ತದೆ. ಆ ಹುಡುಗ ಫಸ್ಟ್ ಮಾರ್ಚಿನಿಂದ ಮಾರ್ಚಿ ೮ರವರೆಗೆ ಭಾನಾಪುರ ಜಿಲ್ಲೆ ಯಲ್ಲಿದ್ದಾನೆ. ಆತನು ಶಿರೂರು ವಿಲೇಜ್‌ನವನು, ಕಾಟನ್ ಜಿನ್ನಿಂಗ್ ಮಿಲ್ ಓನರ್ ಅಳಿಯ, ಮತ್ತು ಆತನು ಜವಳಿ ಬಿಲ್ಡಿಂಗ್‌ನಲ್ಲಿಯೇ ಇರುತ್ತಾನೆ ಎಂದು ಎಸ್. ಪಿ. ಅವರಿಂದ ರಿಪೋರ್ಟ್ ಬಂದಿದೆ. ಅವನು ಸತ್ತಿಲ್ಲ, ಹೇಲ್ ಅಂಡ ಹೆಲ್ತಿಯಾಗಿ ಇದ್ದಾನೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಸತ್ತು ಹೋಗಿದ್ದಾನೆ ಎಂದು ಹೇಳುತ್ತಿದ್ದಾರೆ. ಆದರೆ ನಾನು ವಿಚಾರಿಸಿದಲ್ಲಿ ಯಾರೂ ಸತ್ತು ಹೋಗಿಲ್ಲ ಮತ್ತು ಮಾನ್ಯ ಸದಸ್ಯರು ಹೇಳಿದಂಥ ವಿದ್ಯಾರ್ಥಿ ಹೆಲ್ತಿಯಾಗಿ ಓಡಾಡಿಕೊಂಡಿದ್ದಾನೆ ಎಂದು ರಿಪೋರ್ಟ್ ಬಂದಿದೆ ಇದರದ್ದು ಏನಾದರೂ ಡೀಟೇಲ್ಸ್ ಇದ್ದರೆ ಅದನ್ನು ಕೊಟ್ಟರೆ ನಾನು ವೆರಿಫೈ ಮಾಡುವುದಕ್ಕೆ ತಯಾರಿದ್ದೇನೆ.

SRI M. NAGAPPA :— I will furnish the information.

ಶ್ರೀ ವೀರೇಂದ್ರ ಪಾಟೀಲ್: — ನಾನು ಆಗಲೇ ಉತ್ತರ ಹೇಳಿದ್ದೇನೆ. ವೆರಿಫೈ ಮಾಡಿಸುವುದಕ್ಕೆ ತಯಾರಿದ್ದೇನೆ ಎಂದು. ಇಲ್ಲಿಯವರೆಗೆ ಯಾವ ತರಹ ವರ್ತಮಾನವೂ ಸಿಕ್ಕಿಲ್ಲ ಒಂದುವೇಳೆ ತಮ್ಮ ಹತ್ತಿರ ವರ್ತಮಾನ ಏನಾದರೂ ಇದ್ದರೆ ಅದನ್ನು ನನಗೆ ಕಳುಹಿಸಿಕೊಟ್ಟರೆ ಮತ್ತೆ ವೆರಿಫಿಕೇಷನ್ ಮಾಡಿ ಉತ್ತರ ಕೊಡುತ್ತೇನೆ.

BUDGET ESTIMTAES FOR 1970-71-DEMANDS FOR GRANTS

Demand No. 20, 22, 38 and 51 (Debate Cntd) -

†ಶ್ರೀ ಹೆಚ್. ಎನ್. ನಂಜೇಗೌಡ, ಅರಕಲ್‌ಗೂಡು) — ಮಾನ್ಯ ಅಧ್ಯಕ್ಷರೇ, ಈ ಹೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ನಿಂತಿದ್ದೇನೆ. ರೈತರಿಗೆ ಕನಿಷ್ಟ ಆಗಬೇಕಾದ ಕಾರ್ಯಕ್ರಮಗಳು ಏನು ಎನ್ನುವುದನ್ನು ಈ ಸಭೆಯಲ್ಲಿ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಮತ್ತು ಆ ಕಾರ್ಯ ಕ್ರಮವನ್ನು ಸೌಜನ್ಯದಿಂದ ಪರಿಶೀಲಿಸಬೇಕೆಂದು ಪ್ರಪಂಚದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಟಿರ್ಫಲೈಜರ್ಸ್ ಮತ್ತು ಇನಸೆಕ್ಟಿಸೈಡ್ಸ್‌ನ ರೇಟು ನಮ್ಮ ದೇಶದಲ್ಲಿ ಇರುವಷ್ಟು ಎಲ್ಲಿಯೂ ಇಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಇವುಗಳ ರೇಟನ್ನು ಸಬ್ಸಿಡಿಮಾಡಿಯೋ ಅಥವಾ ಇನ್ನಾವ ರೀತಿಯಲ್ಲಿಯೋ ಇಳಿಸದೇ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ಫರ್ಟಿಲೈಜರ್ಸ್ ಮತ್ತು ಇನ್‌ಸೆಕ್ಟಿಸೈಡ್ಸ್ ಸಕಾಲದಲ್ಲಿ ರೈತರಿಗೆ ಸಿಕ್ಕದೆ ಬಹಳ ತೊಂದರೆ ಆಗಿದೆ. ಈಹೊತ್ತು ಕೇವಲ ಅಗ್ರಿಕಲ್‌ಚರಲ್ ಪ್ರಾಡ್ಯೂಸ್ ಸೊಸೈಟಿಗಳು ಏನಿವೆ ಅವುಗಳ ಮುಖಾಂತರ ರೈತರಿಗೆ ಗೊಬ್ಬರ ತಲುಪುವ ಏರ್ಪಾಡು ಮಾಡಿದ್ದಾರೆ. ಕೊ-ಅಪರೇಟೀವ್ ಸೊಸೈಟೀಸ್ ಡಿಫಾಲ್ಟರ್ಸ್ ಆದರೆ ಆಗ ಹಳ್ಳಿಗಳಲ್ಲಿರುವ ರೈತರಿಗೆ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯುವರು ಗೊಬ್ಬರ ತೆಗೆದುಕೊಂಡು ಹೋಗುವಹಾಗಿಲ್ಲ ಮತ್ತು ರೀಟೇಲ್ ಆಗಿ ಗೊಬ್ಬರವನ್ನು ರೈತರಿಗೆ ಕೊಡುವಹಾಗಿಲ್ಲ. ಹೀಗಾಗಿ ಗೊಬ್ಬರ ಮತ್ತು ಇನಸೆಕ್ಟಿಸೈಡ್ ರೈತರಿಗೆ ತಲುಪುವುದಕ್ಕೆ ತೊಂದರೆ ಆಗಿದೆ. ಆದುದರಿಂದ ಈ ಸಹಕಾರ ಇಲಾಖೆಗೆ ಸರ್ವಿಸ

ಕೊ-ಆಪರೇಟೀವ್ ಸೊಸೈಟಿಗಳನ್ನು ಮತ್ತು ತಾಲ್ಲೂಕು ಅಗ್ರಿಕಲಚರಲ್ ಸೊಸೈಟಿಗಳನ್ನು ಟಾಗಾನ್ ಮಾಡಿ ರೈತರಿಗೆ ಗೊಬ್ಬರವನ್ನು ತಲುಪಿಸಬೇಕು. ಈಗೀಗ ಗ್ರಾಮ ಸುಧಾರಕರ ತಂಡ ಎಲ್ಲೆಲ್ಲಿಯೂ ಇದೆ. ಅವರು ಬೀದಿ ಬೀದಿಗಳಲ್ಲಿ ಇಸ್ಪೀಟುಗಳನ್ನು ಆಡುತ್ತಿರುತ್ತಾರೆ. ಆದುದರಿಂದ ಅವರ ಸಹಾಯವನ್ನು ಪಡೆದು ಇನ್‌ಸೆಕ್ಟಿಸೈಡ್ಸ್ ಮತ್ತು ಫರ್ಟಿಲೈಜರ್ಸ್ ರೈತರಿಗೆ ತಲುಪುವಹಾಗೆ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಇನ್ನು ಸೀಡ್ಸ್ ವಿಷಯ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ಹೈ ಈಲ್ಡಿನ್ಗ್ ವೆರೈಟಿ ಸೀಡ್ಸ್ ಸಪ್ಲೈ ಮಾಡುತ್ತಿದ್ದಾರೆ. ಹೈಈಲ್ಡಿಂಡ್‌ಮೇಜ್ ಬೆಂಗಳೂರಿನಲ್ಲಿ ೧೮ ರೂಪಾಯಿಗೆ ಸಿಕ್ಕುತ್ತದೆ. ಅದೇ ಹೈಬ್ರಿಡ್ ಮೇಜ ಸೊಸೈಟಿಯಲ್ಲಿ ೨೪ ೧/೨ ರೂಪಾಯಿಗಳಷ್ಟು ಇದೆ, ಅಂದರೆ ಒಂದು ಕ್ವಿಂಟಾಲಿಗೆ ಮೂರು ರೂಪಾಯಿ ಜಾಸ್ತಿ ಆಯಿತು. ಅದು ಸರಿಯಲ್ಲ. ಕ್ವಾಲಿಟಿ ಬಗ್ಗೆ ನ್ಯಾಷನಲ ಸೀಡ್ ಕಾರ್ಪೊರೇಷನನ್ನವರು ಸರ್ಟಿಫೈ ಮಾಡಿ ಇದು ಸರಿಯಾಗಿ ಜರ್ಮಿನೇಷನ್ ಆಗುತ್ತದೆ ಉಪಯೋಗಿಸಬಹುದು ಎಂದು ಹೇಳುತ್ತಾರೆ. ಆದರೆ ಅದು ಬರೀ ಬೋಗಸ್ ಸರ್ಟಿಫಿಕೇಟ್ ಅಗ್ರಿಕಲಚರಲ್ ಸೊಸೈಟಿಗಳ ಮುಖಾಂತರ, ಅಗ್ರಿಕಲಚರಲ್ ಡಿಪಾರ್ಟಮೆಂಟ್ ಮುಖಾಂತರ ಪೆರಿಯಾ ಪಟ್ಟಣ, ಹುಣಸೂರು ಮತ್ತು ಅಕ್ಕಪಕ್ಕದ ತಾಲ್ಲೂಕಿನಲ್ಲಿ ಈ ರೀತಿ ಅಗ್ರಿಕಲಚರಲ್ ಸೊಸೈಟಿಗಳ ಮುಖಾಂತರ ಕೊಂಡುಕೊಂಡ ಸೀಡ್ಸ್ ಫೇಲ್ಯೂರ ಆಗಿದೆ ಇದರಿಂದ ರೈತರಿಗೆ ಅನೇಕ ವಿಧವಾದ ನಷ್ಟವಾಗಿದೆ ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್‌ನ್ನಿನವರು ಕೊಟ್ಟ ಈ ಬೋಗಸ್ ಸರ್ಟಿಫಿಕೇಟ್‌ನಿಂದ ರಾಜ್ಯದಲ್ಲಿ ಹೈಬ್ರಿಡ್ ಸೀಡ್ಸ್ ಸರಿಯಾಗಿ ಉತ್ಪತ್ತಿ ಆಗದೆ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆದುದರಿಂದ ಇವನ್ನು ಸರಿಯಾದ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಹೀಗೆ ಬೋಗಸ್ ಸರ್ಟಿಫಿಕೇಟ್ ಕೊಡದಹಾಗೆ ಸರಕಾರದವರು ಕ್ರಮ ಕೈಗೊಳ್ಳುತ್ತಾರೆಂದು ನಾನು ನಿರೀಕ್ಷೆಮಾಡುತ್ತೇನೆ.

ಸೊಸೈಟಿ ಮುಖಾಂತರ ರೈತರಿಗೆ ಗೊಬ್ಬರ ಬರಬೇಕು; ಬೀಜ ಬರಬೇಕು, ಸೊಸೈಟಿಯವರೇನಾದರೂ ಡಿಫಾಲ್ಟರ್ಸ್ ಆದರೆ ಅದೂ ಕೂಡ ಬರುವ ಹಾಗಿಲ್ಲ. ಇದಕ್ಕೆ ನಾನು ಹೇಳುವುದೇನೆಂದರೆ ಎರಡು ಗಂಡಂದಿರು ಬೇಡ, ನೇರವಾಗಿ ಒಬ್ಬರಿಂದ ಸಹಾಯ ಒದಗಿಸತಕ್ಕ ವ್ಯವಸ್ಥೆ ಮಾಡಬೇಕು ಎಂಬುದಾಗಿ. ಅಂತೂ ಯಾವುದಾದರೂ ಒಂದು ಕೋ ಆರ್ಡಿನೇಷನ್ ಇಟ್ಟುಕೊಂಡು ಕೆಲಸ ಮಾಡದಿದ್ದರೆ ಅಂತಹ ಸಮಯದಲ್ಲಿ ಈ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ವಿದ್ಯುಚ್ಛಕ್ತಿಯ ಮೇಲೆ ಶೇಕಡ ೫೦ ರಷ್ಟು ದರ ಹೆಚ್ಚಿಸುತ್ತೇವೆ ಎಂದು ಹಣಕಾಸಿನ ಮಂತ್ರಿಗಳು ಸೂಚನೆ ಮಾಡಿದ್ದಾರೆ. ಮೊದಲು ನಾವು ವಿರೋಧ ಮಾಡಲಿಲ್ಲ, ಆದರೆ ಇದರಿಂದ ರೈತರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹೋದ ಸಾರಿ ಇದೇ ರೀತಿ ಹೆಚ್ಚು ಮಾಡಿದರು. ಇದೇನೆ ತಾವು ರೈತರಿಗೆ ಕೊಡತಕ್ಕ ಇನ್‌ಸೆಂಟೀವು ಅಂತ ನಮ್ಮನ್ನು ಯಾರಾದರೂ ಕೇಳಿದರೆ ನನ್ನ ಹತ್ತಿರ ಯಾವ ಉತ್ತರವೂ ಇಲ್ಲ. ಕಬ್ಬು ಅರೆಯುವರಿಗೂ ಕೂಡ ಬಹಳ ಕಷ್ಟವಾಗಿದೆ, ಇಷ್ಟು ಯೂನಿಟ್ ಆಗಿದೆ ಅಂತ ಲೆಕ್ಕ ಹಾಕಿ ಅವರಿಗೆ ಟ್ಯಾಕ್ಸ್ ಮಾಡುವುದಾದರೆ ದೇವರೇ ಗತಿ, ಅವರನ್ನು ದೇವರೇ ಕಾಪಾಡಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ತಾವು ಇಂತಹ ರೀತಿಯಲ್ಲಿ ಸರ್ಕಾರ ನಡೆಸುವುದಕ್ಕೆ ತಮಗೆ ಹಕ್ಕು ಇರುವುದಿಲ್ಲ ಅಂತ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಪ್ಲೈಡ್ ನ್ಯೂಟ್ರಿಷನ್ ಸ್ಕೀಂ ಅಂತ ಏನಿದೆ, ಇದು ರಾಜಕೀಯ ಸ್ಕೀಂ ಆಗುತ್ತಾ ಇದೆ. ಎಲ್ಲಿ ಫ್ಯಾಮಿನ್ ಇದೆ, ತೊಂದರೆಯಾಗುತ್ತಿದೆ, ಎಲ್ಲಿ ಬೆಳೆ ಕಮ್ಮಿಯಾಗಿ ರೈತರು ಕಷ್ಟದಲ್ಲಿ ಇದ್ದಾರೆ, ಆ ತಾಲ್ಲೂಕುಗಳನ್ನು ಬಿಟ್ಟು ನಿಮಗೆ ಬೇಕಾದ ತಾಲ್ಲೂಕುಗಳಲ್ಲಿ ರೈತರಿಗೆ ಈ ಸ್ಕೀಂ ಪ್ರಕಾರ ಸಹಾಯ ಮಾಡುವುದಾದರೆ, ಇದನ್ನು ದುರುಪಯೋಗ ಮಾಡಿಕೊಂಡ ಹಾಗಾಗುತ್ತದೆ ಎಂದು ಹೇಳುತ್ತೇನೆ.

ಅನಿಮಲ್ ಹಸ್ಬೆಂಡರಿ ಮತ್ತು ವೆಟರ್ನರಿ ವಿಷಯದಲ್ಲಿ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಬಿಕ್ಷೆ ಬೇಡುವುದೇ ಜಾಸ್ತಿಯಾಗಿದೆ. ಸಬ್ಸಿಡಿಯಿಂದ ಆಗಲಿ, ಫ್ರೀಗ್ರಾಂಟ್‌ನಿಂದ ಆಗಲಿ ಏನೂ ಉಪಯೋಗವಾಗುವುದಿಲ್ಲ. ಕೋಳಿ ತೆಗೆದುಕೊಳ್ಳಿ, ಕುರಿ ತೆಗೆದುಕೊಳ್ಳಿ, ಟಗರು ತೆಗೆದುಕೊಳ್ಳಿ, ಮತ್ತೆ ಯಾವುದೇ ತೆಗೆದುಕೊಳ್ಳಿ ಇದು ತಾಲ್ಲೂಕು ಬೋರ್ಡು ಅಧ್ಯಕ್ಷರಿಂದ ಪ್ರಾರಂಭವಾಗುತ್ತದೆ. ಇವತ್ತು ಪಂಚಾಯ್ತಿಯಲ್ಲಿ ಕೋಳಿ ಫಾರಂನಲ್ಲಿ ಕೋಳಿ ಸಾಗಾಣಿಕೆ ಮಾಡಿದರೆ ಏನಾಗುತ್ತದೆ ಅಂತ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ, ಇದಕ್ಕೆ ಶ್ರೀಮಾನ್ ಶಂಕರರಾವ್ ಅವರು ಗಮನ ಕೊಡುತ್ತಾರೆ ಅಂತ ತಿಳಿದುಕೊಂಡಿದ್ದೇನೆ. ನನಗೆ ಗೊತ್ತಿರುವ ಹಾಗೆ ಈ ಕೋಳಿಗಳನ್ನು ತಿಂದೇ ಪೂರೈಸುತ್ತಾರೆ. ಈ ತರಹ ಸಬ್ಸಿಡೈಸ್ ಮಾಡಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಕೊಟ್ಟಿರುವ ಹೋರಿ, ಟಗರು, ಕೋಳಿಗಳ

(ಶ್ರೀ ಹೆಚ್. ಎಲ್ ಸಂಜೀಗೌಡ)

ಪೈಕಿ ಶೇಕಡ ಹತ್ತು ಭಾಗ ಕೂಡ ಸರಿಯಾದ ರೀತಿಯಲ್ಲಿ ಉಪಯೋಗವಾಗಿಲ್ಲ. ಬಿಕ್ಷೆ ಕೊಟ್ಟಹಾಗೆ ಕೊಟ್ಟು ಅವನ್ನು ತಿಂದು ಹಾಕುವುದು ಭಾರಿ ದುರ್ದೈವದ ಸಂಗತಿ, ಈ ರೀತಿ ಕೊಡುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಗೋಮಾಳಗಳನ್ನು ರೆವಿನ್ಯೂ ಇಲಾಖೆಯವರು ಡಿಸ್‌ಪೋಸ್ ಮಾಡಬೇಕೆಂದು ಕ್ರಮ ಕೈಕೊಳ್ಳುತ್ತಾ ಇದ್ದಾರೆ, ಇದು ಬಡವನ ಕ್ಯಾಟಲ್ ವೆಲ್ತ್‌ಗೆ ಸಹಾಯಕವಾಗಿ ಹಿಂದಿನಿಂದ ಬಂದಿರುವುದು, ಆದ್ದರಿಂದ ಅನಿಮಲ್ ಹಸ್ಬೆಂಡರಿ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ರೆವಿನ್ಯೂ ಇಲಾಖೆಯವರ ಹಿಡಿತದಿಂದ ಇದನ್ನು ತಪ್ಪಿಸದಿದ್ದರೆ ಬಡ ರೈತರ ಕ್ಯಾಟಲ್ ವೆಲ್ತ್‌ಗೆ ಬಹಳ ಹಾನಿಯಾಗುತ್ತದೆ ಎಂದು ಹೇಳುತ್ತೇನೆ.

ಫಿಷರೀಸ್‌ಗೆ ಕೊಟ್ಟಿರುವ ಹಣ ಬಹಳ ಕಡಿಮೆ, ಮಲ್ಪೆಯಲ್ಲಿ ಒಂದು ಪ್ರಾಜೆಕ್ಟ್ ತಯಾರು ಮಾಡಿದ್ದೀರಿ. ೭–೮ ವರ್ಷಗಳಲ್ಲಿ ಮೀನುಗಳ ಅಭಾವದಿಂದ ಈ ಪ್ರಾಜೆಕ್ಟ್ ಅಂಡರ್ ಯುಟಲೈಸ್ ಆಗುತ್ತದೆ ಎಂದು ತಿಳಿದು ಬರುತ್ತಾ ಇದೆ. ಕೋಟ್ಯಾಂತರ ರೂಪಾಯಿಗಳ ಯೋಜನೆ ಮಾಡತಕ್ಕ ಕಾಲದಲ್ಲಿ ಹಣವನ್ನು ಕಣ್ಣುಮುಚ್ಚಿಕೊಂಡು ಹಾಕುವುದು ಬೇಡ, ತಜ್ಞರಿಂದ ಒಂದು ವರದಿಯನ್ನು ತೆಗೆದುಕೊಂಡು ನಮ್ಮ ಫಿಷರೀಸ್ ವೆಲ್ತ್ ಏನಿದೆ ಅದಕ್ಕೆ ತಕ್ಕ ಹಾಗೆ ಒಂದು ಪ್ರಾಜೆಕ್ಟನ್ನು ತಯಾರು ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಬಿನ್ನೈಸುತ್ತಾ ಇದ್ದೇನೆ,

ಅನಿಮಲ್ ಪ್ರೊಟೆಕ್ಷನ್ ಬಗ್ಗೆ ಪರದೇಶಗಳಲ್ಲಿ ಯಾವ ರೀತಿ ಪ್ರಚಾರ ಮಾಡುತ್ತಾರೆ ಅದೇ ರೀತಿ ನಮ್ಮ ಎ, ಐ. ಆರ್. ನಲ್ಲೂ ಕೂಡ – ಪ್ರಚಾರ ಮಾಡಿ ರೈತರಿಗೆ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಎಸ್. ಗೌಡ.—(ದೇವನಹಳ್ಳಿ) ಮಾನ್ಯ ಸಭಾಪತಿಗಳೇ. ಈ ದಿನ ಸಭೆಯ ಮುಂದೆ ಇರುವ ವ್ಯವಸಾಯ ಹಾಗೂ ಇತರ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ಎಲ್ಲ ಬೇಡಿಕೆಗಳನ್ನೂ ಅನುಮೋದಿಸುತ್ತೇನೆ. ಹಿಂದಿನ ದಶಕದಲ್ಲಿ ವ್ಯವಸಾಯ ಕ್ಷೇತ್ರ ಎಷ್ಟು ಪ್ರಗತಿಯನ್ನು ಸಾಧಿಸಬೇಕಾಗಿತ್ತೋ ಅಷ್ಟು ಪ್ರಗತಿಯನ್ನು ಸಾಧಿಸದೇ ಹೋದರೂ ಸಹ ಬಹುಶಃ ಈಗ ಸಾಧಿಸಿರತಕ್ಕ ಪ್ರಗತಿ ಅಷ್ಟೇನೂ ಕಡಿಮೆ ಇಲ್ಲ ಎಂಬ ಸಮಾಧಾನವನ್ನು ಪಡುವಂತಹ ವಿಷಯವಾಗಿದೆ. ಇದಕ್ಕೆ ನಿದರ್ಶನ ೧೯೬೬–೬೭ರಲ್ಲಿ ಅಧಿಕ ಇಳುವರಿ ಬೆಳೆಗಳನ್ನು ೧–೬೭ ಲಕ್ಷ ಎಕರೆಗಳಲ್ಲಿ ಬೆಳೆದಿದ್ದಾರೆ, ೬೮–೬೯ರಲ್ಲಿ ೭.೩೯ ಲಕ್ಷ ಎಕರೆಗಳಲ್ಲಿ ಅಧಿಕ ಇಳುವರಿ ಬೆಳೆಗಳನ್ನು ಬೆಳೆದಿದ್ದಾರೆ. ಹಾಗೂ ಇಂದಿನ ಅಂಕಿ ಅಂಶಗಳ ಪ್ರಕಾರ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ ೬೨ರಷ್ಟು ಗ್ರಾಮಾಂತರ ಪ್ರದೇಶ ಹಾಗೂ ವ್ಯವಸಾಯದಿಂದ ನಮಗೆ ಬರುತ್ತಾ ಇದೆ. ವ್ಯವಸಾಯ ಮತ್ತು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಿದೆ ಎಂದು ಮಾತನ್ನು ಹೇಳುತ್ತಾ ಸಾಧಿಸಬೇಕಾಗಿದ್ದು ಕೂಡ ಬಹಳ ಇದೆ ಎಂದು ಹೇಳುತ್ತೇನೆ. ಪುರಾತನ ಕಾಲದಿಂದಲೂ ಈ ದೇಶ ವ್ಯವಸಾಯದ ದೇಶ ಅನ್ನುವಂತಹ ಮಾತು ಎಲ್ಲರಿಗೂ ಗೊತ್ತಿದೆ. ಅಸೆಂಬ್ಲಿ ಮತ್ತು ಪಾರ್ಲಿಮೆಂಟುಗಳಲ್ಲಿ ವ್ಯವಸಾಯದ ಪ್ರಗತಿ, ವ್ಯವಸಾಯದಲ್ಲಿ ಸಾಕಾದಷ್ಟು ಅಭಿವೃದ್ಧಿ ಆಗಿಲ್ಲ ಎಂಬ ಮಾತನ್ನು ಎಲ್ಲ ಸದಸ್ಯರೂ ಕೂಡ ಹೇಳುತ್ತಾ ಬಂದಿದ್ದೇವೆ. ಏನು ಇದರಲ್ಲಿ ನ್ಯೂನತೆ ಇದೆಯೋ ತಿಳಿಯದು. ಪ್ರಕೃತಿಯ ದೋಷ ಏನಿದೆಯೋ ಅದನ್ನು ಸರಿಯಾದ ರೀತಿಯಲ್ಲಿ ಸಂಶೋಧನೆ ನಡೆಸಿ ಸೂಕ್ತ ಕ್ರಮ ಕೈಕೊಳ್ಳಲು ಯೋಚನೆ ಮಾಡಬೇಕು. ವ್ಯವಸಾಯಗಾರರಲ್ಲಿ ಹೊಸ ಇಳುವರಿ ಬೆಳೆಗಳನ್ನು ಬೆಳೆಯಬೇಕು ಮತ್ತು ವ್ಯವಸಾಯದಲ್ಲಿ ಅಧಿಕ ಉತ್ಪಾದನೆ ಮಾಡಬೇಕೆಂಬ ಒಂದು ಹೊಸ ಚೈತನ್ಯ, ಕ್ರಿಯಾ ಶಕ್ತಿ ಈಗ ಉಂಟಾಗಿದೆ. ಹತ್ತಾರು ವರ್ಷಗಳ ಕಾಲದಿಂದ ಸಾಧಿಸಿದಂತಹ ಕಾರ್ಯದಿಂದ ಇವತ್ತು ರೈತನಲ್ಲಿ ಇಂತಹ ಒಂದು ಶಕ್ತಿ ಉಂಟಾಗಿದೆ.

2-30 P.M.

ಏನೇ ಆಗಿರಲಿ ಇಂದು ಕೆಲವು ರೈತರಲ್ಲಿ ಚೇತನವಿದೆ, ಅವರಲ್ಲಿರುವ ಚೇತನ ಕ್ರಿಯಾಶಕ್ತಿ ಕುಂಠಿತವಾಗಬಾರದು. ಮಳೆ ಬರದಿದ್ದರೆ ಬೆಳೆಯುವುದಕ್ಕಾಗದೆ ರೈತರ ಆರ್ಥಿಕ ಪರಿಸ್ಥಿತಿ ಕುಂಠಿತವಾಗಬಹುದು, ಅದರಿಂದ ದೇಶದ ಆರ್ಥಿಕ ಪರಿಸ್ಥಿತಿಯೂ ಕುಂಠಿತವಾಗಬಹುದು. ಇದನ್ನು ಗಮನಿಸಬೇಕು. ಮತ್ತು ಬೆಲೆ ಇಳಿದು ಹೋದರೆ ಹೆಚ್ಚಾಗಿ ಬೆಳೆಯಬೇಕೆಂಬ ಉತ್ತೇಜನ ರೈತನಿಗೆ ಏನಿದೆ ಅದು ಕುಂಠಿತವಾಗುವುದು. ಹಾಗಾದರೆ ಇಡೀ ಸಮಾಜದ ಮತ್ತು ದೇಶದ ಆರ್ಥಿಕ ಪರಿಸ್ಥಿತಿ ಏರುಪೇರಾಗುವುದು

ಇದನ್ನು ಬಹಳ ತೀವ್ರವಾಗಿ ಗಮನಿಸಿ ಇದಕ್ಕೇನು ಮಾಡಬೇಕು ಎಂಬುದನ್ನು ಯೋಚನೆಮಾಡಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರಕಾರ ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಡುತ್ತಿವೆ. ಆದರೆ ನಮ್ಮ ಸರ್ಕಾರ ವ್ಯವಸಾಯ ಇಲಾಖೆಗೆ ಹೋದ ಸಾರಿ ಕೊಟ್ಟ ಹಣಕ್ಕಿಂತ ಒಂದು ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದೆ. ನಮ್ಮಲ್ಲಿ ೪ ವಿಶ್ವವಿದ್ಯಾನಿಲಯಗಳಿವೆ, ಇದರಲ್ಲಿ ವ್ಯವಸಾಯ ವಿಶ್ವವಿದ್ಯಾನಿಲಯವೂ ಸೇರಿದೆ, ಬೇರೆ ೩ ವಿಶ್ವವಿದ್ಯಾನಿಲಯಗಳಿಗೆ ಕೊಟ್ಟಿರುವ ಹಣಕ್ಕಿಂತ ಕಡಿಮೆ ಹಣವನ್ನು ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಕೊಡಲಾಗಿದೆ. ಹೇಳುವುದಕ್ಕೂ ಮಾಡುವುದಕ್ಕೂ ಹೊಂದಾಣಿಕೆ ಇಲ್ಲ, ದೇಶದಲ್ಲಿ ವ್ಯವಸಾಯ ಮುಂದುವರೆಯಬೇಕು,ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಎಂದು ಹೇಳುವುದಕ್ಕೆ ಅನುಗುಣವಾಗಿ ಕಾರ್ಯರೂಪದಲ್ಲಿ ಮಾಡಲಾಗುತ್ತಿಯೇ ? ಎಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂಬುದನ್ನು ಯೋಚನೆಮಾಡಬೇಕು, ಇದು ಬಹಳ ಅವಶ್ಯಕ. ಅಲ್ಲದೆ ವ್ಯವಸಾಯಗಾರರಿಗಿರುವ ನ್ಯೂನತೆಗಳೇನು ಎಂಬುದನ್ನು ಯೋಚನೆಮಾಡಬೇಕಾಗಿದೆ, ಸಮಾಜದ ಎಲ್ಲ ವರ್ಗಗಳಿಗೂ ರಕ್ಷಣೆ ಇದೆ. ಆದರೆ ವ್ಯವಸಾಯಗಾರರಿಗೆ ರಕ್ಷಣೆ ಇಲ್ಲ, ವ್ಯವಸಾಯಕ್ಕೆ ಉತ್ತೇಜನ ಹೆಚ್ಚಬೇಕು, ಹೆಚ್ಚು ಬೆಳೆಯಬೇಕು ಎಂದು ಹೇಳುವಾಗ ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಬೆಲೆ ದೊರೆಯದಿದ್ದರೆ ಹೇಗೆ ? ಬೆಲೆಯನ್ನು ನಿಯಂತ್ರಣ ಮಾಡಲಾಗಿದೆಯೋ ಎಂಬುದನ್ನು ಸಹಾ ಯೋಚನೆ ಮಾಡಬೇಕು, ವ್ಯವಸಾಯದಲ್ಲಿ ತೊಡಗಿ ಹೆಚ್ಚು ಉತ್ಪತ್ತಿ ಮಾಡುವವರಿಗೆ ಸರಿಯಾದ ಬೆಲೆ ಸಿಗದೆ ಅದನ್ನು ಬಿಟ್ಟು ಕೈಗಾರಿಕೆಯನ್ನು ವಲಂಬಿಸಬಹುದು ಅಥವಾ ಸರಕಾರಿ ನೌಕರಿ ಹುಡುಕಬಹುದು. ಹಳ್ಳಿಗಾಡಿನಲ್ಲಿ ಈ ಒಂದು ಪರಿಸ್ಥಿತಿ ಬರಬಹುದು. ಕ್ವಿಂಟಾಲಿಗಿಷ್ಟು ಬೆಲೆ ಎಂದು ನಿಗದಿ ಮಾಡದಿದ್ದರೆ, ನಿಯಂತ್ರಣ ಮಾಡದಿದ್ದರೆ ಬೆಳೆಗಾರರು ನಿರಾಶರಾಗಬಹುದು. ಬೇರೆ ಸರಕಾರಗಳು ಈ ದಿಶೆಯಲ್ಲೇನು ಮಾಡಿವೆ ಎಂಬುದನ್ನು ನಮ್ಮ ಸರ್ಕಾರ ನೋಡಬೇಕು, ಅಮೇರಿಕ ದೇಶವನ್ನು ನೋಡುವುದು ಬೇಡ, ಮಾದರಿ ದೇಶವಾದ ಜಪಾನು ದೇಶವನ್ನು ನೋಡಿ, ಅಲ್ಲಿ ಬೆಲೆ ನಿಯಂತ್ರಣ ಮಾಡುತ್ತಾರೆ. ಆದಕ್ಕೆ ಅಡಚಣೆ ಬಂದರೆ ಅದನ್ನು ಸರಕಾರ ಪರಿಶೀಲಿಸುವುದು ಮತ್ತು ಬೆಳೆ ಹೆಚ್ಚಿದಾಗ ಅದನ್ನು ಸರಕಾರ ಸಮುದ್ರಕ್ಕೆ ಹಾಕುವುದು, ಹೀಗೆ ಮಾಡುವುದಕ್ಕೆ ಕೂಡ ಹಿಂಜರಿಯುವುದಿಲ್ಲ, ಹೀಗೆ ಅಲ್ಲಿ ಅನೇಕ ಕ್ರಮಗಳನ್ನು ಕೈಕೊಂಡಿದ್ದಾರೆ. ನಮ್ಮಲ್ಲಿ ಹೀಗೆ ಮಾಡದಿದ್ದರೆ ವ್ಯವಸಾಯಗಾರರಿಗೆ ಕೆಡುಕಾಗುವುದು.

ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ವಿಧಿಸಬೇಕೆಂದಿದೆ. ಇದಕ್ಕೆ ಸ್ವಾಗತವಿದೆ. ಆದರೆ ಒಂದು ವಿಚಾರ ಗಮನಿಸಬೇಕು. ಏನೆಂದರೆ ವ್ಯವಸಾಯಗಾರರಿಗೆ ತೊಂದರೆಯೇನಿದೆ ಎಂಬುದನ್ನು ಗಮನಿಸಬೇಕು, ಇತರ ಕ್ಷೇತ್ರಗಳಲ್ಲಿ ಕೇಂದ್ರ ಸರಕಾರದವರು ಅಥವಾ ರಾಜ್ಯ ಸರಕಾರದವರು ಸಹಾಯಮಾಡುತ್ತಿದ್ದಾರೆ, ಅದರಂತೆ ರೈತರಿಗೂ ಸಹಾಯ ಮಾಡಬೇಕು ಹಾಗೆ ಮಾಡಿ ರೈತರ ಆರ್ಥಿಕ ಸ್ಥಿತಿಯನ್ನು ೧೦ ವರ್ಷದ ನಂತರ ನೋಡಿ, ವ್ಯವಸಾಯದ ಮೇಲೆ ತೆರಿಗೆ ಹಾಕುವುದನ್ನು ಯೋಚನೆಮಾಡಬೇಕು. ಈ ದಿಶೆಯಲ್ಲಿ, ಟ್ಯಾಕ್ಸ್ ಹಾಕುವುದನ್ನು ಕೈಬಿಡಬೇಕು ಮತ್ತು ರೈತರಿಗೆ ನಾನಾ ವಿಧವಾದ ಸಾಲ ಮತ್ತು ಉತ್ತೇಜನ ಕೊಡಬೇಕು, ಬ್ಯಾಂಕುಗಳ ಮೂಲಕ ಸಹಾಯ ನೀಡುವುದು ಒಳ್ಳೆಯದು, ಆದರೆ ರೈತರಿಗೆ ಉತ್ತೇಜನ ಕೊಟ್ಟರೂ ಅದೆಲ್ಲವೂ ದೊಡ್ಡ ರೈತರಿಗೇ ಹೋಗುವುದು, ಸಣ್ಣ ಹಿಡುವಳಿದಾರರಿಗೆ ದೊರೆಯುವುದಿಲ್ಲ, ಇದನ್ನು ಗಮನಿಸಬೇಕು. ನಮ್ಮಲ್ಲಿ ಸುಮಾರು ಶೇಕಡ ೭೦–೮೦ ಮಂದಿಗೆ ಒಂದರಿಂದ ೫ ಎಕರೆಗಳಷ್ಟು ಮಾತ್ರ ಜಮೀನು ಇದೆ. ಅಂತ ರೈತರು ಇಂದು ಶೇಕಡ ೯ ರಷ್ಟು ಬಡ್ಡಿ ಕೊಟ್ಟು ಬ್ಯಾಂಕುಗಳಿಂದ ಸಹಾಯ ಪಡೆದು ಫರ್ಟಿಲೈಜರು, ಮುಂತಾದ ಉಪಕರಣಗಳನ್ನು ಕೊಳ್ಳಲು ಶಕ್ತರಾಗಿಲ್ಲ. ಅಂಥವರಿಗೆ ಸಬ್ಸಿಡಿ ಕೊಡುವುದರಲ್ಲಿ ತೊಂದರೆಯೇನು ? ಮುಖ್ಯವಾಗಿ ರೈತರಿಗೆ ಉತ್ತೇಜನ ಕೊಡಬೇಕು. ಶೇಕಡ ೬೨ ರಷ್ಟು ಆದಾಯ ಗ್ರಾಮಾಂತರಗಳಿಂದ ಬರುವುದು. ಆದರೆ ವ್ಯವಸಾಯ ಲಾಭದಾಯಕವಾಗಿಲ್ಲ, ಮಳೆ ಬಾರದಿದ್ದರೂ ನಷ್ಟ ಹೆಚ್ಚು; ಬೆಳೆದರೂ ನಷ್ಟ ಸರಿಯಾದ ಬೆಲೆ ದೊರೆಯುವುದಿಲ್ಲ, ರೈತನ ಜೀವನ ಪರಿಸ್ಥಿತಿಗನುಗುಣವಾಗಿ ಆತನಿಗೆ ರಕ್ಷಣೆ ಕೊಡಬೇಕು, ಇತರ ದೇಶಗಳಲ್ಲಿ ಕ್ರಾಪ್ ಇನ್‌ಷ್ಯೂರೆನ್ಸ್ ಜಾರಿಯಲ್ಲಿದೆ. ನಮ್ಮಲ್ಲೂ ಅದನ್ನು ಜಾರಿಗೆ ತರಬಹುದು, ಹೀಗೆ ನಾನಾ ಅನುಕೂಲ ಕಲ್ಪಿಸಬಹುದು. ಮತ್ತು ತಾಲ್ಲೂಕುಗಳಲ್ಲಿ ಅಥವಾ ಜಿಲ್ಲಾ ಕೇಂದ್ರಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆದು ಟ್ರೈನಿಂಗ್ ಕೊಟ್ಟು ರೈತರು ಹೊಸ ವಿಧಾನವನ್ನು ಅನುಸರಿಸಲು ಅವಕಾಶ ಮಾಡಬೇಕು. ಹೊಸ ಗೊಬ್ಬರವನ್ನು ಉಪಯೋಗಿಸಿ ಹೊಸ ವಿಧಾನಗಳಲ್ಲಿ ಬೆಳೆಯಲು ಅವಕಾಶ ಮಾಡಬೇಕು, ಹೊಸ ಇಂಪ್ಲಿಮೆಂಟ್ಸ್ ಉಪಯೋಗಿಸಲು ಅವಕಾಶ ಕಲ್ಪಿಸಬೇಕು. ಈಗ ವ್ಯವಸಾಯದ ಉಪಕರಣಗಳ ರಿಪೇರಿಗೆ ತೊಂದರೆಯಾಗಿದೆ, ಅದಕ್ಕಾಗಿ ತಾಲ್ಲೂಕು ಕೇಂದ್ರಗಳಲ್ಲಿ ಅಗ್ರಿಕಲ್ಚರಲ್ ಮೆಷಿನರಿ ರಿಪೇರಿಮಾಡಲು ಸರ್ವಿಸ್ ಸ್ಟೇಷನ್ ಮುಂತಾದ ಸೌಲಭ್ಯ ಕಲ್ಪಿಸುವುದು ಅವಶ್ಯಕ. ಹಾಗೆ ಮಾಡಿದರೆ ಉಪಯೋಗವಾಗುವುದು.

ಕಡೆಯದಾಗಿ ಡೈರಿ ಮತ್ತು ಪಶುಸಂಗೋಪನೆ ವಿಚಾರ. ಹೆಚ್ಚು ಹಾಲನ್ನು ಉತ್ಪತ್ತಿಮಾಡಬೇಕು, ಒಳ್ಳೆಯ ಹಸುಗಳನು ಸಾಕಬೇಕು ಎಂದು ಸರ್ಕಾರದವರು ಹೇಳುತ್ತಿದ್ದಾರೆ. ರಾಜ್ಯದ ಆರ್ಥಿಕಸ್ಥಿತಿ

(ಶ್ರೀ ಡಿ. ಎಸ್. ಗೌಡ)

ಮತ್ತು ಆಹಾರದ ಅಭಾವ ಇವುಗಳ ದೃಷ್ಟಿಯಿಂದ ಇದು ಒಳ್ಳೆಯದು. ಆದರೆ ಇದನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸಬೇಕಾದ್ದು, ಹೊಸಹೊಸ ಸಂಶೋಧನೆ ಮಾಡಿ ಹೆಚ್ಚು ಹಾಲು ಉತ್ಪತ್ತಿಯಾಗಲು ಅವಕಾಶವಾಗುವಂತೆ ಮಾಡುವುದು ಅವಶ್ಯಕ ಮತ್ತು ಉತ್ಪತ್ತಿಯಾದುದು ಮಾರಾಟವಾಗಲು ಅವಕಾಶ ಕಲ್ಪಿಸಬೇಕಾದ್ದೂ ಅವಶ್ಯಕ. ಇದನ್ನು ಸಂಬಂಧಪಟ್ಟ ಇಲಾಖೆ ಗಮನಿಸಬೇಕು.

ಫಾರಂ ಪಾಲಿಸಿ ವಿಷಯದಲ್ಲಿ ಇಲಾಖೆಯವರು ಹೆಚ್ಚು ಮುತವರ್ಜಿ ವಹಿಸಿ ಉತ್ತೇಜನ ಕೊಟ್ಟು ಅದು ಯಶಸ್ವಿಯಾಗುವಂತೆ ಮಾಡಬೇಕು. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಉತ್ಪತ್ತಿ ಅಲ್ಪಸ್ವಲ್ಪ ಹೆಚ್ಚಬಹುದು ಎಂಬ ನಿರೀಕ್ಷೆ ಇತ್ತು, ಈಗ ನಾಲ್ಕನೆ ಯೋಜನೆಯಲ್ಲಾದರೂ ದೇಶದ ಆರ್ಥಿಕ ಪ್ರಗತಿಯಾಗಲೆಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ) :—ಸನ್ಮಾನ್ಯ ಅಧ್ಯಕ್ಷರೇ ಕೃಷಿ ವಿಚಾರದಲ್ಲಿ ಸಭೆಯ ಮುಂದಿಟ್ಟಿರುವ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿರುವ ೪ ವಿಶ್ವವಿದ್ಯಾನಿಲಯಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯ ಅತ್ಯಂತ ಕಿರಿಯದು. ಅದರಲ್ಲಿರುವ ತಜ್ಞರು ಹೆಚ್ಚು ಹೆಚ್ಚು ಪ್ರಯೋಗಗಳನ್ನು ನಡೆಸಬೇಕು, ನಮ್ಮದು ಕೃಷಿ ರಾಜ್ಯವಾದುದರಿಂದ ಕೃಷಿಗೆ ಸಂಬಂಧಪಟ್ಟ ಸಂಶೋಧನೆ ನಡೆಸುವುದಕ್ಕೆ ಎಲ್ಲಾ ಅವಕಾಶವನ್ನೂ ಮಾಡಿ ಕೊಡಬೇಕು ಎಂದು ತಿಳಿಸುತ್ತೇನೆ, ಸಂಶೋದನೆ ಪ್ರಾಧಾನ್ಯವಾದ ಯಾವುದೇ ವಿದ್ಯಾ ಸಂಸ್ಥೆಗಳಲ್ಲಿ ರಾಜಕೀಯ ಇರಬಾರದು.

ಅದರಲ್ಲೂ ಒಂದು ವಿದ್ಯಾ ಸಂಸ್ಥೆಯಲ್ಲಿ ಯಾವ ವಿಧವಾದ ರಾಜಕೀಯವನ್ನೂ ಸರ್ಕಾರದವರು ಮಾಡಬಾರದು. ಈಗ ಇಂಡಿಕೇಟ್ ಮತ್ತು ಸಿಂಡಿಕೇಟ್ ವ್ಯವಹಾರಗಳಲ್ಲಿ ಕೆಲವು ಕಾರ್ಪೊರೇಷನ್ಸ್ ರಚನೆ ಮಾಡಿ ತಮಗೆ ಬೇಕಾದವರನ್ನು ಆ ಕಾರ್ಪೊರೇಷನ್‌ಗಳಲ್ಲಿ ಪದಾಧಿಕಾರಿಗಳನ್ನಾಗಿ ಹಾಕಿ, ತಮ್ಮ ಪಕ್ಷವನ್ನು ಬೆಳೆಸಿಕೊಳ್ಳುವ ಮನೋಭಾವ ಇರುವ ಈ ಸರ್ಕಾರ ವಿಶ್ವವಿದ್ಯಾಲಯ ಕ್ಷೇತ್ರಕ್ಕೂ ಕೈ ಹಾಕುವ ಸೂಚನೆ ಕಂಡುಬರುತ್ತಿದೆ. ನನಗೆ ತಿಳಿದುಬಂದಿರುವಂತೆ ಒಬ್ಬ ರಾಜಕಾರಣಿಯನ್ನು ಸದ್ಯದಲ್ಲಿಯೇ ನಿವೃತ್ತರಾಗುವ ಉಪಕುಲಪತಿಗಳ ಸ್ಥಾನದಲ್ಲಿ ನೇಮಿಸುತ್ತಾರೆಂದು ಪ್ರಬಲವಾದ ವದಂತಿಬಂದಿದೆ. ಆ ವದಂತಿ ವದಂತಿಯಾಗಿಯೇ ಉಳಿಯಲಿ ಎಂದು ನನ್ನ ಆಶಯ. ವಿದ್ಯಾಕ್ಷೇತ್ರದಲ್ಲಿ ಈಗಾಗಲೇ ರಾಜಕಾರಣಿಗಳ ಕೈವಾಡದಿಂದ ಆಗಿರತಕ್ಕ ಅಗಾಧವಾದ ನಷ್ಟವನ್ನು ತಪ್ಪಿಸುವುದಕ್ಕೆ ನಮ್ಮ ಕೃಷಿ ಸಚಿವರು ಮನಸ್ಸುಮಾಡಿ ಕೇವಲ ಪ್ರಾಜ್ಞರನ್ನು ಸಂಶೋಧನೆಯಲ್ಲಿ ಮನಸ್ಸು ಉಳ್ಳಂಥ ವಿದ್ಯಾಪರಿಣತರನ್ನು ತಜ್ಞರನ್ನು ಆಡಳಿತಾನುಭವಿಗಳನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳನ್ನಾಗಿ ನೇಮಿಸಬೇಕು ಮತ್ತು ಸ್ವಜನ ಪಕ್ಷಪಾತ, ಸ್ವಪಕ್ಷಪಾತ ನಿಲ್ಲಿಸಲ್ಲಿ ಎಂದು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಕೃಷಿ ಪ್ರಬುದ್ಧಮಾನಕ್ಕೆ ಬರಬೇಕಾದರೆ ಒಳ್ಳೆಯ ವಿದ್ಯೆ ಬೇಕು. ಒಬ್ಬ ವ್ಯವಸಾಯಗಾರನ ಮನೆಯಲ್ಲಿ ಹುಟ್ಟುತ್ತಾನೆ. ಅದೇ ಅವನ ಅರ್ಹತೆ ಇಂದಿನ ರೈತ ಹುಟ್ಟಿನಿಂದಲೇ ವ್ಯವಸಾಯಗಾರನಾಗುತ್ತಾನೆ. ಈ ರೀತಿಯಾಗಿ ಪರಿಗಣಿಸಿದ್ದಾರೆ. ಅವರಿಗೆ ಯಾವ ವಿಧವಾದ ಟ್ರೇನಿಂಗ್ ಕೂಡ ಬೇಕಾಗಿಲ್ಲ. ಆದರೆ ಒಬ್ಬ ಕ್ಲಾರ್ಕ್ ಆಗಬೇಕಾದರೆ, ಒಬ್ಬ ಅಪ್ರೆಂಟಿಸ್ ಆಗಿ ಕೆಲಸ ಮಾಡಬೇಕಾದರೆ, ಟೆಕ್ನಿಕಲ್ ಕ್ವಾಲಿಫಿಕೇಷನ್ಸ್ ಹಾಕುತ್ತಾರೆ. ಹಾಗೆಯೇ ಕೃಷ್ಟಿ ಕೇತ್ರದಲ್ಲಿಕೂಡ ವ್ಯವಸಾಯ ಮಾಡಬೇಕಾದರೆ ಅವನಿಗೆ ಇಂತಿಷ್ಟು ಟೆಕ್ನಿಕಲ್‌ನಾಲೆಡ್ಜ್ ಇರಬೇಕು ಎನ್ನುವ ಒಂದು ಕ್ವಾಲಿಫಿಕೇಷನ್ ನಮ್ಮ ಸರ್ಕಾರ ನಿಗದಿ ಮಾಡಿಲ್ಲ, ಅದನ್ನು ಮಾಡುವುದಕ್ಕೆ ಸಾಧ್ಯವೂ ಆಗುವುದಿಲ್ಲವೆಂದು ಭಾವಿಸಿದ್ದಾರೆ. ಈ ಕೊರತೆಯನ್ನು ತುಂಬಿಸಲು ಸರ್ಕಾರ ಪಾಲಿಟೆಕ್ನಿಕ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಾಜ್ಯದಲ್ಲಿ ಸ್ಥಾಪನೆಮಾಡಬೇಕು ಕೇಂದ್ರ ಸರ್ಕಾರದವರು ಕೆಲವು ರಾಜ್ಯಗಳಲ್ಲಿ ಕೃಷಿ ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅಂಥ ಪಾಲಿಟೆಕ್ನಿಕ್‌ಗಳನ್ನು ಮೈಸೂರು ರಾಜ್ಯದಲ್ಲಿಯೂ ಒಂದೆರಡು ಸ್ಥಾಪನೆ ಮಾಡುವುದಕ್ಕೆ ನಮ್ಮ ಕೃಷಿ ಸಚಿವರು ಪ್ರಯತ್ನ ಪಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಹಿಂದೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಧಾನ್ಯಗಳ ಬೆಲೆಗಳು ಇಳಿಯುತ್ತಿವೆ, ವ್ಯವಸಾಯ ಕ್ಷೇತ್ರ ಅಧೋಗತಿಗೆ ಇಳಿಯುತ್ತಿದೆ ಎಂದು ಹೇಳಿದರು ಇದಕ್ಕೆ ಕಾರಣ ಸರ್ಕಾರದವರು, ಸರ್ಕಾರದವರು ಸಮತೋಲನವಾದ ಉತ್ಪನ್ನದ ಗುರಿಗಳನ್ನು ಹಾಕಿಲ್ಲ. ವೈಯಕ್ತಿಕವಾಗಿ ವ್ಯವಸಾಯಗಾರರೇ ಮಾಡತಕ್ಕ ಕೆಲಸ ಇದಲ್ಲ, ಸರ್ಕಾರ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಬೆಳೆಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಎಂದು ನಿಗದಿ ಮಾಡಿದರೆ ಆಗ ಬೆಲೆಗಳಲ್ಲಿನ ಏರಿಳಿತಗಳನ್ನು ಕೂಡ ಸೀಮಿತಗೊಳಿಸಬಹುದು. ಕಬ್ಬಿನ ಬೆಳೆ ತೆಗೆದುಕೊಂಡರೆ ಈ ವರ್ಷ ಕಬ್ಬಿನ ಬೆಳೆಗಾರರಿಗೆ ವಿಪರೀತವಾದ ನಷ್ಟವಾಗಿದೆ.

ಹೋದ ಸಲ ಹೆಚ್ಚಿನ ಬೆಲೆ ಇದ್ದುದರಿಂದ ರೈತರು ಹೆಚ್ಚು ಕಬ್ಬು ಬೆಳೆದರು. ಹೆಚ್ಚು ಬೆಳೆಯಿಂದ ಈ ವರ್ಷ ಬೆಲೆಗಳು ಇಳಿದಿರುವುದರಿಂದ ರೈತರು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಹೋದ ಸಲ ಮುಸುಕಿನ ಜೋಳವನ್ನು ೨ ಲಕ್ಷ ಎಕರೆಗಳಲ್ಲಿ ಹಾಕಿದ್ದರು. ಬೆಲೆ ಇಳಿಮುಖವಾಗಿ ನಷ್ಟವಾಗುವುದರಿಂದ ಈ ವರ್ಷ ಒಂದು ಲಕ್ಷ ಎಕರೆಯಲ್ಲಿ ಮಾತ್ರ ಹಾಕಿದ್ದಾರೆ. ಇದಕ್ಕೆ ಕಾರಣ ಇಷ್ಟೆ. ಆ ಒಂದು ನಿರ್ದಿಷ್ಟವಾದ ಉತ್ಪನ್ನದ ಗುರಿಯನ್ನು ಸರ್ಕಾರ ಹಾಕಿಕೊಟ್ಟಿಲ್ಲ. ವೈಯಕ್ತಿಕವಾಗಿ ರೈತರೇ ಈ ಕೆಲಸವನ್ನು ಮಾಡುವುದಕ್ಕೆ ಅಸಾಧ್ಯವಾದುದು. ಆದುದರಿಂದ ಸರ್ಕಾರದವರು ಎಲ್ಲಾ ಬೆಳೆಗಳಿಗೂ ರಾಜ್ಯದ ಅವಶ್ಯಕತೆ ಮತ್ತು ಮಾರುಕಟ್ಟೆ ಅನುಕೂಲತೆ ಆಧಾರದ ಮೇಲೆ ಉತ್ಪನ್ನದ ಗುರಿಯನ್ನು ನಿಗದಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಎಲ್ಲಕ್ಕಿಂತಲೂ ರೈತರಿಗೆ ಹೆಚ್ಚು ಪರಿಣಾಮವಾಗಿರುವ ಸನ್ನಿವೇಶವೆಂದರೆ ವ್ಯವಸಾಯಕ್ಕೆ ಬೇಕಾದ ಇನ್‌ಪುಟ್ಸ್ ಬೆಲೆ ಏರಿರುವುದು. ಪ್ರತಿಯೊಂದು ಇನ್‌ಪುಟ್ಸ್ ಬೆಲೆಗಳೂ ಸಹ ಬಹಳವಾಗಿ ಏರಿವೆ. ಉದಾಹರಣೆಗೆ ರಾಸಾಯನಿಕ ಗೊಬ್ಬರಗಳ ಬೆಲೆ ವಿಪುಲವಾಗಿ ಏರಿದೆ. ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಕೇಳುತ್ತೇನೆ. ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಗೊಬ್ಬರದ ಡಿಮಾಂಡ್ ಅಂಡ್ ಸಪ್ಲೈ ಏನಿದೆ ಅದನ್ನು ರೀಕನ್‌ಸೈನ್ ಮಾಡಬೇಕು. ಇಲ್ಲದೆ ಇದ್ದರೆ, ಬೆಲೆಗಳು ಏರುವುದು ಅನಿವಾರ್ಯ. ಹೊರಗಡೆಯಿಂದ ಬರತಕ್ಕ ಸೀಮೆಗೊಬ್ಬರವನ್ನು ಹೆಚ್ಚಾಗಿ ಬಳಸುತ್ತಿದ್ದೇವೆ. ಸ್ಥಳೀಯ ವಾಗಿ ಸಿಕ್ಕತಕ್ಕ ಕಚ್ಚಾ ಮಾಲುಗಳನ್ನು ಉಪಯೋಗಿಸಿ ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರವನ್ನು ತಯಾರುಮಾಡತಕ್ಕ ಸಂಶೋಧನೆಗೆ ಹೆಚ್ಚು ನಿಗಾ ಕೊಡಬೇಕು ಎಂದು ಸೂಚಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಬೆಳಗೊಳದಲ್ಲಿ ಹಿಂದಿನ ಬೇಜವಾಬ್ದಾರಿ ಸರ್ಕಾರದವರು ಒಂದು ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದರು, ಈಗ ಜವಾಬ್ದಾರಿ ಸರ್ಕಾರದವರು ಅದರ ಕೆಲಸವನ್ನು ನಿಲ್ಲಿಸಿದ್ದಾರೆ. ಹಿಂದಿನ ರಾಜರ ಕಾಲದಲ್ಲಿ ಆಗಿನ ಸರ್ಕಾರ ರಾಜ್ಯದ ಗೊಬ್ಬರದ ಬೇಡಿಕೆಯನ್ನು ಅರಿತು ಒಂದು ಸಣ್ಣ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಅದು ಸಾಕಷ್ಟು ಪ್ರಮಾಣದಲ್ಲಿ ಲಾಭದಾಯಕವಾಗಿ ಕೆಲಸ ಮಾಡುತ್ತಿತ್ತು. ಈಗ ಕಾರ್ಖಾನೆಯನ್ನು ಮುಚ್ಚಿರುವುದಲ್ಲದೆ ಯಾವ ವಿಧವಾದ ಹೊಸ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಮಾಡಿಲ್ಲ. ಮಂಗಳೂರಿನಲ್ಲಿ ಒಂದು ಕಾರ್ಖಾನೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಕೂಡ ಮ್ಯಾನ್ಯುಫ್ಯಾಕ್ಚರಿಂಗ್ ಕಾಸ್ಟ್ ತುಂಬ ಜಾಸ್ತಿಯಾಗುತ್ತದೆ. ನಮ್ಮ ರಾಷ್ಟ್ರದಲ್ಲಿ ಕೂಡ ರಾಸಾಯನಿಕ ಗೊಬ್ಬರಗಳನ್ನು ತಯಾರುಮಾಡುವುದರ ಬೆಲೆ ಬಹಳ ದುಬಾರಿಯ ವ್ಯವಸ್ಥೆಯಾಗಿದೆ. ಸರ್ಕಾರ ಇನ್‌ಪುಟ್ಸ್ ಬಗೆ ಹೆಚ್ಚಿನ ಗಮನಕೊಟ್ಟು, ಸ್ಥಳೀಯ ಕಚ್ಚಾ ಸಾಮಾನುಗಳಿಂದ ಗೊಬ್ಬರವನ್ನು ತಯಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕ್ರಿಮಿನಾಶಕಗಳ ಬಗ್ಗೆ ಒಂದೆರಡು ಮಾತು. ಕ್ರಿಮಿನಾಶಕಗಳ ಬೆಲೆ ವಿಪರೀತವಾಗಿದೆ. ನಮ್ಮ ರಾಜ್ಯದಲ್ಲಿ ಒಂದು ಕೆ.ಜಿ. ಡಿ.ಡಿ.ಟಿ ಬೆಲೆ ೪.೯೦ ರೂಪಾಯಿ ಇದ್ದರೆ, ಅಮೇರಿಕಾದಲ್ಲಿ ಅದರ ಬೆಲೆ ೨.೫೦ ರೂಪಾಯಿ ಇದೆ. ಅಲ್ಲದೆ ಸಕಾಲದಲ್ಲಿ ಅದು ದೊರೆಯುವುದಿಲ್ಲ, ಒಂದು ವೇಳೆ ದೊರೆತರೂ ಔಟ್‌ಡೇಟ್ ಆಗಿರುವಂಥದ್ದು ಸಿಕ್ಕುತ್ತದೆ. ಸಂಚಾರಿ ಸಿಂಪಡಿಕೆ ಪಡೆಯನ್ನು ಏರ್ಪಾಡು ಮಾಡಿ, ಎಲ್ಲೆಲ್ಲಿ ಅದರ ಅವಶ್ಯಕತೆ ಇದೆಯೋ ಅಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುವುದಕ್ಕೆ ವ್ಯವಸ್ಥೆ ಮಾಡಿ ತಕ್ಷಣ ರೈತರಿಗೆ ಪರಿಹಾರ ಕೊಡಕೊಡಬೇಕು. ಕಂಪಲ್ಸರಿ ಕಾಂಟಿ ಬ್ಯೂಷನ್ ಪ್ಲಾಂಟ್‌ಪ್ರೊಟೆಕ್ಷನ್ ಸರ್ವಿಸಸ್ ಸ್ಥಾಪನೆ ಕೂಡ ಆಗಬೇಕಾಗಿದೆ. ಹಾಗೆ ಮಾಡದೆ ಇದ್ದರೆ ರೈತನಿಗೆ ನಿಜವಾಗಿ ಸಹಾಯ ಮಾಡಿದಂತಾಗುವುದಿಲ್ಲ. ಬಾಯಿ ಮಾತಿನಲ್ಲಿ ಅವನಿಗೆ ಮೆಚ್ಚುಗೆಯನ್ನು ಸೂಚಿಸಿದ ಹಾಗಾಗುತ್ತದೆ.

ಬುಲ್‌ಡೋಜರ್ಸ್, ಟ್ರಾಕ್ಟರ್ ಮುಂತಾದುವುಗಳಿಗೆ ಕೊಡಬೇಕಾಗಿರುದ ಬಾಡಿಗೆಯನ್ನು ಪುನರ್ವಿಮರ್ಶೆ ಮಾಡಬೇಕು. ಈಗ ಒಂದು ಗಂಟೆ ಬುಲ್‌ಡೋಜರ್ ಉಪಯೋಗಿಸಿಕೊಳ್ಳಲು ೪೫ ರೂಪಾಯಿ ಕೊಡಬೇಕು, ಒಂದು ಎಕರೆಗೆ ಟ್ರಾಕ್ಟರಿಂದ ಉಳುವುದಕ್ಕೆ ೨೪ ರೂಪಾಯಿ ಕೊಡಬೇಕು. ರೈತರ ದೃಷ್ಟಿಯಿಂದ ನೋಡಿದರೆ ಇದು ಬಹಳ ದುಬಾರಿಯಾಗಿದೆ. ಈ ದಿನ ಪ್ರಶ್ನೋತ್ತರ ಕಾಲದಲ್ಲಿ ಕೃಷಿ ಸಚಿವರು ಹೇಳಿದರು, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಇದನ್ನೆಲ್ಲ ವಹಿಸುತ್ತೇವೆ ಎಂಬುದಾಗಿ ಅಲ್ಲಿ ಬಾಡಿಗೆಯನ್ನು ಸ್ವಲ್ಪ ಏರಿಸುತ್ತಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಈಗಿರುವ ಬಾಡಿಗೆಯೇ ದುಬಾರಿಯಾಗಿರುವಾಗ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದರೆ, ಕಾರ್ಪೊರೇಷನ್ ಸ್ವಲ್ಪವಾದರೂ ಬಾಡಿಗೆಯನ್ನು ಏರಿಸಿದರೆ ಒಂಟೆಯ ಬೆನ್ನು ಮುರಿಯತಕ್ಕ ಲಾಸ್ಟ್ ಸ್ಟ್ರಾ ಹಾಕಿದಂತೆ ಆಗುತ್ತದೆ. ಟ್ರಾಕ್ಟರ್ ಮತ್ತು ಬುಲ್‌ಡೋಜರ್‌ಗಳಿರುವ ರೈತರ ಜಮೀನುಗಳಿಗೆ ಹೋಗಿ ಯಾವ ರೀತಿ

(ಶ್ರೀ ಎನ್. ಎ. ಚನ್ನೇಗೌಡ)

ಕೆಲಸ ಮಾಡುತ್ತಾವೆ ಎನ್ನುವುದನ್ನು ಮಾನ್ಯ ಕೃಷಿ ಸಚಿವರು ಅನಿರೀಕ್ಷಿತವಾಗಿ ಭೇಟಿಕೊಟ್ಟು ನೋಡಿದರೆ ಗೊತ್ತಾಗುತ್ತದೆ. ಅವರು ಒಂದು ಗಂಟೆ ಕೆಲಸ ಮಾಡಿದರೆ ಇನ್ನೊಂದು ಗಂಟೆ ನಿಲ್ಲಿಸುತ್ತಾರೆ. ಇದರಿಂದ ರೈತನಿಗೆ ಬಹಳ ತೊಂದರೆಯಾಗುತ್ತದೆ. ಇಂಥ ತೊಂದರೆಯನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರ ಗಮನಕೊಡಬೇಕು.

ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿ ಕಬ್ಬುಬೆಳೆಯುವುದರಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಪ್ರತಿಯೊಂದು ಸಲವೂ ಕೂಡ ನಾವು ಕೊಯಮತ್ತೂರಿನಲ್ಲಿರುವ ಬ್ರೀಡಿಂಗ್ ಸ್ಟೇಷನ್ ಕಡೆ ನೋಡಬೇಕಾಗಿದೆ. ಸಾಮಾನ್ಯವಾಗಿ ಒಂದು ಒಳ್ಳೆಯ ಕಬ್ಬಿನ ಬಿತ್ತನೆಯನ್ನು ತಯಾರುಮಾಡುವುದಕ್ಕೆ ೧೪–೧೫ ವರ್ಷಬೇಕು. ಅದು ೧೫–೨೦ ವರ್ಷಗಳ ತನಕ ಜಾರಿಯಲ್ಲಿರುತ್ತದೆ. ಆದರೆ ೩೦ ವರ್ಷಗಳಾದರೂ ಹೊಸ ಬಿತ್ತನೆ ಬಂದಿಲ್ಲ. ಕಬ್ಬಿನಬೆಳೆಯಲ್ಲಿ ಎರಡನೇ ರಾಜ್ಯವಾಗಿದ್ದರೂ, ಸಕ್ಕರೆಯ ಉತ್ಪತ್ತಿ ಮಾಡುವುದರಲ್ಲಿ ಕೂಡ ಎರಡನೇ ರಾಜ್ಯವಾಗಿದ್ದರೂ, ಕೂಡ ನಮ್ಮದೇ ಆದ ಬ್ರೀಡಿಂಗ್ ಸ್ಟೇಷನ್ ಪಡೆಯುವುದಕ್ಕೆ ಇನ್ನೂ ಪ್ರಯತ್ನ ಪಡದೇ ಇರುವುದು ನಮ್ಮ ಹಿಂದುಳಿದಿರುವಿಕೆಗೆ ಒಂದು ಹೆಗ್ಗುರುತು ಎಂದು ಹೇಳುತ್ತೇನೆ.

ಸರ್ಕಾರ ಸಾಮಾನ್ಯವಾಗಿ ವ್ಯವಸಾಯ ಭಾಗದಲ್ಲಿ ಎರಡು ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಹುದು. ಒಂದು ವರಮಾನ ನಿಷ್ಕರ್ಷೆ ಬಗ್ಗೆ, ಎರಡನೆಯದು ಸ್ಟ್ರಕ್ಚರಲ್ ಪಾಲಿಸಿ ಬಗ್ಗೆ. ಮೊದಲನೆಯದಾಗಿ ಲೋ ಇನ್‌ಕಂ ಮತ್ತು ಫ್ಲಕ್ಚುಯೇಟಿಂಗ್ ಇನ್‌ಕಂ ಸಾಮಾನ್ಯವಾಗಿ ರೈತನಿಗೆ ಬರತಕ್ಕವಿಪತ್ತು. ರೈತರ ವರಮಾನ ಯಾವತ್ತಿಗೂ ಕೂಡ ಸ್ಥಿಮಿತದಲ್ಲಿ ಇರುವುದಿಲ್ಲ. ಅಂಥ ಸಮಯದಲ್ಲಿ ಸರ್ಕಾರ ಪ್ರೈಸ್‌ಸ್ಟೆಬಿಲೈಸೇಷನ್ ಮಾಡಬೇಕು ಮತ್ತು ಅವರಿಗೆ ಪ್ರೈಸ್ ಇನ್‌ಷೂರೆನ್ಸ್ ಸ್ಕೀಂ ಜಾರಿಗೆ ತಂದು ಬೆಲೆಗಳು ವಿಪರೀತವಾಗಿ ಇಳಿಯುವುದರಿಂದ ಆಗತಕ್ಕ ತೊಂದರೆಗಳನ್ನು ನಿವಾರಿಸಬೇಕು.

ಡಚ್ ರಾಷ್ಟ್ರದಲ್ಲಿ ಪ್ರೈಸ್ ಇನ್ಶೂರೆನ್ಸ್ ಸ್ಕೀಂ ಜಾರಿಯಲ್ಲಿದೆ. ಸರಕಾರ ಈ ಯೋಜನೆ ತಯಾರ್ಮಾಡಿ ರೈತರಿಗೆ ಉಂಟಾಗುವ ತೊಂದರೆ ಪರಿಹಾರ ಮಾಡಬೇಕು ಮತ್ತು ಆರ್ಥಿಕ ಹಿಡುವಳಿಯಲ್ಲಿ ಕನ್‌ಸಾಲಿಡೇಶನ್ ಹಾಗೂ ಅಮಾಲ್ಗಮೇಶನ್ ಸರಕಾರ ಮಾಡಬೇಕು. ನನ್ನ ಕ್ಷೇತ್ರದಲ್ಲಿ ೭೨೦ ಎಕರೆ ವಿಲೇಜ್ ಫಾರೆಸ್ಟ್ ಇದೆ ಅರಣ್ಯ ಬೆಳಸುವುದಕ್ಕೆ ಒಂದು ಎಕರೆಗೆ ೨೫ ರೂಪಾಯಿ ಸಬ್‌ಸಿಡಿ ಕೊಡುತ್ತಾರೆ. ಇದರಲ್ಲಿ ೫ ರೂ. ಟೆಕ್ನಿಕಲ್ ಸಲಹೆಗೆ ಹೋಗುವುದರಿಂದ ಉಳಿದ ೨೦ ರೂ. ಮಾತ್ರ ಒಂದು ಎಕರೆಗೆ ಕೊಟ್ಟ ಹಾಗೆ ಆಗುವುದು. ಈ ರೀತಿ ಅರಣ್ಯ ಬೆಳವಣಿಗೆ ನಗೆಪಾಟಲು ಆಗಿದೆ. ದುಡ್ಡು ಯಾರ ಹೆಸರಿನಲ್ಲಿಯೋ ಕೊಡುತ್ತಾರೆ. ಇದನ್ನು ತೀವ್ರವಾಗಿ ಯೋಚನೆ ಮಾಡಿ ಸರಕಾರ ಸರಿಪಡಿಸಬೇಕು ಎಂದು ಹೇಳುತ್ತೇನೆ. ಇದರಿಂದ ಬಡವರಿಗೆ ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆಯಾದರೂ ಸಿಕ್ಕುವ ಯೋಜನೆಗಳಲ್ಲಿ ಹಣ ವೆಚ್ಚವಾಗಲಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎ ಆರ್. ಬದ್ರೀನಾರಾಯಣ (ಶಿವಮೊಗ್ಗ) : ಮಾನ್ಯ ಸಭಾಪತಿಗಳೇ, ವ್ಯವಸಾಯ, ಪಶು ಸಂಗೋಪನೆ, ಅರಣ್ಯ ಖಾತೆಗಳ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತು ಹೇಳಬೇಕೆಂದು ನಾನು ನಿಂತಿದ್ದೇನೆ. ನಾನು ಕೆಲವು ಖೋತಾ ನಿರ್ಣಯಗಳನ್ನು ಕಳಿಸಿದ್ದೇನೆ. ಅದರಲ್ಲಿ ನನ್ನ ಹೆಸರು ಬರೆಯುವುದರಲ್ಲಿ ತಪ್ಪು ಮಾಡಿದ್ದಾರೆ. ಬದ್ರೀನಾರಾಯಣ ಎಂದು ಬರೆಯುವ ಹೆಸರಿನಲ್ಲಿ ಬಿ. ಎಚ್. ಎಂದು ಸ್ಪೆಲ್ಲಿಂಗ್‌ನಲ್ಲಿ ತಪ್ಪು ಇರುವುದನ್ನು ಸರಿಮಾಡಿಕೊಳ್ಳಬೇಕು. ಇದಲ್ಲದೆ ಕಟ್ ಮೋಷನ್ಸ್‌ನಲ್ಲಿ ಕೂಡ ತಪ್ಪುಗಳನ್ನು ಮಾಡಿದ್ದಾರೆ. ಡ್ರೈ ಫಾರ್ಮಿಂಗ್, ಎಂದು ಇರಬೇಕಾದುದು ಡೈರಿ ಫಾರ್ಮಿಂಗ್ ಎಂದು ಬರೆದಿದ್ದಾರೆ. ಈ ತಪ್ಪುಗಳನ್ನು ದಯವಿಟ್ಟು ತಿದ್ದಿಕೊಳ್ಳಬೇಕು.

ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಕೊಟ್ಟಿರತಕ್ಕಂಥ ಹತ್ತು ನಿಮಿಷ ಕಾಲ ಸಾಲದು, ದಯವಿಟ್ಟು ಐದು ನಿಮಿಷ ಹೆಚ್ಚಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ವ್ಯವಸಾಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅನೇಕ ವ್ಯವಸಾಯ ಕ್ಷೇತ್ರಗಳಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಂದು ಹಸಿರು ಕ್ರಾಂತಿ ಎಂದು ಏನು ಪ್ರಚಾರವಾಗುತ್ತಾ ಇದೆಯೋ ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ನೋಡಬಹುದಾಗಿದೆ. ಅನೇಕ ವಿದ್ಯಾವಂತರಾದ ಯುವಕರು ವ್ಯವಸಾಯದಲ್ಲಿ ನಿರತರಾಗಿ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. ಇಡೀ ಭಾರತದಲ್ಲಿ ಶಿವಮೊಗ್ಗ ಜಿಲ್ಲೆಯು ಪ್ರಥಮ ಸ್ಥಾನವನ್ನು ವ್ಯವಸಾಯದಲ್ಲಿ ಪಡೆದಿದೆ ಎಂದು ಹೇಳಬಹುದು. ಭತ್ತದ ಕಣಜವಾದ ಮಲೆನಾಡಿನಲ್ಲಿ ಇಷ್ಟು ಪ್ರಗತಿಯಾಗಿದ್ದರೂ ಕೂಡ ಇದುವರೆಗೆ ಶಿವಮೊಗ್ಗ ಜಿಲ್ಲೆಗೆ ಒಂದು ಅಗ್ರಿಕಲ್ಚರಲ್ ಕಾಲೇಜು ಕೊಟ್ಟಿಲ್ಲ. ಅನೇಕ

ವರ್ಷಗಳಿಂದ ಈ ಬೇಡಿಕೆಯನ್ನು ಸರಕಾರದಲ್ಲಿ ತಿಳಿಸುತ್ತಾ ಬಂದಿದ್ದೇವೆ. ಈ ಬೇಡಿಕೆಯನ್ನು ಗಮನಿಸಿ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಅಗ್ರಿಕಲ್ಚರಲ್ ಕಾಲೇಜ ಸ್ಥಾಪನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಯುವಕರು ಬೇರೆ ಕಾಲೇಜುಗಳಿಗೆ ಹೋಗದೆ ಇಲ್ಲಿ ಪ್ರಾರಂಭವಾಗುವ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪರಿಶ್ರಮ ಪಡೆಯಬಹುದಾಗಿದೆ. ಆದ್ದರಿಂದ ಈ ಕಾಲೇಜನ್ನು ಕೂಡಲೇ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಮೈಸೂರು ರಾಜ್ಯದಲ್ಲಿ ಅನೇಕ ಕಡೆ ಪೈಲೆಟ್ ಅಗ್ರಿಕಲ್ಚರಲ್ ಪ್ರೋಗ್ರಾಂ ಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ಅದನ್ನು ಕೊಟ್ಟಿಲ್ಲ, ಅದನ್ನು ಕೊಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ಒಂದನ್ನು ಕೊಡಬೇಕು. ಅದನ್ನು ಸಹ ಇದುವರೆಗೆ ಕೊಟ್ಟಿಲ್ಲ. ಸರಕಾರ ಇದನ್ನು ಗಮನಿಸಿ ಮಂತ್ರಿಗಳು ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಸರಕಾರದ ನೀತಿ ಇದರ ಬಗ್ಗೆ ಏನು ಇದೆ ಹೇಳಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಟ್ರ್ಯಾಕ್ಟರ ಬಗ್ಗೆ ಸಾಲ ಕೇಳಿದರೆ ಬ್ಯಾಂಕಿನಲ್ಲಿ ಸ್ಟಾಂಪ್ ಪೇಪರನಲ್ಲಿ ಬರೆದು ಕೊಡಬೇಕು ಎಂದು ಮಾಡಿದ್ದಾರೆ. ಆಸ್ತಿ ಆಧಾರ ಇರುವಾಗ ಸ್ಟಾಂಪ್ ಪೇಪರ್ ಖರ್ಚು ಬಡವರಿಗೆ ಹೊರೆಯಾಗುತ್ತದೆ. ಆದುದರಿಂದ ಸ್ಟಾಂಪ್ ಪೇಪರಿನಲ್ಲಿ ಬರೆದು ಕೊಡಬೇಕು ಎಂದು ಇರುವುದಕ್ಕೆ ಎಗ್ಸೆಂಪಷನ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇಡೀ ಭಾರತದಲ್ಲಿ ಶೇಕಡ ೭೫ ರಷ್ಟು ಜನ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಮಲೆನಾಡು ಬಿಟ್ಟು ಮಿಕ್ಕ ಭಾಗದಲ್ಲಿ ಜನ ಡ್ರೈ ಫಾರ್ಮಿಂಗ್ ಅಂದರೆ ಖುಷ್ಕಿ ವ್ಯವಸಾಯದಲ್ಲಿ ಇರುವುದರಿಂದ ಅದಕ್ಕೆ ಬೇಕಾದಂಥ ತಾಂತ್ರಿಕ ಸಹಾಯ ಮುಂದುವರಿಸಬೇಕು. ಅಲ್ಲಿ ಲೆವೆಲ್ಲಿಂಗ್ ಮಾಡುವುದು ಕಾಂಟೂರ್ ಬಂಡಿಗ್ ಮಾಡಬೇಕು ಹಾಗು ಯಾವ ಜಮೀನಿನಲ್ಲಿ ಯಾವ ಬೆಳೆ ಬೆಳೆದರೆ ಚೆನ್ನಾಗಿ ಬೆಳೆಯಬಹುದು ಇದನ್ನು ತಿಳಿಯ ಪಡಿಸಿದರೆ ರೈತನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಇದಲ್ಲದೆ ಎಕ್ಸ್‌ಪೇರಿಮೆಂಟಲ್ ಫಾರಮ್ಸ್ ಮಾಡಬೇಕು. ಈ ಬಗ್ಗೆ ಕಟ್ ಮೋಷನ್ಸ್ ನಾನು ಕೊಟ್ಟಿದ್ದೇನೆ. ಇದನ್ನು ಸರಕಾರ ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ಮಾಡಿದಹಾಗೆ ಮಲೆನಾಡಿನಲ್ಲಿ ಸಹ ಮಾಡಬೇಕು. ಮಲೆನಾಡಿನಲ್ಲಿ ಬೇಕಾದಷ್ಟು ಜಮೀನು ಇದೆ. ಅಲ್ಲಿ ಎಕ್ಸ್‌ಟೆನ್ಸಿವ್ ಅಗ್ರಿಕಲ್ಚರಲ್ ಫಾರ್ಮಿಂಗ್ ಎಂದು ಮಾಡಿದ್ದಾರೆ. ಮಲೆನಾಡಿನಲ್ಲಿ ಸಾವಿರಾರು ಎಕರೆಯಲ್ಲಿ ಮಾಡಿದರೆ, ಮಲೆನಾಡಿನ ಜನರು ಪರಿಸ್ಥಿತಿಗೆ ಹೊಂದಿಕೊಂಡು ವ್ಯವಸಾಯ ಮಾಡವುದಕ್ಕೆ ಒಂದು ದಾರಿ ತೋರಿಸಿಕೊಟ್ಟ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ.

ಇದಲ್ಲದೆ ಪಶು ಸಂಗೋಪನೆ ವಿಚಾರದಲ್ಲಿ ಮಲೆನಾಡಿನಲ್ಲಿ ತಳಿ ಅಭಿವೃದ್ಧಿಯಾಗಿಲ್ಲ. ಈ ವಿಚಾರದಲ್ಲಿ ಮಂತ್ರಿಗಳಾದ ಶ್ರೀ ಶಂಕರ್‌ರಾವ್ ಅವರು ಹೆಚ್ಚು ಆಸಕ್ತಿ ವಹಿಸಿದ್ದಾರೆ ಮಲೆನಾಡಿನ ವಿಚಾರದಲ್ಲಿ ಉತ್ತಮ ತಳಿ ತಯಾರಿಸಬೇಕು. ಅದಕ್ಕಾಗಿ ಏನು ಮಾಡಬೇಕೋ ಅದನ್ನು ಮಾಡಿ ಕೊಟ್ಟಿಲ್ಲ. ಆದುದರಿಂದ ಕೂಡಲೇ ಮಲೆನಾಡಿನಲ್ಲಿ ಒಂದು ಬ್ರೀಡಿಂಗ್ ಸೆಂಟರ್ ಸ್ಥಾಪನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನಮ್ಮ ಮಲೆನಾಡಿನಲ್ಲಿ ಇರತಕ್ಕಂಥ ಹಿಲ್ ಟ್ರೈಬ್ಸ್ ಜನರು ಕಾಡಿನಲ್ಲಿ ಎಮ್ಮೆಗಳನ್ನು ಇಟ್ಟುಕೊಂಡು ಹಾಲು ಉತ್ಪಾದನೆ ಮಾಡಿ ಅದರಿಂದ ಜೀವನ ಮಾಡುತ್ತಾರೆ. ಅವರು ನೂರಾರು ಲೀಟರ್ ಹಾಲು ತಯಾರು ಮಾಡುತ್ತಾರೆ. ಹಾಲು ಉತ್ಪಾದನೆಗೆ ಹೆಚ್ಚಿನ ಶ್ರಮ ವಹಿಸುತ್ತಾರೆ. ಅವರಿಗೆ ಬೇಕಾದ ಸಹಾಯ ಸೌಕರ್ಯ ಒದಗಿಸಿ ಕೊಟ್ಟರೆ ಬಹುಶಃ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಡೈರಿ ಫಾರ್ಮಿಂಗ್ ಯೋಜನೆ ಏನು ಇದೆ ಅದು ಚೆನ್ನಾಗಿ ಯಶಸ್ವಿಯಾಗಬಹುದು ಎಂದು ನನಗೆ ಅನಿಸುತ್ತದೆ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿಷಯದ ಬಗ್ಗೆ ಎರಡು ಮಾತು ಹೇಳುವುದಕ್ಕೆ ಮುಂಚೆ ಈ ಕಚ್ಚೆಗೌಳಿಗರ ಬಗ್ಗೆ ಹೇಳುತ್ತೇನೆ. ಅವರು ಕಾಡಿನಲ್ಲಿ ಗುಡಿಸಲು ಕಟ್ಟಿಕೊಂಡು ಇರುತ್ತಾರೆ. ಅವರು ಎಮ್ಮೆಗಳನ್ನು ಮೇಯಿಸಿಕೊಂಡು, ಅಲ್ಲಿ ಗೊಬ್ಬರ ಜಮಾಯಿಸಿಕೊಂಡು ಅದರಿಂದ ಬರುವ ಉತ್ಪತ್ತಿಯಿಂದ ಜೀವನ ಮಾಡುತ್ತಾರೆ. ಅವರು ಚೆನ್ನಾಗಿ ಹಾಲನ್ನು ಉತ್ಪಾದನೆ ಮಾಡುತ್ತಾರೆ.

ಇಂಥ ಜನರಿಗೆ ಅರಣ್ಯ ಇಲಾಖೆಯವರು ಬಹಳ ಕಿರುಕುಳ ಕೊಡುತ್ತಿದ್ದಾರೆ. ಅವರಿಗೆ ಕಾಡಿನಲ್ಲಿ ಇರುವುದಕ್ಕೆ ಜಾಗ ಇಲ್ಲದಂತಾಗಿದೆ. ಅವರಿಗೆ ಗ್ರೇಜಿಂಗ್ ಫೀಯನ್ನು ಕೂಡ ಮಾಫಿ ಮಾಡಬೇಕೆಂದು ಹೇಳುತ್ತೇನೆ. ಕಚ್ಚೇಗೌಳಿಗರು ಹಿಲ್ ಟ್ರೈಬಿಗೆ ಸೇರಿದ ಜನರು. ಇವರಿಗೆ ಎಲ್ಲ ರೀತಿಯರಿಯಾಯಿತಿಗಳನ್ನೂ ಕೊಟ್ಟು ಅವರಿಗೆ ಅನುಕೂಲಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಸರ್ಕಾರದವರು ಬೆಂಗಳೂರಿನ

(ಶ್ರೀ ಎ. ಆರ್. ಬದ್ರೀನಾರಾಯಣ)

ಪಕ್ಕದಲ್ಲಿರುವ ಹೆಸರುಘಟ್ಟದಲ್ಲಿ ಇಂಡೋಡೇನಿಷ್ ಡೈರಿಫಾರ್ಮಿಂಗ್ ಮಾಡಿರುವಂತೆ ನಮ್ಮ ಮಲೆನಾಡಿನಲ್ಲೂ ಒಂದು ಇಂಡೋಡೇನಿಷ್ ಡೈರಿಫಾರ್ಮಿಂಗ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಆದರೆ ನಮ್ಮ ಮಲೆನಾಡಿನಲ್ಲಿರತಕ್ಕ ಪಶುಸಂಗೋಪನ ಇಲಾಖೆಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಆ ಇಲಾಖೆಯವರಿಂದ ಜನರಿಗೆ ಎಷ್ಟು ಸಹಾಯ ದೊರೆಯಬೇಕಾಗಿತ್ತೋ ಅಷ್ಟು ಸಹಾಯ ದೊರೆಯುತ್ತಿಲ್ಲ. ಆ ಇಲಾಖೆಯವರು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡುವುದಕ್ಕೆ ಸರ್ಕಾರದವರು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

3-00 P. M.

ಇನ್ನೊಂದು ಪ್ರಾಮುಖ್ಯವಾದ ವಿಚಾರ ಎಂದರೆ ಅದು ಮಲೆನಾಡಿನಲ್ಲಿ ಅಂದರೆ ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುತ್ತಿರುವ ಹಾಲುಮಡ್ಡಿಗೆ ಸಂಬಂಧಪಟ್ಟ ವಿಷಯ ಅದು ಈ ಹಾಲುಮಡ್ಡಿಯನ್ನು ತೆಗೆಯತಕ್ಕ ಗಿಡಗಳೇನಿವೆ ಅವುಗಳನ್ನು ಮಾರ್ಕ್ ಮಾಡಿ ಇಂಥ ಗಿಡಗಳಲ್ಲೇ ಆ ಹಾಲನ್ನು ತೆಗೆಯಬೇಕೆಂದು ಕಂಡೀಷನ್ ಹಾಕಿದ್ದರೂ ಅವರು ಮಾರ್ಕ್ ಮಾಡದೆ ಇರತಕ್ಕ ಎಳೆಯ ಪ್ರಾಯದ ಗಿಡಗಳನ್ನು ಟ್ಯಾಪ್ ಮಾಡುತ್ತಿರುವುದರಿಂದ ಅರಣ್ಯ ಬಹಳ ಬೇಗ ನಾಶವಾಗುವುದಕ್ಕೆ ಹತ್ತಿದೆ. ಅಲ್ಲದೆ ಈ ಹಾಲುಮಡ್ಡಿಯ ಕಂಟ್ರಾಕ್ಟ್ ಕೂಡ ಒಂದೇ ಸಂಸಾರದ ಜನರು ಅಲ್ಲಲ್ಲೆ ಹಂಚಿಕೊಂಡು ಹರಾಜಿಗೆ ನಿಲ್ಲುತ್ತಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕೂಡ ಕಡಿಮೆಯಾಗುತ್ತಿದೆ. ಅಲ್ಲದೆ ಈ ಜನ ನಂಬರ್ ಹಾಕದೆ ಇರತಕ್ಕ ಮರಗಳನ್ನು ಟ್ಯಾಪ್ ಮಾಡಿದ್ದರಿಂದ ಅವರಿಗೆ ಜುಲ್ಮಾನೆಯನ್ನು ಹಾಕಿದ್ದರೂ ಅದನ್ನು ಅವರಿಂದ ವಸೂಲ್ಮಾಡುವುದಕ್ಕಾಗಿಲ್ಲ ಹಾಗಿದ್ದರೂ ಮತ್ತೆ ಅವರಿಗೇ ಕಂಟ್ರಾಕ್ಟನ್ನು ಕೊಟ್ಟಿದ್ದಾರೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಮತ್ತು ಈ ವಿಚಾರದಲ್ಲಿ ಸೂಕ್ತ ವಿಚಾರಣೆ ನಡೆಸುವುದಕ್ಕೆ ಸರ್ಕಾರದವರು ಸ್ಪೆಷಲ್ ಅಧಿಕಾರಿಗಳನ್ನು ನೇಮಕ ಮಾಡುವುದಾದರೆ ನಾನು ಅವರಿಗೆ ಅಗತ್ಯವಾಗಿ ಬೇಕಾದ ವಿಷಯಗಳನ್ನು ಮತ್ತು ಎಲ್ಲೆಲ್ಲಿ ಏನೇನು ಅನ್ಯಾಯಗಳು ನಡೆದಿರುತ್ತವೆಂಬುದನ್ನೂ ತಿಳಿಸುವುದಕ್ಕೆ ತಯಾರಾಗಿದ್ದೇನೆ ಆ ಬಗ್ಗೆ ಸಾಕ್ಷ್ಯ ಒದಗಿಸುವುದಕ್ಕೆ ಒಬ್ಬ ಆಸಾಮಿಯನ್ನು ಬೇಕಾದರೂ ಕೊಡುತ್ತೇನೆ. ನಾನು ಇದೇ ವಿಚಾರದಲ್ಲಿ ಒಂದು ಪ್ರಶ್ನೆಯನ್ನೂ ಕೂಡ ಕಳುಹಿಸಿದ್ದೇನೆ. ಇನ್ನು ಕೆಲಕೆಲವು ಕಡೇ ಅರಣ್ಯ ಇಲಾಖೆಯವರು ಕಾಡನ್ನು ಕಡಿದು ಅಲ್ಲಿ ಯೂಕಲಿಪ್ಟಸ್ ಮರಗಳನ್ನು ಬೆಳೆಸುತ್ತಿದ್ದಾರೆ. ಅಂಥ ಕಡೆಗಳಲ್ಲಿ ವನ್ಯ ಮೃಗಗಳೂ ಇರುವುದಿಲ್ಲ ಹುಲ್ಲು ಕೂಡ ಅಲ್ಲಿ ಬೆಳೆಯುವುದಿಲ್ಲ ಅದರಿಂದ ಕಾಡು ಹಾಳಾಗುತ್ತಿದೆ ಅದಕ್ಕೆ ಬದಲಾಗಿ ಇರತಕ್ಕ ಕಾಡನ್ನು ನಾಶಮಾಡದೆ ಎಲ್ಲಿ ಮರಗಳು ಇಲ್ಲದೆ ಬಯಲು ಪ್ರದೇಶವಿರುತ್ತದೋ ಅಲ್ಲಿ ಯೂಕಲಿಪ್ಟಸ್ ಮರಗಳನ್ನು ಬೆಳೆಸಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯವನ್ನು ರಕ್ಷಣೆ ಮಾಡತಕ್ಕ ಬಗ್ಗೆ ಗಾರ್ಡುಗಳನ್ನು ನೇಮಕ ಮಾಡಿದ್ದಾರೆ. ಅವರಿಗೆ ಯಾವ ವಿದ್ಯಾ ಅರ್ಹತೆಯೂ ಇರುವುದಿಲ್ಲ ಅವರಿಗೆ ಟೆಕ್ನಿಕಲ್ ನೋಹೌ ಕೂಡ ಅವರಿಗೆ ಅರಿವಿರುವುದಿಲ್ಲ ಆದ್ದರಿಂದ ಇಂಥ ವಿಚಾರಗಳಲ್ಲಿ ಯಾರಿಗೆ ಹೆಚ್ಚಿನ ಪರಿಜ್ಞಾನವಿರುತ್ತದೋ ಅಂಥ ಜನರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ ನಮ್ಮ ಅರಣ್ಯಗಳಲ್ಲಿ ಈಗಾಗಲೆ ಬಿದಿರು ಮಳೆಗಳ ವಂಶವೇ ಕ್ಷೀಣಿಸುತ್ತಾ ಬಂದಿದೆ. ಇದು ದೇಶದ ಒಂದು ಐಶ್ವರ್ಯ ಇಂಥವುಗಳನ್ನು ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ನಡೆಸಿಲ್ಲ. ಈ ದಿವಸ ಜಪಾನಿನ ಜನರು ಬಿದಿರನ್ನು ಬೆಳೆಯತಕ್ಕ ವಿಚಾರದಲ್ಲಿ ಬಹಳ ಮುಂದುವರೆದಿದ್ದಾರೆ ಅವರು ಅಲ್ಲಿ ಯಾವ ಬಣ್ಣದ ಬಿದಿರನ್ನು ಬೇಕಾದರೆ ಅಂಥ ಬಣ್ಣದ ಬಿದಿರನ್ನೇ ಬೆಳೆಯುತ್ತಾರಂತೆ. ಅಷ್ಟೇ ಅಲ್ಲ ಅವರು ಯಾವ ಸೈಜಿನ ಬಿದಿರು ಬೇಕೆಂದರೆ ಆ ಸೈಜಿನ ಬಿದಿರನ್ನೇ ಬೆಳೆಯುತ್ತಾರಂತೆ. ನಾನು ಹೇಳಬೇಕಾಗಿದ್ದ ವಿಷಯಗಳಿನ್ನೂ ಬಹಳವಾಗಿದ್ದವು ಆದರೆ ಅಧ್ಯಕ್ಷರು ಗಂಟೆಯನ್ನು ಬಾರಿಸುತ್ತಿರುವುದರಿಂದ, ನನ್ನ ಮಾತುಗಳನ್ನು ಇಷ್ಟಕ್ಕೇ ಮುಗಿಸುತ್ತೇನೆ. ಆದರೆ ನಾನು ಇಲ್ಲಿಯವರೆಗೂ ಪ್ರಸ್ತಾಪಿಸಿರತಕ್ಕ ವಿಷಯಗಳಿಗೆ ಮಾನ್ಯ ಮಂತ್ರಿಗಳು ಉತ್ತರವನು ಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ (ಷಹಪೂರ್) :— ಮಾನ್ಯ ಸಭಾಪತಿಯವರೇ ವ್ಯವಸಾಯ ಅರಣ್ಯ ಮತ್ತು ಪಶು ಸಂಗೋಪನ ಶಾಖೆಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಮರ್ಥಿಸುತ್ತ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಮುಕ್ಕಾಲು ಮೂರುವೀಸೆ ಪಾಲಿನ ಜನರು ಭೂಮಿಯನ್ನು ಅವಲಂಬಿಸಿ ಒಕ್ಕಲುತನದಿಂದ ಜೀವನ ಮಾಡತಕ್ಕ ಜನರಾಗಿದ್ದಾರೆ ಇಂಥ ಜನರು ನಮ್ಮ ರಾಜ್ಯದಲ್ಲಿ ಶೇ. ೭೦ ರಷ್ಟು ಇದ್ದಾರೆ

ನಾವು ಈ ಜನತೆಯ ಅಭಿವೃದ್ಧಿಗೆ ನಮ್ಮ ಆಯವ್ಯಯದಲ್ಲಿ ಎಷ್ಟರ ಮಟ್ಟಿಗೆ ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟರ ಮಟ್ಟಿಗೆ ಹಣವನ್ನು ಒದಗಿಸುವುದಕ್ಕಾಗಿಲ್ಲ ರಾಜ್ಯಕ್ಕೆ ಬರತಕ್ಕ ವರಮಾನದಲ್ಲಿ ಶೇಕಡ ೬೦ ರಷ್ಟು ವರಮಾನ ಒಕ್ಕಲುತನದವರಿಂದ ಬರುತ್ತಿದೆ ನಮ್ಮ ರಾಜ್ಯದ ವರಮಾನ ೧೩೮೦ ಕೋಟಿ ರೂಪಾಯಿಗಳಿದ್ದರೂ ನಾವು ಈ ದಿವಸ ಒಕ್ಕಲುತನದಿಂದ ಜೀವನ ಮಾಡತಕ್ಕ ಜನರಿಗೆ ಸಾಕಷ್ಟು ಹಣವನ್ನು ಒದಗಿಸುವುದಕ್ಕಾಗಿಲ್ಲ ಇದರಲ್ಲಿ ಶೇ. ೪೦ ರಷ್ಟನ್ನಾದರೂ ಒದಗಿಸಬೇಕಾಗಿತ್ತೆಂದು ನನಗನಿಸುತ್ತಿದೆ. ಇನ್ನಾದರೂ ನಾವು ಈ ಒಕ್ಕಲುತನದವರಿಗೆ ಅವರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕು. ಆದರೆ ಈ ದಿವಸ ಸರ್ಕಾರದವರಿಂದ ದೊರೆಯತಕ್ಕ ಸಹಾಯ ಸೌಲಭ್ಯಗಳೇನಿವೆ? ಅವುಗಳೆಲ್ಲಾ ದೊಡ್ಡ ದೊಡ್ಡ ಭೂ ಮಾಲೀಕರುಗಳಿಗೆ ಅಂದರೆ ೧೦-೧೫ ಎಕರೆಗಳಿಗೆ ಮೇಲ್ಪಟ್ಟು ಏನು ಭೂಮಿಯನ್ನಿಟ್ಟುಕೊಂಡು ಇದ್ದಾರೆ ಅಂಥವರಿಗೆ ಮಾತ್ರ ಅನುಕೂಲವಾಗುತ್ತಿದೆಯೇ ವಿನಾ ಚಿಕ್ಕಪುಟ್ಟ ರೈತರಿಗೆ ಯಾವ ಅನುಕೂಲವಾಗಿಲ್ಲ. ಹೀಗಾಗಿ ಅವರು ಆರ್ಥಿಕ ಸ್ಥಿತಿಯಲ್ಲಿ ಬಹಳ ಹಿಂದುಳಿದಿದ್ದಾರೆ. ಆದ್ದರಿಂದ ಅವರಿಗೆ ಇಂದಿನ ತಾಂತ್ರಿಕ ಯುಗದಲ್ಲಿ ಅವರಿಗೆ ಸಾಕಷ್ಟು ಮಾಹಿತಿದೊರಕಿಸಿಕೊಟ್ಟು ಅನುಕೂಲ ಮಾಡಿಕೊಡಬೇಕಾಗಿದೆ ಈ ಅನುಕೂಲಗಳನ್ನು ಸರ್ಕಾರದವರು ಸಣ್ಣ ಪುಟ್ಟ ರೈತರಿಗೆ ಒದಗಿಸದೇ ಇರುವುದರಿಂದ ಬಡವರಿನ್ನೂ ಬಡವರಾಗಿ ಸ್ಥಿತಿವಂತರಿನೂ ಹೆಚ್ಚಿನ ಸ್ಥಿತಿವಂತರಾಗುತ್ತಿದ್ದಾರೆ. ಈ ಅಂತರವನು ತಪ್ಪಿಸುವುದಕ್ಕೆ ಸರ್ಕಾರದವರು ಕಳೆದ ೧೦ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಅದು ಸಾಧ್ಯವಾಗಿಲ್ಲ. ಕಳೆದ ಹತ್ತು ವರ್ಷಗಳಲ್ಲಿಸರ್ಕಾರದವರು ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಉತ್ತಮ ತಳಿಯ ಬಿತ್ತನೆ ಬೀಜಗಳು ಮತ್ತು ಗೊಬ್ಬರ ಹಾಗೂ ಪೆಸ್ಟಿಸೈಡುಗಳನ್ನು ಒದಗಿಸುತ್ತಿದ್ದಾಗ್ಯೂ ಸಣ್ಣ ಪುಟ್ಟ ರೈತರಿಗೆ ಅವುಗಳ ಅನುಕೂಲ ಸರಿಯಾಗಿ ಲಭಿಸುತ್ತಿಲ್ಲ. ಆದರೆ ಸರ್ಕಾರದವರು ಇತ್ತೀಚೆಗೆ ರೇಡಿಯೋ ಪ್ರಸಾರದ ಮೂಲಕ ರೈತರಿಗೆ ಒಂದು ಹೆಚ್ಚಿನ ಜ್ಞಾನೋದಯವಾಗುವುಕ್ಕೆ ಅವಕಾಶ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಈ ಪ್ರಯತ್ನಗಳಿನ್ನೂ ಸಾಲವು. ಆದರೆ ಈ ದಿವಸ ನಮ್ಮ ರೈತರಿಗೆ ಇನ್ನೂ ಹೊಸ ಹೊಸ ನಮೂನೆಯ ಪೆಸ್ಟಿ ಸೈಡುಗಳ ಹೆಸರು ಅಥವಾ ಹೊಸ ನಮೂನೆಯ ಗೊಬ್ಬರ ಹೆಸರು ಕೂಡ ಗೊತ್ತಿಲ್ಲ ಅದನ್ನು ನಾವು ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಆದುದರಿಂದ ನಮ್ಮ ರೈತರುಗಳಿಗೆ ಬೇಸಿಗೆಯ ಕಾಲದಲ್ಲಾದರೂ ಒಂದೆರಡು ತಿಂಗಳು ಕಾಲ ಒಂದು ಇಂಟೆನ್ಸೀವ್ ಟ್ರೈನಿಂಗನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಅತ್ಯಗತ್ಯ.

ರಾತ್ರಿ ಸ್ಕೂಲ್‌ಗಳನ್ನು ಅಡಲ್ಟ್ಸ್‌ಗೋಸ್ಕರ ನಡೆಸುತ್ತಿದ್ದಾರೆ. ಇದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಸಿದರೆ ಹೊಸರೀತಿಯ ಪದ್ಧತಿಗಳನ್ನೂ ಮತ್ತು ಹೊಸರೀತಿಯಲ್ಲಿ ಆಗತಕ್ಕಂಥ ಕ್ರಾಂತಿಯನ್ನೂ ಅವರು ಅರಿತುಕೊಂಡು ಮುಂದೆ ಅವರ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಆದುದರಿಂದ ಈ ಟ್ರೈನಿಂಗ್ ಸೆಂಟರ್ಸ್‌ನ್ನು ಆದಷ್ಟು ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ. ಇದನ್ನು ಕೇವಲ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮಾಡಿದರೆ ಲಾಭವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಶೇಕಡ ೮೦ ರಷ್ಟು ಡ್ರೈ ಕಲ್ಟಿವೇಷನ್ ಇದೆ. ಸರ್ಕಾರದವರು ಪ್ರಯತ್ನಮಾಡಿದರೆ ೨೦ ರಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಬಹುದು. ಹೆಡ್ ಡ್ರೈ ಲ್ಯಾಂಡ್‌ನಲ್ಲಿ ಯಾವರೀತಿ ಕ್ರಾಂತಿ ಆಗಬೇಕಾಗಿತ್ತೋ ಆರೀತಿ ಇನ್ನೂ ಆಗಿಲ್ಲ. ಎಲ್ಲಿ ನೀರಿನ ಅನುಕೂಲತೆ ಇರುತ್ತದೋ ಎಲ್ಲಿ ಅಷ್ಯೂರ್ಡ್ ಕ್ರಾಪ್ ಇರುತ್ತದೋ ಎಲ್ಲಿ ಇನ್‌ಕಂ ಇರುತ್ತದೋ ಅಲ್ಲಿ ಅನುಕೂಲತೆ ಇರುತ್ತದೆ. ಹಸಿರು ಕ್ರಾಂತಿ ಡ್ರೈಲ್ಯಾಂಡ್‌ನಲ್ಲಿ ಆಗುವುದು ಕಷ್ಟ, ಡ್ರೈಲ್ಯಾಂಡ್‌ನಲ್ಲಿ ರೈತ ಭೂಮಿ. ಆಕಾಶ ನೋಡುತ್ತಿರುತ್ತಾನೆ. ಅಲ್ಲಿ ಮಳೆ ಬಂದರೆ ಬೆಳೆಯಬೇಕು ಇಲ್ಲದಿದ್ದರೆ ಇಲ್ಲ. ಪ್ರಾಜೆಕ್ಟ್ ಇರುವಂಥ ಕಡೆಯ ಹಸಿರು ಕ್ರಾಂತಿ ಕಾಣುತ್ತದೆ. ಇದಕ್ಕೆ ಹೊಸರೀತಿಯ ಪೆಸ್ಟಿಸೈಡ್‌ಗಳನ್ನು, ಗೊಬ್ಬರಗಳನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು. ಆದರೆ ಅದನ್ನು ಉಪಯೋಗ ಮಾಡಿಕೊಳ್ಳಲು ಒಕ್ಕಲಿಗನಿಗೆ ಭಯ ಬಂದಿದೆ. ಆದ್ದರಿಂದ ರೈತರಿಗೆ ಹೆಚ್ಚಿನ ಮಟ್ಟದಲ್ಲಿ ಟ್ರೈನಿಂಗ್ ಕೊಡಬೇಕು, ಪ್ರತಿ ತಾಲ್ಲೂಕಿನ ಮಟ್ಟದಲ್ಲೂ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈವತ್ತು ಪಂಚಾಯಿತಿ ಬಗ್ಗೆ ವಿವಿಧ ಯೋಜನೆಗಳನ್ನು ತಯಾರು ಮಾಡುತ್ತಾರೆ. ಅಲ್ಲಿಯ ಗ್ರಾಮ ಸೇವಕರಾಗಲಿ, ಎಕ್ಸ್‌ಟೆನಷನ್ ಆಫೀಸರ್ ಆಗಲಿ ಸರ್ಕಾರಕ್ಕೆ ಕೊಡುವ ವರದಿಯೆಲ್ಲಾ ಬರೀ ಕಾಗದದಲ್ಲಿಯೇ ಇರುತ್ತದೆ. ಎಲ್ಲಾ ಪ್ಲಾನುಗಳು ಹಾಗೆಯೇ ಇದೆ, ಆದರೆ ಯಾವುದೂ ಕಾರ್ಯಗತ ಆಗುತ್ತಾ ಇಲ್ಲ. ಈವೊತ್ತು ಹೊಸದಾಗಿ ವ್ಯವಸಾಯ ಕಾಲೇಜುಗಳನ್ನು ತೆರೆಯುತ್ತಾ ಇದ್ದೀರಿ. ರಾಯಚೂರಿನಲ್ಲೂ ಕಾಲೇಜು ಮಾಡಿದ್ದೀರಿ, ಈ ಕಾಲೇಜುಗಳನ್ನು ಏನೊ ವೇಗದಿಂದ ತೆರೆಯುತ್ತಾ ಇದ್ದೀರಿ ಆ ಕಾಲೇಜಿನಿಂದ ಬರತಕ್ಕಂಥ ಒಕ್ಕಲಿಗ ಹುಡುಗರಿಗೆ ಏನು ಮಾಡುತ್ತಾ ಇದ್ದೀರಿ. ಆ ಹುಡುಗರಿಗೆ ಆದಷ್ಟು ಮಟ್ಟಿಗೆ ನಿರಾಶೆಯಾಗುತ್ತಾ ಇದೆ. ಈವೊತ್ತು ೧೩೮೦ ಕೋಟಿ ರೂಪಾಯಿಗಳು ವರಮಾನದಲ್ಲಿ, ಅರ್ಧದಷ್ಟಾದರೂ ಈ ವ್ಯವಸಾಯಕ್ಕೆ ಕೊಡಬೇಕಾಗಿತ್ತು, ೧೦೦ ಕೋಟಿ ರೂಪಾಯಿಗಳನ್ನು ಸಾಲದ ಮುಖಾಂತರ ಕೊಡಬೇಕಾಗಿತ್ತು. ೧೧ ಕೋಟಿ ರೂಪಾಯಿಗಳನ್ನು ಈ ಒಂದು ಮೈನರ್ ಇರ್ರಿಗೇಷನ್‌ಗೆ ಕೊಟ್ಟಿದ್ದೀರಿ,

(ಶ್ರೀ ಬಾಪೂಗೌಡ)

ಲಿಫ್ಟ್ ಇರಿಗೇಶನ್ ಪಂಪ್ ಸೆಟ್ಟುಗಳು ಮೊದಲಾದವುಗಳಿಗೆ ೨೦೦ ಕೋಟಿ ರೂಪಾಯಿಗಳನ್ನು ಕೊಡುವಂತೆ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ಬಹಳ ಕಡಿಮೆ ಹಣ ಇನ್ನು ವರ್ಷ ವರ್ಷಕ್ಕೆ ಅಗ್ರಿಕಲ್‌ಚರಲ್ ಗ್ರಾಜುಯೇಟ್ಸ್ ಏನು ಬರುತ್ತಿದ್ದಾರೋ ಅವರನ್ನು ಗ್ರಾಮಸೇವಕರು ಇರುವ ಕಡೆ ೧೦–೧೦ ಹಳ್ಳಿಗೆ ಒಬ್ಬೊಬ ಗ್ರಾಜುಯೇಟ್ಸ್ ಇಟ್ಟು ಆ ಒಕ್ಕಲಿಗರಿಗೆ ತಿಳುವಳಿಕೆ ಕೊಡುವಂತೆ ಅವಕಾಶ ಮಾಡಿಕೊಟ್ಟರೆ ಹೊಸ ಕ್ರಾಂತಿಯಾಗುತ್ತದೆ. ಮತ್ತು ಹೆಚ್ಚಿನ ರೀತಿಯಲ್ಲಿ ಹೊಸನಮೂನೆ ಗೊಬ್ಬರ ಉಪಯೋಗಿಸುವ ಅವಕಾಶ ಒಕ್ಕಲಿಗನಿಗೆ ಸಿಕ್ಕುತ್ತದೆ. ಸರ್ಕಾರ ಈ ಒಂದು ಅವಕಾಶವನ್ನು ಮುಂದಿನ ಅವಧಿಯಲ್ಲಾದರು ರೈತರಿಗೆ ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ದೇಶದಲ್ಲಿ ಈವೊತ್ತಿನ ದಿವಸ ಜನಸಂಖ್ಯೆ ಬೆಳೆಯುತ್ತಾಇದೆ. ಒಕ್ಕಲುತನದ ಹಿಡುವಳಿದಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಒಂದು ಪ್ರೋತ್ಸಾಹವನ್ನು ಕೊಡದೇ ಹೋದರೆ ನನಗೆ ಅನಿಸುತ್ತದೆ ೧೯೮೦ ರಲ್ಲಿ ಏನಾಗುತ್ತದೆ ಎಂದರೆ ದೇಶದಲ್ಲಿ ಹಾಹಾಕಾರ ಆಗುವ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ನಮ್ಮ ಹಿಂದೂಸ್ಥಾನದಲ್ಲಿ ಜನಸಂಖ್ಯೆ ಬಗ್ಗೆ ವಿಚಾರ ಮಾಡುವುದಾದರೆ ಪ್ರತಿಯೊಂದು ತಾಸಿಗೂ ೨೫೦೦ ಮಕ್ಕಳು ಹುಟ್ಟುತ್ತಿವೆ. ಅಂದರೆ ಪ್ರತಿ ದಿವಸ ೫೦ ಸಾವಿರ ಮಕ್ಕಳು ಹುಟ್ಟುತ್ತಿವೆ. ತಜ್ಞರು ಪ್ರಕಾರ ಹೇಳುವ ಪ್ರಕಾರ ೨೧ನೇ ಶತಮಾನದ ಒಳಗೆ ಆಗುವ ಪರಿಸ್ಥಿತಿ ನೋಡಿದರೆ ೧೦೦ ಕೋಟಿ ಜನಸಂಖ್ಯೆ ಆಗುತ್ತದೆ. ಆದುದರಿಂದ ಅದಕ್ಕೆ ತಕ್ಕಂತೆ ಆಹಾರವನ್ನು ಬೆಳೆಸುವ ಕಡೆ ಆ ಗಮನ ಕೊಡಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದು ಏಕೆಂದರೆ ನೀವು ಒಕ್ಕಲುತನಕ್ಕೆ ಎಷ್ಟೋ ಅನುಕೂಲ ಮಾಡಿಕೊಡುತ್ತಿದ್ದೀರಿ ಅಲ್ಲದೆ ವೀಕರ್ ಸೆಕ್ಷನ್‌ಗೂ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳುತ್ತೀರಾ. ಆದರೆ ರೈತರಿಗೆ ನೀವು ಕೊಟ್ಟಿರುವ ಭೂಮಿಯ ಮೇಲೆ ಪ್ರಾಣಇದೆ. ಎಷ್ಟೋ ರೈತರು ಬಾವಿ ತೆಗೆಯಬೇಕೆಂದು ತಕಾವಿ ಸಾಲ ತೆಗೆದುಕೊಂಡಿದ್ದಾರೆ. ಕೆಲವುಕಡೆ ಆ ಬಾವಿಯ ಕೆಲಸ ಪೂರ್ತಿಯಾಗದೆ ಹಾಗೆಯೇ ಇದೆ. ಈ ತರಹ ಪರಿಸ್ಥಿತಿ ಇರುವುದರಿಂದ ಸರ್ಕಾರ ದವರು ತಾವೆ ಸ್ವಂತವಾಗಿ ೫ ಏಕರೆ ೧೦ ಎಕರೆ, ಜಮೀನು ಇರುವಂಥ ಹಿಡುವಳಿದಾರರ ಜಮೀನುಗಳಲ್ಲಿ ಬಾವಿ ತೆಗೆಸಿಕೊಟ್ಟರೆ ಒಳ್ಳೆಯದು. ಆಮೇಲೆ ಐ. ಪಿ. ಸೆಟ್ಸ್ ಹಾಕಿ ನೀರುಕೊಡುವ ಪ್ರಯತ್ನ ಮಾಡಿದರೆ ಅನುಕೂಲವಾದೀತು. ಈ ರೀತಿ ಮಾಡಿದರೆ ಒಳ್ಳೆಯ ಕಾರ್ಯ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಮೊಬೈಲ್ ಟೆಸ್ಟಿಂಗ್ ಲ್ಯಾಬೊರೇಟರಿ ಉಪಯೋಗ ಪ್ರತಿಯೊಂದು ಜಿಲ್ಲೆಯಲ್ಲೂ ಕೊಡ ಸಿಗುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಅದು ಸರಿಯಾಗಿ ನಡೆಯಬೇಕಾದರೆ ಆಡಳಿತ ಸರಿಯಾಗಿ ಇರಬೇಕು. ಆ ಆಡಳಿತ ಏನಾದರೂ ಅಸಂತೋಷ ಬೆಳೆದರೆ ಅದು ಸರಿಯಾಗಿ ನಡೆಯುವುದಿಲ್ಲ. ಈ ರೀತಿ ಇದ್ದರೆ ಪ್ರಜಾಪ್ರಭುತ್ವದಲ್ಲಿ ಜನರು ಯಾವ ಅಭಿವೃದ್ಧಿ ಪರಿಸ್ಥಿತಿಗೂ ಬರುವುದಿಲ್ಲ ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ಆಡಳಿತದ ಮಷಿನರಿಯಲ್ಲಿ ಒಂದುರೀತಿಯ ತೃಪ್ತಿ ಶಾಂತಿ ಮತ್ತು ಸರಿಯಾದ ವಾತಾವರಣ ಇರುವುದಿಲ್ಲವೊ ಅಲ್ಲಿಯವರೆಗೆ ಈ ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ ಪ್ರತಿಯೊಂದು ಇಲಾಖೆಯಲ್ಲೂ ನೌಕರರು ತಮ್ಮ ಸೀನಿಯಾರಿಟಿ ಪ್ರಶ್ನೆ ಇತ್ಯರ್ಥವಾಗಿಲ್ಲ, ನಮಗೆ ಬರಬೇಕಾದ ಪ್ರಮೋಷನ್ ಸಿಕ್ಕಿಲ್ಲ ಎಂಬ ಕೂಗು ಎಬ್ಬಿಸಿದ್ದಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಅಫಿಷಿಯಲ್ ಆಗಲಿ ನಾನ್ ಅಫಿಷಿಯಲ್ ಆಗಲಿ ತಮ್ಮ ಸ್ವಾರ್ಥದ ಸಲುವಾಗಿ ತಮಗೆ ಬೇಕಾದಂಥ ವ್ಯಕ್ತಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ಈ ರೀತಿ ತಪ್ಪುಗಳನ್ನು ಮಾಡಿರುವುದರಿಂದ ಅನೇಕರ ಹೈಕೋರ್ಟಿಗೆ ರಿಟ್ ಹೋಗುವ ಪ್ರಸಂಗ ಬರುತ್ತದೆ. ಮಂತ್ರಿಗಳಿಗೆ ಬೇಕಾದವರೆ ಇರಲಿ ಸೆಕ್ರೆಟರಿಗಳಿಗೆ ಬೇಕಾದವರೆ ಇರಲಿ ಡೈರೆಕ್ಟರಿಗೆ ಬೇಕಾದವರೇ ಇರಲಿ ತಮಗೆ ಬೇಕಾದಂಥ ವ್ಯಕ್ತಿಗಳಿಗೆ ಅನುಕೂಲ ಮಾಡುವ ಒಂದು ಪ್ರಯತ್ನ ಮಾಡಬಾರದು ಹೀಗೆಮಾಡಿದರೆ ಏನಾಗುತ್ತದೆ ಎಂದರೆ ಪ್ರಜಾಪ್ರಭುತ್ವದಲ್ಲಿ ಹಾಕತಕ್ಕಂಥ ಕಾರ್ಯಕ್ರಮಗಳು ಮತ್ತು ಯೋಜನೆಗಳು ತೃಪ್ತಿಕರವಾಗಿ ಜನರನ್ನು ಮುಟ್ಟುವುದಿಲ್ಲ. ಈಗ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಡೈಮಾನಸ್ಟ್ರೇಟರ್ಸ್ ಏನಿದ್ದಾರೆ, ಅವರ ಪ್ರಮೋಷನ್‌ಲಿಸ್ಟ್ ಸೆಂಟ್ರಲ್ ಗೌರ್ನಮೆಂಟ್‌ಗೆ ಹೂಗಿ ಅಲ್ಲಿಂದ ಒಪ್ಪಿಗೆ ಪಡೆದು ರಾಜ್ಯ ಸರ್ಕಾರಕ್ಕೆ ಬಂತು ಎಂದು ಕೇಳಿದೆ ಅದು ಬಂದನಂತರ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದಕ್ಕೆ ಒಪ್ಪಿಗೆಯೂ ಆಗಿದೆ ಎಂದು ಕೇಳಿದ್ದೇನೆ. ಹೀಗೆ ಒಪ್ಪಿಗೆ ಪಡೆದ ನಂತರವು ಆ ಲಿಸ್ಟನ್ನು ಇನ್ನೂ ಕಾರ್ಯಗತ ಮಾಡುವ ಪರಿಸ್ಥಿತಿ ಬರಲಿಲ್ಲ. ಇಂತಹ ಒಂದು ಪರಿಸ್ಥಿತಿ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ಕೂಡ ಇದೆ. ಈರೀತಿ ಮಾಡುತ್ತಾಹೋದರೆ ಆಡಳಿತ ವರ್ಗ ಸರಿಯಾಗಿ ಇರುವುದಿಲ್ಲ. ನೌಕರರು ಎಂ. ಎಲ್. ಎ. ಹತ್ತಿರ ಬರುತ್ತಾರೆ. ನನಗೆ ಸೀನಿಯಾರಿಟಿ ಇದ್ದರೂ ಪ್ರಮೋಷನ್ ಸಿಕ್ಕಿಲ್ಲ. ನನಗೆ ಅನ್ಯಾಯ ಮಾಡಿದ್ದಾರೆ. ನೀವು ಬಂದು ನನಗೆ ಸ್ವಲ್ಪ ರೆಕಮಂಡ್ ಮಾಡುತ್ತೀರಾ ಎಂದ ಕೇಳುತ್ತಾರೆ. ತಪ್ಪುಗಳು ಬೇಕಾದಷ್ಟು ಆಗುತ್ತಿವೆ. ಇದನ್ನು ಆದಷ್ಟೂ ಕಡಿಮೆ ಮಾಡಲು ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಮೀನುಗಾರಿಕೆ ಹಾಗೂ ಅರಣ್ಯಗಳನ್ನು ಅಭಿವೃದ್ಧಿ ಮಾಡಲು ಇದಕ್ಕೆ ಪ್ರತ್ಯೇಕವಾಗಿ ಒಬ್ಬರು ಮಂತ್ರಿಗಳು ಇದ್ದಾರೆ. ಈಗ ಮೀನುಗಾರಿಕೆಗಾಗಿ ಒಬ್ಬರು ಮಂತ್ರಿಗಳು ಪ್ರತ್ಯೇಕವಾಗಿ ಮಾಡಿರುವುದರಿಂದ ಇವರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ ಮತ್ತು ಒಂದು ರೀತಿಯಲ್ಲಿ ಕ್ರಾಂತಿಕಾರಕವಾದ ಕೆಲಸಗಳನ್ನು ಮಾಡಿದ್ದಾರೆ. ಇವರು ಮಾಡಿರುವ ಕೆಲಸಗಳೆಲ್ಲಾ ಕೇವಲ ದಕ್ಷಿಣ ಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಯಲ್ಲಿ ಹೆಚ್ಚು ಕೆಲಸಗಳನ್ನು ಮಾಡಿರುವುದು ಕಂಡು ಬರುತ್ತದೆ. ನಮ್ಮ ಹೈದರಾಬಾದು ಕರ್ನಾಟಕದ ಭಾಗದಲ್ಲಿ ಹೆಚ್ಚು ಕೆಲಸಗಳನ್ನು ಮಾಡಿಲ್ಲ. ನಮ್ಮ ಭಾಗದಲ್ಲೂ ಕೂಡ ಕೃಷ್ಣಾ ಹಾಗೂ ಭೀಮಾ ನದಿಗಳ ದಂಡೆಯಲ್ಲಿ ಮೀನುಗಾರಿಕೆ ಕಸಬು ಉಳ್ಳ ಜನರಿದ್ದಾರೆ. ಇವರಿಗೂ ಸಾಕಷ್ಟು ಮಾಹಿತಿ ಕೊಟ್ಟು ತಿಳುವಳಿಕೆ ಕೊಟ್ಟು ಉತ್ತೇಜನ ಕೊಟ್ಟಿದ್ದರೆ ಇವರೂ ಮುಂದೆ ಬರಬಹುದಾಗಿತ್ತು. ಮಂತ್ರಿಗಳ ಗಮನ ಸಾಕಷ್ಟು ನಮ್ಮ ಕಡೆ ಇನ್ನೂ ಬರಲಿಲ್ಲ. ಇಲ್ಲಿಗೂ ಕೂಡ ಈಗಲಾದರೂ ಲಕ್ಷ್ಯ ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮ ಕಡೆ ಅರಣ್ಯದ ಅಭಿವೃದ್ಧಿಯೂ ಸಾಕಷ್ಟು ಆಗಿಲ್ಲ. ಇಲ್ಲಿಗೆ ಕೇವಲ ಒಂದು ಸಾವಿರ ರೂಪಾಯಿನಷ್ಟು ಹಣವನ್ನು ಅಫ್ಫೋರ್‌ಸ್ಟೇಷನ್ ಸ್ಕೀಂಗಾಗಿ ಇಲ್ಲಿ ನಾನ್ ಪ್ಲಾನ್‌ಡ್ ಬಾಬುಗಳಲ್ಲಿ ಖರ್ಚು ಮಾಡಲು ಸರಕಾರ ಕೊಡುತ್ತಿದ್ದರೂ, ಇದರ ಬಗ್ಗೆ ಸಾಕಷ್ಟು ಕೆಲಸಗಳಾಗದೇ ಕೆಲವು ವೇಳೆ ಹಣ ಕೂಡ ಲ್ಯಾಪ್ಸ್ ಆಗುವ ಸಂಭವವೂ ಉಂಟು. ನಮ್ಮ ಕಡೆ ಸಾಕಷ್ಟು ಹೈದರಾಬಾದು ಕರ್ನಾಟಕ ಪ್ರದೇಶದ ಅರಣ್ಯ ಬೆಳೆದಿಲ್ಲ. ಆದುದರಿಂದ ನಮ್ಮ ಮೀನುಗಾರಿಕೆ ಮಂತ್ರಿಗಳು ಹಾಗೂ ಅರಣ್ಯ ಇಲಾಖೆ ಮಂತ್ರಿಗಳು ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ವೆಂಕಟಗಿರಿಯಪ್ಪ (ಕೋಲಾರ) :— ಮಾನ್ಯ ಅಧ್ಯಕ್ಷರೇ, ನಮ್ಮ ರಾಷ್ಟ್ರದಲ್ಲಿ ಎಲ್ಲಾ ಕಡೆಯಲ್ಲೂ ವ್ಯವಸಾಯವೇ ಮುಖ್ಯ ಕಸಬಾಗಿದೆ. ನೂರಕ್ಕೆ ಎಪ್ಪತ್ತೈದು ಭಾಗ ಜನರ ಜೀವನವು ವ್ಯವಸಾಯವನ್ನು ಅವಲಂಬಿಸಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ವ್ಯವಸಾಯದಲ್ಲಿ ಕ್ರಾಂತಿಕಾರವಾದ ಬದಲಾವಣೆಗಳೇನೂ ಆಗದಿದ್ದರೂ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಕೆಲವು ಕಡೆಗಳಲ್ಲಿ ಮಾಡುತ್ತಿರುವ ಭಾಷಣಗಳಿಗೇನೂ ಕಡಿಮೆ ಇಲ್ಲ. ೨೩ ವರ್ಷಗಳಾದ ನಂತರವೂ ವ್ಯವಸಾಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿ ಎಷ್ಟು ಎನ್ನುವುದನ್ನು ನಾವು ಇಲ್ಲಿ ಸ್ವಲ್ಪ ಯೋಚನೆ ಮಾಡೋಣ. ಸ್ವತಂತ್ರ ಬಂದು ೨೩ ವರ್ಷಗಳಾದರೂ ಕೂಡ ರಾಷ್ಟ್ರ ಮಟ್ಟದಲ್ಲಿ ಆಗಲೀ ರಾಜ್ಯ ಮಟ್ಟದಲ್ಲಿ ಆಗಲಿ ಆಹಾರದ ವಿಚಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಮಾಡಿದ್ದಾರೆಯೇ ಎಂದು ನೋಡಿದರೆ ಖಂಡಿತವಾಗಿಯೂ ಮಾಡಿಲ್ಲ ಎನ್ನುವುದು ಕಂಡು ಬರುತ್ತದೆ. ಪ್ರತಿವರ್ಷವೂ ಈ ವಿಚಾರವನ್ನು ಈ ಸಭೆಯಲ್ಲಿ ಹಾಗೂ ಹೊರಗಡೆ ಸರಕಾರದವರು ಇನ್ನೊಂದೆರಡು ವರ್ಷಗಳಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸುತ್ತದೆ ಮತ್ತು ಪ್ರತಿ ವರ್ಷವೂ ಸುಮಾರು ೫೦ ಲಕ್ಷ ಟನ್ನುಗಳಷ್ಟು ಬೆಳೆ ಜಾಸ್ತಿಯಾಗುತ್ತದೆ ಇದರಿಂದ ಮುಂದೆ ಎಲ್ಲಾ ಸರಿಹೋಗುತ್ತದೆ ಎಂದು ಹೇಳುತ್ತಾರೆಯೇ ವಿನಃ ಆಹಾರದ ವಿಚಾರದಲ್ಲಿ ಇನ್ನೂ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಲು ಆಗಲಿಲ್ಲ. ಆಹಾರದ ಸ್ವಯಂ ಪರಿಪೂರ್ಣತೆ ಸಾಧಿಸಬೇಕಾದರೆ ಇದು ಹೆಚ್ಚು ನೀರಾವರಿ ಪ್ರದೇಶಗಳನ್ನು ಹೆಚ್ಚು ಮಾಡುವುದರ ಮೇಲೆ ಅವಲಂಬಿಸಿರುತ್ತದೆ. ಈ ದಿನ ತುಂಗಭದ್ರಾ ಹಾಗೂ ಇನ್ನೂ ಅನೇಕ ಭಾರಿ ನೀರಾವರಿ ಯೋಜನೆಗಳನ್ನು ನಿರ್ಮಿಸಲು ಕೆಲವು ಕಡೆ ಅಸ್ತಿಭಾರದ ಕಲ್ಲುಗಳನ್ನು ಹಾಕಿದ್ದಾರೆ ಮತ್ತೆ ಇನ್ನೂ ಕೆಲವು ಕಡೆ ಅಸ್ತಿಭಾರದ ಕಲ್ಲುಗಳನ್ನು ಹಾಕುವುದರಲ್ಲಿದ್ದಾರೆ. ಇವುಗಳನ್ನು ಇನ್ನೂ ಮಾಡುತ್ತಿರುವುದರಿಂದ ನೀರಾವರಿ ಪ್ರದೇಶವನ್ನು ಇನ್ನೂ ಹೆಚ್ಚು ಮಾಡಲು ಆಗಲಿಲ್ಲ. ನಮ್ಮ ದೇಶದಲ್ಲಿ ನೀರಾವರಿ ಶೇಕಡಾವಾರು ಹತ್ತರಷ್ಟು ಮಾತ್ರ ಇದೆ ಎಂದು ಕೇಳಿ ಬಹಳ ವ್ಯಸನಪಡಬೇಕಾಗಿದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರ ಪದೇಶ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ನೀರಾವರಿ ಅಭಿವೃದ್ಧಿ ಸಾಕಷ್ಟು ಆಗಿದೆ. ಆದರೆ ನಮ್ಮ ರಾಜ್ಯದಲ್ಲ ಕೇವಲ ಶೇಕಡಾ ಹತ್ತರಷ್ಟು ಮಾತ್ರ ನೀರಾವರಿ ಪ್ರದೇಶ ಇದೆ ಎಂದು ಕೇಳಿದರೆ ಖಂಡಿತವಾಗಿಯೂ ನಮಗೆ ಇದು ದುಃಖವಾಗುತ್ತದೆ. ನಾಲ್ಕನೇ ಯೋಜನೆಯಲ್ಲಿ ಇರುವ ಕರಡು ಪತ್ರದಲ್ಲಿ ಒಂದು ಕಡೆ ಅವರು ಹೀಗೆ ತಿಳಿಸಿದ್ದಾರೆ :

> "Whatever the long-term aspects of the problem, the recent experience of the State underscores the supreme importance of stepping up food production in the State on an urgent and immediate basis and of minimising the dependence of the farmer on the erratic monsoon. Any plan of development will

(ಶ್ರೀ ಪಿ. ವೆಂಕಟಗಿರಿಯಪ್ಪ)

> therefore have to outline a programme of action designed to increase productivity by an increase in the supply of inputs particularly irrigation."

ಆಹಾರದ ಉತ್ಪತ್ತಿ ಹೆಚ್ಚು ಮಾಡಬೇಕಾದರೆ ನೀರಾವರಿ ಇಲ್ಲದೇ ಅವಕಾಶವೇ ಇಲ್ಲ ಎಂದು ಅವರೂ ಹೇಳಿದ್ದಾರೆ. ವಾಸ್ತವವಾಗಿ ಕಾರ್ಯತಃ ಇಲ್ಲಿ ಮಾಡುತ್ತಿರುವುದಾದರೂ ಏನು ಎಂದರೆ ಯಾವುದೋ ಕೆಲವು ಯೋಜನೆಗಳನ್ನು ಎಂದರೆ ಕೃಷ್ಣಾ ಪ್ರಾಜೆಕ್ಟ್ ಕಟ್ಟಲು ಹಣ ಬೇಕು, ಹೇಮಾವತಿಗೆ ಹಣ ಬೇಕು ಮತ್ತು ಕಾವೇರಿ ಯೋಜನೆಗೆ ಹಣ ಬೇಕು ಎಂದು ಇದಕ್ಕಾಗಿ ಬಜೆಟ್ಟಿನಲ್ಲಿ ಹಣ ಒದಗಿಸಿದ್ದಾರೆ. ಆದರೆ ಹಳೆಯ ಮೈಸೂರಿನ ಭಾಗದಲ್ಲಿರುವ ಬಯಲು ಸೀಮೆ ಪ್ರದೇಶಗಳಾದ ಕೋಲಾರ ತುಮಕೂರು, ಚಿತ್ರದುರ್ಗ ಹಾಗೂ ಬಿದರೆ ಈ ಪ್ರದೇಶಗಳಲ್ಲಿ ಭಾರಿ ನೀರಾವರಿ ಯೋಜನೆಗಳನ್ನು ಮಾಡಲು ಇಲ್ಲವೇ ಮಿನಿಮಂ ಇರಿಗೇಷನ್ ಮಾಡಲು ಕೂಡ ಇಲ್ಲಿ ಅವಕಾಶ ಇಲ್ಲ. ಇಲ್ಲಿರುವ ಸಣ್ಣ ಕೆರೆಗಳಲ್ಲಿ ಮಣ್ಣು ಹೂತು ಅದರಲ್ಲಿ ನೀರೇ ನಿಲ್ಲುವುದಿಲ್ಲ. ಇಲ್ಲಿ ಬಾವಿಗಳನ್ನು ಮಾತ್ರ ತೋಡಿಸಲು ಅವಕಾಶ ಇವೆ. ಸಣ್ಣ ನೀರಾವರಿ ಬಾವಿಗಳನ್ನು ಇಲ್ಲಿ ಮಾಡಿಸಿಕೊಟ್ಟರೆ ಇಲ್ಲಿನ ಜನ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ನಮ್ಮ ಕೋಲಾರ ಹಾಗೂ ಇನ್ನಿತರ ಬಯಲು ಸೀಮೆಯ ಬಗ್ಗೆ ಹಿಂದೆ ಇದೇ ಸಭೆಯಲ್ಲಿ ಮಂತ್ರಿಗಳಾಗಿದ್ದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಸುಮಾರು ೪೮೦ ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಿ ಇದನ್ನು ರಾಜ್ಯದ ಎಲ್ಲಾ ಬಯಲು ಸೀಮೆ ಪ್ರದೇಶಗಳಲ್ಲಿ ಇರುವ ಜನರಿಗೆ ಅನುಕೂಲವಾಗುವಂತೆ ಕಾರ್ಯಗತ ಮಾಡುತ್ತೇವೆ ಎಂದು ಹೇಳಿದರು. ಆದರೆ ಅವರು ಹೇಳಿ ಒಂದೆರಡು ವರ್ಷಗಳಾದರೂ ಕಾರ್ಯತಃ ಯಾವುದೂ ಆಗಲಿಲ್ಲ. ಈಚೆಗೆ ಅವರ ಜಾಗದಲ್ಲಿ ಬಂದ ಮಂತ್ರಿಗಳು ಇದರ ಕಡೆಗೆ ಗಮನ ಕೊಡಲಿಲ್ಲ. ಇವೊತ್ತು ಕಾಂಗ್ರೆಸ್ಸು ಪಕ್ಷದಲ್ಲಿ ಸಿಂಡಿಕೇಟು ಹಾಗೂ ಇಂಡಿಕೇಟು ಎಂದಾಗಿ, ಇದರಲ್ಲಿ ಶ್ರೀ ಕೃಷ್ಣಪ್ಪನವರು ಇಂದು ಇಂಡಿಕೇಟಿನಲ್ಲಿದ್ದಾರೆ. ಸರಕಾರದ ಪರವಾಗಿ ಯಾರಾದರೂ ಒಬ್ಬರು ಮಂತ್ರಿಗಳು ಒಂದು ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಟ್ಟರೆ ಆಡಳಿತದಲ್ಲಿ ಇರುವ ಯಾವ ಮಂತ್ರಿಗಳೇ ಆಗಲೀ ಅದು ಕಾರ್ಯಗತವಾಗುವಂತೆ ಕೆಲಸ ಮಾಡಬೇಕು. ಇದರಲ್ಲಿ ರಾಜ್ಯದ ಹಿತ ಮುಖ್ಯವೇ ಹೊರತು ಯಾವುದೇ ಒಂದು ಕ್ಷೇತ್ರ ಮುಖ್ಯವಲ್ಲ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ಕೋಲಾರ, ತುಮಕೂರು ಹಾಗೂ ಇನ್ನಿತರ ಬಯಲುಸೀಮೆಯ ಪ್ರದೇಶಗಳಲ್ಲಿ ಇರುವ ಜನ ಬಾವಿಗಳ ನೀರನ್ನು ಪಡೆದೇ ನೀರಾವರಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಇಲ್ಲಿ ಹೆಚ್ಚು ಬಾವಿಗಳನ್ನು ತೆಗೆಸುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಮತ್ತು ಇದನ್ನು ಮಾಡಲೂ ಸಾಧ್ಯವಿದೆ. ನಾನು ಸುಮಾರು ಎರಡು ಮೂರು ವರ್ಷಗಳಿಂದಲೂ ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳ ಮೂಲಕ ಜನರಿಗೆ ಸಾಲ ಸಿಗಬೇಕು ಎಂದು ಕೇಳುತ್ತಿದ್ದೇನೆ ಮತ್ತು ಈ ಬ್ಯಾಂಕುಗಳಿಂದ ಸ್ವಲ್ಪಮಟ್ಟಿಗೆ ಜನರಿಗೆ ಸಾಲ ಸಿಗುತ್ತಿತ್ತು. ಆದರೆ ಇತ್ತೀಚೆಗೆ ಸೊಸೈಟಿಗಳ ಮೂಲಕ ಸಾಲವನ್ನು ಕೊಡಬೇಕೆಂದು ಮಾಡಿ ಇದರಲ್ಲಿ ಜನ ಮೊದಲು ತೆಗೆದುಕೊಂಡಿರುವ ಸಾಲದ ಹಣದಲ್ಲಿ ಶೇಕಡಾ ೯೦ ರಷ್ಟು ವಸೂಲು ಆಗಿರಬೇಕು ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಮಾಡಿದ್ದಾರೆ. ಇದನ್ನು ಮಾಡಿ ಸುಮಾರು ಎರಡು ವರ್ಷಗಳಿಂದಲೂ ಜನರಿಗೆ ಸುಲಭವಾಗಿ ಸಾಲ ಸಿಗುತ್ತಿಲ್ಲ. ಇಲ್ಲಿರುವ ಸುಮಾರು ೨೦ ಜನರೂ ಸೇರಿಕೊಂಡು ಮುಖ್ಯ ಮಂತ್ರಿಗಳಲ್ಲಿಗೆ ಹೋಗಿ ಇದರ ಬಗ್ಗೆ ವಿವರಗಳನ್ನು ಹೇಳಿ ಜನರಿಗೆ ಸುಲಭವಾಗಿ ಹಣ ಸಿಗುವ ವ್ಯವಸ್ಥೆ ಮಾಡಬೇಕೆಂದು ಕೇಳಿದೆವು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆಸಕ್ತಿ ವಹಿಸಿ ರಿಸರ್ವ್ ಬ್ಯಾಂಕಿನವರೊಡನೆ ಹಾಗೂ ಕೇಂದ್ರದವರೊಡನೆ ವ್ಯವಹಾರ ಮಾಡಿ ಯಾರು ಶೇಕಡಾ ಐವತ್ತುರಷ್ಟು ಹಣವನ್ನು ವಾಪಸು ಕೊಟ್ಟಿರುತ್ತಾರೋ ಅಂತಹವರಿಗೆ ಸಾಲಗಳನ್ನು ಕೊಡಬಹುದು ಎಂದು ಮಾಡಿದರೂ ಇದರಲ್ಲಿ ಶೇಕಡಾ ಐದು ಜನರು ಕೂಡ ಸಾಲ ತೆಗೆದುಕೊಳ್ಳಲು ಆಗುತ್ತಿಲ್ಲ ಮತ್ತು ಹಳೆಯ ಮೈಸೂರಿನಲ್ಲಿ ಈಗ ಇರತಕ್ಕಂತಹ ಪದ್ಧತಿ ಕಳೆದ ೩೦-೪೦ ವರ್ಷಗಳಿಂದಲೂ ಇರಲೇ ಇಲ್ಲ. ಹಿಂದೆ ಯೋಜನೆಗಳಿಗೋಸ್ಕರ ಸಾಲವನ್ನು ಕೊಡುವಾಗ ಸ್ವಲ್ಪ ಹೆಚ್ಚು ಕಂತುಗಳಲ್ಲಿ ಕೊಟ್ಟಿದ್ದರೂ ಅದನ್ನು ವಸೂಲು ಮಾಡುವುದಕ್ಕೆ ಆಗುತ್ತಿರಲಿಲ್ಲ. ಇಂದಿನ ಗ್ರಾಮಾಂತರ ಜನಗಳ ಪರಿಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಈಗ ಮಾಡಿರುವ ನಿಯಮಗಳಂತೆ ನಮ್ಮ ದೇಶದ ಜನರಿಗೆ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಹಿಂದಿನ ಕಾಲದಿಂದಲೂ ಒಂದು ರೀತಿಯಾದ ಪದ್ಧತಿಗೆ ಹಳ್ಳಿಗಾಡಿನ ಜನರು ಹೊಂದಿಕೊಂಡು ಬರುತ್ತಿದ್ದರು. ಆದರೆ ಇಂದು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಜನಕ್ಕೆ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಸರಕಾರದಿಂದ ಸಾಕಷ್ಟು ನೆರವು ಬೇಕೆಂದು ಕೇಳುತ್ತಿದ್ದರೂ ಅವು ಸಿಗುತ್ತಿಲ್ಲ, ಸಾಲ ಕೇಳಿದರೆ ಅದೂ ಸರಿಯಾಗಿ ಸಿಗುತ್ತಿಲ್ಲ. ಹಳೆಯ ಮೈಸೂರಿನಲ್ಲಿ ಇರುವ ಕೆಲವು ಕ್ಷೇತ್ರಗಳಲ್ಲಿರುವವರಿಗೇನೇ ಎಲ್ಲ ಸೌಕರ್ಯಗಳೂ ಸಿಗುತ್ತಿವೆ ಮತ್ತು ಈ ರೀತಿಯಾಗಿ ಪ್ರಾದೇಶಿಕ ಅನ್ಯಾಯವಾಗುತ್ತಿದೆ ಎನ್ನುವುದು ಇದರಿಂದ ಖಚಿತವಾಗುತ್ತದೆ.

3-30 P.M.

ಆದರೆ ಒಂದು ವೇಳೆ ಆ ತರಹ ಇಲ್ಲದೇ ಹೋದರೆ ಇಷ್ಟು ನ್ಯಾಯವಾದ ವಿಷಯದ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು. ನಾವು ೭೦ ಜನರು ರುಜು ಹಾಕಿ ಕೊಟ್ಟಿದ್ದೇವೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳದಿರುವುದನ್ನು ನೋಡಿದರೆ ಇದು ನಿಜವಾಗಿಯೂ ಪ್ರಜಾ ಪ್ರಭುತ್ವವೇ ಅಥವಾ ಜನರ ಸರ್ಕಾರವೇ ಎಂದು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ನಮ್ಮ ಭಾಗದ ಮಂತ್ರಿಗಳು ಈ ಬಗ್ಗೆ ಯಾವ ಆಸಕ್ತಿಯನ್ನೂ ಸಹ ತೋರಿಸುತ್ತಿಲ್ಲ, ಆ ರೀತಿ ಆಸಕ್ತಿ ತೋರಿಸಿದರೆ ಎಲ್ಲಿ ಮಂತ್ರಿ ಪದವಿ ಹೋಗುತ್ತದೋ ಎಂಬ ಕಾರಣದಿಂದ ಅವರು ಈ ಬಗ್ಗೆ ಗಮನ ಕೊಡುತ್ತಿಲ್ಲ. ಅವರಿಗೆ ಮಂತ್ರಿ ಪದವಿ ಇದ್ದರೆ ಸಾಕು. ವ್ಯವಸಾಯ ಮಂತ್ರಿಗಳು ಇರುವುದು ಇಡೀ ರಾಜ್ಯಕ್ಕೆ. ಅವರು ಕೇವಲ ಒಂದು ಜಿಲ್ಲೆಯ ಅಭಿವೃದ್ಧಿಯನ್ನು ನೋಡಿಕೊಂಡರೆ ಆಗುವುದಿಲ್ಲ. ಇಡೀ ರಾಜ್ಯದ ಅಭಿವೃದ್ಧಿಯನ್ನು ನೋಡಿಕೊಳ್ಳಬೇಕು. ಹಳೆಯ ಮೈಸೂರಿನ ಬೈಲು ಪ್ರದೇಶಗಳಲ್ಲಿ ದೊಡ್ಡ ನೀರಾವರಿ ಯೋಜನೆಗಳನಾಗಲೀ, ಸಣ್ಣ ನೀರಾವರಿ ಯೋಜನೆಗಳನ್ನಾಗಲೀ ಕೈಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಬಾವಿಗಳನ್ನು ತೋಡಿಸುವುದಕ್ಕೆ ಅಗ್ರ ಪ್ರಾಶಸ್ತ್ಯ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಯಾವ ಸೊಸೈಟಿಗಳು ೫೦ ಪರಸೆಂಟ್ ಬಾಕಿಯನ್ನು ಕೊಟ್ಟಿವೆಯೋ ಆ ಸೊಸೈಟಿಗಳಿಗೆ ಮತ್ತೆ ಹಣವನ್ನು ಒದಗಿಸಬೇಕು. ಇಲ್ಲದಿದ್ದರೆ ರಾಜಕೀಯ ಇದೆ ಎಂಬ ಅನುಮಾನ ನಮಗೆ ಬರುತ್ತದೆ. ಇವತ್ತು ರೈತರಿಗೆ ಬ್ಯಾಂಕ್‌ಗಳ ಮೂಲಕ ಸಾಲ ಕೊಡಿಸುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾಗ್ಗೆ. ಆದರೆ ಇವತ್ತು ೫-೧೦ ಎಕರೆ ಜಮೀನು ಇರತಕ್ಕಂಥ ಭೂ ಮಾಲೀಕರಿಗೆ ಮಾತ್ರ ಬ್ಯಾಂಕುಗಳಿಂದ ಸಾಲ ಸಿಗುತ್ತಿದೆ. ಒಂದು ಎಕರೆ, ಅರ್ಧಎಕರೆ ಇರುವ ರೈತರನ್ನು ಬ್ಯಾಂಕ್‌ನವರು ಮಾತೂ ಕೂಡ ಆಡಿಸುತ್ತಿಲ್ಲ. ಇಂತಹ ಸಣ್ಣ ಸಣ್ಣ ರೈತರಿಗೂ ಕೂಡ ಬ್ಯಾಂಕ್‌ಗಳಿಂದ ಸಾಲ ಸಿಗುವಂತಹ ಏರ್ಪಾಡನ್ನು ಸರ್ಕಾರದವರು ಮಾಡಬೇಕು. ಇವತ್ತು ರೈತರಿಗೆ ಪಂಪ್‌ಸೆಟ್ಟು ಹಾಕಿಸಿಕೊಳ್ಳಲು ತಕಾವಿ ಸಾಲ ಮುಂತಾದ ಅನೇಕ ರೀತಿಯ ಸಾಲಗಳನ್ನು ಕೊಡಲಾಗುತ್ತಿದೆ. ಇದರ ಬದಲು ರೈತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಒಂದೇ ಸಲ ಸರ್ಕಾರದವರು ಮಾಡಿಕೊಟ್ಟು ಆ ಹಣವನ್ನು ಕಂತುಗಳ ಮೂಲಕ ಪಡೆದುಕೊಳ್ಳುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಕಂತನ್ನು ಕಟ್ಟದಿದ್ದರೆ ಅಂತಹ ಜಮೀನನ್ನು ಬೇಕಾದರೆ ಹರಾಜು ಮಾಡಿ ಇನ್ನೊಬ್ಬರಿಗೆ ಕೊಡಿ. ಆದರೆ ಎಲ್ಲ ಅನುಕೂಲಗಳನ್ನು ಒಂದೇ ಸಲ ಮಾಡಿಕೊಳ್ಳುವುದು ಒಳ್ಳೆಯದು. ಇವತ್ತು ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟಿಸಿ ಕಂತುಗಳ ಮೇಲೆ ಕೊಡುತ್ತಿರುವಂತೆ ಇವರಿಗೂ ಅದೇ ರೀತಿ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟು ಕಂತುಗಳ ಮೇಲೆ ಹಣ ವಸೂಲಿ ಮಾಡಬೇಕು. ಈ ಬಗ್ಗೆ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ ರೈತರಿಗೆ ಏನೇನು ಅನುಕೂಲಗಳು ಬೇಕೋ ಅದನ್ನೆಲ್ಲಾ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇತ್ತೀಚೆಗೆ ಹೌಸಿಂಗ್ ಬೋರ್ಡಿನವರು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿ ದೊಡ್ಡವರಿಗೆ ಕಂತುಗಳ ಮೂಲಕ ಕೊಡುತ್ತಿದ್ದಾರೆ. ಈ ಪ್ರಕಾರ ದೊಡ್ಡ ದೊಡ್ಡ ಭೂ ಮಾಲೀಕರಿಗೆ ಮಾತ್ರ ಅನುಕೂಲಗಳು ಸಿಗುವಂತೆ ಏರ್ಪಾಡು ಮಾಡದೇ ಸಣ್ಣ ಸಣ್ಣ ರೈತರಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ಇವತ್ತು ವಿದ್ಯುಚ್ಛಕ್ತಿ ಮಂಡಲಿ ಅಸ್ತಿತ್ವಕ್ಕೆ ಬಂದ ಮೇಲೆ ಒಂದು ಉದಾತ್ತವಾದ ತತ್ವದ ಮೇಲೆ ಮಂಡಲಿ ಕೆಲಸ ಮಾಡುತ್ತಿದೆ ಎಂದು ಹೇಳುತ್ತಿದ್ದಾಗ್ಗೆ. ಇವತ್ತು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ವಿದ್ಯುಚ್ಛಕ್ತಿ ಕೊಡಬೇಕಾದರೆ ಅದಕ್ಕೆ ತಗಲುವ ಖರ್ಚಿನ ಬಡ್ಡಿ ಬಂದರೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳುತ್ತಾರೆ. ಈ ಒಂದು ವಿಚಿತ್ರವಾದ ಕಾನೂನಿನಿಂದ ಹೊಸ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸಿಗುವುದೇ ಕಷ್ಟವಾಗಿದೆ. ಈ ಬಗ್ಗೆ ಒಂದು ಉದಾರವಾದ ನೀತಿಯನ್ನು ಅನುಸರಿಸುವಂತೆ ಬೋರ್ಡಿನವರಿಗೆ ಸರ್ಕಾರದವರು ಒತ್ತಾಯಪಡಿಸಬೇಕೆಂದು ಹೇಳುತ್ತೇನೆ. ಇವತ್ತು ಅನೇಕ ರೈತರಿಗೆ ತಮ್ಮ ಜಮೀನಿನಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬುದು ಗೊತ್ತಿಲ್ಲ. ಯಾವಯಾವುದೋ ಬೆಳೆ ಬೆಳೆದು ನಷ್ಟ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಸರ್ಕಾರದವರು ಇತ್ತೀಚೆಗೆ ಸಾಯಿಲ್ ಟೆಸ್ಟಿಂಗ್ ಲ್ಯಾಬರೋಟರಿಯನ್ನು ಅಲ್ಲಲ್ಲೇ ಸ್ಥಾಪನೆ ಮಾಡುತ್ತಿದ್ದಾರೆ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಈ ಕೇಂದ್ರಗಳನ್ನು ಸ್ಥಾಪನೆ ಮಾಡಿ ಆ ಭಾಗದ ಎಲ್ಲ ರೈತರು ತರುವ ಮಣ್ಣನ್ನು ಒಂದು ವಾರದೊಳಗೆ ಟೆಸ್ಟ್ ಮಾಡಿಕೊಡುವಂತಹ ಏರ್ಪಾಡು ಮಾಡಬೇಕು. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದು ಮಣ್ಣಿನ ಪರೀಕ್ಷಾ ಕೇಂದ್ರವನ್ನು ಕೂಡಲೇ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಗೊಬ್ಬರದ ಬೆಲೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಕಳೆದ ಒಂದೆರಡು ವರ್ಷಗಳಲ್ಲಿ ಗೊಬ್ಬರದ ಬೆಲೆ ವಿಪರೀತ ಹೆಚ್ಚಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡುವುದು ಸರಿಯಲ್ಲ ಎಂದು ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ಹೇಳಬೇಕು. ವ್ಯವಸಾಯ ಇಲಾಖೆಯಲ್ಲಿರುವ ವ್ಯವಸಾಯ ಇಂಜಿನಿಯರಿಂಗ್ ವಿಭಾಗದವರು ರೈತರಿಗೆ ಬುಲ್‌ಡೋಜರ್ ಒದಗಿಸುತ್ತಿದ್ದರು, ಬಾವಿ ತೋಡಲು ಬೋರಿಂಗ್ ರಿಗ್ಸ್‌ನ ಅನುಕೂಲವನ್ನು ಒದಗಿಸುತ್ತಿದ್ದರು. ಕಡಿಮೆದರದಲ್ಲಿ ಈ ಅನುಕೂಲಗಳನ್ನು ರೈತರಿಗೆ ಒದಗಿಸಲಾಗುತ್ತಿತ್ತು. ಇತ್ತೀಚೆಗೆ ಈ ವಿಭಾಗವನ್ನು ಕೃಷಿ ಉದ್ಯಮ

(ಶ್ರೀ ಪಿ. ವೆಂಕಟಗಿರಿಯಪ್ಪ)

ಸಂಸ್ಥೆಗೆ ವರ್ಗಾಯಿಸುವುದಕ್ಕೆ ತೀರ್ಮಾನ ಕೈಕೊಂಡಿದ್ದಾರೆ. ಈ ಸಂಸ್ಥೆಗೆ ಶ್ರೀಮಾನ್ ಸಿದ್ದಯ್ಯನವರೇ ಚೇರ್‌ಮನ್. ಈ ಒಂದು ವರ್ಗಾವಣೆಗೆ ಶ್ರೀ ಮಾನ್ ಸಿದ್ಧಯ್ಯನವರು ಕಾರಣರೋ ಅಥವಾ ವ್ಯವಸಾಯ ಇಲಾಖೆಯ ಮಂತ್ರಿಗಳು ಕಾರಣರೋ ಗೊತ್ತಿಲ್ಲ. ಈ ಒಂದು ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ರಾಜಕೀಯ ಮಂಡಲಿ ಆಗಬಾರದು ಎಂಬುದೇ ನನ್ನ ಅಭಿಪ್ರಾಯ. ಅಧಿಕಾರಗಳ ಮತ್ತು ಡೈರೆಕ್ಟರ್‌ಗಳ ಮಧ್ಯೆ ಹೊಂದಾಣಿಕೆ ಇಲ್ಲದೆ ಈ ರೀತಿ ಮಾಡಿದರೊ ಏನೋ ಗೊತ್ತಿಲ್ಲ. ಈ ರೀತಿ ಮಾಡಿದ್ದು ಸರಿಯಲ್ಲ. ವ್ಯವಸಾಯ ಇಂಜಿನಿಯರಿಂಗ್ ವಿಭಾಗವನ್ನು ಅಗ್ರೋ ಇಂಡಿಸ್ಟ್ರೀಸ್ ಕಾರ್ಪೊರೇಷನ್‌ಗೆ ಸೇರಿಸಿದರೆ ಅವರು ಸರ್ಕಾರದವರು ಕೊಡುತ್ತಿದ್ದ ರಿಯಾಯಿತಿಗಳನ್ನು ಮತ್ತು ಸಬ್ಸಿಡಿಯನ್ನು ಕೊಡುವುದಿಲ್ಲ. ಅವರು ಕಮರ್ಷಿಯಲ್ ಬೇಸಿಸ್ ಮೇಲೆ ತಮ್ಮ ವ್ಯವಹಾರ ನಡೆಸುತ್ತಾರೆ. ಒಂದು ಅಡಿ ಬೊರಿಂಗ್ ಮಾಡಲು ಸರ್ಕಾರದವರು ೭ ರೂಪಾಯಿ ಚಾರ್ಜು ಮಾಡುತ್ತಿದ್ದರೆ ಅವರು ೨೫ ರೂಪಾಯಿ ಚಾರ್ಜು ಮಾಡಬಹುದು. ರೈತರಿಗೆ ತೊಂದರೆ ಮಾಡಲು ಮಾನ್ಯ ಮಂತ್ರಿಗಳು ಈ ರೀತಿ ಮಾಡಿದ್ದಾರೆಂದು ಕಾಣುತ್ತದೆ. ಈ ವಿಭಾಗವನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ವಹಿಸಿದ ಮೇಲೂ ಕೂಡ ದರಗಳನ್ನು ಜಾಸ್ತಿ ಮಾಡುವುದಿಲ್ಲ ಎಂಬ ಭರವಸೆಯನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಕೊಡಬೇಕೆಂದು ಹೇಳುತ್ತೇನೆ. ವ್ಯವಸಾಯ ವಿಶ್ವ ವಿದ್ಯಾನಿಲಯದಲ್ಲಿ ಅನೇಕ ಸಂಶೋಧನಾ ಕೇಂದ್ರಗಳು ಇವೆ. ಈ ಕೇಂದ್ರಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ವ್ಯವಸಾಯ ವಿಶ್ವವಿದ್ಯಾನಿಲಯಕ್ಕೂ ವ್ಯವಸಾಯ ಇಲಾಖೆಗೂ ಹೊಂದಾಣಿಕೆ ಇಲ್ಲವಾಗಿದೆ. ಒಬ್ಬೊಬ್ಬರು ಒಂದೊಂದು ರೀತಿಯ ಸಲಹೆಗಳನ್ನು ರೈತರಿಗೆ ಬೆಳೆಯ ಬಗ್ಗೆ ರೇಡಿಯೋ ಮೂಲಕ ಕೊಡುತ್ತಿದ್ದಾರೆ. ಇವೆರಡೂ ಕೂಡ ಸರ್ಕಾರದ ಹಣದಿಂದಲೇ ನಡೆಯುತ್ತಿರುವುದರಿಂದ ಒಂದು ಹೊಂದಾಣಿಕೆ ಇರುವುದು ಅಗತ್ಯ. ಸಂಶೋಧನೆಯ ಬಗ್ಗೆ ಹೊಂದಾಣಿಕೆ ಇರುವುದು ಒಳ್ಳೆಯದು. ಈ ಬಗ್ಗೆ ಒಂದು ಕಮಿಟಿ ಮಾಡಿ ಯಾವ ವಿಷಯದಲ್ಲಿಯೂ ಕೂಡ ಎರಡು ಅಭಿಪ್ರಾಯಗಳು ಬರದಂತೆ ನೋಡಿ ಕೊಳ್ಳಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ವ್ಯವಸಾಯಗಾರರ ಮಕ್ಕಳಿಗೆ ಹೆಚ್ಚಿನ ಪ್ರವೇಶಾವಕಾಶದ ಸೌಲಭ್ಯ ಸಿಗುವಂತೆ ಈಗಿನ ಕಾನೂನನ್ನು ಬದಲಾವಣೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಅಮಿನ್ (ಉಡುಪಿ) ;—ಮಾನ್ಯ ಸಭಾಧ್ಯಕ್ಷರೇ ಇವೊತ್ತು ಈ ಸದನದ ಮುಂದೆ ವ್ಯವಸಾಯ, ಪಶು ಸಂಗೋಪನ, ಅರಣ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮೂರು ಜನ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಈ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಮುಂದೆ ಹೇಳ ಬಯಸುತ್ತೇನೆ. ವ್ಯವಸಾಯ, ಪಶುಸಂಗೋಪನೆ ಮತ್ತು ಅರಣ್ಯ ಈ ವಿಷಯಗಳ ಬಗ್ಗೆ ಈ ಸದನದ ಸದಸ್ಯರನೇಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಇನ್ನೂ ಮಾತನಾಡುವವರು ಇದ್ದಾರೆ. ಇದರಲ್ಲಿ ವ್ಯವಸಾಯದಲ್ಲಿ ಹೊಂದಿಕೊಂಡಿರುವ ಮೀನುಗಾರಿಕೆಯನ್ನು ಕುರಿತು ನಾನು ಸ್ವಲ್ಪ ವಿಷಯಗಳನ್ನು ಹೇಳಲು ಇಚ್ಛಿಸುತ್ತೇನೆ. ಇಂದು ನಮ್ಮ ದೇಶದಲ್ಲಿರತಕ್ಕ ರಾಜಕೀಯ ವಾತಾವರಣದಲ್ಲಿ ದೇಶದ ಸಂಸ್ಕೃತಿ, ರಾಜ್ಯದ ಸಂಸ್ಕೃತಿ, ಜನಸಾಮಾನ್ಯರ ಸಂಸ್ಕೃತಿ ಕೂಡ ಚಿತ್ರ ವಿಚಿತ್ರವಾಗಿದೆ. ಇಂಥಾ ಕಾಲದಲ್ಲಿ ನಾವು ಈ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟುಕೊಂಡು ಸಾಮಾನ್ಯ ಚರ್ಚೆಯನ್ನು ಮಾಡುತ್ತಿದ್ದೇವೆ. ಇದರ ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಆದಾಗ್ಯೂ ನಾನು ಮೀನುಗಾರಿಕೆಯನ್ನು ಕುರಿತು ಸ್ವಲ್ಪ ಹೇಳಬಯಸುತ್ತೇನೆ. ಇತ್ತೀಚೆಗೆ ಮೀನು ಮತ್ತು ಮೀನುಗಾರಿಕೆ ಜನರ ಹೆಚ್ಚಿನ ಗಮನವನ್ನು ಸೆಳೆಯುತ್ತಿದೆ. ಇದಕ್ಕೆ ಪತ್ರಿಕೆಗಳು, ಪತ್ರಿಕಾಕರ್ತರು ಮತ್ತು ತಮ್ಮೆಲ್ಲರ ಅನುಕಂಪ ದೊರತು ಆ ವಿಷಯ ಹೆಚ್ಚಿನ ಪ್ರಚಾರವಾಗಿರುವುದು ಕಾರಣವಾಗಿರಬಹುದು. ನಮ್ಮ ದೇಶದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡತಕ್ಕದ್ದು ಮತ್ತು ಮೀನುಗಾರಿಕೆಯನ್ನು ಬೆಳೆಸುವಂಥಾದ್ದು ಅವಶ್ಯಕ. ನಮ್ಮ ದೇಶದ ಮಟ್ಟದಲ್ಲಿ ಮತ್ತು ನ್ಯಾಷನಲ್ ಲೆವೆಲ್‌ನಲ್ಲಿ ನಮ್ಮ ರಾಜ್ಯದ ಮಟ್ಟದಲ್ಲಿ ಮೀನುಗಾರಿಕೆಯ ಅಭಿವೃದ್ಧಿ ಬಗ್ಗೆ ಏನು ಗಮನಾರ್ಹವಾದ ಯೋಜನೆಯನ್ನು ಮಾಡಿದ್ದೇವೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಈ ಬೇಡಿಕೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು. ನಮ್ಮ ರಾಜ್ಯದ ಕರಾವಳಿ ಪ್ರದೇಶದ ಮೀನುಗಾರಿಕೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಇವೊತ್ತು ಈ ಒಂದು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಈ ಬೇಡಿಕೆಯಲ್ಲಿ ಒದಗಿಸಿರುವಂಥಾ ಆರ್ಥಿಕ ವ್ಯವಸ್ಥೆ ಸಾಕಾಗುತ್ತದೆಯೇ ಎಂದು ಚೆನ್ನಾಗಿ ಆಲೋಚನೆ ಮಾಡಬೇಕಾಗಿದೆ. ಈಗ ನಾವು ಇಲ್ಲಿ ನೋಡುವಂತೆ ಮೀನುಗಾರಿಕೆಯನ್ನು ವ್ಯವಸಾಯ ಇಲಾಖೆಯಲ್ಲಿ ಸೇರಿಸಿಕೊಂಡಿದ್ದಾರೆ. ವ್ಯವಸಾಯ ಎಂದರೆ ನೆಲದ

ಬೇಸಾಯ, ಕಡಲಿನ ಬೇಸಾಯ ಎಂದು ಹೇಳುವವರು ಇದ್ದಾರೆ. ನೆಲದ ಬೇಸಾಯ ಎಂದರೆ ಒಂದು ಸೀಮಿತವಾದ ಸ್ಥಳದಲ್ಲಿ ಬೀಜವನ್ನು ಬಿತ್ತಿ ಬೆಳೆಯನ್ನು ತೆಗೆಯುವುದು ಎಂದು ನಿಶ್ಚಯ ಮಾಡಿದ್ದಾರೆ. ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ನಮಗೆ ಸಿಕ್ಕುವ ಸಂಪತ್ತು ಎಷ್ಟು ಎಂಬುದನ್ನು ನಿಗದಿ ಮಾಡುವುದಕ್ಕೆ ಬರುತ್ತದೆ. ಆದರೆ ಕಡಲಿನಲ್ಲಿ ಬರುವ ಸಂಪತ್ತು ಎಷ್ಟು, ಎಷ್ಟು ಉತ್ಪತ್ತಿಯನ್ನು ನಾವು ಅದರಲ್ಲಿ ತೆಗೆಯಬಹುದು, ಎಂಬುದನ್ನು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಮೀನುಗಾರಿಕೆಯ ಅಭಿವೃದ್ಧಿಯನ್ನು ಯೋಚಿಸುವ ಯೋಜನಾಕಾರರು ನಮ್ಮ ರಾಜ್ಯದ ಈ ಇಲಾಖೆಯ ಅಧಿಕಾರಿಗಳಾಗಲೀ ಮತ್ತು ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಸಚಿವರಾಗಲೀ ವಿದೇಶ ಪ್ರವಾಸ ಮಾಡಿರುವಷ್ಟು ಬೇರೆ ಯಾವ ಇಲಾಖೆಯ ಸಚಿವರೂ, ಅಧಿಕಾರಿಗಳೂ ಹೋಗಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ವಿದೇಶ ಪ್ರವಾಸ ಹೋಗಿ ತರಪೇತಿ ಪಡೆದಷ್ಟು ಬೇರೆ ಯಾವ ಇಲಾಖೆಯವರೂ ಪಡೆದಿಲ್ಲ; ಇಂಥಾ ಸೌಲಭ್ಯವನ್ನು ಈ ಇಲಾಖೆಯವರು ಪಡೆದಿದ್ದಾರೆ. ಪಾಶ್ಚಾತ್ಯದೇಶದಲ್ಲಿ ಮೀನುಗಾರಿಕೆಯ ಅವಶ್ಯಕತೆಯನ್ನು ಮನಗಂಡಂತೆ ನಮ್ಮ ದೇಶದಲ್ಲಿ ಇಷ್ಟರವರೆಗೂ ಮನಗಂಡಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವೊತ್ತು ಮೀನುಗಾರರು ಶೋಷಕವರ್ಗವಾಗಿದ್ದಾರೆ. ಇವರ ಅಭಿವೃದ್ಧಿ ಮತ್ತು ಅವರ ಬೆಳವಣಿಗೆ ಇನ್ನೂ ಸಾಕಷ್ಟು ಆಗಿಲ್ಲ. ಸರ್ಕಾರದವರು ಇವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು ಅವಶ್ಯಕ. ಮೀನು ಸಾಕಾಣಿಕೆಗೆ ಫಿಷಿಕಲ್‌ಚರ್ ಎಂದು ಹೇಳುತ್ತಾರೆ. ಆಳವಾದ ಸಮುದ್ರದ ಮೀನುಗಾರಿಕೆಗೆ ಮೆರೀನ್ ಫಿಷರೀಸ್ ಎಂದು ಹೇಳುತ್ತಾರೆ. ಮೀನು ಸಾಕಾಣಿಕೆ, ಸಮುದ್ರ ಮತ್ತು ಸಾಗರದ ಮೀನುಗಾರಿಕೆ ಎಂದು ಬೇರೆ ಬೇರೆ ವಿಷಯವಾಗಿದೆ. ಮೆರೀನ್ ಫಿಷರೀಸ್ ಒಂದು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಕೊಡದಿದ್ದರೆ ಮೀನುಗಾರಿಕೆ ಅಭಿವೃದ್ಧಿಯಾಗುವುದು ಕಷ್ಟವಾಗುತ್ತದೆ. ಮೀನನ್ನು ಬೆಳೆಸುವುದಕ್ಕೆ ಫಿಷಿಕಲ್‌ಚರ್ ಎಂದು ಹೇಳುತ್ತಾರೆ. ರೈತರು ಬೇಸಾಯ ಮಾಡುವ ಕಾಲವನ್ನು ಬಿಟ್ಟು ಉಳಿದ ಸಮಯದಲ್ಲಿ ಸ್ವಲ್ಪ ಮೀನನ್ನು ಬೆಳೆಸುವುದಾದರೆ ಅದು ರೈತರಿಗೆ ತಮ್ಮ ಉಪಯೋಗಕ್ಕಾಗಿಯೂ ಬರುತ್ತದೆ, ಮತ್ತು ಅವರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಆಳವಾದ ಕಡಲಿನ ಮೀನುಗಾರಿಕೆಯೇ ಬೇರೆ. ಮೀನು ಸಾಗಾಣಿಕೆಯೇ ಬೇರೆ. ಇವೊತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಮೀನಿನ ಸೇವನೆ ಒಂದು ದೆಲಿಕೆಸಿಯಾಗಿದೆ ಅವರು ಅಲ್ಲಿ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆಗೆ ಹೆಚ್ಚಿನ ಗಮನವನ್ನು ಕೊಟ್ಟರೂ ಕೂಡ ವಿಶೇಷವಾಗಿ ಇದರ ಸ್ಥೂಲ ಪರಿಚಯವನ್ನು ಮಾಡಿಕೊಂಡಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಆಳವಾದ ಸಮುದ್ರದಲ್ಲಿ ಮೀನುಗಾರಿಕೆಯನ್ನು ಮಾಡಬೇಕಾಗಿದ್ದರೆ ಟ್ರಾಲರ್‌ಗಳು ಬೇಕಾಗಿವೆ. ಒಂದು ಟ್ರಾಲರ್‌ಗೆ ೮ ಲಕ್ಷ ರೂಪಾಯಿಗಳಾಗುತ್ತದೆ. ಈ ಮೀನುಗಾರಿಕೆ ಬೇಡಿಕೆಗೆ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ೩೨ ಲಕ್ಷ ರೂಪಾಯಿಗಳಿಗೆ ೪ ಟ್ರಾಲರ್‌ಗಳು ಬರುವುದಕ್ಕೆ ಸಾಧ್ಯವಿಲ್ಲ. ಬರೀ ಟ್ರಾಲರ್‌ಗಳನ್ನು ತೆಗೆದುಕೊಂಡರೆ ಇನ್ನುಳಿದ ಮೀನುಗಾರಿಕೆಯ ಕೆಲಸ ಹೇಗೆ ಆಗುತ್ತದೆ, ನಾನು ತಮಗೆ ಜಪಾನ್ ದೇಶದ ಒಂದು ಉದಾಹರಣೆಯನ್ನು ಹೇಳುವುದಾದರೆ ಅಲ್ಲಿ ಮೀನುಗಾರಿಕೆಗೆ ಒದಗಿಸಿರುವಂಥ ಸೌಲಭ್ಯವನ್ನು ನೋಡಿದರೆ ನಮ್ಮ ದೇಶದಲ್ಲಿ ಮೀನುಗಾರಿಕೆಗೆ ಒದಗಿಸಿರುವ ಸೌಲಭ್ಯ ಏನೇನು ಸಾಲದು. ನಮ್ಮ ರಾಜ್ಯಕ್ಕೆ ಟ್ರಾಲರ್‌ಗಳನ್ನು ತಂದರೂ ಕೂಡ ಅವುಗಳನ್ನು ನಡೆಸುವಂಥಾ ಸೌಲಭ್ಯ ಏನಿದೆ ಅದನ್ನು ಕಂಡುಕೊಂಡಿಲ್ಲ. ಫಿಷರೀಸ್ ಹಾರ್‌ಬರ್ ವ್ಯವಸ್ಥೆ ಇಲ್ಲ. ಹಡಗುಗಳು ಬಂದರೆ ಅವುಗಳನ್ನು ನಡೆಸುವಂಥಾ ತರಬೇತಿಯನ್ನು ಮೀನುಗಾರರಿಗೆ ನಮ್ಮ ರಾಜ್ಯದಲ್ಲಿ ಕೊಡುತ್ತಿಲ್ಲ. ಒಂದು ವೇಳೆ ಟ್ರಾಲರ್ಸ್ ಕೆಟ್ಟು ಹೋದರೆ ಅದನ್ನು ರಿಪೇರಿಮಾಡಿಸುವುದಕ್ಕೆ ಡ್ರೈ ಡಾಕ್ ಫೆಸಿಲಿಟೀಸ್ ಇಲ್ಲ. ಫಿಷರೀಸ್ ಹಾರ್‌ಬರ್ ಇಲ್ಲ. ಹಾರ್ಬರ್ ಕಟ್ಟುವಂಥಾದ್ದು ಇನ್ನೂ ಯಾವ ರೂಪಕ್ಕೂ ಬಂದಿಲ್ಲ. ಅದು ಕಾರ್ಯರೂಪಕ್ಕೆ ಬರುವಂತಹ ನಿರೀಕ್ಷಣೆ ಸಮೀಪದಲ್ಲಿ ಇಲ್ಲ. ಆದ್ದರಿಂದ ಇದನ್ನು ಜಾಗ್ರತೆಯಾಗಿ ಸರ್ಕಾರದವರು ಆಲೋಚನೆ ಮಾಡಬೇಕು ಇಂಡಿಯನ್ ಪೋರ್ಟ್ ಅಡ್ವೈಜರಿ ಬೋರ್ಡಿನಲ್ಲಿ ಕರಾವಳಿ ಮೀನುಗಾರಿಕೆಯ ವಿಷಯದಲ್ಲಿ ಬಹಳ ವಿತರ್ಕವುಂಟಾಗಿದೆ. ಒಳನಾಡಿನ ಮೀನುಗಾರಿಕೆ ಎಂದರೆ ಮೀನು ಸಾಕಾಣಿಕೆ. ಕರಾವಳಿ ಮೀನುಗಾರಿಕೆಯು ಒಳನಾಡಿನ ಮೀನುಗಾರಿಕೆಗಿಂತ ವಿಭಿನ್ನವಾಗಿದೆ. ಆದ್ದರಿಂದ ಕರಾವಳಿ ಮೀನುಗಾರಿಕೆಯನ್ನು ಒಂದು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅದನ್ನು ರೂಢಿಸಿಕೊಂಡು ಬೆಳೆಸಬೇಕು ಬರೀ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಉಪಯೋಗ ಮಾಡುತ್ತಾ ಇರುವಂಥಾ ಈ ವ್ಯವಸ್ಥೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿ ಎಂದಿಗೂ ಸಾಧ್ಯವಾಗುವುದಿಲ್ಲ. ಆಳವಾದ ಸಮುದ್ರದ ಮೀನುಗಾರಿಕೆಯನ್ನು ಬೆಳೆಸಬೇಕಾದರೆ ಫಿಷರೀಸ್ ಹಾರ್ಬರ್ ಆಗಬೇಕು. ಟ್ರಾಲರ್ಸ್‌ಗಳನ್ನು ತರಿಸಿಕೊಡಬೇಕು. ಕೇರಳದಲ್ಲಿ ಸಾಧಾರಣವಾಗಿ ೪ ಫಿಷರೀಸ್ ಹಾರ್ಬರ್ ಕೆಲಸವನ್ನು ತೆಗೆದುಕೊಂಡು ಅದಕ್ಕೆ ಸಾಧಾರಣವಾಗಿ ೧೬ ಕೋಟಿ ರೂಪಾಯಿಗಳನ್ನು ಅವರು ವೆಚ್ಚ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇದನ್ನು ಹಾಳುಮಾಡುತ್ತಿದ್ದಾರೆಯೇ ವಿನಾ

(ಶ್ರೀ ಎಸ್. ಕೆ. ಅಮೀನ್)

ನಾವು ಯಾವ ಹೆಚ್ಚಿನ ಸಾಧನೆಯನ್ನೂ ಸಾಧಿಸಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆದಷ್ಟು ತೀವ್ರವಾಗಿ ಪ್ರಯತ್ನ ಮಾಡಿ ಫಿಶರೀಸ್ ಹಾರ್ಬರ್‌ಗಳನ್ನು ಮಾಡಬೇಕು. ಆಳವಾದ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡದೆ ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಬೇರೆ ದೇಶಗಳಲ್ಲಿ ಮೀನುಗಾರಿಕೆಯ ಪ್ರಗತಿಯನ್ನು ನೋಡುವುದಾದರೆ ಜಪಾನ್‌ನಲ್ಲಿ ಒಂದು ಮಾರ್ಕೆಟ್‌ನಲ್ಲಿ ಒಂದು ದಿವಸಕ್ಕೆ ೫ ಕೋಟಿ ರೂಪಾಯಿಗಳ ಮೀನು ವ್ಯಾಪಾರವಾಗುತ್ತಿದೆ ಎಂದು ತಿಳಿದು ಬಂದಿದೆ. ಅಲ್ಲಿ ಒಂದು ದಿವಸಕ್ಕೆ ಒಂದು ಕಡೆ ೫ ಕೋಟಿ ರೂಪಾಯಿಗಳ ಮೀನಿನ ವ್ಯಾಪಾರ, ಮೀನಿನ ವಿತರಣೆ ಆದರೆ, ಇಡೀ ಜಪಾನ್ ದೇಶದಲ್ಲಿ ಒಂದು ದಿವಸಕ್ಕೆ ಎಷ್ಟು ಮೀನು ವ್ಯಾಪಾರವಾಗಬಹುದು ಎಂಬುದನ್ನು ನಾವು ಊಹೆ ಮಾಡಬಹುದು. ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ ಒಂದು ವರ್ಷದಲ್ಲಿ ಮೂರು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ವ್ಯಾಪಾರವಾಗುವುದಿಲ್ಲ.

ಆದ್ದರಿಂದ ನಮಗೆ ಇರುವಂತಹ ಅನುಕೂಲಗಳು ಯಾವುದು, ನಮ್ಮ ಮಿತಿ ಏನು, ನಮ್ಮ ಗುರಿ ಯಾವುದು ಎಂಬುದನ್ನು ನಿರ್ದಿಷ್ಟವಾಗಿಟ್ಟುಕೊಂಡು ಮುಂದುವರಿಯಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ. ನಾವು ಕಾರ್ಯತಃ ಮಾಡದೆ, ಕೇವಲ ಕಾಲ್ಪನಿಕ ಅಂಕೆ ಸಂಖ್ಯೆಗಳನ್ನು ಹಾಕಿಕೊಂಡು ಅಭಿವೃದ್ಧಿಯನ್ನು ಮಾಡಲು ಹೋದರೆ, ಅದು ಸಾಧ್ಯವಾಗಲಿಕ್ಕಿಲ್ಲ. ಹೆಚ್ಚು ಕಾಲ ಇಲ್ಲದಿರುವುದರಿಂದ ನಾನು ಅಷ್ಟು ಮಾತ್ರ ಹೇಳುತ್ತೇನೆ. ನಮ್ಮ ರಾಜ್ಯದ ಮೀನುಗಾರಿಕೆ ಇಲಾಖೆಯನ್ನು ಪ್ರತ್ಯೇಕಗೊಳಿಸಿ, ಮೆರೀನ್ ಫಿಷರೀಸ್ ಅಭಿವೃದ್ಧಿಯನ್ನು ನಾವು ಪ್ರತ್ಯೇಕವಾಗಿಟ್ಟುಕೊಂಡು, ರಾಜ್ಯದ ಸಂಪನ್ಮೂಲಗಳನ್ನು ನಿಶ್ಚಿತ ರೂಪದಲ್ಲಿ ಹೆಚ್ಚಿಸುವುದಕ್ಕೆ ಅವಕಾಶ ಇದೆ. ಅದನ್ನು ನಮ್ಮ ಸರ್ಕಾರದವರು ಅವಶ್ಯವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಈ ಮೀನುಗಾರಿಕೆಯಲ್ಲಿ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು ಮುಖ್ಯವಾಗಿದೆ. ಇದು ಯಾವ ರೀತಿಯಲ್ಲಿ ದೊರಕಬಹುದೆಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮೀನನ್ನು ಬಹಳ ಪೌಷ್ಟಿಕ ಆಹಾರವನ್ನಾಗಿ ಉಪಯೋಗಿಸುತ್ತಿದ್ದಾರೆಂದು ನಮ್ಮ ರಾಜ್ಯದಲ್ಲಿ ಪ್ರಚಾರ ಮಾಡಿದರೆ ಪ್ರಯೋಜನವಿಲ್ಲ ಮೀನನ್ನು ಪಡೆಯುವಲ್ಲಿ ಮನುಷ್ಯನು ತನ್ನ ಯೋಗ್ಯತೆ, ಸಾಹಸ, ಮತ್ತು ಜೀವನದ ಹಂಗು ತೊರೆದು ಸಂಪಾದಿಸಬೇಕಾಗಿದೆ. ನಮ್ಮ ರಾಜ್ಯದ ಮಂತ್ರಿಯವರು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗಿದ್ದಾರೆ; ಮತ್ತು ಎಲ್ಲವನ್ನೂ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಇದಕ್ಕೆ ಗೌರ್ನ್‌ಮೆಂಟ್ ಗ್ರ್ಯಾಂಟ್ ಕೊಟ್ಟು ನಡೆಸುತ್ತಿದ್ದಾರೆ. ಆದರೆ ಇಲ್ಲಿ ಈ ಹೊತ್ತು ಮೀನುಗಾರರ ಪರಿಸ್ಥಿತಿ ಬಹಳ ಚೆನ್ನಾಗಿದೆ. ಅವರಿಗೆ ಸಂಪಾದನೆ ಚೆನ್ನಾಗಿ ಸಿಗುತ್ತದೆ ಎಂಬ ಭಾವನೆ ಇಟ್ಟುಕೊಂಡು, ಅವರಿಗೆ ಕೊಡುವ ಸವಲತ್ತುಗಳನ್ನು ಹಿಂದೆಗೆಯುವ ಪ್ರಯತ್ನವನ್ನು ಸರ್ಕಾರದವರು ಮಾಡಬಾರದು. ನಾವು ಇವತ್ತು ಈ ಮೀನುಗಾರಿಕೆಯ ಅಭಿವೃದ್ಧಿಯಲ್ಲಿ ಪ್ರಥಮ ಹೆಜ್ಜೆಯಲ್ಲಿದ್ದೇವೆ. ಇನ್ನೂ ಮುಂದೆ ಬರಲು ತುಂಬಾ ಇದೆ. ಇದನ್ನು ಮನದಲ್ಲಿಟ್ಟುಕೊಂಡು ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂದು ಸೂಚಿಸಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ) :— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂತಹ ಬೇಡಿಕೆಗಳಲ್ಲಿ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ರಾಜ್ಯದಲ್ಲಿರತಕ್ಕಂತಹ ಈ ಪಶುಸಂಪತ್ತನ್ನು ಹೆಚ್ಚಿಸಲು ರಾಜ್ಯ ಸರ್ಕಾರದವರು ಕೊಟ್ಟಿರತಕ್ಕಂತಹ ಹಣ ಬಹಳ ಕನಿಷ್ಟ ಮಟ್ಟದಲ್ಲಿದೆ ಎಂದು ಹೇಳುತ್ತೇನೆ. ಎಷ್ಟು ಪ್ರಾಮುಖ್ಯತೆಯನ್ನು ನಾವು ಪಶುಸಂಪತ್ತಿಗೆ ಕೊಡುತ್ತಿದ್ದೇವೆ, ಅದಕ್ಕೆ ತಕ್ಕಂತೆ ಈ ಹಣದ ಸಹಾಯ ಮತ್ತು ಯೋಜನೆಗಳ ವಿಧಾನ ಏನೂ ಸಾಲದು ಎಂದು ಹೇಳುತ್ತೇನೆ. ಈಗಲಾದರೂ ಮಾನ್ಯ ಮಂತ್ರಿಯವರು ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು ಮತ್ತು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಈ ಪಶು ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪಶು ಸಂಗೋಪನೆಯಲ್ಲಿ ಹಾಲು ಕರೆಯುವ ಹಸುಗಳ ಅಭಿವೃದ್ಧಿ ಬಗ್ಗೆ ಬಹಳ ಪ್ರಚಾರವನ್ನು ಮಾನ್ಯ ಮಂತ್ರಿಯವರು ಮಾಡುತ್ತಿದ್ದಾರೆ. ಆದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿರತಕ್ಕದ್ದು ಬಹಳ ಕಡಿಮೆ. ಈ ಕ್ರಾಸ್ ಬ್ರೀಡಿಂಗ್ ಪ್ರೋಗ್ರಾಂಗೋಸ್ಕರ ಏರ್ಪಾಡು ಮಾಡಿರತಕ್ಕ ಆರ್ಟಿಫಿಯಲ್ ಇನ್‌ಸಿಮಿನೇಶನ್ ಸೆಂಟರುಗಳು ಬಹಳ ಕಡಿಮೆ ಇದೆ. ಇದು ಪ್ರತಿಯೊಂದು ಜಿಲ್ಲೆಯ ಕೇಂದ್ರಗಳಲ್ಲೂ ಇರಬೇಕಾದುದು ಅವಶ್ಯಕ ಮತ್ತು ಈ ಸೆಮನನ್ನು ಹಳ್ಳಿಗಳಲ್ಲಿ ಹೆಚ್ಚಾಗಿ ಬೇಕಾಗಿರತಕ್ಕ ಪ್ರದೇಶಗಳಲ್ಲಿ ಅಂದರೆ, ಎಲ್ಲಿ ಡೈರಿ ಡೆವಲಪ್‌ಮೆಂಟ್ ಪ್ರೋಗ್ರಾಂ ವಿಸ್ತರಿಸಿದ್ದಾರೋ ಅಲ್ಲಿ ಇನ್ನೂ ಹೆಚ್ಚಾಗಿ ಇಟ್ಟು, ಇದು ಬಹಳ ಸುಲಭವಾಗಿ ಜನರಿಗೆ ಸಿಗುವಂತೆ ಮಾಡಬೇಕು ಈಗ ಮಾಡಿರುವ ಯೋಜನೆ ಖಂಡಿತವಾಗಿಯೂ ಸಾಧುವಾದುದಲ್ಲ; ಮತ್ತು ಇದರಿಂದ ಜನರಿಗೆ ಉಪಕಾರವು

ಆಗುತ್ತಾ ಇಲ್ಲ. ಈ ಕ್ರಾಸ್ ಬ್ರೀಡಿಂಗ್ ಯೋಜನೆ ಕಾಗದದಲ್ಲಿದೆಯೇ ಹೊರತು, ಕಾರ್ಯರೂಪದಲ್ಲಿ ಇಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೭೫೦ ಚಿಲ್ಲರೆ ಆಸ್ಪತ್ರೆಗಳಿವೆ ಎಂದು ಉತ್ತರ ಹೇಳು-ವಾಗ ಹೇಳಿದ್ದಾರೆ. ಆದರೆ ಈ ಆಸ್ಪತ್ರೆಗಳನ್ನು ಇವರು ನೋಡಿದ್ದಾರೋ. ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಇವುಗಳಲ್ಲಿ ಶೇಕಡಾ ೬೦ ರಷ್ಟು ಆಸ್ಪತ್ರೆಗಳನ್ನು ನೋಡಿದರೆ, ಬಹಳ ಅಸಹ್ಯಕರವಾಗಿದೆ ಅಲ್ಲಿ ರಾಸುಗಳ ಚಿಕಿತ್ಸೆಗೆ ಯೋಗ್ಯವಾದ ಯಾವ ಸೌಕರ್ಯವೂ ಇಲ್ಲವೆಂದು ಹೇಳುತ್ತೇನೆ. ಉದಾಹರಣೆಗೆ ಮಲ್ಲೇಶ್ವರಂನಲ್ಲಿ ಒಂದು ಆಸ್ಪತ್ರೆ ಇದೆ ಅದು ಗಾಂಧಿ ಕುಟೀರ ಇದ್ದ ಹಾಗೆ ಇದೆ. ಅಲ್ಲಿ ದಿನಕ್ಕೆ ನೂರಾರು ರಾಸುಗಳು ಬರುತ್ತವೆ. ಅವಕ್ಕೆ ಬೇಕಾದ ಅನುಕೂಲ, ಸೌಕರ್ಯ, ಯಾವುದೂ ಇಲ್ಲ. ಅಲ್ಲಿಗೆ ೫-೬ ಸಾವಿರ ಬೆಲೆ ಬಾಳುವಂತಹ ೫೦ ಸಾವಿರ ರಾಸುಗಳು ಒಂದು ವರ್ಷಕ್ಕೆ ಬರುವಂತಹ ಸ್ಥಳ. ಅಂಥ ಪ್ರದೇಶದಲ್ಲಿ ಕೂಡ ಆಸ್ಪತ್ರೆ ಹೀಗೆ ಇದ್ದರೆ ಹೇಗೆ? ಇದನ್ನು ನೋಡಿದರೆ, ಪಶು ಸಂಪತ್ತನ್ನು ಅಭಿವೃದ್ಧಿ ಪಡಿಸುವುದಕ್ಕೆ ಏನು ಅವಕಾಶವಿದೆ ಎಂಬುದನ್ನು ನಾವು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬಹುದು. ಇವರ ವ್ಯವಸ್ಥೆ ಈ ರೀತಿಯಾದರೆ, ಇಷ್ಟು ಸಂಖ್ಯೆಯಲ್ಲಿ ಆಸ್ಪತ್ರೆಗಳಿದ್ದರೂ ಪ್ರಯೋಜನವೇನು ? ಈಗ ತುಮಕೂರು, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಇರುವಂತಹ ಆಸ್ಪತ್ರೆಗಳಲ್ಲಿ ಔಷಧಿಗಳು ಏನಿವೆ, ಮತ್ತು ಅವುಗಳ ಬೆಲೆ ಏನೆಂಬುದನ್ನು ತಾವು ಹೇಳಬೇಕು. ಅಲ್ಲಿ ಹೋದರೆ, ರಾಸುಗಳಿಗೆ ನೀರು ಕೂಡ ಸಿಗುತ್ತಾ ಇಲ್ಲ. ಆದ್ದರಿಂದ ಪ್ರತಿಯೊಂದು ಆಸ್ಪತ್ರೆಯನ್ನೂ ಅಪ್‌ಗ್ರೇಡ್ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು; ಮತ್ತು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು.

ಇನ್ನು ಹಸುಗಳನ್ನು ಬೆಂಗಳೂರಿನಲ್ಲಿ ಸಾಕುವುದಕ್ಕಿಂತಲೂ ಹೊರಗಡೆ ಸಾಕುವುದು ಒಳ್ಳೇಯದು ಎಂದು ಮಂತ್ರಿಯವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಪಟ್ಟಣದ ಸುತ್ತಲೂ ಕಾಲೊನಿಗಳನ್ನು ಮಾಡಿ, ಅಲ್ಲಿ ಸಿಗತಕ್ಕ ಹಾಲನ್ನು ಡೈರಿಗಳಿಗೆ ಉಪಯೋಗಮಾಡಬಹುದೆಂದು ಹೇಳುತ್ತಿದ್ದಾರೆ. ಇನ್ನು ಲೈಸೆನ್ಸ್ ತೆಗೆದುಕೊಳ್ಳುವ ಒಂದು ಪದ್ಧತಿಯನ್ನು ತಂದರೆ ನಿಜವಾಗಿಯೂ ಇದರಿಂದ ಪ್ರಯೋಜನವಾಗಲಾರದು. ಈ ಕಾಲೋನಿಗಳಲ್ಲಿ ಕೂಡ ಎಲ್ಲಾ ಹಸಿರು ಹುಲ್ಲು, ಬ್ಯಾಲೆನ್ಸ್‌ಡ್ ಫುಡ್ ಎಲ್ಲಾ ಕೊಟ್ಟರೆ ಸರಿಯಾಗಿ ನಡೆಯುತ್ತದೆ ಹೊರತು, ಈಗಿರತಕ್ಕ ಪರಿಸ್ಥಿತಿಯ ಹಾಗೆ ಕಣ್ಣೀರು ಒರೆಸುವದರೆ ಮಾಡಬಾರದು.

ಇದರ ಜೊತೆಗೆ ಪೌಲ್ಟ್ರಿ ಬಗ್ಗೆಯೂ ಸ್ವಲ್ಪ ಹೇಳುತ್ತೇನೆ. ಪೌಲ್ಟ್ರಿಗೆ ಬೇಕಾದ ಔಷಧಿಗಳನ್ನು ಬೇಗನೆ ಒದಗಿಸದಿದ್ದರೆ, ಅವುಗಳಿಗೆ ಒಂದು ಗಂಟೆಯೊಳಗೆ ಚಿಕಿತ್ಸೆ ಮಾಡದಿದ್ದರೆ, ಕೋಳಿಗಳು ಬದುಕುವುದಿಲ್ಲ. ಆದ್ದರಿಂದ ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಈ ಇಲಾಖೆಯಲ್ಲಿ ೫೦ ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಮೆಷಿನರಿಯನ್ನು ತಯಾರು ಮಾಡಿದ್ದಾರೆ. ಆ ಮೆಷಿನರಿ ಕಳೆದ ನಾಲ್ಕು ವರ್ಷಗಳಿಂದಲೂ ಕೆಲಸ ಮಾಡುತ್ತಿಲ್ಲ. ಇದಕ್ಕೆ ಇಷ್ಟು ವರ್ಷಗಳಾದರೂ ರಿಪೇರಿ ಮಾಡಿಲ್ಲವೆಂದರೆ, ಅದು ಆಶ್ಚರ್ಯಕರವಾದ ವಿಚಾರ. ಇದಕ್ಕೆ ಸರಿಯಾದ ಗಮನ ಕೊಡುತ್ತಾ ಇಲ್ಲ ಅಂದರೆ, ಅನುಮಾನ ಬರುತ್ತದೆ. ಇದಕ್ಕೆ ಇರತಕ್ಕ ತೊಂದರೆ ಏನು,? ಅದನ್ನು ಸುಧಾರಿಸಲು ಸಾಧ್ಯವಿಲ್ಲದಿರತಕ್ಕ ತೊಂದರೆಗಳು ಯಾವುದು? ಇದನ್ನು ಖಂಡಿತವಾಗಿಯೂ ಉತ್ತಮಪಡಿಸಬೇಕು. ಮತ್ತು ಇವರಲ್ಲಿ ಮುಖ್ಯವಾಗಿ ಬೇಕಾದ ರಾಣಿಕಿಂಟನ್ ಔಷಧಿ ಇಲ್ಲ. ಮತ್ತು ಈ ಹಾಲು ಕರೆಯುವ ಹಸುಗಳಿಗೆ ಬಾಯಿ ಮತ್ತು ಕಾಲು ಜ್ವರವೆಂಬ ಕಾಯಿಲೆ ಬರುತ್ತದೆ. ಅದಕ್ಕೆ ಬೇಕಾದ ಔಷಧಿಯನ್ನು ತಯಾರು ಮಾಡತಕ್ಕ ಯೋಜನೆ ನಮ್ಮಲ್ಲಿ ಇಲ್ಲ. ಇವರು ಬಡ್ಜೆಟ್ಟಿನಲ್ಲಿ ಹೇಳುವುದು ಒಂದು ಮಾತು, ಮತ್ತೆ ಮಾಡುವುದು ಇನ್ನೊಂದು. ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ನಂಬಿಕೆ ನನಗೆ ೮ ವರ್ಷಗಳಿಂದಲೂ ಬಂದಿಲ್ಲ.

೪-೦೦ P.M.

ಈಗ ಹೇಳಿದ್ದಾರೆ, ಔಷಧಿ ತಯಾರು ಮಾಡುವುದಕ್ಕೆ ಸ್ಥಳ ಹುಡುಕಿದ್ದೇವೆಂದು. ಈ ವರ್ಷ ಸ್ಥಳ ಹುಡುಕುವುದು, ಮುಂದಿನ ವರ್ಷ ಯಾರನ್ನಾದರೂ ನೇಮಕ ಮಾಡುವುದು, ಆಮೇಲೆ ಮೆಷಿನರಿ ತರಿಸುವುದು, ಅದರಲ್ಲಿ ಯಾವುದಾದರೂ ಒಂದು ಭಾಗ ಕೆಟ್ಟು ಹೋದರೆ ಪಶು ಸಂಪತ್ತು ಯೋಜನೆ ಏನಿದೆ ಅದು ಖಂಡಿತವಾಗಿ ಯಶಸ್ವಿಯಾಗುವುದಿಲ್ಲ ಆದ್ದರಿಂದ ಏನಾದರೂ ಮಾಡುವುದು ಇದ್ದರೆ ನೀವೇ ಜವಾಬ್ದಾರಿ ವಹಿಸಿಕೊಂಡು ಮಾಡಿ, ಇಲ್ಲದೇ ಹೋದರೆ ಬೇರೆ ಏನಾದರೂ ಏರ್ಪಾಡು ಮಾಡಿಯೆಂಬುದಾಗಿ ಜನತೆಗೆ ಹೇಳುವುದು ಬಹಳ ಒಳ್ಳೆಯದು. ಒಂದೊಂದು ಕಾರ್ಖಾನೆಯಲ್ಲಿಯೂ ಸುಮಾರು ೩ ಕೋಟಿ ರೂಪಾಯಿಗಳವರೆಗೂ ನಷ್ಟವಾಗಿರುವ ಕಾರ್ಖಾನೆಗಳು ಈಗ ಇವೆ. ಆಂದಮೇಲೆ ನಮ್ಮ ವ್ಯವಸಾಯಗಾರರಿಗೆ ಬೇಕಾದ ಉಪಕರಣಗಳಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಖರ್ಚುಮಾಡುವುದರಲ್ಲಿ ಕಣ್ಣು ಕೆಂಪು ಆದರೆ, ಇನ್ನು ಯಾವ್ಯಾವ ರೀತಿಯಲ್ಲಿ ರೈತರಿಗೆ ಸಹಾಯ ಮಾಡುತ್ತೀರಿ? ಕಾರ್ಯತಃ ಕೆಲಸಕಾರ

(ಶ್ರೀ ಜಿ ರಾಮೇಗೌಡ)

ಗಳನ್ನು ಏನು ಮಾಡುತ್ತೀರೆಂದು ಹೇಳುವುದೇ ನಮಗೆ ಅಸಾಧ್ಯವಾಗಿ ಕಾಣುತ್ತಿದೆ. ಮೂರು ಸಾವಿರ ಹಸುಗಳಿಗೆ ಏನಾದರೂ ಕಾಯಿಲೆ ಬಂದರೆ ಅದಕ್ಕೆ ಬೇಕಾದ ಔಷಧಿಗಳನ್ನು ಉತ್ತರ ಪ್ರದೇಶದಲ್ಲಿ ತಯಾರಿಸುತ್ತಾರೆಂದು ಹೇಳುತ್ತಾರೆಯೇ ಹೊರತು ನಮ್ಮ ರಾಜ್ಯದಲ್ಲಿ ತಯಾರುಮಾಡುತ್ತಾ ಇಲ್ಲ. ಯಾವ ಒಂದು ರೀತಿಯ ವ್ಯಾಕ್ಸಿನ್ ಸಹ ಅದಕ್ಕೆ ಸಂಬಂಧಪಟ್ಟ ಹಾಗೆ ತಯಾರುಮಾಡುತ್ತಾ ಇಲ್ಲ. ಅದ್ಯಾವುದನ್ನು ಇದುವರೆಗೆ ಇವರು ಆಲೋಚನೆ ಮಾಡಲಿಲ್ಲ, ಮಾಡುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿಲ್ಲ. ನಮ್ಮ ರೈತರ ಮೇಲೆ ಅಭಿಮಾನವಿರುವ ಮಂತ್ರಿಗಳು ಇದ್ದಾರೆಂದು ನಾನು ಭಾವಿಸಿದ್ದೆ, ಆದರೆ ಇವರ ಕಾರ್ಯಕ್ರಮ ನೋಡಿದರೆ ಯಾವುದೂ ಆಶಾದಾಯಕವಾಗಿಲ್ಲ. ಏಕೆಂದರೆ ಇವರನ್ನು ಕಂಡಾಗಲೆಲ್ಲಾ ಆ ವಿಚಾರವನ್ನು ಕಾರ್ಯಗತಮಾಡುತ್ತೇನೆ ಎಂಬುದಾಗಿ ಹೇಳಿದ್ದಾರೆ. ಒಂದು ಸಾಕ್ಷೀಭೂತವಾದ ಕಾರ್ಯಕ್ರಮ ನಮ್ಮಲ್ಲಿಲ್ಲ. ಪದೇ ಪದೇ ನಾವು ಹೇಳುತ್ತಿದ್ದೇವೆ. ಹಳ್ಳಿಕಾರ್ ಜಾತಿ ಎತ್ತುಗಳು ಬಹಳ ಒಳ್ಳೆಯ ಜಾತಿ ಎತ್ತುಗಳು ಎಂದು, ರೈತರಿಗೆ ಅಂತಹ ಒಂದು ಒಳ್ಳೆಯ ಜಾತಿ ಎತ್ತುಗಳು ಇದ್ದರೆ ಸಾಕು ಭೂ ಸಂಪತ್ತು ವೃದ್ಧಿ ಮಾಡುತ್ತಾರೆ. ಆದ್ದರಿಂದ ಅಂತಹ ಜಾತಿಯ ಎತ್ತುಗಳನ್ನು ಕಳೆಯಬೇಡಿ ಎಂದು ಮೊದಲಿನಿಂದಲೂ ಹೇಳಿದ್ದೇವೆ. ಹಳ್ಳೀಕಾರ್ ಜಾತಿಯ ಎತ್ತುಗಳನ್ನು ಉಳಿಸುವುದಕ್ಕೋಸ್ಕರ ಸರ್ಕಾರದವರು ಏನೇನು ಮಾಡಿದ್ದೀರಿ ವರ್ಷೇವರ್ಷೇ ನೋಡಿದರೆ, ಈಗ ಅಂತಹ ಜಾತಿಯ ಎತ್ತುಗಳ ಸಂಖ್ಯೆ ಕಡಿಮೆಯಾಗಿದೆ. ಇನ್ನು ಸರ್ಕಾರದವರು ಪ್ರತಿಯೊಬ್ಬ ರೈತನಿಗೂ ಟ್ರಾಕ್ಟರ್ ಕೊಡುವುದೇನಾದರೂ ಇದ್ದರೆ ಅದಕ್ಕೆ ಬದಲಾಗಿ ಒಳ್ಳೆಯ ಹಳ್ಳಿಕಾರ್ ಜಾತಿಯ ಮತ್ತು ಅಮೃತಮಹಲ್ ಜಾತಿಯ ದನಗಳನ್ನು ವ್ಯವಸಾಯಕ್ಕೆ ಕೊಡಬೇಕು. ಉಪಯುಕ್ತವಾದ ಹೋರಿಗಳು ಸಿಕ್ಕಿದರೆ ಅವನ್ನೂ ಸಹ ಉಳಿಸಿಕೊಂಡು ಬರಬೇಕು. ಏಕೆಂದರೆ ಅಂತಹ ಒಳ್ಳೆಯ ಜಾತಿಯ ದನಗಳನ್ನು ಉಳಿಸಿಕೊಂಡು ಬರುವುದಕ್ಕೆ ಆಗುತ್ತಾ ಇಲ್ಲ. ಈಗ ಅತ್ಯವಶ್ಯಕವಾಗಿ ಉತ್ತಮ ಜಾತಿಯ ದನಗಳಿಗೆ ಬೇಕಾದ ಔಷಧಿ ಬೇಕು. ಏಕೆಂದರೆ ರೋಗರುಜಿನಗಳು ಬಹಳ ಜಾಸ್ತಿಯಾಗುತ್ತಾ ಇವೆ. ಹಿಂದೆ ಜನರು ಇವನ್ನು ಪೂಜೆ ಮಾಡುವ ಸ್ಥಿತಿಯಲ್ಲಿದ್ದರು. ಈಗ ಅವುಗಳನ್ನು ಪೋಷಣೆಮಾಡಬೇಕಾಗಿದೆ. ದನಗಳಿಗೆ ಬರತಕ್ಕ ರೋಗರುಜಿನಗಳನ್ನು ಪಾರು ಮಾಡುವ ವಿಧಾನಗಳನ್ನು ಸರ್ಕಾರ ಮಾಡದಿದ್ದರೆ ರೈತರ ಉಳಿಗಾಲಕ್ಕೆ ಇನ್ನು ಯಾವ ಒಂದು ಒಳ್ಳೆಯ ಕಾಲ ಬಂದಿಲ್ಲವೆಂದು ನಾನು ಬಹಳ ದುಃಖಪಡಬೇಕಾಗಿದೆ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಂಡು, ಈಗ ಪಶುಸಂಪತ್ತು ಏನಿದೆಯೋ ಅದನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕಾಗಿದೆ. ಎಲ್ಲಿ ಅಗತ್ಯವಾಗಿ ಬೇಕಾಗಿದೆಯೋ ಅಲ್ಲಿ ಔಷಧಿಗಳನ್ನು ಸರಬರಾಜು ಮಾಡಬೇಕು. ಇನ್‌ಸೆಮಿನೇಷನ್ ಸೆಂಟರುಗಳನ್ನು ಅಗತ್ಯವಾದ ಕಡೆಗಳಲ್ಲಿ ತೆರೆಯಲು ನೀತಿನಿಯಮವನ್ನು ಹಾಕಿಕೊಂಡು ಕಾರ್ಯಗತಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು (೨)):—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ವ್ಯವಸಾಯ ಸಚಿವರು, ಪಶುಸಂಗೋಪನ ಸಚಿವರು ಮತ್ತು ಅರಣ್ಯ ಸಚಿವರು ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ಅನುಮೋದಿಸಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಇವತ್ತು ನಾವು ಭಾರತದೇಶದಲ್ಲಿ ಮತ್ತು ನಮ್ಮ ಮೈಸೂರು ರಾಜ್ಯದಲ್ಲಿ ಆಹಾರದ ಮಟ್ಟಿಗೆ ಸ್ವಾವಲಂಬಿಗಳಾಗಬೇಕೆಂದು ಬಹಳ ವರ್ಷಗಳಿಂದ ಹೇಳುತ್ತಿದ್ದೇವೆ. ಸ್ವಾವಲಂಬನೆ ಎಂದು ಹೇಳಿದರೆ ಮಾತ್ರ ಸ್ವಾವಲಂಬಿಗಳಾಗುವುದಿಲ್ಲ. ಒಳ್ಳೆಯ ರೀತಿಯಲ್ಲಿ ಕೃಷಿ ಉತ್ಪತ್ತಿಮಾಡಿ ಆಹಾರವನ್ನು ಹೆಚ್ಚಿಗೆ ಬೆಳೆದರೆ ಮಾತ್ರ ನಾವು ಸ್ವಾವಲಂಬಿಗಳಾಗಬಹುದು. ಕಾರಣವೇನೆಂದರೆ, ನಮ್ಮ ಜನಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಹೀಗೆ ಬೆಳೆಯುವ ಜನಸಂಖ್ಯೆಗೆ ಅನ್ನ ಕೊಡಬೇಕಾದರೆ, ಸರ್ಕಾರದವರು ಹೆಚ್ಚು ಶ್ರಮವಹಿಸಬೇಕು. ರೈತರು ಜೋಳವಾಗಲೀ, ಅಕ್ಕಿಯಾಗಲೀ, ರಾಗಿಯಾಗಲೀ ಎಷ್ಟೇ ಬೆಳೆಯಲಿ ಅದು ಒಳ್ಳೆಯದು ನಾಲ್ಕೈದು ವರ್ಷಗಳ ಹಿಂದೆ ವ್ಯವಸಾಯದಲ್ಲಿ ಹೆಚ್ಚು ಮುತುವರ್ಜಿ ವಹಿಸಲು ಪ್ರಾರಂಭಿಸಲಾಯಿತು. ನಮ್ಮ ಸರ್ಕಾರದವರೂ ಮತ್ತು ರೈತರು ಹಾಗೆಯೇ ಇತ್ತೀಚೆಗೆ ಕೆಲಸಮಾಡುತ್ತಾರೆ. ಅದು ಬಹಳ ಸಂತೋಷದ ವಿಷಯ. ಭಾರತ ದೇಶದ ಹೊರಗಡೆಯಿಂದ ಆಹಾರವನ್ನು ತರಿಸುವುದನ್ನು ಕೂಡಲೇ ಬಿಡಬೇಕು. ಆ ರೀತಿ ಹೇಳುವ ಕಾಲದಲ್ಲಿ ನಮ್ಮ ರೈತರಿಗೆ ಹೆಚ್ಚಿನ ಸವಲತ್ತುಗಳನ್ನು ಸರ್ಕಾರದವರು ಕೊಡಬೇಕು. ಸುಮ್ಮನೆ ಸರ್ಕಾರದವರು ಸಹಾಯ ಅವನಿಗೆ ಕೊಡುತ್ತೇವೆಂದು ಹೇಳಿದರೆ ಮಾತ್ರ ಅದು ಅವನ ಮನೆ ಮುಟ್ಟುವುದಿಲ್ಲ. ಅವನು ವಿದ್ಯುತ್‌ಗಾಗಲೀ, ಪಂಪುಸೆಟ್ಟುಗಳಿಗಾಗಲೀ ಬೇರೆ ಬೇರೆ ಆಫೀಸುಗಳ ಬಾಗಿಲಿಗೆ ಆಗಾಗ್ಗೆ ಹೋಗುವ ಪರಿಸ್ಥಿತಿ ಕೂಡಲೇ ತಪ್ಪಬೇಕು. ವ್ಯವಸಾಯ ಹೆಚ್ಚಾಗಬೇಕು, ಆಹಾರ ಹೆಚ್ಚಾಗಬೇಕೆಂದು ಹೇಳುವ ಕಾಲದಲ್ಲಿ ಅವನ ಮನೆಯ ಬಾಗಿಲಿಗೆ ಎಲ್ಲಾ ಸಲಕರಣೆಗಳು ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು.

ಇನ್ನು ಭೂಮಿ ಕೊಡುವ ವಿಷಯದಲ್ಲಿ ಹೇಳುವುದಾದರೆ. ಬೇಸಾಯ ಈಗ ಚೆನ್ನಾಗಿ ಆಗಬೇಕು. ಭೂಮಿ ಇಲ್ಲದವರಿಗೆ ಭೂಮಿ ಕೊಟ್ಟು ಏನೂ ಫಲವಿಲ್ಲ. ಹರಿಜನರಿಗೆ ಭೂಮಿ ಕೊಡುವುದು ಸಮಾಜ ವಿಕಾಸ ಯೋಜನೆಗಳಲ್ಲಿ ಒಂದಾಗಿದೆ. ಆದರೆ ಅವರಿಗೆ ಕೊಡುವ ಭೂಮಿ ಎಲ್ಲೂ ಗುಡ್ಡದಲ್ಲಿ ವ್ಯವಸಾಯಕ್ಕೆ ಉಪಯೋಗವಿಲ್ಲದೇ ಇರುವ ಕಡೆ ಕೊಡುವುದು ಸರಿಯಲ್ಲ. ಅಂತಃಕರಣ ರೀತಿಯಲ್ಲಿ ಒಳ್ಳೆಯ ಭೂಮಿಯನ್ನು ಕೊಟ್ಟು ನೀವು ವ್ಯವಸಾಯಮಾಡಿ ಎಂದು ಹೇಳಿದರೆ ಒಳ್ಳೆಯದು. ಆದ್ದರಿಂದ ಹರಿಜನರಿಗೆ ಕೊಡುವ ಭೂಮಿಯನ್ನು ಪರೀಕ್ಷಿಸಿ ಅವರೂ ಕೂಡ ಬೇಸಾಯದಲ್ಲಿ ಮುಂದೆಬರುವುದಕ್ಕೆ ಸಾಧ್ಯವಾಗುವಂತ ಕಡೆ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಭೂಮಿ ವ್ಯವಸಾಯಕ್ಕೆ ಸಿಗುವ ಹಾಗೆ ಮಾಡಿದರೆ ಬೇಕಾದಷ್ಟು ಆಹಾರ ಬೆಳೆಯಲಿಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ನದಿಗಳು ಇರುವುದರಿಂದ ಪಂಪುಸೆಟ್ಟುಗಳನ್ನು ಕೇಳಿದವರಿಗೆಲ್ಲಾ ಕೊಡಬೇಕು. ಏಕೆಂದರೆ ಅಲ್ಲಿ ಹೆಚ್ಚಿನ ಜನರಿಗೆ ಅವು ಸಿಗಲಿಲ್ಲ. ವಿದ್ಯುತ್ ಪೂರೈಕೆಯಾಗಿಲ್ಲ. ಆದ್ದರಿಂದ ಈಗ ಯಾರ್‍ಯಾರು ಆ ರೀತಿ ಪಂಪುಸೆಟ್ಟುಗಳನ್ನು ಕೇಳಿದ್ದಾರೋ ಅವರಿಗೆ ಪಂಪುಸೆಟ್ಟುಗಳನ್ನು ಕೊಟ್ಟು ಬೇಕಾದಷ್ಟು ವಿದ್ಯುತ್ತನ್ನು ಒದಗಿಸಬೇಕು.

ಇನ್ನು ಮೀನುಗಾರಿಕೆಯ ವಿಷಯದಲ್ಲಿ ಹೇಳಬೇಕಾದರೆ ನಾವು ಕರಾವಳಿಯಲ್ಲಿ ಇರತಕ್ಕವರು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಮಾನ್ಯ ಶ್ರೀ ಅಮೀನ್ ಅವರು ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಮೀನುಗಳನ್ನು ಧರ್ಮಾರ್ಥವಾಗಿ ಮತ್ತು ಕಡಿಮೆ ದರದಲ್ಲಿ ಸಿಗುವ ಹಾಗೆ ವ್ಯವಸ್ಥೆ ಮಾಡಲು ತಕ್ಕ ಸೌಕರ್ಯಗಳು ಅಲ್ಲಿರುವುದರಿಂದ ಆರ್ಥಿಕ ಸಂಪತ್ತನ್ನು ಹೆಚ್ಚುಮಾಡುವ ಸನ್ನಿವೇಶ ಅಲ್ಲಿದ್ದರೂ ಅದರ ಕಡೆಗೆ ಸರ್ಕಾರದವರು ಇನ್ನೂ ಗಮನಕೊಟ್ಟಿಲ್ಲ. ಒಳನಾಡಿನಲ್ಲಿ ಮಾಡುವುದು ಬರೀ ಸಾಕುವಿಕೆ ಇವೊತ್ತು ಮೀನುಗಾರಿಕೆ ಅಭಿವೃದ್ಧಿಯಾಗಬೇಕಾಗಿದೆ. ಇದರಿಂದ ನಮ್ಮ ಸಂಪತ್ತೂ ಸಹ ಹೆಚ್ಚುತ್ತದೆ. ಮೀನುಗಾರಿಕೆ ಇಲಾಖೆಗೆ ಬಡ್ಜೆಟ್ಟಿನಲ್ಲಿ ಇಷ್ಟು ಕಡಿಮೆ ಹಣವನ್ನು ಇಡಬಾರದು. ಹೆಚ್ಚಿಗೆ ಹಣವನ್ನು ಈ ಬಾಬಿಗೆ ಇಟ್ಟಷ್ಟೂ ಹೆಚ್ಚಿಗೆ ಕೆಲಸಮಾಡಬಹುದು. ಈ ಶಾಖೆಯನ್ನು ವಹಿಸಿರತಕ್ಕ ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಬಹಳ ಹೆಚ್ಚಿಗೆ ಶ್ರಮವಹಿಸಿ ಕೆಲಸಮಾಡುತ್ತಿದ್ದಾರೆ. ಕಾಪು ಕ್ಷೇತ್ರದ ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಹೇಳಿದರು, ಅವರು ಕರಾವಳಿ ಪ್ರದೇಶಕ್ಕೆ ಪ್ರವಾಸ ಮಾಡುತ್ತಾರೆ ಎಂಬುದಾಗಿ ಮತ್ತೊಬ್ಬ ಚಿಕ್ಕಬಳ್ಳಾಪುರದ ಸದಸ್ಯರು ಹೇಳಿದರು, ಸಚಿವರು ಹೇಳಿದರು. ಸಚಿವರು ಕೋಲಾರ ಜಿಲ್ಲೆಯ ಒಳನಾಡಿಗೆ ಹೋಗುತ್ತಾರೆಂದು. ಕರಾವಳಿ ಎಲ್ಲಿ ಇದೆಯೋ ಅಲ್ಲಿ ಮೀನು ಅಭಿವೃದ್ಧಿಯಾಗಬೇಕು. ಒಳನಾಡಿನಲ್ಲಿ ಕೂಡ ಮೀನು ಅಭಿವೃದ್ಧಿಯಾಗಬೇಕಾಗಿದೆ. ಆದ್ದರಿಂದ ಮಂತ್ರಿಗಳು ಎಲ್ಲಾ ಕಡೆಯೂ ಪ್ರವಾಸ ಮಾಡಬೇಕು. ಅವರು ಮೀನುಗಾರರು ಇರುವ ಕಡೆಗಳಲ್ಲಿ ಹೋಗದಿದ್ದರೆ ಅದು ಬಹಳ ತಪ್ಪಾಗುತ್ತದೆ. ಕರಾವಳಿಗೆ ಹೋದರೂ ತಪ್ಪು, ಒಳನಾಡಿಗೆ ಹೋದರೂ ತಪ್ಪು ಎಂಬುದಾಗಿ ಹೇಳಿದರೆ, ಅದು ಸರಿಹೋಗುವುದಿಲ್ಲ. ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ದೆಹಲಿಗೆ ಹೋಗಿ ಬೇಕಾದಷ್ಟು ಮಾಹಿತಿಯನ್ನು ಪಡೆದುಕೊಂಡು ಬಂದಿದ್ದಾರೆ. ಇನ್ನೂ ಮಲ್ಪೆ ಬಂದರು ಅಭಿವೃದ್ಧಿ ಆಗಬೇಕು. ಅದರ ಬಗ್ಗೆ ಕೇಂದ್ರ ಸರ್ಕಾರದವರಲ್ಲಿ ಈಗಾಗಲೇ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಅದನ್ನು ಒಳ್ಳೆಯ ಬಂದರನ್ನಾಗಿ ಮಾಡಬೇಕೆಂದು ಅವರೇ ಹೇಳುತ್ತಿದ್ದಾರೆ. ಆದರೂ ಕೆಲಸ ಸಾಗುತ್ತಿಲ್ಲವೆಂದೂ ಹೇಳಿದ್ದಾರೆ. ಅವರು ಒಳ್ಳೆಯ ಉತ್ಸಾಹದಿಂದ ಕೆಲಸಮಾಡುತ್ತಾ ಇರುವಾಗ ಅವರಿಗೆ ಕೊಟ್ಟಿರುವ ಹಣ ಕಡಿಮೆಯಾಗಿದೆಯೆಂದು ಹೇಳಬಹುದು.

ಅವರಿಗೆ ಬೇಕಾದ ಎಲ್ಲಾ ಏರ್ಪಾಡು ಮತ್ತು ಎಲ್ಲಾ ಅನುಕೂಲಗಳನ್ನು ಮಾಡಬೇಕು. ಅವರು ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಬಡ್ಜೆಟ್ಟಿನಲ್ಲಿ ಕೂಡ ಕಡಿಮೆ ಹಣ ಒದಗಿಸಿರುವುದರಿಂದ ನಾವು ನಾಗರೀಕರ ಬೇಡಿಕೆಗಳನ್ನು ಪೂರೈಸಲಿಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ. ಆದ್ದರಿಂದ ಹೆಚ್ಚು ಹಣ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಇನ್ನು ಫಿಷರಿ ಕಾಲೇಜು ಇಡೀ ಏಷ್ಯಾದಲ್ಲೇ ಪ್ರ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗುವಂಥದ್ದು ಇದೆ. ರಾಜ್ಯದ ಮಂತ್ರಿಗಳಾದ ಲಿಂಗಾರೆಡ್ಡಿಯವರು ಸಮುದ್ರ ಕರಾವಳಿಯಲ್ಲಿ ಕಂಕನಾಡಿಯನ್ನು ಅದಕ್ಕಾಗಿ ಆರಿಸಿಕೊಂಡಿದ್ದಾರೆ. ಅಲ್ಲಿಂದ ಮೀನುಗಾರಿಕೆ ನಿಪುಣರು ತರಪೇತು ಆಗುವ ಸಂದರ್ಭ ಇದೆ. ಈ ಫಿಷರೀ ಕಾಲೇಜಿನಲ್ಲಿ ಮೀನುಗಾರರ ಮಕ್ಕಳನ್ನು ತೆಗೆದುಕೊಳ್ಳುವ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆ ಪಡುತ್ತೇನೆ ಅನೇಕ ಮೀನುಗಾರರಿಗೆ ಹೆಚ್ಚಿನ ಯಂತ್ರಿಕ ದೋಣಿಗಳನ್ನು ಒದಗಿಸಿಕೊಂಡಬೇಕು ಆಗ ಅವರಿಗೆ ಹೆಚ್ಚು ಮೀನು ಹಿಡಿದು ಅವರ ಸಂಪತ್ತನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಆದರ ಜೊತೆಗೆ ಫಿಷರೀಸ್ ರೋಡ್ಸ್, ಮೀನು ಸಾಗಿಸುವುದಕ್ಕೆ ಬೇಕಾದ ವಾಹನಗಳನ್ನು ಮತ್ತು ಅದನ್ನು 'ಏಲಂ ಮಾಡತಕ್ಕ ಕಟ್ಟಡಗಳನ್ನು' ಒದಗಿಸಿ ಕೊಟ್ಟರೆ ಮೀನುಗಾರಿಕೆಯಲ್ಲಿ ನಮ್ಮ ರಾಜ್ಯ ಮಾದರಿ ರಾಜ್ಯವಾಗುವುದಕ್ಕೆ ಸಾಧ್ಯಉಂಟು ಕೇಂದ್ರದ ದುಡ್ಡಾಗಲಿ, ಅಥವಾ ರಾಜ್ಯದ ದುಡ್ಡಾಗಲಿ, ಹೆಚ್ಚು ಹಣ ಒದಗಿಸಿಕೊಟ್ಟರೆ. ನಮ್ಮ ಮಂತ್ರಿಗಳು

(ಶ್ರೀ ಎಂ. ಇದಿನಬ್ಬ)

ಉತ್ಸಾಹದಿಂದ ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯ ಆಗುತ್ತವೆ ಎಂದು ಹೇಳುತ್ತೇನೆ. ಮೀನು-ಗಾರಿಕೆ ಮಂತ್ರಿಗಳು ಏನು ಮಾಡಲಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದದ್ದು. ಅವರಿಗೆ ಕೊಟ್ಟ ಕೆಲಸ ಮಾಡಿದ್ದಾರೆ. ಇನ್ನು ಹೆಚ್ಚು ಕೆಲಸವನ್ನು ಅವರಿಂದ ಮಾಡಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷಿಪಡುತ್ತೇನೆ. ಇನ್ನು ಮೀನುಗಾರಿಕೆ ಮಂತ್ರಿಗಳು ಬೇರೆ ಬೇರೆ ಸಮಾರಂಭ-ಗಳಿಗೆ ಬರುತ್ತಾರೆ. ಎಂದು ಅಪಾದನೆ ಮಾಡುತ್ತಾರೆ. ಅವರನ್ನು ಎಲ್ಲಿ ಕರೆಯುತ್ತಾರೋ ಅಲ್ಲಿಗೆ ಬರಲೇ ಬೇಕಾಗುತ್ತದೆ. ಆದ್ದರಿಂದ ಒಳನಾಡಿನಲ್ಲಿ ಆಗಲಿ ಕರಾವಳಿಯಲ್ಲಿ ಆಗಲಿ ಅವರು ಎಲ್ಲಾ ಕಡೆಯೂ ಈ ಮೀನುಗಾರಿಕೆ ಅಭಿವೃದ್ಧಿ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದಾರೆಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಪಶು ಸಂಗೋಪನೆ ಬಗ್ಗೆ ಎರಡು ಮಾತು ಹೇಳಬಯಸುತ್ತೇನೆ. ಮಂಗಳೂರಿನಲ್ಲಿ ಹಾಲಿನ ಡೈರಿ ಸ್ಥಾಪನೆ ಮಾಡಲು ಬೇಕಾದಂಥ ಯಂತ್ರಗಳು ಬಂದಿವೆ ಅದು ಇನ್ನೂ ಕಾರ್ಯ ರೂಪಕ್ಕೆ ಬರಲಿಲ್ಲ. ಬೆಂಗಳೂರು ಬಿಟ್ಟರೆ ಎರಡನೆಯ ಸ್ಥಾನ ಪಡೆದಿರುವ ಸ್ಥಳ ಮಂಗಳೂರು ಅದು ಜನ ನಿಬಿಡವಾದ ಸ್ಥಳ ಆದಷ್ಟು ಶೀಘ್ರವಾಗಿ ಅಲ್ಲಿ ಹಾಲಿನ ಡೈರಿಯನ್ನು ಮಾಡಿಕೊಡಬೇಕು. ಇನ್ನು ಕೊಯಿಲಾದಲ್ಲಿ ಕ್ಯಾಟಲ್ ಫಾರಂ ಇದೆ. ಅಲ್ಲಿಯ ಕಾರ್ಯಾಡಳಿತದ ವಿಚಾರದಲ್ಲಿ ಅನೇಕರು ನಮ್ಮಲ್ಲಿ ದೂರು ಹೇಳುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೆ ಸುತ್ತ ಮುತ್ತಲಿನ ಬೇಸಾಯಗಾರರಿಗೆ ಬೇರೆ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ ಅಲ್ಲಿ ಒಂದು ರೀತಿಯ ರಾಜಕೀಯ ನಡೆಯುತ್ತಿದೆ ಸರಿಯಾಗಿ ಕೆಲಸಗಳು ನಡೆಯುವುದಿಲ್ಲ ಎಂದು ಅನೇಕ ಜನರು ನನ್ನಲ್ಲಿ ಹೇಳಿದ್ದಾರೆ. ಅದು ಕೂಡ ಹೆಚ್ಚು ನಷ್ಟದಲ್ಲಿ ನಡೆಯುತ್ತಿದೆ ಎಂದು ಕೇಳಿದ್ದೇನೆ. ಅದು ಯಾಕೆ ನಷ್ಟದಲ್ಲಿ ನಡೆಯುತ್ತಿದೆ ಎಂದು ತನಿಖೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಸಂಪತ್ತಿನ ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬ್ರಿಟಿಷರು ಬಿಟ್ಟು ಹೋಗುವಾಗ ಅರಣ್ಯ ಸಂಪತ್ತು ವಿಚಾರ ಹೇಳಿದ್ದಾರೆ. ರಾಜ್ಯಭಾರವನ್ನು ಅರಣ್ಯ ಸಂಪತ್ತಿನಿಂದ ೫೦ ವರ್ಷಗಳು ಬೇಕಾದರೂ ಮಾಡಬಹುದು ಎಂದು ಹೇಳಿದ್ದಾರೆ. ಮೈಸೂರು ಅರಣ್ಯ ಸಂಪತ್ತು ಇರುವ ಪ್ರದೇಶ. ಆ ಅರಣ್ಯ ಸಂಪತ್ತನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಕೆಲವರು ಅರಣ್ಯದಲ್ಲಿರುವ ಮರಗಳನ್ನು ಕಡಿದು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ದೂರು ಬಂದಿದೆ. ಆದ ಕಡೆಗೆ ಅರಣ್ಯ ಮಂತ್ರಿಗಳು ಹೆಚ್ಚು ಗಮನ ಕೊಡ-ಬೇಕೆಂದು ಹೇಳುತ್ತೇನೆ. ಈಗ ಬಿದಿರು ಸಂಪೂರ್ಣವಾಗಿ ನಾಶವಾಗುತ್ತಿದೆ. ಅದನ್ನು ಹೆಚ್ಚಾಗಿ ಬೆಳಸಬೇಕು. ಈಗ ಉತ್ತರ ಕರ್ಣಾಟಕದಲ್ಲಿ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಅರಣ್ಯ ಸಂಪತ್ತಿನಿಂದ ಬರುವ ಆದಾಯದಲ್ಲಿ ಒಂದು ಪಾಲು ಕೊಡುತ್ತಿದ್ದಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಗೂ, ಮಲೆನಾಡು ಪ್ರದೇಶವಾದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗೂ ಈ ಅರಣ್ಯದಿಂದ ಬರುವ ಆದಾಯದಲ್ಲಿ ಒಂದು ಭಾಗ ಕೊಟ್ಟರೆ ಒಳ್ಳೆಯ ರೀತಿಯಲ್ಲಿ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳು ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ರೀತಿ ಮಂತ್ರಿಗಳು ಮಾಡಬೇಕು ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಎನ್. ಲೋಕಯ್ಯ ನಾಯಕ್ (ವಿರಾಜಪೇಟ್) :— ಮಾನ್ಯ ಸಭಾಧ್ಯಕ್ಷರೇ ನಮ್ಮ ಮುಂದೆ ಇರತಕ್ಕ ವ್ಯವಸಾಯ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಹಾಗೂ ಅರಣ್ಯಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ೧೨ ಸಾವಿರ ೧೦೫ ಚದುರ ಮೈಲಿಗಳಷ್ಟು ಅರಣ್ಯ ಇದೆ. ಇದು ಅರಣ್ಯ ಇಲಾಖೆಯ ಸ್ವಾಧೀನದಲ್ಲಿ ಇದೆ. ಅಂದರೆ ೧೪೮೬. ೬೬ ಚದುರ ಮೈಲಿಗಳಷ್ಟು ರೆವಿನ್ಯೂ ಇಲಾಖೆಯಲ್ಲಿ ಇದೆ. ಇದು ಯಾವರೀತಿ ಅಂದರೆ ದೇವರ ಕಾಡುಗಳು ಮತ್ತು ವಿಲೇಜ್ ಫಾರೆಸ್ಟ್ ಏನಿದೆಯೋ ಅದು ಎಲ್ಲಾ ರೆವಿನ್ಯೂ ಇಲಾಖೆಯಲ್ಲಿ ಇದೆ. ಈವೊತ್ತು ನಮ್ಮ ರಾಜ್ಯದಲ್ಲಿ ಮೀನುಗಾರಿಕೆಯಿಂದ ಸುಲಭದಲ್ಲಿ ನಮ್ಮ ರಾಜ್ಯ ಬೊಕ್ಕಸಕ್ಕೆ ಯಾವ ರೀತಿ ಲಾಭ ಬರುವುದು ಇದೆಯೋ ಅದೇ ರೀತಿ ನಮ್ಮ ರಾಜ್ಯದಲ್ಲಿ ಬರುವಂಥ ಎರಡನೆಯ ಆದಾಯ ಎಂದರೆ ಅರಣ್ಯ ಇಲಾಖೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರಕೃತಿಯಿಂದ ಬೆಳೆಯುತಕ್ಕ ಮರಗಳಿಗೆ ಗೊಬ್ಬರವಾಗಲೀ ಅಥವಾ ನೀರಾಗಲೀ ಹಾಕಬೇಕಾಗಿಲ್ಲ ಅಂತಹ ದೊಡ್ಡ ಸಂಪತ್ತನ್ನು ನಮ್ಮ ಸರಕಾರ-ದವರು ರಕ್ಷಿಸಿಕೊಂಡು ಬರಬೇಕಾಗಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ೨ ಲಕ್ಷ ೬೭೭ ಎಕರೆಗಳಷ್ಟು ಅರಣ್ಯ ಇದೆ. ಎಷ್ಟೋ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಅರಣ್ಯ ಸಂಪತ್ತು ಕಳ್ಳತನದಿಂದ ಹಾಳಾಗಿ

ಹೋಗುತ್ತಾ ಇದೆ. ಇದನ್ನು ಸರಿಯಾದ ರೀತಿಯಲ್ಲಿ ರಕ್ಷಿಸಿಕೊಂಡು ಬರುವ ಸಲುವಾಗಿ ತುರ್ತು ಕಾರ್ಯಕ್ರಮಗಳನ್ನು ಹಾಕತಕ್ಕದ್ದು ಆವಶ್ಯಕ ಕೋಟ್ಯಾಂತರ ರೂಪಾಯಿಯ ಗಂಧದ ಮರ ಮತ್ತು ಬೀಟಿ ಮರ ಪ್ರತಿ ನಿತ್ಯವು ಹೊರಗಡೆ ಹೋಗುತ್ತಾ ಇವೆ. ಅದನ್ನು ತಡೆಗಟ್ಟುವ ಕಾರ್ಯದಲ್ಲಿ ನಿಮ್ಮ ಅಧಿಕಾರಿಗಳ ಕೈವಾಡವೂ ಇದೆ. ಅಧಿಕಾರಿಗಳು ಅನೇಕ ರೀತಿಯಲ್ಲಿ ಕಳ್ಳಸಾಗಣಿಕೆಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಮತ್ತು ಈ ಸಂಬಂಧದಲ್ಲಿ ಅನೇಕ ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಒಳ್ಳೆಯ ರೀತಿಯಲ್ಲಿ ಬೆಳೆದುಕೊಂಡು ಬರುವುದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಭಾಗಮಂಡಲ ರೇಂಜಿನಲ್ಲಿ ನೀಲಗಿರಿ ಗಿಡಗಳನ್ನು ಹಾಕಬೇಂದು ಪ್ರಯತ್ನ ಪಟ್ಟರು. ಆ ಬೆಟ್ಟದ ಮೇಲೆ ಒಂದು ಗಿಡವು ಬೆಳೆಯುವುದಿಲ್ಲ. ಕೂದಲು ಇಲ್ಲದೆ ತಲೆಯಲ್ಲಿ ಕೂದಲು ಯೋಜನೆ ಮಾಡುತ್ತಿದ್ದಾರೆ. ಈ ರೀತಿ ಇರುವಂಥ ೧೨೦೦ ಎಕರೆಗಳಷ್ಟು ಪ್ರದೇಶದಲ್ಲಿ ಒಂದು ಲಕ್ಷ ೨೫ ಸಾವಿರ ರೂಪಾಯಿ ಖರ್ಚು ಮಾಡಿ ನೀಲಗಿರಿ ಗಿಡಗಳನ್ನು ಹಾಕಿದರು. ಮತ್ತು ಕೆಲವು ಕಡೆ ಹೊಂಡಗಳನ್ನು ತೆಗೆದಿದ್ದರೂ ಗಿಡಗಳನ್ನು ನೆಟ್ಟಿಲ್ಲ. ಇನ್ನು ಕೆಲವು ಕಡೆ ನೆಟ್ಟಿದ್ದ ಗಿಡಗಳು ಒಂದೂ ಉಳಿಯಲಿಲ್ಲ.

ಯಾವ ಅಧಿಕಾರಿಗಳು ಈ ರೀತಿ ಬೆಳೆಯದೇ ಇರತಕ್ಕ ಜಾಗದಲ್ಲಿ ಒಂದು ಸಾವಿರ ಎಕರೆಯಷ್ಟು ಪ್ರದೇಶದಲ್ಲಿ ಇಷ್ಟೊಂದು ದುಡ್ಡನ್ನು ಖರ್ಚು ಮಾಡಿ ನೀಲಗಿರಿ ಗಿಡವನ್ನು ಹಾಕಿದರೋ ಗೊತ್ತಿಲ್ಲ. ಪ್ರಯೋಗಕ್ಕಾಗಿ ೧೦—೨೦ ಎಕರೆಗಳಲ್ಲಿ ಮಾಡಿದ್ದರೆ ಉತ್ತಮವಾಗುತ್ತಾ ಇತ್ತು. ಈ ರೀತಿ ಅರಣ್ಯ ರಕ್ಷಣೆಯನ್ನು ಮಾಡುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಯಸುತ್ತೇನೆ.

ವೆಸ್ಟರನ್ ಇಂಡಿಯಾ ಪ್ಲೈವುಡ್ ಫ್ಯಾಕ್ಟರಿ ಲಿಮಿಟೆಡ್ ಅಂತ ಹೇಳಿ ಕೇರಳದ ಒಬ್ಬ ದೊಡ್ಡ ಮನುಷ್ಯರಿಗೆ ಫ್ಯಾಕ್ಟರಿಗಾಗಿ ಕೊಡಗಿನಲ್ಲಿ ಲೈಸೆನ್ಸ್ ಕೊಡುತ್ತಾ ಇದ್ದೀರಿ. ಸುಮಾರು ೨೮ ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕ ಮರಗಳನ್ನು ಕನ್‌ಸೆಷನ್ ರೇಟ್‌ನಲ್ಲಿ ೨೦ ವರ್ಷಗಳ ಲೀಸ್ ಮೇಲೆ ಹೆಚ್ಚು ಕಡಿಮೆ ೧೦ ಕೋಟಿರೂಪಾಯಿಗಳಿಗೆ ಆತನಿಗೆ ಕೊಡಲಿಕ್ಕೆ ನಿರ್ಧಾರ ಮಾಡಿದ್ದೀರಿ. ಇದು ಎಲ್ಲರಿಗೂ ಕೂಡ ಗೊತ್ತಾಗಿದೆ. ಈ ಒಂದು ದುರ್ವ್ಯವಹಾರ ಏನಿದೆ ಇದನ್ನು ಖಂಡಿತ ಕೈ ಬಿಡಬೇಕು. ಇಲ್ಲದೇ ಹೋದರೆ ಈ ಫ್ಯಾಕ್ಟರಿ ಪ್ರಾರಂಭವಾದ ಕೂಡಲೇ ಅಲ್ಲಿರುವ ಮರಗಳೆಲ್ಲಾ ನಾಶವಾಗಿ, ಅಲ್ಲಿನ ಕಾಡು ಎಲ್ಲಾ ಹೋಗಿ ಮಳೆ ಕೂಡ ಬರದೇ ಕಾವೇರಿ ಜಲಾಸಯನ ಭೂಮಿಯಿಂದ ಹಿಡಿದು ತಮಿಳು ನಾಡಿನವರೆಗೆ ಎಷ್ಟು ಪ್ರದೇಶ ಇದೆಯೋ ಅದೆಲ್ಲಾ ಬರಗಾಲಕ್ಕೆ ಈಡಾಗಬಹುದು ಎಂಬ ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ. ಇದೇ ತಿಂಗಳ ೧೭ನೇ ತಾರೀಖು ಮಾನ್ಯ ರಾಜಶೇಖರ ಮೂರ್ತಿಯವರ ಚೇಂಬರ್‌ನಲ್ಲಿ ಈ ಮರಗಳನ್ನು ಆವನಿಗೆ ಕೊಡಬೇಕೇ ಬೇಡವೇ ಎಂಬ ವಿಚಾರದಲ್ಲಿ ಒಂದು ಮೀಟಿಂಗ್ ಕೂಡ ಕರೆದಿದ್ದರು. ಈ ಮರವನ್ನು ಕೊಡಗಿನಲ್ಲಿ ಕೊಡಬೇಕಾಗಿದ್ದರೆ ಎಲ್ಲಿಂದ ಕೊಡುತ್ತೀರಿ? ಅಲ್ಲಿ ಸುಮಾರು ೭೦೦ ಗೇಣಿಮನೆತನದವರು ವಾಸ ಇದ್ದಾರೆ. ಅವರು ಯಾಲಕ್ಕಿ ಬೆಳೆಸುವರು, ಅವರು ತಮ್ಮ ಪ್ರತಿಭಟನೆಯನ್ನು ಇದಕ್ಕೆ ಮಾಡಿದ್ದಾರೆ. ಅವರಿಗೆ ಕೊಟ್ಟಿರತಕ್ಕ ಲೀಸ್ ಏನಿದೆ ಅದು ಈಗಾಗಲೇ ಮುಗಿಯುತ್ತಾ ಬಂದಿದೆ. ಅವರಿಗೆ ಕೊಟ್ಟಿದ್ದನ್ನು ಇಲ್ಲಿಗೆ ನಿಲ್ಲಿಸಿ ಅಲ್ಲಿರತಕ್ಕ ಮರಗಳನ್ನು ಇವನಿಗೆ ಕೊಡಲಿಕ್ಕೂ ಕೂಡ ಯೋಚನೆ ಮಾಡಿದ್ದೀರಿ ಎಂದು ಗೊತ್ತಾಗಿದೆ. ಯಾಲಕ್ಕಿ ಬೆಳೆಯಿಂದ ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳಷ್ಟು ವಿದೇಶೀ ವಿನಿಮಯ ನಮಗೆ ಸಿಕ್ಕುತ್ತಾ ಇದೆ. ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಆ ಮರಗಳನ್ನು ಉಳಿಸಿಕೊಳ್ಳಬೇಕು ಎಂದು ಹೇಳುತ್ತಾ ಇದ್ದೇನೆ. ಇಲ್ಲದೇ ಹೋದರೆ ಕಾಡಿಗೂ ನಷ್ಟವಾಗುತ್ತದೆ, ಅದರ ಪರಿಣಾಮವಾಗಿ ಮಳೆ ಕೂಡ ಕಡಿಮೆಯಾಗುತ್ತದೆ, ಮಳೆ ಕಡಿಮೆಯಾದರೆ ಇಡೀ ರಾಜ್ಯಕ್ಕೂ ಕೂಡ ಅದರಿಂದ ಗಂಡಾಂತರವಾಗುತ್ತದೆಂದು ಸರ್ಕಾರದವರಿಗೆ ಎಚ್ಚರಿಕೆ ಕೊಡಬಯಸುತ್ತೇನೆ. ಆದ್ದರಿಂದ ಈ ಫ್ಯಾಕ್ಟರಿಗೆ ಮರ ಕೊಡುವ ಯೋಜನೆಯನ್ನು ಏನು ಹಾಕಿಕೊಂಡಿದ್ದೀರಿ ಇದನ್ನು ಕೈ ಬಿಡಬೇಕು, ಇದಕ್ಕೆ ಜನರ ವಿರೋಧ, ಪ್ರತಿಭಟನೆ ಇದೆ ಮತ್ತು ಈ ರೀತಿ ಕೊಡುವುದರಿಂದ ರಾಜ್ಯಕ್ಕೂ ಗಂಡಾಂತರಕಾರಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇಗೌಡ (ಮದ್ದೂರು):—

ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಈ ಸಭೆಯ ಮುಂದೆ ಇಟ್ಟಿರತಕ್ಕ ವ್ಯವಸಾಯದ ಇಲಾಖೆ, ಅರಣ್ಯದ ಇಲಾಖೆ, ಮೀನುಗಾರಿಕೆ ಹಾಗೂ ಪಶುಪಾಲನಾ ಇಲಾಖೆಗಳ ಬೇಡಿಕೆಗಳನ್ನು ವಿಮರ್ಶಿಸುತ್ತಾ ನನಗೆ ಕೊಟ್ಟಿರತಕ್ಕ ಅತ್ಯಲ್ಪ ವೇಳೆಯಲ್ಲಿ ಕೆಲವಂಶಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಇಚ್ಛಿಸಿದ್ದೇನೆ. ಅನೇಕ ಮಂದಿ ಸದಸ್ಯರುಗಳು ಸೂಕ್ಷ್ಮವಾಗಿ ರೈತಾಪಿ ಜನರ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಕ್ಕೆ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿದಾಗ್ಯೂ ಕೂಡ ಎಷ್ಟು ಅಭಿವೃದ್ಧಿಯಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಕೃಷಿ ಇಲಾಖೆಯವರು ಅನೇಕ ಸಂಶೋಧನೆಗಳನ್ನು

(ಶ್ರೀ ಎಂ. ಮಂಜೇಗೌಡ)

ನಡೆಸಿ ತರೀ ಜಮೀನಿನಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಹೆಚ್ಚು ಇಳುವರಿ ಬೆಳೆಗಳಿಗೆ ಬಹಳವಾಗಿ ಉತ್ತೇಜನ ಕೊಟ್ಟಿದ್ದಾರೆ. ಆದರಿಂದ ಆಹಾರ ಸಮಸ್ಯೆ ಎಷ್ಟೊಂದು ಕಠಿಣವಾಗಿತ್ತೋ ಅದು ತಕ್ಕಮಟ್ಟಿಗೆ ಬಗೆಹರಿದಿದೆ. ಆಷ್ಟೇ ತೃಪ್ತಿಯಾದಲ್ಲಿ ನಮ್ಮ ರಾಜ್ಯದ ಬಹುತೇಕ ಮಂದಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದಂತೆ ಆಯಿತೇ ಎನ್ನುವುದನ್ನು ಯೋಚನೆ ಮಾಡಲೇಬೇಕಾಗಿದೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ರೈತಾಪಿಜನರನ್ನು ಎರಡು ಭಾಗ ಮಾಡಬಹುದು. ಒಣ ಬೆಳೆ ಬೆಳೆಯುತಕ್ಕ ಜನ ಒಂದು ಕಡೆ, ನೀರಾವರಿ ಸೌಕರ್ಯ ಇದ್ದು ಆಧುನಿಕ ಪದ್ಧತಿಗಳನ್ನು ಸರಿಯಾಗಿ ಅನುಸರಿಸಿ ಬೇಸಾಯ ಮಾಡತಕ್ಕ ಜನ ಇನ್ನೊಂದು ಕಡೆ. ಈ ರೀತಿ ಎರಡು ಗುಂಪಿನ ಜನಗಳಿಗೂ ಕೂಡ ಸಂತುಷ್ಟಿ ಇದೆಯೇ ಅಂತ ಯೋಚನೆ ಮಾಡಿದ್ದೇ ಆದರೆ ಒಂದು ಗುಂಪಿನವರಲ್ಲಿ ಸಂತುಷ್ಟಿ ಕಡಮೆಯಾಗುತ್ತಾ ಇದೆ ಒಣ ಬೆಳೆ ಬೆಳೆಯತಕ್ಕ ಜನ ಅನೇಕ ವರ್ಷಗಳಿಂದ ವ್ಯವಸಾಯಕ್ಕೆ ಹಣವನ್ನು ವೆಚ್ಚ ಮಾಡಿ ಎಲ್ಲೆಲ್ಲಿ ಸಾಲ ದೊರೆಯಬಹುದೋ ಅಲ್ಲೆಲ್ಲಾ ಸಾಲವನ್ನು ತೆಗೆದುಕೊಂಡು, ಆಧಾರ ಮಾಡಲಿಕ್ಕೆ ಅವರಿಗೆ ಏನು ಆಸ್ತಿ ಇದೆಯೋ ಅದೆಲ್ಲವನ್ನೂ ಆಧಾರವಾಗಿಟ್ಟು ಸಾಲ ಪಡೆದು ಸಾಲಗಾರರಾಗಿದ್ದಾರೆ. ಅವರಲ್ಲಿ ಅತೃಪ್ತಿ ಬಹಳವಾಗಿ ಬೆಳೆದಿದೆ. ಇಂತಹ ಜನಗಳ ಅತೃಪ್ತಿಯನ್ನು ಪೂರ್ಣವಾಗಿ ಹೋಗಲಾಡಿಸಬೇಕಾದರೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದಕ್ಕನುಗುಣವಾಗಿ ನಾವು ರಚನೆ ಮಾಡತಕ್ಕ ಯೋಜನೆಗಳು ಮತ್ತು ಮಂಡಿಸತಕ್ಕ ಬಡ್ಜೆಟ್ಟುಗಳು ಸಹಕಾರಿಯಾಗಿರಬೇಕು. ಈಗ ರೂಪಿಸಿರತಕ್ಕ ಚತುರ್ಥ ಯೋಜನೆ, ಈ ಸಾರಿ ಮಂಡಿಸಿರತಕ್ಕ ಬಡ್ಜೆಟ್ಟು ಏನಿದೆ ಇದು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಪಾಲು ಉಪಕಾರಿಯಾಗಿದೆ ಎಂಬುದನು ಯೋಚನೆ ಮಾಡಿದ್ದೇ ಆದರೆ ಬಹುಶಃ ನಿರಾಶೆಯಾಗುತ್ತದೆ.

4–30 P.M.

ಒಣ ಫಸಲನ್ನವಲಂಬಿಸಿರುವ ಜನರ ಪರಿಸ್ಥಿತಿಯನ್ನು ಸುಧಾರಿಸಲು ಏನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳಲು ಕಾಲಾವಕಾಶವಿಲ್ಲ, ಅನೇಕ ಮಿತ್ರರು ಈ ವಿಚಾರದಲ್ಲಿ ಸಲಹೆ ಮಾಡಿದ್ದಾರೆ. ಅದಷ್ಟು ಜಾಗ್ರತೆ ಅವರ ಪರಿಸ್ಥಿತಿಯನ್ನು ಸುಧಾರಿಸಬೇಕು ಈ ಬಗೆಯ ಜನರಲ್ಲಿ ಅಶಾಂತಿಯುತವಾದ ವಾತಾವರಣವಿದೆ, ಪ್ರಜಾಪ್ರಭುತ್ವ ನಿಜವಾಗಿಯೂ ಉಳಿಯಬೇಕಾದರೆ ಯಾರು ಇದುವರೆಗೆ ಆಧಾರಸ್ತಂಭದ ಹಾಗಿದ್ದಾರೆ, ಯಾರು ಮೂಕ ಪ್ರಾಣಿಗಳಂತಿದ್ದಾರೆ, ಅವರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು. ಅವರ ಪರಿಸ್ಥಿತಿ ಇನ್ನೂ ಹದಗೆಟ್ಟರೆ ಈ ಸಭೆ ಉಳಿಯಲಾರದು, ನಾವೂ ಉಳಿಯುವುದಿಲ್ಲ, ಶಾಂತಿಯೂ ಇರುವುದಿಲ್ಲ. ಈ ಬಗ್ಗೆ ತೀವ್ರವಾಗಿ ಯೋಚನೆ ಮಾಡದಿದ್ದರೆ ತಪ್ಪಾಗಬಹುದು. ಮತ್ತೊಂದು ಗುಂಪು ನೀರಾವರಿ ಭಾಗದಲ್ಲಿರುವ ರೈತರು. ಕಳೆದ ಸಾಲಿನವರೆಗೂ ಅವರ ಸ್ಥಿತಿ ಸ್ವಲ್ಪ ಚೆನ್ನಾಗಿತ್ತು, ಧಾರಣೆವಾಸಿ ಚೆನ್ನಾಗಿತ್ತು, ಧಾರಣೆ ಹೆಚ್ಚಿದ್ದರಿಂದ ಹೆಚ್ಚು ಉತ್ಪತ್ತಿ ಮಾಡಬಹುದು ಎಂದು ಕಾತುರತೆಯಿಂದ ಸಾಲ ಸಿಕ್ಕುವ ಕಡೆಯಲ್ಲೆಲ್ಲಾ ಸಾಲ ತೆಗೆದುಕೊಂಡು ಬೆಳೆಗಾಗಿ ವೆಚ್ಚ ಮಾಡಿದ್ದಾರೆ. ಆ ಹಣಕ್ಕೆ ತಕ್ಕ ಪ್ರತಿಫಲ ಕೆಲವು ಕಡೆ ದೊರೆತಿದೆ. ಆದರೆ ಈಗ ಧಾರಣೆವಾಸಿ ಬಹಳ ಇಳಿದಿರುವುದರಿಂದ ಗ್ರಾಮಾಂತರಗಳ ರೈತರಿಗೆ ಬಹಳ ತೊಂದರೆಯಾಗಿದೆ. ಯಾರೇ ಆಗಲಿ, ಒಟ್ಟಿನಲ್ಲಿ ಸಮಾಜದಲ್ಲಿ ಶಾಂತಿ ಇರಬೇಕಾದರೆ ಆಹಾರ ಸಮಸ್ಯೆಯೇನಿದೆ ಅದು ಬಗೆಹರಿಯಬೇಕು, ಮತ್ತು ಯಾವ ಕಾರಣದಿಂದ ಧಾರಣೆ ಇಳಿದಿದೆ ಎಂಬುದನ್ನು ನೋಡಿ ಅದು ಇನ್ನೂ ಇಳಿಯದಂತೆ ನೋಡಿಕೊಳ್ಳಬೇಕು. ಬೆಲೆ ಇಳಿದರೆ ರೈತರಿಗೆ ಅನುಕೂಲವಾಗುವಂತೆ ಸ್ವಲ್ಪ ಧಾರಣೆ ಹೆಚ್ಚಿಸಬೇಕು, ಎಂದರೆ ಕೊಳ್ಳುವವರಿಗೆ ತೊಂದರೆಯಾಗದಂತೆ ಹೆಚ್ಚಿಸಬೇಕು. ಈಗ ಗೊಬ್ಬರದ ಬೆಲೆ ವಿಪರೀತವಾಗಿದೆ, ಎಂಥ ರೈತರಾದರೂ ರಾಸಾಯನಿಕ ಗೊಬ್ಬರ ಉಪಯೋಗಿಸಬೇಕು. ಇದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿಲ್ಲ, ಭಾರತ ಸರಕಾರದ ನೀತಿ ಬದಲಾವಣೆಯಾಗುವವರೆಗೆ ರಾಸಾಯನಿಕ ಗೊಬ್ಬರದ ಬೆಲೆ ಇಳಿಯುವುದಿಲ್ಲ. ಈಗಿನ ಭಾರತ ಸರಕಾರದ ಬಜೆಟ್ ರೈತರಿಗೆ ಅನುಕೂಲವಾಗುವಂತಿಲ್ಲ. ಆದರೆ ರಾಜ್ಯ ಸರಕಾರದವರು ಮಾರಾಟದಲ್ಲಿರುವ ಬೇಕಾದಷ್ಟು ಇಂಟರ್‌ಮೀಡಿಯರಿಗಳನ್ನು ತೆಗೆದು ಹಾಕಬಹುದು, ಅವರು ಬೇಕಾದಷ್ಟು ಮಂದಿ ಇದ್ದಾರೆ. ಆ ಏಜಂಟುಗಳನ್ನು ತಪ್ಪಿಸಿದರೆ ಬೆಲೆ ಇಳಿಸಬಹುದು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಈ ಸಾರಿ ಒಂದೂವರೆ ಕೋಟಿ ರೂಪಾಯಿಗಳ ನಷ್ಟವಾಗಿದೆ, ಇದಕ್ಕೆ ಹಿನ್ನೆಲೆಯೇನೆಂಬುದು ರೈತರಿಗೆ ತಿಳಿಯುವುದಿಲ್ಲ. ನಷ್ಟವಾದರೂ ಕೂಡ ಇಲಾಖೆ ಇದೆ, ಸಿಬ್ಬಂದಿಯಿದೆ. ಈ ಇಲಾಖೆಯನ್ನು ತೆಗೆದರೆ ಒಂದೂವರೆ ಕೋಟಿ ಸಬ್ಸಿಡಿ ಕೊಟ್ಟು ಗೊಬ್ಬರದ ಬೆಲೆ ಇಳಿಸಬಹುದು. ನಮ್ಮ ಉದ್ದೇಶ ರೈತರ ಸ್ಥಿತಿ ಸುಧಾರಿಸಬೇಕು ಎಂಬುದು. ಆದುದರಿಂದ ಇಲಾಖೆ ತೆಗೆಯುವುದು ಸೂಕ್ತ. ಹೀಗೆ ರಾಜ್ಯ ಸರಕಾರ ಸಾಧ್ಯವಿರುವುದನ್ನು ಮಾಡಬೇಕು ಹಾಗೆಯೇ ವ್ಯವಸಾಯದ ಉಪಕರಣದ ಬೆಲೆಯನ್ನೂ ಇಳಿಸಬೇಕು. ಬುಲ್‌ಡೋಜರುಗಳನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಒದಗಿಸುವುದು. ನಮ್ಮಲ್ಲಿ ದೊಡ್ಡ ಜಮೀನುದಾರರಿಲ್ಲ, ಇನ್ನು ಮುಂದೆ ಭೂ ಸುಧಾರಣೆ ಜಾರಿಗೆ ಬರುವುದರಿಂದ ದೊಡ್ಡ ಜಮೀನುದಾರರು ಇರುವುದಕ್ಕೆ ಸಾಧ್ಯವೂ ಇಲ್ಲ ಬಡವರಿಗೆ ಬುಲ ಡೋಜರನ್ನು ಕೊಳ್ಳುವ ಶಕ್ತಿಯೂ ಇಲ್ಲ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಿಗದಿ ಮಾಡಿರುವ ದರ ಕೊಟ್ಟು ಬುಲ್‌ಡೋಜರನ್ನು ಪಡೆದು ಬಡವರು ಭೂಮಿ ಮಟ್ಟ ಮಾಡಲು ಸಾಧ್ಯವಿಲ್ಲ,

ಹಾಗೆ ಮಾಡಿದರೆ ಅವರು ಸಾಲ ತೀರಿಸಲು ಸಾಧ್ಯವಿಲ್ಲ. ಆದುದರಿಂದ ಸಬ್ಸಿಡೈಜ್ ಆದರೂ ಮಾಡಿ ದರ ಕಡಮೆ ಮಾಡಿದರೆ ಬಡವರಿಗೆ ಸ್ವಲ್ಪ ಸೌಲಭ್ಯ ಸಿಕ್ಕುವುದು. ಎರಡನೆಯದಾಗಿ ಜಮೀನು ಮಟ್ಟಮಾಡಲು ಬ್ಯಾಂಕುಗಳಲ್ಲಿ ಸಾಲ ಸಿಕ್ಕುವುದು, ಇದಕ್ಕೆ ಏಕರೆಗೆ ೪ ಸಾವಿರ ರೂಪಾಯಿಗಳವರೆಗೂ ಕೊಡಬಹುದು, ಎಂದು ಇದೆ. ವ್ಯವಸಾಯದ ಇಲಾಖೆಯವರು ಇಷ್ಟು ಕೊಡಬೇಕೆಂದು ತಿಳಿಸಿದರೆ ಅಷ್ಟು ದೊರೆಯುವುದರಿಂದ ಹಾಗೆ ಮಾಡಿದರೆ ಉದ್ದೇಶ ಸಾಧನೆ ಮಾಡಿದಂತಾಗುವುದು, ಆ ರೀತಿ ಮಾಡಬೇಕು.

ಮತ್ತೊಂದು ವಿಷಯ. ಈಗ ವೆಟರ್ನರಿ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿದ್ದಾರೆ, ವೆಟರ್ನರಿ ಕಾಲೇಜಿನಲ್ಲಿ ಓದಿದವರಿಗೂ ಮೆಡಿಕಲ್ ಕಾಲೇಜಿನಲ್ಲಿ ಓದಿದವರಿಗೂ ಸಮಾನವಾದ ಸಂಬಳ ಕೊಡದಿದ್ದರೆ ಮುಷ್ಕರ ಮುಂದುವರೆಯುವುದು. ಎರಡು ಕಾಲೇಜುಗಳವರೂ ವ್ಯಾಸಂಗ ಮಾಡಲು ಇರುವ ಅವಧಿ ಒಂದೇ ಆಗಿರುವುದರಿಂದ ಈ ವಿಷಯವನ್ನು ಪರ್ಯಾಲೋಚಿಸಿ ಮೆಡಿಕಲ್ ಗ್ರಾಜುಯೇಟ್ಸ್‌ಗೆ ಕೊಡುವ ಗ್ರೇಡನ್ನೇ ವೆಟರ್ನರಿ ಕಾಲೇಜಿನ ಗ್ರಾಜುಯೇಟ್ಸ್‌ಗೂ ಕೊಟ್ಟರೆ ಒಳ್ಳೆಯದು.

ಕೊನೆಯದಾಗಿ ಮಾತನಾಡಲು ಕಾಲಾವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ಸಭೆಯ ಮುಂದಿರುವ ವ್ಯವಸಾಯ, ಪಶುಸಂಗೋಪನ, ಅರಣ್ಯ ಮತ್ತು ಮೀನುಗಾರಿಕೆ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಯನ್ನು ವಿರೋಧಿಸುತ್ತೇನೆ. ಮುಖ್ಯವಾಗಿ ನಿನ್ನೆ ಮತ್ತು ಇಂದು ನಡೆದ ವ್ಯವಸಾಯಕ್ಕೆ ಸಂಬಂಧಪಟ್ಟ ಬೇಡಿಕೆ ಬಗ್ಗೆ ಅನೇಕ ಸದಸ್ಯರು ಅನೇಕ ಉತ್ತಮವಾದ ಸಲಹೆ ಹಾಗೂ ಇಲಾಖೆಯಲ್ಲಿ ಇರುವ ಅಧಿಕಾರಿಗಳು ಮಾಡುವ ಲೋಪದೋಷಗಳನ್ನು ಹೇಳಿದ್ದಾರೆ. ಕಳೆದ ಬಜೆಟ್ ಮೇಲೆ ಚರ್ಚೆ ನಡೆದಾಗ ನಾನು ಮತ್ತು ಇತರ ಸದಸ್ಯರು ಕೊಟ್ಟ ಸಲಹೆಗಳನ್ನು ಪರಿಶೀಲಿಸಿ ಸರಕಾರ ಎಷ್ಟು ಕಾರ್ಯರೂಪಕ್ಕೆ ತಂದಿದೆ ಎಂಬುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳುವರೆಂದು ನಾನು ನಂಬಿದ್ದೇನೆ. ಮುಖ್ಯವಾಗಿ ಶೇಕಡ ೭೫ ಮಂದಿ ಈ ದೇಶದಲ್ಲಿ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಅವರಿಗೆ ಈ ಸಭೆಯ ಮೂಲಕ ಮತ್ತು ವೇದಿಕೆಗಳ ಮೂಲಕ ಬಹಳ ಅನುಕೂಲ ಮಾಡಬೇಕು. ವ್ಯವಸಾಯ ಹೆಚ್ಚಬೇಕು ಎಂದು ಹೇಳಿರುವುದಕ್ಕನುಗುಣವಾಗಿ ದೇಶದ ಬೆನ್ನುಮೂಳೆಯಂತಿರುವ ರೈತರ ಹಿತದ ಬಗ್ಗೆ ಕಾರ್ಯತಃ ಏನೂ ಮಾಡಿರುವುದಿಲ್ಲ. ಸಾಧಾರಣವಾಗಿ ಸರಕಾರದವರು ಮತ್ತು ಜವಾಬ್ದಾರಿ ಹೊತ್ತಿರುವವರು ಬರೇ ಮಾತಿನಲ್ಲಿ ರೈತರ ಬಗ್ಗೆ ಹೇಳಿರುವರೇ ವಿನಾ ಕಾರ್ಯರೂಪದಲ್ಲಿ ಏನೂ ಮಾಡಿ ತೋರಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. "ವ್ಯವ" ಅಂದರೆ ವ್ಯಯ, "ಸಾಯ" ಎಂದರೆ ಸತ್ತುಹೋಗುವುದು ಎಂದು ವ್ಯವಸಾಯದ ಪದವನ್ನು ಅರ್ಥಮಾಡಬಹುದು. ಕಷ್ಟದಲ್ಲಿರುವ ರೈತರಿಗೆ ಸರಕಾರ ಮಾಡುತ್ತಿರುವ ಸಹಾಯ ಏನೇನೂ ಸಾಲದು. ಈ ದೇಶದಲ್ಲಿ ಕೈಗಾರಿಕೆ ಮತ್ತಿತರ ಉದ್ಯಮಗಳಿಗೆ ಕೊಡುವಷ್ಟು ಸಹಾಯವನ್ನು ವ್ಯವಸಾಯಕ್ಕೆ ಕೊಡುತ್ತಿಲ್ಲ, ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದುದನ್ನೂ ನಿಲ್ಲಿಸುತ್ತಿದ್ದಾರೆ. ಕನ್ನಡದ ಒಂದು ಫಿಲಂ ತಯಾರಿಸಿದರೆ ಅದು ಚೆನ್ನಾಗಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲದಿದ್ದರೂ ಪ್ರತಿ ಚಿತ್ರಕ್ಕೆ ೫೦ ಸಾವಿರ ರೂಪಾಯಿ ಸಬ್ಸಿಡಿ ಕೊಡುವರು. ಆದರೆ ಅದೇ ವ್ಯವಸಾಯಕ್ಕೆ ಸಬ್ಸಿಡಿ ಕೊಡುತ್ತಿಲ್ಲ. ದಸರಾದಲ್ಲಿ ಅವಾರ್ಡ್‌ನ್ನು ರೈತರಿಗೆ ಕೊಡುತ್ತೇವೆಂದು ಹೇಳಬಹುದು. ಅದು ಸಾಲದು. ಇಂದು ಫಿಲಂ ಕೈಗಾರಿಕೆಗೆ ಮತ್ತಿತರ ಕೈಗಾರಿಕೆಗಳಿಗೆ ಭೂಮಿ, ಸುಲಭ ದರದಲ್ಲಿ ನೀರು, ವಿದ್ಯುಚ್ಛಕ್ತಿ, ತೆರಿಗೆ ವಿನಾಯಿತಿ ಮುಂತಾದುವುಗಳನ್ನು ಕೊಡುವರು. ಹಾಗೆ ಕೊಡಬಾರದೆಂದು ನಾನು ಹೇಳುವುದಿಲ್ಲ. ಅವರಿಗೆ ಕೊಡುವಂತೆ ಸೇಕಡ ೭೫ ಭಾಗದ ಬಡ ರೈತರಿಗೂ ಕೂಡ ಸಬ್ಸಿಡಿ ಕೊಡುವುದು ಒಳ್ಳೆಯದು. ಈಗ ಅವರಿಗೆ ಕೊಡುವ ಸೌಲಭ್ಯ ಸಾಲದು. ಆದುದರಿಂದ ಅವರು ಪೂರ್ಣವಾಗಿ ವ್ಯವಸಾಯವನ್ನು ನಿಲ್ಲಿಸುವ ಪರಿಸ್ಥಿತಿ ಇದೆ.

ಇವತ್ತಿನ ದಿವಸ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ, ರೈತನ ಹತ್ತಿರ ಹಣ ತುಂಬಿದೆ ಎಂದು ಏನೇನೋ ತೆರಿಗೆಗಳನ್ನು ಹಾಕುವುದಕ್ಕೆ ಹೊರಟಿದ್ದಾರೆ. ರೈತನ ಜೇಬು ತುಂಬಿದೆ ಎಂದು ಅವನ ಜೇಬನ್ನು ಹುಡುಕುವುದಕ್ಕೆ ಹೋದರೆ, ಚಿನ್ನದ ಮೊಟ್ಟೆಯನ್ನು ಇಡುತ್ತಿದ್ದ ಬಾತನ್ನು ಕೊಂದ ಹಾಗೆ ಆಗುತ್ತದೆ. ರೈತನಿಗೆ ಬೇಕಾದ ಕೃತಕ ಗೊಬ್ಬರ, ಕ್ರಿಮಿ ನಾಶಕಗಳು, ಬೀಜ, ಇಂಪ್ಲಿಮೆಂಟ್ಸ್ ಇವನ್ನೆಲ್ಲ ತೆಗೆದುಕೊಂಡು, ಅವುಗಳ ಉಪಯೋಗದಿಂದ ಶಕ್ತಿವಾನ್ ಜೋಳ ಮುಂತಾದ ಉತ್ತಮ ತಳಿಯ ಬೆಳೆ-ಯನ್ನು ಬೆಳೆಯುವುದಕೆ, ಹೊರಟಿದಿದ್ದನೆ, ಆದರಲ್ಲಿ ಅವನು ಹಾಕಿದ ಬಂಡವಾಳ ಮತ್ತು ಬಂದಂಥ ಪ್ರತಿ-ಫಲ, ಇವೆರಡನ್ನೂ ಹೋಲಿಸಿ ನೋಡಿದರೆ ರೈತ ನಿಜವಾಗಿ ಕಷ್ಟದಲ್ಲಿದ್ದಾನೆ. ರೈತನಾದವನು ವ್ಯವಸಾಯಕ್ಕೆ ಖರ್ಚು ಮಾಡುವ ಹಣದ ಲೆಕ್ಕವನ್ನು ಇಟ್ಟರೆ ಅವನು ಮುಳುಗಿ ಹೋಗುತ್ತಾನೆ ಗ್ರೀನ್ ರೆವಲ್ಯೂಷನ್ ಆಗಿದೆ ಎಂದು ಏನು ಹೇಳುತ್ತಿದ್ದಾರೆ ಅದು ಗ್ರೀನ್‌ಲೆಸ್ ರೆವಲ್ಯೂಷನ್ ಆಗುತ್ತಿದೆಯೆಂದು ಹೇಳಬಹುದು.

(ಶ್ರೀ ಎಸ್. ಚಿಕ್ಕೇಗೌಡ)

ರೈತನು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಮಿನಿಮಂ ಪ್ರೈಸ್‌ಗಿಂತ ಕಡಮೆಯಾದರೆ ಸರ್ಕಾರದಿಂದ ಕೊಂಡುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮತ್ತು ಆ ರೀತಿ ಕೊಳ್ಳಲು ತಾಲ್ಲೂಕು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗೆ ಹೇಳಿದ್ದೇವೆ ಎಂದು ಹೇಳುತ್ತಾರೆ. ಕಾಗದದ ಮೇಲೆ ಸರ್ಕಾರದ ಆದೇಶಗಳಿವೆಯೇ ಹೊರತು ಕಾರ್ಯತಃ ಯಾವುದೂ ಆಗಿಲ್ಲ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಹಣವಿಲ್ಲ, ಕೆಲವು ಕಡೆ ಸೂಪರ್‌ಸೀಡ್ ಆಗಿ ಅಲ್ಲಿ ಅಡ್ಮಿನಿಸ್ಟ್ರೇಟರಿದ್ದಾರೆ, ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ; ಡಿಮಾಂಡ್ ಇಲ್ಲ, ಗೋಡೌನ್ ಇಲ್ಲ ಎಂದು ಏನಾದರೂ ನೆಪ ಹೇಳುತ್ತಾರೆ. ಒಟ್ಟಿನಲ್ಲಿ ರೈತರ ರಕ್ಷಣೆಯಾಗುತ್ತಿಲ್ಲ.

ರಾಸಾಯನಿಕ ಗೊಬ್ಬರ, ಬುಲ್ ಡೋಜರುಗಳು, ಟ್ರಾಕ್ಟರುಗಳು ಇಂಥವನ್ನೆಲ್ಲ ಕೊಡುವ ಕೆಲಸ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಹೋದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಮಧ್ಯವರ್ತಿಗಳನ್ನು ಜಾಸ್ತಿ ಮಾಡಿ, ಒಂದೂವರೆ ಕೋಟಿ ರೂಪಾಯಿ ನಷ್ಟವಾದರೂ ಚಿಂತೆ ಇಲ್ಲ, ಗೊಬ್ಬರದ ಬೆಲೆಯನ್ನು ಹೆಚ್ಚಿಸಿ ನಷ್ಟವನ್ನು ತುಂಬು-ವುದಕ್ಕೆ, ಯಾರೋ ಕೆಲವರಿಗೆ ಅನುಕೂಲ ಮಾಡುವುದಕ್ಕೆ ಹೊರಟ್ಟಿದ್ದೀರಿ ಎಂದು ಮಾನ್ಯ ಸದಸ್ಯರಾದ ಮಂಚೇಗೌಡರು ಹೇಳಿದರು. ಇದು ನಿರ್ವಿವಾದ ವಾದ ಸಂಗತಿ. ಹೈಬ್ರಿಡ್ ಜೋಳವನ್ನು ಕೆ. ಜಿ. ಗೆ ನಾಲ್ಕು ರೂಪಾಯಿಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ತೆಗೆದುಕೊಂಡು ಅದನ್ನು ಏಳು ರೂಪಾಯಿ ಪ್ರಕಾರ ಮಾಡುತ್ತೀರಿ. ಇದರಲ್ಲಿ ಒಂದು ಕೆ. ಜಿ. ಗೆ ಮೂರು ರೂಪಾಯಿ ಲಾಭ ಬರುತ್ತದೆ ಈ ಪ್ರಕಾರವಾಗಿ ವ್ಯಾಪಾರ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಹೇಳಬೇಕಾಗುತ್ತದೆ. ರೈತರಿಗೆ ಸಬ್ಸಿಡಿ ಕೊಡುವುದನ್ನು ಬಿಟ್ಟು, ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಕೆಲಸ ಮಾಡುವುದನ್ನು ಬಿಟ್ಟು ಲಾಭವನ್ನು ಗಳಿಸಬೇಕು ಎಂದು ಇದನ್ನು ಒಂದು ವ್ಯಾಪಾರ ಸಂಸ್ಥೆಯನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. ಉತ್ತಮವಾದ ಬಿತ್ತನೆ ಬೀಜವನ್ನು ಕೊಡಬೇಕು ಎನ್ನುವ ವಿಚಾರದಲ್ಲಿ ಬೇಕಾದಂಥ ಹತೋಟಿಯನ್ನು ಇಟ್ಟುಕೊಳ್ಳಿ, ಅಡಲ್ಟರೇಷನ್ ಆಗಬಾರದು, ಕ್ವಾಲಿಟಿಯಲ್ಲಿ ಡಿಟೀರಿಯೋರೇಷನ್ ಆಗಬಾರದು ಎಂದು ಬೇಕಾದಂಥ ಕಠಿಣವಾದ ನಿಯಮಗಳನ್ನು ಹಾಕಿ. ಬಿತ್ತನೆ ಬೀಜದ ಉತ್ಪಾದನೆ ಬಗ್ಗೆ ಅನೇಕ ರೈತರು ಹೇಳುತ್ತಿದ್ದಾರೆ, ಮತ್ತು ಅನೇಕರು ಬಂದು ಸರ್ಕಾರದ ಮುಂದೆ ಹೇಳಿದ ಕಾಲದಲ್ಲಿ ಡೆಲಿಗೇಷನ್‌ನಲ್ಲಿ ನಾನೂ ಕೂಡ ಹೇಳಿದವನಾಗಿದ್ದೇನೆ. ಒಳ್ಳೆಯ ಬಿತ್ತನೆ ಬೀಜ ಬೇಕು ಎಂದು ಹೇಳುವಾಗ ರೈತರಿಂದ ಕೊಳ್ಳತಕ್ಕ ದರವನ್ನು ಕಡಮೆ ಮಾಡಿ, ಹೆಚ್ಚು ದರಕ್ಕೆ ಮಾರಿ ಲಾಭ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೆ ಅದನ್ನು ಖಂಡಿತವಾಗಿ ಕೈ ಬಿಡಬೇಕು ಎಂದು ಹೇಳುತ್ತೇನೆ.

ವ್ಯವಸಾಯ ಇಲಾಖೆಯ ಮೂಲಕ ಆಗಿರತಕ್ಕ ಅನೇಕ ಯೋಜನೆಗಳು ಬರೀ ಕಾಗದದಲ್ಲಿದ್ದು, ಬಡ್‌ಜೆಟ್ಟಿನಲ್ಲಿ ಆ ಯೋಜನೆಗಳನ್ನು ಅಳವಡಿಸಿ ಕೇಂದ್ರ ಸರ್ಕಾರದಿಂದ ಮತ್ತು ಐ.ಸಿ.ಎ.ಆರ್., ಗ್ರ್ಯಾಂಟನ್ನು ಪಡೆಯುತ್ತಿದ್ದಾರೆ. ಆದರೆ ಕೇಂದ್ರದಿಂದ ಬರತಕ್ಕ ಅಸಿಸ್ಟೆನ್ಸ್ ತೆಗೆದುಕೊಂಡರೂ ಅನೇಕ ಯೋಜನೆಗಳನ್ನು ಕಾರ್ಯ-ರೂಪಕ್ಕೆ ತರುವುದಿಲ್ಲ ಅದಕ್ಕೆ ಅನೇಕ ಕಾರಣಗಳಿರಬಹುದು. ಅದನ್ನು ಸರ್ಕಾರದವರು ತಿಳಿಸಬೇಕು. ಸರ್ಕಾರದವರು ಅನೇಕ ಬೇಡದೇ ಇರತಕ್ಕ ಯೋಜನೆಗಳನ್ನು ಹಾಕಿಕೊಂಡು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹೊಸ ಕೋಟೆಯಲ್ಲಿ ಒಂದು ಸಾಯಿಲ್ ಕನ್‌ಸರ್ವೇಷನ್ ಸಬ್ ಡಿವಿಜನ್ ಕೊಡಿ, ಈಗ ಬೆಂಗಳೂರು ಜಿಲ್ಲೆ-ಯಲ್ಲಿ ಒಂದೆರಡು ಕಡೆ ಮಾತ್ರ ಇದ್ದು ಸರಿಯಾಗಿ ಕೆಲಸವಾಗುತ್ತಿಲ್ಲ, ಮಳೆ ಸರಿಯಾಗಿ ಆಗದೆ ಬಯಲು ಸೀಮೆಯಲ್ಲಿ ಒಣ ವ್ಯವಸಾಯ ಮಾಡುವವರಿಗೆ ಅನುಕೂಲವಾಗಲಿ ಎಂದರೆ ಅನೇಕ ನೆಪಗಳನ್ನು ಹೇಳು-ತ್ತಿದ್ದಾರೆ. ಏನೂ ಕೆಲಸವಿಲ್ಲದೆ, ಎಂದು ಕಾಗದ, ಒಂದು ಫೈಲು ಇಲ್ಲದೆ ಇದ್ದರೂ ಬೇಕಾದಷ್ಟು ಇಲಾಖೆ-ಗಳನ್ನು ರಚಿಸುತ್ತಾರೆ, ದೊಡ್ಡ ಸೈನ್ಯದ ತಂಡವನ್ನೇ ಇಟ್ಟುಕೊಂಡಿದ್ದಾರೆ. ವ್ಯವಸಾಯದ ಬಗ್ಗೆ ಸಾಯಿಲ್ ಕನ್‌ಸರ್ವೇಷನ್‌ಗೆ ಅನುಕೂಲ ಮಾಡಿಕೊಡಿ ಎಂದರೆ ಮಾಡುತ್ತಿಲ್ಲ ವ್ಯವಸಾಯದ ಬಗೆ ಸಾಯಿಲ್ ಕನ್-ಸರ್ವೇಷನ್ ಮಾಡುತ್ತೇವೆ ಬಂಡ್ ಹಾಕಿಸಿದ್ದೇವೆ ಎಂದು ಹೇಳುತ್ತಾರೆ. ಬಂಡ್ ಹಾಕಿಸುವುದಕ್ಕೆ ೨೫ ಪರ್ಸೆಂಟ್ ಸಬ್ಸಿಡಿ ಬೇರೆ ಕೊಡುತ್ತಾರೆ. ಅದೆಲ್ಲ ಸಿಬ್ಬಂದಿಗೇ ಹೋಗುತ್ತದೆ. ಬಂಡ್ ಹಾಕಿಸುವುದಕ್ಕೆ ಖರ್ಚಾಗುವ ಹಣದ ಮೇಲೆ ೫ ರಿಂದ ೯ ಪರ್ಸೆಂಟ್‌ವರೆಗೂ ಬಡ್ಡಿಯನ್ನು ಹಾಕಿ ವಸೂಲು ಮಾಡುತ್ತಾರೆ. ಕೆಲಸವನ್ನು ಈ ಪುಕ್ಕಟೆಯಾಗಿ ಮಾಡಿಸಬಹುದು. ಭೂಕಂದಾಯ ಮತ್ತು ಅನೇಕ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ರೈತರ ಮೇಲೆ ಹಾಕುತ್ತಾರೆ. ಆದರೆ ಜಮೀನಿನಲ್ಲಿ ಬದು ಹಾಕಿಸುವುದಕ್ಕೆ ಬಡ್ಡಿ ಸಮೇತ ಹಣ ವಸೂಲು ಮಾಡುತ್ತಾರೆ ಮತ್ತು ರೈತರಿಗೆ ಬದು ಹಾಕಿಸಿ ಸಹಾಯ ಮಾಡಿದ್ದೇವೆಂದು ಹೇಳುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ

ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಶೋಧನೆ ಕಾರ್ಯವನ್ನು ವರ್ಗಾಯಿಸಿ ಅದಕ್ಕಾಗಿ ಏನು ಕಮಿಟ್ ಮಾಡಿಕೊಂಡಿದ್ದಾರೆ ಅದರ ಪ್ರಕಾರ ಕೊಡಬೇಕು ಬ್ಲಾಕ್ ಗ್ರ್ಯಾಂಟ್ ೧೯೬೮-೬೯ರಲ್ಲಿ ೬೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಸಲ ೯೦ ಲಕ್ಷ ರೂಪಾಯಿ ಕೊಟ್ಟಿದ್ದಕ್ಕಾಗಿ ಸರ್ಕಾರವನ್ನು ವಂದಿಸುತ್ತೇನೆ. ಸಂಶೋಧನೆಗೆ ಬೇಕಾದ ಹಣವನ್ನು ಒದಗಿಸಲೇ ಬೇಕು. ಈ ವಿಭಾಗವನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವಾಗ ಏನು ಕಮಿಟ್ ಮಾಡಿಕೊಂಡಿದ್ದಾರೆ ಅಷ್ಟನ್ನು ಕೊಡಲೇಬೇಕು. ಕೇಂದ್ರ ಸರ್ಕಾರ ಮತ್ತು ಐಸಿಎಆರ್., ಕಡೆಗೆ ತೋರಿಸುವುದು ಸರಿಯಲ್ಲ. ಪಂಜಾಬಿನಲ್ಲಿ ಆಗಿರವಂಥ ಪ್ರಗತಿ ನಮ್ಮ ರಾಜ್ಯದಲ್ಲಿ ಕೂಡ ಆಗಬೇಕಾದರೆ ಸಂಶೋಧನೆಗೆ ಬೇಕಾದ ಹಣವನ್ನು ಇಲಾಖೆಯಿಂದ ಕೊಡಬೇಕು. ಮತ್ತು ತನ್ಮೂಲಕ ರೈತರಿಗೆ ಬೇಕಾದ ಹೊಸ ಹೊಸ ತಳಿಗಳನ್ನು ಕೊಂಡು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಬೆಂಗಳೂರು ಡೈರಿಯಲ್ಲಿ ನಷ್ಟವಾಗುತ್ತಿದೆ. ಅದರ ಬಗ್ಗೆ ಏನೂ ಮಾಡಿಲ್ಲ. ಹಾಲು ಪೆರಿಷಹಲ್ ಆರ್ಟಿಕಲ್. ಅದನ್ನು ಹೆಚ್ಚು ಕಾಲ ಇಡುವುದಕ್ಕಾಗುವುದಿಲ್ಲ. ಡೈರಿಯಲ್ಲಿ ಈಗ ಆಡಳಿತ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಉತ್ತೇಜನವನ್ನು ಕೊಟ್ಟು ಮಧ್ಯವರ್ತಿ ಜನರೇನಿದ್ದಾರೆ ಮತ್ತು ಕಮಿಷನ್ ಏಜೆಂಟರೇನಿದ್ದಾರೆ, ಅವರನ್ನು ತಪ್ಪಿಸಬೇಕು. ಬೆಂಗಳೂರು ಡೈರಿಯನ್ನು ಕಮರ್ಷಿಯಲ್ ಬೇಸಿಸ್‌ನಲ್ಲಿ ನೋಡಬಾರದು ಎಂದು ಹೇಳುತ್ತೇನೆ.

ಹಾರ್ಟಿಕಲ್ಚರಲ್ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ. ಅದರಲ್ಲಿಯೂ ಕೈ ಹಾಕುವುದಕ್ಕೆ ಹೊರಟಿದ್ದಾರೆಂದು ಕೇಳಿದ್ದೇನೆ. ಆ ರೀತಿ ಮಾಡದೆ ಅಲ್ಲಿ ಒಳ್ಳೆಯ ಕೆಲಸವಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಸಂಜಪ್ಪ (ಶಾಂತಿನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿದ ವ್ಯವಸಾಯ ಅರಣ್ಯ, ಮೀನುಗಾರಿಕೆ, ಪಶು ಸಂಗೋಪನೆ ಬೇಡಿಕೆಗಳನ್ನು ಸ್ವಾಗತಮಾಡಿ ಈ ಸಂದರ್ಭದಲ್ಲಿ ಎರಡು ಮಾತು ಹೇಳಲು ಇಚ್ಛೆಪಡುತ್ತೇನೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ಎಮ್ಮೆ ಹಸುಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ೫ನೇ ತಾರೀಖಿನ ದಿನ ಬೆಂಗಳೂರು ನಗರ ಕಾರ್ಪೊರೇಷನ್ನು ಪ್ರಕಟಣೆ ಹೊರಡಿಸಿದ್ದು ಪೇಪರಿನಲ್ಲಿ ಬಂದಿತ್ತು, ಅದನ್ನು ನಾನು ನೋಡಿದೆ. ಈಗಾಗಲೇ ಬೆಂಗಳೂರುನಗರ ಕಾರ್ಪೊರೇಷನ್ನಿನಲ್ಲಿ ಭ್ರಷ್ಟಾಚಾರ ಜಾಸ್ತಿ ನಡೆಯುತ್ತಿದೆ ಎನ್ನುವ ಕೂಗು ಇದೆ ಇದೂ ಒಂದು ಸೇರಿದರೆ ಭ್ರಷ್ಟಾಚಾರ ಇನ್ನೂ ಜಾಸ್ತಿಯಾಗುತ್ತದೆ. ಕಾರ್ಪೊರೇಷನ್ನವರು ಲೈಸನ್ಸನ್ನು ಸುಮ್ಮನೆ ಕೊಡುವುದಿಲ್ಲ. ಹೋಟೆಲ್ಲುಗಳಿಗೆ ಲೈಸನ್ಸು ಕೊಡುವ ತರಹದಲ್ಲಿ ಕಂಡೀಷನ್ಸ್ ಹಾಕುತ್ತಾರೆ. ದನಗಳನ್ನು ಮಡಗಿದರೆ ಇಷ್ಟು ಜಾಗ ಇರಬೇಕು, ಹುಲ್ಲು ಹಾಕುವುದಕ್ಕೆ ಜಾಗ ಇರಬೇಕು, ನೀರು ಒದಗಿಸಲು ನಲ್ಲಿ ಇರಬೇಕು, ಫ್ಲಶ್‌ಔಟ್ ಇರಬೇಕು ಎಂದು ಹೇಳುತ್ತಾರೆ. ಇಷ್ಟೆಲ್ಲವನ್ನೂ ಮಾಡಿ ದನಗಳನ್ನು ಸಾಕುವುದಕ್ಕೆ ಆಗುತ್ತದೆಯೇ ? ದನಗಳನ್ನು ಸಾಕುವುದಕ್ಕೆ ಆಗುವುದಿಲ್ಲ ಮತ್ತು ಈ ಕಿರಿಕಿರಿ ತಪ್ಪುವುದಿಲ್ಲ. ಈ ರೀತಿ ನಾಗರೀಕರಿಗೆ ತೊಂದರೆ ಕೊಡದೆ, ದನಗಳನ್ನು ಕಟ್ಟುವುದಕ್ಕೆ ಒಂದು ಕಾಲೋನಿ ಮಾಡಬೇಕು, ಅಲ್ಲಿ ಎಲ್ಲಾ ಸೌಕರ್ಯ ಒದಗಿಸಿಕೊಡಬೇಕು ಅಲ್ಲಿಯೇ ಹಾಲು ಕರೆದು ಕೊಡುವಂತೆ ಮಾಡಿ ಅವರಿಂದ ಸರಕಾರ ಹಾಲು ಕೊಂಡುಕೊಳ್ಳಬೇಕು. ಇಂಥ ಒಂದು ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ, ಈ ರೀತಿ ಮಾಡದೆ ಕಾರ್ಪೊರೇಷನ್ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಬಹಳ ಅನ್ಯಾಯವಾಗುತ್ತದೆ, ಅಲ್ಲದೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಆದುದರಿಂದ ಹೀಗೆ ಮಾಡಬಾರದು. ದನಗಳ ಕೊಟ್ಟಿಗೆ ಇರುವ ಒಂದು ಕಾಲೋನಿ ಮಾಡಿ ಅಲ್ಲಿ ಎಲ್ಲ ದನಗಳನ್ನು ಕಟ್ಟಬೇಕು ಎಂದು ಕಾನೂನು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಪ್ರತಿಯೊಂದು ದನಕ್ಕೆ ಲೈಸೆನ್ಸ್ ತೆಗೆದುಕೊಳ್ಳಿ ಎಂದರೆ ನಿಜವಾಗಿಯೂ ಬಹಳ ತೊಂದರೆಯಾಗುತ್ತದೆ. ಇಂದು ಬೆಂಗಳೂರು ನಗರದಲ್ಲಿ ಡೈರಿ ಮೂಲಕ ಹಾಲು ಸರಿಯಾಗಿ ನಾಗರೀಕರಿಗೆ ಸರಬರಾಜು ಮಾಡುತ್ತಿಲ್ಲ. ನಾಗರೀಕರಿಗೆ ಹಾಲು ಸರಬರಾಜು ಮಾಡುವ ಉದ್ಯೋಗವನ್ನು ಬೆಂಗಳೂರು ನಗರದಲ್ಲಿ ಅನೇಕ ಬಡವರು ಮಾಡುತ್ತಿದ್ದಾರೆ. ಅವರು ಹಸುಗಳನ್ನು ಮಡಗಿಕೊಂಡು ಜೀವನ ಮಾಡುತ್ತಿದ್ದಾರೆ. ಸರಕಾರ ಇಂಥವರಿಗೆ ಬೇಕಾದರೆ ಬೇರೆಕೆಲಸಕೊಟ್ಟು ಅವರ ದನಗಳನ್ನು ತೆಗೆದುಕೊಂಡು ಹೋಗಿ ಕಾಲೋನಿಯಲ್ಲಿ ಬೇಕಾದರೆ ಮಡಗಿಕೊಳ್ಳಲಿ. ಸರ್ಕಾರದವರೇ ಹಾಲಿನ ಉತ್ಪತ್ತಿ ತೆಗದುಕೊಳ್ಳಲಿ. ಆದರೆ ಕಾರ್ಪೊರೇಷನ್ ದನಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳುವುದನ್ನು ಮಾತ್ರ ನಾನು ವಿರೋಧ ಮಾಡುತ್ತೇನೆ. ಇದರಿಂದ ಜನರಿಗೆ ತೊಂದರೆಯಾಗುತ್ತದೆ ಹಾಗೂ ಇದರಲ್ಲಿ ಬಹಳ ಕಷ್ಟ ಇದೆ. ಬೆಂಗಳೂರಿನಲ್ಲಿ ಕಾರ್ಪೊರೇಷನ್ನಿನಲ್ಲಿ ಎಂಥ ಆಡಳಿತ ನಡೆಯುತ್ತಿದೆ ಎನ್ನುವುದು ಜನರಿಗೆ ಗೊತ್ತಿದೆ. ಇಂಥ ಸಂದರ್ಭದಲ್ಲಿ ದನಗಳಿಗೆ ಲೈಸನ್ಸ್ ತೆಗೆದುಕೊಳ್ಳಬೇಕು ಎಂದು ಹೇಳುವುದನ್ನು ನೋಡಿದರೆ ನನಗೆ ವ್ಯಸನವಾಗುತ್ತಿದೆ. ಈ ವಿಚಾರದಲ್ಲಿ ಹಿಂದಕ್ಕೆ ಒಂದು

(ಶ್ರೀ ಎ. ನಂಜಪ್ಪ)

ನಿರ್ಣಯ ಏನು ನಾವು ಮಾಡಿದ್ದೇವೆಯೋ ಅದರ ಪ್ರಕಾರ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಇದೆ. ಅದರ ಪ್ರಕಾರ ಅನುಕೂಲ ಮಾಡಿಕೊಡುವುದನ್ನು ಜಾರಿಗೆ ಕೊಡಬೇಕು. ಅದನ್ನು ಬಿಟ್ಟು ಲೈಸನ್ಸ್ ತೆಗೆದುಕೊಳ್ಳಿ ಅಂದರೆ ಜನರು ಹಸುಗಳನ್ನು ರೋಡಿನಲ್ಲಿ, ಫುಟ್‌ಪಾಥಿನಲ್ಲಿ ಕಟ್ಟುತ್ತಾರೆ. ಇದರಿಂದ ಏನು ಪ್ರಯೋಜನವಾದೀತು ? ಕಾನೂನು ಪ್ರಕಾರ ವ್ಯವಸ್ಥೆ ಮಾಡದೇ ಜನರಿಗೆ ಕಷ್ಟ ಕೊಡುತ್ತಾರೆ. ಕಾನೂನು ಮಾಡುವುದು ಹೀಗೆಯೆ ? ಅಲ್ಲಿ ಇರತಕ್ಕಂಥ ಅಧಿಕಾರಿಗಳಿಗೆ ಮಾತ್ರ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ, ಒಂದು ವೇಳೆ ಈ ಲೈಸೆನ್ಸ್ ಪದ್ಧತಿಯಿಂದ ಬೆಂಗಳೂರು ನಾಗರೀಕರಿಗೆ ತೊಂದರೆಯಾದರೆ ನಾನು ರಾಜೀನಾಮೆ ಕೊಡುತ್ತೇನೆ. ಬೆಂಗಳೂರು ನಗರದ ಪ್ರತಿನಿಧಿಗಳಾಗಿ ನಾವು ಇಲ್ಲಿ ಈ ಸಭೆಯಲ್ಲಿ ಒಂಭತ್ತು ಜನ ಸದಸ್ಯರು ಇದ್ದೇವೆ. ನಮಗೆ ಇದರಿಂದ ಧಕ್ಕೆ ಬರುತ್ತದೆ. ಈ ಒಂಭತ್ತು ಜನ ಸದಸ್ಯರ ಅಭಿಪ್ರಾಯ ಏನು ಇದೆ ಎನ್ನುವುದನ್ನು ಸರ್ಕಾರದವರು ಕೇಳಿದ್ದಾರೆಯೇ ? ಬೆಂಗಳೂರು ನಗರದ ಪ್ರತಿನಿಧಿಗಳಾಗಿ ನಾವು ಇದ್ದೇವೆ. ನಮ್ಮ ಜೊತೆಗೆ ಈ ಬಗ್ಗೆ ವಿಚಾರ ವಿನಿಮಯವಾಗಿ ಮಾಡಿದ್ದಾರೆಯೇ? ನಮ್ಮನ್ನು ಕೇಳಿದರೆ ? ನಮ್ಮ ಜೊತೆಗೆ ಚರ್ಚೆ ಮಾಡಬೇಕು. ಅಧಿಕಾರಿಗಳನ್ನು ಮಾತ್ರ ಸರ್ಕಾರದವರು ಕರೆಸಿಕೊಂಡು ಆಫೀಸಿನಲ್ಲಿ ಕೂತುಕೊಂಡು ಈ ತೀರ್ಮಾನ ಮಾಡಿದ್ದಾರೆ. ನಾವು ಪ್ರತಿನಿಧಿಗಳಾಗಿ ಜನಗಳಿಂದ ಆರಿಸಿ ಬಂದಿದ್ದೇವೆ. ನಮ್ಮನ್ನು ಮೊದಲು ಕೇಳಬೇಕಾಗಿತ್ತು. ಅದನ್ನು ಬಿಟ್ಟು ಲೈಸನ್ಸ್ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳೊಡನೆ ಚರ್ಚೆಮಾಡಿ ತೀರ್ಮಾನ ಮಾಡಿರುತ್ತಾರೆ. ಲೈಸೆನ್ಸ್‌ನಿಂದ ಹಣ ಶೇಖರಿಸಬೇಕು ಎಂದಿದ್ದರೆ ಬೆಂಗಳೂರಿನ ನಾಗರೀಕರೂ ಕೂಡ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಮಾಡಿದರೆ ಸರಿ ಹೋಗುತ್ತದೆ. ಇಡೀ ಬೆಂಗಳೂರಿನಲ್ಲಿ ೨೦ ಲಕ್ಷ ಜನ ನಾಗರೀಕರು ಇದ್ದಾರೆ ಪ್ರತಿಯೊಬ್ಬರು ತಲೆಗೆ ಇಷ್ಟು ಕಂದಾಯ ಎಂದು ಹಾಕಿ ಬೇಕಾದಷ್ಟು ಉತ್ಪತ್ತಿ ಬರುತ್ತದೆ. ಇಂದು ದನಗಳಿಗೆ ಬೇಕಾದ ಹುಲ್ಲು ಭೂಸಾ ಹೊಟ್ಟು ಇಂಡೀ ಬೆಲೆ ವಿಪರೀತ ಜಾಸ್ತಿಯಾಗಿದೆ ಬೆಂಗಳೂರು ಡೈರಿ ಎಲ್ಲ ನಾಗರೀಕರಿಗೆ ಹಾಲು ಸಪ್ಲೈ ಮಾಡುತ್ತಾರೆಯೇ ಡೈರಿ ಪ್ರಾರಂಭ ಮಾಡಿರುವುದು ಒಂದು ಒಳ್ಳೆಯ ಕೆಲಸ. ಇದನ್ನು ಒಪ್ಪುತ್ತೇನೆ. ನಗರದಲ್ಲಿ ಎಲ್ಲಾ ದನಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಕಾಲೋನಿ ಮಾಡಿ ಅಲ್ಲಿ ಮಡಗಿಕೊಳ್ಳಲಿ ಎಲ್ಲಹಾಲನ್ನು ಸರಕಾರವೇ ತೆಗೆದುಕೊಳ್ಳಲಿ ಅದನ್ನು ಬಿಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕು ಅಂದರೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಬೆಂಗಳೂರು ನಗರದ ನಾವು ಒಂಭತ್ತು ಜನ ಸದಸ್ಯರು ಇದನ್ನು ವಿರೋಧ ಮಾಡುತ್ತೇವೆ. ಇಷ್ಟೇ ಅಲ್ಲದೆ ನಗರದಲ್ಲಿಯ ಎಲ್ಲಾ ಎಮ್ಮೆ ಹಸುಗಳನ್ನು ತಂದು ನಿಮ್ಮ ಮನೆಯಮುಂದೆ ಕಟ್ಟುತ್ತೇವೆ, ವಿಧಾನ ಸೌಧದ ಸುತ್ತ ತಂದು ಕಟ್ಟುತ್ತೇವೆ. ದನಗಳನ್ನು ಇಟ್ಟುಕೊಂಡ ಅನೇಕರು ಇವೊತ್ತು ಪಾಪರ್ ಆಗಿದ್ದಾರೆ. ಅವರಿಗೆ ಹೊಟ್ಟೆಗಿಲ್ಲ. ಅಂಥವರಿಗೆ ಮೊದಲು ಅನುಕೂಲ ಮಾಡಿಕೊಡಿ. ಲೈಸನ್ಸ್ ತೆಗೆದುಕೊಳ್ಳದಿದ್ದರೆ ಒಂದು ಸಾವಿರ ರೂಪಾಯಿ ದಂಡ ವಿಧಿಸುತ್ತಾರೆ, ಇದು ಪ್ರಜಾಪ್ರಭುತ್ವವೇ? ಅಧಿಕಾರಿಗಳಿಗೆ ಫೈನ್ ಹಾಕಿ ಅಂದರೆ ಅದರ ಎರಡರಷ್ಟು ಹಾಕುತ್ತಾರೆ ಆದುದರಿಂದ ಈ ಬಗ್ಗೆ ನ್ಯಾಯವಾಗಿ ಪರಿಶೀಲನ ಮಾಡಬೇಕು. ನ್ಯಾಯವಾಗಿ ಒಳ್ಳೇ ಕೆಲಸ ಮಾಡಿ. ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಈ ರೀತಿ ಲೈಸೆನ್ಸ್ ತೆಗೆದುಕೊಳ್ಳಿ ಎಂದು ಹೇಳುವುದರಿಂದ ಬಹಳ ವ್ಯಥೆಯಾಗುತ್ತಿದೆ, ಇದನ್ನು ಖಂಡಿತ ವಿರೋಧ ಮಾಡುತ್ತೇವೆ. ಹಸುಗಳನ್ನು ವಿಧಾನ ಸೌಧದ ಮುಂದೆ ನಿಲ್ಲಿಸುತ್ತೇವೆ ಎಂದು, ಈ ಸಂದರ್ಭದಲ್ಲಿ ವ್ಯಥೆಯಿಂದ ಹೇಳಬೇಕಾಗುತ್ತದೆ. ಇದಕ್ಕೆ ಆಸ್ಪದ ಕೊಡಬಾರದು. ಮತ್ತು ಬಡವರಿಗೆ ತೊಂದರೆ ಕೊಡಬಾರದು. ಬಡವರಿಗೆ ಅನುಕೂಲ ಮಾಡಿಕೊಡಬೇಕು. ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ದನಗಳ ಕಾಲೋನಿ ಮಾಡಬೇಕು ಎಂದು ಹೇಳುತ್ತೇನೆ. ದಯವಿಟ್ಟು ಲೈಸೆನ್ಸ್ ಹಾಕುವುದಕ್ಕೆ ಹೋಗಬಾರದು ಎಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

ಇನ್ನು ಹಾಲನ್ನು ಸಾಗಿಸುವುದಕ್ಕೆ ಟೆಂಡರುಗಳನ್ನು ಕರೆದು ಲಾರಿಗಳನ್ನು ಬಾಡಿಗೆಗೆ ಇಟ್ಟುಕೊಂಡಿದ್ದಾರೆ. ಅವರಿಗೆ ಒಂದು ಕಿ. ಲೋ ಮೀಟರ್‌ಗೆ ೩ ರೂಪಾಯ ಬಾಡಿಗೆ ಕೊಡಬೇಕಾಗಿದೆ. ಇದರಿಂದ ಹಾಲಿನ ಬೆಲೆ ಏರುತ್ತದೆ- ಆದ್ದರಿಂದ ಅದನ್ನು ತಪ್ಪಿಸಿ ಸರ್ಕಾರದವರೇ ವ್ಯಾನುಗಳನ್ನು ಇಟ್ಟರೆ ಒಳ್ಳೆಯದೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ,

5-00 P.M.

ಶ್ರೀ ಹಂಜಿ-ಶಿವಣ್ಣ (ತರೀಕೆರೆ) :- ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ವಿರೋಧಿಸಬೇಕಾಗಿರತಕ್ಕ ಸಂದರ್ಭವಿರುವುದರಿಂದ ನಾನು ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ.

ಸರ್ಕಾರದವರು ಅಗ್ರಿಕಲ್ಚರಲ್ ಡಿಮ್ಯಾಂಡನ್ನು ಮಂಡಿಸುತ್ತ ಇದರಿಂದ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಹಣವನ್ನು ಸಭೆಯವರು ಮಂಜೂರು ಮಾಡಬೇಕೆಂದು ಕೇಳಿದ್ದಾರೆ. ಆದರೆ ಈ ಇಲಾಖೆಯಿಂದ ರೈತರಿಗೆ ಆಗತಕ್ಕ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗುತ್ತಿದೆ ಎಂಬುದಕ್ಕೆ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಹಾಗೂ ಈ ಮಾನ್ಯಸಭೆಯವರ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ದೊಡ್ಡ ಶ್ರೀಮಂತರಿಗೆ ತುಂಗಭದ್ರ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗಿ ೩ ಸಾವಿರ ಎಕರೆ ಜಮೀನನ್ನೂ ಮತ್ತು ಲೈಸೆನ್ಸ್‌ನ್ನೂ ಕೂಡ ಮಂಜೂರು ಮಾಡಿದ್ದಾರೆ. ಆದರೆ ಅವರಿಂದ ಈ ದಿವಸ ಅಲ್ಲಿನ ರೈತರಿಗೆಷ್ಟು ಕಿರುಕುಳವಾಗುತ್ತಿದೆ ಎಂಬುದನ್ನು ನಾನೀಗ ತಿಳಿಸಬೇಕಾಗಿದೆ. ಹಿಂದೆ ಆ ರಾಜ ಮಹಾರಾಜರುಗಳ ಕಾಲದಲ್ಲಿ ಅವರು ಬಳುವಳಿಯಾಗಿ ಜಮೀನನ್ನು ಕೊಡುತ್ತಿದ್ದರೆಂದು ಕೇಳುತ್ತಿದ್ದೆವು. ಅದೇ ರೀತಿ ಈ ದಿವಸ ಸರ್ಕಾರದವರೂ ಆ ಶ್ರೀಮಂತರಿಗೆ ೩ ಸಾವಿರ ಎಕರೆ ಒಳ್ಳೆಭೂಮಿಯನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಆದರೆ ಅದರಿಂದ ಬಹಳ ಕೆಟ್ಟಪರಿಣಾಮವುಂಟಾಗಿದೆ. ಮೊದಲು ಆ ಕಂಪನಿಯನ್ನು ಸ್ಥಾಪಿಸತಕ್ಕ ಕಾಲಕ್ಕೆ ಅಲ್ಲಿ ಸುತ್ತಲೂ ೨೦ ಮೈಲಿ ಫಾಸಲೆಯಲ್ಲಿ ಯಾವ ರೈತರು ಕಬ್ಬನ್ನು ಕಬ್ಬನ್ನು ಬೆಳೆದರೂ ಅದನ್ನು ಕಂಪನಿಯವರು ಕೊಳ್ಳಬೇಕೆಂಬ ಒಂದು ಕಂಡಿಷನ್ ಹಾಕಿ ಕೊಡಲಾಗಿತ್ತು. ಆದರೆ ಈಗ ಆ ಕಂಪನಿಯವರು ಅವರಿಗೆ ಕೊಡಲಾಗಿದ್ದ ೩ ಸಾವಿರ ಎಕರೆ ಭೂಮಿಯನ್ನು ಉತ್ತಮಪಡಿಸಿಕೊಂಡು ಅದರಲ್ಲಿ ಬೆಳೆಯತಕ್ಕ ಕಬ್ಬನ್ನು ಕಂಪನಿಗೆ ಬಳಸುತ್ತಿದ್ದಾರೆ. ಬೇರೆಯವರು ಬೆಳೆದಿರತಕ್ಕ ಕಬ್ಬನ್ನು ಕೊಳ್ಳುವುದಕ್ಕೆ ಅವರು ಇಷ್ಟಪಡುತ್ತಿಲ್ಲ. ಕೆಲವರು ಶ್ರೀಮಂತರು ಬೆಳೆದ ಕಬ್ಬನ್ನು ಮಾತ್ರ ಸರಿಯಾದ ಬೆಲೆಗೆ ಕೊಳ್ಳುತ್ತಿದ್ದಾರೆ. ಬಡವರು ಬೆಳದಿರತಕ್ಕ ಕಬ್ಬನ್ನು ಕಡಿಮೆ ದರದಲ್ಲಿ ಕೊಟ್ಟರೆ ಕೊಳ್ಳುವುದಾಗಿ ಹೇಳುತ್ತಿದ್ದಾರೆ. ಆದರಿಂದ ಬಡ ರೈತರಿಗೆ ಬಹಳ ಅನ್ಯಾಯ ವಾಗುತ್ತಿದೆ. ಒಪ್ಪಿಗೆ ಕಬ್ಬಿನ ಬೆಲೆ ೧೨೦ ರೂಪಾಯಿಗಳಿದ್ದರೆ ನಾನೊಪ್ಪಿಗೆ ಕಬ್ಬಿಗೆ ೮೦ ರೂಪಾಯಿ ಬೆಲೆಯನ್ನು ನಿಗದಿ ಮಾಡಿದ್ದಾರೆ. ಇದರಿಂದ ರೈತನ ಗತಿಯೇನಾಗಬೇಕು? ಇಂಥ ಒಂದು ದೊಡ್ಡ ಅನ್ಯಾಯ ಅಲ್ಲಿ ಒಂದು ವರ್ಷದಿಂದಲೂ ನಡೆದುಕೊಂಡು ಬರುತ್ತಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಸೂಚನೆ ಮಾಡುವುದೇನೆಂದರೆ ಆ ೩ ಸಾವಿರ ಎಕರೆ ಜಮೀನನ್ನು ಅವರಿಂದ ಬಿಡಿಸಿಕೊಂಡು ಅದನ್ನು ಬಡವರಿಗೆ ಹಂಚಿದರೆ ಬಹಳ ಅನುಕೂಲವಾಗುತ್ತದೆ. ಆಗ ಅವರು ಬೇರೆಯವರು ಬೆಳೆದ ಕಬ್ಬನ್ನು ಕೊಳ್ಳುವುದಕ್ಕೂ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಸರ್ಕಾರದವರು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಇಲ್ಲವೇ ಸರ್ಕಾರದವರು ಅವರಿಗೆ ಆ ನಾನ್-ಒಪ್ಪಿಗೆ ಕಬ್ಬನ್ನು ಕೊಂಡುಕೊಳ್ಳುವುದಕ್ಕೆ ಒಂದು ನ್ಯಾಯವಾದ ಬೆಲೆಯನ್ನಾದರೂ ನಿಗದಿ ಮಾಡಬೇಕೆಂದುಹೇಳುತ್ತೇನೆ. ಮತ್ತು ಅಲ್ಲಿ ೨೦ ಮೈಲಿ ಸುತ್ತುಮುತ್ತಲಿನ ಪ್ರದೇಶದಲ್ಲಿ ಬೆಳೆಯತಕ್ಕ ಎಲ್ಲ ಕಬ್ಬನ್ನು ಇವರು ಕೊಂಡುಕೊಳ್ಳುವಂತೆ ಒಂದು ಕಂಡೀಷನ್ ಸಹಾ ಹಾಕಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಮಾಡಿರತಕ್ಕ ಒಂದು ದೊಡ್ಡ ಅಪರಾಧ ಎಂದರೆ ಚುನಾವಣೆಗೆ ಮುನ್ನ ಆಡಳಿತ ಪಕ್ಷದವರು ರಾಜ್ಯದಲ್ಲಿ ಎಲ್ಲ ಜನರಿಗೂ ಕಂದಾಯವನ್ನು ಮಾಫಿಮಾಡುತ್ತೇವೆಂದು ಹೇಳಿ ಚುನಾವಣೆಗಳು ಮುಗಿದ ನಂತರ ರಾಜ್ಯದಲ್ಲಿ ಒಂದಕ್ಕೆ ನಾಲ್ಕು ಪಟ್ಟು ಕಂದಾಯದ ದರವನ್ನು ಹೆಚ್ಚಿಸಿದ್ದಾರೆ. ಇದರಿಂದ ಈ ಸರ್ಕಾರದವರು ರೈತರಿಗೆ ಮಾಡಬಾರದ ಅನ್ಯಾಯವನ್ನು ಮಾಡಿದ್ದಾರೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನೆ ವಿಚಾರಕ್ಕೆ ಬಂದರೆ–ನಮ್ಮ ದೇಶದಲ್ಲಿ ಅನೇಕ ಕಡೆ ಅಮೃತಮಹಲ್ ಕಾವಲುಗಳಿವೆ. ಅಲ್ಲಿ ಮೊದಲು ಉತ್ತಮ ತಳಿಯ ರಾಸುಗಳನ್ನು ಉತ್ಪತ್ತಿಮಾಡುತ್ತಿದ್ದರು. ಈ ದಿವಸ ಅಲ್ಲಿ ಯಾವ ಕಾವಲುಗಾರರನ್ನು ಆ ಅಮೃತಮಹಲ್ ಕಾವಲಿನ ಬಗ್ಗೆ ಇಡಲಾಗಿದೆಯೋ ಆ ಜನರು ತಮ್ಮ ರಾಸುಗಳನ್ನು ಮಾತ್ರ ಆ ಕಾವಲಿನಲ್ಲಿ ಮೇಯಿಸಿ ಸರ್ಕಾರಿ ರಾಸುಗಳನ್ನು ಕಾಡಿಗೆ ಮೇಯುವುದಕ್ಕೆ ಓಡಿಸುತ್ತಿದ್ದಾರೆ. ಅವರ ಇಂಥ ಚಟುವಟಿಕೆಗಳೆಲ್ಲಾ ಈ ಆಡಳಿತ ನಡೆಸತಕ್ಕ ಸರ್ಕಾರಕ್ಕೆ ಗೊತ್ತಾಗುವುದಿಲ್ಲ ಎಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಏಕೆಂದರೆ ಈ ದಿವಸ ಯಾರ ಕೈಗೆ ದೇಶದ ಆಡಳಿತ ಸಿಕ್ಕಿದೆಯೋ ಅವರು, ಎಂದೂ ಕುದುರೆಯನ್ನು ಹತ್ತದವನು ಕುದುರೆಯನ್ನು ತಾನು ಹಿಂದುಮುಂದಾಗಿ ಹತ್ತಿ ಕುಳಿತಂತೆ ಇಂದಿನವರು ಆಡಳಿತವನ್ನು ನಡೆಸುತ್ತಿದ್ದಾರೆಂಬುದು ಅವರಿಗೆ ಚೆನ್ನಾಗಿ ಮನದಟ್ಟಾಗಿದೆ. ಈ ಜನರ ಕೈಗೆ ದೇಶದ ಆಡಳಿತ ಸಿಕ್ಕಿ ಇಲ್ಲಿಗೆ ೨೦–೨೨ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಇಲ್ಲಿ ಅಧಿಕಾರದಲ್ಲಿರತಕ್ಕ ಮಂತ್ರಿಗಳಿಗೆ ಆ ಅಮೃತಮಹಲ್ ಕಾವಲುಗಳೆಲ್ಲಿವೆ ಎಂಬುದು ತಿಳಿಯದು. ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಯಾರೂ ಪರೀಕ್ಷೆ ಮಾಡಿಲ್ಲ. ನಾನು ವೃಥಾ ಮಂತ್ರಿಗಳನ್ನು ಅಲ್ಲಗಳೆಯಬೇಕೆಂದು ಈ ಮಾತುಗಳನ್ನು ಹೇಳುತ್ತಿಲ್ಲ. ಇರತಕ್ಕ ವಿಚಾರವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಅರಣ್ಯ ಖಾತೆಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ರಾಜ್ಯದಲ್ಲಿರತಕ್ಕ ಅರಣ್ಯ ಸಂಪತ್ತೆಲ್ಲಾ ನಾಶವಾಗುತ್ತಾ ಬಂದಿದೆ. ಈ ಹಿಂದೆ ಕಾಂಗ್ರೆಸ್ ಪಕ್ಷದ ಮಾನ್ಯ

(ಶ್ರೀ ಹಂಜಿ ಶಿವಣ್ಣ)

ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು, ರಾಜ್ಯದಲ್ಲಿ ಇರತಕ್ಕ ಅರಣ್ಯ ಸಂಪತ್ತು ಒಂದನ್ನು ಸಂರಕ್ಷಣೆ ಮಾಡಿಕೊಂಡು ಬಂದರೆ ಈ ರಾಜ್ಯವನ್ನು ೫೦ ವರ್ಷಕಾಲ ಸುಖವಾಗಿ ಆಳಬಹುದೆಂದು ಬ್ರಿಟೀಷರು ದೇಶ ಬಿಟ್ಟು ಹೋಗುವಾಗ ಹೇಳಿದ್ದರು ಎಂಬುದಾಗಿ ನಿಜ, ಅವರು ಹೇಳಿದಂತೆ ೫೦ ವರ್ಷಗಳಕಾಲ ಬರಬೇಕಾಗಿದ್ದ ಸಂಪತನ್ನು ಇವರು ಆಡಳಿತಕ್ಕೆ ಬಂದ ೨೦ ವರ್ಷಗಳಲ್ಲೇ ಹಾಳು ಮಾಡಿದ್ದಾರೆ ಇವರಿಗೆ ಕಾಡು ಎಂದರೇನು ಎಂಬುದೇ ಗೊತ್ತಿಲ್ಲ. ಅಂದಾಗ ಇವರಿಗೆ ಆ ಕಾಡುಗಳನ್ನು ಸಂರಕ್ಷಣೆ ಮಾಡಬೇಕು, ಅಭಿವೃದ್ಧಿ ಮಾಡಬೇಕು ಅನ್ನುವ ಆಸಕ್ತಿಯಾದರೂ ಹೇಗೆ ಬರಬೇಕು? ನಾವು ಈ ಸಭೆಯಲ್ಲಿ ಪದೇ ಪದೇ ಅರಣ್ಯಾಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರುಗಳನ್ನು ಹೇಳಿದ್ದಾಗ್ಯೂ ಅದಕ್ಕೇನೂ ಪುರಸ್ಕಾರ ಸಿಕ್ಕಲಿಲ್ಲ.

ಪ್ರತಿಯೊಂದು ಕಡೆಯೂ ಸರ್ಕಾರದವರು ಎಲ್ಲೆಲ್ಲಿ ಕಳವಿನಿಂದ ನಾಟಾಗಳು ಸಾಗುತ್ತಿವೆಯೊ ಅಲ್ಲೆಲ್ಲಾ ತಮ್ಮ ಇಲಾಖೆಯ ನೌಕರರನ್ನೂ ಅಧಿಕಾರಿಗಳನ್ನೂ ಇಟ್ಟಿದ್ದಾರೆ. ಆದರೇನು ಸಾರ್ಥಕ? ಮಾಮೂಲಿನಂತೆ ಈಗಲೂ ಲಕ್ಷಾಂತರ ರೂಪಾಯಿಗಳ ಬೆಲೆಬಾಳತಕ್ಕ ಸಾಗುವಾನಿ ಮತ್ತು ಶ್ರೀಗಂಧದ ಮರ ಕಳುವಾಗುತ್ತಲೇ ಇವೆ. ಅಂದಾಗ ಅಲ್ಲಿರತಕ್ಕ ಆ ಅಧಿಕಾರಿಗಳು ಅಲ್ಲಿ ಹಾಜರಿಲ್ಲದೆ ಇದ್ದರೆ ಹೇಗೆ ಕಳುವಾಗುವುದಕ್ಕೆ ಅವಕಾಶವಿದೆ? ಇದು ಇನ್ನು ಕೆಲವಾರು ವರ್ಷಗಳು ಹೀಗೇ ಮುಂದುವರಿದಲ್ಲಿ ನಮ್ಮ ಮುಂದಿನ ಪೀಳಿಗೆಗೆ ಕಾಡು ಎಂದರೇನು? ಸಾಗುವಾನಿ ಮರ ಎಂದರೇನು? ಎಂಬುದೇ ಗೊತ್ತಾಗದಂತಾಗುತ್ತದೆ. ಇನ್ನೂ ಮೊನ್ನೆತಾನೆ ಕಾಡಿನಲ್ಲಿ ಒಂದು ಕಡೆ ಕಳವಿನಿಂದ ಸಾಗುತ್ತಿದ್ದ ಸುಮಾರು ೪೦ ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ನಾಟಾಗಳನ್ನು ಒಬ್ಬ ಅರಣ್ಯ ಇಲಾಖೆಯ ಅಧಿಕಾರಿಗಳು ತಮ್ಮ ಪ್ರಾಣದ ಮೇಲಿನ ಇಚ್ಛೆಯನ್ನು ಕೂಡ ತೊರೆದು ಅದನ್ನು ಹಿಡಿದಿದ್ದಾರೆ. ಆ ದಿವಸ ಅವರ ಪ್ರಾಣಕ್ಕೆ ಅಪಾಯಸಂಭವಿಸತಕ್ಕ ಪರಿಸ್ಥಿತಿ ಇತ್ತು ಎಂದು ಹೇಳಲಾಗುತ್ತಿದೆ. ಅವರು ಸುದೈವದಿಂದ ಆ ವಿಪತ್ತಿನಿಂದ ಪಾರಾಗಿದ್ದಾರೆ. ಇನ್ನಾದರೂ ಸರ್ಕಾರದವರು ಈ ವಿಚಾರದಲ್ಲಿ ಕೂಡಲೆ ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಾನು ಆಶಿಸುತ್ತೇನೆ. ನಮ್ಮ ಹಿಂದಿನ ಅಧಿಕಾರಿಗಳನ್ನು ಈ ಗೊಂಡಾರಣ್ಯಗಳನ್ನು ಹೇಗೆ ಸಾಕಿಕೊಂಡು ಬಂದಿದ್ದರು ಎಂಬುದನ್ನು ನಾನೀಗ ವರ್ಣನೆ ಮಾಡುವುದಕ್ಕೂ ಸಹಾ ಸಾಧ್ಯವಿಲ್ಲ. ದೇವರಗುಡ್ಡದಂಥ ಗೊಂಡಾರಣ್ಯದಲ್ಲೂ ಅವರು ಕುದುರೆಯನ್ನು ಹತ್ತಿಕೊಂಡು ಗಸ್ತು ತಿರುಗುತ್ತಿದ್ದರು. ಹಾಗೆ ಹಿಂದಿನವರು ಗಿಳಿಯಂತೆ ಸಾಕಿದ್ದ ಕಾಡನ್ನು ಈ ದಿವಸ ನಿಮ್ಮ ಕೈಗೆ ಕೊಟ್ಟಿದ್ದನ್ನು ನೋಡಿದರೆ ಬೆಕ್ಕಿನ ಕೈಗೆ ಗಿಳಿಯನ್ನು ಕೊಟ್ಟಂತಾಗಿದೆ ಎಂದು ಹೇಳದೆ ವಿಧಿಇಲ್ಲ. ನಮ್ಮ ಅರಣ್ಯಗಳು ಹಾಳಾದುದರಿಂದಲೇ ದೇಶದಲ್ಲಿ ಈಗಾಗಲೆ ಮಳೆಬೆಳೆಗಳಾಗದೆ ಕ್ಷಾಮ ಖಾಯಂ ಆಗಿ ತಲೆಯೆತ್ತಿ ನಿಲ್ಲುವುದಕ್ಕೆ ಅವಕಾಶವಾಗಿದೆ ಎಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯ. ಆದ್ದರಿಂದ ಇನ್ನು ಸರ್ಕಾರದವರು ಅರಣ್ಯಗಳ ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ ಅಷ್ಟೇ ಅಲ್ಲದೆ ಹಾಲಿ ಎಲ್ಲೆಲ್ಲಿ ದಟ್ಟವಾಗಿ ಕಾಡು ಬೆಳೆದಿರುತ್ತದೋ ಅಂಥ ಕಡೆಗಳಲ್ಲಿ ಕಾಡನ್ನು ಕಡಿದು ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಿ ಎಲ್ಲಿ ಮರಗಳೇ ಇಲ್ಲವೋ ಅಂಥ ಕಡೆಗಳಲ್ಲಿ ಮಾತ್ರ ಆ ನೀಲಗಿರಿ ಗಿಡಗಳನ್ನು ಬೆಳೆಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಬಿ. ನಂಜಪ್ಪ (ಗಂಡಸಿ) : ಮಾನ್ಯ ಸಭಾಧ್ಯಕ್ಷರೇ, ಈ ದಿವಸ ವ್ಯವಸಾಯ, ಪಶುಪಾಲನೆ, ಅರಣ್ಯ ಇಲಾಖೆ ಇವುಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದನೆ ಮಾಡುತ್ತಾ ಒಂದೆರಡು ಸಲಹೆ ಗಳನ್ನು ಈ ಸಭೆಯ ಮುಂದಿಡುತ್ತೇನೆ.

ಪಶುಪಾಲನೆಯ ಬಗ್ಗೆ ಈವೊತ್ತಿನ ದಿವಸ ಅನೇಕ ಸನ್‌ಮಾನ್ಯ ಸದಸ್ಯರು ಉತ್ತಮವಾದ ಸಲಹೆ ಗಳನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬರೂ ಕೂಡ ಇದರ ಉತ್ಪಾದನಾ ವಿಚಾರದಲ್ಲಿ ಹೆಚ್ಚು ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮತ್ತೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ಒಂದು ವಿಚಾರವನ್ನು ನಮ್ಮ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನಮ್ಮದು ವ್ಯವಸಾಯ ದೇಶ. ಈ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಗಟ್ಟಿ ಮುಟ್ಟಾದ ಎತ್ತುಗಳು ಏನು ಇವೆಯೋ ಅವು ಕಡಿಮೆಯಾಗಿಬರುತ್ತಾ ಇವೆ. ಸಾಮಾನ್ಯವಾಗಿ ಇನ್ನು ೫-೬ ವರ್ಷಗಳು ಕೆಲಸ ಮಾಡುವ ಸ್ಥಿತಿಯಲ್ಲಿದ್ದಾಗಲೇ ಎತ್ತುಗಳು ಕಟುಕರ ಪಾಲಿಗೆ ಹೋಗುತ್ತವೆ ಎಂದು ಹೇಳಿದರೆ ತಪ್ಪಾಗಲಾರದು. ಹೆಚ್ಚು ಹೆಚ್ಚಾಗಿ ನಮ್ಮ ದೇಶದಿಂದ ಹೊರಗಡೆಗೆ ತೆಗೆದುಕೊಂಡು ಹೋಗುವುದರಿಂದ ಎತ್ತುಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಾ ಇದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚು ನಿಗಾ ಕೊಟ್ಟು ಹೊರಗೆ ಹೋಗುವುದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿವರ್ಯರಿಗೆ ಹೇಳುತ್ತೇನೆ.

ಇನ್ನು ನಮ್ಮ ದೇಶಕ್ಕೆ ತಾತ್ಕಾಲಿಕವಾಗಿ ಟ್ರಾಕ್ಟರುಗಳನ್ನು ಉಪಯೋಗಮಾಡುವ ಸ್ಥಿತಿ ಬಂದಿದೆ. ನಮ್ಮ ಮಂತ್ರಿಗಳೋ, ಉಪ ಮಂತ್ರಿಗಳೋ, ಅಥವಾ ೧೦೦ ಎಕರೆ, ಮತ್ತು ಸಾವಿರಾರು ಎಕರೆ ಇರುವಂಥಾವರು ಈ ಟ್ರಾಕ್ಟರನ್ನು ಇಟ್ಟುಕೊಂಡು ಅದರಿಂದ ಉಪಯೋಗ ಪಡೆಯುತ್ತಾರೆ. ನಮ್ಮದು ಸಣ್ಣ ಸಣ್ಣ ಹಿಡುವಳಿದಾರರ ದೇಶ. ಆದುದರಿಂದ ಸಣ್ಣ ಹಿಡುವಳಿದಾರರಿಗೆ ಕಡ್ಡಾಯವಾಗಿ ಎತ್ತುಗಳು ಇಲ್ಲದೇ ಹೋದರೆ ಖಂಡಿತವಾಗಿಯೂ ನಮ್ಮ ವ್ಯವಸಾಯವನ್ನು ಸಾಗಿಸುವುದು ಕಷ್ಟವಾಗುತ್ತದೆ. ಆದುದರಿಂದ ಹಾಲಿನ ಉತ್ಪಾದನೆಗೆ ಎಷ್ಟುಮಟ್ಟಿಗೆ ಮುತವರ್ಜಿ ವಹಿಸಿ ಕೆಲಸಕಾರ್ಯಗಳನ್ನು ಮಾಡುತ್ತಾರೋ ಅಷ್ಟೇ ಮುತವರ್ಜಿ ವಹಿಸಿ ಎತ್ತುಗಳ ಉತ್ಪಾದನೆಯನ್ನೂ ಮಾಡಬೇಕು. ಈ ದೇಶದಲ್ಲಿ ಅದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ನಮ್ಮ ಸರ್ಕಾರದವರು ಇವೊತ್ತಲ್ಲ ಇನ್ನು ೧೦ ವರ್ಷವಾದ ಮೇಲೆ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಇದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ ನಮ್ಮ ಮೈಸೂರು ದೇಶ ಸುಪ್ರಸಿದ್ಧವಾದಂಥ ಹಳ್ಳಿಕಾರ ತಳಿಗಳನ್ನು ಹೊಂದಿರುವಂಥ ದೇಶ. ನಮ್ಮ ರಾಜ್ಯದ ರೈತರಿಗೆ ಬೇಕಾದ ಅತ್ಯುತ್ತಮವಾದ ಎತ್ತುಗಳನ್ನು ನಾವು ಅಭಿವೃದ್ಧಿ ಪಡಿಸಬೇಕಾಗಿದೆ. ಆದುದರಿಂದ ಮಾನ್ಯ ಮಂತ್ರಿವರ್ಯರಿಗೆ ನಾನು ಹೇಳುವುದು ಇಷ್ಟೆ. ಎತ್ತುಗಳ ಅಭಿವೃದ್ಧಿ ವಿಚಾರದಲ್ಲಿ ತಮ್ಮ ಶ್ರದ್ಧೆಯನ್ನೂ ವಹಿಸಿ ಕೆಲಸ ಮಾಡಬೇಕು ಎಂದು. ಮುಖ್ಯವಾಗಿ ಒಂದು ವಿಚಾರ ಹೇಳುವುದಾದರೆ ಈ ಅಮೃತ್ ಮಹಲ್ ರಾಸು ಏನು ಇದೆಯೋ ಅದು ಅತ್ಯುತ್ತಮವಾದ ಮತ್ತು ಸುಪ್ರಸಿದ್ಧವಾದ ಒಂದು ತಳಿ, ಅದನ್ನು ನಮ್ಮ ಮೈಸೂರಿನಲ್ಲಿ ಸಾಮಾನ್ಯವಾಗಿ ಕಡೆಗಾಣಿಸಿದ್ದಾರೆ, ಇದನ್ನು ಏತಕ್ಕೆ ಕಡೆಗಾಣಿಸಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಈ ಒಂದು ಆನ್ಯೂಯಲ್ ರಿಪೋರ್ಟ್‌ನಲ್ಲಿ ಅಂದರೆ ೧೯೬೯-೭೦ರ ರಿಪೋರ್ಟಿನಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ೧೩ ಲೈವ್ ಸ್ಟಾಕ್ ಫಾರಂಗಳು ಇವೆ. ಅಜ್ಜಂಪುರದಲ್ಲಿ ಒಂದು ಕ್ಯಾಟಲ್ ಬ್ರೀಡಿಂಗ್ ಸ್ಟೇಷನ್‌ನಲ್ಲಿ ಹೆಚ್ಚು ಹೆಚ್ಚಾಗಿ ಅಮೃತ್ ಮಹಲ್ ರಾಸುಗಳನ್ನು ಬೆಳೆಸುವಂತೆ ಮಾಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಖರ್ಚು ಮಾಡತಕ್ಕಂಥಾದ್ದು ೭೦,೭೫೦ ರೂಪಾಯಿ, ಆದಾಯ ೧,೯೩,೦೦೦ ರೂಪಾಯಿ ಬಂದಿದೆ. ಇಂತಹ ಒಂದು ಒಳ್ಳೆಯ ಹಣ ಬರುವಂಥ ಸ್ಕೀಮು ಈ ದೇಶದಲ್ಲಿ ಇದ್ದರೂ ಕೂಡ ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಕಡೆಗಾಣಿಸಿದ್ದಾರೆ. ನಮ್ಮ ದೇಶದಲ್ಲಿ ಸುಮಾರು ೮-೧೦ ಸಾವಿರ ಅತ್ಯುತ್ತಮವಾದ ರಾಸುಗಳು ಇವೆ. ಅದಕ್ಕಾಗಿ ಸುಮಾರು ೫೦-೬೦ ಸಾವಿರ ಎಕರೆ ಇರತಕ್ಕಂಥ ಅಮೃತ ಮಹಲ್ ಕಾವಲು ವ್ಯವಸಾಯದ ಇಲಾಖೆಯವರ ವಶದಲ್ಲಿದೆ. ಆದುದರಿಂದ ಈ ಇಲಾಖೆಯವರು ಇಂತಹ ಕಾವಲುಗಳಿಗೆ ಹೆಚ್ಚು ನಿಗಾ ಕೊಟ್ಟು ಇನ್ನೂ ಹೆಚ್ಚು ಹೆಚ್ಚು ಅಮೃತ ಮಹಲ್ ಕಾವಲುಗಳನ್ನು ಮಾಡಬೇಕು ಎಂದು ಹೇಳುತ್ತೇನೆ ಅನಾದಿಕಾಲದಿಂದಲೂ ಬಂದಿರತಕ್ಕಂಥ ಈ ಪದ್ಧತಿಯಿಂದ ಎಷ್ಟು ಕಾವಲುಗಳಲ್ಲಿ ದನಗಳನ್ನು ಸಾಕುತ್ತಿದ್ದರೋ ಅಷ್ಟೇ ದನಗಳನ್ನು ಈಗಲೂ ಸಾಕುತ್ತಿದ್ದಾರೆ. ಮತ್ತು ಪುರಾತನ ಕಾಲದಿಂದ ಬಂದಂಥ ಕಾವಲುಗಳಲ್ಲಿಯೇ ದನಗಳನ್ನು ಮೇಯಿಸುತ್ತಿದ್ದಾರೆ. ದನಗಳನ್ನು ಹೆಚ್ಚು ಹೆಚ್ಚು ಉತ್ಪತ್ತಿ ಮಾಡಬೇಕು. ಆದರೆ ಈ ಕಾವಲುಗಳಲ್ಲಿ ಎಷ್ಟು ಎಕರೆಯಲ್ಲಿ ಮೇವು ಇದೆ, ಎಷ್ಟು ಎಕರೆಯಲ್ಲಿ ರಾಸುಗಳನ್ನು ಹೆಚ್ಚು ಮಾಡಬಹುದು, ಇದರಿಂದ ಎಷ್ಟು ಉತ್ಪಾದನೆ ಮಾಡಬಹುದು ಎನ್ನುವ ಒಂದು ಯೋಜನೆಯನ್ನು ಹಾಕದೆ ಅನಾದಿಕಾಲದಿಂದ ಬಂದ ಒಂದೇ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಈವೊತ್ತಿನ ದಿವಸ ನಮ್ಮ ದೇಶಕ್ಕೆ ಬೇಕಾದಷ್ಟು ಎತ್ತುಗಳು ಬೇಕಾಗುತ್ತಿದೆ. ಅತ್ಯುತ್ತಮವಾದ ಎತ್ತುಗಳನ್ನು ಉತ್ಪಾದನೆ ಮಾಡಲಿಕ್ಕೆ ಮತ್ತು ಅವುಗಳನ್ನು ಹೆಚ್ಚು ಮಾಡುವುದಕ್ಕೆ ಬೇಕಾದಷ್ಟು ಅನುಕೂಲಗಳು ನಮ್ಮ ಹತ್ತಿರ ಈ ದಿವಸ ಇದೆ. ಆ ಅನುಕೂಲಗಳನ್ನು ಉಪಯೋಗಿಸಿಕೊಂಡು ಜಾಸ್ತಿ ಜಾಸ್ತಿ ಸಂಖ್ಯೆಯಲ್ಲಿ ದನಗಳನ್ನು ಸಾಕಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡಿ ರೈತರಿಗೆ ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಲ್ಲಿ ಎರಡು ವಿಧ ಇವೆ. ಒಂದನೆಯದಾಗಿ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರು ಈ ಉತ್ಪಾದನೆಗೆ ತೊಡಗಿದ್ದಾರೆ. ಎರಡನೆಯದಾಗಿ ಸರ್ಕಾರದವರೂ ಇದಕ್ಕೆ ತೊಡಗಿದ್ದಾರೆ. ಸರ್ಕಾರದವರು ಈ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ಗೆ ನೀವು ಉತ್ಪಾದನೆ ಮಾಡಬೇಡಿ ನಾವೇ ಮಾಡುತ್ತೇವೆ ಎಂದು ಹೇಳುತ್ತಾರೆ.

[Mr. DEPUTY SPEAKER in the Chair]

ಆದುದರಿಂದ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರು ಇದನ್ನು ಕೈಬಿಟ್ಟಿದ್ದಾರೆ. ಈ ಕೆಲಸವನ್ನು ಸರ್ಕಾರದವರೇ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಆ ರೀತಿ ಮಾಡುತ್ತೇವೆಂದು ಹೇಳಿ ಇದನ್ನು ಪ್ರೈವೇಟ್‌ನವರಿಗೆ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲ, ತಾವೂ ಮಾಡುವುದಿಲ್ಲ. ನೀವಾದರೂ ಕೂಡ ದಕ್ಷತೆಯಿಂದ ಕೆಲಸ ಮಾಡುತ್ತಾ ಇಲ್ಲ. ಕಾಲಾನು ಕಾಲದಿಂದ ನಡೆದುಕೊಂಡು ಬಂದಂಥ ಸುಪ್ರಸಿದ್ಧವಾದ ತಳಿಯ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಾ ಇಲ್ಲ. ಇದರ ಹಿಂದೆ ಯಾರಾವರೂ

(ಶ್ರೀ ಬಿ. ನಂಜಪ್ಪ)

ನಾಟಕ ಆಡಿದ್ದಾರೆಯೋ ಎಂದು ಕೇಳುತ್ತೇನೆ. ಈ ಸ್ಥಿತಿಯಲ್ಲಿ ನೀವು ಕೆಲಸಕಾರ್ಯಗಳನ್ನು ಮಾಡತ್ತಾ ಇದ್ದೀರಿ ಆದರೆ ನಮ್ಮ ಮಂತ್ರಿ ವರ್ಯರಿಗೆ ನಾನು ಹೇಳುವುದು ಇಷ್ಟೆ, ಇದು ಯಾವರೀತಿಯೋ ಇರಲಿ, ಇದು ದೇಶದ ಮರ್ಯಾದೆ, ಇದು ದೇಶದ ಸಂಪತ್ತು ಎಂದು ತಿಳಿದುಕೊಂಡು ಈ ಕೆಲಸಕಾರ್ಯಗಳನ್ನು ಮುತುವರ್ಜಿ ವಹಿಸಿ ಮಾಡಬೇಕು. ಸರ್ಕಾರದವರೇ ಆಗಲಿ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರೇ ಆಗಲಿ ಇದನ್ನು ತೆಗೆದುಕೊಂಡು ಈ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅರಣ್ಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡುತ್ತೇನೆ. ಅರಣ್ಯ ಇಲಾಖೆಯಲ್ಲಿ ಸಾಮಾನ್ಯವಾಗಿ ಹೆಚ್ಚು ಉತ್ಪಾದನೆ ಬರುತ್ತಾ ಇದೆ. ಈಗ ಬರುತ್ತಾ ಇರುವಂಥ ಉತ್ಪತ್ತಿ ಹಿಂದೆ ಮಾಡಿದಂಥ ಅಫಾರಸ್ಟೇಷನ್‌ನಿಂದ ಬರುತ್ತಾ ಇದೆ. ಇಲ್ಲದಿದ್ದರೆ ಇಷ್ಟೊಂದು ಉತ್ಪತ್ತಿ ಬರುತ್ತಾ ಇರಲಿಲ್ಲ. ಇದು ಅನಾದಿಕಾಲದಿಂದಲೂ ಬಂದಿರತಕ್ಕಂಥ ಅರಣ್ಯ. ಈವೊತ್ತು ಅದರಿಂಧ ಹೆಚ್ಚು ಸಂಪಾದನೆಯನ್ನು ಮಾಡುತ್ತಾ ಇದ್ದೀರಿ. ಈಗಲಾದರೂ ಕೂಡ ನೀವು ಮಾಡುತ್ತಾ ಇರುವುದು ಈ ಅಫಾರಸ್ಟೇಷನ್‌ನಲ್ಲಿ ಸಮೃದ್ಧಿಯಾಗಿ ಬೆಳೆದಿರತಕ್ಕಂಥ ಬೆಲೆಬಾಳುವಂಥ ಒಳ್ಳೆಯ ಜಾತಿಮರಗಳನ್ನು ಅಂದರೆ ನಂದಿ, ಹೊನ್ನೆ, ತೇಗ ಇವುಗಳನ್ನು ಆ ಕಾಡಿನಲ್ಲಿ ಕತ್ತರಿಸುತ್ತಿದ್ದೀರಿ, ಬೆಂಕಿ ಹಾಕಿ ಸುಡುತ್ತಿದ್ದೀರಿ ಮತ್ತೆ ಸರ್ವೆ ಮಾಡಿ ಸಣ್ಣ ಸಣ್ಣ ಗಿಡಗಳನ್ನು ನೆಟ್ಟು ಕಾಡನ್ನು ಬೆಳೆಸುತ್ತೇವೆ ಎಂದು ಹೇಳುತ್ತೀರಿ. ಇದರ ಉದ್ದೇಶ ಏನು ಎಂದು ನಾನು ಪ್ರಶ್ನೆಮಾಡಬೇಕಾಗಿದೆ.

ಚೆನ್ನಾಗಿ ಬೆಳೆದಿರುವ ಕಾಡಿನಲ್ಲಿ ಸೌದೆಗಾಗಿ ಒಳ್ಳೆಯ ಮರಗಳನ್ನು ಕಡಿಯುವುದು ನೋಡಿ ನಮಗೆ ಬಹಳ ಆಶ್ಚರ್ಯವಾಗುತ್ತಿದೆ ಕೆಲವು ಕಡೆ ಲಕ್ಷಾಂತರ ರೂಪಾಯಿಗಳಷ್ಟು ಖರ್ಚುಮಾಡಿ ಕಾಡುಬೆಳೆಸುತ್ತಿದ್ದೀರಿ. ಈಚೆಗೆ ಹುಣಸೂರಿನ ಬಳಿ ಇರುವ ಕಾಡಿಗೆ ಹೊಂದಿಕೊಂಡಂತೆ ಎರಡು ಸಾವಿರ ಎಕರೆಗಳಲ್ಲಿ ಕಾಡು ಬೆಳೆಸಬೇಕೆಂದು ಗಿಡಗಳನ್ನು ನೆಟ್ಟರು. ಆದರೆ ಇಂದು ನೋಡಿದರೆ ಯಾವ ಕಡೆಯಲ್ಲಾದರೂ ಒಂದು ಗಿಡವಾದರೂ ನಿಂತಿಲ್ಲ. ಸುಮ್ಮನೆ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಅಫೊರಸ್ಟೇಷನ್‌ಗಾಗಿ ಖರ್ಚು ಮಾಡುತ್ತೀರಿ. ಹೀಗೆ ಖರ್ಚುಮಾಡಿದರೂ ಇದರಿಂದ ಏನೂ ಪ್ರಯೋಜನವಾಗದೆ ಸರಕಾರದ ಹಣ ಸಂಪೂರ್ಣವಾಗಿ ನಷ್ಟವಾಗಿದೆ. ಇದಕ್ಕೆ ಕಾರಣವೇನು? ಇಲ್ಲಿರುವ ಅಧಿಕಾರಿಗಳು ಸರಿಯಾಗಿ ಗಮನ ಕೊಡದೆ ಹೀಗಾಯಿತೇ? ಈ ಬಗ್ಗೆ ಪರಿಶೀಲನೆ ಮಾಡಿ ಅಫೊರಸ್ಟೇಷನ್ ಸ್ಕೀಂ ವಿಫಲವಾಗುವಂತೆ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುವುದು ಸರಿಯಲ್ಲವೇ, ಸುಮ್ಮನೆ ಎಲ್ಲ ಕಡೆಯಲ್ಲೂ ಅರಣ್ಯ ಬೆಳೆಸಬೇಕು, ಅಫೋರೆಸ್ಟೇಷನ್ ಮಾಡಬೇಕೆಂದು ಹೇಳಿ ಗಿಡಗಳನ್ನು ಬೆಳೆಸದೆ ಹೋದರೆ ಇದರಿಂದ ಜನರಿಗೆ ತೊಂದರೆಯಾಗುವುದಿಲ್ಲವೇ? ಯಾರೋ ಕೆಲವರು ಅಧಿಕಾರಿಗಳಿಗೆ ಸಂಪಾದನೆ ಮಾಡಿಕೊಳ್ಳಲು ಒಂದು ದಾರಿ ಮಾಡಿಕೊಳ್ಳಲು ಈ ರೀತಿ ಅಫೊರಸ್ಟೇಷನ್ ಕೆಲಸಗಳನ್ನು ಜಾಸ್ತಿ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಇದರ ಬಗ್ಗೆ ಸರಿಯಾದ ಎನಕ್ವೈರಿ ಮಾಡಿದರೆ ಮಾನ್ಯ ಮಂತ್ರಿಗಳಿಗೆ ಇದರಲ್ಲಿರುವ ಅವ್ಯವಹಾರಗಳು ಗೊತ್ತಾಗಬಹುದು. ಈಗ ನಡೆಯುತ್ತಿರುವ ಅಫೊರಸ್ಟೇಷನ್ ಕೆಲಸಗಳನ್ನು ನೋಡಿದರೆ ಇದರಿಂದ ಸರಕಾರಕ್ಕೇನೂ ಉಪಯೋಗವಿಲ್ಲ ಮತ್ತು ನಷ್ಟವಾಗುತ್ತಿದೆ ಎನ್ನುವಂತೆ ಇಲ್ಲಿ ಭಾಸವಾಗುತ್ತದೆ. ಮತ್ತು ಕೆಲವು ಅಧಿಕಾರಿಗಳು ಎಲ್ಲಿ ಅಫೊರಸ್ಟೇಷನ್ ಕೆಲಸಗಳು ನಡೆಯುತ್ತಿವೆಯೋ ಅಲ್ಲಿಗೆ ಹೆಚ್ಚು ದುಡ್ಡು ಕೊಟ್ಟು ವರ್ಗಾಯಿಸಿಕೊಳ್ಳುತ್ತಿದ್ದಾರೆ ಎಂದು ಕೇಳುತ್ತೇವೆ. ಏಕೆಂದರೆ ಇಲ್ಲಿ ಅಧಿಕಾರಿಗಳಿಗೆ ದುಡ್ಡನ್ನು ಸಂಪಾದನೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು, ಹೀಗೆ ವರ್ಗಕ್ಕಾಗಿಯೇ ಕೆಲವುಜನ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳುತ್ತೇವೆ. ಸರಕಾರದವರು ಒಂದೊಂದು ಕಡೆ ಒಂದೊಂದು ಪ್ಲಾಟು ತೆಗೆದುಕೊಂಡು ಅದನ್ನು ಅಫೊರ್‌ಸ್ಟೇಷನ್‌ಗೆ ಕನವರ್ಟ್ ಮಾಡಿ ಗಿಡಗಳನ್ನು ನೆಡುಸುತ್ತಿದ್ದಾರೆ. ಇಲ್ಲಿ ಹೇಗೆ ಕೆಲಸಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಅನಿರೀಕ್ಷಿತವಾಗಿ ಹೋಗಿ ನೋಡಿದರೆ ಅವರಿಗೆ ಇದರ ವಿವರಗಳೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಈಗ ಮಾಡುತ್ತಿರುವ ಅಫೊರ್‌ಸ್ಟೇಷನ್‌ಗಿಂತ ಸರಕಾರದಲ್ಲಿರುವ ಬಂಜರು ಜಮೀನುಗಳಲ್ಲಿ ಬೆಳೆಬರುವಂತೆ ಸಾಗು ಮಾಡಲು ಪ್ರಯತ್ನ ಮಾಡಿದ್ದರೆ ಜನಕ್ಕೆ ಎಷ್ಟೋ ಅನುಕೂಲಗಳಾದರೂ ಸಿಗುತ್ತಿದ್ದವು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಸರಕಾರದವರು ಎಲ್ಲೆಲ್ಲೂ ಹಸಿರುಕ್ರಾಂತಿ ಮಾಡಬೇಕು ಎಂದು ದೊಡ್ಡದಾಗಿ ಪ್ರಚಾರ ಮಾಡುತ್ತಿದ್ದಾರೆ. ಇದು ಬರೀ ಪ್ರಚಾರಕ್ಕಾಗಿ ಮಾಡುತ್ತಿದ್ದಾರೋ ಒಂದೂ ಗೊತ್ತಾಗುತ್ತಿಲ. ಹಸಿರು ಕ್ರಾಂತಿ ಮಾಡುತ್ತೇವೆಂದು ಹೇಳಿ ಸರಕಾರ ಒಂದು ಜಿಲ್ಲೆಗೆ ಅಗ್ರಿಕಲಚರು ಇಲಾಖೆಯಿಂದ ಎಷ್ಟು ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಕೇಳುತ್ತೇನೆ.

ಹಿಂದೆ ಒಂದು ಜಿಲ್ಲೆಗೆ ಒಬ್ಬರೆ ಡಿಸ್ಟ್ರಿಕ್ಟ್ ಅಗ್ರಿಕಲ್‌ಚರ್ ಆಫೀಸರು ಎಂದು ಇದ್ದರು. ಅವರೇ ಎಲ್ಲಕೆಲಸಗಳನ್ನೂ ಚೆನ್ನಾಗಿ ಮಾಡುತ್ತಿದ್ದರು. ಅಂದರೆ ಈಗ ಎಲ್ಲಿ ನೋಡಿದರೂ ಬರೀ ಅಧಿಕಾರಿಗಳೇ ಆಗಿದ್ದಾರೆ. ಬೀಜಗಳಿಗೆ ಒಬ್ಬರು, ಗೊಬ್ಬರಕ್ಕೆ ಒಬ್ಬರು ಷುಗರ್ ಕೇನ್‌ಗೆ ಒಬ್ಬರು, ಸಾಯಿಲ್ ಕನ್ಸರ್‌ವೇಷನ್‌ಗೆ ಒಬ್ಬರು ಹೀಗೆ ಬೇಕಾದಷ್ಟು ಜನ ಅಧಿಕಾರಿಗಳು ಪ್ರತಿಜಿಲ್ಲೆಯಲ್ಲೂ ಇದ್ದಾರೆ. ಇವರೆಲ್ಲರಿಗೂ ಅಲ್ಲಿರುವ ಗ್ರಾಮ ಸೇವಕರುಗಳಿಂದಲೇ ಎಲ್ಲವರದಿಗಳೂ ಬರಬೇಕು. ಅವರು ಕೊಟ್ಟ ವರದಿಗಳ ಆಧಾರದ ಮೇಲೆಯೇ ಇವರುಗಳು ಕೆಲಸಮಾಡಬೇಕು. ಇವರೇನೂ ಯಾವ ರೈತರಬಳಿ ಹೋಗುವುದಿಲ್ಲ ಮತ್ತು ಎಲ್ಲಿ ಪೈರು ಬೆಳೆದಿವೆ ಅಥವಾ ಇಲ್ಲಾ ಎನ್ನುವುದನ್ನು ನೋಡುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ಹಸಿರುಕ್ರಾಂತಿ ಎನ್ನುವುದು ಬರೀ ಕಾಗದದಲ್ಲಿ ಇದೆಯೇ ಹೊರತು ಜನಗಳಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಸರಕಾರಕ್ಕೆ ಅಧಿಕಾರಿಗಳನ್ನು ಹೆಚ್ಚುಮಾಡಿ ಹಸಿರು ಕ್ರಾಂತಿ ಮಾಡ ಬೇಕು ಎಂತು ಇದ್ದರೆ ಖಂಡಿತ ಇದರಿಂದ ಏನೂ ಆಗುವುದಿಲ್ಲ ಎಂದು ಹೇಳುತ್ತೇನೆ ರೈತರಿಗೆ ನೇರವಾಗಿ ಎಲ್ಲಸಹಾಯ ಸಲಕರಣೆಗಳು ಸರಕಾರದಿಂದ ದೊರೆತರೆ ಆಗ ಹಸಿರು ಕ್ರಾಂತಿ ಎನ್ನುವುದು ಫಲಪ್ರದ ವಾಗುತ್ತದೆ ಇಲ್ಲದೇ ಇದ್ದರೆ ಇದು ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ಹಾಲಪ್ಪ, (ಚನ್ನಗಿರಿ):—ಮಾನ್ಯಅಧ್ಯಕ್ಷರೇ, ನಮ್ಮದೇಶದ ವ್ಯವಸಾಯ ಕ್ಷೇತ್ರದಲ್ಲಿ ಒಂದು ರೀತಿಯಾದ ಸಾಂಕ್ರಾಮಿಕರೋಗ ಹರಡುತ್ತಿದೆ. ಬರೀ ಸ್ಲೋಗನ್‌ಗಳಿಂದ ಸೋಷಿಯಲಿಸಂ ಬರುತ್ತದೆ ಎಂದು ಸರಕಾರದವರು ಭಾವಿಸಿ ಬರಿಹೇಳಿಕೆಗಳನ್ನು ಕೊಡುತ್ತಿದ್ದಾರೆ, ಹಾಗೆ ಇಂದು ಎಲ್ಲೆಲ್ಲೂ ಹಸಿರುಕ್ರಾಂತಿ ಮಾಡಬೇಕು ಎಂದು ದೊಡ್ಡದಾಗಿ ಪ್ರಚಾರ ಮಾಡುತ್ತಿದ್ದಾರೆ. ಹಸಿರುಕ್ರಾಂತಿ ಎನ್ನುವುದು ಬರೀ ಆಫೀಸಿನಲ್ಲಿ ಆಗುತ್ತಿದೆ ಎಂದು ಜನರು ಭಾವಿಸುವಂತಾಗಿದೆ. ಆಗ್ರಿಕಲ್‌ಚರ್ ಆಫೀಸಿನಲ್ಲಿರುವ ಅಧಿಕಾರಿಗಳು ಜನಸಾಮಾನ್ಯರಲ್ಲಿ ಹೋಗಿ ಅವರ ಕಷ್ಟಗಳೇನು ಎನ್ನುವುದನ್ನು ತಿಳಿಯದೇ ಬರೀ ಸ್ಲೋಗನ್ ಮೂಲಕ ಹೇಳಿಕೆಕೊಟ್ಟು ಹಸಿರುಕ್ರಾಂತಿಯಾಗುತ್ತದೆ ಎಂದು ತಿಳಿದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ಡಿಪಾರ್ಟಮೆಂಟಿನಲ್ಲಿರುವ ಅಧಿಕಾರಿಗಳು ರೈತರ ಹತ್ತಿರಹೋಗಿ ಅವರು ಬೆಳೆಯುತ್ತಿರುವ ಪೈರುಗಳು ಚೆನ್ನಾಗಿಬರುತ್ತಿವೆಯೋ ಇಲ್ಲವೇ, ಅವರಿಗೆ ಸುಧಾರಿತವಾದ ಬೀಜಗಳು ಹಾಗು ಗೊಬ್ಬರ ಬೇಕೇ ಇತ್ಯಾದಿ ವಿಚಾರಗಳಲ್ಲಿ ಅವರ ಕಷ್ಟಗಳೇನು ಎಂದು ತಿಳಿದುಕೊಂಡು ಕೆಲಸಮಾಡುತ್ತಿಲ್ಲ ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ನಾಲ್ಕೈದು ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಬೆಳೆದಿದ್ದರು. ಆದರೆ ಭತ್ತಕ್ಕೆ ಒಂದು ರೀತಿಯಾದ ರಿಂಡರುಪಸ್ಟ್ ಎನ್ನುವ ರೋಗ ತಗುಲಿತ್ತು ಈ ರೋಗವನ್ನು ನಿವಾರಿಸಬೇಕು ಇಲ್ಲದಿದ್ದರೆ ಇಲ್ಲಿನ ಭತ್ತದ ಬೆಳೆ ಹಾಳಾಗುತ್ತದೆ ಎಂದು ಅಧಿಕಾರಿಗಳಿಗೆ ಹೇಳಿದರೂ ಇಲ್ಲಿನ ಎನ್. ಇ. ಎಸ್. ಅಧಿಕಾರಿಗಳು ಗಮನ ಕೊಡಲಿಲ್ಲ. ನಾನೇ ಖುದ್ದು ದಾವಣಗೆರೆಯಲ್ಲಿದ್ದ ಆಗ್ರಿಕಲ್‌ಚರ್ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಇಲ್ಲಿನ ಫಸಲು ಹಾಳಾಗಿ ಹೋಗುತ್ತಿದೆ ಇದರಲ್ಲಿ ಯಾವುದೊ ಒಂದು ರೀತಿಯಾದ ರೋಗ ಬಂದಿದೆ ಇವನ್ನು ಕ್ರಿಮಿನಾಶಕ ಔಷಧಿ ಉಪಯೋಗಿಸಿ ಸರಿಮಾಡಬೇಕು ಎಂದು ಒತ್ತಾಯ ಮಾಡಿದ ಮೇಲೆ ತಕ್ಕ ಕ್ರಮಕೈಗೊಂಡರು. ಹೀಗೆ ಅಧಿಕಾರಿಗಳಲ್ಲಿ ಮನಪರಿವರ್ತನೆಯಾಗದ ಹೊರತು ಹಸಿರುಕ್ರಾಂತಿ ಎನ್ನುವುದು ಯಾವುದೇ ರೀತಿಯಿಂದಲೂ ಆಗಲು ಸಾಧ್ಯದವಿಲ್ಲ. ನಮ್ಮರೈತರಿಗೆ ಸಕಾಲದಲ್ಲಿ ಮಳೆ ಬರದೇ ಹೋದರೆ ಅವರು ಬೆಳೆಮಾಡಲು ಸಾಧ್ಯವೇ ಇಲ್ಲ. ಹಿಂದೆ ದವಸದ ರೇಟು ಪಲ್ಲಕ್ಕೆ ಸುಮಾರು ೧೨೦ ರೂಪಾಯಿಗಳಿದ್ದದ್ದು ಇಂದು ೪೦–೫೦ ರೂಪಾಯಿಗಳಿಗೆ ಇಳಿದಿದೆ. ಇದರಿಂದ ರೈತರು ಬೆಳೆಯುವ ದವಸಕ್ಕೆ ಸರಿಯಾದ ಬೆಲೆಸಿಗದೆ ನಷ್ಟವಾಗುತ್ತಿದೆ. ಕೆಲವುಕಡೆ ಮಳೆಬಂದರೆ ರೈತರಸ್ಥಿತಿ ಚೆನ್ನಾಗಿರುತ್ತದೆ ಆದರೆ ಕೆಲವುಕಡೆಗಳಲ್ಲಿ ಮಳೆಯೇ ಬಾರದೆ ಹೋದರೆ ಆ ಪ್ರದೇಶ ವಾಸ್ತವವಾಗಿ ಕ್ಷಾಮಪ್ರದೇಶದಂತಾಗುತ್ತದೆ ಇಲ್ಲಿ ಹೇಗೆ ಬೆಳೆಮಾಡಬೇಕು? ಸುಮ್ಮನೆ ಸರಕಾರ ಹಸಿರುಕ್ರಾಂತಿಯಾಗಬೇಕು ಎಂದು ಬರೀ ಹೇಳಿಕೆಕೊಡುತ್ತಾ ಹೋದರೆ ಇದರಿಂದ ನಮ್ಮ ದೇಶ ಉದ್ಧಾರವಾಗುವುದಿಲ್ಲ. ನಮ್ಮ ಭದ್ರಾಪ್ರಾಜೆಕ್ಟ್ ಕೆಳಗೆ ಸುಮಾರು ಮೂರು ನಾಲ್ಕು ಸಾವಿರ ಎಕರೆಯಷ್ಟು ಭೂಮಿಯಲ್ಲಿ ಅಲ್‌ಕಲೈನ್ ಆಗಿ ಇಲ್ಲಿ ಯಾವಫಸಲು ಬೆಳೆಯಲು ಆಗುತ್ತಿಲ್ಲ. ಇದರ ಕಡೆಗೆ ವ್ಯವಸಾಯ ಇಲಾಖೆಯವರು ಸಾಕಷ್ಟು ಹೆಚ್ಚು ಗಮನ ವಹಿಸಿ ಇದನ್ನು ನಿವಾರಿಸಲು ಪ್ರಯತ್ನಗಳನ್ನು ಮಾಡದೇಕೆಂದು ಹೇಳಿದರೂ ಕೂಡ ಇದರ ಕಡೆಗೆ ಗಮನ ಕೊಡಲಿಲ್ಲ. ಇದರಿಂದಾಗಿ ನಮ್ಮಕಡೆಒಬ್ಬರು ಹಿಂದೆ ಲಕ್ಷಾಧೀಶ್ವರರು ಆಗಿದ್ದವರು ಇಂದು ಭಿಕ್ಷಾದಿಪತಿಗಳಾಗಿದ್ದಾರೆ. ಅಗ್ರಿಕಲ್‌ಚರು ಇಲಾಖೆಯವರು ಸೆಲೈನ್ ಆಗಿರುವ ಭೂಮಿಯನ್ನು ಫರ್ಟೈಲ್ ಆಗಿ ಮಾಡಲು ಸೂಕ್ತಕ್ರಮ ತೆಗೆದುಕೊಳ್ಳಲು ಮುಂಜಾಗರೂಕತೆ ವಹಿಸಿದ್ದರೆ ಜನತೆಗೆ ಅನುಕೂಲವಾಗುತ್ತಿತ್ತು ಹೀಗೆ ಇಲಾಖೆಯಲ್ಲಿರುವ ಅಧಿಕಾರಿಗಳು ರೈತರ ಬಗ್ಗೆ ಸಾಕಷ್ಟು ಆಸಕ್ತಿವಹಿಸದೇ ಹೋದರೆ ರೈತರು ಯಾವಫಸಲನ್ನೂ ಚೆನ್ನಾಗಿ ಬೆಳೆಯಲು ಆಗುವುದಿಲ್ಲ ಇನ್ನು ನಮ್ಮ ಹರಿಹರದಲ್ಲಿ ಒಂದು ಸೀಡ್‌ಫಾರಂ ತೆಗೆಯಬೇಕೆಂದು ಸುಮಾರು ೧೬೩ ಎಕರೆ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಆದರೆ ಅಲ್ಲಿಯ ತಾಲ್ಲೂಕು ಜನರು ಇಲ್ಲಿ ವಶಪಡಿಸಿಕೊಂಡಿರುವ ಜಮೀನು ಬಹಳ ಬೆಲೆಯುಳ್ಳದ್ದು ಮತ್ತು ಈ ಭೂಮಿಗೆಹೆಚ್ಚುಬೆಲೆ ಸರಕಾರ ಕೊಟ್ಟರೆ ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತಾಗುತ್ತೆ ಎಂದು

(ಶ್ರೀ ಎನ್. ಜಿ. ಹಾಲಪ್ಪ)

ಇದಕ್ಕೆ ೨೦ ಲಕ್ಷ ಹಣಕೊಡುವುದು ಸರಿಯಲ್ಲ ಎಂದು ಒತ್ತಾಯ ಮಾಡಿದ್ದರಿಂದ ಸರಕಾರ ಇದನ್ನು ಕೈಬಿಟ್ಟರು ಮತ್ತು ಈಚೆಗೆ ನಮ್ಮ ತಾಲ್ಲೂಕಿನ ಬಳಿ ಇರುವ ತ್ಯಾವಣಗಿ ಎಂಬಲ್ಲಿ ಸುಮಾರು ೩೦೦ ಎಕರೆ ಸರಕಾರದ ಗೋಮಾಳ ಇವೆ. ಇದರಲ್ಲಿ ೨೦೦ ಎಕರೆಯೊಳಗೆ ಸೀಡ್ ಫಾರಂ ಮಾಡಬಹುದು ಎಂದು ಇದ್ದಾರೆ, ಆದರೆ ಇಲ್ಲಿರುವ ಗೋಮಾಳದಲ್ಲಿ ಕೆಲವರು ಸರಕಾರದ ಅಪ್ಪಣೆ ಇಲ್ಲದೆ ಬಗೇರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಸರಕಾರ ಈಗ ಯೋಚಿಸಿರುವಂತೆ ಇಲ್ಲಿ ಒಂದು ಸೀಡ್ ಫಾರಂ ಮಾಡಿದರೆ ಭದ್ರಾ ಪ್ರಾಜೆಕ್ಟ್ ಜನರಿಗೆಲ್ಲಾ ಅನುಕೂಲವಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಇಲ್ಲಿರುವ ಗೋಮಾಳದ ಸುಮಾರು ೨೦೦ ಎಕರೆಗಳ ಪ್ರದೇಶದಲ್ಲಿ ಸೀಡ್ ಫಾರಂ ಮಾಡಿ ಒಳ್ಳೆಯ ಬತ್ತದ ಬೀಜ ಹಾಗೂ ಇನ್ನಿತರ ಸುಧಾರಿತ ಬೀಜಗಳನ್ನು ಜನರಿಗೆ ದೊರಕುವಂತೆ ಸಹಾಯಮಾಡಬೇಕೆಂದು ಕೇಳುತ್ತೇನೆ. ಇದರಿಂದ ದಾವಣಗೆರೆ, ಹರಿಹರ ಹಾಗೂ ಭದ್ರಾಪ್ರಾಜೆಕ್ಟ್‌ನ ಇಲ್ಲಾ ಭಾಗಗಳಿಗೂ ಅನುಕೂಲವಾಗುತ್ತದೆ. ಇದರ ಕಡೆಗೆ ಸರಕಾರ ನಿಗಾವಹಿಸಬೇಕೆಂದು ಹೇಳುತ್ತೇನೆ. ಇನ್ನು ಅರಣ್ಯದ ಬಗ್ಗೆ ಹೇಳಬೇಕಾದರೆ ವೃಕ್ಷ ಕಡಿದರೆ ಬಿಕ್ಷ ಮಾಡುವುದು ಹೆಚ್ಚಾಗುತ್ತೆ ಎನ್ನುವಂತೆ ನಮ್ಮ ಕಾಡುಗಳಲ್ಲಿರುವ ಮರವನ್ನು ಕಡಿದು ನಾಶ ಮಾಡುತ್ತಿದ್ದಾರೆ. ಇದೇಕೆ ಹೀಗೆ ಮಾಡುತ್ತಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನೇ ಒಂದು ಪ್ರಶ್ನೆಯನ್ನು ಇದೇ ತಿಂಗಳು ಎರಡನೇ ತಾರೀಖು ಇಲ್ಲಿ ಕೇಳಿದ್ದೆ. ಇದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳುತ್ತಾ ಚಿಕ್ಕಮಗಳೂರು ದಾವಣಗೆರೆ ಮತ್ತು ಶಿವಮೊಗ್ಗ ಡಿವಿಜನ್‌ಗಳಲ್ಲಿ ಸುಮಾರು ೪೬. ೭೬೩ ಎಕರೆ ಯಷ್ಟು ಪ್ರದೇಶವನ್ನು ಅರಣ್ಯಕ್ಕಾನ ಅಕ್ವೈರು ಮಾಡಿಕೊಂಡಿದೆಯೆಂದು ಹೇಳಿದಾಗ ಇದು ಸರಿಯಲ್ಲ ಎಂದು ನಾನುಹೇಳಿದರೂ ಅದಕ್ಕೆ ಸರಿಯಾದ ಉತ್ತರ ಕೊಡಲಿಲ್ಲ. ಮತ್ತು ಸರಕಾರದಿಂದ ಜವಾಬುದಾರಿಯುತವಾದ ಉತ್ತರಕೊಡಬರಲಿಲ್ಲ. ಮಲೆನಾಡಿನಲ್ಲಿರುವ ಕಾಡುಗಳನ್ನು ಕಡಿದರೆ ಮಳೆ ಬರಲು ತೊಂದರೆಯಾಗುವುದಿಲ್ಲವೇ ಎಂದು ಮತ್ತೊಂದು ಪ್ರಶ್ನೆ ಕೇಳಿದುದಕ್ಕೆ There is no decease in rainfall ಎಂದು ಹೇಳಿದರು. ಇದರಿಂದೇನೂ ತೊಂದರೆಯಾಗುವುದಿಲ್ಲ ಎಂದು ಹೇಳಲು ಬಹುಶಃ ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳಿಗೆ ಸರಿಯಾದ ಮಾಹಿತಿ ಕೊಡಲಿಲ್ಲ ಎಂದು ಕಾಣುತ್ತದೆ. ಸರಿಯಾದ ಅಂಕೆ ಸಂಖ್ಯೆಗಳನ್ನು ನೋಡಿದರೆ ಮಲೆನಾಡಿನಲ್ಲಿ ಈಚೆಗೆ ಬರುತ್ತಿರುವ ಮಳೆ ಬಹು ಕಡಿಮೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಚನ್ನಗಿರಿ ತಾಲ್ಲೂಕಿನಲ್ಲಿರುವ ಎರಡು ಹೋಬಳಿಗಳಲ್ಲೂ ಈ ಸಾರಿ ಮಳೆ ಇಲ್ಲ ಇಲ್ಲಿರುವ ಮೂರು ಸಾವಿರ ಎಕರೆ ಇದ್ದ ಅರಣ್ಯ ಪ್ರದೇಶಗಳಿಂದ ಸೌದೆಗಾಗಿ ಮರಗಳನ್ನು ಕಡಿದುಭದ್ರಾವತಿಯ ಐರನ್ ಕಂಪನಿಗೆ ಕಳುಹಿಸುತ್ತಿದ್ದಾರೆ. ಮಂತ್ರಿಗಳು ಇಲ್ಲಿ ಕೊಟ್ಟಿರುವ ಅಂಕೆಗಳಂತೆ ನೋಡಿದರೆ ತೀರ್ಥಹಳ್ಳಿಯಲ್ಲಿ ೨೫೫ ಎಕರೆಗಳು, ಹೊಸನಗರದಲ್ಲಿ ೧೪೨ ಎಕರೆಗಳು ಚನ್ನಗಿರಿಯಲ್ಲಿ ೩೦೦ ಎಕರೆಗಳಲ್ಲಿರುವ ಕಾಡುಗಳ ಮರಗಳನ್ನು ಕಡಿದು ಐರನ್‌ಕಂಪನಿಗೆ ಒದಗಿಸಲು ಸೌಕರ್ಯ ಮಾಡಿಕೊಟ್ಟಿದ್ದಾರೆ.

ಇವತ್ತು ಚೆನ್ನಗಿರಿ ತಾಲ್ಲೂಕ್‌ನಲ್ಲಿರುವ ಕಾಡಿನಿಂದ ಮರಗಳನ್ನು ಕಳ್ಳಸಾಗಾಣಿಕೆ ಮಾಡಲಾಗುತ್ತಿದೆ. ಇದರ ಜೊತೆಗೆ ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಅವಶ್ಯಕ ವಾದ ಸೌದೆ ಮತ್ತು ಇದ್ದಲುಗಳನ್ನು ಒದಗಿಸಲು ಚೆನ್ನಗಿರಿ ತಾಲ್ಲೂಕ್‌ನಲ್ಲಿ ಮೂರು ಸಾವಿರ ಎಕರೆ ಅರಣ್ಯ ಪ್ರದೇಶಗಳಲ್ಲಿ ಮರಗಳನ್ನು ಕಡಿದಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಮಲೆನಾಡಿಗೆ ಬಂದು ನೋಡಿದರೆ ಕಾಡು ಹಾಳಾಗುತ್ತಿರುವುದನ್ನು ಕಣ್ಣಾರೆ ನೋಡಬಹುದು. ತಾವು ಈಗ ತಮ್ಮ ಅಧಿಕಾರಿಗಳು ಕೊಡುತ್ತಿರುವ ಅಂಕಿ ಅಂಶಗಳನ್ನೇ ಇಲ್ಲಿ ಹೇಳುತ್ತೀರಿ. ನಿಜ ಪರಿಸ್ಥಿತಿ ತಿಳಿಯಬೇಕಾದರೆ ತಾವು ಒಂದು ಸಲ ನಮ್ಮ ಮಲೆನಾಡಿಗೆ ಬರಬೇಕು. ಅಲ್ಲಿಯ ವಾತಾವರಣ ಕೂಡ ಪ್ರಶಾಂತವಾಗಿದೆ. ಇದೇ ರೀತಿ ಕಾಡನ್ನು ಕಡಿದು ಮುಂದೆ ನಮ್ಮ ಕೈಗೆ ಭಿಕ್ಷಾಪಾತ್ರೆಯನ್ನು ಕೊಡುತ್ತೀರೇದು ಕಾಣುತ್ತದೆ. ಕಾಡನ್ನು ಕಡಿದಂತೆಲ್ಲಾ ಮಳೆಯಾಗುವುದು ಕಡಿಮೆಯಾಗುತ್ತದೆ. ಆದ್ದರಿಂದ ತಾವು ಇಂಡಸ್ಟ್ರಿ ಮಿನಿಸ್ಟರ್ ಹತ್ತಿರ ಸಮಾಲೋಚನೆ ಮಾಡಿ ಕಾಡನ್ನು ಕಡಿಯುವುದನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡಬೇಕು. ಅರಣ್ಯ ಸಂಪತ್ತು ಜಾಸ್ತಿ ಇದ್ದರೆ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಮತ್ತು ದೇಶದ ಸಂಪತ್ತು ಕೂಡ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಬಗ್ಗೆ ತೀವ್ರವಾಗಿ ಸರ್ಕಾರದವರು ಆಲೋಚನೆ ಮಾಡಿ ಕಾಡನ್ನು ಕಡಿಯುವುದನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

53-0 PM.

ಇನ್ನು ಅಫಾರೆಸ್ಟೇಷನ್ ಎಂದು ಮಾಡುತ್ತಿದ್ದೀರಿ. ಇದನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡುತ್ತಿಲ್ಲ. ನನ್ನ ತಾಲ್ಲೂಕ್‌ನಲ್ಲಿ ಕೂಡ ಮಾಡಿದ್ದರು. ನೆಟ್ಟ ಗಿಡಗಳನ್ನು ದನಕರುಗಳು ಮತ್ತು ಕುರಿಗಳು ತಿಂದು ಹಾಕಿದವು ಎಂದು ಅಧಿಕಾರಿಗಳು ಹೇಳುತ್ತಾರೆ ಈ ಬಗ್ಗೆ ಖರ್ಚು ಮಾಡುತ್ತಿರುವ ಹಣವೆಲ್ಲಾ ದುರುಪಯೋಗವಾಗುತ್ತಿದೆ ಎಂದು ಹೇಳುತ್ತೇನೆ. ಈ ಒಂದು ಶಾಪ ಮುಂದೆ ನಿಮಗೆ ತಟ್ಟಬಹುದು ಎಂದು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ತ್ವರಿತಗತಿಯಿಂದ ಕಾಡಿನಲ್ಲಿರುವ ಮರಗಳನ್ನು ಕಡಿಯುತ್ತಿದ್ದಾರೆಯೇ ವಿನಃ ಹೊಸದಾಗಿ ಗಿಡಗಳನ್ನು ಬೆಳೆಸುತ್ತಿಲ್ಲ. ನಿಮ್ಮ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ನೀವು ಒಂದು ಸಲ ಬಂದು ನೋಡಿದರೆ ಗೊತ್ತಾಗುತ್ತದೆ. ಅಫಾರೆಸ್ಟೇಷನ್ ಕೆಲಸ ಏನಿದೆ ಅದು ಫೇಲ್ ಆಗಿದೆ. ಆ ಬಗ್ಗೆ ಅಧಿಕಾರಿಗಳು ತಪ್ಪು ಅಂಕಿ ಅಂಶಗಳನ್ನು ಕೊಡುತ್ತಿದ್ದಾರೆ. ಎಲ್ಲಿ ಇದನ್ನು ಮಾಡಬೇಕೋ ಅಲ್ಲಿ ಮಾಡದೆ ಕಾಡಿನ ಒಳಗೆ ಅಂದರೆ ೨೦ ಮೈಲಿಯ ಒಳಗಡೆ ಹೋಗಿ ಮಾಡುತ್ತಿದ್ದಾರೆ. ೧೦-೧೨ ಮೈಲಿಗಳಷ್ಟು ಜಾಗ ನಮ್ಮ ತಾಲ್ಲೂಕ್‌ನಲ್ಲಿ ಇದೆ. ಅದು ಯೋಗ್ಯವಾದ ಜಾಗ. ಅಲ್ಲಿ ಅಫಾರೆಸ್ಟೇಷನ್ ಮಾಡಿದರೆ ಒಳ್ಳೆಯ ಕಾಡನ್ನು ಬೆಳೆಸಬಹುದು. ಇಷ್ಟ ಬಂದ ಕಡೆ ಮಾಡುವುದರಿಂದ ನಮಗೆ ತಿಳಿಯುವುದೂ ಇಲ್ಲ. ಮತ್ತು ಸಾರ್ವಜನಿಕರ ಹಣವೂ ಕೂಡ ದುರುಪಯೋಗವಾಗುತ್ತದೆ. ಅಧಿಕಾರಿಕಗಳು ಏನೇನು ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಅಡ್ಡಾಡಿ ನೋಡಬೇಕು. ತಾವು ಬೆಂಗಳೂರನ್ನು ಬಿಟ್ಟು ಕಾಡುಗಳಲ್ಲಿ ಹೋಗಿ ನೋಡಬೇಕು. ಅಲ್ಲಿ ಏನು ಅನ್ಯಾಯವಾಗುತ್ತಿದೆ ಎಂಬುದು ತಮಗೆ ಗೊತ್ತಾಗುವುದಲ್ಲದೆ ತಮ್ಮ ಮನಸ್ಸಿಗೂ ಕೂಡ ಕಾಡಿನಲ್ಲಿ ಸಂಚಾರ ಮಾಡಿದರೆ ಶಾಂತಿ ಸಿಗುತ್ತದೆ. ಒಳ್ಳೆಯ ಟಿಂಬರ್ ಮತ್ತು ಗಂಧದ ಮರಗಳು ಸ್ಮಗಲ್ಡ್ ಆಗುತ್ತಿರುವುದಕ್ಕೆ ಅಧಿಕಾರಿಗಳು ಸಹ ಕಾರಣರಾಗಿದ್ದಾರೆಂದು ಹೇಳುತ್ತಿದ್ದೇನೆ. ಸರ್ಕಾರಕ್ಕೆ ತೋರಿಸುವುದಕ್ಕೆ ಒಂದೆರಡು ಕೇಸ್‌ಗಳನ್ನು ಹಿಡಿಯುತ್ತಾರೆ ಅಷ್ಟೆ. ನಮ್ಮ ತಾಲ್ಲೂಕ್‌ನಲ್ಲಿ ಸ್ಮಗಲ್ ಮಾಡಿ ತೆಗೆದುಕೊಂಡು ಹೋಗುತ್ತಿದ್ದುದನ್ನು ಬಳ್ಳಾರಿಯಲ್ಲಿ ಹಿಡಿದಿದ್ದಾರೆ. ಸ್ಮಗಲ್ಡ್ ಆದಂತಹ ಟೀಕ್ ಟಿಂಬರ್ ಬೆಂಗಳೂರಿಗೆ ಕೂಡ ಬರುತ್ತಿದೆ. ಇವತ್ತು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿರುವವರು ಸ್ಮಗಲ್ಡ್‌ನಿಂದ ಬಂದಂತಹ ಮರಗಳನ್ನು ಉಪಯೋಗಿಸಿ ಎಂದು ಹೇಳಬಹುದು. ಯಾವ ಅಧಿಕಾರಿಗಳ ಮೇಲೆ ಬ್ಯಾಡ್ ರಿಪೋರ್ಟ್ ಇದೆಯೋ ಅಂತಹ ಅಧಿಕಾರಿಗಳನ್ನು ಕೂಡಲೇ ಕೆಲಸದಿಂದ ತೆಗೆದು ಹಾಕಿದರೆ ಅರಣ್ಯ ಸಂಪತ್ತು ಹೆಚ್ಚುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಮಲೆನಾಡಿನಲ್ಲಿರುವ ಅರಣ್ಯ ಸಂಪತ್ತನ್ನು ಕಾಪಾಡಿಕೊಂಡು ಬರದಿದ್ದರೆ ಒಂದು ಕೆಟ್ಟ ಹೆಸರನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಆ ಭಾಗದ ಜನರಿಗೆ ಭಿಕ್ಷಾ ಪಾತ್ರೆಯನ್ನು ಕೊಡುವ ಸಂದರ್ಭವೂ ಸಹ ಬರುತ್ತದೆಂದು ಹೇಳುತ್ತೇನೆ. ಇದಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಪಶುಸಂಗೋಪನೆ ಇಲಾಖೆಯ ಬಗ್ಗೆ ಇಟ್ಟಿರುವ ಡಿಮ್ಯಾಂಡನ್ನು ನಾನು ವಿರೋಧ ಮಾಡುತ್ತೇನೆ. ಈ ಬಾಬಿಗೆ ಇಟ್ಟಿರುವ ಹಣ ಕಡಿಮೆ. ಕುರಿ, ಕೋಳಿ ಮತ್ತು ದನಕರುಗಳ ಅಭಿವೃದ್ಧಿ ಇನ್ನೂ ಆಗಬೇಕಾಗಿದೆ. ಈಗಿನ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಜೀವಕಳೆ ತುಂಬಿದ್ದಾರೆ. ಪಶುಸಂಗೋಪನೆಯ ಬಗ್ಗೆ ಎರಡು ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಸಾಲದು. ಇನ್ನೂ ಜಾಸ್ತಿ ಹಣವನ್ನು ಒದಗಿಸಿ ಇದೂ ಕೂಡ ಒಂದು ಜೀವಂತ ಇಲಾಖೆ ಎಂಬುದನ್ನು ತೋರಿಸಬೇಕು. ಮಾನ್ಯ ಮಂತ್ರಿಗಳು ಈ ಇಲಾಖೆಯ ಬಗ್ಗೆ ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಿರುವುದಕ್ಕಾಗಿ ಅವರನ್ನು ಅಭಿನಂದನೆ ಮಾಡಬೇಕಾಗುತ್ತದೆ. ಇಷ್ಟು ಹೇಳಿ ನಮ್ಮ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್‌ಗಳನ್ನು ವಿರೋಧ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೋಲೂರ್ ಸಿದ್ದಪ್ಪ (ಕುದೂರ್) — ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರುವ ನಾಲ್ಕು ಡಿಮ್ಯಾಂಡ್‌ಗಳ ಬಗ್ಗೆ ಅನುಮೋದನೆ ಕೊಡುತ್ತಾ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮೊದಲು ಅರಣ್ಯ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಹೊತ್ತು ಅರಣ್ಯ ಸಂಪತ್ತು ಕುಂಠಿತವಾಗುತ್ತಿದೆ. ಅರಣ್ಯ ಇಲಾಖೆಯನ್ನು ಹೊಸ ಮಂತ್ರಿಗಳು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಅತ್ಯುತ್ತಮ ಸ್ಥಿತಿಗೆ ತರುತ್ತಿದ್ದಾರೆ. ಮೊದಲಿನಿಂದಲೂ ಅರಣ್ಯ ಸಂಪತ್ತಿನಿಂದ ದೇಶಕ್ಕೆ ಅನುಕೂಲವಾಗುತ್ತಿರುವುದಲ್ಲದೆ ಇದರಿಂದ ರಾಜ್ಯದ ಬೊಕ್ಕಸಕ್ಕೂ ಹಣ ಬರುತ್ತಿದೆ. ಅರಣ್ಯ ಸಂಪತ್ತು ವೃದ್ಧಿಯಾದರೆ ರೈತರಿಗೆ ಬೇಕಾಗುವಂತಹ ಎಲ್ಲಾ ಅನುಕೂಲಗಳನ್ನು ಪಡೆಯುವುದಕ್ಕೆ ಸಾಧ್ಯವಿದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಇದ್ದಿಲು ಮಾಡಲು ಮತ್ತು ಒಳ್ಳೆಯ ಟಿಂಬರ್‌ಗಳನ್ನು ಕಡಿಯಲು ಲೈಸನ್ಸ್ ಕೊಡುತ್ತಿರುವುದರಿಂದ ವನಸಂಪತ್ತು ದಿನೇ ದಿನೇ ನಾಶವಾಗುವುದಕ್ಕೆ ಅವಕಾಶವಾಗಿದೆ. ಇನ್ನು ಮುಂದೆ ಯಾವುದೇ ಕಾರಣದಿಂದಲೂ ಕೂಡ ಕಾಡಿನಲ್ಲಿ ಇದ್ದಿಲಿಗಾಗಿ ಮರಗಳನ್ನು ಕಡಿಯುವುದಕ್ಕೆ ಮತ್ತು ಕಾಡಿನಲ್ಲಿ ದನಗಳು ಮೇಯುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಹುಣಸೆ, ಮಾವು ಮುಂತಾದ ಅತ್ಯುತ್ತಮವಾದಂಥ ಮರಗಳನ್ನು ಬೆಳೆಸುವುದರ ಮೂಲಕ ಅರಣ್ಯ ಸಂಪತ್ತು ಜಾಸ್ತಿಯಾಗುವುದಕ್ಕೆ ಅವಕಾಶ ಮಾಡಬೇಕು. ವನ್ಯ ಸಂಪತ್ತಿನಿಂದ ದೇಶಕ್ಕೂ ಹಾಗೂ ಸರ್ಕಾರಕ್ಕೂ ಲಾಭವಾಗುತ್ತಿದೆ. ಮಾನ್ಯ ಮಂತ್ರಿಗಳು ಸಂಚಾರ ಕೈಕೊಂಡು ಒಂದೇ ಕಡೆ ಕೆಲಸ ಮಾಡುತ್ತಿರುವವರನ್ನು ಕಂಡುಹಿಡಿದು ವರ್ಗ ಮಾಡಬೇಕು. ೧೦-೨೦ ವರ್ಷಗಳಿಂದ ಒಂದೇ ಕಡೆ

(ಶ್ರೀ ಸೋಲೂರು ಸಿದ್ದಪ್ಪ)

ಫಾರೆಸ್ಟ್ ಗಾರ್ಡ್‌ಗಳು ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕು. ಇವತ್ತು ಅನೇಕ ಕಾರಣಗಳಿಂದ ವನ್ಯ ಸಂಪತ್ತು ಕುಂಠಿತವಾಗುವುದಕ್ಕೆ ಅವಕಾಶವಾಗಿದೆ. ಈ ವಿಚಾರ ಅಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ಮನವರಿಕೆಯಾಗಿದೆ. ಇವತ್ತು ಅರಣ್ಯದಿಂದಲೇ ಸರ್ಕಾರಕ್ಕೆ ಸುಮಾರು ೧೫ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಈ ವರಮಾನ ಇನ್ನೂ ಜಾಸ್ತಿಯಾಗುವುದಕ್ಕೆ ಕಾಡುಗಳಲ್ಲಿ ಯೋಗ್ಯವಾದಂಥ ಮರಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಯಾವ ಒಂದು ಕಾರಣದಿಂದಲೂ ಅರಣ್ಯ ಪ್ರದೇಶವನ್ನು ಸಾಗುವಳಿಗಾಗಿ ಜನಗಳಿಗೆ ಕೊಡತಕ್ಕಂಥ ಒಂದು ಕಾರ್ಯವನ್ನು ಸರ್ಕಾರದವರು ಮಾಡಬಾರದು. ವನಸಂಪತ್ತನ್ನು ಹೆಚ್ಚಿಸಿ ದೇಶಕ್ಕೆ ಲಾಭಾಯಕವಾಗುವಂತಹ ಅನುಕೂಲಗಳನ್ನು ಹೆಚ್ಚಿಸಬೇಕು ಎನ್ನತಕ್ಕಂಥಾ ಕಾಲದಲ್ಲಿ ೫೦ ಎಕರೆ, ೪೦ ಎಕರೆ, ೩೦ ಎಕರೆ ಜಮೀನನ್ನು ಯಾವುದಕ್ಕೂ ಯಾವ ಕಾರಣದಿಂದಲೂ ಯಾರಿಗೂ ಅದನ್ನು ಕೊಡತಕ್ಕಂಥ ಕಾರ್ಯವನ್ನು ಇನ್ನು ಮೇಲೆ ಸರ್ಕಾರದವರು ಖಂಡಿತವಾಗಿಯೂ ನಿಲ್ಲಿಸಬೇಕು. ಈ ಸಭೆಯಲ್ಲಿ ನಾವು ಹೇಳುವಂಥಾ ಮಾತುಗಳನ್ನು ಸರ್ಕಾರದವರು ಗಮನಿಸಬೇಕು. ಅವರು ಅದನ್ನು ಗಮನಿಸದಿದ್ದರೆ ನಾವು ಹೇಳಿದಂತಹ ಮಾತುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಜನರಿಂದ ಚುನಾಯಿತರಾಗಿ ಬಂದಂಥವರೇ ಈ ದಿನ ಮಂತ್ರಿಗಳಾಗಿರತಕ್ಕವರು. ಆದ್ದರಿಂದ ನಾವು ಹೇಳುವಂಥಾ ಮಾತನ್ನು ಗಮನಿಸಬೇಕು. ಅರಣ್ಯ ಸಂಪತ್ತನ್ನು ಹೆಚ್ಚಿಸದಿದ್ದರೆ ತುಂಬಾ ಕಷ್ಟವಾಗುತ್ತದೆ. ಮತ್ತು ಯಾವ ಕಾರಣದಿಂದಲೂ ಫಾರೆಸ್ಟಿನ ಜಮೀನನ್ನು ಯಾರಿಗೂ ಕೊಡಬಾರದು. ಫಾರೆಸ್ಟಿನ ಒಳಗಡೆ ಖಾಲಿ ಜಮೀನು ಇದ್ದರೆ ಅಂಥಾ ಜಮೀನನ್ನು ಯಾರಿಗಾದರೂ ಕೊಟ್ಟರೆ ಆ ಏರಿಯಾದಲ್ಲಿರತಕ್ಕ ವನಸಂಪತ್ತನ್ನೆಲ್ಲಾ ರೈತರು, ಜನಗಳು ಹಾಳು ಮಾಡುತ್ತಾರೆ. ಈ ದೃಷ್ಟಿಯಿಂದ ಫಾರೆಸ್ಟ್ ಜಮೀನನ್ನು ಯಾರಿಗೂ ಕೊಡಬಾರದು ಎಂದು ನಾನು ಹೇಳುತ್ತೇನೆ.

ಮೀನುಗಾರಿಕೆಯ ವಿಷಯದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈಗ ಎರಡು ವರ್ಷಗಳಿಂದ ಈಚೆಗೆ ಈ ಖಾತೆಗೆ ಪ್ರತ್ಯೇಕವಾದ ಒಬ್ಬರು ಮಂತ್ರಿಗಳನ್ನು ನೇಮಿಸಿದ್ದಾರೆ. ಅದರ ಪರಿಣಾಮವಾಗಿ ದೇಶದ ಎಲ್ಲಾ ಭಾಗದಲ್ಲಿಯೂ ಮೀನುಗಾರಿಕೆಯ ಉಪಯೋಗ ಜನಗಳಿಗೆ ದೊರೆತಿದೆ. ಇದರಿಂದ ಆಹಾರದ ಪರಿಸ್ಥಿತಿಯೂ ಸ್ವಲ್ಪಮಟ್ಟಿಗೆ ಸುಧಾರಣೆ ಯಾಗುತ್ತದೆ. ಸಣ್ಣ ಸಣ್ಣ ಕೆರೆಗಳಲ್ಲಿ ಕೂಡ ಈ ಮೀನುಗಾರಿಕೆಯ ಉದ್ಯಮವನ್ನು ಕೈಗೊಂಡು ಸರ್ಕಾರದವರು ನಡೆಸುತ್ತಿದ್ದಾರೆ. ಈ ಉದ್ಯಮವನ್ನು ಒಂದು ಉತ್ತಮ ಮಟ್ಟಕ್ಕೆ ತರುವುದಕ್ಕೆ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಜನತೆಗೆ ಅದರ ಪ್ರಯೋಜನ ಹೆಚ್ಚು ಹೆಚ್ಚಾಗಿ ದೊರೆಯುವಂತೆ ಮಾಡಬೇಕು.

ಗೋ ಸಂಪತ್ತಿನ ಬಗ್ಗೆ ಹೇಳುವುದಾದರೆ ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಅಮೃತಮಹಲ್ ಕಾವಲುಗಳು ಇವೆಯೋ ಅದನ್ನೆಲ್ಲಾ ದಿನೇ ದಿನೇ ಜನಗಳಿಗೆ ಕೊಡುತ್ತಿರುವುದರಿಂದ ಅದು ಕಡಿಮೆ ಯಾಗುತ್ತಿದೆ. ಅಮೃತಮಹಲ್ ಕಾವಲುಗಳಲ್ಲಿ ಉತ್ತಮವಾದ ತಳಿಯನ್ನು, ಉತ್ತಮವಾದ ಜಾನುವಾರಗಳನ್ನು ತಯಾರು ಮಾಡತಕ್ಕಂಥ ಒಂದು ಕಾರ್ಯ ಕುಂಠಿತವಾಗಿದೆ. ಈ ರೀತಿಯಾಗಿ ತಳಿಗಳು ಕುಂಠಿತವಾದದ್ದು ರೈತರಿಗೆ ಬಹಳ ತೊಂದರೆಯಾಗಿದೆ. ಅಮೃತ್‌ಮಹಲ್ ಕಾವಲುಗಳಲ್ಲಿ ಒಳ್ಳೆಯ ಜಾನುವಾರುಗಳನ್ನು, ಒಳ್ಳೆಯ ಹಸುಗಳನ್ನು, ಒಳ್ಳೆಯ ತಳಿಯ ರಾಸುಗಳನ್ನು ತಂದು ಸಾಕಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಒಳ್ಳೆಯ ತಳಿಯನ್ನು ಒದಗಿಸುವಂಥಾ, ಹಂಚುವಂತಹ ಕೆಲಸವನ್ನು ಮಾಡಬೇಕು. ಮತ್ತು ತಳಿಗಳನ್ನು ಉತ್ತಮಪಡಿಸಬೇಕು.

ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ವ್ಯವಸಾಯಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ರೈತರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ರೈತ ಬೆಳೆದಂತಹ ರಾಗಿ, ಬತ್ತ ಮುಂತಾದ ಆಹಾರ ಧಾನ್ಯಗಳಿಗೆ ಸರಿಯಾದಂತಹ ಬೆಲೆ ಸಿಕ್ಕುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಈಗ ರೈತ ವ್ಯವಸಾಯವನ್ನು ಮಾಡಬೇಕಾದರೆ ಹೆಚ್ಚಿನ ಬೆಲೆಯನ್ನು ಕೊಟ್ಟು ಗೊಬ್ಬರ, ವ್ಯವಸಾಯದ ಇತರ ಸಲಕರಣೆಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಮತ್ತು ಅವನು ನಾನಾ ರೀತಿಯಲ್ಲಿ ವ್ಯವಸಾಯಕ್ಕೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದರ ಜೊತೆಗೆ ಕಂದಾಯವನ್ನು ಜಾಸ್ತಿ ಕೊಡಬೇಕಾಗುತ್ತದೆ. ಮತ್ತು ವ್ಯವಸಾಯಕ್ಕೆ ಬೇಕಾದಂತಹ ಟ್ರ್ಯಾಕ್ಟರು ಮತ್ತು ಬುಲ್‌ಡೋಜರ್‌ಗಳನ್ನು ಪಡೆಯಬೇಕಾಗಿದ್ದರೆ ಅದಕ್ಕೆ ಅವನು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇವೆಲ್ಲವನ್ನು ಖರ್ಚು ಮಾಡಿ ರೈತ ಕಷ್ಟಪಟ್ಟು ಆಹಾರಧಾನ್ಯಗಳನ್ನು ಬೆಳೆದರೆ ಅವನು ಬೆಳೆದಂಹತ ಬೆಳೆಗೆ, ಧಾನ್ಯಕ್ಕೆ ಕಡಿಮೆ ಬೆಲೆ ಸಿಕ್ಕುವುದಾದರೆ ಅವನಿಗೆ ಉತ್ಸಾಹ ಕಡಿಮೆಯಾಗುತ್ತದೆ. ಅವನು ವ್ಯವಸಾಯದಲ್ಲಿ

ತೀರಾ ಹಿಂದುಳಿಯುತ್ತಾನೆ. ಆದ್ದರಿಂದ ರೈತರು ಬೆಳೆದಂತಹ ಧಾನ್ಯವನ್ನು ಸರ್ಕಾರದವರೇ ಕೊಂಡು ರೈತರಿಗೆ ಉಂಟಾಗುವ ನಷ್ಟವನ್ನು ಭರ್ತಿ ಮಾಡಿಕೊಡಬೇಕು. ಆ ರೀತಿ ಮಾಡುವುದಾದರೆ ರೈತ ಸಂತೋಷದಿಂದ ಕೆಲಸ ಮಾಡುತ್ತಾನೆ. ಜಮೀನನ್ನು ಹೆಚು ಉತ್ಸಾಹದಿಂದ ಸಾಗು ಮಾಡಿ ಹೆಚ್ಚು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುತ್ತಾನೆ. ಮತ್ತು ಪಟ್ಟಣಗಳಲ್ಲಿರತಕ್ಕ ನೌಕರ ವರ್ಗದವರಿಗೆ, ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಎಲ್ಲರಿಗೂ ಅವನು ಆಹಾರ ಧಾನ್ಯವನ್ನು ಒದಗಿಸುತ್ತಾನೆ. ಆದ್ದರಿಂದ ಈಕಡೆ ಸರ್ಕಾರದವರು ಗಮನಕೊಡಬೇಕು. ನಾವು ಹೇಳತಕ್ಕಂಥಾದ್ದು ಅರಣ್ಯರೋದನವಾಗ ಬಾರದು. ನಾವು ಹೇಳಿದಂತಹ ವಿಚಾರಗಳನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಅವುಗಳನ್ನು ಕಾರ್ಯಗತ ಮಾಡಬೇಕು. ಇದನ್ನೆಲ್ಲಾ ಕಾರ್ಯಗತ ಮಾಡತಕ್ಕ ಅಧಿಕಾರಿಗಳು ಎನಿಸಿದ್ದಾರೆ ಅವರಿಗೆ ಸರ್ಕಾರದವರು ತಿಳುವಳಿಕೆ ಕೊಡುವಾಗ ಚೆನ್ನಾಗಿ ವಿಚಾರ ಮಾಡಿ ಯಾವ ರೀತಿ ಕೆಲಸಗಳನ್ನು ಮಾಡಬೇಕೆಂಬುದನ್ನು ಸೂಚನೆಯನ್ನು ಕೊಡಬೇಕು. ರೈತರು ಸರ್ಕಾರದ ಹತ್ತಿರ ಬಾರದ ಹಾಗೆ ಅವರು ಇದ್ದಲ್ಲಿಯೇ ಕೆಲಸಗಳು ಆಗುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ದೇಶದ ಉನ್ನತಿಗೆ ನಾವೆಲ್ಲರೂ ಹೊಣಗಾರಿಕೆಯನ್ನು ಹೊರಬೇಕೆಂದು ನಾನು ಹೇಳುತ್ತೇನೆ.

ಇವೊತ್ತು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಸುಮಾರು ಒಂದೂವರೆಕೋಟಿ ರೂಪಾಯಿ ಲಾಸ್ ಆಗಿದೆ. ಪ್ರತಿ ವರ್ಷ ಈ ರೀತಿ ಸೊಸೈಟಿಗಳಲ್ಲಿ ಲಾಸ್ ಆಗುತ್ತಿದ್ದರೆ ಸೊಸೈಟಿಗಳು ಮುಂದೆ ಬರುವುದಿಲ್ಲ. ಮತ್ತು ಈ ರೀತಿ ೪ ಲಕ್ಷ, ೫ ಲಕ್ಷ, ೮ ಲಕ್ಷ ರೂಪಾಯಗಳು ಲಾಸ್ ಆದರೆ, ಅದರ ಹೊರೆಯನ್ನು ಹೊರತಕ್ಕವರು ಯಾರು? ಅದರ ಹೊರೆಯನ್ನು ಬಡ ಬೋರೇಗೌಡನು ಹೊರಬೇಕಾಗುತ್ತದೆ. ಆದ್ದರಿಂದ ಆ ರೀತಿ ಸೊಸೈಟಿಗಳಲ್ಲಿ ಲಾಸ್ ಆಗುವುದಕ್ಕೆ ಅವಕಾಶವನ್ನು ಕೊಡದಂತೆ ಸರ್ಕಾರದವರು ಭದ್ರ ಮಾಡಬೇಕು. ಮತ್ತು ಆ ಲಾಸ್ ಆಗುವುದಕ್ಕೆ ಯಾರು ಕಾರಣ ಕರ್ತರಾಗಿರುತ್ತಾರೆಯೋ ಅವರಿಂದ ಆ ಹಣವನ್ನು ವಸೂಲು ಮಾಡಬೇಕು. ಈ ದಿವಸ ನಾನು ಹೆಚ್ಚು ಕಾಲ ಮಾತನಾಡುವುದಕ್ಕೆ ಅಧ್ಯಕ್ಷರು ಕಾಲಾವಕಾಶವನ್ನು ಕೊಡದೇ ಇರುವುದರಿಂದ ಇನ್ನು ಉಳಿದ ವಿಚಾರಗಳನ್ನು ನಾನು ಸರ್ಕಾರಕ್ಕೆ ಬೇರೆ ಮಾರ್ಗದಲ್ಲಿ ತಿಳಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ, ವ್ಯವಸಾಯ ಇಲಾಖೆಯ ಮಂತ್ರಿಗಳು, ಪಶುಪಾಲನಾ ಇಲಾಖೆ ಮಂತ್ರಿಗಳು, ಅರಣ್ಯ ಶಾಖೆಯ ಮಂತ್ರಿಗಳು ಹಾಗೂ ಮೀನುಗಾರಿಕೆಯ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದೆ ೨೧ ಕೋಟಿ ರೂಪಾಯಿಗಳ ನಾಲ್ಕು ಡಿಮ್ಯಾಂಡ್‌ಗಳ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಯ ಮೇಲೆ ಈಗ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದೆ. ಈ ಬೇಡಿಕೆಗಳ ಚರ್ಚೆಗೆ ಕೊಟ್ಟಿರತಕ್ಕ ಅವಧಿಯನ್ನು ನೋಡಿದರೆ ಈ ಖಾತೆಗಳ ಚೌಕಟ್ಟಿನಲ್ಲಿ ಬರತಕ್ಕ ದೇಶದ ಶೇಕಡಾ ೭೮ ರಷ್ಟು ಜನತೆಯ ಒಂದು ದುರ್ದೈವ ಎಂದು ಹೇಳಬಹುದು. ಯಾರು ಪ್ರಜಾಪ್ರಭುತ್ವವನ್ನು ತಂದುಕೊಟ್ಟರೋ, ಯಾರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರೋ ಅಂಥಾ ಜನ ಇರುವಂತಹ ಈ ದೇಶದಲ್ಲಿ ಆಹಾರ ಧಾನ್ಯಗಳಾಗಲೀ, ಬಟ್ಟೆ ಬರೆಗಳಾಗಲೀ, ಇತರ ಮನುಷ್ಯನ ಜೀವನ ಅವಶ್ಯಕತೆಗೆ ಬೇಕಾದಂತಹ ವಸ್ತುಗಳ ಬೆಲೆಯನ್ನು ಗೊತ್ತು ಮಾಡುವಾಗ ಅಧಿಕಾರಿಗಳಾಗಲೀ ಅಥವಾ ಮಂತ್ರಿಗಳಿಗಾಗಲೀ ಅಥವಾ ಸ್ವಲ್ಪ ಪೂರ್ವ-ಪರ ಯೋಚನೆ ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಪೂಜ್ಯ ಸರ್. ಎಂ ವಿಶ್ವೇಶ್ವರಯ್ಯನವರು ತಮ್ಮ ಕೊನೆಯ ಉಸಿರು ಇರುವವರೆಗೂ ರಾಷ್ಟ್ರದಲ್ಲಿರುವ ಮತ್ತು ರಾಜ್ಯದಲ್ಲಿರುವ ಪ್ರತಿಯೊಬ್ಬ ಶ್ರೀ ಸಾಮಾನ್ಯನ ಪ್ರೀತಿ ವಿಶ್ವಾಸವನ್ನು ಗಳಿಸಿ ರಾಷ್ಟ್ರದಲ್ಲೇ ಒಂದು ದೊಡ್ಡ ಕೀರ್ತಿಯನ್ನು ಗಳಿಸಿದ್ದರು. ಈಗ ಇರತಕ್ಕ ಮಂತ್ರಿಗಳ ಹಾಗೆ ಅಧಿಕಾರಿಗಳ ಹಾಗೆ ಅವರು ಯಾವ ರಾಜಭೋಗವನ್ನೂ ಅನುಭವಿಸುತ್ತಾ ಇರಲಿಲ್ಲ. ಇವತ್ತು ನಮ್ಮ ಮಂತ್ರಿಗಳು ರಾಜಭೋಗವನ್ನು ಅನುಭವಿಸುವುದಕ್ಕೆ ದೊಡ್ಡ ದೊಡ್ಡ ಭವನಗಳನ್ನು ಮಾಡಿಕೊಂಡಿದ್ದಾರೆ. ನೀವು ಪೂಜ್ಯ ಸರ್ ಎಂ. ವಿಶ್ವೇಶ್ವರಯ್ಯನವರ ಕೀರ್ತಿಯನ್ನು ಪಡೆಯುವುದಕ್ಕೆ ದೇಶದಲ್ಲಿ ಶೇಕಡಾ ೭೮ ಭಾಗ ಇರತಕ್ಕ ಜನತೆಗೆ ಸೌಕರ್ಯ ಒದಗಿಸಲು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಈ ಸಭೆಯ ಮುಂದೆ ವಿವರವಾಗಿ ಹೇಳುತ್ತೀರಾ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ಇವರು ಬೆಂಗಳೂರು ನಗರದಲ್ಲಿ ಏರ್ ಕಂಡಿಶನ್ಸ್ ಬಂಗಲೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಧಿಕಾರಿಗಳು ಇವರ ಯೋಗಕ್ಷೇಮಕ್ಕಾಗಿ ಮತ್ತು ಇವರನ್ನು ಸ್ವಾಗತ ಮಾಡುವುದಕ್ಕಾಗಿ ಎಲ್ಲಾ ಕಡೆಯೂ ಇದ್ದಾರೆ. ಹಣಕಾಸಿನ ಮಂತ್ರಿಯವರು ೨೩೪ ಕೋಟಿ ರೂಪಾಯಿಗಳಲ್ಲಿ ಎರಡು ಲಕ್ಷ ಚಿಲ್ಲರೆ ಅಧಿಕಾರಿಗಳಿಗೆ ಶೇಕಡ ೫೨ ಭಾಗ ಹಣ ಖರ್ಚಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿ ಇತರ ಎರಡುಮುಕ್ಕಾಲು ಕೋಟಿ

(ಶ್ರೀ ಬಿ. ದೊಡ್ಡಬೋರೇಗೌಡ)

ಜನರಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂದು ನಾನು ಕೇಳುತ್ತೇನೆ. ಇನ್ನು ರೈತರಿಗೆ ಅನುಕೂಲ ಮಾಡುವುದಕ್ಕೋಸ್ಕರ ಒಂದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನನ್ನು ರಚನೆ ಮಾಡಿದ್ದಾರೆ. ಇವತ್ತು ಇವರ ಆಡಳಿತದಲ್ಲಿ ರಾಸಾಯನಿಕ ಗೊಬ್ಬರದ ಹೊರೆಯನ್ನು ಹೊರುವುದಕ್ಕೆ ಆಗುವುದಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಆದ ೧೮೦ ಲಕ್ಷ ರೂಪಾಯಿನ ನಷ್ಟದ ಬಗ್ಗೆ ಯಾರು ಹೊಣೆಗಾರರು ? ಈ ನಷ್ಟವನ್ನು ರೈತರಿಗೆ ಹೇರುತ್ತೀರಿ. ಇವರು ಎಲ್ಲಾ ಇಲಾಖೆಗಳಿಗೂ ಒಂದು ಬೋರ್ಡು ರಚನೆ ಮಾಡಿ, ಈ ರಸ್ತೆಗಳಲ್ಲಿ ಹ್ಯಾಂಡ್ ಪೋಸ್ಟು ಇರುತ್ತದಲ್ಲಾ ಹಾಗೆ, ನೀವು ನಿಮ್ಮ ಜವಾಬ್ದಾರಿಯನ್ನು ಈ ಬೋರ್ಡುಗಳಿಗೆ ಕೈತೋರಿಸಿ ನಿಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತೆ ಕಾಣುತ್ತದೆ. ಮಂಡ್ಯ ಪ್ಯಾಕೇಜ್ ಪ್ರೋಗ್ರಾಂನಲ್ಲಿ ಕಳೆದ ವರ್ಷ ಎಷ್ಟು ಔಷಧಿಗಳನ್ನು ಸಿಂಪಡಿಸಿದ್ದೀರಿ? ನಿಮ್ಮ ಜನರು ಎಲ್ಲಿದ್ದಾರೆ, ನಿಮಗೆ ಎಲ್ಲಿ ಓಟು ಬಂದಿದೆ, ಅಂಥ ಗ್ರಾಮಗಳಿಗೆ ಮಾತ್ರ ಸಿಂಪಡಿಸಿದ್ದೀರಿ. ಈ ರೀತಿ ಮಾಡಿದರೆ ಇದನ್ನು ಪ್ರಜಾಪ್ರಭುತ್ವವೆಂದು ಹೇಳುತ್ತಾರೆಯೇ ? ಸಮಾಜವಾದದ ಕಡೆ ಯಾರು ಇವತ್ತು ಹೋರಾಟಿರುವುದು ? ಕೇವಲ ಇವರು ಅಧಿಕಾರಕ್ಕಾಗಿ, ತಮ್ಮ ಐಶ್ವರ್ಯಕ್ಕಾಗಿ, ಹೋರಾಡುತ್ತಿರುವುದು. ಆದರೆ ಸಾಮಾನ್ಯ ಜನತೆಗೆ ಅನುಕೂಲ ಮಾಡುವ ಉದ್ದೇಶ ನಿಮ್ಮದಲ್ಲ. ೧೯೬೮ರನೇ ಇಸವಿಯ ಆಡಿಟ್ ವರದಿಯ ಪ್ರಕಾರ ನಿಮ್ಮ ಇಲಾಖೆಯ ಬುಲ್‌ಡೋಜರ್‌ಗಳು ಏನು ಕೆಲಸ ಮಾಡಿದೆ ? ನೀವು ಇವತ್ತು ಏಕಕಾಲದಲ್ಲಿ ನಾಲ್ಕು ಡಿಮ್ಯಾಂಡುಗಳನ್ನು ತಂದು ಜನತೆಗೆ ಮೋಸ ಮಾಡುತ್ತಿದ್ದೀರಿ. ಈ ಸಭೆಯು ಆಡಳಿತದಲ್ಲಿರತಕ್ಕ ಕುಂದು ಕೊರತೆಗಳ ಬಗ್ಗೆ ಸಮಗ್ರವಾದ ಚರ್ಚೆ ಮಾಡಲು ರಚನೆಯಾಗಿರುವುದು. ಎರಡು ದಿನಗಳಲ್ಲಿ ಅನ್ನ ನೀರಿಗೆ ಸಂಬಂಧಪಟ್ಟ ಈ ಡಿಮ್ಯಾಂಡನ್ನು ತಂದು ಮುಗಿಸಬೇಕೆಂದರೆ ಹೇಗೆ ಸಾಧ್ಯ ? ನಮ್ಮ ರಾಜ್ಯದ ಅರಣ್ಯವು ದೇಶ ವಿದೇಶಗಳಲ್ಲಿ ಬಹಳ ಕೀರ್ತಿಯನ್ನು ಗಳಿಸಿತ್ತು. ಆದರೆ ಇವೊತ್ತಿನ ದಿವಸ ನಮ್ಮ ಅರಣ್ಯವು ಬೆಂಗಾಡಾಗಿದೆ; ದಿವಾಳಿಯಾಗಿದೆ ಮತ್ತು ಅವ್ಯವಸ್ಥಿತವಾಗಿದೆ. ಇದಕ್ಕೆ ಒಬ್ಬ ಮಂತ್ರಿ ಬೇಕು, ಇವರಿಗೆ ಭವ್ಯ ಭವನ ಬೇಕು ಮತ್ತು ನೂರಾರು ಜನರು ಅವರಿಗೆ ಆರತಿ ಎತ್ತುವುದಕ್ಕೆ ಬೇಕು. ಈಗಲಾದರೂ ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಒಳ್ಳೆಯ ಕೀರ್ತಿ ಬರಬೇಕಾದರೆ, ಒಳ್ಳೆಯಕೆಲಸಗಳನ್ನು ಮಾಡಿ. ಮತ್ತು ಅದು ನೂರಾರು ವರ್ಷ ಉಳಿಯುತ್ತದೆ. ನೀವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಜನರನ್ನು ಜಾಗ್ರತಗೊಳಿಸಿ, ಒಳ್ಳೆಯ ಕೆಲಸಗಳನ್ನು ಅಲ್ಲಿ ಮಾಡಿಸುತ್ತಾರೆಂದು ನಾನು ನಂಬಿದ್ದೇನೆ. ಮೊನ್ನೆ ದಾರವಾಡದಲ್ಲಿ ೫ ಸಾವಿರ ಎಕರೆಯಲ್ಲಿ ಬೆಳೆಗೆ ಹುಳುಬಿದ್ದು ಹಾಳಾಗಿದೆ ಎಂದು ಹೇಳಿದರು. ಇದರಿಂದ ಆ ರೈತರ ಜೀವನ ಸಾಗಿಸುವುದಕ್ಕೆ ಏನು ಮಾಡಿದ್ದೀರಿ. ಮತ್ತು ಅದಕ್ಕೆ ತಕ್ಕ ಸಮಯದಲ್ಲಿ ಕ್ರಿಮಿಕೀಟಗಳ ಔಷಧಿಯನ್ನು ಯಾಕೆ ಮುಂಜಾಗ್ರತೆ ವಹಿಸಿ ಸಿಂಪಡಿಸಲಿಲ್ಲ, ಈ ರೀತಿ ಮಾಡಬಾರದು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ ಕಲ್ಮಲ :— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಅಗ್ರಿಕಲ್ಚರ್ ಡಿಮ್ಯಾಂಡಿನ ಮೇಲೆ ನಾನು ಬಹಳ ಸಂತೋಷದಿಂದ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇವತ್ತು ಅಗ್ರಿಕಲ್ಚರ್ ಜೊತೆಗೆ ಇನ್ನಿತರ ಮೂರು ಡಿಮ್ಯಾಂಡುಗಳನ್ನೂ ಇಟ್ಟಿದ್ದಾರೆ. ಏಕೆಂದರೆ, ಅಗ್ರಿಕಲ್ಚರ್ ಎಂಬುದು ತಾಯಿಯ ಹಾಗೆ ಇದೆ; ಉಳಿದವುಗಳು ಅದರ ಮಕ್ಕಳು ಇದ್ದ ಹಾಗೆ ಇವೆ. ಇವತ್ತು ಅಗ್ರಿಕಲ್ಚರ್ ಇಲಾಖೆಯು ಬೇಕಾದಷ್ಟು ಕೆಲಸ ಮಾಡಿದೆ. ಇನ್ನೂ ಬಹಳ ಕೆಲಸ ಮಾಡಬೇಕಾಗಿದೆ. ಅವರು ಇನ್ನೂ ಹೆಚ್ಚು ಹೆಚ್ಚು ಜನರಿಗೆ ಪ್ರಯೋಜನವಾಗುವ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಇಂಥ ಒಳ್ಳೆಯ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಮತ್ತು ಸರ್ಕಾರದವರಿಗೆ ತಿಳಿವಳಿಕೆ ಬಂದಿದೆ. ಇದೇ ರೀತಿ ಬಡವರಿಗೆ ಟ್ರಾಕ್ಟರುಗಳು ಬಹಳ ಬೇಗನೆ ಸಿಗುವಂತೆ ಮಾಡಬೇಕು. ಅದೇ ರೀತಿ ಬೀಜ, ಗೊಬ್ಬರ ಇತ್ಯಾದಿ ಬಡ ಹರಿಜನ ಮತ್ತು ಗಿರಿಜನರಿಗೆ ಶೇಕಡಾ ೫೦ ರಂತೆ ಫ್ರೀ ಯಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಕೊಟ್ಟರೆ ರೈತರು ಚೆನ್ನಾಗಿರುತ್ತಾರೆ ನಾವೂ ಚೆನ್ನಾಗಿರುತ್ತೇವೆ; ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ಅರಣ್ಯ ಇಲಾಖೆಯ ಮಂತ್ರಿಯವರು ನಮ್ಮ ರಾಯಚೂರು ಜಿಲ್ಲೆಯ ಕಡೆ ಸ್ವಲ್ಪ ಗಮನವನ್ನು ಹರಿಸಬೇಕು. ಅದೇರೀತಿ ಮೀನುಗಾರಿಕೆಯ ಬಗ್ಗೆ ಕೂಡ ರಾಯಚೂರು ಜಿಲ್ಲೆಯಲ್ಲಿ ನೀರೇ ಇಲ್ಲದಿದ್ದರೂ ಕೂಡ ಬೇಕಾದಷ್ಟು ಕೆಲಸ ಮಾಡಿದ್ದಾರೆ. ರಾಯಚೂರಿನಲ್ಲಿ ತುಂಗಭದ್ರಾ ಮುಂತಾದ ಕಡೆ ಎಲ್ಲೆಲ್ಲಿ ನೀರಿನ ಸೌಕರ್ಯ ಇದೆಯೋ, ಅಲ್ಲಿ ಮೀನುಗಾರಿಕೆಯನ್ನು ಹೆಚ್ಚಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೋಳಿ, ಕೋಣ, ಕುರಿ ಸಾಕುವವರಿಗೆ ೫೦೦ ರೂಪಾಯಿಗಳನ್ನು ನೀವು ಕೊಡಿ. ೫೦೦ ರೂಪಾಯಿಗಳನ್ನು ನಾವು ಹಾಕುತ್ತೇವೆಂದು ಹೇಳುತ್ತಿದ್ದೀರಿ. ನಾನಾದರೂ

ಹೇಳುತ್ತೇನೆ, ನೀವು ಕೊಡುವುದಾದರೆ ಫ್ರೀಯಾಗಿ ಕೊಡಬೇಕು. ಇಲ್ಲದಿದ್ದರೆ ಅದರಲ್ಲಿ ದುರುಪಯೋಗವಾಗುತ್ತದೆ. ಇನ್ನು ಆಸ್ಪತ್ರೆಯಲ್ಲಿ ಡಾಕ್ಟರುಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಎಲ್ಲಾದರೂ ಹೋಗಿ ಬರುವುದಕ್ಕೆ ಬಹಳ ತೊಂದರೆಯಾಗುತ್ತದೆ. ನನ್ನ ಕ್ಷೇತ್ರದ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಅಲ್ಲಿ ದನಕರುಗಳ ಜೀವನ, ಮನುಷ್ಯರ ಜೀವನದಂತೆ ಆಗಬೇಕಾದರೆ, ಆಸ್ಪತ್ರೆಯಲ್ಲಿ ಎಲ್ಲಾ ಸೌಕರ್ಯಗಳೂ ಬೇಕು ಮತ್ತು ಅಲ್ಲಿಯ ಡಾಕ್ಟರಿಗೆ ಹೋಗಲು ಬರಲು ಒಂದು ಜೀಪನ್ನು ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಅಲ್ಲಿ ಆಸ್ಪತ್ರೆಯ ಹತ್ತಿರ ೨-೩ ಕಟ್ಟಡಗಳನ್ನು ಕಟ್ಟಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P. M.

MR. SPEAKER :—The Hon. Minister will reply.

SRI H. SIDDAVEERAPPA :—Sir, if all the four Ministers were to speak they will take about two hours. I suggest that we may take it up tomorrow and at six of the clock, the chair may please apply guillotine and put the demands to vote, whether the Ministers reply or not. We cannot sit late to-day.

MR. SPEAKER :—I accept the hon. Member's suggestion But to-day let the Ministers reply so that there may not be any arrears of work left over for tomorrow.

SRI H. SIDDAVEERAPPA :—Within the limited time they cannot do justice. If you postpone it for tomorrow they can reply conscientiously and effectively.

MR. SPEAKER :—Let us see how the debate proceeds.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :—ನಾವೆಲ್ಲರೂ ಇಲ್ಲಿ ವ್ಯವಸಾಯಗಾರರ ಪರವಾಗಿ ಇದ್ದೇವೆ ನಾವೂ ಸಹ ವ್ಯವಸಾಯಗಾರರಾಗಿದ್ದೇವೆ. ಅದಕ್ಕಾಗಿ ನಾವೂ ಸಹ ಕ್ಲಾರಿಫಿಕೇಷನ್ಸ್ ಅದರ ಬಗ್ಗೆ ಕೇಳಬೇಕಾಗಿದೆ. ಸಾಮಾನ್ಯವಾಗಿ ಒಬ್ಬ ಸದಸ್ಯರು ಮಾತನಾಡಬೇಕೆಂದರೆ ಕೇವಲ ೫ ನಿಮಿಷಗಳನ್ನು ಜಾಸ್ತಿ ಕೊಡುವುದಿಲ್ಲ. ಅಂದ ಮೇಲೆ ಈಗ ಸುಮಾರು ೨ ಗಂಟೆಯವರೆಗೂ ಮಂತ್ರಿಗಳು ಉತ್ತರ ಕೊಡುತ್ತಾರೆಂದರೆ ಇಲ್ಲಿ ಸದಸ್ಯರು ಅಷ್ಟು ಹೊತ್ತು ಕೂತುಕೊಂಡು ಸಾಯಬೇಕೆಂದು ಈಗ ಯಾವ ರೂಲ್ಸ್‌ನಲ್ಲಿದೆ? ಇದು ಸರಿಯಲ್ಲ. ಅವರು ಉತ್ತರ ಕೊಡಬೇಕಾದರೆ ನಾಳೆ ಕೊಡಲಿ, ಸಂತೋಷ.

SRI H. SIDDAVEERAPPA :—Agriculture is an important portfolio. It is stated that we are now having a green revolution. We really want to know from the Government what they have done. There are certain points on which we require clarifications. Therefore I suggest this may be taken up tomorrow.

MR. SPEAKER :—It was agreed by the whips of all parties that reply should start at 5-30 P.M, Now it is 6 P.M, It is only half an hour late I requst the Ministers to make up this half an hour Letus Complete the discussion on this demand to-day.

ಶ್ರೀ ಎಚ್. ಎನ್. ನಂಜೇಗೌಡ :—ಮಾನ್ಯ ಶ್ರೀ ರಾಚಯ್ಯನವರು ಬಿಚ್ಚು ಮನಸ್ಸಿನಿಂದ ಉತ್ತರ ಕೊಡುವುದಕ್ಕೆ ಹೆಸರಾದವರು. ಅದಕ್ಕಾಗಿ ಎಲ್ಲಾ ಸದಸ್ಯರು ಹೇಳಿದ್ದನ್ನೆಲ್ಲಾ ಬರೆದುಕೊಂಡು ಅವಕ್ಕೆಲ್ಲಾ ಪಾಯಿಂಟ್ ಬೈ ಪಾಯಿಂಟ್ ವಿವರವಾಗಿ ಅವರು ಉತ್ತರ ಕೊಡಬೇಕಾಗಿದೆ. ಆದರೆ ಎಲ್ಲಾ ಪಾಯಿಂಟ್ಸ್‌ಗಳಿಗೆ ಉತ್ತರ ಕೊಡುವುದು ಕಷ್ಟ. ಇಲ್ಲದೇ ಇದ್ದರೆ ಏನೂ ಸಾರ್ಥಕವಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :—ನನಗೆ ಈ ದಿವಸ ಮದುವೆಗೆ ಹೋಗುವುದಕ್ಕೆ ಬಿಡಿ, ಏಕೆಂದರೆ ಅಗ್ರಿಕಲ್ಚರ್ ಮಿನಿಸ್ಟರ್ ಅವರ ಮನೆಯಲ್ಲಿ ರಿಸೆಪ್ಷನ್ ಇದೆ. ದಯಮಾಡಿ ಇವತ್ತು ನಾನು ಹೋಗುವುದಕ್ಕೆ ಬಿಡಿ.

ಅಧ್ಯಕ್ಷರು :—ನೋಡೋಣ, ಅವರು ಮೊದಲು ಉತ್ತರ ಕೊಡಲಿ ಕೂಡಿ.

Sri H. M. Channabasappa :—May I submit "ನೋಡೋಣ" has no meaning ? We have got to function under the rule of law.

Sri H. Siddaveerappa :—Straightaway you may put it to vote. We are game for it.

Mr. Speaker :—Let us be guided by the agreement between parties It was agreed that reply should start at 5-30 p.m.

Sri H. Siddaveerappa :—Who agreed ?

Mr. Speaker :—After getting chits from Sri Bhasker Shetty and Sri Agnihotri it was fixed. I consulted Sri Veerappa Gowda also. Did I not consult him.

Sri K. N. Veerappa Gowda :—No, Sir.

Mr. Speaker :—If this is postponed for tomorrow, what are you going to do for tomorrow's demands? The programme is very tight. If you postpone this it will be at the cost of other demands.

Sri H. Siddaveerappa :—What I am saying is, right from the beginning this Government is obdurate. and obstinate They went on stating that they do not want vote on account Therefore on the 30th even if there were to be half a dozen demands, you can apply guilloline. So, I cannot understand this. If they do not agree, why should we agree to this? If they insist let them reply, We will not be here.

The hon. Member and a few other members withdrew.

ಶ್ರೀ ಬಿ. ರಾಚಯ್ಯ (ವ್ಯಾವಸಾಯಿಕ ಶಾಖೆಯ ಮಂತ್ರಿಗಳು) :—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳಿಂದ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬೇಡಿಕೆ ಮೇಲೆ ಭಾಷಣಗಳನ್ನು ಅತ್ಯಂತ ಆಸಕ್ತಿಯಿಂದ ಕೇಳಿದ್ದೇನೆ. ಬಹುಶಃ ಮಾತನಾಡಿದಂತಹ ಮಾನ್ಯ ಸದಸ್ಯರು ಎಲ್ಲರೂ ಕೂಡ ಬಹುಮಟ್ಟಿಗೆ ರಚನಾತ್ಮಕವಾಗಿರತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ.........

ಶ್ರೀ ಬಿ. ಭಾಸ್ಕರ ಶೆಟ್ಟಿ:—ಐದೂವರೆ ಗಂಟೆಗೆ ರಿಪ್ಲೈ ಪ್ರಾರಂಭವಾಗುತ್ತದೆ ಎಂದು ಹೇಳಿ ಈಗ ಪ್ರಾರಂಭವಾಗಿದೆ. ಒಂದು ಕಡೆ ಜಗಳವಾಡಿ ಕೆಲವು ಸದಸ್ಯರು ಹೊರಟು ಹೋದರು. ಎಂಟು ಗಂಟೆವರೆಗೆ ಕುಳಿತುಕೊಂಡು ಮತ್ತೆ ನಾಳೆ ಬೇಗ ಬರುವುದು ಕಷ್ಟವಾಗುತ್ತೆ. ಮತ್ತು ನಾವು ಏನು ಕೆಲಸ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ಆದುದರಿಂದ ಇದನ್ನು ಪ್ರತಿಭಟಿಸಿ ನಾವು ಹೊರಗೆ ಹೋಗುತ್ತೇವೆ.

(ಶ್ರೀ ಭಾಸ್ಕರ ಶೆಟ್ಟಿ ಮತ್ತು ಇತರ ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಬಿ. ರಾಚಯ್ಯ:—ಈ ಕೃಷಿ ಬೇಡಿಕೆಗಳ ಮೇಲೆ ಮಾತನಾಡಿದಂಥ ಬಹುಮಂದಿ ಸದಸ್ಯರು ಇದುವರೆಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅವು ರೈತರಿಗೆ ಹೆಚ್ಚಿನ ಸ್ಫೂರ್ತಿಯನ್ನೂ ಉತ್ಸಾಹವನ್ನೂ ತುಂಬತಕ್ಕಂಥದಾಗಿಲ್ಲ ಮತ್ತೆ ಒಂದು ಹಳೆಯ ಪದ್ಧತಿ ಪ್ರಕಾರ ಒಂದು ಕೃಷಿ ಪಾಲಿಸಿ ನಡೆದುಕೊಂಡು ಬಂದಿದೆ ಅಂತಲೂ, ಈಗ ಏನೇನು ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆಯೋ ಆ ಯೋಜನೆಗಳು ಹೆಚ್ಚಿಗೆ ಎಲ್ಲಿ ನೀರಾವರಿ ಪ್ರದೇಶಗಳಲ್ಲಿವೆ, ಆ ಪ್ರದೇಶಕ್ಕೆ ಹೆಚ್ಚು ಅನುಕೂಲವಾಗಿದ್ದು ಅದರಲ್ಲಿಯೂ ಕೂಡ ದೊಡ್ಡ ರೈತರಿಗೆ ಹೆಚ್ಚು ಉಪಯೋಗವಾಗಿದೆ, ಸಣ್ಣ ಹಿಡುವಳಿದಾರರಿಗೆ ಬಹಳ ಉಪಯೋಗವಾಗಿಲ್ಲ ಎಂತಲೂ ಮತ್ತು ಮಳೆ ಆಶ್ರಯವನ್ನು ನಂಬಿಕೊಂಡು ಬೇಸಾಯ ಮಾಡತಕ್ಕಂಥ ೧೦೦ ಕ್ಕೆ ೯೦ ಭಾಗದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೃಷಿ ಬದಲಾವಣೆಯಲ್ಲಿ ರೈತನಿಗೆ ಬೇಕಾಗಿರತಕ್ಕ ಸಾಧನ ಸಂಪತ್ತುಗಳು ಸಕಾಲದಲ್ಲಿ ಸರಿಯಾದ ಬೆಲೆಗೆ ದೊರೆಯುತ್ತಾ ಇಲ್ಲ, ಅವನಿಗೆ ಬೇಕಾಗಿರತಕ್ಕಂಥ ಹಣವಾಗಲಿ, ಉಪಕರಣವಾಗಲಿ, ಬೀಜಗಳಾಗಲಿ, ಗೊಬ್ಬರವಾಗಲಿ, ಕ್ರಿಮಿನಾಶಕ ವಸ್ತು ಅವುಗಳ ಬೆಲೆ ಹೆಚ್ಚು ಆಗದೆ ಅವುಗಳನ್ನು ಕಡಿಮೆ ಬೆಲೆಗೆ ಕೊಡತಕ್ಕ ವ್ಯವಸ್ಥೆ ಆಗಬೇಕು ಮತ್ತು ಬೆಳೆದಂಥ ಪದಾರ್ಥಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ಒಂದು ಸ್ಫೂರ್ತಿ ಬರತಕ್ಕ ಬೆಲೆಯನ್ನು ಕೊಡಿಸುವುದರಲ್ಲಿ ಸರಕಾರ ವಿಫಲವಾಗಿದೆ ಎಂಥಲೂ ಹೇಳಿದ್ದಾರೆ. ಹೀಗೆ ನಾಲ್ಕಾರು ಭಾಗಗಳಾಗಿ ಈ ಟೀಕೆಗಳನ್ನು ನಾನು ವಿಂಗಡಿಸಿಕೊಂಡು ಮತ್ತೆ ಮಾನ್ಯ ಸದಸ್ಯರು ಕಳುಹಿಸಿರತಕ್ಕಂಥ ಖೋತಾ ನಿರ್ಣಯಗಳನ್ನು ಗಮನಕ್ಕೆ ತೆಗೆದುಕೊಂಡು ನನ್ನ ಕೈಲಾದ ಮಟ್ಟಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಕಳೆದ ಎರಡು ದಿವಸಗಳಿಂದ ಬಹಳ ಶಾಂತಿಯಿಂದ ಕುಳಿತು ಎಲ್ಲರೂ ಹೇಳಿದ್ದನ್ನು ಕೇಳಿದೆ. ಅಷ್ಟೇ ಉದಾರತೆಯಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರು ಸರಕಾರದ ಉತ್ತರವನ್ನು ಕೇಳಿದ್ದರೆ ಚೆನ್ನಾಗಿತ್ತು ಎಂದು ನಾನಾದರೂ ಆಶೆಪಡುತ್ತೇನೆ. ಒಟ್ಟಿನಲ್ಲಿ ಈ ಕೃಷಿ ಬಹಳ ಕಾಲದಿಂದಲೂ ಕೂಡ ಅವಿದ್ಯಾವಂತರ ಕೈಯಲ್ಲಿ ಇದ್ದು ಅವರಲ್ಲಿ ಯಾವ ಒಂದು ಪ್ರಗತಿಯನ್ನು ಕೂಡ ಸಾಧಿಸುವುದಕ್ಕೆ ಆಗಿರಲಿಲ್ಲ. ಸರಕಾರದ ಮಟ್ಟದಲ್ಲಿ ಕೃಷಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ಸಿಕ್ಕಿಲ್ಲ. ಆದ್ದರಿಂದ ಇದರಲ್ಲಿ ಹೆಚ್ಚಿನ ರೀತಿಯಲ್ಲಿ ನಾವು ಪ್ರಗತಿಯನ್ನು ಮಾಡಬೇಕು ಎಂದು ಹೇಳಿ ಬಹಳ ಮಟ್ಟಿಗೆ ಒತ್ತಾಯ ಮಾಡಿದ್ದಾರೆ. ನಾನಾದರೂ ಕೂಡ ಈ ಸಂಸ್ಥಾನದಲ್ಲಿ ಈ ಭೂಮಿಯನ್ನು ಸಮಪಾತಳಿ ಮಾಡುವುದರಲ್ಲಿ ಅಥವಾ ಭೂಸಂರಕ್ಷಣೆ ಮಾಡುವುದರಲ್ಲಾಗಲಿ ಕಳೆದ ವರ್ಷಕ್ಕಿಂತ ಇಂದಿನ ವರ್ಷದಲ್ಲಿ ಹೆಚ್ಚಿನ ಕಾರ್ಯವನ್ನು ಸಾಧಿಸಿದ್ದೇವೆಂದು ಹೇಳುವುದಕ್ಕೆ ಹೆಮ್ಮೆಪಡುತ್ತೇನೆ. ಎರಡುಲಕ್ಷ ಹತ್ತು ಸಾವಿರ ಎಕರೆಗಳಲ್ಲಿ ಈ ಭೂ ಸುಧಾರಣೆ ಕಾರ್ಯ ಮಾಡಬೇಕಾಗಿ ಇದ್ದರೂ ಈವೊತ್ತು ೨ ಲಕ್ಷ ೩೫ ಸಾವಿರ ಎಕರೆಗಳಲ್ಲಿ ಈ ಒಂದು ಭೂಸಂರಕ್ಷಣೆ ಕಾರ್ಯವನ್ನು ಮಾಡಲಾಗಿದೆ. ಇನ್ನೂ ಒಂದು ಕೋಟಿ ೨೦ ಲಕ್ಷ ಎಕರೆಗಳಲ್ಲಿ ಭೂಸಂರಕ್ಷಣೆ ಕಾರ್ಯಗಳು ನಡೆಯಬೇಕಾಗಿವೆ. ಕಳೆದ ವರ್ಷ ೬೦ ಲಕ್ಷ ರೂಪಾಯಿ ಹಣ ಕೊಟ್ಟಿದ್ದೆವು. ಕ್ಷಾಮ ಪರಿಹಾರದ ನಿಧಿಯಿಂದ ಕೂಡ ಹಣವನ್ನು ಉಪಯೋಗಿಸಿಕೊಂಡು ಹೆಚ್ಚು ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಯಿತು. ಈ ವರ್ಷ ಕೃಷಿ ಇಲಾಖೆ ಮುಖಾಂತರ ಒಂದು ಕೋಟಿ ೨೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಇದಕ್ಕೆ ಒದಗಿಸಿಕೊಟ್ಟಿದ್ದೇವೆ. ಇದು ಬಹುಶಃ ಎರಡು ಲಕ್ಷ ಹತ್ತು ಸಾವಿರ ಎಕರೆಗಳಿಗೆ ಸಾಕಾಗಬಹುದು. ಅದು ಏನೇನು ಸಾಲುವುದಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅನೇಕ ಸದಸ್ಯರು ಮಾತನಾಡುವಾಗ ಈ ಕೃಷಿ ಇಲಾಖೆಗೆ ಕಳೆದ ವರ್ಷ ಏನು ಹಣವನ್ನು ಒದಗಿಸಿಕೊಟ್ಟಿದ್ದಾರೋ ಅದಕ್ಕಿಂತ ಒಂದು ಕೋಟಿ ರೂಪಾಯಿ ಹಣ ಕಡಿಮೆ ಆಗಿದೆ. ಕೃಷಿಗೆ ಪ್ರಾಧಾನತೆ ಕೊಡುತ್ತೇವೆ. ಕೃಷಿ ಅಭಿವೃದ್ಧಿ ಹೆಚ್ಚು ಆಗಬೇಕು, ಕೃಷಿಕರ ಅಭಿವೃದ್ಧಿ ಆಗದ ಹೊರತು ದೇಶದ ಸಂಪತ್ತು ಹೆಚ್ಚಿಸುವುದಕ್ಕಾಗುವುದಿಲ್ಲ ಎಂದು ನಾನು ಹಿಂದೆಯೂ ಹೇಳಿದ್ದೇನೆ. ಆ ಮಾತನ್ನು ನಾನು ಈಗಲೂ ಒಪ್ಪುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ ಈ ಉಭಯ ಸಭೆಗಳ ರಿಸೋರ್ಸ್ಸ್ ಕಮಿಟಿ ಎಂದು ಏನು ಮಾಡಿದ್ದಾರೆ ಅವರು ಈ ಯೋಜನೆಗಳನ್ನು ಕಡಿಮೆ ಮಾಡಿ ನೀರಾವರಿಗೆ ಹೆಚ್ಚಿಗೆ ಹಣ ಕೊಡಬೇಕು ಎಂಬ ಉದ್ದೇಶದಿಂದ ಒಂದು ಕೋಟಿ ರೂಪಾಯಿಗಳವರೆಗೆ ಈ ಇಲಾಖೆಯಲ್ಲಿ ಬಜೆಟ್ ಹಣದಲ್ಲಿ ಕಡಿಮೆ ಆಯಿತು. ಆದರೆ ಇದು ಕಡಿಮೆ ಆಗಬಾರದಾಗಿತ್ತು ಎಂದು ಅನೇಕರ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಮಳೆ ಆಶ್ರಯವನ್ನು ಅವಲಂಬಿಸಿರತಕ್ಕ ಈ ಪ್ರಾಂತ್ಯದಲ್ಲಿ ಹೆಚ್ಚಿಗೆ ನೀರಾವರಿಯನ್ನು ಉತ್ತಮಪಡಿಸಿಕೊಳ್ಳದಿದ್ದರೆ ಇನ್ನು ಹಲವಾರು ಕಾರ್ಯಕ್ರಮಗಳನ್ನು ತೆಗೆದು

(ಶ್ರೀ ಬಿ. ರಾಚಯ್ಯ)

ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಈವೊತ್ತು ದೊಡ್ಡ ನೀರಾವರಿ, ಸಣ್ಣ ನೀರಾವರಿಯಲ್ಲಿ ಬಾವಿಗಳನ್ನು ತೋಡಿಸುವುದು ಮತ್ತು ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವ ವಿಷಯದಲ್ಲಿಯೂ ಸ್ವಲ್ಪ ಮಟ್ಟಿಗೆ ನಾವು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ, ಷೆಡ್ಯೂಲ್ ಬ್ಯಾಂಕ್‌ಗಳ ಮುಖಾಂತರ ಸಹಾಯ ಪಡೆದು ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಬೋರವೆಲ್ ಮಿಷನ್ ಕೊಟ್ಟು ಅವುಗಳಿಂದ ಬಾವಿ ತೋಡಿಸುವ ಮುಖಾಂತರ ನೀರನ್ನು ಒದಗಿಸಿ ಹೆಚ್ಚು ಬೆಳೆ ಬೆಳೆಯಲಿಕ್ಕೆ ಅವಕಾಶ ಮಾಡಿದ್ದೇವೆ. ಆದರೆ ನಿರೀಕ್ಷಿಸಿದ ಮಟ್ಟದಲ್ಲಿ ಏನು ಅಭಿವೃದ್ಧಿ ಆಗಬೇಕಾಗಿತ್ತೋ, ಏನು ಕೆಲಸ ಕಾರ್ಯಗಳು ನಡೆಯಬೇಕಾಗಿತ್ತೋ ಅದು ನಡೆಯಲಿಲ್ಲ. ಕಾರಣ ಅನೇಕ ಸೊಸೈಟಿಗಳಲ್ಲಿ ಏನು ಹಳೆಯ ಬಾಕಿ ವಸೂಲು ಮಾಡಿ ರೈತರಿಗೆ ಸಕಾಲದಲ್ಲಿ ಸಾಲ ಕೊಡಬೇಕಾಗಿತ್ತೋ ಆ ಕೆಲಸಗಳು ನಡೆಯದೆ ಇದ್ದುದರಿಂದ ಈ ಭಾಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಆಗಲಿಲ್ಲ.

ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುವಾಗ ಬಾವಿ ತೋಡಿಸುವುದು ಒಂದು ಇಲಾಖೆ, ಹಣ ಕೊಡುವುದು ಮತ್ತೊಂದು ಇಲಾಖೆ, ಹೀಗೆ ಬೇರೆ ಬೇರೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಬದಲಾಗಿ ಸರ್ಕಾರದವರೇ ಈ ಕೆಲಸವನ್ನು ಏಕೆ ಮಾಡಬಾರದು ಎಂದು ಅಗ್ರಹಪೂರ್ವಕವಾಗಿ ಒತ್ತಾಯ ಪಡಿಸಿದರು. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಹಣವನ್ನು ಒದಗಿಸಿಕೊಡುವುದು ಮತ್ತು ಕೆಲಸ ಮಾಡುವುದು ಎರಡೂ ಒಂದೇ ಇಲಾಖೆಯ ಮುಖಾಂತರ ಆಗಿದ್ದರೆ ಚೆನ್ನಾಗಿತ್ತು. ಆದರೂ ಕೂಡ ಈಗಿರತಕ್ಕ ಇಲಾಖೆಗಳು ಏನಿವೆ ಅವುಗಳ ಸಹಕಾರವನ್ನು ಪಡೆದು ಈ ಕೆಲಸವನ್ನು ಮಾಡಬೇಕಾಗಿದೆ. ಕ್ಯಾಬಿನೆಟ್ ಮಟ್ಟದಲ್ಲಿ ಇದಕ್ಕೆ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇರುವುದರಿಂದ ಈ ವಿಷಯಗಳನ್ನು ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳು ಚರ್ಚೆ ಮಾಡಿ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ದೃಷ್ಟಿಯಿಂದ ಈ ಬಾವಿ ತೋಡಿಸತಕ್ಕ ವಿಷಯದಲ್ಲಿ ಬಹುಶಃ ಅನೇಕರಿಗೆ ನಾವು ಏನು ಸಹಾಯವನ್ನು ಮಾಡಬೇಕಾಗಿತ್ತೊ ಅದನ್ನು ಮಾಡಿದ್ದೇವೆ. ಹಣ ಸಹಾಯ ಮಾಡಿದರೂ ಕೂಡ ಕೆಲವು ಸಂದರ್ಭಗಳಲ್ಲಿ ಬಂಡೆಗಳು ಸಿಕ್ಕುತ್ತವೆ. ಅದನ್ನು ಆಳಪಡಿಸವುದಕ್ಕೆ ಆಗುವುದಿಲ್ಲ. ಮತ್ತೆ ಕೆಲವು ಸಂದರ್ಭಗಳಲ್ಲಿ ಅವರಿಗೆ ಕೊಟ್ಟಂಥ ಹಣ ಸಾಲುವುದಿಲ್ಲ, ಕಡಿಮೆಯಾಗಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಯಾವ ಕೆಲಸಕ್ಕೆ ಸಾಲ ಪಡೆದಿರುತ್ತಾರೆ ಬಹುಶಃ ಆ ಕೆಲಸಕ್ಕೆ ನೇರವಾಗಿ ಉಪಯೋಗಿಸಿರುವುದಿಲ್ಲ. ಆದ್ದರಿಂದ ಇಲಾಖೆ ಮುಖಾಂತರ ಅವರಿಗೆ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವೇ ಅಂತ ಅನ್ನುವುದನ್ನು ತಿಳಿದುಕೊಂಡು, ಕಲ್ಲುಬಂಡೆ ಸಿಕ್ಕಿದರೆ ಬ್ಲಾಸ್ಟಿಂಗ್ ಯೂನಿಟ್ಟು ಒದಗಿಸುವುದಕ್ಕೂ, ಬೋರಿಂಗ್ ಮಷೀನ್‌ಗಳನ್ನು ತರಿಸಿಕೊಡುವುದಕ್ಕೂ ಮತ್ತು ಭೂಮಿಯನ್ನು ಸಮಪಾತಳವಾಗಿ ಮಾಡುವುದಕ್ಕೆ, ಮಟ್ಟಮಾಡುವುದಕ್ಕೆ ಬುಲಡೋಜರ್ ಮತ್ತು ಟ್ರಾಕ್ಟರಗಳ ವ್ಯವಸ್ಥೆಯನ್ನು ಮಾಡುವುದಕ್ಕೂ ಒಂದು ಯೋಜನೆಯನ್ನು ಕಳೆದ ವರ್ಷ ನಾನು ಪರಿಶೀಲನೆ ಮಾಡುತ್ತೇನೆ ಎಂದು ಈ ಮಾನ್ಯ ಸಭೆಯಲ್ಲಿ ಹೇಳಿದ್ದೆ. ಆ ಬಗ್ಗೆ ಮತ್ತೆ ನಾನು ಉದ್ದವಾದ ಭಾಷಣಮಾಡುವುದಕ್ಕೆ ಇಚ್ಛೆಪಡುವುದಿಲ್ಲ, ಏಕೆಂದರೆ ಸರ್ಕಾರದವರು ಏನೋ ಹೇಳುತ್ತಾರೆ ಯಾವುದನ್ನು ಮಾಡುವುದಕ್ಕೂ ಅವರಿಗೆ ಮನಸ್ಸಿಲ್ಲ ಎಂದು ಶ್ರೀಮಾನ್ ಚನ್ನಬಸಪ್ಪನವರು ಬಹಳವಾಗಿ ಹೇಳಿದರು. ಆದ್ದರಿಂದ ಕಳೆದ ಸಾಲಿನಲ್ಲಿ ಈ ಸಭೆಯಲ್ಲಿ ಏನು ಟೀಕೆ ಬಂತು ಮತ್ತು ಏನು ರಚನಾತ್ಮಕವಾದ ಸಲಹೆಗಳು ಬಂದವು ಅವುಗಳ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೆ ಅವುಗಳ ಬಗ್ಗೆ ಹೆಚ್ಚು ವಿವರವಾಗಿ ಹೇಳುವುದಕ್ಕೆ ನನಗಿಷ್ಟವಿಲ್ಲದೆ ಇರುವುದರಿಂದ ಇಷ್ಟು ಮಾತ್ರ ಹೇಳಬಲ್ಲೆ. ಕಳೆದ ವರ್ಷ ಈ ಮಾನ್ಯ ಸಭೆಗೆ ಏನು ಆಶ್ವಾಸನೆ ಕೊಟ್ಟಿದ್ದೆ ಅದರ ಪ್ರಕಾರ ಈ ವರ್ಷ ಎಂದರೆ ೬೯–೭೦ನೇ ಸಾಲಿನಲ್ಲಿ ಮಣ್ಣನ್ನು ಪರೀಕ್ಷೆ ಮಾಡುವುದಕ್ಕೆ ಸಂಶೋಧನಾ ಕೇಂದ್ರಗಳನ್ನು ತೆರೆಯಬೇಕೆಂದು ಹೇಳಿ ಪ್ರತಿ ಜಿಲ್ಲೆಗೆ ಒಂದಾದರೂ ಮಣ್ಣಿನ ಪರೀಕ್ಷಾ ಕೇಂದ್ರ ಇರಬೇಕೆಂದು ಹೇಳಿದ್ದೆ. ಅದರ ಪ್ರಕಾರ ಈ ವರ್ಷ ಎರಡು ಸಂಶೋಧನಾ ಕೇಂದ್ರಗಳನ್ನು ಒಂದು ಶಿವಮೊಗ್ಗಾದಲ್ಲಿ ಮತ್ತೊಂದು ಗುಲ್ಬರ್ಗಾದಲ್ಲಿ ಸರ್ಕಾರ ಮಂಜೂರು ಮಾಡಿದೆ. ಅಗ್ರಿಕಲ್ಚರಲ್ ಕಾಲೇಜುಗಳನ್ನು ಹೆಚ್ಚಿಸಬೇಕು, ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್‌ನ್ನು ಹೆಚ್ಚು ಮಾಡಬೇಕೆಂದು ಕೇಳಿದ್ದರು. ಗುಲ್ಬರ್ಗಾಕ್ಕೆ ಈ ವರ್ಷ ಒಂದು ಅಗ್ರಿಕಲ್ಚರಲ್ ಸ್ಕೂಲ್‌ನ್ನು ಮಂಜೂರು ಮಾಡಿದ್ದೇವೆ. ಕೂಡ್ಲಗಿ, ಅರಭಾವಿ, ಹಳ್ಳಿಕೇರಿ ಈ ಮೂರು ಕಡೆ ಮೂರು ಫಾರ್ಮರ್ಸ್ ಟ್ರೈನಿಂಗ್ ಸಂಟರ್ಸ್‌ನ್ನು ಮಂಜೂರು ಮಾಡಿದ್ದೇವೆ. ಮತ್ತು ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ೭೦೦ ವಿದ್ಯಾರ್ಥಿಗಳಿಗೆ ಅವಕಾಶ ಇದ್ದುದನ್ನು ೩೪೦ರ ವರೆಗೂ ಹೆಚ್ಚು ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಮಣ್ಣು ಸಂರಕ್ಷಣಾ ಕಾರ್ಯಕ್ರಮ ಹೆಚ್ಚು ವಿತರಣೆಯಿಂದ ಆಗಬೇಕೆಂಬ ಉದ್ದೇಶದಿಂದ ಇನ್ನೂ ಹೆಚ್ಚು ಸಬ್–ಡಿವಿಜನ್‌ಗಳು, ಡಿವಿಜನ್‌ಗಳು ಆಗಬೇಕೆಂದು ಕೇಳಿದ್ದರು. ಅದನ್ನು ಈ ವರ್ಷ ಪರಿಶೀಲಿಸುತ್ತೇನೆ ಎಂದು ಹೇಳಿದ್ದೆ, ಇದರ ಪ್ರಕಾರ ಈ ವರ್ಷ ಎರಡು ಸಾಯಿಲ್ ಕನ್‌ಸರ್ವೇಷನ್ ಡಿವಿಜನ್‌ಗಳನ್ನು ಶಿವಮೊಗ್ಗ ಮತ್ತು ಬಳ್ಳಾರಿಯಲ್ಲಿ ಸರ್ಕಾರ ಪ್ರಾರಂಭ

ಮಾಡುವುದಕ್ಕೆ ಮಂಜೂರು ಮಾಡಿದೆ. ಬುಲ್‌ಡೋಜರ್, ಟ್ರ್ಯಾಕ್ಟರ್ಸ್, ಪವರ್ ಟಿಲ್ಲರ್ಸ್ ಕೆಟ್ಟು ಹೋದರೆ ಅವನ್ನು ರಿಪೇರಿ ಮಾಡುವುದಕ್ಕೆ ಸಾಕಾದಷ್ಟು ಪ್ರಮಾಣದಲ್ಲಿ ವರ್ಕ್‌ಷಾಪ್ ಇಲ್ಲ ಅವನ್ನು ತೆರೆಯಬೇಕೆಂದು ಕಳೆದ ವರ್ಷ ಕೇಳಿದ್ದರು ಅದಕ್ಕನುಗುಣವಾಗಿ, ರಾಯಚೂರು, ಕೋಲಾರ, ಶಿವಮೊಗ್ಗ ಮತ್ತು ಧಾರವಾಡ ಈ ೪ ಪ್ರದೇಶಗಳಲ್ಲಿ ವರ್ಕ್‌ಷಾಪುಗಳನ್ನು ೨೯ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ತೆರೆದು ಪ್ರಾರಂಭ ಮಾಡಿದ್ದೇವೆ. ಸಾಯಿಲ್ ಸರ್ವೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಮಾಡಬೇಕಾಗಿದೆ, ಮತ್ತು ಲ್ಯಾಂಡ್ ರೆಕ್ಲಮೇಷನ್ ಮಾಡಬೇಕಾಗಿದೆ. ಕ್ರಾಪ್ ಪ್ಯಾಟ್ರನ್ ಮಾಡಬೇಕಾಗಿದೆ, ಇದಕ್ಕೂ ಕೂಡ ಮುಂಜಾಗರೂಕತೆಯಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕಳೆದ ವರ್ಷ ಹೇಳಿದ್ದೆ, ಈ ವರ್ಷ ಮಂಜೂರು ಮಾಡಿದ್ದೇವೆ. ಇಂಟೆನ್‌ಸ್ಸೀವ್ ಅಗ್ರಿಕಲ್ಚರಲ್ ಪ್ರೋಗ್ರಾಂನಲ್ಲಿ ಹತ್ತು ಜಿಲ್ಲೆಗಳಿಗೆ ಮಂಜೂರಾತಿಕೊಟ್ಟು, ಈ ವರ್ಷ ಹೊಸದಾಗಿ ಬೆಂಗಳೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಐ. ಎ. ಪಿ. ಪ್ರೊಗ್ರಾಂನ್ನು ಮಂಜೂರು ಮಾಡಿದ್ದೇವೆ. ಅಗ್ರಿಕಲ್ಚರಲ್ ಇನ್‌ಫರ್ಮೇಷನ್ ಸೆಂಟರ ಅಂತ ಹೇಳಿ ರೈತರಿಗೆ ಬೇಕಾಗಿರತಕ್ಕ ತಿಳಿವಳಿಕೆಯನ್ನು ಕೊಡುವುದಕ್ಕೆ, ಯಾವ ಕಾಲಕ್ಕೆ ಯಾವ ಬೆಳೆಯನ್ನು ಬೆಳೆಯಬೇಕು, ಯಾವ ಕಾಲದಲ್ಲಿ ಗೊಬ್ಬರ ಹಾಕಬೇಕು, ಯಾವ ಬೀಜ ಹಾಕಬೇಕು, ಕ್ರಿಮಿ ನಾಶಕಗಳನ್ನು ಯಾವ ರೀತಿ ಬಳಸಬೇಕು, ಯಾವ ರೀತಿ ಮುಂಜಾಗರೂಕತೆಯ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸುವುದಕ್ಕೆ ಇನ್‌ಫರ್ಮೇಷನ್ ಸೆಂಟರ್‌ಗಳನ್ನು ಮಂಜೂರು ಮಾಡಿದ್ದೇವೆ. ಅದರ ಜೊತೆಗೆ ಐ. ಎ. ಡಿ. ಪಿ. ಪ್ರೋಗ್ರಾಂನ್ನು ರಾಯಚೂರಿನಲ್ಲೂ ಕೂಡ ಮಂಜೂರು ಮಾಡಿದ್ದೇವೆ. ಮತ್ತು ಎ. ಐ. ಆರ್. ನಲ್ಲಿ ರೈತರ ತಿಳಿವಳಿಕೆಗಾಗಿ ಅನೌನ್ಸ್‌ಮೆಂಟ್‌ಗಳನ್ನು ಮಾಡುತ್ತಾ ಇದ್ದೇವೆ. ನಮ್ಮ ಕೇಂದ್ರದಲ್ಲಿದ್ದ ಫಾರ್ಮರ್ಸ್ ಫೋರಂಗೆ ಇಬ್ಬರು ಅಧಿಕಾರಿಗಳನ್ನು ಕಳುಹಿಸಿಕೊಟ್ಟು ರೈತರಿಗೆ ಬೇಕಾಗಿರತಕ್ಕ. ತಿಳಿವಳಿಕೆ ಮತ್ತು ತಾಂತ್ರಿಕ ಜ್ಞಾನವನ್ನು ಕೊಡಬಹುದೋ ಅದನ್ನು ಕೊಡುವುದಕ್ಕೆ ಸೂಕ್ತವಾದ ಏರ್ಪಾಡನ್ನು ಮಾಡಿದ್ದೇವೆ. ಮೂರು ಅಡೀಷನಲ್ ಯುನಿಟ್ಸನ್ನು ಸೀ ಐಲೆಂಡ್ ಕಾಟನ್ ಬೆಳೆಯುವುದಕ್ಕೆ ಉತ್ತಮ ಪಡಿಸುವುದಕ್ಕೆ ಹೊಸದಾಗಿ ಮಂಜೂರು ಮಾಡಿದ್ದೇವೆ. ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗಿ ರೈತರು ಬೆಳೆದದ್ದನ್ನು ನೋಡಿ ಅನುಭವ ಪಡೆಯುವುದಕ್ಕೆ ಫಾರ್ಮರ್ಸ್ ಎಕ್ಸ್‌ಚೆಂಜ್ ಪ್ರೊಗ್ರಾಂ ಅಂತ ಒಂದು ಯೋಜನೆಯನ್ನು ಈ ವರ್ಷ ಮಂಜೂರು ಮಾಡಿದ್ದೇವೆ. ಗಂಗಾವತಿಯಲ್ಲಿ ಇನ್ನೊಂದು ವರ್ಕ್‌ಷಾಪ್‌ನ್ನು ಗ್ರಾಮ ಸೇವಕ್ ಟ್ರೇನಿಂಗ್ ಸೆಂಟರಿಗೆ ಅಟ್ಯಾಚ್‌ಮಾಡಿಸಿ ಕೊಟ್ಟಿದ್ದೇವೆ. ಬಾಗಲಕೋಟೆಯಲ್ಲಿರುವ ಒಂದು ಟ್ರೈನಿಂಗ್ ಸೆಂಟರ್‌ನ್ನು ಅಪ್ ಗ್ರೇಡ್ ಮಾಡಿ ಈ ವರ್ಷ ಅದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ.

ಸೆಲಿನಿಟಿ ಹೆಚ್ಚಾಗುತ್ತಾ ಇದೆ. ಅದನ್ನು ಹೋಗಲಾಡಿಸುವುದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಸಾಯಿಲ್ ಕನ್‌ಸರ್ವೇಷನ್ ಮೆಸರ್ಸ್‌ನ್ನು ತುಂಗಭದ್ರಾ ಏರಿಯಾದಲ್ಲಿ ಮಂಜೂರು ಮಾಡಿದ್ದೇವೆ. ಹೊಸದಾಗಿ ಈ ವರ್ಷ ಹರಳು ಬೆಳೆಸತಕ್ಕ ಒಂದು ಯೋಜನೆಯನ್ನು ಮಂಜೂರು ಮಾಡಿದ್ದೇವೆ. ಇನ್ನು ಮುಂದಿನ ವರ್ಷದಲ್ಲಿ ನಮ್ಮ ಪ್ರೋಗ್ರಾಂ ಏನಿದೆ ಎಂಬುದನ್ನು ಹೇಳಬೇಕೆಂದು ಇದ್ದೇನೆ.

6–30 P.M.

ಮುಂದಿನ ವರ್ಷ ೭೯ ಸಾವಿರ ಎಕರೆಗಳಲ್ಲಿ ಹೆಚ್ಚು ನೀರಾವರಿ ಮೂಲಕ ಬೆಳೆ ಬೆಳಸುವ ಕಾರ್ಯಕ್ರಮವಿದೆ. ಅದರಲ್ಲಿ ಬಹುತಃ ೨೦ ಸಾವಿರ ಬಾವಿ ತೋಡಿ, ೪೦೦ ಬೋರ್ ವೆಲ್ ತೆಗೆದು, ೧೦ ಸಾವಿರ ಎಲೆಕ್ಟ್ರಿಕ್ ಪಂಪುಸೆಟ್ಟುಗಳನ್ನು ಒದಗಿಸಿ, ೧೫೦೦ ಡೀಸಲ್ ಪಂಪುಗಳನ್ನು ಕೊಟ್ಟು ಈ ಕಾರ್ಯ ಮಾಡಬೇಕೆಂಬ ಗುರಿಯಿದೆ. ಮತ್ತು ೨೫ ಸಾವಿರ ಎಕರೆ ವೇಸ್ಟ್ ಲ್ಯಾಂಡನ್ನು ಬುಲ್‌ಡೋಜರುಗಳು ಮತ್ತು ಟ್ರಾಕ್ಟರುಗಳ ಮೂಲಕ ಸಮ ಮಾಡಲು ಪ್ರಯತ್ನಮಾಡಬೇಕೆಂದಿದೆ. ೨ ಲಕ್ಷ ೧೦ ಸಾವಿರ ಎಕರೆ ಭೂ ಸಂರಕ್ಷಣೆ ಕಾರ್ಯಮಾಡಬೇಕೆಂಬ ಉದ್ದೇಶವಿದೆ. ಇದಕ್ಕೆ ಮುಂದಿನ ವರ್ಷ ಬೇಕಾದ ರಾಸಾಯನಿಕ ಗೊಬ್ಬರ ೩ ಲಕ್ಷ ಟನ್ ಕೊಟ್ಟು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕೆಂಬ ಯೋಜನೆ ಇದೆ. ಕ್ರಿಮಿನಾಶಕ ಔಷಧಿ ಉಪಯೋಗಮಾಡಿ ಬೆಳೆ ಸಂರಕ್ಷಣೆ ಮಾಡಲು ಮುಂದಿನ ವರ್ಷ ೫೦ ಲಕ್ಷ ಎಕರೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮವಿದೆ. ೧೯೭೧ನೆಯ ಸಾಲಿನಲ್ಲಿ ಎರಡು ಜಿಲ್ಲೆಗಳಲ್ಲಿ ಐ. ಎ. ಪಿ ಪ್ರೋಗ್ರಾಂ ಜಾರಿಗೆ ತರಬೇಕೆಂಬ ಯೋಜನೆ ಇದೆ. ಸುಮಾರು ೧೪ ಲಕ್ಷ ಎಕರೆಯಲ್ಲಿ ಹೆಚ್ಚು ಇಳುವರಿ ಕೊಡುವ ಬೆಳೆ ಬೆಳೆಯಬೇಕೆಂಬ ಗುರಿ ಇದೆ. ಕಮರ್ಷಿಯಲ್ ಕ್ರಾಪ್ಸ್ ಎಂದರೆ ಹತ್ತಿ, ಎಣ್ಣೆ ಕಾಳು, ಶೇಂಗ, ಹೊಗೆಸೊಪ್ಪು ಇವುಗಳನ್ನು ೭ ಲಕ್ಷ ಎಕರೆಗಳಲ್ಲಿ ಉತ್ಪತ್ತಿ ಮಾಡಬೇಕೆಂಬ ಗುರಿ ಇದೆ. ಇದಕ್ಕೆ ಹಿಂದಿನಿಂದ ನಾವೇನು ಉತ್ಪತ್ತಿ ಮಾಡಿದ್ದೇವೆ ಅದನ್ನು ಮುಂದುವರೆಸುವುದಕ್ಕೆ ಹೊಸದಾಗಿ ಕೆಲವು ಯೋಜನೆಗಳನ್ನು ಅಳವಡಿಸುವುದು ಇದೆ. ಹೊಸದಾಗಿ ಅಳವಡಿಸಿರುವ ಯೋಜನೆಯಲ್ಲಿ ಸಣ್ಣ ಹಿಡುವಳಿಯವರಿಗೆ ಇದುವರೆಗೆ ಹಾಕಿರುವ ಯೋಜನೆ ಪ್ರಕಾರ ಅವರಿಗೆ ಸಕಾಲದಲ್ಲಿ ಸಾಲ ಸಿಕ್ಕುವುದಿಲ್ಲ, ಬ್ಯಾಂಕುಗಳು ಅಥವಾ ಸಹಕಾರ

(ಶ್ರೀ ಬಿ. ರಾಚಯ್ಯ)

ಸಂಘಗಳು ಮುಂದೆ ಬಂದು ಕೊಡುವುದಿಲ್ಲ ಎಂದು ಕೇಂದ್ರ ಸರಕಾರ ಸಣ್ಣ ಹಿಡುವಳಿದಾರರಿಗೆ ಅನುಕೂಲ ಮಾಡಲು ಒಂದು ಯೋಜನೆಗೆ ಒಟ್ಟಿದೆ, ಮೈಸೂರು ಜಿಲ್ಲೆ ಒಂದು ಮಾತ್ರ ಅದಕ್ಕೆ ಗೊತ್ತುಮಾಡಿತ್ತು. ನಾವು ಎರಡು ಜಿಲ್ಲೆ ಗೊತ್ತುಮಾಡಿದ್ದೆವು, ಬಿದರೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಣ್ಣ ಹಿಡುವಳಿದಾರರಿಗೆ ೩ ಕೋಟಿಗಿಂತ ಹೆಚ್ಚು ಸಾಲಕೊಡಲು ಒಪ್ಪಿಗೆ ಪಡೆಯಲಾಗಿದೆ, ಇನ್ನೂ ಎರಡು ಜಿಲ್ಲೆಯಲ್ಲಿ ಮಾಡುತ್ತೇವೆ ಸಹಕಾರ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳಿದ್ದೇವೆ. ಹೆಚ್ಚು ಇಳುವರಿ ಕೊಡುವ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷಧಿ ಕೆಲವು ಭಾಗದವರಿಗೆ ದೊರಕಿಲ್ಲವೆಂಬುದು ನಿರ್ವಿವಾದವಾದ ವಿಚಾರವಾಗಿದೆ. ಈ ಕಾರಣದಿಂದ ಇನ್ನು ಮೇಲೆ ಬ್ಯಾಂಕುಗಳ ರಾಷ್ಟ್ರೀಕರಣವಾದಮೇಲೆ ಕೆಲವು ಕಡೆ ಹಣ ಸಲೀಸಾಗಿ ಸಿಕ್ಕುತ್ತಿದೆ, ಆದರೆ ಚನ್ನಬಸಪ್ಪನವರು ಹೇಳಿದಂತೆ ವೇರ್‌ಹೌಸ್ ಕಾರ್ಪೊರೇಷನ್ನಿನಲ್ಲಿ ಬೆಳೆದವರು ತಮ್ಮ ಧಾನ್ಯ ಇಟ್ಟರೆ ಸಾಲಪಡೆಯಲು ನಿರ್ಬಂಧ ಸ್ವಲ್ಪ ಇದೆ. ಅದನ್ನು ತೆಗೆಯುವವರೆಗೆ ಅನುಕೂಲವಿಲ್ಲ. ಆ ವಿಚಾರದಲ್ಲಿ ಕೇಂದ್ರ ಸರಕಾರದೊಡನೆ ವ್ಯವಹರಿಸಿ ಸಾಧ್ಯವಾದ ಮಟ್ಟಿಗೆ ಸೌಲಭ್ಯ ದೊರಕಿಸಲು ಪ್ರಯತ್ನಮಾಡುತ್ತೇವೆ. ಇದುವರೆಗೆ ಕೇಂದ್ರ ಸರಕಾರದವರು ಔಷಧಿಗಳಿಗಾಗಿ ೨೫ ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದುದನ್ನು ನಿಲ್ಲಿಸಿದ್ದಾರೆ, ಕಾರಣ ಚನ್ನಬಸಪ್ಪನವರು ಹೇಳಿದರು, ಅದನ್ನು ರಾಜ್ಯ ಸರಕಾರ ಸ್ವಂತ ಖರ್ಚಿನಿಂದ ಮುಂದುವರಿಸುವುದು. They have made inroads into the powers of the State Government with regard to the policies and programmes of agricultural production.

ರಾಜ್ಯಾಂಗದ ಕನ್‌ಕರೆಂಟ್ ಲಿಸ್ಟಿನಲ್ಲಿ ಬೆಳೆ ನಿಯಂತ್ರಣ ವಿಚಾರ ಇದೆ, ಆದುದರಿಂದ ಕೇಂದ್ರ ಸರಕಾರಕ್ಕೆ ಹಕ್ಕಿದೆ, ಆದರೆ ನಮ್ಮ ಸಲಹೆ ಪ್ರಕಾರ ಕೇಂದ್ರ ಸರಕಾರದವರು ಮಾಡಬೇಕೆ ಹೊರತು ಹಾಗೆ ಮುಂದು ವರೆಯುವಂತಿಲ್ಲ, ನಮ್ಮ ಹಕ್ಕಿನಮೇಲೆ ಅವರು ಪ್ರವೇಶಮಾಡುತ್ತಿದ್ದಾರೆಂಬ ಭಾವನೆಯಿಲ್ಲಿಲ್ಲ. ಮುಖ್ಯ ಮಂತ್ರಿಗಳು ಮತ್ತು ಅರ್ಥಿಕ ಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲಿನಲ್ಲಿ ಕೇಂದ್ರದ ಸಹಾಯ ವೇನಿದೆ ಅದನ್ನು ಒಟ್ಟಾಗಿ ಕೊಡಬೇಕು, ಯಾವ ಇಲಾಖೆಗೆ ಹಂಚಬೇಕೋ ಅದನ್ನು ನಾವೇ ಹಂಚುತ್ತೇವೆ ಎಂದು ತಿಳಿಸಿದ್ದಾರೆ. ಈಗ ಕೇಂದ್ರದ ಸಹಾಯ ಬಹಳ ಮಟ್ಟಿಗೆ ಕಡಿಮೆಯಾಗಿ ಕೆಲವು ಬಾಬುಗಳಿಗೆ ಮಾತ್ರ ಸಹಾಯ ದೊರೆಯುತ್ತಿದೆ. ಕ್ರಿಮಿನಾಶಕಗಳಿಗೆ ಸಬ್ಸಿಡಿ ಕೊಡುವುದು ಅಥವ ಇತರ ಸಂದರ್ಭಗಳಲ್ಲಿ ಕೊಡುವುದನ್ನು ಕಡಿಮೆ ಮಾಡಿದ್ದಾರೆ, ಅದನ್ನು ನಿಲ್ಲಿಸಬಾರದು, ಶೇಕಡ ೨೫ರಷ್ಟಾದರೂ ಕೊಡಬೇಕು. ಅದಕ್ಕಿಂತ ಕಡಿಮೆ ಮಾಡಬಾರದು ಎಂದು ಮನವಿಮಾಡಲಾಗಿದೆ, ಕೆಲವು ಸಂದರ್ಭಗಳಲ್ಲಿ ಶೇಕಡ ೫೦ ಭಾಗ ಕೊಟ್ಟು ಮಂಡ್ಯ, ಧಾರವಾಡ ಮುಂತಾದ ಕಡೆಗಳಲ್ಲಿ ವಿಮಾನದಿಂದ ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದೇವೆ, ಇದಕ್ಕೆ ತಾಲ್ಲೂಕು ಬೋರ್ಡಿನವರು ಕಾಂಟ್ರಿಬ್ಯೂಷನ್ ಕೊಡಬೇಕು, ಮಂಡ್ಯ ಮತ್ತು ಪಾಂಡವಪುರದವರು ಕೊಡಲು ಮುಂದೆ ಬಂದರು, ಸಂಜನಗೂಡಿನವರು ಮುಂದೆ ಬರಲಿಲ್ಲ, ಧಾರವಾಡ ತಾಲ್ಲೂಕಿನಲ್ಲಿ ೬೦ ಸಾವಿರ ಎಕರೆಯಲ್ಲಿದ್ದ ಹೈಬ್ರಿಡ್ ಜೋಳದ ಫಸಲಿಗೆ ಔಷಧಿ ಸಿಂಪಡಿಸಲಾಗಿದೆ. ಆದ್ದರಿಂದ ಅವರು ಹೆಚ್ಚು ಬೆಳೆಯಲು ಸಾಧ್ಯವಾಗಿದೆ, ಕೆಲವು ಕಡೆ ಜೂನ್ ತಿಂಗಳಲ್ಲಿ ಮಳೆ ಬಾರದೆ ಆಕ್ಟೋಬರಿನಲ್ಲಿ ಹೊಡೆ ಬಂದು ಕಾಳು ಬರಲಿಲ್ಲ, ಹುಳ ಬಿದ್ದ ಕಡೆ ಔಷಧಿ ಹಾಕಲು ಜನರು ಒಪ್ಪದೆ ಹೋದುದರಿಂದ ಔಷಧಿ ಹಾಕಲು ಸಾಧ್ಯ ವಾಗಲಿಲ್ಲ, ನಾವು ರೈತರಿಗೆ ಸಹಾಯಮಾಡಬೇಕೆಂದು ಪ್ರಯತ್ನಮಾಡಿರುವ ಕಡೆ ರಾಜಕೀಯವೇನೂ ಇಲ್ಲ, ಮತ್ತು ಯಾವ ತಾರತಮ್ಯವನ್ನೂ ಮಾಡಿಲ್ಲ ಎಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಈ ದಿವಸ ಬಹುಶಃ ಡಿಮ್ಯಾಂಡಿನಮೇಲೆ ಮಾನ್ಯ ಸಭೆ ನಿರೀಕ್ಷೆಮಾಡಿದ ಪ್ರಮಾಣದಲ್ಲಿ ಉತ್ತರ ಕೊಡುವುದಕ್ಕೆ ಉತ್ಸಾಹ ವಿಲ್ಲ, ಕಾರಣ, ಏನು ನಿಷ್ಠೆಯಿಂದ ಕೃಷಿಕ್ಷೇತ್ರದಲ್ಲಿ ಕೆಲಸಮಾಡಬೇಕೆಂದು ಪ್ರಯತ್ನ ಮಾಡಲಾಗಿತ್ತೋ ಆ ಕೆಲಸ ನಾವು ಮಾಡುವುದಕ್ಕೆ ಸಾಧ್ಯವಿದೆ ಎಂದು ಬಹಳ ಧೈರ್ಯದಿಂದ ಹೇಳುವಹಾಗಿಲ್ಲ, ಕಾರಣ ಇಷ್ಟೆ ಯೋಜನೆ ತಯಾರಿಸುವಾಗ ಹಣಕಾಸು ಒದಗಿಸುವಾಗ ಬಹುಶಃ ಜನರ ಆಶೋತ್ತರ ಏನಿದೆ ಅದರ ಪ್ರಕಾರ ಯೋಜನೆ ಮಾಡಲು, ಅದರಂತೆ ಕೆಲಸಮಾಡಲು ಇಂದು ಕೇಂದ್ರ ಸರಕಾರದಲ್ಲಾಗಲೀ, ರಾಜ್ಯ ಸರಕಾರ ದಲ್ಲಾಗಲೀ ಅವಕಾಶವಿಲ್ಲ ಬಹುಶಃ ರೈಲ್ವೆ ಮಂತ್ರಿಗಳು ಅವರಿಗೆ ಬೇಕಾದ ಹಣಕಾಸಿಗೆ ಒಪ್ಪಿಗೆ ಪಡೆಯುವ ಹಾಗೆ ಕೃಷಿ ಸಚಿವರೂ ತಮ್ಮ ಹಣಕಾಸಿಗೆ ಒಪ್ಪಿಗೆ ಪಡೆಯಲು ಅವಕಾಶ ಸಿಕ್ಕಿದಾಗ ಕೃಷಿಗಿರುವ ಅಡಚಣೆ ದೂರಮಾಡಿ ಆದಷ್ಟು ಶೀಘ್ರವಾಗಿ ಕೆಲಸಕಾರ್ಯ ಮಾಡುವುದಕ್ಕೆ ಅವಕಾಶವಾಗುತ್ತದೆ, ಪ್ರಜಾಪ್ರಭುತ್ವದ ಒಂದು ನೆರಳಲ್ಲಿ ಕೆಲಸಮಾಡುವಾಗ ಸದಸ್ಯರು ಅನುಮತಿ ಕೊಡುವ ೧೧ ಕೋಟಿ ಚಿಲ್ಲರೆ ಹಣವನ್ನು ಒಂದನೆಯ ತಾರೀಖಿನಿಂದಲೇ ಅಧಿಕಾರಿಗಳಿಗೆ ಬೇಗನೆಕೊಟ್ಟು ಅವರಿಗೆ ಸಂಪೂರ್ಣ ಅಧಿಕಾರ ಕೊಟ್ಟು ಗೊಬ್ಬರ, ಬೀಜ ಮುಂತಾದುವನ್ನು ಸಕಾಲದಲ್ಲಿ ಒದಗಿಸಲು ಅವಕಾಶವಾಗಬಹುದು, ಈಗಿನ ಪರಿಸ್ಥಿತಿಯಲ್ಲಿ ಮೊನ್ನೆ ಮೊನ್ನೆಯವರೆಗೂ ಕೂಡ ಕೆಲವು ಯೋಜನೆಗಳನ್ನು ಮಂಜೂರು ಮಾಡ ಬೇಕಾಗಿದ್ದಾಗ ಅನೇಕ ಅಡ್ಮಿನಿಸ್ಟ್ರೇಟಿವ್ ತೊಂದರೆಗಳು ಬಂದುದರಿಂದ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧನೆ ಮಾಡಬಹುದೋ ಅಷ್ಟನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ, ಮಾನ್ಯಪ್ರಧಾನ ಮಂತ್ರಿಗಳು ಹಿಂದೆ

ವ್ಯವಸಾಯ ಖಾತೆಯನ್ನು ರಾಜ್ಯಗಳಲ್ಲಿ ಮುಖ್ಯ ಮಂತ್ರಿಗಳೇ ವಹಿಸಿಕೊಳ್ಳಬೇಕು ಎಂದು ಹೇಳಿದ್ದರು. ಇದಕ್ಕೆ ಕಾರಣ ಹಣಕಾಸಿನ ಸಚಿವರು ಮತ್ತು ಇತರ ಸಚಿವರು ಬೇಗ ಬೇಗ ಕೆಲಸ ಮಾಡುತ್ತಾರೆ ಎನ್ನುವುದೇ ಆಗಿದೆ. ನೂರಕ್ಕೆ ೮೦ ಜನ ಇರುವ ರೈತರನ್ನು ಉದ್ಧಾರಮಾಡಬೇಕೆಂದು ಎಲ್ಲರೂ ಹೇಳುತ್ತಿದ್ದರೂ ಕೂಡ ಅದಕ್ಕೆ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣವನ್ನು ನೋಡಿದಾಗ ಎಷ್ಟು ಕೆಲಸವನ್ನು ಮಾಡಬೇಕೋ ಅಷ್ಟನ್ನು ಮಾಡಲು ಸಾಧ್ಯವಾಗದೇ ಹೋಗಬಹುದು. ನಗರಗಳಲ್ಲಿರುವ ಆಸ್ತಿಯಮೇಲೆ ತೆರಿಗೆಯನ್ನು ಹಾಕಬೇಕಾದರೆ ಎಷ್ಟು ಜನ ಸಂಘಟಿತರಾಗಿ ವಿರೋಧ ಮಾಡುತ್ತಾರೆಯೋ, ಅದೇ ರೀತಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಬೇಕೆಂದು ಹೊರಟಾಗ ವಿರೋಧ ಬರುವುದಿಲ್ಲ, ಅವರಲ್ಲಿ ಅಷ್ಟು ಸಂಘಟನೆ ಇರುವುದಿಲ್ಲ. ಅಗ್ರಿಕಲ್ಚರಲ್ ಡಿಮ್ಯಾಂಡ್ ಬಗ್ಗೆ ಯಾರಿಗೂ ಅಷ್ಟು ಆಸಕ್ತಿಇಲ್ಲ, ರೈತರ ಪರವಾಗಿ ಯಾರೂ ಇಲ್ಲ ಎಂದು ನಿನ್ನೆ ಪತ್ರಿಕೆಯನ್ನು ನೋಡಿದಾಗ ನನಗೆ ಅನ್ನಿಸಿತು. ಈ ಡಿಮ್ಯಾಂಡ್ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಈ ಸಭೆಯಲ್ಲಿ ೩೦ಕ್ಕಿಂತ ಹೆಚ್ಚು ಸದಸ್ಯರು ಕೂಡ ಇರಲಿಲ್ಲ. ವ್ಯವಸಾಯದ ವಿಷಯದಲ್ಲಿ ನಾವು ಮಾಡಬೇಕಾದಂಥ ಕೆಲಸವನ್ನು ಮಾಡಬೇಕಾಗಿದ್ದರೆ ಅದಕ್ಕೆ ಏನೇನೋ ಅಡಚಣೆಗಳು ಬರುತ್ತವೆ, ಅವುಗಳನ್ನು ತೊಡೆದು ಹಾಕುವುದಕ್ಕೆ ಪ್ರಯತ್ನ ಮಾಡಬೇಕು.

ಕೃಷಿಗೋಸ್ಕರ ಬುಲ್ ಡೋಜರುಗಳನ್ನು ಕೊಡುವುದರಲ್ಲಿ ಮತ್ತು ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಸೆಕ್ಷನ್‌ನಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಕ್ಕೆ ಅವಕಾಶವಿಲ್ಲ ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿ ಹೇಳಿರುವುದಲ್ಲದೆ ಅದರಲ್ಲಿ ನಷ್ಟವಾಗುತ್ತಿದೆ ಎಂದೂ ಹೇಳಿದೆ. ಪ್ರತಿ ಸಾರಿಯೂ ನಷ್ಟವಾಗುತ್ತಿದೆ, ನೋಲಾಸ್ ನೋ ಫ್ರಾಫಿಟ್ ಬೇಸಿಸ್ ಮೇಲೆ ನಡೆಸಬೇಕೆಂದು ಹೊರಟಾಗ ರೈತರಿಗೆ ಬುಲ್‌ಡೋಜರ್, ಟ್ರಾಕ್ಟರ್, ಬೋರ್‌ವೆಲ್ ಯಂತ್ರಗಳನ್ನು ಯಾವದರದಲ್ಲಿ ಕೊಡುತ್ತಿದ್ದೇವೇ ಅದನ್ನು ಹೆಚ್ಚಿಸಬೇಕಾಗುತ್ತದೆ, ದರವನ್ನು ಹೆಚ್ಚಿಸಿದಾಗ ಲಾಭ ಮಾಡುವುದಕ್ಕೆ ಸಾಧ್ಯವಾಗದೆ ಇದ್ದರೂ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ, ಎಷ್ಟರಮಟ್ಟಿಗೆ ಸಬ್ಸಿಡಿ ಕೊಡಬಹುದು ಎಂದು ಲೆಕ್ಕ ಹಾಕಿ ಕನಿಷ್ಟ ಪಕ್ಷ ೨೦ ಪರ್ಸೆಂಟಾದರೂ ಸಬ್ಸಿಡಿ ಕೊಡಬೇಕೆಂದು ನಿರ್ಧಾರಮಾಡಿ ರೇಟನ್ನು ಕಡಿಮೆ ಮಾಡಿದ್ದೇವೆ. ಬುಲ್‌ಡೋಜರ್ ಆರ್ಗನೈಜೇಷನ್‌ನಲ್ಲಿ ಒಂದು ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಈಗ ಏನು ಇಂಪ್ರೂವ್‌ಮೆಂಟ್ ಮಾಡಿಸಿದ್ದೀರಿ ಎಂದು ಅನೇಕ ಸದಸ್ಯರು ಕೇಳುತ್ತಾರೆ, ಕಳೆದ ವರ್ಷ ನಾನು ಹೇಳಿದೆ, ಒಂದು ವರ್ಷ ಅವಕಾಶಕೊಡಿ, ಈ ಇಲಾಖೆಯಲ್ಲಿ ತ್ವರಿತವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನಮಾಡಿ ತಾವು ಏನು ನಿರೀಕ್ಷೆ ಮಾಡುತ್ತೀರಿ ಅದನ್ನು ಮಾಡುತ್ತೇನೆ ಎಂದು, ೮೮ ಬುಲ್‌ಡೋಜರುಗಳು ವಿವಿಧ ಜಿಲ್ಲೆಗಳಲ್ಲಿ ೫೬, ೨೧೦ ಗಂಟೆಗಳಕಾಲ ಜನವರಿ ತಿಂಗಳವರೆಗೂ ಕೆಲಸಮಾಡಿದೆ. ೧೯೫೬ರಿಂದ ೧೯೬೦ರವರೆಗೆ ೨, ೧೬, ೬೦೭, ಗಂಟೆಗಳ ಕೆಲಸಮಾಡಿ ೬೩, ೧೭೬, ಎಕರೆಗಳನ್ನು ಸಮಪಾತಳಿ ಮಾಡಿದೆ. ೧೯೬೧ರಿಂದ ೧೯೬೬ರವರೆಗೆ ೪೨, ೧೫, ೩೬೫ ಗಂಟೆಗಳು ಕೆಲಸಮಾಡಿ ೫೩, ೮೬೧ ಎಕರೆ ಭೂಮಿಯನ್ನು ಸಮಪಾತಳಿಮಾಡಿದೆ, ೧೯೬೬ರಿಂದ ಜನವರಿ ೧೯೭೦ರವರೆಗೆ ೧, ೭೯, ೧೧೧, ಗಂಟೆ ಕೆಲಸಮಾಡಿ ೪೭,೭೭೪ ಎಕರೆ ಭೂಮಿಯನ್ನು ಸಮಪಾತಳಿಮಾಡಿದೆ, ಕಳೆದ ಎರಡು ತಿಂಗಳಲ್ಲಿ ನಡೆದಿರುವ ಕೆಲಸದ ಲೆಕ್ಕ ಬಂದಿಲ್ಲ. ಒಟ್ಟಿನಲ್ಲಿ ಇದುವರೆಗೆ ೧, ೬೪, ೧೮೭ ಎಕರೆ ಭೂಮಿಗೆ ಬುಲ್‌ಡೋಜರುಗಳಿಂದ ಸಹಾಯವಾಗಿದೆ. ಬುಲ್ ಡೋಜರುಗಳಿಗೆ ಹಿಂದಿನಿಂದಲೂ ಹಾಕುತ್ತಿದ್ದ ದರವನ್ನು ಕೆಲವು ಮಾನ್ಯಸದಸ್ಯರು ಕೇಳಿದರು. ಅದು ಈರೀತಿ ಇದೆ. ೪೦ರಿಂದ ೫೦ ಅಶ್ವಶಕ್ತಿಯವರೆಗೆ ೨೬ ರೂಪಾಯಿ, ೫೦ ರಿಂದ ೬೦ ಅಶ್ವಶಕ್ತಿಯವರೆಗೆ ೩೬ ರೂಪಾಯಿ ೭೫ರಿಂದ ೮೦ ಅಶ್ವಶಕ್ತಿಯವರೆಗೆ, ೪೧ ರೂಪಾಯಿ, ೧೦೦ರಿಂದ ೧೩೦ ಅಶ್ವಶಕ್ತಿಯವರೆಗೆ ೪೫ ರೂಪಾಯಿ ಹಾಕಿದ್ದೇವೆ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಅದಕ್ಕೆ ೬೬ ರೂಪಾಯಿಗಳನ್ನು ವಿಧಿಸುತ್ತಿದ್ದಾರೆ, ಒಂದು ದಿವಸ ಕೆಲಸಮಾಡಿಸದೆ ಇಟ್ಟುಕೊಂಡಿದ್ದರೆ ೫೦ ರೂಪಾಯಿ ಪೆನಾಲ್ಟಿ ಎಂದು ಗೊತ್ತು ಮಾಡಿದ್ದೇವೆ, ಬುಲ್‌ಡೋಜರನು ತೆಗೆದುಕೊಂಡು ಹೋಗುವಾಗ ಒಂದುಮೈಲಿಗೆ ೧೦ರೂಪಾಯಿ ಮೈಲೇಜ್ ಆಗುತ್ತದೆ.

೪೫ ಟ್ರಾಕ್ಟರುಗಳು ಬಿಜಾಪುರ ಮತ್ತು ರಾಯಚೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆ. ವೆಲ್ ಬೋರಿಂಗ್ ಯೂನಿಟ್ಸ್ ೫೨ ಇದ್ದವು, ಹೊಸದಾಗಿ ೧೩ ಯೂನಿಟ್ ತೆಗೆದುಕೊಳ್ಳಲಾಗಿದೆ, ಒಟ್ಟು ೬೯ ಯೂನಿಟ್ಸ್ ಈ ವರ್ಷ ಕೆಲಸ ಮಾಡುತ್ತಿದೆ ಹೊಸದಾಗಿ ೪೪ ಯುನಿಟ್ಸ್‌ಕೊಂಡುಕೊಳ್ಳುತ್ತೇವೆಂದು ಹೇಳಿದ್ದೆ ಕೆಲವಾರು ಆಡಳಿತದ ಅಡಚಣೆಗಳಿಂದ ಫೆಬ್ರವರಿ ತಿಂಗಳಿನಲ್ಲಿ ೨೫ ಯೂನಿಟ್ಸ್ ಬಂದಿವೆ, ಉಳಿದದ್ದು ಬರಬೇಕಾಗಿದೆ. ಈ ಕಾರಣದಿಂದ ಎಷ್ಟು ತ್ವರಿತವಾಗಿ ತರಿಸಿ ರೈತರಿಗೆ ಇವುಗಳ ಸಹಾಯವನ್ನು ಕೊಡಬೇಕು ಎಂದು ಹೇಳಲಾಗಿತ್ತೋ ಅಷ್ಟು ತ್ವರಿತವಾಗಿ ತರಿಸುವುದಕ್ಕಾಗುವುದಿಲ್ಲ. ಸ್ಟೋರ್ಸ್ ಪರ್ಚೆಸ್ ಕಮಿಟಿ, ಹಣಕಾಸು ಇಲಾಖೆ ಇವೆಲ್ಲದರ ಮೂಲಕ ಹೋಗಬೇಕಾಗಿರುವುದರಿಂದ ಬಹಳ ತಡವಾಗುತ್ತದೆ, ೪೪ ಯಂತ್ರಗಳನು ಕೊಂಡುಕೊಳ್ಳಬೇಕಾದರೆ ಒಂದು ವರ್ಷ ಹಿಡಿಯಿತು. ಈ ಯಂತ್ರಗಳ ಸಹಾಯದಿಂದ ಎಷ್ಟು ಕೆಲಸ ನಡೆದಿದೆ ಎನ್ನುವ ವಿವರಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ೧೯೬೭-೧೯೬೮ರಲ್ಲಿ ೯೩ ಬಾವಿಗಳನ್ನು ತೆಗೆದಿದು ೮೬ ಬಾವಿಗಳಲ್ಲಿ ನೀರು ಬಿದ್ದಿದೆ. ೧೯೬೮-೧೯೬೯ರಲ್ಲಿ ೧೫೭ ಬಾವಿಗಳನ್ನು

(ಶ್ರೀ ಬಿ. ರಾಚಯ್ಯ)

ತೆಗೆಯಲಾಯಿತು. ಈ ವರ್ಷ ೫೨ ಯಂತ್ರಗಳು ಕೆಲಸ ಮಾಡುತ್ತಿದ್ದು ೨೧೩ ಬಾವಿಗಳು ಜನವರಿ ತಿಂಗಳ ವರೆಗೆ ಆಗಿವೆ, ಇದರಿಂದ ಸ್ವಲ್ಪಮಟ್ಟಿಗೆ ಕೆಲಸ ಚುರುಕಾಗಿ ನಡೆದಿದೆ ಎಂದು ಮಾನ್ಯ ಸದಸ್ಯರು ಗಮನಿಸ ಬಹುದು. ಈ ವರ್ಷ ಪೋಲಿಷ್ ರಿಗ್ಸ್, ಎರಡು ದಿವಸಕ್ಕೆ ಒಂದು ಬಾವಿಯನ್ನು ತೋಡುವಂಥ ಮೂರು ಯಂತ್ರಗಳು ಬಂದಿವೆ, ಅವುಗಳನ್ನು ಬೆಂಗಳೂರು, ಬೆಳಗಾಂ ಗುಲ್ಬರ್ಗ ಡಿವಿಜನ್ನುಗಳಿಗೆ ಒಂದೊಂದನ್ನು ಕೊಟ್ಟಿದ್ದೇವೆ. ಬಾವಿ ತೋಡತಕ್ಕ ಯಂತ್ರಗಳೇನಿವೆ ಅವುಗಳನ್ನು ಯಾವ ಪ್ರಮಾಣದಲ್ಲಿ ಮತ್ತು ಯಾವ ವೇಗ ದಲ್ಲಿ ನಮ್ಮವರು ಉಪಯೋಗಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಸೌತ್ ಇಂಡಿಯಾ ಚರ್ಚಿನವರು ಕೆಲಸ ಮಾಡುವ ವೇಗದಲ್ಲಿ ನಮ್ಮವರು ಕೆಲಸ ಮಾಡುವುದಿಲ್ಲ, ಅವರು ಹಗಲೂ ರಾತ್ರಿ ದುಡ್ಡು ಬರುತ್ತದೆ ಎನ್ನುವ ನೆಪದಿಂದ ಕೆಲಸ ಮಾಡುತ್ತಾರೆ, ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರಿಗೆ ಇರುವ ವ್ಯತ್ಯಾಸ ಇದು, ಬುಲ್‌ಡೋಜರಿನಲ್ಲಿ ಕೆಲಸ ಮಾಡತಕ್ಕ ಜನ ಒಂದು ವರ್ಷದಲ್ಲಿ ಸುಮಾರು ಒಂದು ಸಾವಿರ ಗಂಟೆ ಕೆಲಸ ಮಾಡುತ್ತಿದ್ದರು, ಡ್ರೈವರುಗಳಿಗೆ ಮತ್ತು ಇತರರಿಗೆ ಸ್ವಲ್ಪ ಇನ್‌ಸೆಂಟಿವ್ ಕೊಟ್ಟಮೇಲೆ ಹೆಚ್ಚು ಚುರುಕಾಗಿ ಕೆಲಸಮಾಡಿ ಎರಡು ಸಾವಿರ ಚಿಲ್ಲರೆ ಗಂಟೆಗಳಿಗಿಂತ ಹೆಚ್ಚು ಕೆಲಸಮಾಡವುದಕ್ಕೆ ಪ್ರಯತ್ನ ಮಾಡಿದ್ದಾರೆ. ಭಾರವಾದ ಯಂತ್ರಗಳನು ನಡೆಸುವ ಜನರ ಕಷ್ಟವೇನೆಂದರೆ, ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಇನ್‌ಸೆಂಟಿವ್ ಕೊಡದೆ ಹೋದರೆ ಚುರುಕಾಗಿ ಕೆಲಸ ನಡೆಯುವುದಿಲ್ಲ, ಈ ದೃಷ್ಟಿಯಿಂದ ವೆಲ್ ಬೋರಿಂಗ್ ಯೂನಿಟ್ಸ್‌ನಲ್ಲಿ ಕೆಲಸ ಮಾಡತಕ್ಕ ಆಪರೇಟರ್ಸ್ ಮತ್ತು ಇಂಜಿನಿಯರ್ಸ್, ಮತ್ತು ಇವರು ಕೈಕೆಳಗೆಕೆಲಸಮಾಡತಕ್ಕ ಜನ ಯಾರು ಯಾರು ಇದ್ದಾರೆ ಇವರಲ್ಲಿ ಕೆಲವರು ಕೈ ಕಾಲು ಕಳೆದುಕೊಂಡಿದ್ದಾರೆ, ಕೆಲವರು ಬೆರಳು ಕಳೆದುಕೊಂಡಿದ್ದಾರೆ ಭೂಮಿ ಒಳಗೆ ಹೋಗಿ ಯಂತ್ರ ಕೆಲಸಮಾಡತಕ್ಕ ಕಾಲದಲ್ಲಿ ಕೆಲವಾರ ಯಂತ್ರಗಳ ತೊಂದರೆಯಿಂದ ನಾವು ನಿರೀಕ್ಷೆ ಮಾಡಿದ ಪ್ರಮಾಣದಲ್ಲಿ ಕೆಲಸ ನಡೆಯುವುದಿಲ್ಲ ಅವರಿಗೆಲ್ಲ ಹ್ಯುಮ್ಯಾನಿಟೇರಿಯನ್ ಕನ್ಸಿಡರೇಷನ್ ಮೇಲೆ ನೋಡಿದಾಗ ಒಂದು ರೀತಿಯ ಇನ್‌ಸೆಂಟಿವ್ ಕೊಡ ತಕ್ಕದ್ದು ಉಚಿತ ಎನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆ ರೀತಿಯಲ್ಲಿ ಇನ್‌ಸೆಂಟೀವ್ ಕೊಟ್ಟ ಮೇಲೆ ಕೆಲಸ ಚುರುಕಾಗಿ ನಡೆಯುತ್ತಿದೆ ಎಂದು ನಾನು ಭಾವಿಸುತ್ತೇನೆ.

ಇನ್ನು ೪ ಇಂಚು ಡೈಮೀಟರಿಗೆ ರೇಟು ರೂ. ೫
೬ ಇಂಚು ಡೈಮೀಟರಿಗೆ ರೇಟು ರೂ. ೭
೮ ಇಂಚು ಡೈಮೀಟರಿಗೆ ರೇಟು ರೂ. ೧೨ ಎಂದು

ಗೊತ್ತುಮಾಡಿದ್ದೇವೆ. ೩೦೦ ಅಡಿಗೆ ೫೦ ರೂಪಾಯಿ ರೇಟು ಇದೆ. ಈ ರೇಟಿನಲ್ಲಿ ಕೆಲಸ ಮಾಡಲು ಆಗುವುದಿಲ್ಲ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ದರ ಹೆಚ್ಚಾಗಿ ಇದೆ. ಒಂದು ಅಡಿ ಗೆ ೭ ರೂ. ಮತ್ತು ಪೈಪಿಗೆ ೨೮ ರೂ. ಹೀಗೆ ಎರಡೂ ಸೇರಿ ೩೫ ರೂಪಾಯಿ ಹಾಕುತ್ತಾರೆ. ಹೊಸ ಮೆಷಿನ್ನಿಗೆ ೧೭ ರೂಪಾಯಿ ಒಂದು ಅಡಿ ಗೆ ರೇಟು ಇದೆ. ೧೩೫ ಅಡಿ ಕೆಲಸ ಎರಡು ದಿವಸದಲ್ಲಿ ಆಗುತ್ತದೆ. ಒಂದು ಅಡಿ ಗೆ ೧೭ರೂ. ೫೦ ಪೈಸೆ ರೇಟು ಹಾಕಿದೆ. ಇದರಲ್ಲಿ ಪೈಪು ಸೇರುವುದಿಲ್ಲ. ೨೩ರಿಗ್ ಕಾಂಪ್ರೆಸ್ಸರ್ ಯೂನಿಟ್ಸ್ ತೆಗೆದುಕೊಂಡಿ ದ್ದೇವೆ. ಈಗಾಗಲೇ ೧೮೨೦ ಭಾವಿಗಳನ್ನು ಆಳವಾಗಿ ಮಾಡಿದೆ. ಅಂದರೆ ಒಟ್ಟು ೨,೯೩,೭೨೭ ಅಡಿಗಳಷ್ಟು ಆಳಪಡಿಸಿದ್ದೇವೆ. ವ್ಯವಸಾಯಕ್ಕಾಗಿ ೩೪ ರೂ. ರೇಟು ಗೊತ್ತುಮಾಡಿದ್ದೇವೆ. ಅದರ ಬೇರೆ ಇಂಡಸ್ಟ್ರೀ ಬಾಗಕ್ಕಾಗಿ ೭೮ ರೂಪಾಯಿ ಒಂದು ಗಂಟೆಗೆ ಗೊತ್ತು ಮಾಡಿದ್ದೇವೆ.

ಇನ್ನು ಆಯಿಲ್ ಎಂಜಿನ್ಸ್ ಇಲೆಕ್ಟ್ರಿಕ್ ಪಂಪ್ ಸೆಟ್ಸ್ ವಿಚಾರದಲ್ಲಿ ಹೇಳುವುದಾದರೆ ೨೮,೭೨೨ ಆಯಿಲ್ ಎಂಜಿನ್ಸ್ ಒದಗಿಸಿದ್ದೇವೆ. ಇಲೆಕ್ಟ್ರಿಕ್ ಪಂಪ್ ಸೆಟ್ಸ್ ೯೪,೭೨೮ ರೈತರಿಗೆ ಒದಗಿಸಿಕೊಟ್ಟಿದ್ದೇವೆ. ಟ್ರ್ಯಾಕ್ಟರ್ ವಿಚಾರದಲ್ಲಿ ಮೈಸೂರು ಆಗ್ರೋ ಇಂಡಸ್ಟ್ರೀಜ್ ಕಾರ್ಪೊರೇಷನ್ನು ೩,೨೪೪ ರೈತರಿಗೆ ಟ್ರ್ಯಾಕ್ಟರ್ ಒದಗಿಸಿದ್ದಾರೆ. ಮುಂದಿನ ವರ್ಷ ೧೦೦೦೦ ಟ್ರ್ಯಾಕ್ಟರ್ಸ್ ಒದಗಿಸುವ ಯೋಜನೆ ಇದೆ. ಕೆಲಸ ತೀವ್ರವಾಗಿ ದಕ್ಷತೆಯಿಂದ ನಡೆಯಬೇಕು ಎಂದು ಆಗ್ರೋ ಇಂಡಸ್ಟ್ರೀಜ್ ಕಾರ್ಪೊರೇಷನ್ ಮತ್ತು ಅಗ್ರಿ ಕಲ್ಚರಲ್ ಎಂಜಿನಿಯರಿಂಗ್ ಯೂನಿಟ್ ಎರಡನ್ನೂ ಮರ್ಜ್ ಮಾಡಿದ್ದೇವೆ. ಅಗ್ರಿಕಲ್ಚರಲ್ ಎಂಜಿ ನಿಯರಿಂಗ್ ಯೂನಿಟ್ ಸಿಬ್ಬಂದಿಗೆ ಸಂಬಳ ಹೆಚ್ಚು ಕೊಡುತ್ತಾರೆ ಆದುದರಿಂದ ಸಿಬ್ಬಂದಿ ಅಲ್ಲಿಗೆ ಹೋಗ ಬಹುದು ಮತ್ತು ಇಲ್ಲಿ ಕೆಲಸ ನಿಂತು ಹೋಗಬಹುದು ಎಂದು ಮತ್ತು ಆಟಾನಮಸ್ ಬಾಡಿ ಮುಖಾಂತರ ಕೆಲಸ ಚೆನ್ನಾಗಿ ಮಾಡಬಹುದು ಎಂದು ಈ ರೀತಿ ಮಾಡಿದ್ದೇವೆ. ಇದರಲ್ಲಿ ವೈಯಕ್ತಿಕವಾಗಿ ಯಾರಿಗಾದರೂ ಉಪಕಾರ ಮಾಡುವುದಕ್ಕೋಸ್ಕರ ಮಾಡಿಲ್ಲ. ಒಂದು ರೀತಿ ಸರಿಯಾದ ಕಂಟ್ರೋಲ್ ಇರಬೇಕಾಗುತ್ತದೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದನ್ನು ಮಾಡಲು ಸಾಧ್ಯವಿಲ್ಲ. ಇದರಲ್ಲಿ ಆಗ್ರೋ ಇಂಡಸ್ಟ್ರೀಜ್ ಕಾರ್ಪೊರೇಷನ್ ಷೇರ್ ಬಂಡವಾಳ ಎರಡು ಕೋಟಿ ರೂಪಾಯಿ ಮಾತ್ರ ಇದೆ. ಎರಡೂ ಭಾಗ ಸೇರಿ

ನಾಲ್ಕು ನಾಲ್ಕೂವರೆ ಕೋಟಿ ಆಗುತ್ತದೆ ಇನ್ನೂ ಷೇರ್ ಬಂಡವಾಳ ಹೆಚ್ಚಿಸಿ ರೈತರಿಗೆ ಅನುಕೂಲ ಒದಗಿಸಲು ಕೆಲಸ ಮಾಡುತ್ತಾರೆ.

ಇನ್ನು ಗೊಬ್ಬರದ ವಿಚಾರದಲ್ಲಿ ಹೇಳುವುದಾದರೆ ರಾಸಾಯನಿಕ ಗೊಬ್ಬರ ಬೆಲೆ ಇಳಿಸಬೇಕು ಎಂದು ಅನೇಕ ಮಾನ್ಯ ಸದಸ್ಯರು ಸೂಚಿಸಿದ್ದಾರೆ. ೩ ಟೈರ್ ಏಜೆನ್ಸಿ ಇದ್ದುದನ್ನು ೨ ಟೈರ್ ಏಜನ್ಸಿ ಮಾಡಿದ್ದೇವೆ. ಒಂದು ಮೆಟ್ರಿಕ್ ಟನ್‌ಗೆ ೧೨ ರೂಪಾಯಿ ಕಡಿಮೆ ಮಾಡಲು ಏರ್ಪಾಡು ಮಾಡಿದ್ದೇವೆ. ಕೇಂದ್ರ ಸರ್ಕಾರ ಅಮೋನಿಯಂ ಸಲ್ಫೇಟ್ ಬೆಲೆ ೯೦ ರೂಪಾಯಿ ಕಡಿಮೆ ಮಾಡಿದ್ದಾರೆ. ಇನ್ನೂ ಬೆಲೆ ಕಡಿಮೆ ಮಾಡಲು ಸಾಧ್ಯವಿದೆ. ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ನಮ್ಮಲ್ಲಿ ಗೊಬ್ಬರ ತಯಾರಾಗುತ್ತಿರುವುದು ಕಡಿಮೆ ಪ್ರಮಾಣದಲ್ಲಿ ಇದೆ. ಹೊರಗಡೆಯಿಂದ ತರಿಸಿಕೊಂಡು ಒದಗಿಸಬೇಕಾಗುತ್ತದೆ. ಇದರ ಬೆಲೆ ಕೇಂದ್ರ ಸರ್ಕಾರ ಗೊತ್ತು ಮಾಡುತ್ತದೆ, ಮಾರಾಟ ಮಾಡತಕ್ಕದ್ದರಲ್ಲಿ ೮೦ ರೂಪಾಯಿ ಮಾರ್ಜಿನ್ ಇದೆ. ಇದನ್ನು ಸಹ ಕಡಿಮೆ ಮಾಡಲು ಸಾಧ್ಯವಿದೆ. ಇದರಲ್ಲಿ ಮಾರ್ಕೆಟಿಂಗ್ ಸೊಸೈಟಿಗೆ ಅವಕಾಶ ಇದೆ. ಪ್ರೈವೇಟ್ ಕಂಪನಿಯಾದಲಿ ಕಾಂಪಿಟೀಟಿವ್ ರೇಟ್ಸ್ ಇರುತ್ತವೆ. ಇದರಲ್ಲಿ ಒಂದು ಕೋಟಿ ರೂಪಾಯಿ ನಷ್ಟವಾಗುತ್ತದೆ ಆದರೂ ಕೂಡ ಇದು ಅನಿವಾರ್ಯವಾಗಿದೆ. ಗೊಬ್ಬರ ತರಿಸಲು ಬಹಳ ಕಷ್ಟವಾಗುತ್ತದೆ ಮೊದಲು ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿದ್ದರಿಂದ ಗೊಬ್ಬರ ಸಿಕ್ಕುತ್ತಾ ಇರಲಿಲ್ಲ. ಈಗ ನಮ್ಮಲ್ಲಿ ಸಾಕಷ್ಟು ಸ್ಟಾಕ್ ಇರುವುದರಿಂದ ಕಳ್ಳ ಸಂತೆಗೆ ಅವಕಾಶವಿಲ್ಲ. ನಮ್ಮಲ್ಲಿ ೧೫ ಕೋಟಿ ರೂಪಾಯಿ ಬೆಲೆಯ ಗೊಬ್ಬರ ಉಳಿದಿದೆ, ಇದು ಮುಂದಿನ ವರ್ಷಕ್ಕೆ ಆಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಈ ನನ್ನ ಡಿಮ್ಯಾಂಡ್ ಮೇಲೆ ಅನೇಕ ಸದಸ್ಯರು ಮಾತನಾಡಿ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕಟ್ ಮೋಷನ್ಸ್ ಸಹ ಕಳಿಸಿದ್ದಾರೆ. ಡ್ರೈಫಾರ್ಮಿಂಗಿಗೆ ಹೆಚ್ಚು ಗಮನ ಕೊಟ್ಟಿಲ್ಲ, ರಿಸರ್ಚ್ ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸುತ್ತಿದೆ. ಸಂಶೋಧನೆ ನಡೆಸುವುದು ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಡ್ರೈ ಫಾರ್ಮಿಂಗ್ ಅಂದರೆ ಬರೀ ಸಾಯಿಲ್ ಕನ್ಸರ್‌ವೇಷನ್ ಅಲ್ಲ. ವ್ಯವಸಾಯ ಉಪಕರಣ ಒದಗಿಸಲು ವ್ಯವಸಾಯ ವಿಶ್ವವಿದ್ಯಾನಿಲಯದವರು ಯೋಜನೆ ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದಕ್ಕೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕಳೆದ ವರ್ಷ ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ೬೦ ಲಕ್ಷ ರೂಪಾಯಿ ಕೊಟ್ಟಿದ್ದೇವೆ ಈ ವರ್ಷ ಅದನ್ನು ೯೦ ಲಕ್ಷ ರೂಪಾಯಿಗೆ ಹೆಚ್ಚಿಸಿದ್ದೇವೆ, ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣ ಒದಗಿಸಿ, ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೋದ ವರ್ಷದಷ್ಟೇ ಇಟ್ಟಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇಷ್ಟು ಹಣ ಒದಗಿಸಿದ್ದು ಅದೇನೂ ಕಾಯಂ ಅಲ್ಲ. ಆವಶ್ಯಕತೆಗೆ ಅನುಗುಣವಾಗಿ ಹಣ ಒದಗಿಸಲು ಪ್ರಯತ್ನ ಮಾಡುತ್ತೇವೆ. ಡ್ರೈ ಫಾರ್ಮಿಂಗ್ ಸಂಶೋಧನೆ ನಡೆಸಬೇಕು ಎಂದು ಹೇಳಿರುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲು ಪ್ರಯತ್ನ ಮಾಡುತ್ತೇನೆ. ನನ್ನ ಇಲಾಖೆಗೆ ಸಂಬಂಧ ಪಡದೇ ಇದ್ದ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರೊಬ್ಬರು ಹೇಳಿದ್ದಾರೆ. ವಿದ್ಯುತ್‌ಶಕ್ತಿ ಒದಗಿಸಿ ನೀರು ಉಪಯೋಗಿಸುವ ಯೋಜನೆ ಮಾಡಬೇಕು ಎಂದು ಹೇಳಿದ್ದಾರೆ. ಅದು ಗಮನಿಸಬೇಕಾದ ವಿಚಾರವಾಗಿದೆ.

ಇನ್ನು ರಿಜರ್ವ್ ಬ್ಯಾಂಕಿನಿಂದ ಹಣ ಒದಗಿಸಲು ಅಡಿ ಯಾಗಿದೆ, ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ತಿಳಿಸುತ್ತೇನೆ. ಈ ಒಂದು ಇಲಾಖೆಯಲ್ಲಿ ಅತೃಪ್ತಿ ತುಂಬಿದೆ ಎಂದು ಶ್ರೀಮಾನ್ ಗುರಡ್ಡಿಯವರು ಹೇಳಿದ್ದಾರೆ.

ಕೃಷಿ ಇಲಾಖೆಯಲ್ಲಿ ಅಲ್ಲಲ್ಲೆ ಅಲ್ಪಸ್ವಲ್ಪ ಅತೃಪ್ತಿ ಕೆಲವರಲ್ಲಿದೆ. ಐದು ಕಡೆಯ ಜನರು ಒಂದು ಕಡೆ ಸೇರಿ ಕೆಲಸಮಾಡತಕ್ಕ ಇಂಥ ಒಂದು ವಿಶೇಷ ಸಂದರ್ಭದಲ್ಲಿ ಎಲ್ಲರಿಗೂ ಸಮಾಧಾಕರವಾಗತಕ್ಕ ರೀತಿಯಲ್ಲಿ ಎಲ್ಲರನ್ನೂ ತೃಪ್ತಿಪಡಿಸತಕ್ಕ ರೀತಿಯಲ್ಲಿ ಕಾನೂನು ಮಾಡಬೇಕೆಂದರೆ ಅದು ಸಾಧ್ಯವಿಲ್ಲ. ಆದರೆ ನಾವು ಯಾರಿಗೂ ನ್ಯಾಯವನ್ನು ಪಡೆಯತಕ್ಕ ಕಡೆ ಅಡ್ಡಿಯನ್ನು ಮಾಡಿಲ್ಲ. ಆದರೆ ನಮ್ಮಲ್ಲಿರತಕ್ಕ ಈ ಇಲಾಖೆಯ ೧೬ ಕೇಡರುಗಳಲ್ಲಿ ೧೩ ಕೇಡರುಗಳ ಸೀನಿಯಾರ್ಟಿ ಪಟ್ಟಿಯನ್ನು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆದರೆ ಇನ್ನೊಂದು ಕೇಡರಿನ ವಿಷಯ ಅಂದರೆ ನಮ್ಮ ಡೆಮಾನ್‌ಸ್ಟ್ರೇಟರುಗಳ ಸೀನಿಯಾರ್ಟಿ ವಿಚಾರದಲ್ಲಿ ಹೈಕೋರ್ಟಿನಿಂದ ಒಂದು ತಡೆಯಾಜ್ಞೆ ಬಂದಿರುವುದರಿಂದ ಅದರ ಬಗ್ಗೆ ಸ್ವಲ್ಪ ನಿಧಾನವಾಗಿದೆ. ಅದು ಬಿಡುಗಡೆಯಾದ ಕೂಡಲೆ ಅದನ್ನು ನಿರ್ಧರಿಸಲಾಗುತ್ತದೆ.

(ಶ್ರೀ ಬಿ. ರಾಚಯ್ಯ)

7-00 P. M.

ಇನ್ನು ಹಾರ್ಟಿಕಲ್ಚರಲ್ ಇಲಾಖೆಯ ಬಗ್ಗೆ ಶ್ರೀಮರ್ಾ ಎಂ. ನಾಗಪ್ಪನವರು ಕೆಲವು ಖೋತಾ ಸೂಚನೆಗಳನ್ನು ಕಳುಹಿಸಿದ್ದಾರೆ. ಅವುಗಳಲ್ಲಿ ನರಸಗಡ್ಡ ತಾಲ್ಲೂಕಿನ ಮಲಿಯಾಬಾದ್ ಹಿಲ್ ಸ್ಟೇಷನ್‌ನ್ನು ಅಭಿವೃದ್ಧಿಪಡಿಸಲು ಅಲ್ಲಿ ಬೋಟಾನಿಕಲ್ ತೋಟಗಳನ್ನು ಏರ್ಪಡಿಸಬೇಕೆಂದು ಕೇಳಿದ್ದಾರೆ. ನಾನು ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಇಲಾಖೆಯ ಅಧಿಕಾರಿಗಳು ರಾಜ್ಯದ ಯಾವ ಯಾವ ಭಾಗದಲ್ಲಿ ಏನೇನು ಮಾಡಬೇಕೆಂಬುದನ್ನು ನೋಡಿಕೊಂಡು ಬಂದಿದ್ದಾರೆ. ಅದರ ಪ್ರಕಾರ ರಾಯಚೂರು, ಗಂಗಾವತಿ ತಾಲ್ಲೂಕುಗಳಲ್ಲಿ ಮತ್ತು ಇತರೇ ಭಾಗಗಳಲ್ಲಿ ಏನೇನು ಹಣ್ಣಿನ ಗಿಡಗಳನ್ನು ಬೆಳಸಬೇಕು ಎಲ್ಲೆಲ್ಲಿ ಯಾವ ಉದ್ಯಾನವನಗಳನ್ನು ಬೆಳಸಬೇಕು ಎಲ್ಲಿ ಒಳ್ಳೆಯ ಉತ್ತಮ ತರಕಾರಿ ಬೆಳೆಯನ್ನು ಬೆಳೆಸಬಹುದು ಎಂಬುದನ್ನೆಲ್ಲಾ ನೋಡಿ ಅಲ್ಲಿ ಕೆಲಸ ಪ್ರಾರಂಭಿಸುವುದಕ್ಕೆ ಪ್ರಯತ್ನಗಳನ್ನು ಮಾಡುವುದರಲ್ಲಿದ್ದಾರೆ. ಕಳೆದ ಸಾಲಿನಲ್ಲಿ ಬೆಂಗಳೂರು ನಗರದಲ್ಲಿರತಕ್ಕ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕುಗಳ ಅಭಿವೃದ್ಧಿಗಾಗಿ ೧೧ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಹಾಗೆ ಇಲ್ಲಿ ಒಂದು ಜೂ ಗಾರ್ಡನ್ ಅಭಿವೃದ್ಧಿ ಮಾಡಲು ಎರಡೂವರೆ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಅದೇ ರೀತಿ ನಮ್ಮ ರಾಜ್ಯದಲ್ಲಿರತಕ್ಕ ೧೭೪ ತಾಲ್ಲೂಕುಗಳಲ್ಲಿ ೭೪ ತಾಲ್ಲೂಕುಗಳನ್ನು ಬಿಟ್ಟು ಉಳಿದ ೧೦೦ ತಾಲ್ಲೋಕ್‌ಗಳಲ್ಲಿ ಫಾರಂಗಳಿವೆ. ಇನ್ನು ಬೇರೆ ೪೦ ತಾಲ್ಲೂಕುಗಳಲ್ಲಿ ಉತ್ತಮ ಜಾತಿಯ ಹಣ್ಣು ಹಂಪಲುಗಳನ್ನೂ ಹೂವಿನ ಗಿಡಗಳನ್ನೂ ಬೆಳೆಸುವುದಕ್ಕೆ ಪ್ರಯತ್ನಗಳನ್ನು ನಡೆಸಿದ್ದೇವೆ. ರಾಜ್ಯದಲ್ಲಿ ಟೂರಿಸ್ಟ್‌ಗಳ ಅನುಕೂಲತೆಗಾಗಿ ಅಲ್ಲಲ್ಲಿ ಈಜುವ ಕೊಳ, ಒಳ್ಳೆಯ ಹೋಟಲುಗಳ ಅನುಕೂಲ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲು ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಅಷ್ಟೇ ಅಲ್ಲ ನಮ್ಮ ಹಾರ್ಟಿಕಲ್ಚರಲ್ ಇಲಾಖೆಯವರು ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ, ಹಾಸನ ಮತ್ತು ಬಿಳಿಗಿರಿರಂಗನಬೆಟ್ಟ ಈ ಕಡೆಗಳಲ್ಲಿ ರೋಗರಹಿತ ಉತ್ತಮ ಜಾತಿಯ ಆಲೂಗೆಡ್ಡೆಯನ್ನು ಬೆಳಸುವುದಕ್ಕೆ ಪ್ರಯತ್ನಗಳನ್ನು ಮಾಡಲು ರಿಸರ್ಚ್ ಸ್ಟೇಷನ್‌ಗಳನ್ನು ಮಾಡಿದ್ದೇವೆ. ಹಾಗೆ ಉತ್ತಮ ತಳಿಯ ತೆಂಗಿನ ಸಸಿಗಳನ್ನು ಬೆಳೆಸಲಾಗುತ್ತಿದೆ. ಇನ್ನು ನಮ್ಮ ರಾಜ್ಯದಲ್ಲಿ ಅಡಕೆ ಮತ್ತು ತೆಂಗಿನ ಮರಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟತಕ್ಕ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡತಕ್ಕ ಬಗ್ಗೆ ಆ ವ್ಯವಸಾಯದಲ್ಲಿ ತೊಡಗಿರತಕ್ಕ ಜನರಿಗೆ ಆ ಬೆಳೆಯನ್ನು ಬೆಳೆಯತಕ್ಕ ವೆಚ್ಚದಲ್ಲಿ ಇಲ್ಲವೇ ಆ ರೋಗಾದಿಗಳನ್ನು ತಡೆಗಟ್ಟತಕ್ಕ ವಹಿಸಲಿರುವ ವೆಚ್ಚದಲ್ಲಿ ಶೇ. ೫೦ ರಷ್ಟು ಸಬ್‌ಸಿಡಿಯನ್ನು ಕೊಡುವುದಕ್ಕೂ ಕೂಡ ಏರ್ಪಾಡುಗಳನ್ನು ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಇನ್ನು ರಾಜ್ಯದ ಐದು ವಿಭಾಗಗಳಿಗೂ ತೋಟಗಾರಿಕೆಯನ್ನು ಮುಂದುವರಿಸಲು ಅಲ್ಲಲ್ಲೆ ಉತ್ತಮ ಜಮೀನನ್ನು ದೊರಕಿಸಿಕೊಳ್ಳುವುದಕ್ಕಾಗಿ ಪ್ರಯತ್ನ ಮಾಡಲಾಗಿದೆ. ನಮ್ಮ ಹಿಂದಿನವರು ನಗರ ಸೌಂದರ್ಯವನ್ನು ಹೆಚ್ಚಿಸತಕ್ಕ ಉದ್ದೇಶದಿಂದ ಬೆಳೆಸಿರತಕ್ಕ ಯಾವ ಉದ್ಯಾನವನವನ್ನೂ ನಾವು ಕೈಬಿಡುವುದಕ್ಕೆ ತಯಾರಾಗಿಲ್ಲ. ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರಿಂದ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗಿದೆ. ಆದರೆ ನನಗೆ ಇಲ್ಲಿ ಇನ್ನೂ ಕೆಲವು ವಿಚಾರಗಳ ಬಗ್ಗೆ ಉತ್ತರ ಕೊಡುವುದಕ್ಕೆ ಅವಕಾಶವಾಗದಿದ್ದರೂ ನಾನು ಮಾನ್ಯ ಸದಸ್ಯರು ಸೂಚಿಸಿರತಕ್ಕ ಎಲ್ಲ ಸಲಹೆಗಳನ್ನು ಬರೆದಿಟ್ಟುಕೊಂಡಿದ್ದೇನೆ. ಅವುಗಳ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ಭರವಸೆಯನ್ನು ಕೊಡುತ್ತಿದ್ದೇನೆ. ಆದ್ದರಿಂದ ತಾವೆಲ್ಲರೂ ಈಗ ನಾವು ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳನ್ನು ಅನುಮೋದಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ :—ಈಗಾಗಲೇ ಸ್ವೀಡನ್, ನ್ಯೂಜಿಲೆಂಡ್ ಮತ್ತು ಅಮೇರಿಕ ಈ ಸ್ಥಳಗಳಲ್ಲಿ ಆಹಾರದ ಬೆಳೆಗಳಿಗೆ ಬರತಕ್ಕ ರೋಗಾದಿಗಳನ್ನು ನಾಶಪಡಿಸತಕ್ಕ ಬಗೆ ಡಿ. ಡಿ. ಟಿ. ಯನ್ನು ಉಪಯೋಗ ಮಾಡುತ್ತಿರುವುದನ್ನು ತಡೆಗಟ್ಟಬೇಕೆಂದೂ, ಇಲ್ಲದಿದ್ದರೆ ಡಿ. ಡಿ. ಟಿ. ಪ್ರಯೋಗ ಮಾಡಿದ ಆಹಾರ ಧಾನ್ಯಗಳನ್ನು ಜನರು ಉಪಯೋಗಿಸಿದರೆ ಅವರ ಆರೋಗ್ಯಕ್ಕೆ ಬಹಳ ಅಪಾಯವುಂಟಾಗುತ್ತದೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಈ ಬಗ್ಗೆ ಇಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ?

ಇನ್ನೊಂದು ವಿಷಯ ಎಂದರೆ ಬೀದರ್ ಮತ್ತು ರಾಜ್ಯದ ಇತರೇ ಸಣ್ಣ ಸಣ್ಣ ಹಿಡುವಳಿದಾರರಿಗೆ ಸಾಲ ಕೊಡತಕ್ಕ ಬಗ್ಗೆ ಮೂರು ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ಹೇಳಿದರು. ಹಣವನ್ನು ಯಾವ ಏಜನ್ಸಿ ಮೂಲಕ ಹಂಚಿಕೆ ಮಾಡಲಾಗುತ್ತದೆ ಮತ್ತು ಅದಕ್ಕೆ ಬೆಳೆಯನ್ನು ಆಧಾರ ಮಾಡಿಕೊಳ್ಳುತ್ತಾರೋ ಅಥವಾ ಭೂಮಿಯನ್ನು ಆಧಾರ ಮಾಡಿಕೊಳ್ಳುತ್ತಾರೋ ?

ಮತ್ತು ರಾಜ್ಯದ ೭ ಜಿಲ್ಲೆಗಳಲ್ಲಿರತಕ್ಕ ದುರ್ಬಲ ಬ್ಯಾಂಕುಗಳಿಗೆ ೧೨೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಆ ಹಿಂದೆ ಹೇಳಿದ ಮೂರು ಕೋಟಿ ಸೇರಿದೆಯೋ ಅಥವಾ ಅದು ಬೇರೆಯೋ ?

ಶ್ರೀ ಬಿ. ರಾಚಯ್ಯ.—ಆ ಮೂರು ಕೋಟಿ ಮತ್ತು ನೂರು ಕೋಟಿ ರೂಪಾಯಿಗಳು ಬೇರೆ ಬೇರೆ. ದುರ್ಬಲ ಬ್ಯಾಂಕುಗಳ ವಿಚಾರದಲ್ಲಿ ಬೇಕಾದ ವಿಚಾರವನ್ನು ಸಹಕಾರ ಮಂತ್ರಿಗಳನ್ನು ಕೇಳಿದರೆ ಅವರು ತಮಗೆ ಸರಿಯಾದ ಉತ್ತರವನ್ನು ಹೇಳಬಹುದು.

ಇನ್ನು ಡಿ. ಡಿ ಟಿ. ವಿಚಾರದಲ್ಲಿ ನಾವು ಇಲ್ಲಿ ಅಷ್ಟು ಭಾರಿ ಪ್ರಮಾಣದಲ್ಲಿ ಉಪಯೋಗ ಮಾಡುತ್ತಿಲ್ಲ; ಅಂದರೆ ಅದನ್ನು ಬಹಿಷ್ಕಾರಮಾಡತಕ್ಕ ಮಟ್ಟದಲ್ಲಿ ಬಳಸುತ್ತಿಲ್ಲ. ಇಲ್ಲಿ ಆಗಾಗ್ಗೆ ಈ ವಿಚಾರದಲ್ಲಿ ಕಾನ್‌ಫರ್‌ನ್ಸ್‌ಗಳು ನಡೆಯುತ್ತಿರುತ್ತವೆ(ಆಗ ಈ ವಿಚಾರವನ್ನು ತಜ್ಞರಿಗೆ ತಿಳಿಸಿ ಅವರ ಸಲಹೆಯ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಬಂದರುಗಳು ಮತ್ತು ಮೀನುಗಾರಿಕೆ ಶಾಖೆಗಳ ರಾಜ್ಯ ಮಂತ್ರಿಗಳು:—

ಮಾನ್ಯ ಉಪಸಭಾಧ್ಯಕ್ಷರೇ, ಕಳೆದ ಎರಡು ದಿನಗಳಿಂದಲೂ ಶ್ರೀಮಾನ್ ಭಾಸ್ಕರಶೆಟ್ಟಿಯವರಿಂದ ಪ್ರಾರಂಭ ಮಾಡಿ ಶ್ರೀಮತಿ ನಾಗರತ್ನಮ್ಮನವರ ಕೊನೆಯ ಭಾಷಣದವರೆಗೂ ಕೂಡ ಎಲ್ಲ ಸದಸ್ಯರು ಕೂಡ ಈ ಮೀನುಗಾರಿಕೆ ಮೇಲೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೂ ನಾನು ಹೃತ್ಪೂರ್ವವಾಗಿ ವಂದಿಸುತ್ತೇನೆ. ನಾನು ಮಾನ್ಯ ಸದಸ್ಯರು ಸೂಚನೆ ಮಾಡಿರುವ ಕೆಲವು ಅಂಶಗಳ ಬಗ್ಗೆ ಕೆಲವು ಸೂಚನೆಗಳನ್ನು ಕೊಡ ಬಯಸುತ್ತೇನೆ.

ಮೊದಲನೆಯದಾಗಿ ಈ ಮೀನುಗಾರಿಕೆ ಇಲಾಖೆಯನ್ನು ವ್ಯವಸಾಯದ ಇಲಾಖೆಗೆ ಬದಲಾಯಿಸಿ ಅದನ್ನುಒಂದು ಮೇಜರ್ ಇಲಾಖೆಯನ್ನಾಗಿ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು. ಈ ಮೀನುಗಾರಿಕೆ ಇಲಾಖೆ ಈಗ ವ್ಯವಸಾಯಕ್ಕೆ ವಿಲೀನವಾಗಿದೆ ಈ ಮೀನುಗಾರಿಕೆ ಇಲಾಖೆಗೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಮತ್ತು ಹೆಚ್ಚಿನ ಗಮನ ಕೊಡಬೇಕು ಎಂದು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈಗ ಈ ಮೀನುಗಾರಿಕೆ ಎನ್ನುವುದು ಒಂದು ಕಡೆ ಕೈಗಾರಿಕೆ ಇನ್ನೊಂದು ಕಡೆ ವ್ಯವಸಾಯ ಎನ್ನುತ್ತಾರೆ ಆದರೂ ಈ ವ್ಯವಸಾಯಕ್ಕೆ ಮತ್ತು ಕೈಗಾರಿಕೆಗೆ ಕೊಡುತ್ತಾ ಇರತಕ್ಕಂಥ ಗಮನ ಮತ್ತು ಅವುಗಳಿಗೆ ಹಾಕುತ್ತಾ ಇರತಕ್ಕಂಥಾ ಹಣವನ್ನು ಈ ಮೀನುಗಾರಿಕೆ ಇಲಾಖೆಗೆ ಹಾಕಿದರೆ ಇನ್ನೂ ಹೆಚ್ಚಿನ ಲಾಭ ಇದೆ ಎಂದು ಹೇಳುತ್ತೇನೆ ನಮ್ಮ ಸಂಸ್ಥಾನದಲ್ಲಿ ಮೀನುಗಾರಿಕೆ ಇಲಾಖೆ ಕೆಲಸಕಾರ್ಯಗಳು ಏನೆಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆಯೆಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಈ ಒಂದು ದೃಷ್ಟಿಯಿಂದಲೂ ಕೂಡ ಈ ಮೀನುಗಾರಿಕೆ ಇಲಾಖೆ ಒಂದು ಪ್ರಾಮುಖ್ಯವಾದ ಇಲಾಖೆ ಎಂದು ಪರಿಗಣಿಸಿ ಅದಕ್ಕೆ ಒಂದು ಹೆಚ್ಚಿನ ಪ್ರಾಶಸ್ತ್ಯವನ್ನೂ ಮತ್ತು ಹೆಚ್ಚಿನ ಹಣವನ್ನೂ ಕೊಡುವುದು ಅವಶ್ಯಕ ಎಂದು ಹೇಳುತ್ತೇನೆ.

ಈ ವರ್ಷದಲ್ಲಿ ಪ್ಲಾನ್‌ಗೆ ೮೦ ಲಕ್ಷ, ನಾನ್ ಪ್ಲಾನ್‌ಗೆ ೬೭.೮೨ ಲಕ್ಷ, ಫಿಷರೀಸ್ ಹಾರ್ಬರ್ಸ್ ಸೆಂಟ್ರಲ್ ಸ್ಪಾನ್ ಡ್ರ್ ಸ್ಕೀಂ ಇವುಗಳೆಲ್ಲಾ ಸೇರಿ ೨೫.೪೯ ಲಕ್ಷ ರೂಪಾಯಿಗಳಷ್ಟು ವನಹಣ್ಣು ಆಯವ್ಯಯದಲ್ಲಿ ನಿಗದಿ ಮಾಡಿದ್ದಾರೆ. ಅನಿಮಲ್ ಹಸ್ಬೆಂಡರಿ ಇಲಾಖೆಯವರ ಒಂದು ಬೇಡಿಕೆ ನೋಡಿದರೆ ೨ ಕೋಟಿ ೫ ಲಕ್ಷ ೯೬ ಸಾವಿರ ರೂಪಾಯಿಗಳು ಇದೆ. ಈ ಇಲಾಖೆಯ ಬೇಡಿಕೆಗಿಂತಲೂ ಮೀನುಗಾರಿಕೆ ಇಲಾಖೆಗೆ ಒದಗಿಸಿರುವ ಹಣ ಸಣ್ಣದಾಗಿದೆ. ಈ ಇಲಾಖೆಯಲ್ಲಿ ಹೆಚ್ಚಿನ ಒಂದು ಆಧಾಯವು ಇದೆ. ಅಂದರೆ ೩೫.೬ : ಲಕ್ಷ ರೂಪಾಯಿಗಳ ಆದಾಯ ಬರುವುದಾಗಿದೆ. ಮತ್ತು ಈ ಮೀನುಗಾರಿಕೆ ಉದ್ಯಮದ ಮೇಲೆ ಯಾವುದರ ಮೇಲೆ ಹಣ ಹಾಕಿದರೂ ಲಾಭ ಬರುತ್ತದೆ, ನಷ್ಟವಾಗುವುದಕ್ಕೆ ಅವಕಾಶವಿಲ್ಲ. ಈ ಒಂದು ವಿಷಯವನ್ನೂ ಕೂಡ ಗಮನದಲ್ಲಿರಿಸಕೊಂಡರೆ ಇದು ಒಂದು ಮುಖ್ಯವಾದ ಇಲಾಖೆ ಮತ್ತು ಮುಖ್ಯವಾದ ಕೈಗಾರಿಕೆಯೂ ಆಗಿದೆ. ಮತ್ತು ಮುಖ್ಯವಾದ ಆಹಾರವು ಆಗಿದೆ. ಅಂದರೆ ದೇಶದಲ್ಲಿರತಕ್ಕಂಥ ಆಹಾರದಲ್ಲಿ ಇದು ಪೌಷ್ಟಿಕವಾದ ಆಹಾರವಾಗಿದೆ. ಆದುದರಿಂದ ಇದನ್ನು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಸಂಸ್ಥಾನದಲ್ಲಿ ಕರಾವಳಿಯಲ್ಲಿ ಹಾಗೂ ಒಳನಾಡಿನಲ್ಲಿ ಬಹಳ ಹೆಚ್ಚು ಅವಕಾಶ ಇದೆ ಎನ್ನುವ ಒಂದು ವಿಷಯವನ್ನೂ ನಾವು ಗಮನಿಸಬೇಕಾಗಿದೆ, ನಮ್ಮ ಸುಯೋಗದಿಂದ ೨೦೦ ಮೈಲಿಯಷ್ಟು

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಕರಾವಳಿ ನಮ್ಮ ರಾಜ್ಯದಲ್ಲಿದೆ. ೧೯ ಮೀನುಗಾರಿಕೆ ಬಂದರುಗಳು ಮತ್ತು ಸಾಮಾನು ಸರಂಜಾಮು ಬಂದರುಗಳು ಇವೆ. ಮಾನ್ಯ ಕೆಲವು ಸ್ನೇಹಿತರುಗಳು ಅದರಲ್ಲೂ ಶ್ರೀಮಾನ್ ಭಾಸ್ಕರಶೆಟ್ಟಿಯವರು ಮಾಡಿದ ವಾದ ಬಹಳ ವಿಚಿತ್ರವಾಗಿತ್ತು. ಏನೆಂದರೆ ಮಂತ್ರಿಗಳು ಕೇವಲ ಭಾಷಣ ಮಾಡುತ್ತಾರೆ, ಪ್ರವಾಸ ಮಾಡುತ್ತಾರೆ, ಕೆಲಸ ಮಾಡುವುದಿಲ್ಲ ಅನ್ನುವುದನ್ನು ಹೇಳಿದರು. ಬಹುಶಃ ಅವರು ನನ್ನ ಉತ್ತರವನ್ನು ಕೇಳುವುದು ಕಷ್ಟ ಎಂದು ಓಡಿ ಹೋಗಿಬಿಟ್ಟರು ಎಂದು ನಾನು ತಿಳಿಯುತ್ತೇನೆ. ನಮ್ಮ ಮಂತ್ರಿಮಂಡಲ ಬದಲಾವಣೆ ಆದಾಗ, ಮೀನುಗಾರಿಕೆ ಇಲಾಖೆ ನನ್ನ ಬಳಿಗೆ ಬಂದಮೇಲೆ ಮೈಸೂರು ಸಂಸ್ಥಾನದಲ್ಲಿ ಫಿಷರೀಸ್ ಸೈಯನ್ಸ್ ಕಾಲೇಜನ್ನು ಓಪನ್ ಮಾಡುವುದಕ್ಕೆ ಸೂಚನೆ ಏನಾದರೂ ಇದೆಯೇ ಎಂದು ಸರ್ಕಾರವನ್ನು ಮಾನ್ಯ ಸದಸ್ಯರು ಕೇಳಿದಾಗ ಶ್ರೀ ಮಾನ್ ಡಿ. ದೇವರಾಜ್ ಅರಸ್‌ರವರು ಹಿಂದೆ ಈ ಪೋರ್ಟ್‌ಫೋಲಿಯೋ ಮಂತ್ರಿಗಳಾಗಿದ್ದಾಗ "ಇಲ್ಲ" ಎಂದು ಹೇಳಿದ್ದರು, ನಾನು ಮಂಗಳೂರಿಗೆ ಹೋಗಿದ್ದ ಸಂದರ್ಭದಲ್ಲಿ ಫಿಷರೀಸ್ ಟ್ರೈನಿಂಗ್ ಸೆಂಟರ್‌ಗೆ ಹೋಗುವ ಒಂದು ಅವಕಾಶ ದೊರಕಿತು. ಆ ಸಂಸ್ಥೆಯು ಜನರಲ್ಲಿ ಫಿಷರೀಸ್‌ನ್ನು ಉಚ್ಛ್ರಾಯ ಸ್ಥಿತಿಗೆ ತರುವುದಕ್ಕೆ ಅವಕಾಶ ಇದೆಯೇ ಎಂದು ಅವರೊಡನೆ ಮಾತನಾಡಿದೆ ಮತ್ತು ಈ ಫಿಷರೀಸ್ ಸೈಯನ್ ಕಾಲೇಜನ್ನು ಓಪನ್ ಮಾಡಿದರೆ ವಿಶ್ವವಿದ್ಯಾನಿಲಯಕ್ಕೆ ಸೇರಿಸಿ ಕೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಯುವುದಕೋಸ್ಕರ ಅಲ್ಲಿಯ ವೈಸ್‌ಛಾನ್ಸಲರ್ ಮತ್ತು ಡೀನ್ ಜೊತೆ ಮಾತನಾಡಿದೆ. ಆಮೇಲೆ ನಮ್ಮ ವ್ಯವಸಾಯ ಇಲಾಖೆಯ ಮಂತ್ರಿಗಳು ಮುಖ್ಯ ಮಂತ್ರಿಗಳು ಕೇಂದ್ರದ ಐ. ಸಿ. ಆರ್. ಕೇಂದ್ರ ಮಂತ್ರಿಗಳು ಮತ್ತು ಅಧಿಕಾರಿಗಳ ಹತ್ತಿರ ಕೂಡ ಮಾತನಾಡಿದೆ. ನಂತರ ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ತಂದು ಹಿಂದೆ ಶ್ರೀ ಮಾನ್ ದೇವರಾಜ್ ಅರಸ್‌ರವರು ಇದರ ಬಗ್ಗೆ ಸಲಹೆ ಇಲ್ಲ ಎಂದು ಉತ್ತರ ಕೊಟ್ಟಿರತಕ್ಕಂಥಾದ್ದನ್ನು ಅಮೆಂಡ್‌ಮೆಂಟ್ ಮಾಡಿಸಿ "ಇದೆ" ಎಂದು ಇದೇ ಅಸೆಂಬ್ಲಿಯಲ್ಲಿ ಹೇಳಿದೆ. ವಾಸ್ತವಿಕವಾಗಿ ಆಮೇಲೆ ಈ ಫಿಷರೀಸ್ ಕಾಲೇಜನ್ನು ಓಪನ್ ಮಾಡಿರುವುದನ್ನು ಅವರೇ ನೋಡಿರುವಾಗ ಅವರ ಪ್ರಶ್ನೆಗೆ ಉತ್ತರ ಅಲ್ಲಿಯೇ ಸಿಕ್ಕುತ್ತದೆ. ಆದುದರಿಂದ ಅವರು ಹೇಳಿರುವ ವಿಚಾರದಲ್ಲಿ ಅಂದರೆ ಮಂತ್ರಿಗಳು ಟೂರ್ ಮಾಡುತ್ತಾರೆ, ಸುಮ್ಮಸುಮ್ಮನೆ ಬರುತ್ತಾರೆ ಎನ್ನುವ ವಿಷಯದಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದನ್ನು ಈ ದಿವಸ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಎಸ್. ಕೆ. ಅಮೀನ್:— ಫಿಷರೀಸ್ ಟ್ರೈನಿಂಗ್ ಪ್ರೊಸೆಸ್ ಸೆಂಟರನ್ನು ಅಗ್ರಿಕಲ್‌ಚರ್ ಸೈನ್ಸ್ ಕಾಲೇಜಿಗೆ ಕೊಟ್ಟಿದ್ದೀರಲ್ಲಾ, ಅದರಿಂದ ಹೆಚ್ಚಿನ ಪ್ರಯೋಜನವಾಗಬಹುದಲ್ಲವೆ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ? ಫಿಷರೀಸ್ ಟ್ರೈನಿಂಗ್ ಪ್ರೊಸೆಸ್ ಸೆಂಟರನ್ನು ಅಗ್ರಿಕಲ್‌ಚರ್ ಯೂನಿವರ್ಸಿಟಿಯಲ್ಲೇ ತೆರೆಯುವುದರಿಂದ ಬಹಳ ಹೆಚ್ಚಿನ ಪ್ರಯೋಜನ ಇದೆ. ಈ ಫಿಷರೀಸ್ ಟ್ರೈನಿಂಗ್ ಕಾಲೇಜು ಇಂಡಿಯಾದಲ್ಲೇ ಏತಕ್ಕೆ ಜಪಾನ್ ಹೊರತು ಇದು ಒಂದೇ ಇರುವುದು. ಅದು ಬೇರೆ ಕಡೆಗಳಲ್ಲಿ ಇಲ್ಲ. ಇವರಿಂದ ಜಪಾನ್ ದೇಶವು ಕೂಡ ಅಭಿವೃದ್ಧಿ ಪಡೆದಿದೆ. ಈಗ ಆ ವಿಚಾರಕ್ಕೆ ಹೋಗುವುದು ಬೇಡ.

ಇನ್ನು ಫಿಷರೀಸ್ ಹಾರ್ಬರ್‌ನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ ಸರ್ಕಾರದವರು ಈ ವರ್ಷ ನವಂಬರ್ ತಿಂಗಳಲ್ಲಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಒಂದು ಅಲಾಟ್‌ಮೆಂಟ್ ನಮಗೆ ಬಂದಿದೆ. ಆ ವೇಳೆಗೆ ನಾವು ಫಿಷರೀಸ್ ಹಾರ್ಬರ್ಸ್‌ನ್ನು ಕಾರವಾರ, ಮುಲ್ಕಿ, ಭಟ್ಕಳ ಮತ್ತು ಹೊನ್ನಾವರ ಕುಂದಾಪುರ, ಮುಂತಾದ ಕಡೆಗಳಲ್ಲಿ ಯೋಜನೆ ಹಾಕಿ ಅದಕ್ಕೆ ಸೌಕರ್ಯಗಳನ್ನು ಒದಗಿಸತಕ್ಕಂಥ ಒಂದು ಏರ್ಪಾಡನ್ನು ಮಾಡಿದ್ದೇವೆ ಮಲ್ಪೆ ಮತ್ತು ಹೊನ್ನಾವರ ಈ ಎರಡು ಕಡೆಗಳಲ್ಲೂ ಫಿಷರೀಸ್ ಹಾರ್ಬರ್ಸ್‌ನ್ನು ಮಾಡಬೇಕು ಅಂತ ಹೇಳಿ ಇಂಡೋಪೋಲ್ ಸಂಸ್ಥೆಯವರು ಕೊಟ್ಟಿರತಕ್ಕಂಥ ವರದಿಯ ಮೇಲೆ ಹೊನ್ನಾವರ ಮೀನುಗಾರಿಕೆ ಬಂದರು ಮತ್ತು ಇಂಪೋರ್ಟಿಂಗ್ ಇನ್‌ವೆಸ್ಟ್‌ಮೆಂಟ್ ಸಂಸ್ಥೆಯವರು ಕೊಟ್ಟಿರುವ ವರದಿಯ ಮೇಲೆ ಮಲ್ಪೆ ಬಳಿ ಕಟ್ಟಿರತಕ್ಕಂಥ ಮೀನುಗಾರಿಕೆ ಬಂದರನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಕೇಂದ್ರ ಸರ್ಕಾರದವರು ಯು. ಎನ್. ಡಿ. ಪಿ. ಸಂಸ್ಥೆಯವರ ಮುಖಾಂತರ ಅದನ್ನು ಈಗಾಗಲೇ ಸರ್ವೆ ಮಾಡಿಸಿ ಪ್ರಾಜೆಕ್ಟ್ ರಿಪೋರ್ಟ್ ಪೂರ್ತಿ ಆಗಿವೆ ಎನ್ನತಕ್ಕಂಥ ವಿಷಯದಲ್ಲಿ ನನಗೆ ವರದಿ ಬಂದಿದೆ. ಅವುಗಳನ್ನು ಮಂಜೂರ್ಮಾಡಿ ಮಲ್ಪೆ ಮತು ಹೊನ್ನಾವರದಲ್ಲಿ ಫಿಷರೀಸ್ ಹಾರ್ಬರ್ಸ್‌ನ್ನು ಮಾಡಬೇಕು ಎನ್ನುವ ಕಾರ್ಯ ತೀವ್ರವಾಗಿ ನಡೆದಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ,

ಈ ವಿಷಯದಲ್ಲಿ ಶ್ರೀಮಾನ್ ಭಾಸ್ಕರಶೆಟ್ಟರು ಮಾತನಾಡಿದಾಗ ನಾನು ಬಹಳವಾಗಿ ಹೆದರುವಂತೆ ಮಾತನಾಡಿದರು. ಇದು ಹೇಗೆ ಎಂದರೆ ಅಡದ್ದಕ್ಕೆ ಏನಪ್ಪಣೆ ಎಂದರೆ ಬಾಯಿಗೆ ಬಂದದ್ದೇ ಎಂಬ ನಾಣ್ಣುಡಿಯಂತೆ ಇಲ್ಲಿ ಬಹಳವಾಗಿ ಶ್ರೀ ಭಾಸ್ಕರಶೆಟ್ಟರು ಹೇಳಿದರು. ನಮ್ಮ ಮೀನುಗಾರಿಕೆ ಬಾಬು ಗಳಿಗಾಗಿ ಸುಮಾರು ೩೫ ಲಕ್ಷ ಕೊಟ್ಟುದರದಲ್ಲಿ ಐದು ಲಕ್ಷದಷ್ಟು ಮಾತ್ರ ಖರ್ಚುಮಾಡಿದ್ದಾರೆ ಎಂದು ಇಲ್ಲಿ ಹೇಳಿದರು. ಸೆಂಟ್ರಲ್ ಸ್ಟಾನ್‌ಡರ್ಡ್ ಸ್ಕೀಂಸ್‌ಗಳಿಗಾಗಿ ಕೇಂದ್ರ ಸರ್ಕಾರದಿಂದ ಸುಮಾರು ೩೫ ಲಕ್ಷ ಬರಬೇಕಾಗಿದ್ದರಲ್ಲಿ ಇದುವರೆಗೆ ಮೀನುಗಾರರ ಸಹಾಯಕ್ಕಾಗಿ ೨೫ ಲಕ್ಷ ಬಂದಿದೆ, ಅದರಲ್ಲಿ ಇದುವರೆಗೆ ಹತ್ತು ಲಕ್ಷ ಖರ್ಚಾಗಿದೆ ಎನ್ನುವ ಲೆಕ್ಕ ಬಂದಿದೆ. ಒಟ್ಟು ಎಷ್ಟು ಖರ್ಚಾಗಿದೆ ಮತ್ತು ಎಷ್ಟು ಉಳಿದಿದೆ ಎಂದು ಹೇಳಬೇಕಾದರೆ ಈ ತಿಂಗಳಲ್ಲಿ ಆಖೈರು ಲೆಕ್ಕ ಬರುತ್ತದೆ. ಇದು ಬಂದ ಮೇಲೆ ಎಷ್ಟು ಖರ್ಚಾಗಿದೆ ಎನ್ನುವುದು ಗೊತ್ತಾಗುತ್ತವೆ. ಈ ಮಧ್ಯದಲ್ಲಿ ಕೇಂದ್ರ ಸರ್ಕಾರದ ಮೀನುಗಾರಿಕೆ ಮಂತ್ರಿಗಳಾದ ಶ್ರೀಮಾನ್ ಸಿಂಧೆಯವರು ನಮ್ಮ ರಾಜ್ಯದ ಮೇಲೆ ಬಹಳ ಕರುಣೆ ಇಟ್ಟು ನಮ್ಮ ರಾಜ್ಯದಲ್ಲಿ ಮೀನುಗಾರರ ಸಹಾಯಕ್ಕಾಗಿ ಮತ್ತು ಬಂದರುಗಳ ಏರ್ಪಾಡುಗಳಿಗಾಗಿ ಆಸಕ್ತಿವಹಿಸಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ನಮಗೆ ಇನ್ನು ಹೆಚ್ಚು ಹಣ ಬೇಕಾದರೆ ಕೇಳಿಕೊಡುತ್ತೇವೆಂದು ಹೇಳಿದ್ದರು. ಇದಕ್ಕಾಗಿ ನಾವು ಒಂದು ಕ್ರಾಷ್ ಪ್ರೋಗ್ರಾಂ ಎಂದು ಹಾಕಿಕೊಂಡು ಸುಮಾರು ೨೨ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ. ಇದರಲ್ಲಿ ಹಿಪ್ ಆಕ್ಷನ್ ಸಲುವಾಗಿ, ಎಲೆಟ್ರಿಕ್‌ಸಿಟಿ ಸಲುವಾಗಿ, ವಾಟರ್ ಸಪ್ಲೈ ಸಲುವಾಗಿ ಮತ್ತು ಜೆಟ್ಟಿಸ್ಕೀಂಗಾಗಿ ಸುಮಾರು ೧.೮೨ ಲಕ್ಷ ಇರುವ ಒಂದು ಯೋಜನೆ ಮಾಡಿ ಕಳುಹಿಸಲಾಗಿದೆ, ಇದನ್ನು ಮಂಗಳೂರಿನಲ್ಲಿ ಮಾಡಬೇಕೆಂದು ಇದೆ. ಮಲೆ ಬಂದರಿಗಾಗಿ ೧.೧೪ ಲಕ್ಷ ಕುಂದಾಪುರದಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ಯೋಜನೆ, ಬಟ್ಕಲ್, ಹೊನ್ನಾವರ ಹಾಗೂ ಕದಿರಿ ಇವೆಲ್ಲಾ ಸೇರಿ ಒಟ್ಟು ಸುಮಾರು ೨೨ ಲಕ್ಷ ರೂಪಾಯಿಗಳ ಸ್ಕೀಂನಲ್ಲಿ ಕೆಲವು ಕೆಲಸಗಳನ್ನು ತೆಗೆದು ಕೊಳ್ಳಬೇಕೆಂದು ಇದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದರಲ್ಲಿ ಕೇಂದ್ರದವರು ಸುಮಾರು ಹತ್ತು ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತಾರೆ ಎನ್ನುವ ಭರವಸೆಯೂ ನಮಗೆ ಇದೆ. ಕೇಂದ್ರದ ಮಂತ್ರಿಗಳು ಇಲ್ಲಿಗೆ ಬಂದಿದ್ದಾಗ ಈಚೆಗೆ ಇಂತಹ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ. ಆಹರೇ ಹೇಳಿದಂತೆ ನಮ್ಮ ರಾಜ್ಯದ ಸಮುದ್ರದಲ್ಲಿ ಹೇರಳವಾದ ಮೀನುಗಳಿವೆ, ಇವನ್ನು ಹಿಡಿಯಲು ಅನುಕೂಲವಾಗುವಂತೆ ಮೆಕನೈಸ್ಡ್ ಬೋಟ್ಸ್‌ಗಳನ್ನು ಕೊಳ್ಳಲು ಮತ್ತು ಡೀಪ್‌ಸೀ ಫಿಷಿಂಗ್ ಗಾಗಿ ಬೋಟುಗಳನ್ನು ತೆಗೆದುಕೊಳ್ಳಲು ಸುಮಾರು ೭೫೦ ದೋಣಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ ಮತ್ತು ಇಂತಹ ಕೆಲಸಗಳನ್ನು ಹೆಚ್ಚಾಗಿ ಮಾಡಬೇಕು ಎಂದು ನಾಲ್ಕನೇ ಯೋಜನೆಯಲ್ಲಿ ೭೫೦ ದೋಣಿಗಳನ್ನು ಕೊಳ್ಳಲು ವ್ಯವಸ್ಥೆ ಮಾಡಬೇಕೆಂದೂ ಇದೆ. ಇವೆಲ್ಲಾ ಆಲ್ ಇಂಡಿಯಾ ಸ್ಟಾನ್ಡರ್ಡ್ ಸ್ಕೀಂಗಳ ಮೂಲಕ ತೆಗೆದುಕೊಳ್ಳಲು ಹೆಚ್ಚು ಹಣ ಕೊಟ್ಟು ಸುಮಾರು ೧೦೦೦ ಯಾಂತ್ರಿಕ ದೋಣಿಗಳು ಎಂದು ಇರುವುದನ್ನು ಇನ್ನು ಮುಂದೆ ೨೦೦೦ ದೋಣಿಗಳವರೆಗೆ ಹೆಚ್ಚು ಮಾಡಿಕೊಳ್ಳಬೇಕೆಂದು ಕೇಂದ್ರದವರು ಸೌಕರ್ಯಗಳನ್ನು ಮಾಡಿಕೊಡುತ್ತಿದ್ದಾರೆ, ಇದರ ಜೊತೆಗೆ ಮೈನರು ಪೋರ್ಟುಗಳ ಅಭಿವೃದ್ಧಿ, ಜೆಟ್ಟೀ ಸ್ಕೀಂ, ಡೀಪ್ ಸೀ ಫಿಷಿಂಗ್ ಯಂತ್ರಗಳು ಇವೆಲ್ಲ ಸೌಕರ್ಯಗಳನ್ನು ಒದಗಿಸಿ ಇನ್ನೂ ಹೆಚ್ಚು ಮೀನುಗಳನ್ನು ಹಿಡಿಯಬೇಕೆಂದು ಅನುಕೂಲ ಮಾಡಿಕೊಡಲಾಗಿದೆ. ಡೀಪ್ ಸೀ ಫಿಷಿಂಗಿಗೆ ಟ್ರಾಲಿಗಳನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿ ಸರ್ಕಾರದವರೇ ಪರದೇಶಗಳಿಂದ ಬಂದಿದ್ದ ಎರಡು ಟ್ರಾಲಿಗಳನ್ನು ಸುಮಾರು ೧೭ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಡೆದುಕೊಂಡಿದ್ದೇವೆ. ಇದರಲ್ಲಿ ಒಂದು ಟ್ರಾಲಿ ಬಂದಿದೆ. ಇನ್ನೊಂದು ಬರಬೇಕಾಗಿದೆ. ಇಂಡಿಯಾ ಸರ್ಕಾರದವರು ಈಚೀಗೆ ೩೦೦ ಇಂತಹ ಮೆಕನೈಸ್ಡ್ ಟ್ರಾಲಿಗಳನು ತರಿಸಿದ್ದಾರೆ. ಇವುಗಳ ಪೈಕಿ ನಮ್ಮ ರಾಜ್ಯಕ್ಕೆ ಸುಮಾರು ೩೫ ಟ್ರಾಲರ್ ಗಳನ್ನು ನಾಲ್ಕನೇ ಯೋಜನೆ ಅವಧಿಯೊಳಗೆ ತರಿಸಲು ಪ್ರಯತ್ನ ಮಾಡುತ್ತಿದ್ದೇವೆ, ಆದರೆ ಇವುಗಳನ್ನು ನಡೆಸಬೇಕಾಗಿದ್ದರೆ ಸಾಕಷ್ಟು ತರಬೇತಿ ಪಡೆದ ಸಿಬ್ಬಂದಿ ವರ್ಗಬೇಕು. ಇದಕ್ಕಾಗಿ ಈ ಜನ ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ ಎಂದು ಇವರುಗಳಿಗೆ ಸೂಕ್ತವಾದ ಶಿಕ್ಷಣಕೊಡಲು -ಆದಷ್ಟು ಜಾಗ್ರತೆಯಾಗಿ ಉಪಾಧ್ಯಾಯರುಗಳನ್ನು ನೇಮಿಸಿ ಶಿಕ್ಷಣ ಕೊಡಲು ಪ್ರಯತ್ನಕೂಡ ಮಾಡಲಾಗುತ್ತಿದೆ. ಇದರ ಬಗ್ಗೆ ಯಾವ ರೀತಿ ಪ್ರಗತಿಯಾಗಿದೆ ಎನ್ನುವುದರ ನಿಜಾಂಶವನ್ನು ಸ್ವಲ್ಪ ಪರಿಶೀಲನೆ ಮಾಡಿದ್ದರೆ ಮಾನ್ಯ ಸದಸ್ಯರು ಇಷ್ಟು ಟೀಕೆಮಾಡಲು ಅವಕಾಶವೇ ಇರುತ್ತಿರಲಿಲ್ಲ. ಸರ್ಕಾರದವರು ಇದುವರಗೆ ಮೀನುಗಾರಿಕೆ ಇಲಾಖೆಯಲ್ಲಿ ಏನೇನು ಮಾಡಿದ್ದಾರೆ ಎನ್ನುವುದು ತಮಗೆಲ್ಲರಿಗೂ ಗೊತ್ತೇ ಇದೆ. ಈ ವಿಷಯದಲ್ಲಿ ಡೆವಲಪ್‌ಮೆಂಟ್ ಬಹಳ ನಿಧಾನವಾಗಿದೆ ಎಂದು ಹೇಳಿದರೆ ಅದಕ್ಕೆ ಕಾರಣಗಳೇ ಬೇರೆ. ಕೆಲವು ಕಾಲದಿಂದ ಬಹಳ ಹಿಂದುಳಿದಿದ್ದ ನಮ್ಮ ಜನಕ್ಕೆ ಈಗ ಹೆಚ್ಚು ಸೌಕರ್ಯಗಳನ್ನು ಮಾಡಿಕೊಡುತ್ತಿದ್ದೇವೆ. ನಮ್ಮ ರಾಜ್ಯವನ್ನು ಕೊಚ್ಚಿನ್ ಹಾಗೂ ಇನ್ನಿತರ ರಾಜ್ಯಗಳೊಡನೆ ಹೋಲಿಸಿ ಅಲ್ಲಿ ಕೆಲಸಗಳು ಹೇಗೆ ನಡೆಯುತ್ತಿವೆ ಮತು ಇಲ್ಲಿ ಹೇಗೆ ನಡೆಯುತ್ತಿವೆ ಎನ್ನುವುದನ್ನು ಸ್ವಲ್ಪ ವಿಮರ್ಶೆಮಾಡಿ ನೋಡಿದರೆ, ಮೆಕನೈಸ್ಡ್ ಬೋಟ್ಸ್‌ಗಳನ್ನು ಉಪಯೋಗ ಮಾಡುವುದರಲ್ಲಿ ಹಾಗೂ ಇನ್ನಿತರ ಕೆಲಸಗಳನ್ನು ಮಾಡುವುದರಲ್ಲಿ ನಮ್ಮ ರಾಜ್ಯದ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಕ್ಯಾಬಿನೆಟ್‌ನವರು ಬಹಳ ಸಹಾಯ ಮಾಡುತ್ತಿದ್ದಾರೆ ಎಂದು ತಮಗೆ ತಿಳಿಸಲು ನನಗೆ ಬಹಳ ಸಂತೋಷ ವಾಗುತ್ತದೆ. ನಮ್ಮ ಕರಾವಳಿಯಲ್ಲಿ ಸುಮಾರು ಒಂದೂಕಾಲು ಲಕ್ಷ ಟನ್‌ಗಳಷ್ಟು ಮೀನುಗಳು ಇದು ವರೆಗೆ ಸಿಕ್ಕಿವೆ. ಇದನ್ನು ನಾಲ್ಕನೆ ಯೋಜನೆ ಮುಗಿಯುವುದರೊಳಗೆ ಸುಮಾರು ಆರು ಲಕ್ಷ ಟನ್‌ಗಳಷ್ಟು ಮೀನುಗಳನ್ನು ತೆಗೆಯಬೇಕೆಂದು ಏರ್ಪಾಡು ಇದೆ. ಇದಕ್ಕೆ ಬೇಕಾದಷ್ಟು ರಸ್ತೆಗಳನ್ನು ಫಿಷರಿ ರೋಡು ಗಳೆಂದು ಮಾಡಬೇಕಾಗಿದೆ. ಈಗಾಗಲೇ ಸುಮಾರು ೭೫ ಮೈಲಿಗಳ ಉದ್ದ ರಸ್ತೆಗಳನ್ನು ದಕ್ಷಿಣ ಕನಡ್ನ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗಿದೆ, ಇಂತಹ ರಸ್ತೆಗಳನ್ನು ಇನ್ನೂ ಹೆಚ್ಚು ಮಾಡಬೇಕೆಂದು ಆಯಾ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಮಾಡಬೇಕೆಂದು ಸರ್ಕಾರ ೫೦೦ ರೂಪಾಯಿ ಕೊಟ್ಟು ತಾಲ್ಲೂಕ್ ಬೋರ್ಡ್‌ಗಳವರು ೨೫೦ ರೂಪಾಯಿಗಳು ಕೊಡುವುದು ಎಂದು ಮಾಡಿ ಇಲ್ಲಿ ರಸ್ತೆಗಳನ್ನು ಮಾಡಿಸ ಬೇಕೆಂದು ಪ್ರಯತ್ನ ನಡೆದಿದೆ. ಆದರೆ ಇಂತಹ ರಸ್ತೆಗಳನ್ನು ಮಾಡುವುದರಲ್ಲಿ ತಾಲ್ಲೂಕು ಬೋರ್ಡ್‌ಗಳ ವರು ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ನಾವು ಇಂತಹ ರಸ್ತೆಗಳನ್ನು ಪಿಡಬ್ಲ್ಯೂಡಿ ಯವರೇ ತೆಗೆದುಕೊಂಡು ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡಿದ್ದೇವೆ. ಇದನ್ನು ಇಲ್ಲಿರುವ ಫಿಷರಿ ಅಡ್ವೈಸರಿ ಬೋರ್ಡಿನವರೂ ಒಪ್ಪಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ಇನ್ನೂ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಒಳನಾಡಿನ ಮೀನುಗಳನ್ನು ಅಭಿವೃದ್ಧಿಪಡಿಸಬೇಕೆಂದು ಇಲ್ಲಿ ಅನೇಕ ಸ್ನೇಹಿತರು ಸಲಹೆಮಾಡಿದ್ದಾರೆ. ಇದಕ್ಕಾಗಿ ಈಗ ಇರತಕ್ಕ ಸೌಕರ್ಯಗಳನ್ನು ಹಾರ್ನೆಸ್ ಮಾಡಿ ಇನ್ನೂ ಇದರ ಬಗ್ಗೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ಒಳನಾಡಿನ ಮೀನನ್ನು ಬೆಳೆಸುವ ಕಾರ್ಯಕ್ರಮ ದಲ್ಲಿ ಮೊದಲಿಗೆ ಮೀನಿನ ಮರಿಗಳನ್ನು ಹೆಚ್ಚು ಮಾಡಬೇಕು ಮತ್ತು ಇದನ್ನು ಪೋಷಿಸಬೇಕಾದರೆ ನೀರಿರತಕ್ಕ ಕಡೆಗಳಲ್ಲಿ ಮರಿಗಳನ್ನು ಬಿಡಬೇಕು ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ನಮ್ಮ ಸಂಸ್ಥಾನದಲ್ಲಿ ದೇವರ ಸುಯೋಗದಿಂದಲೋ ಏನೋ ಸುಮಾರು ೪೦ ಲಕ್ಷ ಎಕರೆಯಷ್ಟು ನೀರಿರುವ ಪ್ರದೇಶಗಳಿವೆ. ಇದರಲ್ಲಿ ಹತ್ತು ಲಕ್ಷ ಎಕರೆಯಷ್ಟು ನೀರಿರುವ ಪ್ರದೇಶ ನಮ್ಮ ಮೈಸೂರಿನಲ್ಲೇ ಇವೆ. ಇಪ್ಪತ್ತು ಸಾವಿರ ಸಣ್ಣ ಸಣ್ಣ ಕೆರೆಗಳಿವೆ ಸುಮಾರು ಮೂರು ಸಾವಿರ ಎಕರೆ ಪ್ರದೇಶಗಳಿಗೆ ರಿಸರ್ವಾಯರು ಗಳಿವೆ, ಇದಲ್ಲದೆ ನದಿ ನೀರಿನ ಪ್ರದೇಶಗಳು, ಡೊಂಡಗಳು ಹಾಗೂ ಬಾವಿಗಳು ಇವೆ. ಸುಮಾರು ಎರಡೂವರೆ ಲಕ್ಷ ಎಕರೆ ನೀರಿರುವ ಪ್ರದೇಶಗಳಲ್ಲಿ ಮೀನಿನ ಮರಿಗಳನ್ನು ಬೆಳೆಸಲು ಸಾಧ್ಯವಿದೆ. ಇದಕ್ಕೆ ಸುಮಾರು ೨೦ ಕೋಟಿಯಷ್ಟು ಮರಿಗಳು ಬೇಕಾಗುತ್ತದೆ ಎಂದು ಇದಕ್ಕೆ ಒಂದು ಪ್ರೋಗ್ರಾಂ ತಯಾರು ಮಾಡಿದ್ದೇವೆ, ಇದರಂತೆ ಮಾಡಿದರೆ ಹೆಚ್ಚು ಮೀನಿನ ಮರಿಗಳನ್ನು ಒಳನಾಡಿನಲ್ಲಿ ಮಾಡಲು ಸಾಧ್ಯವಾಗು ತ್ತದೆ. ನಮ್ಮಲ್ಲಿ ಇದುವರೆಗೆ ಮೀನಿನ ಮರಿಗಳ ಉತ್ಪಾದನೆ ಯಾವ ರೀತಿ ಇದೆ ಎಂದು ನೋಡಿದರೆ, ೧೯೬೭-೬೮ರಲ್ಲಿ ೨.೨೨ ಲಕ್ಷ ಮರಿಗಳಾದವು, ೧೯೬೮-೬೯ರಲ್ಲಿ ೧.೮೦ ಲಕ್ಷ ಮರಿಗಳಾದವು, ಈ ವರ್ಷ ಎಂದರೆ ೧೯೬೯-೭೦ರಲ್ಲಿ ೩.೫೯ ಲಕ್ಷ ಮರಿಗಳು ಉತ್ಪಾದನೆಯಾದವು. ಇಷ್ಟು ಮೀನಿನ ಮರಿಗಳನ್ನು ಇಲ್ಲಿ ತಯಾರು ಮಾಡಿದ್ದೇವೆ. ಇಂತಹ ಮೀನು ಮರಿಗಳನ್ನು ಇನ್ನೂ ಹೆಚ್ಚಿಸಬೇಕಾದರೆ ಬೇರೆ ಕಡೆಗಳಿಂದಲೂ ತರಿಸಬೇಕಾಗುತ್ತದೆ. ಕಲ್ಕತ್ತಾ ಹಾಗೂ ಮದ್ರಾಸ್ ಕಡೆಗಳಿಂದ ತರಿಸುತ್ತಿದ್ದೇವೆ ಮತ್ತು ಈ ಮೂಲಕ ಮೀನಿನ ಮರಿಗಳನ್ನು ಹೆಚ್ಚು ಮಾಡಬೇಕೆಂದು ಇದೆ. ಮೀನಿನ ಮರಿಗಳಲ್ಲಿ ನಮ್ಮ ರಾಜ್ಯದಲ್ಲಿ ಸ್ವಯಂ ಪರಿಪೂರ್ಣತೆ ಪಡೆಯಬೇಕಾದರೆ ಸುಮಾರು ೧.೩೦ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಅಂದರೆ ವಾಣಿವಿಲಾಸ ಸಾಗರದಲ್ಲಿ, ಶಾಂತಿಸಾಗರ, ತುಂಗಭದ್ರಾ, ಕೃಷ್ಣರಾಜಸಾಗರ ಮತ್ತು ಗಂಗಾವತಿ ಇಲ್ಲೆಲ್ಲ ಫಿಷ್ ಫಾರಂ ಎಂದು ಮಾಡಬೇಕಾಗಿದೆ. ಗಾಯತ್ರೀ ಜಲಾಶಯ ಎಂದು ಹೊಸದಾಗಿ ಇದೆ. ಇಲ್ಲೆಲ್ಲಾ ಮರಿಗಳನ್ನು ಹೇಗೆ ಮಾಡಬಹುದು ಎನ್ನುವುದಕ್ಕೆ ಒಂದು ಮಾಸ್ಟರು ಪ್ಲಾನು ತಯಾರುಮಾಡಿ ಇದರಿಂದ ಹೆಚ್ಚು ಮರಿ ಗಳನ್ನು ಉತ್ಪಾದನೆ ಮಾಡಿ ಎಲ್ಲ ಕಡೆಗಳಿಗೂ ಹಂಚುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ, ಗ್ರೋಮೋರ್ ಫುಡ್ ಕ್ಯಾಂಪೇನ್ ಎಂದು ಆಹಾರದ ಸಮಸ್ಯೆಯನ್ನು ಪರಿಹಾರ ಮಾಡುವಾಗ ಮೀನು ಮರಿಗಳನ್ನು ಹೆಚ್ಚು ಮಾಡಲು ತಾಲ್ಲೂಕು ಮಟ್ಟದಲ್ಲಿ ಪಂಚಾಯತಿಗಳ ಮಟ್ಟದಲ್ಲಿ ನೀರಾವರಿ ಮಾಡುವ ಪ್ರದೇಶಗಳಲ್ಲಿ ಮರಿಗಳ ಉತ್ಪಾದನೆ ಮಾಡಬೇಕಾಗಿದೆ. ನಮಗೆ ಈಗ ಮೀನು ಮರಿಗಳು ಬೇಕು ಎನ್ನುವ ಬೇಡಿಕೆ ಬರಬರುತ್ತಾ ಜಾಸ್ತಿಯಾಗುತ್ತಾ ಬರುತ್ತಿದೆ. ಇಂತಹ ಜನರ ಅಪೇಕ್ಷೆಯನ್ನು ಪೂರೈಸು ವುದಕ್ಕೆ ಆಗುತ್ತಿಲ್ಲ. ಇದಕ್ಕಾಗಿ ದೇಶದಲ್ಲಿ ಇನ್ನೂ ಹೆಚ್ಚು ಮೀನಿನ ಮರಿಗಳನ್ನು ತಯಾರು ಮಾಡ ಬೇಕಾಗಿದೆ ಮತ್ತು ಇದಕ್ಕಾಗಿ ಇನ್ನೂ ಹೆಚ್ಚು ಹಣ ಕೊಡಬೇಕಾಗುತ್ತದೆ. ಮತ್ತು ಮೀನಿನ ಮರಿಗಳನ್ನು ಜಾಸ್ತಿ ಮಾಡಿಕೊಂಡ ಮೇಲೆ ಅವುಗಳನ್ನು ಪಾಲನೆ ಮಾಡಲು ಪ್ರತಿ ತಾಲ್ಲೂಕ್ ನಲ್ಲಿಯೂ ಒಂದೊಂದು ಫಿಷ್ ನರ್ಸರಿ ಕೇಂದ್ರಗಳನ್ನು ಮಾಡಬೇಕೆಂದಿದ್ದೇವೆ. ಒಂದು ತಿಂಗಳು ಮರಿಗಳನ್ನು ಹಿಡಿದು ಮೂರು ತಿಂಗಳವರೆಗೆ ಬೆಳಸಿ ನಂತರ ನೀರಿನಲ್ಲಿ ಬಿಡುವುದಕ್ಕೆ ಸಾಧ್ಯ ಎಂದು ತಿಳಿದು

ಕೊಂಡು ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ಫಿಷ್ ನರ್ಸರಿಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಐಸ್ ಪ್ಲಾಂಟ ಮತ್ತು ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳು ಇವೆ. ಕೊಡಗಿನಲ್ಲಿಯೂ ಸಹ ಇದೆ. ಇನ್ನು ಮುಂದೆ ಬೆಂಗಳೂರಿನಲ್ಲಿರುವ ನಾಗರೀಕರಿಗೆ ಅಂದರೆ ಪ್ರತಿಯೊಂದು ಮನೆಗೂ ಕೂಡ ಮೀನನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದಿದ್ದೇವೆ. ಅದರಂತೆ ಅಸೆಂಬ್ಲಿ ಮೆಂಬರ್‌ಗಳಿಗೂ ಕೂಡ ಅಸೆಂಬ್ಲಿ ನಡೆಯುವ ಕಾಲದಲ್ಲಿ ಒಂದು ಫಿಷ್ ಬೂತನ ಓಪನ್ ಮಾಡಿ ಮೀನನ್ನು ಆಹಾರವನ್ನು ಒದಗಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಇಷ್ಟು ವಿಷಯಗಳನ್ನು ಹೇಳಿದರೆ ಸಾಕು ಎಂದು ಕಾಣುತ್ತದೆ.

7-30 P.M. :

ಶ್ರೀ ಬಾಪುಗೌಡ ;—ಹೈದರಾಬಾದ್ ಕರ್ನಾಟಕದಲ್ಲಿ ಹರಿಯುತ್ತಿರುವ ಕೃಷ್ಣಾ ಮತ್ತು ಭೀಮಾ ನದಿಗಳಲ್ಲಿಯೂ ಕೂಡ ಮೀನನ್ನು ಬೆಳಸುವುದಕ್ಕೆ ಏರ್ಪಾಡು ಮಾಡಲಾಗುತ್ತದೇಯೋ

ಶ್ರೀ ಎಚ್. ಸಿ. ಲಿಂಗಾರೆಡ್ಡಿ ;—ಎಲ್ಲಾ ರಿಜರ್‌ವಾಯರ್‌ಗಳಲ್ಲಿಯೂ ಮೀನನ್ನು ಬೆಳೆಸಬೇಕೆಂದು ತೀರ್ಮಾನ ಮಾಡಿದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ ೮ ಮೀನು ಅಭಿವೃದ್ಧಿ ಸಹಕಾರ ಸಂಘಗಳು ಇವೆ ಎಂದು ಗೊತ್ತಾಗಿದೆ. ಅದರಂತೆ ಬೆಂಗಳೂರಿನಲ್ಲಿಯೂ ಕೂಡ ೮ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳು ಇವೆ ಎಂದು ಗೊತ್ತಾಗಿದೆ. ಒಳನಾಡಿನಲ್ಲಿರತಕ್ಕಂಥ ನದಿಗಳು, ಕೆರೆಗಳು, ಬಾವಿಗಳು ಮತ್ತು ಹೊಂಡಗಳಲ್ಲಿ ಮೀನನ್ನು ಬಿಟ್ಟು ಅವುಗಳನ್ನು ಅಭಿವೃದ್ಧಿ ಪಡಿಸಬೇಕೆಂದಿರುವಂತೆ ಕೃಷ್ಣಾ ಮತ್ತು ಭೀಮಾ ನದಿಗಳಿಗೆ ಸಂಬಂಧಪಟ್ಟಂತೆ ಇರುವ ರಿಜರ್‌ವಾಯರ್‌ಗಳಲ್ಲಿಯೂ ಕೂಡ ಮೀನಿನ ಅಭಿವೃದ್ಧಿ ಮಾಡಬೇಕೆಂದು ಇದ್ದೇವೆ. ಮೀನನ್ನು ಬೆಳಸತಕ್ಕಂಥ ಆಸಕ್ತಿ ಇರುವ ಬೆಸ್ತರಿಗೆ ಕೂಡ ಮೀನಿನ ಮರಿಗಳನು ಒದಗಿಸುವ ಏರ್ಪಾಡು ಮಾಡುವವರಿದ್ದೇವೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳಿಗಾಗಿ ಅವರನ್ನು ಮತ್ತೊಮ್ಮೆ ವಂದಿಸಿ ಈ ಬೇಡಿಕೆಯನ್ನು ಎಲ್ಲರೂ ಯುನಾನಿಮಸ್ ಆಗಿ ಒಪ್ಪಬೇಕೆಂದು ಕೇಳಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ ;—೭ ವರ್ಷಗಳ ಹಿಂದೆ ಯಾಂತ್ರೀಕೃತ ದೋಣಿಗಳು ಇರಲಿಲ್ಲ ಈಗ ಸುಮಾರು ೭೫೦ ಯಾಂತ್ರೀಕೃತ ದೋಣಿಗಳನ್ನು ಒದಗಿಸಲಾಗಿದೆ ಮತ್ತು ಮುಂದೆ ಮತ್ತೆ ೨೫೩ ಯಾಂತ್ರೀಕೃತ ದೋಣಿಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿದಿರಿ ಆ ರೀತಿ ಒದಗಿಸುವಾಗ ಬಡ ಮೀನುಗಾರರಿಗೆ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ ;—ಮಾಡೋಣ.

ಶ್ರೀ ಜಿ. ಬಿ. ಶಂಕರರಾವ್ (ಪಶುಸಂಗೋಪನ ಶಾಖೆಯ ರಾಜ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ಪಶುಪಾಲನೆ, ಪಶುವೈದ್ಯಕೀಯ ಮತ್ತು ಹೈನು ಅಭಿವೃದ್ಧಿ ಯೋಜನೆ ಬಗ್ಗೆ ಮಂಡಿರುವ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಲು ಇಚ್ಛೆಪಡುತ್ತೇನೆ. ನನಗೆ ಕೊಟ್ಟಿರುವ ಸಮಯ ಕಡಿಮೆ ಇರುವುದರಿಂದ ಮಾನ್ಯ ಸದಸ್ಯರು ಎತ್ತಿದಂಥ ಸಲಹೆಗಳಿಗೆಲ್ಲಾ ವಿವರವಾಗಿ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಸಾಧ್ಯವಾದಮಟ್ಟಿಗೂ ಮಾನ್ಯ ಸದಸ್ಯರು ಕೇಳಿದಂತಹ ಸಮಸ್ಯೆಗಳಿಗೆಲ್ಲಾ ಸಂಕ್ಷಿಪ್ತವಾಗಿ ಉತ್ತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ತಳಿ ಅಭಿವೃದ್ಧಿ ಯೋಜನೆ ಬಗ್ಗೆ, ಪಶು ಸಂಪತ್ತಿನ ಬಗ್ಗೆ ಪಶುಗಳಿಗೆ ಬರುವ ರೋಗವನ್ನು ತಡೆಗಟ್ಟುವ ಬಗ್ಗೆ, ಕೋಳಿ ಸಾಕುವ ವಿಚಾರದ ಬಗ್ಗೆ, ಅಮೃತ ಮಹಲ್ ಜಮೀನಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರು, ಶ್ರೀ ಗುರೆಡಿ. ಯವರು ಶ್ರೀ ಮಲ್ಲಪ್ಪನವರು ತಳಿ ಅಭಿವೃದ್ಧಿ ವಿಚಾರದಲ್ಲಿ ಇಲಾಖೆಯವರು ಸಾಕಷ್ಟು ಕ್ರಮ ಕೈಗೊಂದಿ ದೇಶದಲ್ಲಿರತಕ್ಕಂಥ ತಳಿಗಳನ್ನು ತೀವ್ರತರವಾಗಿ ಅಭಿವೃದ್ಧಿ ಪಡಿಸಬೇಕೆಂದು ಹೇಳಿದ್ದಾರೆ. ತಳಿ ಅಭಿವೃದ್ಧಿ ಯೋಜನೆ ವಿಚಾರದಲ್ಲಿ ನಾವು ಎರಡು ಕಾರ್ಯಕ್ರಮಗಳನ್ನು ಹೊಂದಿದ್ದೇವೆ. ಒಂದನೆಯದಾಗಿ ವ್ಯವಸಾಯಕ್ಕೆ ಯೋಗ್ಯವಾದಂಥ ಕರಗಳನ್ನ ಉತ್ಪಾದನೆ ಮಾಡುವ ಸಲುವಾಗಿ ಹಳ್ಳಿಕಾರ್, ಕೃಷ್ಣಾತೀರಾ ದೇವಣ್, ಅಮೃತಮಹಲ್ ಮತ್ತು ಕಿಲಾರ್ ಜಾತಿಯ ತಳಿಗಳನ್ನು ಉಳಿಸಿಕೊಂಡು ಬಂದಿದ್ದೇವೆ. ಎರಡ

(ಶ್ರೀ ಜಿ. ಬಿ. ಶಂಕರರಾವ್)

ನೆಯದಾಗಿ ಒಳ್ಳೆಯ ತಳಿಗಳನ್ನು ರೈತರಿಗೆ ಒದಗಿಸುವ ಸಲುವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸೆಲೆಕ್ಟಿವ್ ಬ್ರೀಡ್ ಯೋಜನೆಯ ಮುಖಾಂತರ ಈ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ. ಈ ಕಾರ್ಯಕ್ರಮದ ಅಂಗವಾಗಿ ಅಮೃತಮಹಲ್, ಹಳ್ಳಿಕಾರ್, ಕೃಷ್ಣಾತೀರ್, ದೇವಣಿ ಮತ್ತು ಕಿಲಾರಾ ನಂತಹ ಶ್ರೇಷ್ಠವಾದ ತಳಿಗಳಿಂದ ವೀರ್ಯವನ್ನು ಪಡೆದುಕೊಂಡು ಅದನ್ನು ಕೃತಕ ವೀರ್ಯ ಕೇಂದ್ರದ ಮುಖಾಂತರ ಯಾವ ಯಾವ ರೈತರಿಗೆ ಈ ಜಾತಿಯ ತಳಿಗಳ ವೀರ್ಯದ ಅವಶ್ಯಕತೆ ಇದೆಯೋ ಅವರಿಗೆಲ್ಲಾ ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದರಿಂದ ಸ್ವಾಭಾವಿಕವಾಗಿ ರೈತರೇ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ನಮ್ಮ ಫಾರಮ್‌ಗಳಿಂದ ಒಳ್ಳೆಯ ಬೀಜದ ಹೋರಿಗಳನ್ನು ತಾಲ್ಲೂಕ್ ಬೋರ್ಡಿನ ಮೂಲಕ ರೈತರಿಗೆ ಸಬ್ಸಿಡಿ ರೂಪದಲ್ಲಿ ಹಂಚುವ ವ್ಯವಸ್ಥೆ ಮಾಡಿರುವುದರ ಜೊತೆಗೆ ಅಜ್ಜಂಪುರದ ಫಾರಮ್‌ನಿಂದ ಕೂಡ ಒಳ್ಳೆಯ ತಳಿಗಳನ್ನು ರೈತರಿಗೆ ಕೊಡುವುದಕ್ಕೆ ಯೋಜನೆ ಇಟ್ಟುಕೊಂಡಿದ್ದೇವೆ. ನಮ್ಮ ದೇಶದಲ್ಲಿರತಕ್ಕಂಥ ಶ್ರೇಷ್ಠವಾದಂಥ ತಳಿಗಳು ಏನಿವೆ ಅವುಗಳನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದೇವೆ ಈ ಒಂದು ಕೆಲಸ ಇವತ್ತು ಪ್ರಾರಂಭವಾಗಿಲ್ಲ. ಶತಮಾನಗಳ ಕಾಲದಿಂದಲೂ ಕೂಡ ಅಮೃತಮಹಲ್, ಹಳ್ಳಿಕಾರೆ, ಕೃಷ್ಣಾತೀರೆ, ದೇವಣಿ ಮತ್ತು ಕಿಲಾರ್ ಜಾತಿಯ ತಳಿಗಳನ್ನು ಉಳಿಸಿಕೊಂಡು ಬರಲಾಗಿದೆ. ಈ ರೀತಿ ಉಳಿಸಿಕೊಂಡು ಬರುವುದಕ್ಕೆ ರೈತರು ಕೂಡ ಸಹಕಾರ ಮಾಡಿದ್ದಾರೆ, ನಾವು ಎಷ್ಟು ನಿರೀ ಮಾಡಿದ್ದೆವೋ ಅಷ್ಟರವರೆಗೆ ನಾವು ಈ ತಳಿಗಳನ್ನು ಉಳಿಸಿಕೊಂಡಿದ್ದೇವೆ ಮತ್ತು ಬೆಳೆಸಿದ್ದೇವೆ. ಅದಕ್ಕಾಗಿ ನಮ್ಮ ಮಾನ್ಯ ಸ್ನೇಹಿತರು ಈ ಬಗ್ಗೆ ಕಳವಳ ಪಡುವ ಸಂದರ್ಭ ಏನಿಲ್ಲ. ಅಮೃತಮಹಲ್ ದನಗಳ ವಿಚಾರದಲ್ಲಿ ಶ್ರೀ ರಾಮೇಗೌಡರು ಕೆಲವು ವಿಚಾರಗಳನ್ನು ಹೇಳಿದರು. ಈ ತಳಿಯನ್ನು ಉಳಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳಿದರು. ನಮ್ಮಲ್ಲಿ ಇರತಕ್ಕಂಥ ಕೃತಕ ವೀರ್ಯ ಕೇಂದ್ರಗಳ ಮುಖಾಂತರ ಈ ತಳಿಯ ವೀರ್ಯವನ್ನು ಶೇಖರಣೆ ಮಾಡಿ, ನಂತರ ಅದನ್ನು ಬೇಕಾದಂತಹ ರೈತರಿಗೆ ಒದಗಿಸಲಾಗುತ್ತಿದೆ. ಮತ್ತು ದನಗಳನ್ನು ಯಾವ ರೀತಿ ಅರ್ಥಿಕವಾಗಿ ಅಭಿವೃದ್ಧಿ ಪಡಿಸಬೇಕು ಎಂಬುದನ್ನು ರೈತರಿಗೆ ಅಧಿಕಾರಿಗಳ ಮೂಲಕ ಹೇಳಿಕೊಡಲಾಗುತ್ತಿದೆ.

ತಳಿಯನ್ನು ಸಾಕಷ್ಟು ಉತ್ತಮ ಪಡಿಸುವ ವಿಚಾರದಲ್ಲಿ ೫ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಒಂದು ಸೆಲೆಕ್ಟಿವ್ ಬ್ರೀಡಿಂಗ್ ಮುಖಾಂತರ ೨. Castration of calves, 3. Supply of breading bulls of these breeds, 4. Opening of additional centres, and 5. Betler amenities and care. ಈ ಯೋಜನೆ ಮುಖಾಂತರ ತಳಿ ಉತ್ತಮ ಪಡಿಸುವ ಕಾರ್ಯ ರಾಜ್ಯಾದ್ಯಂತ ನಡೆಯುತ್ತಿದೆ. ಅಮೃತಮಹಲ್ ಬಹಳ ಶ್ರೇಷ್ಠವಾಗ ತಳಿ, ಇದು ಬಹಳ ಭಯಂಕರ ಜಾತಿ. ಇದನ್ನು ಡೆಮಾನ್‌ಸ್ಟ್ರೇಟ್ ಮಾಡಬೇಕಾಗುತ್ತದೆ, ರೇಜಿಂಗ ಬ್ರೀಡಿಗೆ ಸ್ವಲ್ಪ ವಿಸ್ತಾರವಾದ ಕ್ಷೇತ್ರ ಬೇಕು. ಅಲ್ಲಿ ಇದನ್ನು ಡೆಮಾನ್‌ಸ್ಟ್ರೇಟ್ ಮಾಡಬೇಕಾಗುತ್ತದೆ. ಅಮೃತಮಹಲ್ ಕಾವಲು ಜಮೀನು ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಸಾಕಷ್ಟು ಪ್ರಮಾಣದಲ್ಲಿ ಇತ್ತು, ಈಗ ಅದು ಕಡಿಮೆಯಾಗುತ್ತಿದೆ, ಯಾವ ಉದ್ದೇಶಕ್ಕೋಸ್ಕರ ಈ ಇಲಾಖೆಯಲ್ಲಿ ೪ ಲಕ್ಷ ಎಕರೆ ಜಮೀನನ್ನು ಮೀಸಲಾಗಿಟ್ಟಿತ್ತೋ, ಅದು ಈ ಹೊತ್ತು ೭೫ ಸಾವಿರ ಎಕರೆಗೆ ಇಳಿದಿದೆ. ರೈತರೇ ಇವೊತ್ತು ಸಾಗಿಗೋಸ್ಕರ ಆ ಜಮೀನು ಕೊಡಿ ಎಂದು ಕೇಳುತ್ತಿದ್ದಾರೆ. ಅಂಥ ಒಂದು ಪರಿಸ್ಥಿತಿ ಬಂದಿದೆ. ರೇಜಿಂಗ್ ಬ್ರೀಡಿಗೆ ಸಾಕಷ್ಟು ಜಮೀನು ಬೇಕು. ಗ್ರೇಜಿಂಗ್ ಏರಿಯಾ ಇದ್ದರೆ ಅವುಗಳಿಗೆ ಬೇಕಾಗಿರತಕ್ಕಂಥ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸಾಕಷ್ಟು ಜಮೀನು ಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ಲಾರ್ಜ್ ಸೈಜ್ ಶೀಫ್ ಫಾರಂ ಯೋಜನೆ ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದಕ್ಕೆ ೧೦ ಸಾವಿರ ಎಕರೆ ಜಮೀನನ್ನು ಒದಗಿಸುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದಕ್ಕೆ ನಾವು ಆ ೧೦ ಸಾವಿರ ಎಕರೆ ಜಮೀನನ್ನು ಅದಕ್ಕೆ ಒದಗಿಸುತ್ತೇವೆ ಎಂದು ಹೇಳಿದ್ದಕ್ಕೆ ಆ ಯೋಜನೆ ನಮಗೆ ಬಂದಿದೆ. ಇವೊತ್ತು ಅದಕ್ಕಾಗಿ ನಮಗೆ ಕೇಂದ್ರ ಸರ್ಕಾರದಿಂದ ೧೮ ಲಕ್ಷ ರೂಪಾಯಿ ಸಹಾಯ ಬರುತ್ತಿದೆ.

ಇದೇ ರೀತಿ ಡೆನ್ಮಾರ್ಕ್‌ನ ತಾಂತ್ರಿಕ ನೆರವಿನಿಂದ ಸ್ಥಾಪನೆ ಮಾಡತಕ್ಕಂಥ ೩ ಕ್ಯಾಟಲ್ ಫಾರಂ, ಮತ್ತು ಡೈರಿ ಫಾರಂಗೋಸ್ಕರ ಒಂದು ಸಾವಿರ ಎಕರೆ ಜಮೀನು ಬೇಕಾಗಿದೆ ನಮ್ಮ ಫಾರಮ್ಮಿನ ದನಗಳನ್ನು ಮೇಯಿಸುವುದಕ್ಕೋಸ್ಕರ ನಮಗೆ ಜಮೀನು ಬೇಕಾಗಿದೆ. ಈ ಕಾರಣಕೋಸ್ಕರ ಜಮೀನನ್ನು ಒದಗಿಸಿಕೊಳ್ಳತಕ್ಕ ಅವಶ್ಯಕತೆ ಇದೆ. ಈ ಜಮೀನನ್ನು ಆದಷ್ಟು ಎಕನಾಮಿಕ್ ಆಗಿ ಅಭಿವೃದ್ಧಿ ಪಡಿಸತಕ್ಕ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಇದ್ದ ಜಮೀನನ್ನು ಎಷ್ಟರಮಟ್ಟಿಗೆ ಸಾರ್ಥಕ ಮಾಡಿಕೊಂಡು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ಸರ್ಕಾರ ಮಾಡುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಇಲಾಖೆಯಲ್ಲಿ ಸುಮಾರು ೭೦೫೭ ಜಾನುವಾರು ಆಸ್ಪತ್ರೆಗಳನ್ನು ನಡೆಸುತ್ತಿದ್ದೇವೆ. ಈ ಸಾಲಿನಲ್ಲಿ ೭೫೭ ಆಸ್ಪತ್ರೆಗಳನ್ನು ಸ್ಥಾಪನೆಮಾಡಿದ್ದೇವೆ. ಅದು ಈ ವರ್ಷದ ಅಂತ್ಯದಲ್ಲಿ ೮೦೦ಕ್ಕೆ ಸಂಖ್ಯೆ ಹೆಚ್ಚಬಹುದು, ಅಂಥಾ ಒಂದು ಸಂದರ್ಭ ಇದೆ. ಈ ಆಸ್ಪತ್ರೆಗಳಿಗೆ ಬೇಕಾದಂತಹ ಔಷಧಿ ವ್ಯವಸ್ಥೆಯು ಬಹಳ ತೃಪ್ತಿಕರವಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಔಷಧಿ ಸಿಕ್ಕುತ್ತಿದೆ. ಈ ವರ್ಷ ಜಾನುವಾರುಗಳ ಆಸ್ಪತ್ರೆ ಸಂಖ್ಯೆ ಎಷ್ಟಾಗುತ್ತದೆ ಎಂದು ನಿರೀಕ್ಷಿಸಿ ಅದಕ್ಕೆ ೬೦ ಲಕ್ಷ ರೂಪಾಯಿಗಳನ್ನು ಒದಗಿಸಿದೆ, ಈ ಆಸ್ಪತ್ರೆಗಳು ಇನ್ನೂ ತೃಪ್ತಿಕರವಾಗಿ ಕೆಲಸ ಮಾಡಬೇಕಾಗಿದ್ದರೆ ೧೦-೧೨ ಲಕ್ಷ ರೂಪಾಯಿಗಳ ಕೊರತೆಯಾಗುತ್ತದೆ. ಸಾಧ್ಯವಾದ ಮಟ್ಟಿಗೆ ಔಷಧಿಯನ್ನು ತರಿಸಿ ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ನಾವು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣಕ್ಕೆ ಸಾಕಷ್ಟು ಔಷಧಿಯನ್ನು ಕೊಂಡು ಹಂಚುವುದಕ್ಕೆ ಒಂದು ಅನಾನುಕೂಲತೆ ಇತ್ತು ಅದನ್ನು ಸರಿಪಡಿಸಬೇಕು ಎಂದು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಮೆಡಿಸಿನ್ ಸ್ಟೋರ್ಸನ್ನು ಹೊಸದಾಗಿ ಈ ಇಲಾಖೆಗೆ ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ ಆದ್ದರಿಂದ ಈಗ ಔಷಧಿಗಳ ವಿಚಾರದಲ್ಲಿ ಅದರ ವಿತರಣೆಯ ವಿಚಾರದಲ್ಲಿ ಸಾಕಷ್ಟು ಅನುಕೂಲ ಮತ್ತು ತೃಪ್ತಿಕರವಾದ ವ್ಯವಸ್ಥೆ ಆಗುತ್ತದೆ ಎಂದು ನಾನು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ದನಗಳ ಖಾಯಿಲೆ ವಿಚಾರದಲ್ಲಿ, ಅದರ ಕಂಟ್ರೋಲ್ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರು ಮಾತನಾಡುತ್ತಾ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಹಬ್ಬಿರತಕ್ಕ ಕಾಲು ಜ್ವರ, ಬಾಯಿಜ್ವರ ಖಾಯಿಲೆಗೆ ಸಾಕಷ್ಟು ಪ್ರಮಾಣದಲ್ಲಿ ವ್ಯಾಕ್ಸೀನ ಉತ್ಪತ್ತಿಯಾಗುತ್ತಿಲ್ಲ ಇದರಿಂದ ರೈತರಿಗೆ ಕಷ್ಟನಷ್ಟಗಳಾಗುತ್ತಿವೆಯೆಂದು ಹೇಳಿದ್ದಾರೆ. ಅದಕ್ಕಾಗಿ ವ್ಯಾಕ್ಸೀನ ತಯಾರು ಮಾಡತಕ್ಕಂಥ ಒಂದು ಯೂನಿಟ್ಟನ್ನು ಸ್ಥಾಪನೆ ಮಾಡುವುದಕ್ಕೆ ಪರ್ಮಿಷನ್ ಕೊಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವು. ಅವರು ಒಂದು ವರ್ಷಕ್ಕೆ ಮಾತ್ರ ಪರ್ಮಿಷನ್ ಕೊಟ್ಟಿದ್ದರು. ಈಗ ನಾವು ಪ್ರತ್ಯೇಕವಾಗಿ ಸ್ವಂತವಾಗಿ ಡೆನ್ಮಾರ್ಕಿನವರ ಸಹಾಯದಿಂದ ಭಾರತದಲ್ಲೇ ಎರಡನೇ ದೊಡ್ಡ ಫುಟ್ ಅಂಡ್ ಮೌತ್ ವ್ಯಾಕ್ಸೀನ್ ತಯಾರು ಮಾಡತಕ್ಕ ಯೂನಿಟ್ಟನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಕೊಂಡಿದ್ದಾರೆ. ರಿಂಡರ್‌ಪೆಸ್ಟ್ ದನಗಳ ದೊಡ್ಡ ಬೇನೆ ರೋಗ ಬಾರದ ಹಾಗೆ ತಡೆಗಟ್ಟಬೇಕು ಎಂದು ಶ್ರೀಮಾನ್ ರಾಮೇಗೌಡರು ಹೇಳಿದ್ದಾರೆ. ಈ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕು ಎನ್ನುವ ಉದ್ದೇಶದಿಂದ ೩ ವರ್ಷಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈಗಾಗಲೇ ೯ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇವೆ. ಈಗ ೪ ಜಿಲ್ಲೆಗಳಲ್ಲಿ ಕೆಲಸ ನಡೆಯುತ್ತಿದೆ. ಇನ್ನು ೬ ಜಿಲ್ಲೆಗಳಲ್ಲಿ ಒಂದು ವರ್ಷದಲ್ಲಿ ಆ ಕೆಲಸ ಪೂರೈಸಿ ಆ ರೋಗ ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ನಿರ್ಮೂಲವಾಗುತ್ತದೆ. ಮತ್ತು ವ್ಯಾಕ್ಸೀನ್‌ನ್ನು ಕೂಡ ಸಾಕಷ್ಟು ಪ್ರಮಾಣದಲ್ಲಿ ಮದ್ರಾಸಿನಿಂದ ತರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಕಾರ್ಯವನ್ನು ಮಾಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಹಾಲಿನ ಡೈರಿ ಪೌಲ್ಟ್ರಿ ಮತ್ತು ಕುರಿ ಅಭಿವೃದ್ಧಿಯ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಂಗಳೂರಿನ ಹಾಲು ಸರಬರಾಜು ಯೋಜನೆಯನ್ನು ಇಷ್ಟರಲ್ಲೇ ಪೂರೈಸಿ ಆ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದರ ಜೊತೆಗೆ ಪ್ರಾರಂಭ ಆಗಬೇಕಾದ ಬೆಳಗಾಮ್, ಗುಲ್ಬರ್ಗಾ, ಧಾರವಾಡ, ಭದ್ರಾವತಿ, ಮೈಸೂರು ಮತ್ತು ಭಳ್ಳಿ ಈ ಹಾಲು ಸರಬರಾಜು ಯೋಜನೆಗಳ ಕೆಲಸವನ್ನು ಮೇ ಅಥವಾ ಜೂನ್ ಅಂತ್ಯದಲ್ಲಿ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನೂ ನಾನು ಹೇಳುತ್ತೇನೆ. ಆ ಡೈರಿಗಳ ಯಂತ್ರೋಪಕರಣಗಳ ಕೆಲಸ ಬಹಳ ಭರದಿಂದ ನಡೆಯುತ್ತಿದೆ. ಈ ಹಾಲು ಸರಬರಾಜು ಯೋಜನೆಯ ಕೆಲಸ ಮುಗಿಗು ಅವು ಪ್ರಾರಂಭವಾದ ಮೇಲೆ ಆ ಪ್ರದೇಶಗಳ ಸುತ್ತಮುತ್ತಲಿನ ರೈತರು ಹಾಲನು ಡೈರಿಗಳಿಗೆ ಮಾರಿ ಆಸ್ತಿಪಾಸ್ತಿಗಳನೂ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಮಾನ್ಯ ಸದಸ್ಯರಾದ ಶ್ರೀ ಎಚ್, ಡಿ, ದೇವೇಗೌಡರು ಈ ಯೋಜನೆಗೆ ರಾಷ್ಟ್ರೀಕರಣವಾದ ಬ್ಯಾಂಕುಗಳಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ಯಾವ ಪ್ರಯತ್ನ ಮಾಡಿದ್ದಿರಿ ಎನ್ನುವ ಮಾತನ್ನು ಕೇಳಿದರು, ಬ್ಯಾಂಕುಗಳ ರಾಷ್ಟ್ರೀಕರಣ ಪೂರ್ವದಲ್ಲಿಯೇ ಈ ಬ್ಯಾಂಕುಗಳ ಮ್ಯಾನೇಜ್‌ಮೆಂಟಿನವರನ್ನು ನಾನು ಕರೆಸಿ ಇಲಾಖೆಯ ಕಾರ್ಯಕ್ರಮ ಚಟುವಟಿಕೆಗಳಿಗೋಸ್ಕರ ಹಣ ಸಹಾಯವನ್ನು ಒದಗಿಸಬೇಕೆಂದು ಕೇಳಿದಾಗ ಈ ಯೋಜನೆಗಳಿಗೆ ಹಣಸಹಾಯ ಮಾಡಲು ಸಂತೋಷದಿಂದ ಮುಂದೆ ಬಂದು ಈ ಯೋಜನೆಗಳಿಗೆ ಸಾಲವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಮತ್ತು ಈ ಬ್ಯಾಂಕುಗಳ ಮೇಲಿನ ಹತೋಟಿ ಏನು, ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ, ಮತ್ತು ಅವರು ಸಾಲ ಕೊಡತಕ್ಕ ನೀತಿ ಒಂದು ಧೋರಣೆ ಇನ್ನು ಸರಿಯಾಗಿಗೊತ್ತಿಲ್ಲ. ರೈತರೂ ಕೂಡ ಬ್ಯಾಂಕುಗಳೊಡನೆ ಸಹಕರಿಸಿ ಅವರಿಗೆ ಬೇಕಾದಂತಹ ಸಾಲವನ್ನು ಪಡೆಯಬಹುದು ಎಂದು ನಾನು ಸಲಹೆ ಮಾಡುತ್ತೇನೆ.

(ಶ್ರೀ ಜಿ. ಬಿ. ಶಂಕರರಾವ್)

ಈ ಕಾರ್ಯಕ್ರಮಗಳಿಗಾಗಿ ಈಗಾಗಲೇ ಬ್ಯಾಂಕುಗಳಿಂದ ಸಾಕಷ್ಟು ಹಣ ದೊರೆತಿದೆ. ಒಂದು ವರ್ಷದ ಅವಧಿಯಲ್ಲಿ ಡೈರಿ, ಪೌಲ್ಟ್ರಿ ಮತ್ತು ಪಿಗ್ಗರಿ, ಶೀಪಿಂಗ್ ಮುಂತಾದ ಎಲ್ಲಾ ಯೋಜನೆಗಳಿಗೆ ಸುಮಾರು ೫೫ ಲಕ್ಷ ರೂಪಾಯಿಗಳನ್ನು ಬ್ಯಾಂಕಿನವರು ಕೊಟ್ಟಿದ್ದಾರೆ. ಇಷ್ಟು ಹಣ ನಮ್ಮ ಕಾರ್ಯಕ್ರಮಗಳಿಗೆ ಬ್ಯಾಂಕಿನಿಂದ ದೊರಕಿದೆ.

ಇನ್ನು ಬೆಂಗಳೂರು ಡೈರಿಯ ವಿಚಾರದಲ್ಲಿ ಮಾನ್ಯ ವೆಂಕಟಗಿರಿಯಪ್ಪನವರು, ಚಿಕ್ಕೇಗೌಡರು ಮತ್ತು ನಂಜಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಆದರೆ ಡೈರಿಯ ಆಡಳಿತ ಚೆನ್ನಾಗಿ ನಡೆಯುತ್ತದೆ ಎಂಬುದನ್ನು ಮಾನ್ಯ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ. ಅದು ಸಂತೋಷದ ವಿಚಾರ. ಮಾನ್ಯ ನಂಜಪ್ಪನವರು, ಈಗ ದನಗಳಿಗೆ ಲೈಸೆನ್ಸ್ ತೆಗೆದು ಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದಿರುವ ಬಗ್ಗೆ ಹೇಳುತ್ತಾ ಅದರಿಂದ ಹಸುಗಳನ್ನು ಇಟ್ಟುಕೊಂಡಿರುವ ಬಡ ಜನರಿಗೆ ತಮ್ಮ ಹಾಲನ್ನು ಬೆಂಗಳೂರು ಡೈರಿಗೆ ಮಾರಾಟ ಮಾಡುವುದಕ್ಕೆ ತೊಂದರೆಯಾಗುತ್ತದೆ ಮತ್ತು ಅವರಿಗೆ ಇದರಿಂದ ನಷ್ಟವೂ ಆಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ಕೇಂದ್ರಸರ್ಕಾರದವರು ೧೯೬೩ನೇ ಇಸವಿಯಲ್ಲಿ ರಾಜ್ಯಸರ್ಕಾರಕ್ಕೆ ಒಂದು ಸಲಹೆಯನ್ನು ನೀಡಿದ್ದರು. ಅದೇನೆಂದರೆ, ಬೆಂಗಳೂರು ಡೈರಿ ಸ್ಥಾಪನೆ ಮಾಡುವ ಸಂದರ್ಭದಲ್ಲಿ, ಬೆಂಗಳೂರು ನಾಗರೀಕರಿಗೆ ಒಳ್ಳೆಯ ಹಾಲನ್ನು ಸರಬರಾಜು ಮಾಡಬೇಕಾದರೆ, ಮೊದಲು ಅಲ್ಲಿರುವ ದನಗಳನ್ನು ಹೊರಗಡೆ ಕಳಿಸಬೇಕು. ಇದು ಅವರು ನಗರ ನೈರ್ಮಲ್ಯ ದೃಷ್ಟಿಯಿಂದ, ನಾಗರೀಕರ ಆರೋಗ್ಯ ದೃಷ್ಟಿಯಿಂದ ಹೇಳಿದ್ದಾರೆ. ಅದಕ್ಕಾಗಿ ಒಂದು ಬಿಲ್ಲನ್ನು ಮಾನ್ಯ ಪುಟ್ಟಸ್ವಾಮಿಯವರು ೧೯೬೪ನೇ ಇಸವಿಯಲ್ಲಿ ಈ ಸಭೆಯ ಮುಂದೆ ತಂದಾಗ ಈ ಮನೆಯ ಎಲ್ಲಾ ಸದಸ್ಯರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಅದನ್ನು ಕಾರ್ಪೊರೇಶನ್ ಇಲಾಖೆಯವರು ಜಾರಿಗೆ ಕೊಟ್ಟಿದ್ದಾರೆ ಅದಲ್ಲದೆ ಬೆಂಗಳೂರಿನಲ್ಲಿ ಸ್ಥಾಪನೆಯಾಗುವ ಕಾಲಕ್ಕೆ ಡೈರಿ ಯೂನಿಸೆಫ್‌ನವರೊಡನೆ ಒಂದು ಒಪ್ಪಂದವನು ಮಾಡಿಕೊಳ್ಳಬೇಕಾಗಿತ್ತು. ಅವರು ಕರಾರಿನಲ್ಲಿ ಒಂದು ಉದ್ದೇಶವನ್ನು ಹೇಳಿದ್ದಾರೆ. ನಾವು ಕೊಡುತ್ತಿದ್ದ ಉಪಕರಣ, ಮತ್ತು ಇತರ ಸಲಕರಣೆಗಳು ಬೆಂಗಳೂರು ಡೈರಿಗೆ ಕೊಡುವಾಗ ಎರಡು ಕೆಲಸವನಮಾಡಬೇಕೆಂದು ಹೇಳಿದರು. ಒಂದು ಬೆಂಗಳೂರಿನಲ್ಲಿದ್ದಂತಹ ದನಗಳನ್ನು ಹೊರಗೆ ಕಳಿಸಬೇಕು ಮತ್ತು ಹೊರಗಡೆಯಿಂದ ಬರತಕ್ಕದ್ದನ್ನು ತಡೆಯಬೇಕೆಂದು ಹೇಳಿದ್ದಾರೆ. ಇದು ಆರು ವರ್ಷದಿಂದ ಜಾರಿಗೆ ಬರದೆ ಇದೆ. ಇದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಯವರಿಗೆ ಗೊತ್ತಿದೆ. ಇಲ್ಲಿಯ ದನಗಳು ಬೀದಿಯಲ್ಲಿ ಪ್ಲಾಟ್‌ಫಾರ್ಮುಗಳಲ್ಲಿ ತಿರುಗಾಡುತ್ತಿರುತ್ತವೆ ಮತ್ತು ವಾಹನ ಸಂಚಾರಕ್ಕೆ ಎಲ್ಲಾ ಅಡ್ಡಿ ಮಾಡುತ್ತಿವೆಯೆಂದು ಅವರು ಹೇಳುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಆರೋಗ್ಯದ ದೃಷ್ಟಿಯಿಂದ, ಬೆಂಗಳೂರು ಡೈರಿಯ ಹಿತದೃಷ್ಟಿಯಿಂದ ಈ ಕಾನೂನನ್ನು ಜಾರಿಗೆ ಕೊಡಬೇಕೆಂದು ಹೇಳಿಕೊಂಡಿದ್ದೇವೆ. ಅದು ಜಾರಿಗೆ ಬಂದಿದೆ. ನಗರದಲ್ಲಿ ಆರೋಗ್ಯ ದೃಷ್ಟಿಯಿಂದ ಜನ ಮತ್ತು ದನಗಳು ಜೊತೆ ಜೊತೆಯಾಗಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಹಳ್ಳಿಗಾಡಿನಲ್ಲಿ ದನ ಮತ್ತು ಜನಗಳು ಜೊತೆಯಾಗಿ ಬಾಳಬೇಕಾಗುತ್ತದೆ. ಬೆಂಗಳೂರು ಒಂದು ದೊಡ್ಡ ನಗರ. ಇಲ್ಲಿನ ಆರೋಗ್ಯ ದೃಷ್ಟಿಯಿಂದ ಮತ್ತು ನಗರದ ಸೌಂದರ್ಯ ದೃಷ್ಟಿಯಿಂದ ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ಕೆಲವರು ಬೆಂಗಳೂರು ಡೈರಿ ಲಾಭದಾಯಕವಾಗಿ ನಡೆಯಬೇಕೆಂದು ಹೇಳುತ್ತಿದ್ದಾರೆ. ರೈತರು ಬೆಂಗಳೂರು ಡೈರಿಗೆ ನಾಲ್ಕರಿಂದ ನಾಲ್ಕೂವರೆ ಲಕ್ಷ ಲೀಟರ್ ಹಾಲು ಮಾರಬೇಕಾಗಿತ್ತು. ಆದರೆ ಇವತ್ತು ೨೭–೩೦ ಸಾವಿರ ಲೀಟರ್ ಮಾರುವುದಕ್ಕೆ ಕೂಡ ಅವರಿಗೆ ಸಾಧ್ಯವಾಗುತ್ತಾ ಇಲ್ಲ. ಕಾರಣವೇನೆಂದರೆ, ಖಾಸಗೀ ಜನರು ಅಲ್ಲಲ್ಲಿ ಹಾಲಿನ ಕೇಂದ್ರಗಳನ್ನು ಮಾಡಿಕೊಂಡು ಮಾರುತ್ತಿದ್ದಾರೆ. ಇದರಿಂದ ಡೈರಿಗೆ ಹೆಚ್ಚು ಮಾರಲು ಅವಕಾಶ ಸಿಗಲಿಲ್ಲ. ಯುನಿಸೆಫ್‌ನವರು ಹೇಳಿದರು, ಬೆಂಗಳೂರಿನ ಸುತ್ತುಮುತ್ತಲು ಹಾಲು ಮಾರುವುದನ್ನು ಪ್ರೊಹಿಬಿಟೆಡ್ ಏರಿಯಾ ಎಂದು ಮಾಡಬೇಕು, ಮತ್ತು ಈ ಪ್ರದೇಶದಲ್ಲಿರುವ ಹಾಲನ್ನು ಡೈರಿಯು ಕೊಂಡು ಪರಿಶುದ್ಧವಾದ ಹಾಲನ್ನು ಜನರಿಗೆ ಒದಗಿಸಬೇಕು ಎಂದು. ರಾಷ್ಟ್ರಾದ್ಯಂತ ಈ ಒಂದು ಧೋರಣೆಯನ್ನು ಅನುಸರಿಸಬೇಕೆಂದು ಹೇಳಿದ್ದಾರೆ. ಆ ಕಾರಣಗಳಿಂದ ಈ ರೀತಿ ಪರಿಶುದ್ಧ ಹೊರಡೆ ಹಾಲನ್ನು ಬೆಂಗಳೂರಿ ನಾಗರೀಕರಿಗೆ ಒದಗಿಬೇಕೆಂಬ ದೃಷ್ಟಿಯಿಂದ ಇಲ್ಲಿಯ ದನಗಳನ್ನು ಹೊರಗಡೆ ಕಳಿಸಬೇಕು ಮತ್ತು ಬೆಂಗಳೂರಿನ ಸುತ್ತುಮುತ್ತಲಿನ ಹಾಲನ್ನು ಡೈರಿ ಕೊಳ್ಳಬೇಕಾಗುತ್ತದೆ. ಇವತ್ತು ಹಾಲಿನ ಸಹಕಾರಿ ಸಂಘಗಳನು ಮಾಡಿಕೊಂಡರೆ, ಬ್ಯಾಂಕಿನ ಮುಖಾಂತರವೂ ಸಾಲ ತೆಗೆದುಕೊಂಡು ಅನುಕೂಲ ಪಡೆಯಬಹುದು. ಅಂತೂ ಇದರ ಪ್ರಕೃತಿಗೆ ಕುಂಠಿತ ಬರಬಾರದು ಎಂದು ಡೈರಿಯವರು ಕೊಂಡುಕೊಳ್ಳಬೇಕಾಗುತ್ತದೆ. ಇಲ್ಲಿ ಎರಡನ್ನೂ ಇಟ್ಟು ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಬೆಂಗಳೂರು ಡೈರಿ ಬಂದ ಮೇಲೆ ದನಗಳ ಸಂಖ್ಯೆ ಹೆಚ್ಚಾಗಿದೆ. ಒಂದು ಸಾರಿ ಕಾಲೋನಿಗಳನ್ನು ಮಾಡಿ ಎಂದು ಹೇಳುತ್ತಿದಾರೆ. ಮೊದಲು ಕೇಂದ್ರ ಸರ್ಕಾರದವರು ಈ ಯೋಜನೆಗಳಿಗಾಗಿ ಸಹಾಯ ಮಾಡುತ್ತಿದ್ದರು. ನಂತರ ಕೇಂದ್ರ ಸರ್ಕಾರದವರು ಇಂಥ ಯೋಜನೆಗಳಿಗಾಗಿ ಸಹಾಯ ಕೊಡುವುದನ್ನು ಕಡಿಮೆ ಮಾಡುವುದರಿಂದ ಹೊರಗಿನಿಂದ ಬರುವುದನ್ನು

ತಡೆಹಿಡಿಯುವುದಕ್ಕಾಗಲಿಲ್ಲ. ಬೆಂಗಳೂರಿನಲ್ಲಿರತಕ್ಕಂತಹ ಹಾಲು ಕರೆಯುವ ಜನಗಳನ್ನು ಕರೆಸಿ, ನಿಮಗೆ ಸಾಕಷ್ಟು ಹಣ ಸಿಗುತ್ತದೆ, ನೀವು ಒಂದು ಸಂಘವನ್ನು ಮಾಡಿ, ಕ್ಯಾಟ್ಲ್ ಕಾಲೋನಿಯನ್ನು ಮಾಡಿಕೊಂಡರೆ ಅನುಕೂಲ ಮಾಡಿಕೊಡುತ್ತೇವೆ. ಹಸಿರು, ನೀರು ಮತ್ತು ಷೆಡ್ಡುಗಳನ್ನು ಕಟ್ಟಿಕೊಳ್ಳುವುದಕ್ಕೆ ಮಾಡಿ ಕೊಡುತ್ತೇವೆ ಎಂದು ಹಿಂದೆ ಹೇಳಿದ್ದೆವು.

8-00 P. M.

ಮಾನ್ಯ ಸದಸ್ಯರು ತಾಳ್ಮೆ ವಹಿಸಬೇಕು. ಇಲ್ಲಿ ಸಾಕಷ್ಟು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ಅವಕ್ಕೆಲ್ಲಾ ಉತ್ತರ ಕೊಡದಿದ್ದರೆ ತಪ್ಪಾಗುತ್ತದೆ. ಇವತ್ತು ಅವರಿಗೆ ಬ್ಯಾಂಕುಗಳಿಂದ ಸಹಾಯ ಕೊಡಿಸುತ್ತೇವೆ. ಸಹಕಾರ ಸಂಘಗಳನ್ನು ಮಾಡಿಕೊಂಡು ಬಂದರೆ ಅವರಿಗೂ ಸಹಾಯ ಕೊಡುತ್ತೇವೆ. ಅವರು ಸಂಘಟಿತರಾಗಿ ಗುಂಪಾಗಿ ಬಂದರೆ ಅವರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ. ಆದರೆ ಕಾನೂನನ್ನು ಮುಂಚಿತವಾಗಿಯೇ ಜಾರಿಗೆ ಕೊಡಬೇಕಾಗುತ್ತದೆ.

ಶ್ರೀ ಎ ಸಂಜಪ್ಪ:—ಇವತ್ತಿನ ದಿವಸ ಕಾರ್ಪೊರೇಶನ್ನಿನಿಂದ ಲೈಸನ್ಸ್ ತೆಗೆದುಕೊಂಡರೆ ಎಲ್ಲಾ ಸರಿ ಹೋಗುತ್ತದೆಂದು ಹೇಳುತ್ತಾರೆ.

ಶ್ರೀ ಜಿ. ಬಿ. ಶಂಕರರಾವ್:—ಲೈಸನ್ಸ್ ತೆಗೆದುಕೊಳ್ಳುವ ವಿಷಯವೇನೋ ಕಾನೂನಿನಲ್ಲಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್:—ಲೈಸನ್ಸ್ ತೆಗೆದುಕೊಳ್ಳಬೇಕೆಂದು ಕಡ್ಡಾಯಮಾಡುವವರೇ ನೀವು. ಅವರಿಗೆ ಮೊದಲೇ ಲೈಸನ್ಸ್ ತೆಗೆದುಕೊಳ್ಳಬೇಕೆಂದು ಏಕೆ ಹೇಳಲಿಲ್ಲ? ಆರು ವರ್ಷಗಳಿಂದಲೂ ಏಕೆ ಸುಮ್ಮನಿದ್ದಿರಿ? ಈಗ ಕಾನೂನು ಜಾರಿಮಾಡುತ್ತೇವೆಂದು ಹೇಳುವವರೂ ನೀವೇ.

ಶ್ರೀ ಜಿ. ಬಿ. ಶಂಕರರಾವ್:—ಡೆನ್‌ಮಾರ್ಕ್ ಪ್ರದೇಶದ ಡೈರಿ ಕ್ಯಾಟಲ್ ಫಾರಂ ಯೋಜನೆಯ ವಿಷಯವಾಗಿ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಪ್ರಸ್ತಾಪಮಾಡಿದರು. ಈ ಯೋಜನೆಯಲ್ಲಿ ಖರ್ಚಾದ ಹಣದ ಬಗ್ಗೆ ಅವರು ಪ್ರಸ್ತಾಪಮಾಡಿದರು. ನಾನು ಇವತ್ತು ಆ ವಿಚಾರವನ್ನು ಮಾನ್ಯ ಸದಸ್ಯರಿಗೆ ಸ್ಪಷ್ಟಪಡಿಸುತ್ತೇನೆ. ಅದರ ಲೆಕ್ಕ ತನಿಖೆಯಾಗಿದೆ. ಲೆಕ್ಕವನ್ನು ಇಡುವ ಪದ್ಧತಿ ಇದೆ. ಆದ್ದರಿಂದ ಅಲ್ಲಿ ಯಾವ ಅವ್ಯವಹಾರವಾಗಿಲ್ಲ. ಒಂದು ೧೯೬೩ರಲ್ಲಿ ಅವರ ಜೊತೆಯಲ್ಲಿ ಒಪ್ಪಂದಮಾಡಿಕೊಂಡಾಗ ಈ ಯೋಜನೆ ಚೆನ್ನಾಗಿ ಕೆಲಸಮಾಡಬೇಕು, ತಾಂತ್ರಿಕ ಉಪಕರಣಗಳನ್ನು ಕೊಡಬೇಕು, ಒಳ್ಳೆಯ ಜಾತಿಯ ತಳಿಗಳನ್ನು ಕೊಡಬೇಕೆಂದು ನಾನಾ ವಿಧದಲ್ಲಿ ಹೇಳಿದ್ದು ಆಗಿದೆ. ಅದು ಈ ವರ್ಷ ಮಾರ್ಚ್ ೩೧ಕ್ಕೆ ಮುಗಿಯುತ್ತದೆ. ಆದ್ದರಿಂದ ಏಪ್ರಿಲ್ ಒಂದನೇ ತಾರೀಖಿನಿಂದ ಇದರ ಆಡಳಿತ ವ್ಯವಸ್ಥೆಯನ್ನು ಸರ್ಕಾರ ದವರು ತೆಗೆದುಕೊಳ್ಳಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಆರ್ಡರ್ ಸಹ ಅದರ ಬಗ್ಗೆ ಇಷ್ಯೂ ಆಗಿದೆ. ಆ ದೇಶದ ತಾಂತ್ರಿಕ ನೆರವಿನ ವಿಚಾರದಲ್ಲಿ ಅವರ ಸಹಾಯ ಬೇಕೆನ್ನುವುದನ್ನು ವಿಚಾರದಲ್ಲಿ ಅರಿತು ಕೇಂದ್ರ ಸರ್ಕಾರದವರೇ ಡೆನ್‌ಮಾರ್ಕ್ ಸರ್ಕಾರದ ಜೊತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಮಿಶ್ರತಳಿಯ ಯೋಜನೆಯಿಂದ ಲಾಭವಾಗಬೇಕು. ಈ ಯೋಜನೆ ಯಿಂದ ಉತ್ತಮವಾದಂಥ ತಳಿಯನ್ನು ಉಳಿಸಬೇಕೆಂದು ಹೇಳುತ್ತೇನೆ. ಮಿಶ್ರ ತಳಿ ಯೋಜನಾ ಕಾರ್ಯಕ್ರಮದ ಪ್ರಕಾರ ಹೊರಗಡೆಯ ದೇಶಗಳಲ್ಲಿ ಹೆಚ್ಚು ಹೆಚ್ಚಿಗೆ ಹಾಲು ಕೊಡುವ ಶ್ರೇಷ್ಠಕರವಾದ ದನಗಳ ವೀರ್ಯವನ್ನು ಸೇರಿಸಿಡತಕ್ಕ ಒಂದು ಯೋಜನೆ ಈಗಾಗಲೇ ತಯಾರು ಆಗಿದೆ. ಡೆನ್ಮಾರ್ಕ್ ರೀತಿಯಲ್ಲಿ ದೇಶದ್ಯಾಂತ ಕ್ಯಾಟಲ್ ಫಾರಂಗಳನ್ನು ಮಾಡುವ ಯೋಜನೆ ಇದೆ. ಈಗಾಗಲೇ ನಮ್ಮಲ್ಲಿರತಕ್ಕ ಅಮೃತ ಮಹಲ್ ಜಾತಿಯ ೪ ಸಾವಿರ ದನಗಳನ್ನು ಕಾದಿರಿಸಲಾಗಿದೆ. ಇಂತಹ ಲಾಭದಾಯಕವಾದ ಯೋಜನೆ-ಯನ್ನು ನಾವೇ ಸ್ವತಃ ಇಟ್ಟುಕೊಂಡು ನಾವೇ ನಡೆಸಬಹುದು.

ಇನ್ನೂ ಕೆಲವರು ವೈಯಕ್ತಿಕವಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶ್ರೀ ನಂಜೇಗೌಡರು ಮಾತನಾಡುತ್ತ ಫ್ರೀ ಬುಲ್ ಸ್ಕೀಮುಗಳನ್ನು ಕೊಡುವುದರಲ್ಲಿ ಅಪವ್ಯಯವಾಗಿದೆ, ಇದು ಬಹಳ ಉಪಯುಕ್ತ ಯೋಜನೆ, ರೈತರುಬೀಜದ ಹೋರಿಗಳನ್ನು ಪಡೆಯಬೇಕು ಎಂಬುದಾಗಿ ಹೇಳಿದರು. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸಾಧ್ಯವಾದಷ್ಟು ಕ್ರಮಗಳನ್ನು ತೆಗೆದು-ಕೊಳ್ಳುವುದಕ್ಕೆ ಸಿದ್ಧರಿದ್ದೇವೆಂದು ಹೇಳುತ್ತೇನೆ.

ಶ್ರೀ ಎ. ನಂಜಪ್ಪ :—ಮಾನ್ಯ ಮಂತ್ರಿಗಳು ಕಾರ್ಪೊರೇಷನ್ ಅಧಿಕಾರಿಗಳನ್ನು ಕರೆಸಿ ಅವರಿಗೆ ಈ ವಿಚಾರಗಳನು ಹೇಳಲಿಲ್ಲವೇ?

ಶ್ರೀ ಜಿ. ಬಿ. ಶಂಕರರಾವ್:—ಮಾನ್ಯ ಸದಸ್ಯರಲ್ಲಿ ಕೆಲವರು ಉತ್ತೇಜಕವಾಗಿ ಕೆಲವು ವಿಚಾರಗಳನ್ನು ಪ್ರಶಂಸೆ ಮಾಡಿದ್ದಾರೆ. ಮತ್ತು ಇನ್ನೂ ಚೆನ್ನಾಗಿ ಕೆಲಸಗಳನ್ನು ಮಾಡಬೇಕಾಗಿದೆಯೆಂದು. ಅವರಿಗೆ ವೈಯುಕ್ತಿಕವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಈ ವರ್ಷದಲ್ಲಿ ೨ ಕೋಟಿ ೫ ಲಕ್ಷದ ೭೬ ಸಾವಿರ ರೂಪಾಯಿಗಳ ಹಣದ ಖರ್ಚಿಗಾಗಿ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ —ಇದುವರೆಗೆ ಮಾತನಾಡದೇ ಇರುವವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಿ.

ಉಪಾಧ್ಯಕ್ಷರು:—ಆಗಲಿ ನೋಡೋಣ.

ಶ್ರೀ ಎ. ನಂಜಪ್ಪ:—ಮಿಲ್ಕ್ ಕಾಲೊನಿ ಕಟ್ಟಬೇಕು, ಹೊಸದಾಗಿ ಷಿಪ್ಟ್ ಯಾರೂ ಮಾಡಬೇಡಿ ಎಂದು ಒಂದು ಕಡೆ ನೀವು ಹೇಳುತ್ತೀರಿ? ಇನ್ನೊಂದು ಕಡೆ ಲೈಸನ್ಸ್ ತೆಗೆದುಕೊಳ್ಳದೆ ಹೋದರೆ ಬೆಂಗಳೂರಿನ ದನಗಳನ್ನು ಆಚೆಗೆ ಸಾಗಿಸುತ್ತೇವೆ ಎಂದು ಹೇಳುತ್ತೀರಿ !

ಶ್ರೀ ಜಿ. ಬಿ. ಶಂಕರರಾವ್:—ಲೈಸನ್ಸ್ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ದನಗಳನು ಹೊರಗೆ ಹಾಕಬೇಕು ಎಂಬುದಾಗಿ ನಾನು ಹೇಳುತ್ತಾ ಇಲ್ಲ. ಲೈಸನ್ಸ್ ತೆಗೆದಕೊಂಡಮೇಲೆ ಅಲ್ಲಿ ಯಾವ ರೀತಿಯಾಗಿ ಷೆಡ್ ಇರಬೇಕು, ನೀರು ವ್ಯವಸ್ಥೆ ಹೇಗೆ ಎಂಬ ಬಗ್ಗೆ ಒಂದು ಕರಾರು ಇದೆ. ಲೈಸನ್ಸ್ ತಗೆದುಕೊಂಡು ಮನೆಯ ಹಾಲಿನ ಖರ್ಚಿಗಾಗಿ ಒಂದೆರಡು ದನಗಳನ್ನು ಇಟ್ಟುಕೊಳ್ಳಬಹುದು.

ಶ್ರೀ ಎ. ಮುನಿಯಪ್ಪ:—ಲೈಸನ್ಸ್ ತೆಗೆದುಕೊಳ್ಳಬೇಕಾದರೆ ಕೆಲವು ಷರತ್ತುಗಳನ್ನು ಹಾಕುತ್ತಾರೆ. ಆ ಕಂಡೀಷನ್ಸ್ ಪ್ರಕಾರ ನಡೆಯುತ್ತಿದೆಯೋ ಎಂದು ನೋಡಬೇಕಾದರೆ, ಅಲ್ಲಿಗೆ ಒಬ್ಬ ಆಫೀಸರನ್ನು ಇನ್ಸ್‌ಪೆಕ್ಷನಿಗೆ ಹಾಕುತ್ತಾರೆ. ಆತ ಬಂದಕೂಡಲೇ ಲಂಚ ರುಷುವತ್ತು ಶುರುವಾಗುತ್ತದೆ. ಅದಕ್ಕೇನು ಮಾಡುತ್ತೀರಿ?

ಶ್ರೀ ಜಿ. ಬಿ ಶಂಕರರಾವ್:—ಲಂಚವನ್ನು ಕೊಡುವವರು ಲಂಚವನ್ನು ಕೊಡುವುದಿಲ್ಲವೆಂದು ನಿರ್ಧಾರ ಮಾಡಿದರೆ ಸಾಕು. ಆಗ ಅಧಿಕಾರಿಗಳಿಗ ಅಂತಹ ಧೈರ್ಯ ಬರುವುದಿಲ್ಲ.

ಶ್ರೀ ಎ. ನಂಜಪ್ಪ:—ಮಾನ್ಯ ಮಂತ್ರಿಗಳು ಅಲ್ಲಿ ಹೋಗಿ ವರದಿಮಾಡುವ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಿಲ್ಲವೆಂದು ಅವರೇ ಹೇಳಿದರೆ, ಆಗ ನಾನು ಇದನ್ನು ಒಪ್ಪುತ್ತೇನೆ.

ಹಳ್ಳಿಕಾರ್ ಬ್ರೀಡ್‌ಗಳನ್ನು ಹೆಚ್ಚಿಸಬೇಕು. ಇನ್‌ಸಮಿನೇಷನ್ ಸೆಂಟರುಗಳನ್ನು ತೆಗೆಯಬೇಕು ಹೆಚ್ಚು ಹಾಲು ಕೊಡುವ ಹಸುಗಳನ್ನು ಸಾಕಿದರೆ ಅವು ಹೆಚ್ಚು ಹಾಲು ಕೊಡುತ್ತದೆ ಆಗ ಆ ಹಾಲನ್ನು ತೆಗೆದು ಕೊಂಡು ಹೋಗಿ ಹಾಲಿನ ಕೇಂದ್ರಗಳಿಗೆ ಕೊಡುತ್ತಾರೆ. ಎರಡನೆಯದು ಅಮೃತ್-ಮಹಲ್ ದನಗಳನ್ನು ಸರ್ಕಾರದವರು ಖಾಸಗಿಯವರಿಗೆ ಏಕೆ ಕೊಡಬಾರದು? ಅವರಿಗೆ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಬಿ. ಗಂಗಣ್ಣ:—ಕೇಂದ್ರ ಸರ್ಕಾರದ ಆದೇಶದಂತೆ ಡೈರಿ ಫಾರಂಗೆ ಲೋನ್ ಕೊಡಬಾರದು ಎಂದು ಹೇಳುತ್ತಾ ಇದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ದನಕರುಗಳ ಅಭಿವೃದ್ಧಿಗಾಗಿ ಬೇರೆ ಏನಾದರೂ ಯೋಜನೆ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್:—ಶ್ರೀಮತಿ. ನಾಗರತ್ನಮ್ಮನವರು ಕೋಳಿಗೆ ಬದಲಾಗಿ ಕುರಿ ಕೊಡಿ ಎಂದು ಹೇಳಿದರು, ಕುರಿ ಕೊಡಶಕ್ಕ ಯೋಜನೆ ಇಲ್ಲ. ಕಟ್ಟಡದ ವಿಚಾರ ಹೇಳಿದರು, ಪಂಚಾಯ್ತಿ ಕಾನೂನು ಪ್ರಕಾರ ತಾಲ್ಲೂಕು ಬೋರ್ಡಿನವರೇ ಕಟ್ಟಡ ಕಟ್ಟಬೇಕೆಂದು ಇದ್ದುದರಿಂದ ಅವರು ರೆಸಲ್ಯೂಷನ್

ಪಾಸ್ ಮಾಡಿ ನಂತರ ಕಟ್ಟಡ ಕಟ್ಟಬೇಕಾಗುತ್ತದೆ. ಕಟ್ಟಡ ಇರಲಿ ಇಲ್ಲದೇ ಹೋಗಲಿ, ಜಾನುವಾರುಗಳಿಗೆ ಆಸ್ಪತ್ರೆ ಬೇಕು, ಮೊದಲು ಅದನ್ನು ಮಂಜೂರುಮಾಡಿ ಕೊಡಿ ಅಂತ ಹೇಳಿದ್ದರಿಂದ ಮಂಜೂರು ಮಾಡಲಾಗಿದೆ. ಆಸ್ಪತ್ರೆಗಳನ್ನು ಸರ್ಕಾರದವರು ನಡಸುತ್ತಾರೆ ಆದ್ದರಿಂದ ಕಟ್ಟಡವನ್ನು ಅವರೇ ಕಟ್ಟಿಸಿಕೊಡಬೇಕೆಂದು ಅವರು ಹೇಳುತ್ತಾರೆ. ಆದ್ದರಿಂದ ಕಟ್ಟಡ ಕಟ್ಟಿತಕ್ಕ ಜವಾಬ್ದಾರಿ ಹೊತ್ತುಕೊಂಡರೆ ಆಸ್ಪತ್ರೆ ಕೊಡಬೇಕಾಗುತ್ತದೆ.

ಶ್ರೀಮತಿ ನಾಗರತ್ನಮ್ಮ:—ಜೀಪು ಕೊಡಬೇಕು.

ಶ್ರೀ ಜಿ. ಬಿ. ಶಂಕರರಾವ್:—ಅದು ಆಗುವುದಿಲ್ಲ.

ಅಮೃತ ಮಹಲ್ ವಿಚಾರ ಹೇಳಿದರು. ಸರ್ಕಾರದ ಇಲಾಖೆಯ ಮುಖಾಂತರ ದೊಡ ಫಾರಂ ನಡೆಸಿ ಅದು ಲಾಭದಾಯಕವಾಗಿ ನಡೆಯುತ್ತಾ ಇದೆ. ಶ್ರೀಮಾನ್ ಗಂಗಣ್ಣನವರು ರಿಸರ್ವ್ ಬ್ಯಾಂಕಿನಿಂದ ಆದೇಶ ಬಂದಿದೆ, ಡೈರಿ ಫಾರಂ ಮಾಡುವುದಕ್ಕೆ ಸಾಲ ಕೊಡಕೂಡದು ಎಂಬುದಾಗಿ, ಎಂದು ಹೇಳಿದರು, ಬ್ಯಾಂಕಿನ ಮೇಲೆ ನಮಗೆ ಹತೋಟಿ ಇಲ್ಲ. ಸಾಧ್ಯವಾದರೆ ಆ ನಿಯಮ ಸಡಲಿಸಿ ಕೊಡಲಿಕ್ಕೆ ಪ್ರಯತ್ನ ಮಾಡಿರಿ ಎಂದು ಹೇಳುತ್ತೇನೆ. ಅದು ಬೇರೆ ವಿಷಯ. ಹಾಸನದ ಡೈರಿ ವಿಚಾರ ದೇವೇಗೌಡರು ಹೇಳಿದರು, ಈಗಿರತಕ್ಕ ೯ ಡೈರಿಗಳ ಜೊತೆಗೆ ಇನ್ನು ೪ ಡೈರಿ ಸೆಂಟರ್ಸ್‌ನ್ನು ೪ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆರೆಯಬೇಕೆಂದು ಅಳವಡಿಸಿಕೊಂಡಿದ್ದೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಆಲೂರು ಹನುಮಂತಪ್ಪ (ಅರಣ್ಯ ಶಾಖೆಯ ರಾಜ್ಯ ಮಂತ್ರಿಗಳು):—ಸ್ವಾಮಿ. ಅರಣ್ಯ ಇಲಾಖೆ ಮೇಲೆ ಉಪಯುಕ್ತವಾದ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅರಣ್ಯವನ್ನು ಅನಾವಶ್ಯಕವಾಗಿ ಕಡಿಯುತ್ತಾ ಇದ್ದಾರೆ, ಕಾಡು ನಾಶವಾಗುತ್ತಾ ಇದೆ, ಅದರ ಪರಿಣಾಮವಾಗಿ ಮಳೆ ಕಡಿಮೆಯಾಗುತ್ತಾ ಇದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ದೊಡ್ಡ ದೊಡ್ಡ ಪಟ್ಟಣಗಳಿಗೆ ಮತ್ತು ಭದ್ರಾವತಿ ಐರನ್ ವರ್ಕ್ಸ್ ಮುಂತಾದ ಕಡೆಗಳಿಗೆ ಇದ್ದಲು ಮತ್ತು ಸೌದೆ ಬೇಕಾಗುತ್ತದೆ, ಅಂತ ಸಂದರ್ಭದಲ್ಲಿ ಮಾತ್ರ ವರ್ಕಿಂಗ್ ಪ್ಲಾನ್ ಪ್ರಕಾರ ಕಾಡನ್ನು ಕಡಿಯ ಬೇಕಾಗುತ್ತದೆ, ಕಾಡಿನಲ್ಲಿ ಕಡಿದಂತಹ ಮರಗಳ ಜಾಗದಲ್ಲಿ ಪ್ಲಾಂಟೇಷನ್ ಪುನಃ ಮಾಡುತ್ತಾರೆ. ಕಾಡನ್ನು ಕಡಿಯುವುದನ್ನು ಕಡಿಮೆ ಮಾಡಿದರೆ ಒಳ್ಳೆಯದು ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಬೇಕಾದಷ್ಟು ಸಿಕ್ಕುತ್ತದೆ, ಅದನ್ನು ಕಾರ್ಖಾನೆ ಹೋಟೇಲು ಮತ್ತು ಮನೆಯಲ್ಲಿ ಸೌದೆಗೆ ಬದಲಾಗಿ ಉಪಯೋಗ ಮಾಡಬೇಕೆಂದು ಹೆಚ್ಚಾಗಿ ಪ್ರಯತ್ನ ಮಾಡಿದಲ್ಲಿ ಅನಾವಶ್ಯಕವಾಗಿ ಕಾಡು ಕಡಿಯುವುದು ನಿಲ್ಲಬಹುದು ಎಂಬುದು ನನ್ನ ಅಭಿಪ್ರಾಯ. ನಮ್ಮ ಕಾಡಿನ ಸಂಪತ್ತು ೧೮ ಪರ್ಸೆಂಟ್ ಇದೆ. ಆಲ್ ಇಂಡಿಯಾ ಪಾಲಿಸಿ ಪ್ರಕಾರ ೩೩ ಪರ್ಸೆಂಟ್ ಆಗಬೇಕು, ಈ ಬಗ್ಗೆ ಏನು ಕಾರ್ಯ ಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳಿದರು. ನಮ್ಮಲ್ಲಿ ೪೨ ಲಕ್ಷ ಎಕರೆ ಗೋಮಾಳ ಪ್ರದೇಶ ಇದೆ, ಸುಮಾರು ೨೧ ಲಕ್ಷ ಎಕರೆ ಖರಾಬು ಜಮೀನು ಇದೆ. ಇದರಲ್ಲಿ ಫಾರಂ ಫಾರೆಸ್ಟ್ ಮಾಡಬೇಕೆಂದು ಬಹಳ ಹಿಂದಿನಿಂದ ಕಾರ್ಯಕ್ರಮ ನಡೆಸಿಕೊಂಡು ಬರುತ್ತಾ ಇದ್ದೇವೆ. ೮ ಸಾವಿರಕ್ಕೂ ಮೇಲ್ಪಟ್ಟು ಇರತಕ್ಕ ಗ್ರಾಮ ಪಂಚಾಯ್ತಿಗಳಲ್ಲಿ ದಟ್ಟವಾದ ಕಾಡುಗಳು ಇರತಕ್ಕ ಗ್ರಾಮ ಪಂಚಾಯ್ತಿಗಳನ್ನು ಬಿಟ್ಟು ಮೈದಾನ ಪ್ರದೇಶವಾಗಿರತಕ್ಕ ಕೋಲಾರ, ಬೆಂಗಳೂರು, ಚಿತ್ರದುರ್ಗ, ಹಾಸನದ ಕೆಲವು ಭಾಗ, ರಾಯಚೂರು, ಧಾರವಾಡ, ಗುಲ್ಬರ್ಗ, ಬಿಜಾಪುರ, ಬೆಳಗಾಂನ ಕೆಲವು ಭಾಗ ಬಳ್ಳಾರಿಯ ಕೆಲವು ಭಾಗ, ಮೈಸೂರು, ಮಂಡ್ಯ ಕೆಲವು ಭಾಗ ಹೀಗೆ ಮೈದಾನ ಪ್ರದೇಶ ಎಲ್ಲಿ ಇದೆ ಅಂತಹ ಪ್ರದೇಶದಲ್ಲಿ ಫಾರಂ ಫಾರೆಸ್ಟ್ ಮಾಡಿ, ಸಸಿಗಳನ್ನು ನೆಡಿಸಿ ಅರಣ್ಯ ಇಲಾಖೆಯ ಅಧಿಕಾರಿಗಳ ಮತ್ತು ಜಿಲ್ಲಾ ಅಧಿಕಾರಿಗಳ ಕಾರ್ಯಚಟುವಟಿಕೆಯಿಂದಲೂ ಮತ್ತು ಖಾಸಗಿ ಮುಖಂಡರ ಕಾರ್ಯಚಟುವಟಿಕೆಯಿಂದಲೂ ಕೂಡ ಈ ಕಾರ್ಯ ಯಶಸ್ವಿಯಾಗಿ ಆಗಬೇಕಾಗಿದೆ.

೧೯೭೦–೭೧ಕ್ಕೆ ೩೫ ಲಕ್ಷ ರೂಪಾಯಿ ಬರುವುದರಲ್ಲಿ, ಹೆಚ್ಚು ಭಾಗ ಫಾರಂ ಫಾರೆಸ್ಟಿಗೆ, ಅಫಾರೆಸ್ಟೇಷನ್ನಿಗೆ ಕೊಡುವ ಅಭಿಪ್ರಾಯವಿದೆ, ಇದಕ್ಕೆ ಮುಖ್ಯ ಮಂತ್ರಿಗಳು ಮತ್ತು ವ್ಯವಸಾಯ ಇಲಾಖೆ ಮಂತ್ರಿಗಳು ಸಮ್ಮತಿ ಕೊಟ್ಟಿದ್ದಾರೆ ಎಂದು ಹೇಳಲು ಸಂತೋಷವಾಗುವುದು. ಸರಕಾರಿ ಜಮೀನಿನಲ್ಲಿ ಬೆಟ್ಟಗುಡ್ಡದ ಜಮೀನು ೯೬ ಲಕ್ಷ ಇದೆ, ಅದರಲ್ಲಿ ೨೫ ಲಕ್ಷ ಸ್ಕ್ರಬ್ ಫಾರೆಸ್ಟಿದೆ, ಸುಮಾರು ೧೬ ಲಕ್ಷ ಡೆಸಿಡ್ಯುಯಸ್ ಫಾರೆಸ್ಟಿದೆ. ಅದರಲ್ಲಿ ಪ್ಲಾನ್‌ಮಾಡಿ ಸರಿಯಾದ ಕ್ರಮವಹಿಸಿ ಮರ ಬೆಳೆಸಬೇಕೆಂದಿದ್ದೇವೆ. ಎಂಥ ಮರ ಬೆಳೆಸಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆ, ಯೂಕಲಿಪ್ಟಸ್ ಮರ ಬೆಳೆಸಬೇಕೆಂಬ ಯೋಚನೆ ಇದೆ, ಈಗ ವರ್ಷಕ್ಕೆ ಒಂದೂವರೆ ಲಕ್ಷ ಟನ್ ಯೂಕಲಿಪ್ಟಸ್ ಬೇಕು.

(ಶ್ರೀ ಆಲೂರು ಹನುಮಂತಪ್ಪ)

ಅದು ಸಾಲದು, ನಾಲ್ಕೂವರೆ ಲಕ್ಷ ಟನ್ ಬೇಕು ಎಂದು ಹೇಳುತ್ತಿದ್ದಾರೆ. ಆದುದರಿಂದ ಒಂದು ಲಕ್ಷ ೪ ಸಾವಿರ ಎಕರೆಯಲ್ಲಿ ಯೂಕಲಿಪ್ಟಸ್ ಮರ ಬೆಳೆಯುವುದು ಸಾಲದು. ಕೇಂದ್ರ ಸರಕಾರ ೭೮-೭೯ ರವರೆಗೆ ಕೊಡುತ್ತಿದ್ದ ಹಣವನ್ನು ಸಂಪೂರ್ಣವಾಗಿ ನಿಲ್ಲಿಸಿರುವುದರಿಂದ ಫಾರೆಸ್ಟ್ ಕಾರ್ಪೋರೇಷನ್ ಮಾಡಬೇಕೆಂಬ ಅಭಿಪ್ರಾಯ ಬಂದಿದೆ. ಈಗ ಸ್ಕ್ರಬ್ ಫಾರೆಸ್ಟಿನಲ್ಲಿರುವ ಜಮೀನಿನಲ್ಲಿ, ಬೆಟ್ಟಗುಡ್ಡಗಳಲ್ಲಿ ಮರಹಾಕುವುದಕ್ಕೆ ಸಾಧ್ಯವಿಲ್ಲದಿರುವ ಕಡೆ ೮ ಲಕ್ಷ ಎಕರೆಯಲ್ಲಿ ಮೊದಲು ಮರ ಬೆಳೆಸಿ ನಂತರ ಡ್ರೈ ಡೆಸಿಡ್ಯುಯಸ್ ಫಾರೆಸ್ಟ್ ನಾಲ್ಕೂವರೆ ಲಕ್ಷ ಎಕರೆಯಲ್ಲಿ ಬೆಳೆಸಬೇಕು, ಹೀಗೆ ಹನ್ನೆರಡೂವರೆ ಲಕ್ಷ ಎಕರೆಯಲ್ಲಿ ಮರ ಬೆಳೆಸುವ ಯೋಜನೆ ಇದೆ. ಗಂಧದ ಮರ, ಹುಣಿಸೆ, ಬೇವು, ಸಿಲ್ವರ್ ಓಕ್ ಮತ್ತು ಬೀಡಿ ಎಲೆಗೆ ಬೇಕಾದ ಮರ ಬೆಳೆಸುವ ಯೋಚನೆ ಇದೆ. ಮಧ್ಯಪ್ರದೇಶದಲ್ಲಿ ಒಂದು ಕೋಟಿಗಿಂತ ಹೆಚ್ಚು ವರಮಾನ ಬೀಡಿಯಿಂದ ಬರುವುದು. ಅದು ಎಕನಾಮಿಕಲ್ ಎಂದು ಹೇಳುವುದುಂಟು, ಅಂಥ ಮರ ಬೆಳೆಸುವ ಯೋಜನೆ ಇದೆ. ಇಂದು ಜಂಗಲ್ ಮರ ಮತ್ತು ಸ್ಕ್ರಬ್ ಫಾರೆಸ್ಟ್ ಹೆಚ್ಚಾಗಿದೆ, ಅದನ್ನು ತೆಗೆದು ಸರಿಯಾದ ವ್ಯವಸ್ಥೆ ಮಾಡುವ ಕಾರ್ಯಕ್ರಮ ಕಾರ್ಪೋರೇಷನ್ನಿನಲ್ಲಿದೆ. ೧೬ ಲಕ್ಷ ಎಕರೆ ಇರುವ ಡ್ರೈ ಡೆಸಿಡ್ಯುಯಸ್ ಫಾರೆಸ್ಟಿನಲ್ಲಿ ಬೊಂಬು ಬೆಳೆಸಬೇಕೆಂದು ಹೇಳಿದ್ದಾರೆ, ಅದನ್ನು ಬೆಳೆಸಬೇಕಾಗಿಲ್ಲ, ಅದೇ ಬೆಳೆಯುವುದು, ಬೊಂಬು ೬೦ ವರ್ಷಗಳಿಗೊಂದು ಸಲ ಹೂ ಬಿಡುವುದು. ಇಂದು ಎಲ್ಲಾ ಕಡೆ ಬೊಂಬು ಬೇಕು, ಕೈಗಾರಿಕೆಗಳಿಗೆ, ಕಾಗದದ ಕಾರ್ಖಾನೆ ಮುಂತಾದವುಗಳಿಗೆ ಬೇಕು. ಈಗ ಇರುವುದು ಸಾಕಾಗುವುದಿಲ್ಲ ಎಂದು ಒಂದು ವರ್ಷದಿಂದ ಅದನ್ನು ಬೆಳೆಸುವ ಯೋಜನೆ ಇದೆ. ಕೆಲವರು ಟೀಕೆ ಮಾಡುತ್ತಾರೆ. ಅದಕ್ಕೆ ಅವಕಾಶ ಕೊಡದಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ಯಾಷ್ಯೂ ಬೆಳೆಸಬೇಕು. ತೆಂಗು ಬೆಳೆಯಬೇಕು ಎಂಬ ಯೋಜನೆ ಇದೆ, ಬನಾನಾಸ್ ಸಹ ಬೆಳೆಸಬೇಕು, ಸ್ಕ್ರಬ್ ಫಾರೆಸ್ಟಿನಲ್ಲಿ ಹುಲ್ಲು ಬೆಳೆಯಲು ವ್ಯವಸ್ಥೆ ಮಾಡಬೇಕು, ಅದರಿಂದ ಕಾರ್ಖಾನೆ ಪ್ರಾರಂಭಿಸಲು ಅವಕಾಶವಾಗುವುದು ಎಂಬ ಅಭಿಪ್ರಾಯವಿದೆ. ಹುಣಿಸೆಮರ ಹೆಚ್ಚು ಬೆಳೆದರೆ ಅದರಿಂದ ಆಸಿಡ್ ತಯಾರಿಸುವ ಕಾರ್ಖಾನೆ ಸ್ಥಾಪಿಸಬಹುದು. ಇಂದು ಫಾರಿನ್ ಎಕ್ಸ್‌ಛೇಂಜಿಗಾಗಿ ನಮ್ಮಿಂದ ೨ ಕೋಟಿ ರೂಪಾಯಿ ಹೋಗುವುದು. ಕೆಲವು ಕಡೆ ರಸ್ತೆಗಳ ಪಕ್ಕದಲ್ಲಿ ಸಾಲುಮರಗಳಿಲ್ಲ, ಬಿಜಾಪುರ ಬಾಗಲಕೋಟೆ ಮುಂತಾದ ಕಡೆ ಅವುಗಳಿಲ್ಲ, ಚಿತ್ರದುರ್ಗ-ತುಮಕೂರು ರಸ್ತೆಯಲ್ಲಿ ಸಾಕಷ್ಟಿಲ್ಲ, ಸಾಲು ಮರಗಳು ಬೇಕು, ಬೆಳೆಸಬೇಕು ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಹೊಂಗೆ ಗಿಡ ಹಿಂಡಿ, ಗೊಬ್ಬರ ಮುಂತಾದ್ದಕ್ಕೆ ಉಪಯೋಗವಾಗುವುದರಿಂದ ಅದನ್ನು ಬೆಳೆಸುವ ಯೋಜನೆ ಸಹ ಇದೆ. ಗ್ರಾಮಗಳಿಗೆ ಹೋಗುವ ಅಪ್ರೋಚ್ ರಸ್ತೆಯಲ್ಲಿ ಮರ ನೆಡಬೇಕೆಂದಿದೆ, ಅವನ್ನು ಜಮೀನುದಾರರೇ ನಡಬೇಕು, ಆದರೆ ಅವರು ಅವನ್ನು ಕಡಿಯಲು ಅಧಿಕಾರವಿಲ್ಲ.

ಇನ್ನು ೧ ಲಕ್ಷ ೫೦ ಸಾವಿರ ಎಕರೆಯನ್ನು ರೆವೆನ್ಯೂ ಇಲಾಖೆಯಿಂದ ತೆಗೆದುಕೊಳ್ಳಲಾಗಿದೆ ಎಂದು ಸೋಮಶೇಖರಪ್ಪನವರು ಟೀಕೆಮಾಡಿದರು. ಅದನ್ನು ತೆಗೆದುಕೊಳ್ಳಬಾರದು ಎಂದು ತಿಳಿಸಿದ್ದಾರೆ. ಆದಷ್ಟು ತೀವ್ರವಾಗಿ ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕಮಾಡುವ ಜವಾಬ್ದಾರಿಯನ್ನು ಬಹಳ ಸಂತೋಷದಿಂದ ಸರಕಾರ ಒಪ್ಪಿಕೊಳ್ಳುವುದು. ಅದನ್ನು ಮಾಡುವ ಉದ್ದೇಶ ಸರಕಾರಕ್ಕಿದೆ. ಭದ್ರಾವತಿ ಕಾರ್ಖಾನೆಯಲ್ಲಿ ದುರ್ವ್ಯಯವಾಗಿದೆ ಎಂದು ಹೇಳಿದ್ದಾರೆ. ಕಂಟ್ರಾಕ್ಟರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಸೇರಿಕೊಂಡು ಮರಗಳು, ಇದ್ದಿಲುಮೂಟೆ, ಬೊಂಬು ಮುಂತಾದವನ್ನು ಅರಣ್ಯದಿಂದ ಸಾಗಿಸಿ ನಷ್ಟಮಾಡಿದ್ದಾರೆ ಎಂದು ಆಪಾದಿಸಿದ್ದಾರೆ, ಇದು ಬಹಳ ಗಹನವಾದ ವಿಷಯ. ಇದರ ಬಗ್ಗೆ ಒಂದು ತನಿಖೆ ನಡೆಸುತ್ತೇನೆ. ಸಂದರ್ಭ ಬಂದಾಗ ಈ ಸಭೆಗೆ ಆ ವಿಚಾರದಲ್ಲಿ ಮಾಹಿತಿ ಕೊಡುತ್ತೇನೆ. ಅಲ್ಲದೆ ತೀವ್ರವಾಗಿ ಈ ವಿಚಾರಕ್ಕೆ ಗಮನ ಕೊಡುತ್ತೇನೆ ಎಂದು ಹೇಳುತ್ತೇನೆ. ಇಂದು ಕಾಡಿನಲ್ಲಿ ಬೀಟೆ ಮರ ಮತ್ತು ಗಂಧದ ಮರ ಸ್ಮಗಲ್ ಆಗುತ್ತಿದೆ, ಕಾರುಗಳಲ್ಲಿ ಅವನ್ನು ಸಾಗಿಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಪತ್ರಿಕೆಯಲ್ಲಿ ಕೂಡ ಅದು ಬಂದಿದೆ, ಎಷ್ಟೋ ಕೇಸುಗಳಾಗಿವೆ, ಅಂಕಿ ಅಂಶ ಇದೆ, ಆದರ ವಿಚಾರವನ್ನು ಪೋಲೀಸು ಇಲಾಖೆಗೆ ವಹಿಸಿದಾಗ ತನಿಖೆ ಮಾಡಬೇಕು, ಮಹಜರು ಮಾಡಬೇಕು, ಸಾಕ್ಷಿಗಳನ್ನು ಕೋರ್ಟಿಗೆ ಹಾಜರುಪಡಿಸಬೇಕು. ಕೋರ್ಟಿನಲ್ಲಿ ರುಜುವಾತು ಆಗದಿದ್ದರೆ ಕೇಸು ವಜಾ ಆಗುವುದು. ಕೆಲವು ಸಂದರ್ಭಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು. ಗಂಧದ ಮರದ ಬಗ್ಗೆ ಸರಕಾರ ತೀವ್ರವಾಗಿ ಯೋಚನೆಮಾಡಿದೆ, ಸ್ಪೈಕ್ ರೋಗದಿಂದ ಅದು ನಷ್ಟವಾಗುತ್ತಿದೆ, ಬೆಲೆ ಬಾಳುವ ಆ ಮರವನ್ನು ರಕ್ಷಣೆ ಮಾಡಬೇಕು ಎಂದು ಇಲಾಖೆ ಯೋಚನೆ ಮಾಡುತ್ತಿದೆ.

ಇಂದು ಫೈಲುಗಳ ಇತ್ಯರ್ಥವಾಗುವುದರಲ್ಲಿ ಕಾಲವಿಳಂಬವಾಗುತ್ತಿದೆ ಎಂದು ಸದಸ್ಯರು ಆಪಾದಿಸಿದ್ದಾರೆ. ಅರ್ಜಿ ಬಂದರೆ ಎಷ್ಟು ಬೇಗ ವಿಲೇ ಮಾಡಲು ಸಾಧ್ಯವೋ ಅಷ್ಟು ಬೇಗ ಮಾಡಲು ಪ್ರಯತ್ನ

ಮಾಡುತ್ತಿದ್ದೇವೆ, ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಇಲಾಖೆ ಲೆವಲ್‌ನಲ್ಲಿ ಬೇಗನೇ ಇತ್ಯರ್ಥ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಎಷ್ಟು ಅರ್ಜಿ ಬಂದಿವೆ, ಎಷ್ಟು ಪೆಂಡಿಂಗಿನಲ್ಲಿವೆ ಎಂದು ನೋಡಿ ಬೇಗನೆ ತೀರ್ಮಾನಮಾಡುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ. ಎಲ್ಲಿ ಅನಾವಶ್ಯಕವಾಗಿ ಕಾಲಹರಣ ವಾಗುವುದೋ ಅದನ್ನರಿತು ಕ್ರಮಪಡಿಸಬೇಕು, ಎಂದು ಆದಕ್ಕೆ ಚೀಫ್ ಕನ್‌ಸರ್ವೇಟರುಗಳ ಮೀಟಿಂಗನ್ನು ತಿಂಗಳಿಗೊಂದು ಸಲ ಕರೆಯಬೇಕು, ಕನ್‌ಸರ್ವೇಟರು ಡಿ ಎಫ್ ಓ ಗಳ ಮೀಟಿಂಗನು ತಿಂಗಳಿಗೊಂದು ಸಲ ಕರೆದು ಬೇಕಾದ ವಿಚಾರಗಳ ಬಗ್ಗೆ ಚರ್ಚೆಮಾಡಬೇಕು, ಹಾಗೆಯೇ ರೇಂಜ್ ಆಫೀಸರುಗಳ ಮೀಟಿಂಗ್ ಕರೆದು ಚರ್ಚೆಮಾಡಿ ತೀವ್ರವಾಗಿ ಅರ್ಜಿ ಮುಂತಾದ್ದನ್ನು ಇತ್ಯರ್ಥ ಮಾಡಬೇಕು ಎಂದು ಏರ್ಪಾಡು ಮಾಡಿದ್ದೇವೆ,

ಇಂಟರ್-ಸ್ಟೇಟ್ ಸೀನಿಯಾರಿಟಿ ಪಟ್ಟಿ ಬಗ್ಗೆ ನನಗೆ ಹೇಳುವಂಥದ್ದೇನೂ ಇಲ್ಲ, ಹೈಕೋರ್ಟಿನಲ್ಲಿ ರಿಟ್ ಅರ್ಜಿ ಇತ್ಯರ್ಥವಾಗದೆ ಇರುವುದರಿಂದ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

೮-೩೦ P.M.

ಕೆಲವು ಸಂದರ್ಭಗಳಲ್ಲಿ ಫೈಲು ಡಿಸ್ಪೋಸ್ ಆಗುವುದಿಲ್ಲ, ಪೆಂಡಿಂಗ್ ಇರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಕಠಿಣ ಸಮಸ್ಯೆಗಳಿದ್ದಾಗ ಸ್ವಲ್ಪಮಟ್ಟಿಗೆ ನಿಧಾನವಾಗುತ್ತದೆ. ಅನಾವಶ್ಯಕವಾಗಿ ನಿಧಾನ ಮಾಡುವಂಥ ಪರಿಸ್ಥಿತಿ ಬರುವುದಿಲ್ಲ.

೧ನೇ ಜೂನ್ ೧೯೬೯ರಿಂದೀಚೆಗೆ ಫಾರೆಸ್ಟ್ ರೂಲ್ಸ್ ಬಂದಿದೆ. ಯೂನಿಫಾರಂ ಫಾರೆಸ್ಟ್ ರೂಲ್ಸ್ ಪಬ್ಲಿಷ್ ಮಾಡಿದ್ದೇವೆ. ಅದು ಜಾರಿಗೆ ಬಂದ ಮೇಲೆ ಕೆಲವು ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಕಠಿಣವಾದ ಪರಿಸ್ಥಿತಿಯುಂಟಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ಈಗಾಗಲೇ ತಂದಿದ್ದಾರೆ. ಮನೆಗಳಿಗೋಸ್ಕರ, ಸ್ವಂತ ಉಪಯೋಗಕ್ಕೆ ಅರಣ್ಯದಿಂದ ಸೌದೆ ಮುಂತಾದುವನ್ನು ತೆಗೆದುಕೊಳ್ಳುವುದರಲ್ಲಿ ಹಿಂದಿನಿಂದ ಏನು ರೈಟ್ಸ್ ಮತ್ತು ಪ್ರಿವಿಲೆಜಸ್ ಇತ್ತು ಅದರ ಬಗ್ಗೆ ಸರಿಯಾದ ವ್ಯವಸ್ಥೆಮಾಡಿಕೊಂಡು ಅವರಿಗೆ ಅನ್ವಯಿಸತಕ್ಕ ಹಾಗೆ ಕೆಲವು ರಿಯಾಯಿತಿಗಳನ್ನು ಕೊಡಬೇಕು ಎಂದು ಇದ್ದೇವೆ. ತೀರ್ಥಹಳ್ಳಿ, ಶಿವಮೊಗ್ಗ ಭಾಗಗಳಿಗೆ ಪ್ರವಾಸ ಹೋದ ಕಾಲದಲ್ಲಿ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಮ್ಯಾನ್ಯುಯಲ್‌ನಲ್ಲಿ ಏನು ಪ್ರಿವಿಲೆಜಸ್ ಇವೆ ಅದನ್ನು ಮುಂದುವರಿಸಿ ಕೊಡುತ್ತೇವೆ. ಮಲೆನಾಡಿನ ರೈತರಿಗೆ ಅನಾವಶ್ಯಕವಾದ ತೊಂದರೆ ಕೊಡಬೇಕೆಂಬ ಉದ್ದೇಶವಿಲ್ಲ. ಕೆಲವರು ಪರ್ಮಿಟ್‌ಗಳನ್ನು ಸಾ ಮಿಲ್‌ಗಳಿಗೆ ಮಾರಿ ದುರ್ವ್ಯವಹಾರ ಮಾಡತಕ್ಕ ಸನ್ನಿವೇಶ ಸರ್ಕಾರದ ಗಮನಕ್ಕೆ ಬಂದಾಗ ಅದನ್ನು ತಡೆಗಟ್ಟಬೇಕೆಂಬ ದೃಷ್ಟಿಯಿಂದ ಕೆಲವು ನಿರ್ಬಂಧಗಳನ್ನು ಮಾಡಲಾಯಿತೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ಮಲೆನಾಡಿನ ರೈತರಿಂದ ಕಾಡಿನ ರಕ್ಷಣೆಯಾಗುತ್ತಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ನಮಗೆ ಇರತಕ್ಕ ಸಿಬ್ಬಂದಿ ಕಾಡನ್ನು ರಕ್ಷಣೆ ಮಾಡುತ್ತಿದ್ದರೂ ಕೂಡ, ರಾತ್ರಿ ಕಾಲದಲ್ಲಿ ರೈತರು ಕಾಡನ್ನು ರಕ್ಷಣೆ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಪೋಲೀಸ್ ಮತ್ತು ರೆವೆನ್ಯೂ ಇಲಾಖೆಯವರ ಸಹಕಾರ ಹಾಗೂ ಗ್ರಾಮಸ್ಥರ ಸಹಕಾರ ನಮಗೆ ಬೇಕು. ದೊಡ್ಡದಾಗಿರುವ ಕಾಡಿನಲ್ಲಿ ಯಾವ ಕಡೆಯಿಂದ ಯಾವ ಕಡೆಗೆ ದುರ್ವ್ಯವಹಾರಗಳು ನಡೆಯುತ್ತವೆಯೋ ಅವನ್ನು ಕಂಡು ಹಿಡಿದು ಇನ್‌ವೆಸ್ಟಿಗೇಷನ್‌ನಲ್ಲಿ ಸಹಾಯ ಮಾಡಿದ್ದಾರೆ. ರೈತರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಹೋಗುವುದಿಲ್ಲ ಎನ್ನುವುದನ್ನು ನಾನು ಈ ಮಾನ್ಯ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ವರ್ಷ ಕೆಲವು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಮಾಡಿದ್ದೇವೆ ಎನ್ನುವುದರ ಬಗ್ಗೆ ವಿವರ ಗಳನ್ನು ಈಗಾಗಲೇ ಕೊಟ್ಟಿರುವ ಪುಸ್ತಕದಲ್ಲಿ ತಿಳಿಸಲಾಗಿದೆ. ೧೯೭೦-೭೧ನೇ ಸಾಲಿನಲ್ಲಿ, ಮಾನ್ಯ ಸದಸ್ಯರು ಏನು ವಿಷಯಗಳನ್ನು ಹೇಳಿದ್ದಾರೆ ಅವುಗಳ ಬಗ್ಗೆ ತೀವ್ರತೆಯಿಂದ ಯೋಚನೆಮಾಡಿ ಎಷ್ಟು ವೇಗವಾಗಿ ಕಾರ್ಯ ಮಾಡಬಹುದೋ ಮತ್ತು ಅನಾವಶ್ಯಕವಾಗಿ ಕಾಲ ಕಳೆಯುವುದನ್ನು ತಪ್ಪಿಸಿ, ವರ್ಕಿಂಗ್ ಪ್ಲಾನ್ ಮಾಡಿಕೊಂಡು ಕೆಲಸ ಮಾಡುತ್ತೇವೆ. ದಟ್ಟವಾದ ಕಾಡಿನಲ್ಲಿ ಕೆಲವು ಭಾಗಗಳಲ್ಲಿ ಕೆಲವು ಮರಗಳು ನೂರಾರು ವರ್ಷಗಳಿಂದ ಇವೆ. ಆ ಭಾಗದಲ್ಲಿ ಸಣ್ಣ ಮರಗಳು ಅಭಿವೃದ್ಧಿಯಾಗ ಬೇಕಾಗಿದ್ದರೆ, ಅಂಥ ದೊಡ್ಡ ಮರಗಳನ್ನು ಕಡಿದರೆ, ಸಣ್ಣ ಮರಗಳು ಗಾತ್ರವಾಗಿ ಬೆಳೆಯುವುದು ಮಾತ್ರವಲ್ಲ, ಆದರಿಂದ ಹೆಚ್ಚಿನ ಪ್ರಯೋಜನ ಸರ್ಕಾರಕ್ಕೆ ಆಗುತ್ತದೆ. ಮುಂಡಗೋಡು ಮುಂತಾದ ಕೆಲವು ಕಡೆಗಳಲ್ಲಿ ಸಿಲೋನ್ ರೀಪ್ಯಾಟ್ರಿಯಾಟ್ಸ್‌ಗಾಗಿ ಕೆಲವು ಪ್ರಾಜೆಕ್ಟ್‌ಗಳನ್ನು ಮಾಡಲು ಜಮೀನನ್ನು ಕೊಡಲಾಗಿದೆ. ಅದೇ ರೀತಿಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೋಸ್ಕರ ಒಂದೊಂದು ಡಿವಿಜನ್‌ನಲ್ಲಿ

(ಶ್ರೀ ಆಲೂರು ಹನುಮಂತಪ್ಪ)

ಒಂದೊಂದು ಕ್ಷೇತ್ರವನ್ನು ವ್ಯವಸಾಯಕ್ಕೆ ತೆಗೆದುಕೊಳ್ಳಬೇಕೆಂದು ಅದಕ್ಕೆ ಬೇಕಾದ ಪ್ರಪೋಸಲ್ಸ್ ತಯಾರಿಸಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈಗಾಗಲೇ ಒಂದು ಪ್ರಾರಂಭ ಮಾಡಿದ್ದೇವೆ. ಅದೇ ರೀತಿಯಲ್ಲಿ ಎಲ್ಲ ಡಿವಿಜನ್‌ಗಳಲ್ಲಿ, ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಪ್ರೋತ್ಸಾಹ ಕೊಡಬೇಕು ಎನ್ನುವ ದೃಷ್ಟಿಯಿಂದ ಜಮೀನನ್ನು ರಿಲೀಸ್ ಮಾಡಿ, ವ್ಯವಸಾಯ ಇಲಾಖೆಯಿಂದಲೂ ಸಹಕಾರ ಇಲಾಖೆಯಿಂದಲೂ ಹೆಚ್ಚಿನ ನೆರವನ್ನು ಕೊಟ್ಟು ಅವರಿಗೆ ಉತ್ತೇಜನ ಕೊಡಬೇಕು ಎನ್ನುವುದು ಸರ್ಕಾರದ ನೀತಿ ಮತ್ತು ಧೋರಣೆಯಾಗಿದೆ.

ಅರಣ್ಯ ಜಮೀನು ಕೊಡಬೇಕು ಎಂದು ನನಗೆ ಷೆಡ್ಯೂಲ್ ಕ್ಯಾಸ್ಟ್‌ನವರಿಂದ, ಪೊಲಿಟಿಕಲ್ ಸಫರರ್ಸ್‌ನಿಂದ, ಮಿಲಿಟರಿಯವರಿಂದ, ಕೋ ಆಪರೇಟಿವ್-ಫಾರ್ಮಿಂಗ್ ಮಾಡಲು ಜಮೀನು ಬೇಕೆಂದು ಬಂದಿರುವಂಥ ಅರ್ಜಿಗಳು ಸಾವಿರಾರು ಇವೆ ಎಂದು ಕಾಣಿಸುತ್ತದೆ. ಸಾಧ್ಯವಾದಷ್ಟು ಬಡವರ ಬಗ್ಗೆ ಅನುಕಂಪ ತೋರಿಸಿ, ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳಿವೆ ಅದನ್ನು ಬಿಟ್ಟು ಕೊಡತಕ್ಕ ವ್ಯವಸ್ಥೆಯನ್ನು ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ಆ ಪ್ರಕಾರ ೧೯೬೪ನೇ ಸಾಲಿನಲ್ಲಿ ೧,೨೪,೦೦೦ ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ರೆವೆನ್ಯೂ ಇಲಾಖೆಗೆ ವರ್ಗ ಮಾಡಲಾಗಿದೆ. ೮ ಲಕ್ಷ ಎಕರೆಯಷ್ಟು ಜಮೀನು ರೆವೆನ್ಯೂ ಇಲಾಖೆಗೆ ಬರತಕ್ಕದ್ದು ಇದೆ ಎಂದು ಸರ್ಕಾರದ ಹುಕುಂ ಕೂಡ ಆಗಿದೆ. ಈ ಬಗ್ಗೆ ಸೆಟಲ್‌ಮೆಂಟ್ ಆಫೀಸರ್ಸ್ ಮತ್ತು ಸಿಬ್ಬಂದಿ ನೇಮಕವಾಗದೆ ಎಷ್ಟು ಜಮೀನಿದೆ, ಎಷ್ಟು ಜಮೀನನ್ನು ಯಾರಿಗೆ ಕೊಡಬೇಕು ಎಂಬುದು ತೀರ್ಮಾನವಾಗದೆ ಅರ್ಜಿದಾರರಿಗೆ ಜಮೀನು ಮಂಜೂರಾಗಿಲ್ಲ, ಸರ್ವೆ ಮತ್ತು ಕನ್‌ಸಾಲಿಡೇಷನ್ ಕೆಲಸ ನಡೆದಿಲ್ಲ. ಸರ್ವೆ ಕೆಲಸ ನಡೆದು ಡೀ ಮಾರ್ಕೇಷನ್ ಆಗುವವರೆಗೂ ಜಮೀನು ಅವರ ಕೈ ಸೇರುವುದಿಲ್ಲ. ಆದಷ್ಟು ತೀವ್ರತೆಯಿಂದ ಮತ್ತು ಯಾವ ಘನ ಉದ್ದೇಶದಿಂದ ಸರ್ಕಾರ ಒಂದು ಹುಕುಂ ಮಾಡಿತೋ ಅದನ್ನು ಕಾರ್ಯಗತ ಮಾಡಿ ಜಮೀನಿಲ್ಲದೆ ಇರತಕ್ಕ ನಿರುದ್ಯೋಗಿಗಳಿಗೆ ಸಾಧ್ಯವಾದ ಮಟ್ಟಿಗೆ ಜಮೀನನ್ನು ಕೊಡಲು ರೆವೆನ್ಯೂ ಇಲಾಖೆ ಈಗಾಗಲೇ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ ಎಂದು ಹೇಳುತ್ತೇನೆ.

ಎನ್‌ಕ್ರೋಚ್‌ಮೆಂಟ್ ನಾನಾ ಕಡೆಗಳಲ್ಲಿ ನಡೆಯುತ್ತಿದೆ. ಯಾರು ಸ್ವಲ್ಪಮಟ್ಟಿಗೆ ಅನುಕೂಲಸ್ಥರೋ ಅವರೇ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಮುಂದೆ ಸಾಧ್ಯವಾದಷ್ಟುಮಟ್ಟಿಗೆ ಎನ್‌ಕ್ರೋಚ್‌ಮೆಂಟಿಗೆ ಅವಕಾಶವಿಲ್ಲದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೯೬೯-೭೦ನೇ ಇಸವಿಯಲ್ಲಿ ಏನು ಅಂದಾಜು ಮಾಡಿದ್ದೆವೋ, ಅದಕ್ಕಿಂತ ಎರಡೂವರೆ ಕೋಟಿ ರೂಪಾಯಿ ಹೆಚ್ಚಿಗೆ ಅರಣ್ಯ ಇಲಾಖೆಯಿಂದ ಒದಗಿಸಬೇಕೆಂದು ಸಂಪನ್ಮೂಲ ಸಮಿತಿಯವರು ಹೇಳಿದ ಮೇಲೆ, ಆ ವರ್ಷದಲ್ಲಿನ ಆದಾಯ ೧೪ ಕೋಟಿ ರೂಪಾಯಿಗಳಿಗೆ ಬಂದಿದೆ. ಸಾಧ್ಯವಾದಷ್ಟು ಇರತಕ್ಕ ಮರಗಳನ್ನು ಕಡಿದು ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಲ್ಲ. ಸಾಧ್ಯವಾದ ಮಟ್ಟಿಗೂ ಏನು ಲೋಪದೋಷಗಳಿವೆ ಅವನ್ನು ಕಂಡು ಹಿಡಿದು, ಹೆಚ್ಚು ಹಣ ಬರತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಗಂಧದ ಮರದಿಂದ ಹೆಚ್ಚು ಹಣ ಬರುತ್ತದೆ. ಎಷ್ಟು ಮೆಚೂರ್ ಆದ ಗಂಧದ ಮರಗಳಿವೆ, ಅದರಿಂದ ಎಣ್ಣೆಯನ್ನು ತೆಗೆದು ಸೋಪ್ ಫ್ಯಾಕ್ಟರಿಗೆ ಕೊಡತಕ್ಕ ವ್ಯವಸ್ಥೆ ಈಗಾಗಲೇ ನಡೆಯುತ್ತಿದೆ. ಅದರಿಂದ ಹೆಚ್ಚು ಹಣ ಬರುತ್ತದೆ. ಅದೇ ರೀತಿಯಲ್ಲಿ ಟಿಂಬರ್ ಹರಾಜು ಮಾರಾಟದಲ್ಲಿ ಹೆಚ್ಚು ವರಮಾನ ಬಂದಿದೆ. ಹೊರ ರಾಷ್ಟ್ರಗಳಿಗೆ ಮರವನ್ನು ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಕೂಡ ಸಾಧ್ಯವಾದ ಮಟ್ಟಿಗೆ ಮಾಡುತ್ತಿದ್ದೇವೆ. ಕೆಲವು ಜಾತಿಯ ಮರಗಳನ್ನು ಅರಣ್ಯದಲ್ಲಿ ಬೆಳೆಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಕೊಡಬೇಕು ಎಂದು ತೀರ್ಮಾನಮಾಡಿ ಮೊದಲನೆ ಹಂತವಾಗಿ ಈ ವರ್ಷ ೧೦ ಸಾವಿರ ಎಕರೆಯನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಏಳು ಸಾವಿರ ಎಕರೆಯನ್ನು ಈಗಾಗಲೇ ಮಾರಾಟ ಮಾಡಲಾಗಿದೆ. ಅದಕ್ಕಾಗಿ ಮಾಡಿರುವ ಹೈ ಪವರ್ ಕಮಿಟಿಯಲ್ಲಿ ಜಿಲ್ಲಾಧಿಕಾರಿಗಳು ಇದ್ದು ಅವರ ಜೊತೆಗೆ ಅರಣ್ಯ ಇಲಾಖೆಯಿಂದ ಕನ್‌ಸರ್ವೇಟರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿರುತ್ತಾರೆ. ಅವರು ಆದಷ್ಟು ತೀವ್ರತೆಯಿಂದ ಕೆಲಸ ಮಾಡುತ್ತಿದ್ದಾರೆ.

ಎಲ್ಲ ಜಿಲ್ಲೆಯ ಸದಸ್ಯರನ್ನೂ ಬೇರೆ ಬೇರೆ ದಿವಸದಲ್ಲಿ ಕರೆದು, ಅವರ ಜೊತೆಯಲ್ಲಿ ಚರ್ಚೆಮಾಡಿ ಅವರು ಕೊಡತಕ್ಕ ಉಪಯುಕ್ತವಾದ ಸಲಹೆಗಳನ್ನು, ಅರಣ್ಯ ಇಲಾಖೆಯ ಪ್ರಗತಿಗೋಸ್ಕರ ಮತ್ತು

ರಾಜ್ಯದ ಪ್ರಗತಿಗೋಸ್ಕರ, ರಾಷ್ಟ್ರದ ಪ್ರಗತಿಗೋಸ್ಕರ ಅನುಷ್ಠಾನಕ್ಕೆ ತರುವುದಕ್ಕೆ ಶ್ರಮಿಸುತ್ತೇನೆಂದು ಹೇಳುತ್ತೇನೆ.

ಫಾರೆಸ್ಟ್ರಿ ಫಾರಂ ಮಾಡಲು ಪಂಚಾಯಿತಿಯು ಕೆಲವು ಜಮೀನುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶವಿದೆ. ಅಲ್ಲಿ ಮರಗಳನ್ನು ಬೆಳೆಸಿ ಅವುಗಳ ರಕ್ಷಣೆಯನ್ನು ಮಾಡಬೇಕಾಗಿದೆ. ಇಡೀ ರಾಜ್ಯದಲ್ಲಿ ಇದಕ್ಕಾಗಿ ಒಂದು ಸೆಮಿನಾರ್ ಮಾಡಬೇಕಾಗಿ ಬಂತು. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಒಂದು ಸೆಮಿನಾರ್ ಮಾಡಲಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಈಗಿನ ಕೇಂದ್ರದ ವ್ಯವಸಾಯ ಮಂತ್ರಿಗಳು ಅದನ್ನು ಉದ್ಘಾಟನೆ ಮಾಡಿದರು. ಅದರ ವಿವರಗಳು ನನ್ನ ಹತ್ತಿರ ಇವೆ. ಒಂದಿರತಕ್ಕ ರೆಸಲ್ಯೂಷನ್‌ಗಳಲ್ಲಿ ಒಂದೊಂದನ್ನೂ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಪಡುತ್ತೇನೆ.

ಅದೇ ರೀತಿ ಜನತೆಯಲ್ಲಿ ಉತ್ಸಾಹ ಬರಬೇಕು. ಒಂದು ಮಗು ಹುಟ್ಟಿದಾಗ ಎರಡು ಸಸಿ ನೆಡಬೇಕು ಎನ್ನುವ ಉತ್ಸಾಹ ಜನರಲ್ಲಿ ಬರಬೇಕು. ಅಂದರೆ ಅದಷ್ಟು ಹೆಚ್ಚು ಸಸಿಗಳನ್ನು ನೆಡಬೇಕು ಎಂದು ಹೇಳುತ್ತೇನೆ. ಕುಟುಂಬ ಯೋಜನೆಯಲ್ಲಿ ಮಕ್ಕಳು ಜಾಸ್ತಿ ಆಗಬಾರದು ಎಂದು ಹೇಳಿದರೆ, ಅರಣ್ಯ ಬೆಳೆಸಲು ಹೆಚ್ಚು ಮರಗಳನ್ನು ಬೆಳೆಸಬೇಕು ಹೆಚ್ಚು ಸಸಿಗಳನ್ನು ನೆಡಬೇಕು ಎಂದು ನಾನು ಹೇಳುತ್ತೇನೆ. ಈ ರೀತಿ ಸಾರ್ವಜನಿಕರೂ ಸಹ ಪ್ರಯತ್ನಿಸಿ ಸಹಕರಿಸಿದರೆ ಇದು ಯಶಸ್ವಿಯಾಗುತ್ತದೆ. ಅಲ್ಲದೆ ಇರತಕ್ಕಂಥ ಮರಗಳನ್ನು ರಕ್ಷಣೆ ಮಾಡುವುದು ಕೂಡ ಆಗತ್ಯ. ಮರಗಳನ್ನು ಬೆಳೆದರೆ ಗ್ರೀನ್ ರೆವಲ್ಯೂಷನ್ ಅಂದರೆ ಹಸಿರು ಕ್ರಾಂತಿ ಆಗುತ್ತದೆ. ಶಾಸ್ತ್ರೀಯವಾಗಿ ಇದನ್ನು ಕಂಡು ಹಿಡಿದಿದ್ದಾರೆ. ರಸ್ತೆಗಳ ಅಕ್ಕಪಕ್ಕದಲ್ಲಿ ಗೋಮಾಳದಲ್ಲಿ ಮರಬೆಳೆಸುವಂಥಾದ್ದು ಶಾಸ್ತ್ರೀಯವಾಗಿದೆ. ಈ ಬಗ್ಗೆ ವಿವರ ಸಂಗ್ರಹಿಸಲು ಒಂದು ಪ್ರೊ-ಫಾರ್ಮಾವನ್ನು ಜಿಲ್ಲಾಧಿಕಾರಿಗಳಿಗೆ ಕಳಿಸಿದ್ದೇವೆ. ಎಲ್ಲಾ ಇಲಾಖೆಯ ಅಧಿಕಾರಿಗಳು ಇದನ್ನು ತೀವ್ರವಾಗಿ ಪರಿಶೀಲಿಸಬೇಕು. ಯಾಕಂದರೆ ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೇವೆ. ಅರಣ್ಯ ಇಲಾಖೆಯ ಸಿಬ್ಬಂದಿಯ ಸಹಕಾರದಿಂದ ಈ ಕಾರ್ಯ ಯಶಸ್ವಿಯಾಗಿ ಮಾಡಿದರೆ ವನ ಸಂಪತ್ತು ಹೆಚ್ಚು ಮಾಡಲು ಅನುಕೂಲವಾಗುತ್ತದೆ. ನಮ್ಮಲ್ಲಿ ಈಗ ಶೇಕಡ ೧೮ ಪರ್ಸೆಂಟ್ ಕಾಡು ಇದೆ. ಆದರೆ ಅಖಿಲ ಭಾರತ ಮಟ್ಟಕ್ಕೆ ಅಂದರೆ ೩೩ ಪರ್ಸೆಂಟಿಗೆ ನಾವು ಹೋಗಬೇಕು ಎಂಬುದರ ಕಡೆ ಗಮನ ಕೊಡಬೇಕಾಗಿದೆ. ಇದಕ್ಕಾಗಿ ಮಾನ್ಯ ಸದಸ್ಯರನ್ನೂ ಉಳಿದವರನ್ನೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆ ಈ ಬೇಡಿಕೆಯನ್ನು ಸಂತೋಷದಿಂದ ಮಂಜೂರು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER : The question is ;

"That the respective sums not exceeding the amounts mentioned in the Demands Nos 20,22 38 and 51 be granted to the Government to defray the charges which will come in course of payment during the year for the period ending 31st March 1971."

The motion was adopted

As directed by the chair the motion for demands for grants adopted by the House are reproduced below.

DEMAND No 20—AGRICULTURE, HORTICULTURE AND FISHERIES.

31. Agriculture.

"That a sum not exceeding Rs. 11,19.54,000 be granted to the Government to defray the charges which will come in course of payment during the financial year for the period ending 31st day of March 1971, in respect of 'Agriculture,."

DEMAND No. 22—ANIMAL HUSBANDARY

33. Animal Husbandry.

"That a sum not exceeding Rs. 2,05,76,000 be granted to the Government to defray the charges which will come in course of payment during the financial year for the period ending 31st day of March 1971, in respect of 'Animal Husbandry'."

DEMAND No. 38—FOREST.

70. Forest

"That a sum not exceeding Rs.7,55,95,000 be granted to the Government to defray the charges which will come in course of payment during the financial year for the period ending 31st day of March 1971, in respect of "Forest'."

DEMAND No. 51—CAPITAL OUTLAY ON FORESTS.

119. Capital Outlay on Forests.

"That a sum not exceeding Rs.24,00,000 be granted to the Government to defray the charges which will come in course of payment during the financial year for the period ending 31st day of March 1971, in respect of Capital Outlay on Forests'."

MR. DEPUTY SPEAKER : The House will now adjorn and meet again to-morrow at 1 P.M.

The House adjourned at Forty-five Minutes past Eight of the Clock to meet again at One of the Clock on Wednesday the 11th March 1970.

WD 14650—GPB—520—25-7-70

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 11th March 1970.

The House met in the Assembly Chamber, Vidhana Soudha, Bangalore-1, at One of the Clock.

MR. SPEAKER (SRI S. D. KOTHAVALE) in the Chair

STARRED QUESTIONS

(to which oral answers were given)

PROGRAMME FOR REMOVING REGIONAL IMBALANCES IN THE STATE

284. SRI D. B. KALMANKAR (Aland).—

Will the Chief Minister be pleased to state :—

(a) whether Sri M. V. Krishnappa, M. P., has sent a questionnaire regarding the neglect of the old Mysore area ;

(b) whether any replies have been given by the Government, if so, whether the Government will place the correspondence on the table of the House ;

(c) which area of Mysore State (old Mysore area, Bombay Karnatak area, Hyderabad Karnatak area or the other integrated area) is backward in development of agriculture, education, health, employment, representation in Government services, irrigation, roads, Government buildings and industry ;

(d) the *per capita* expenditure incurred by the State Government on the items mentioned in (c) in the different areas mentioned therein since the inception of new State of Mysore in the year 1956 ;

(e) the special programme the Government has envisaged to remove the regional imbalance, if any, in the State ?

SRI VEERENDRA PATIL (Chief Minister).—

(*a*) Yes, Sir.

(*b*) A general reply has been given. Government does not feel it necessary to place this correspondence on the table of the House.

(*c*) And (*d*) Regarding the development of various regions, the position has been set out in the brochure placed by the Chief Minister on the table of the House on 9th September 1969. Copy placed in the Mysore Legislative Library.

(*e*) This will be considered at the proper time.

SRI D. B. KALMANKAR.—In answer to (*b*) it has been stated that a general reply has been given. May I know why that reply cannot be placed before this House ?

SRI VEERENDRA PATIL.—So far as questionnaire letter addressed to me is concerned, I think they have already been published in the papers. I have sent a reply to him and I have stated therein that this is confidential. I have not released that reply to the press also. Therefore I do not feel it is necessary to place it on the table of this House.

† SRI D. B. KALMANKAR.—After the brochure was placed on the table of this House on 9th September 1969 there was lot of agitation and it was stated by many that the figures furnished in that brochure were not correct. May I know the reaction of the Government to that effect, Sir ?

SRI VEERENDRA PATIL.—Whatever letters I had received I have replied them. With regard to discrepancies and incorrectness of the figures quoted in the brochure I have several times stated that if the Hon. Members want to discuss the matter, they are at liberty to do so. I think the Hon. Chair has also given permission to take up that subject for discussion in the near future.

ಶ್ರೀ ಎಸ್. ಎಂ. ಗುರೆಡ್ಡಿ.—ರಾಜ್ಯದಲ್ಲಿ ಪ್ರಾದೇಶಿಕ ಅಸಮತೆ ಇರುವುದರಿಂದ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಇದಕ್ಕೆ ಏನು ಹಣ ಖರ್ಚು ಮಾಡುತ್ತಿದ್ದೀರೋ ಆ ಹಣದಲ್ಲೂ ಅಸಮತೆ ತೋರಿಸಿರುವುದರಿಂದ ಯಾವ ಪ್ರದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿತ್ತೋ ಆ ಮಹತ್ವದ ಕೆಲಸಗಳು ಆಗದೇ ಇರುವುದಕ್ಕೆ ರಾಜ್ಯ ಸರ್ಕಾರ ಕಾರಣವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನೀವು ಹೇಳಿದಂತೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಪ್ಲಾನಿಂಗ್ ಕಮೀಷನ್ನಿನವರು ಮತ್ತು ಕೇಂದ್ರ ಸರ್ಕಾರದವರು ಇಬ್ಬರು ಸೇರಿ ಈ ಹಿಂದುಳಿದ ಪ್ರದೇಶವನ್ನು ಯಾವರೀತಿಯಾಗಿ ಮುಂದಕ್ಕೆ ತರಬೇಕೆಂದು ಸೂಚನೆ ಮಾಡುತ್ತಾರೋ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಾ ಇದ್ದೇನೆ.

---

† indicate that remarks or Speeches have not been revised by the nmembor Concerned.

ಶ್ರೀ ಎಲ್. ಶ್ರೀಕಂಠಯ್ಯ.—ತಾವು (ಸಿ) ಮತ್ತು (ಡಿ) ಗೆ ಉತ್ತರವಾಗಿ Regarding the the development of various regions, the position has been set out in the Brochure placed by the Chief Minister on the table of the House on 9th September 1969 ಆದರೆ ಈಗ ನಮಗೆ ಬಂದಿರತಕ್ಕಂಥ ಅನುಮಾನ ಏಕಪಕ್ಷೀಯ ಅನುಮಾನಗಳು. ನಿಮಗೆ ಯಾವ ಅನುಮಾನವೂ ಇಲ್ಲ. ಆದುದರಿಂದ ಈ ಅನುಮಾನ ಪರಿಹಾರವಾಗುವ ದೃಷ್ಟಿಯಿಂದ ನನ್ನ ಒಂದು ಅಭಿಪ್ರಾಯ ಏನೆಂದರೆ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ಅಂತಹ ಒಂದು ಕಮಿಟಿಯನ್ನು ಅಪಾಯಿಂಟ್ ಮಾಡಿ ಅವರ ಒಂದು ರಿಪೋರ್ಟ್ ತರಿಸಿಕೊಂಡು ಅದನ್ನು ನಮ್ಮ ಮುಂದೆ ಇಟ್ಟರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರಲ್ಲಿ ಯಾವ ಅಸಮತೆಯೂ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಕೊಟ್ಟಿರುವಂತೆ ಒಪ್ಪಿಕೊಳ್ಳಿ ಎಂದು ಏನೂ ಹೇಳುವುದಿಲ್ಲ. ನಾವು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ತಪ್ಪು ಇದ್ದರೆ, ಹೊಸ ಮೈಸೂರು ಮತ್ತೆ ಹಳೇ ಮೈಸೂರಿನಲ್ಲಿ ಏನಾದರೂ ಅಸಮತೆ ಇದ್ದರೆ ಅದನ್ನು ಚರ್ಚೆ ಮಾಡಿದ ಮೇಲೆ ಮುಂದೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು.

SRI BAPU GOWDA.—Whether Government still feels that the figure furnished in that brochure are not correct?

SRI VEERENDRA PATIL.—I have nevr said that the figures furnished are not correct. If I had felt that those figures were not correct, I would not have placed them on the table of this House. I have made all possible efforts to scrutinise the figures received from various departments. If the hon. Members were to point any discrepancies, I will certainly look into the matter.

SRI SIDDAIAH KASHIMATH.—May I know whether Sri M. V. Krishnappa, M. P., has sent his questionnaire to the Chief Minister of Mysore and to the Prime Minister of India?

SRI VEERENDRA PATIL.—I do not know whether he has sent his questionnaire to the Prime Minister of India But I have received the questionnaire.

SRI B. L. NARAYANASWAMY.—May I know the reactions of the Hon Member of Parliament who sent the questionnaire?

SRI VEERENDRA PATIL.—How can I say about reactions. He wrote something to which I have replied. It was only exchange of letters.

ಶ್ರೀ ಎಂ. ನಾಗಪ್ಪ.—ತಾವು (ಸಿ) ಗೆ ಉತ್ತರವಾಗಿ, "This will be considered at the proper time" ಎಂದು ಹೇಳಿದ್ದೀರಿ. ಪ್ರಪರ್ ಟೈಂ ಅಂದರೆ ಅದನ್ನು ಯಾವಾಗ ಎಂದು ಭಾವಿಸಬೇಕು ? ಹೈದರಾಬಾದ್ ಪ್ರದೇಶ ಬಹಳ ಹಿಂದುಳಿದಿದೆ ಎಂದು ಗೊತ್ತಾಗಿದೆ. ಈ ದೃಷ್ಟಿಯಿಂದ ತಾವೇನಾದರೂ ಫೇಸ್ಡ್ ಸ್ಕಿಂ ಎಂದು ತಯಾರು ಮಾಡಿದ್ದೀರಾ ಏನಾದರೂ ತಯಾರು ಮಾಡಿದರೆ ಆ ಫೇಸ್ಡ್ ಸ್ಕಿಂ ಏನು ಎನ್ನುವುದನ್ನು ಸೂಚಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ಇದೆ ಎಂದು ಹೇಳುವುದಕ್ಕಾಗುದಿಲ್ಲ. ೪ನೇ ಪಂಚವಾರ್ಷಿಕ ಯೋಜನೆ ಫೈನಲೈಸ್ ಆದನಂತರ ಎಷ್ಟು ಹಣ ಬರುತ್ತದೋ ಅದನ್ನು ನೋಡಿಕೊಂಡು ಯಾವ ಯಾವ ಪ್ರದೇಶಗಳಿಗೆ ಇದು ಬರುತ್ತದೋ ನೋಡಿಕೊಂಡು ಆಯಾ ಪ್ರದೇಶಗಳ ಡೆವಲಪಮೆಂಟ್ ಆಕ್ಟಿವಿಟೀಸ್ ಖರ್ಚು ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

SRI C. K. RAJAIAH SHETTY.—If Mr. M. V. Krishnappa has given specific points, what prevents the Government to answer those points instead of giving statments and counter-statements in the press which creates complications in the minds of the public?

SRI VEERENDRA PATIL —That is why I have not entered into that controversy. Whatever letters and questionnaires he wrote to me, all those have been published in the news papers. But so far as my reply to him is concerned, I never said it is meant for publication I have also not released it to the press. I don't want to create bad blood in the State.

MR. SPEAKER.—Next Question by Sri Boriah.

Sri H. SIDDAVEERAPPA.—Sir, few more supplementaries be allowed on the earlier question.

MR SPEAKER.—I have already gone to the next question. Anyway, I have allotted a day just before we disperse after this Budget Session for discussing this subject and Hon. Members will then have sufficient opporitunity to discuss it. Next question No. 334.

MEDICAL EXPENSES OF MINISTERS

334. Sri T. P. BORAIAH (Bannur).—Will the Chief Minister be pleased to state:—the amount of expenditure incurred from April 1967 up todate towards medicines to each of the Ministrs, Ministers of State and Deputy Ministers.

SRI VEERENDRA PATIL (CHIEF MINISTER) —

vide statment appended.

STATEMENT

Showing the amount of expenditure incurred towards medicine from April 1967 up to dtte.

		Rs. P.
1	Chief Minister	2,658-08
2	Minister for Transport	9,972-06
3	Minister for Agriculture	1,823-12
4	Minister for Finance, Planning and Youth Welfare	1,385-39
5	Minister for Law, Labour and Parliamentary Affairs	631-30
6	Minister for Education	1,120-00

7	Minister for Development ...	...	4,470-77
8	Minister for Pnblic Works ...	...	374-61
9	Minister for Industries, Information and Publicity		Nil
10	Minister for Health ...	...	718-84
11	Minister for Social Welfare ...	...	Nil
12	Minister for Rcvnue ...	...	24-84
1	Minister of State for Minor Irrigation	...	1,591-85
2	Minister of State for Forests ...	...	131-10
3	Minister of State for Veterinary services, Animal Husbandry and Dairy Development	...	261-23
4	Minister of State for Fisheries and Ports		131-36
5	Minister of State for Food and Civil Supplies	.	547-36
6	Minister of State for Municipal Administration		Nil
1	Deputy Minister for Transport and Tourism	...	231-77
2	Deputy Minister for Industries ...	...	185-51
3	Deputy Minister for Agriculture	.	384 26
4	Deputy Minister for Co-operation	...	1,776-36
5	Deputy Minister for Major Irrigation and Electricity		198-77
6	Deputy Minister for Social Welfare	...	687-82
7	Deputy Minister for Health ...	...	83-04
8	Deputy Minister for Education	...	187-84
9	Deputy Minister for Pubiic Works	...	1,025-29
10	Deputy Minister for Sericulture	...	178-75
11	Deputy Minister for Home ..	...	200-80

ಶ್ರೀ ಟಿ. ಪಿ. ಬೋರಯ್ಯ:—ಸ್ವಾಮಿ ನಾನು ಪ್ರಶ್ನೆ ಕೇಳುವ ಮೊದಲೇ ಒಂದು ವಿಚಾರ ಹೇಳಬೇಕಾಗಿದೆ. ಮಂತ್ರಿಗಳು ಮತ್ತು ಶಾಸನಾ ಸಭಾಸದಸ್ಯರು ಇವರೆಲ್ಲರದೂ ಒಟ್ಟಿಗೆ ಸೇರಿಸಿ ಕೇಳಿದೆ. ಈ ಪ್ರಶ್ನೆಯಲ್ಲಿ ಮಂತ್ರಿಗಳು ಮತ್ತು ಉಪ-ಮಂತ್ರಿಗಳದ್ದು ಮಾತ್ರ ಇದೆ. ಶಾಸನಾಸದಸ್ಯರದ್ದೂ ಕೊಡಿಸಬೇಕು.

ಅಧ್ಯಕ್ಷರು.—ಈಗ ಇದರಲ್ಲಿ ಏನು ಇದೆ ಅದರ ಮೇಲೆ ತಮ್ಮ ಉಪಪ್ರಶ್ನೆ ಕೇಳಿ ಈಗ ನೀವು ಏನು ಹೇಳುತಿದ್ದೀರೋ ಅದೇ ಪ್ರತ್ಯೇಕ ಪ್ರಶ್ನೆಯಾಯಿತು.

ಶ್ರೀ ಬಿ. ದೊಡ್ಡಬೋರೆಗೌಡ.—ಸರಕಾರದ ಮಂತ್ರಿಗಳು ಇಲ್ಲಿ ಮೆಡಿಕಲ್ ಎಕ್ಸ್‌ಪೆನ್‌ಸಸ್ ಎಂದು ವೆಚ್ಚ ಮಾಡಿರುವ ಪಟ್ಟಿಯಲ್ಲಿ ಎರಡು ವರ್ಷಗಳಿಂದ ಸಾಕಾದಷ್ಟು ಔಷದಿಗಳನ್ನು ಉಪಯೋಗಿಸಿದ್ದಾರೆ, ಸಾರಿಗೆ ಮಂತ್ರಿಗಳು ಸುಮಾರು ೯೯೭೨ ರೂಪಾಯಿಗಳು ಮತ್ತು ಸಹಕಾರ ಮಂತ್ರಿಗಳು ೪,೪೭೦-೭೭ ರೂಪಾಯಿಗಳಷ್ಟು ವೆಚ್ಚ ಮಾಡಿದ್ದಾರೆ ಎಂದು ಇದೆ. ಇದರ ಬಗ್ಗೆ ಸಾಕಾದಷ್ಟು ಮಾಹಿತಿಗಳನ್ನು ಒದಗಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್—ಯಾವ ಯಾವ ಔಷಧಿಗಳನ್ನು ಪಯೋಗಿಸಬೇಕು ಎನ್ನುವ ವಿವರಗಳನ್ನು ಕೊಡುವುದು ಕಷ್ಟ. ಹೆಚ್ಚು ಔಷಧಿಗಳನ್ನು ಪಯೋಗಿಸಬೇಕಾದರೆ ಸಾಕಾದಷ್ಟು

(ಶ್ರೀ ವೀರೇಂದ್ರ ಪಾಟೀಲ್)

ಪ್ರೊಸೀಜರ್ ಇದೆ. ಇದರಂತೆ ಅವರನ್ನು ಪರೀಕ್ಷೆ ಮಾಡುವ ಡಾಕ್ಟರ್ ಮೊದಲು ಸರ್ಟಿಫೈ ಮಾಡಬೇಕು. ಆ ನಂತರ ಇವರು ಕೊಡುವ ಬಿಲ್ಲುಗಳನ್ನು ಡಾಕ್ಟರ್ ಸರ್ಟಿಫೈ ಮಾಡಬೇಕು. ಹಾಗೆ ಸರ್ಟಿಫೈ ಮಾಡಿರುವ ಬಿಲ್ಲುಗಳಿದ್ದರೇನೇ ಅಕೌಂಟೆಂಟ್ ಜನರಲ್‌ರು ಪಾಸು ಮಾಡುತ್ತಾರೆ, ಇಲ್ಲದಿದ್ದರೆ ಇಲ್ಲ.

ಶ್ರೀ ಬಿ. ಬಾಸ್ಕರ ಶೆಟ್ಟಿ.—ಇದರಲ್ಲಿ ಕೈಗಾರಿಕೆ ಮಂತ್ರಿಗಳು, ಸಮಾಜ ಕಲ್ಯಾಣ ಮಂತ್ರಿಗಳು ಮತ್ತು ಪುರಸಭಾ ಖಾತೆಯ ರಾಜ್ಯ ಮಂತ್ರಿಗಳು ಈ ಮೂವರಿಗೆ ಮೂರು ವರ್ಷಗಳಿಂದಲೂ ಯಾವ ರೋಗಗಳು ಬಂದಿಲ್ಲ ಎಂದು ತಿಳಿದುಕೊಳ್ಳಬಹುದೇ?

MR. SPEAKER.—The Supplementary is disallowed

ಶ್ರೀ ಹೆಚ್. ಸಿದ್ದವೀರಪ್ಪ.—ಮೂರುಜನ ಮಂತ್ರಿಗಳೂ ಮೂರು ಕಾಸಿನ ಔಷಧಿಗಳನ್ನೂ ಪಡೆಯಂದೇ ಇರುವುದರಿಂದ ಇವರುಗಳು ಬಹಳ ಆರೋಗ್ಯ ಉಳ್ಳಂತಹ ಮಂತ್ರಿಗಳು ಎಂದು ಸರಕಾರ ದವರು ಇವರಿಗೆ ಸರ್ಟಿಫಿಕೇಟು ಕೊಡಬಹುವಲ್ಲವೆ?

MR. SPECKER.—It does not arise here.

ಶ್ರೀ ಎಂ ಎಸ್ ಕೃಷ್ಣನ್.- ಇಲ್ಲಿ ಸುಮಾರು ೩೬ ಸಾವಿರದವರೆಗೆ ಮೆಡಿಕಲ್ ಬಾಬಿಗೆ ಖರ್ಚು ತೋರಿಸಿದ್ದಾರೆ. ಇದನ್ನು ನೋಡಿದರೆ ಮಂತ್ರಿ ಮಂಡಲವು ಅಷ್ಟು ಹೆಲ್ದಿ ಮಂತ್ರಿ ಮಂಡಲವಾಗಿಲ್ಲ ಎಂದು ಕಾಣುತ್ತೆ. ಇದಕ್ಕಾಗಿ ಸರಿಯಾದ ಹೆಲ್ದಿ ಮಂತ್ರಿಮಂಡಲ ಮಾಡಲು ಯುವಜನರನ್ನು ಕೂಡಿದ ಮಂತ್ರಿ ಮಂಡಲ ಮಾಡುತ್ತಾರೆಯೇ?

MR. SPEAKER.—How does it arise as a supplementary? it is also disallowed.

SRI D. B. KALAMNKAR.—May I know whether these medicine include Liquors and some other things?

MR SPEAKER.—That Supplementary is disallowed.

ಶ್ರೀ ಎಲ್. ಶ್ರೀಕಂಠಯ್ಯ.—ಇದರ ಒಟ್ಟು ವೆಚ್ಚದ ಅಂದಾಜು ನೋಡಿದರೆ ಸುಮಾರು ೫೦ ಸಾವಿರ ದವರೆಗೆ ಬರುತ್ತದೆ. ಇದನ್ನು ನೋಡಿದರೆ ಇದು ಸೋಷಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಗೆ ಅನುಗುಣ ವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕಾಗಿ ಸಲಹೆ ಮಾಡುವುದು ಇಷ್ಟು ಹಣವನ್ನು ಮೆಡಿಕಲ್ ಬಾಬಿಗೆ ಖರ್ಚು ಮಾಡುವುದನ್ನು ಬಿಟ್ಟು ಇದೇ ಹಣವನ್ನು ಯಾವುದಾದರೂ ಬಡ ಜನರ ಆಸ್ಪತ್ರೆಗೆ ಕೊಟ್ಟರೆ ಅನುಕೂಲವಾಗುತ್ತಿತ್ತಲ್ಲವೆ?

MR. SPEAKER.—That is outside the scope of the Question and so it is disallowed.

REGULARISATION OF SERVICE OF LOCAL, CANDIDATES

349. SRI M. S. KRISHNAN (Malleswaram).—
Will the Chief Minister be pleased to state.—

(a) the number of local candidates serving in the various departments in the Government (the Department-wise break up and number of candidates who have put in 1 year, 2 years 3 years, 4 years, and 5 years, service may be given).

(b) how many among the local candidates belong to SCs and STs

(c) whether represenstions have been received by the Government from N. G. Os Association that the services of all the local candidates be regularised.

(d) whether ex-Chief Minister Sri S.Nijalingappa had assured on the floor of the House that Government would regularise the services of these local candidates, if so, when.?

(e) whether it is a fact that the Government is not prepared to regularise the services of the local candidates now if so, the reasons for the same.

SRI VEERENDRA PATIL (Chief Minister)—

(a) About 7,000 Deprtment-wise details are being collected and will be furuished later.

(b) The information is not readily available it is being collected and will be furnished later.

(c) Yes, Sir.

(d) No, Sir.

(e) Government is not in a position to regularise the services of local candidates as they were recruited only temporarily pending regular recruitment in accoradance with the Cadre and Recruitment Rules of the various Departments. An employee recruited on temporary basis can have no claim for absortion m rely on the ground that he has been continued in service for some length of time.

ಶ್ರೀ ಎಂ. ಎಸ್. ಕೃಷ್ಣನ್.—(ಡಿ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದೆ. ೧೯೬೭ರಲ್ಲಿ ಶ್ರೀ ನಿಜಲಿಂಗಪ್ಪನವರು ರೆಗ್ಯುಲರೈಸೇಷನ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿರಲಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.— ಬಹುಶಃ ಆ ರೀತಿ ಆಶ್ವಾಸನೆ ಕೊಟ್ಟಿಲ್ಲ ಎಂದು ಅನಿಸುತ್ತದೆ ೧೯೬೫ರಲ್ಲಿ ಯಾರು ಯಾರು ಲೋಕಲ್ ಕ್ಯಾಂಡಿಡೇಟರುಗಳಾಗಿ ಇದ್ದರೋ ಅವರೆಲ್ಲರನ್ನೂ [ಬೇರೆ ಕಡೆಗಳಲ್ಲಿ ಆಬಸಾರ್ಬ್ ಮಾಡ ಾಗಿದೆ. ಆದರೆ ಎಲ್ಲ ಲೋಕಲ್ ಕ್ಯಾಂಡಿಡೇಟುಗಳನ್ನೂ ಪೂರ್ತಿಯಾಗಿ ಅಬ್‌ಸಾರ್ ಮಾಡುತ್ತೇವೆಂದು ಆಶ್ವಾಸನೆ ಕೊಟಿ ರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿದಾಗ ಸ್ಪಷ್ಟವಾಗಿ ಹೇಳಿದರು. ಆವೊತ್ತಿನ ದಿವಸ ಯಾರು ಲೋಕಲ್ ಕ್ಯಾಂಡಿಡೇಟುಗಳು ಆಗಿದ್ದರೋ ಅವರಿಗೆ ಮಾತ್ರ ಇದು ಸೀಮಿತ ವಾಗಿರಲ್ಲಿಲ್ಲ. ಮುಂದೆ ಬರುವವರಿಗೂ ಅನ್ವಯಿಸಬೇಕು ಎನ್ನುವ ದೋರಣೆ ಇತ್ತು. ಈಗ ಇದನ್ನು ಬದಲಾಯಿಸಿ ಲೋಕಲ್ ಕ್ಯಾಂಡಿಡೇಟುಗಳಿಗೆ ಅನ್ವಯಿಸದೇ ಹೋದರೆ ತೊಂದರೆಯಾಗುವುದಿಲ್ಲವೆ? ಹಾಗೆ ಸರಕಾರ ತಮ್ಮ ದೋರಣೆ ಬದಲಾಯಿಸಲು ಮೂಲಭೂತವಾಗಿ ಇವ್ದ ಕಾರಣಗಳೇನು?

ಶ್ರೀ ವೀರೇಂದ್ರ ಪಾಟೀಲ್.—ಧೋರಣೆಯನ್ನು ಬದಲಾವಣೆ ಮಾಡುವ ಅವಶ್ಯಕತೆ ಎನೂ ಇದರಲ್ಲಿ ಉದ್ಭವವಾಗುವುದಿಲ್ಲ. ಅವರು ಆ ರೀತಿ ಆಶ್ವಾಸನೆ ಕೊಟ್ಟರು ಎಂದು ಹೇಳಿರುವುದು ನನ್ನ ಮುಂದೆ ಇಲ್ಲ. ಆಗ ಇದ್ದವರನ್ನು ಅಬಸಾರ್ಬ್ ಮಾಡಬೇಕೆಂದು ಇತ್ತು. ಅಗ ಡಿ ಎಲ್ ಆರ್ ಹಾಗೂ ಎಸ್ ಎಲ್ ಆರ್ ಸಿ ಇವುಗಳಿದ್ದವು. ಆಗ ಇದ್ದ ಲೋಕಲ್ ಕ್ಯಾಂಡಿಡೇಟ್ಸ್ ಪ್ರಶ್ನೆಯ ಬಗ್ಗೆ ಯಾವ ರೀತಿ ಮುಂದೆ ಇವರನ್ನು ಅಬಸಾರ್ಬ್ ಮಾಡಬೇಕು ಎನ್ನುವ ಪ್ರಶ್ನೆ ಮಾತ್ರ ಇತ್ತು. ಅದರಂತೆ ೧೯೬೫ರಲ್ಲಿ ಯಾರು ಯಾರು ಇದ್ದರೋ ಅವರನ್ನೆಲ್ಲಾ ಅಬಸಾರ್ಬ್ ಮಾಡಲಾಗಿದೆ.

ಶ್ರೀ ಜಿ. ಆರ್. ಹಾಲಸ್ವಾಮಿ.—ಮೂರು ನಾಲ್ಕು ವರ್ಷಗಳು ಎಂದು ಲೋಕಲ್ ಕ್ಯಾಂಡಿಡೇಟುಗಳು ಕೆಲಸಮಾಡಿ ಮತ್ತೆ ಅವರಿಗೆ ಕೆಲಸಗಳನ್ನು ಕೊಡುವಾಗ ಕೆಲವುವೇಳೆ ಮೂರು ನಾಲ್ಕು ತಿಂಗಳ ಬ್ರೇಕ್ ಆಫ್ ಸರ್ವಿಸ್ ಬರುತ್ತದೆ ಇದರಬಗ್ಗೆ ಪರಿಶೀಲನೆ ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಇದು ಕೇಸುಗಳ ಮೆರಿಟ್‌ಗಳ್ಳಮೇಲೆ ಹೋಗುತ್ತದೆ. ಹೈಪೋಥಿಟಿಕಲ್ ಆಗಿ ಪ್ರಶ್ನೆ ಕೇಳಿದರೆ ಹೇಳುವುದಕ್ಕಾಗುವುದಿಲ್ಲ. ಯಾವುದಾದರೂ ಹಾರ್ಡ್ ಕೇಸುಗಳು ಎಂದು ಇದ್ದ ಅವನ್ನು ಪರಿಶೀಲನೆ ಮಾಡಲು ಸಾಧ್ಯವಾಗುತ್ತದೆ ಎಲ್ಲವನ್ನು ಪರಿಶೀಲನೆ ಮಾಡಬೇಕೆಂದರೆ ಅದು ಕಷ್ಟ

ಶ್ರೀ ಬಿ ಪಿ. ಗಂಗಾಧರ್.—ಲೋಕಲ್ ಕ್ಯಾಂಡಿಡೇಟರುಗಳನ್ನು ಅಬಸಾರ್ಬ್ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರೆ ಅವರಗತಿ ಏನಾಗಬೇಕು? ಕೆಲವರು ಬಹಳ ವರ್ಷಗಳವರೆಗೆ ಕೆಲಸಮಾಡಿ ಮದುವೆಯಾಗಿ ಹೆಂಡತಿ ಮಕ್ಕಳು ಇರುತ್ತಾರೆ. ಇವರಿಗೆ ಕೆಲಸಗಳು ಹೋದರೆ ಮುಂದೆ ಇವರ ಹೆಂಡತಿ ಮಕ್ಕಳಿಗೆ ಕಷ್ಟವಾಗುವುದಿಲ್ಲವೆ? ಇವರ ಬಗ್ಗೆ ಸರಕಾರ ಸಹಾನುಭೂತಿಯಿಂದ ಸಹಾಯ ಮಾಡಲು ಆಗುವುದಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್:—ಮಾನ್ಯ ಸದಸ್ಯರಿಗೆ ಲೋಕಲ್ ಕ್ಯಾಂಡಿಡೇಟುಗಳ ಬಗ್ಗೆ ದಿವಪ ಸಹನುಭೂತಿ ಇದೆಯೋ ಅದಕ್ಕಿಂತ ಹೆಚ್ಚು ಸಹಾನುಭೂತಿ ಇವರ ಬಗ್ಗೆ ಇಲ್ಲದಿದ್ದರೂ ಅವರಿಗಿಂತು ಕಡಿಮೆ ಏನಿಲ್ಲ. ಇದಕ್ಕಾಗಿಯೇ ಅಧಿಕಾರಿಗಳಿಗೆ ಸೂಚನೆಕೊಟ್ಟು ಆಲಟ್‌ರ್‌ನೇಟೀವ್ ಕೆಲಸಗಳನ್ನು ಕೊಡಬೇಕೆಂದು ಇದನ್ನು ವಿಚಾರಮಾಡಿ ಆಡಳಿತದ ನಿಯಮಗಳನ್ನು ಸಡಿಲಮಾಡಿ ಎಲ್ಲೆಲ್ಲಿ ಪೋಸ್ಟಗಳನ್ನು ತುಂಬಲು ಸಾಧ್ಯವಿದೆಯೋ ಅಲ್ಲಿ ಕೊಡಿಸಲು ಪ್ರಯತ್ನ ಮಾಡಲಾಗಿದೆ ಮತ್ತು ಪಬ್ಲಿಕ್ ಅಂಡರ್‌ಟೇಕಿಂಗ್ ಗಳಿಗೆ ಬರೆಯುತ್ತಿದ್ದೇವೆ ಮತ್ತು ಬೇರೆ ಎಲ್ಲಿಯಾದರೂ ಟೆಂಪರರಿ ವೇಕೆನ್ಸಿಸ್ ಇದ್ದರೂ ಅಲ್ಲಿಗೆ ಇವರನ್ನು ಮೊದಲು ನೇಮಿಸಬೇಕು ಎಂದು ಮತ್ತು ಕೆಲವುಕಡೆ ಇರುವ ವೇಕೆನ್ಸಿಗಳನ್ನು ಕೊಡುವಾಗ ಎಸ್ ಷೆಡ್ಯೂಲ್‌ಕ್ಯಾಸ್ಟ್ ಇವರಿಗೆ ರಿಸರ್ವೇಷನ್ ಇಟ್ಟು ಇತರರಿಗೆ ಕೆಲಸಗಳನ್ನು ಕೊಡುವಾಗ ಲೋಕಲ್ ಕ್ಯಾಂಡಿಡೇಟರುಗಳಿಗೆ ಮೊದಲು ಪ್ರಿಫರನ್ಸ್ ಕೊಡಬೇಕೆಂದು ಸೂಚನೆ ಕೊಡಲಾಗಿದೆ ಮತ್ತು ನಮ್ಮಲ್ಲಿ ಟೆಂಪರರಿಯಾಗಿ ಎಲ್ಲೆಲ್ಲಿ ಪೋಸ್ಟ್‌ಗಳನ್ನು ತುಂಬಬೇಕೆಂದು ಇದೆಯೋ ಅಲ್ಲೂಕೂಡ ಇವರನ್ನೇ ನೇಮಿಸ ಬೇಕೆಂದು ಇಂದು ಕ್ಯಾಬಿನೇಟನಲ್ಲಿ ನಿರ್ಣಯಕೂಡ ತೆಗೆದುಕೊಂಡಿದ್ದೇವೆ.

CAFETERIA APPROACH IN FAMILY PLANNING

361. SRI SOMASEKHARAPPA (Hosanagar).—

Will the Minister for Health be pleased to state :—

(a) what is meant by 'Cafeteria approach' in family planning ;

(*b*) the number of women in the State who wear I. U. C. D (Yearwise figures for the last 3 years up to a latest convenient date may be furnished);

(*c*) the number of lady doctors who are exclusively earmarked in family planning work;

(*d*) the number of persons who have undergone Vasectomy Operations (Yearwise figures for the last 3 years up to a latest convenient date may be furnished);

(*e*) whether it has come to the notice of the Government that I. U. C. D is failure ;

(*f*) whether the family planning has declined among women and it has become more and more male-oriented with 'Nirodh' making an aggressive start with men ;

(*g*) the steps the Government has taken to woo women since the success of family planning depends entirely on its acceptance by the fair sex ?

SRI G. BASAVANNAPPA (Deputy Minister for Health) :—

(*a*) Cafeteria approach means that after explaining various methods of family planning to the couples, they are free to choose any particular method desired by them for adoption.

(*b*)	1966-1967	...	87,670
	1967-1968	...	40,782
	1968-1969	...	19,717
	1969-1970	...	9,375

(upto end of November only).

(*c*) 23

(*d*)	1966-1967	...	49,600
	1967-1968	...	1,03,095
	1968-1969	...	81,467
	1969-1970	...	20,683

(upto the end of November 1969).

(*e*) No.

(*f*) No.

(*g*) Women who are eligible for Family Planning methods are systematically contacted and motivated for adopting any method suitable for them by the female field workers and Lady Doctors.

ಶ್ರೀ ಐ. ಸೋಮಶೇಖರಪ್ಪ :— ಕಳೆದ ಮೂರು ವರ್ಷಗಳಲ್ಲಿ ಆರೋಗ್ಯ ಮತ್ತು ಕುಟುಂಬ ಯೋಜನೆಯ ಇಲಾಖೆಯಲ್ಲಿ ೪,೫೭,೫೪೪ ಜನ ಲೂಪವತಿಯರನ್ನು ತಯಾರು ಮಾಡಲಾಗಿದೆ. ಇದರಲ್ಲಿ ಎಷ್ಟು ಜನ ಮದುವೆಯಾಗದವರು ಇದ್ದಾರೆ ಮತ್ತು ಎಷ್ಟು ಜನ ವಿಧವೆಯುವರು ಇದ್ದಾರೆ. ಎಷ್ಟು ಜನ ಮದುವೆ ಯಾದವರೂ ಇದ್ದಾರೆ, ಮತ್ತು ಎಷ್ಟು ಜನ ಆಪರೇಷನ್ ಮಾಡಿಸಿಕೊಂಡಿದ್ದಾರೆ ?

MR. SPEAKER ;— I do not permit that information to be given.

SRI ABDUL KHUDDUS ANWAR :— The Minister is ready with the information.

MR. SPEAKER ;— I do not permit.

ಶ್ರೀ ಎ. ಸೋಮಶೇಖರಪ್ಪ :— ಕುಟುಂಬ ಯೋಜನೆಗೆ ಒಳಪಡುವಂತಹವರು ಎಷ್ಟು ಜನ ಇದ್ದಾರೆ ಮತ್ತು ಫೀಲ್ಡ್ ವರ್ಕರ್ಸ್ ಎಷ್ಟು ಜನ ಇದ್ದಾರೆ. ಲೇಡಿ ಡಾಕ್ಟರೆ ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ:—ಕುಟುಂಬ ಯೋಜನೆಗೆ ಒಳಪಡುವವರು ನಮ್ಮ ದೇಶದಲ್ಲಿ ೧೦ ಕೋಟಿ ಜ ಇದ್ದಾರೆ. ಇದಕ್ಕಾಗಿ ಪ್ರತ್ಯೇಕ ೪೫ ಜನ ಲೇಡಿ ಡಾಕ್ಟರುಗಳು ಇದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ :— ನಮ್ಮ ರಾಜ್ಯದ ಜನಸಂಖ್ಯೆ ಎರಡೂವರೆ ಕೋಟಿ, ಇವರು ೧೦ ಕೋಟಿ ಎಂದು ಹೇಳುತ್ತಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ :— ಇದು ಆಲ್-ಇಂಡಿಯಾ ಫಿಗರ್.

ಶ್ರೀ ಎಚ್. ಸಿದ್ಧವೀರಪ್ಪ :— ನಮಗೆ ನಮ್ಮ ರಾಜ್ಯದ ಸಂಖ್ಯೆ ಬೇಕು.

ಶ್ರೀ ಜಿ. ಬಸವಣ್ಣಪ್ಪ :— ಆ ವಿವರ ಇಲ್ಲ.

ಶ್ರೀ ಎಸ್. ವಿ. ಅಗ್ನಿಹೋತ್ರಿ :— ಈಗ ಮದುವೆಯಾಗದವರಿಗೆ, ವಿಧವೆಯರಿಗೆ ಬಿಟ್ಟು ಕೇವಲ ಮದುವೆಯಾದವರಿಗೆ ಲೂಪ್ ಅಳವಡಿಸಬೇಕು ಎಂದು ಕಾಯಿದೆಯನ್ನುಪಾಸ್ ಮಾಡಲಾಗಿದೆಯೇ?

ಶ್ರೀ ಜಿ. ಬಸವಣ್ಣಪ್ಪ :— ಮದುವೆ ಯಾದವರಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.

SMT. WINNIFRED FERNANDES :— Has it come to the notice of Government that some women have given birth to babies along with the loops ? What is the reason for this?

SRI G. BASAVANNAPPA ;— If specific instance is given, that will be enquired into.

SRI H. SIDDAVEERAPPA ;— Has it come to the notice of Government that on account of the failure of this scheme wherever you have applied these methods some ladies have given birth to babies giving cause for suspicion in the case of their husbands resulting in divorces, family disruptions and even mental aborrations because your scheme has not been working properly?

SRI G. BASAVANNAPPA :— I do not agree. There is no failure in the scheme. In the I. U. C. D. Programme in the beginning there were

some complications; Now Such complications have been removed and there is systematic working of the scheme and so there is no failure.

ಶ್ರೀ ಎಸ್. ಎಂ. ಗುರಡ್ಡಿ :— ಈ ಕುಟುಂಬ ಯೋಜನೆಯಲ್ಲಿ ಕೆಲಸ ಮಾಡುವಂತಹ ಲೇಡಿ ಡಾಕ್ಟರಿಗಾಗಲೀ ಅಥವಾ ಪುರುಷ ಡಾಕ್ಟರಿಗಾಗಲೀ ಸ್ಪೆಸಿಫಿಕ್ ಆಗಿ ಟ್ರೈನಿಂಗ್ ಕೊಡಲಾಗಿದೆಯೇ? ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಲೂಪ್ ದೆಶೆಯಿಂದ ಸಾಕಷ್ಟು ಕಂಪ್ಲೈಂಟ್ಸ್‌ಗಳು ಬರುತ್ತಿವೆ. ಇದನ್ನು ತಡೆಗಟ್ಟುವುದಕ್ಕೋಸ್ಕರ ಇದಕ್ಕಾಗಿಯೇ ಸ್ಪೆಷಲ್ ಆದ ಸಿಬ್ಬಂದಿಯನ್ನು ಏರ್ಪಡಿಸಿ ಅವರಿಗೆ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಟ್ರೈನಿಂಗ್ ಕೊಡುವಂತಹ ಏರ್ಪಾಡು ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ :— ಪ್ರತ್ಯೇಕವಾದ ಶಿಕ್ಷಣವನ್ನು ಕೊಡುವುದಕ್ಕೋಸ್ಕರ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಒಂದೊಂದು ರೀಜನಲ್ ಫ್ಯಾಮಿಲಿ ಪ್ಲಾನಿಂಗ್ ಸೆಂಟರ್‌ಗಳನ್ನು ತೆರೆದು ಅಲ್ಲಿ ಎ. ಎನ್.ಎಂ. ಮಿಡ್‌ವೈಫ್‌ಗಳಿಗೂ ಕೂಡ ಟ್ರೈನಿಂಗ್ ಕೊಡಲಾಗುತ್ತಿದೆ.

ಶ್ರೀ ಕೆ. ಎಂ. ತಮ್ಮಯ್ಯ :— ಗಂಡಸರು ಉಪಯೋಗಿಸುವುದಕ್ಕಾಗಿ ಅಂಗಡಿಗಳಲ್ಲಿ ನಿರೋಧ್‌ಅನ್ನು ಮಾರಾಟಕ್ಕೆ ಇಟ್ಟಿದ್ದೀರಿ. ಅದನ್ನು ಹುಡುಗರು ಕೊಂಡು ಕೊಂಡು ಬೆಲೂನ್ ಆಗಿ ಉಪಯೋಗಿಸುತ್ತಿದ್ದಾರೆ. ಈ ಬಗ್ಗೆ ಏನಾದರೂ ಬಂದೋಬಸ್ತು ಮಾಡಿದ್ದೀರಾ?

ಶ್ರೀ ಜಿ. ಬಸವಣ್ಣಪ್ಪ:— ಎಲ್ಲಾ ಅಂಗಡಿಗಳಲ್ಲಿಯೂ ಕೂಡ ಮಾರಾಟಕ್ಕೆ ಇಟ್ಟಿಲ್ಲ. ಕೆಲವು ರೆಕಗ್‌ನೈಸ್ಡ್ ಷಾಪ್‌ಗಳಲ್ಲಿ ಮಾತ್ರ ಮಾರಾಟಕ್ಕೆ ಇಡಲಾಗಿದೆ.

ಶ್ರೀ ಎಂ. ಎನ್. ರಾಮಣ್ಣ :— ಈ ಕುಟುಂಬ ಯೋಜನೆಯನ್ನು ಆರೋಗ್ಯ ಇಲಾಖೆಯ ಮಂತ್ರಿಗಳಾಗಲೀ ಅಥವಾ ಉಪಮಂತ್ರಿಗಳಾಗಲೀ ಅಡಾಪ್ಟ ಮಾಡಿದ್ದಾರೆಯೇ?

ಶ್ರೀ ಜಿ. ಬಸವಣ್ಣಪ್ಪ :— ನನ್ನ ವಿಷಯದಲ್ಲಿ ಹೇಳುವುದಾದರೆ ನಾನು ಅಡಾಪ್ಟ ಮಾಡಿದ್ದೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ :— ಈ ಕುಟುಂಬ ಯೋಜನೆಯ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ಹೇಳಿದಿರಿ. ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡುವುದಾದರೆ, ೧೯೬೬-೬೭ರಲ್ಲಿ ಇದ್ದ ಸಂಖ್ಯೆಗೂ ೧೯೬೯-೭೦ರಲ್ಲಿ ಇರುವ ಸಂಖ್ಯೆಗೂ ಹೋಲಿಕೆ ಮಾಡಿ ನೋಡಿದರೆ ಪ್ರತಿ ವರ್ಷವೂ ಕೂಡ ಕಡಿಮೆಯಾಗುತ್ತಾ ಬಂದಿದೆ. ಈ ರೀತಿ ಕಡಿಮೆಯಾಗುತ್ತಿರುವುದರಿಂದ ಈ ಯೋಜನೆಯಿಂದ ಯಾವ ಪ್ರಯೋಜನವೂ ಇಲ್ಲ ಎಂದು ಸರ್ಕಾರದವರು ಕಂಡುಕೊಂಡಿದ್ದಾರೆಯೇ?

ಶ್ರೀ ಜಿ. ಬಸವಣ್ಣಪ :— ಐ. ಯು. ಸಿ. ಡಿ. ಬಗ್ಗೆ ಕೆಲವು ನ್ಯೂನತೆಗಳು ಇದುದ್ದರಿಂದ ಈ ರೀತಿ ಯಾಗುವುದಕ್ಕೆ ಅವಕಾಶವಾಯಿತು. ಈ ನ್ಯೂನತೆಯನ್ನು ಈಗ ಸರಿಪಡಿಸಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು ಬರುತ್ತಿದ್ದಾರೆ.

ಶ್ರೀ ಬಾಪುಗೌಡ :— ಈ ಯೋಜನೆಯನ್ನು ಕೈಕೊಂಡ ಮೇಲೆ ೧೯೬೯ರ ವರೆಗೆ ಎಷ್ಟು ಮಕ್ಕಳು ಹುಟ್ಟುವುದು ಕಡಿಮೆಯಾಯಿತು ಎಂಬುದನ್ನು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ :— ನನ್ನ ಹತ್ತಿರ ಆಲ್-ಇಂಡಿಯಾ ಫಿಗರ್ ಇದೆ. ಅದರ ಪ್ರಕಾರ ಒಂದು ಕೋಟಿ ೧೦ ಲಕ್ಷ ಮಕ್ಕಳು ಹುಟ್ಟುವುದನ್ನು ತಪ್ಪಿಸಲಾಯಿತು. ಮೊದಲು ಸಾವಿರ ಜನಸಂಖ್ಯೆಗೆ ೪೨ ಮಕ್ಕಳು ಹುಟುತ್ತಿದ್ದರೆ ಅದನ್ನು ಈಗ ೩೯ಕ್ಕೆ ಇಳಿಸಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ :— ಕುಟುಂಬ ಯೋಜನೆಯನ್ನು ಜಾರಿಗೆ ತಂದ ಮೇಲೆ ಎಷ್ಟು ಜನ ಮಂತ್ರಿಗಳು ಈ ಯೋಜನೆಗೆ ಒಳಪಟ್ಟಿದ್ದಾರೆ. ನುಡಿದಂತೆ ನಡೆ ಎಂದು ಹೇಳಬೇಕಾದರೆ ಮೊದಲು ಮಂತ್ರಿಗಳು ಈ ಯೋಜನೆಗೆ ಒಳಪಟ್ಟಿದ್ದಾರೆಯೇ ಎಂಬುದನ್ನು ತಿಳಿಸಬೇಕು

MR. SPEAKER :— That supplementary is disallowed

SRI M. H. JAYAPRAKASHNARAYAN :— Why have you disallowed? Is it not relevant?

MR. SPEAKER :— I do not allow personal Supplementary to be put.

ಶ್ರೀ ಹಂಜಿಶಿವಣ್ಣ :— ಸ್ವಾಮಿ ಈಗ ಸರ್ಕಾರಿ ನೌಕರರಿಗೆ ಮೂರು ಮಕ್ಕಳಿಗಿಂತ ಹೆಚ್ಚು ಆದರೆ ಅವರಿಗೆ ಇನ್‌ಕ್ರಿಮೆಂಟ್ ನಿಲ್ಲಿಸುತ್ತೇವೆ, ಬಡ್ತಿ ಕೊಡುವುದಿಲ್ಲ, ಎಂದು ಕಾನೂನು ಮಾಡಿದ್ದೀರಿ, ಆದ್ದರಿಂದ ಅದೇರೀತಿ ಮಂತ್ರಿಮಂಡಲದವರು ಮತ್ತು ಕಾಂಗ್ರೆಸ್ ಸಂಸ್ಥೆಯವರು ಅಂಥಾ ಒಂದು ಕಾರ್ಯಕ್ರಮವನ್ನು ಹಾಕಿ ಕೊಳ್ಳುವುದು ಒಳ್ಳೆಯದಲ್ಲವೆ ?

1-30 P.M.

ಶ್ರೀ ಬಿ. ಬಸವಣ್ಣಪ್ಪ :— ಇದರ ಬಗ್ಗೆ ವಿಚಾರ ಮಾಡುತ್ತೇವೆ.

SRI D. B. KALMANKAR :— Answers to(e) and (f) are 'No', but from the figures given in (b) and (d) is it not indicative that it is a failure ?

MR. SPEAKER :— The question has been answered.

ಶ್ರೀ ಬಿ. ಎಂ. ಇದಿನಬ್ಬ :— ಸ್ವಾಮಿ, ಕುಟುಂಬಯೋಜನೆಯಲ್ಲಿನ ಕೆಫ್ ಟೇರಿಯಾ ಮಾರ್ಗ ಲೀಲಾಜಾಲವಾಗಿ ಕೆಲಸ ಮಾಡುತ್ತಿದೆ ಎಂದು ಹೇಳತಕ್ಕಂಥ ಅನುಭವ ಸರ್ಕಾರಕ್ಕೆ ಉಂಟಾಗಿದೆಯೇ ?

ಶ್ರೀ ಜಿ. ಬಸವಣ್ಣಪ್ಪ :— ಇದರಲ್ಲಿ ಕೆಫೆಟೇರಿಯಾ ಮಾರ್ಗ ಎಂದರೆ ವ್ಯಾಸಕ್ಟಮಿ, ಟ್ಯೂಬೆಕ್ಟಮಿ, ಇದೆ, ಐ.ಯು.ಸಿ.ಡಿ. ನಿರೋಧ್ ಇದೆ. ಅವರಿಗೆ ಯಾವ ಕ್ರಮ ಬೇಕು ಎಂಬುದನ್ನು ದಂಪತಿಗಳ ಮುಂದೆ ಇಡಲಾಗುತ್ತದೆ. ಅವರಿಗೆ ಯಾವುದು ಸೂಟಾಗುತ್ತದೆಯೋ ಅದನ್ನು ಸೆಲೆಕ್ಟ್ ಮಾಡಿಕೊಳ್ಳುತ್ತಾರೆ.

SRI AZEEZ SAIT :— To make family planning more successful will the Government consider the desirability of appointing those doctors who have passed G.C.I.M. Examination ?

SRI G. BASAVANNAPPA :— They are not qualified to do this.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಕುಟುಂಬ ಯೋಜನೆಗಾಗಿ ಬೇಕಾದಷ್ಟು ಕಟ್ಟಡಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಅದರಲ್ಲಿ ಕೆಲವು ಕಟ್ಟಡಗಳಲ್ಲಿ ನೌಕರರು ಇದ್ದಾರೆ, ಕೆಲವು ಕಟ್ಟಡಗಳು ಖಾಲಿ ಬಿದ್ದಿವೆ, ಅಲ್ಲಿ ಈ ಯೋಜನೆಗೆ ತದ್ವಿರುದ್ಧವಾಗಿ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಣ್ಣಪ್ಪ :— ಅಂಥಾದ್ದು ಯಾವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾವುದಾದರೂ ಪರ್ಟಿಕ್ಯುಲರ್ ಇನ್‌ಸ್ಟೆನ್ಸ್ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ನಾವು ವಿಚಾರ ಮಾಡುತ್ತೇವೆ.

ಶ್ರೀ ಎ ಮುನಿಯಪ್ಪ :— ಕುಟುಂಬ ಯೋಜನೆಯ ಆಪರೇಷನ್ ಮಾಡಿಸಿಕೊಂಡು ಅದರಲ್ಲಿ ಫೇಲಾಗಿ ಗಂಡ ಹೆಂಡತಿ ಇಬ್ಬರಿಗೂ ವ್ಯತ್ಯಾಸಬಂದು ಅದರಿಂದ ಎಷ್ಟು ಕುಟುಂಬಗಳು ಹಾಳಾಗಿವೆ ಎಂಬ ಅಂಕಿ ಅಂಶಗಳು ಏನಾದರೂ ತಮ್ಮಲ್ಲಿ ಇವೆಯೇ ? ಇದಕ್ಕೆ ಏನಾದರೂ ಪರಿಹಾರವನ್ನು ತಾವು ಕಂಡು ಹಿಡಿದಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ :— ಅಂಥಾದ್ದು ಯಾವುದೂ ಪರ್ಟಿಕ್ಯುಲರ್ ಇನ್‌ಸ್ಟೆನ್ಸ್ ಇಲ್ಲ.

SRI SIDDIAH KASIMATH :—May I know the progress achieved in family planning so far in this State ?

SRI G. BASAVANNAPPA :— Due to intensive family planning the birth rate has come down from 42 to 39 per thousand and the number of child births is also controlled.

ಶ್ರೀ ಬಿ. ದೊಡ್ಡಬೋರೇಗೌಡ :— ಕುಟುಂಬ ಯೋಜನೆಗೆ ಸಂಬಂಧಪಟ್ಟ ಹಾಗೆ ಒಂದು ಪ್ರಚಾರ ಮಾಡುವುದಕ್ಕೆ ಸರ್ಕಾರದವರು ಹೊರಟಿದ್ದಾರೆ. ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರೆ ೧೫-೨೫, ರೂಪಾಯಿ ಗಳನ್ನು ಕೊಡುತ್ತೇವೆ ಎಂದು ಒಂದು ಇನ್‌ಸೆಂಟೀವ್ ಇಟ್ಟಿದ್ದಾರೆ. ಇದರಿಂದಾಗಿ ಚಿಕ್ಕವಯಸ್ಸಿನವರಿಗೆ, ಮದುವೆಯಾಗದೇ ಇರುವವರಿಗೆ ಆಪರೇಷನ್ ಮಾಡಿರುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ನಾನು ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದೆ. ಅದು ಏನಾಯಿತು ಎಂಬುದು ಗೊತ್ತಾ ಗಲಿಲ್ಲ. ಆದ್ದರಿಂದ ಶಸ್ತ್ರ ಚಿಕಿತ್ಸೆ ಮಾಡುವ ಬಗ್ಗೆ ಸರಿಯಾಗಿ ವಿಚಾರ ಮಾಡಿ ನೋಡಿ ಶಸ್ತ್ರ ಚಿಕಿತ್ಸೆಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ :— ಯಾರೇ ಶಸ್ತ್ರ ಚಿಕಿತ್ಸೆಗೆ ಬಂದರೂ ಕೂಡ ಅವರನ್ನು ಅನೇಕ ರೀತಿಯಲ್ಲಿ ಪರಿಶೀಲನೆ ಮಾಡಿ, ಅವರಿಗೆ ಎಷ್ಟು ಮಕ್ಕಳಾಗಿವೆ ಎಂದು ತಿಳಿದುಕೊಂಡು, ಅವರ ಗಂಡಂದಿರ ಅಭಿಪ್ರಾಯ ತೆಗೆದುಕೊಂಡು ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುತ್ತದೆ. ಚಿಕ್ಕವರಿಗೆ ಯಾರಿಗೂ ಶಸ್ತ್ರ ಚಿಕಿತ್ಸೆ ಮಾಡಿಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ :— ಕ್ರೈಸ್ತರು ಮತ್ತು ಮುಸ್ಲಿಮರು ಎಷ್ಟು ಜನ ಕುಟುಂಬಯೋಜನೆ ಯನ್ನು ಅಳವಡಿಸಿಕೊಂಡಿದ್ದಾರೆ, ಹಿಂದೂಗಳು ಎಷ್ಟು ಅಳವಡಿಸಿಕೊಂಡಿದ್ದಾರೆ. ಕ್ರೈಸ್ತರು ಮತ್ತು ಮುಸ್ಲಿಮರು ಕುಟುಂಬ ಯೋಜನೆ ಅಳವಡಿಸಿಕೊಂಡಿದ್ದಾರೆಯೇ ಹೇಗೆ ?

SRI G. BASAVANNAPPA :— The percentage of Muslim and Christian population is very much less when compared to the Hindu population. According to the percentage of population, the Muslim community and the Christian community are equally participating in the family planning programmes.

ಶ್ರೀ ಬಿ. ಪಿ. ಗಂಗಾಧರ್ :— ಸ್ವಾಮಿ ಕೆಲವು ಜಾತಿಯ ಜನಗಳು ಆಪರೇಷನ್ ಮಾಡಿಸಿಕೊಳ್ಳುವು ದಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಅಡಾಪ್ಟ್ ಮಾಡಿಕೊಳ್ಳುವುದಿಲ್ಲ. ಅದು ಅವರ ಧರ್ಮಕ್ಕೆ ಹೀನಾಯ ಎಂದು ತಿಳಿದುಕೊಂಡಿದ್ದಾರೆ. ಕೆಲವು ಜನಗಳಿಗೆ, ಕೆಲವು ಬಡ ಜನಗಳಿಗೆ ಇದನ್ನು ಸರ್ಕಾರದವರೇ ಹೇರುತ್ತಿದ್ದಾರೆ. ಇದು ಸರಿಯಲ್ಲ. ಎಲ್ಲರೂ ಕುಟುಂಬ ಯೋಜನೆಯನ್ನು ಅಡಾಪ್ಟ್ ಮಾಡಿಕೊಳ್ಳುವಂತೆ ವ್ಯವಸ್ಥೆ ಮಾಡಿ ಕಡ್ಡಾಯವಾಗಿ ಇನ್‌ಸಿಸ್ಟ್ ಮಾಡಬೇಕು. ಹಾಗೆ ಮಾಡದಿದ್ದರೆ ಸಮಾಜದಲ್ಲಿ ಏರುಪೇರುಗಳಾಗುತ್ತವೆ. ಈ ದೃಷ್ಟಿಯಿಂದ ಸರಿಪಡಿಸುತ್ತೀರಾ ?

ಶ್ರೀ ಬಿ. ಬಸವಣ್ಣಪ್ಪ :— ಇದರಲ್ಲಿ ಪ್ರತಿಯೊಂದು ಧರ್ಮದವರೂ ಭಾಗವಹಿಸುತ್ತಿದ್ದಾರೆ. ಪ್ರತಿಯೊಬ್ಬರೂ ಇದನ್ನು ಅಡಾಪ್ಟ್ ಮಾಡಿಕೊಳ್ಳಲೇ ಬೇಕು ಎಂದು ನಿರ್ಬಂಧ ಮಾಡುವುದು ತಪ್ಪಾಗು ತ್ತದೆ. ಜನಗಳು, ಕುಟುಂಬ ವರ್ಗದವರು ತಾವಾಗಿಯೇ ಮುಂದೆ ಬಂದರೆ ಅವರು ಭಾಗವಹಿಸುತ್ತಾರೆ.

LOSS DUE TO LEASE OF MUNICIPAL LODGING ROOMS IN MUNICIPAL BUS STAND, HAMPANAKATTA, MANGALORE.

373. SRI B. BHASKAR SHETTY (Kaup):—

Will the Minister of State for Municipal Administration be pleased to state:—

(a) whether the Divisional Commissioner, Mysore, has granted permission for the continuance of the lease of the Municipal, Lodging rooms in the Municipal Bus Stand, Lampanakatta, Mangalore on 15th February 1969 for a further period of five years, with effect from 1st April 1969 on the existing lease amount of Rs. 13,900 per annum in in favour of the present lessee on the recommendation of the Municipal Commissioner of Mangalore City Municipality;

(b) whether the Divisional Commissioner accorded such permission under the provisions of the Mysore Municipalites Act, 1964 as amended and Rules framed thereunder, without consulting the Municiipal Council and without their assent in the matter;

(c) the special provisions of law under which the Divisional Commissioner has issued such orders without obtaining prior assent of the Municipal Council;

(d) whether the Municipal President of Mangalore Municipality has represented to the concerned Minister and submitted a memorandum on 7th April 1969, appriging the Government of the irregularities committed, and to the non- adherence to the provisions of the Mysore Municipalities Act, 1964 while granting the continuance of the lease and if so, the action on it;

(e) whether the Government is aware that by leasing out the lodgings in such a manner, the Municipality stands to loose a huge amount of Rs. 14,000 to Rs. 20,000 every year;

(f) whether the Government has any proposal to institute enquiry into the matter forthwith and to set things right and to take suitable action against the persons responsible for this irregularity?

SRI B. M. PATIL Mnister of State for Municipal Administrion:—

(a) Yes.

(b) Yes.

(c) Under Section 72 (2) of the Mysore Municipalities Act 1964 read with Notification No. PLM 28 MLR (1) 65, dated 17th January 1966.

(*d*) Yes. After detailed examination of the case, it is found that the orders of the Divisional Commissioner are in order and no action is called for.

(*e*) No.

(*f*) Does not arise in view of reply to clause (*d*)

ಶ್ರೀ ಬಿ. ಭಾಸ್ಕರ ಶೆಟ್ಟಿ:—ಸ್ವಾಮಿ ಮಂಗಳೂರಿನ ಹಂಪನ ಕಟ್ಟೆಯ ಪುರಸಭಾ ಬಸ್ಸು ನಿಲ್ದಾಣದಲ್ಲಿ ಪುರಸಭೆಗೆ ಸೇರಿದ ವಸತಿ ಕೋಣೆಗಳನ್ನು ೫ ವರ್ಷದ ಲೀಜ್ ಕಾನೂನು ಪ್ರಕಾರ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟವರು ಕಾಂಗ್ರೆಸ್ ಸದಸ್ಯರಾಗಿರುವುದರಿಂದ ಕಾನೂನನ್ನು ಉಲ್ಲಂಘನೆ ಮಾಡಿ ಸರ್ಕಾರದವರು ನೋಟಿಫಿಕೇಷನ್ ಮಾಡಿ ಲೀಜಿಗೆ ಕೊಟ್ಟಿದ್ದಾರೆ ಅಲ್ಲವೆ?

†ಶ್ರೀ ಬಿ. ಎಂ. ಪಾಟೀಲ್ :—ಅದು ಸರಿಯಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ:— ಇದರಲ್ಲಿ ಮುನ್ಸಿಪಲ್ ಕೌನ್ಸಿಲ್ ಇರುವಾಗ ಅವರನ್ನು ಕೇಳದೆ ಅವರು ನಿಮ್ಮ ಕಾಂಗ್ರೆಸ್‌ನವರು ಎಂದು ಹೇಳಿ ಲಂಚ ಪಡೆದು ಆ ಕಟ್ಟಡವನ್ನು ಲೀಜಿಗೆ ಕೊಟ್ಟಿದ್ದಾರೆ. ಇದನ್ನು ಇದನ್ನು ತಾವು ಒಪ್ಪುತ್ತೀರಾ.

ಶ್ರೀ ಬಿ. ಎಂ. ಪಾಟೀಲ್:—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಲ್ಲ. ಆ ಮುನ್ಸಿಪಲ್ ಕೌನ್ಸಿಲ್ಲಿನ ಕಮಿಷನರು ಡಿವಿಜನಲ್ ಕಮಿಷನರಿಗೆ ರೆಕಮೆಂಡ್ ಮಾಡಿದರು. ಅವರು ಅದನ್ನು ಒಪ್ಪಿಕೊಂಡು ಅವರಿಗೆ ಕೊಟ್ಟಿದ್ದಾರೆ.

SRI AZEEZ SAIT: - Without taking the Sanction of the Municipal Council, the Commissioner himself recommended to the Divisional Commissioner. Then, why should we have the Municipal Council.

SRI B. M. PATIL:—When the Municipal Council is functioning, the matter will go before it and when it is not functioning he is the appropriat authority of the Council who has to recommend the case to the higherauthority.

SRI N. G. HALAPPA:—Is it in consonance with the provisions of the Act.

SRI B. M. PATIL:—Yes.

NEW MUNICIPAL OFFICE BUILDING AT CHICKNAYAKANAHALLI TOWN

381. SRI C. K. RAJAIAH SHETTY (Chicknayakanahalli):—
Will the Minister of State for Municipal Administration be pleased to state:—

(*a*) the cost of new Municipal Office building proposed to be constructed in Chicknaikanahalli Town;

(*b*) when technical and administrative sanction were accorded to these buildings;

(Sri C. K. RAJAIAH SHETTY)

(*c*) the expenditure so far incurred on these buildings;

(*d*) the closing balance expenditure of the said institution as on the last dates of September, October and November 1969?

SRI B. M. PATIL minister of state For municipal Administrion:—

(*a*) Rs. 60,000.

(*b*) The estimate for Rs. 60,000 has been scrutinised by the superintending Engineer, Bangalore Circle, on 25th September 1969 and Administrative sanction has yet to be accorded.

(*c*) Rs. 5,133-75.

(*d*) Closing balance on the last day of:—

			Rs.
(i)	September 1969	...	1,256-77
(ii)	October 1969	...	9,170-23
(iii)	November 1969	...	1,532-89

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ:— ಸ್ವಾಮಿ ಚಿಕ್ಕನಾಯಕನಹಳ್ಳಿ ಟೌನಿನಲ್ಲಿನ ಹೊಸಪುರ ಸಭಾ ಕಟ್ಟಡಕ್ಕೆ ಸಂಬಂಧಪಟ್ಟ ಹಾಗೆ ಆಗತಕ್ಕ ವೆಚ್ಚ ೬೦ ಸಾವಿರ ರೂಪಾಯಿಗಳು ಎಂದು ಕೊಟ್ಟಿದ್ದೀರಿ, ಮತ್ತು ಅವರು ಈಗಾಗಲೇ ೫ ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟೀವ್ ಮಂಜೂರಾತಿ ಇಲ್ಲದೆ, ಅನ್ಯಾಯವಾಗಿ ಅವರು ಹಣವನ್ನು ಖರ್ಚು ಮಾಡುವುದು ನ್ಯಾಯವೇ ಮತ್ತು ಇದಕ್ಕೆ ಡೆಪ್ಯುಟಿ ಕಮೀಷನರ್ ಸ್ಟೇ ಆರ್ಡರ್ ಕೊಟ್ಟಿಲ್ಲವೆ, ಈ ದೃಷ್ಟಿಯಿಂದ ಅವರಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಿ ಸಂಬಂಧಪಟ ವರಿಂದ ಹಣವನ್ನು ವಾಪಸು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ?

†ಶ್ರೀ ಬಿ. ಎಂ. ಪಾಟೀಲ್:—ಅವರಿಗೆ ಅದಕ್ಕೆ ಇನ್ನೂ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಸಿಕ್ಕಿಲ್ಲ. ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟ ಮೇಲೆ ಅವರು ಆ ಕೆಲಸವನ್ನು ಕಾರ್ಯಗತ ಮಾಡುತ್ತಾರೆ. ಆಗ ಎಲ್ಲಾ ಸಮಸ್ಯೆಗಳೂ ಪೂರ್ತಿಯಾಗಿ ಪರಿಹಾರವಾಗುತ್ತವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ : ಈಗ ೫ ಸಾವಿರ ಚಿಲ್ಲರೆ ಖರ್ಚಾಗಿದೆ ಅದಕ್ಕೆ ಸ್ಯಾಂಕ್ಷನ್ ಏನೂ ಇಲ್ಲ ಇದಕ್ಕೆ ರೆಸ್ಪೊನ್ಸಿಬಿಲಿಟಿ ಫಿಕ್ಸ್ ಮಾಡಿ, ಏಕೆ ಅವರ ಮೇಲೆ ಕ್ರಮತೆಗೆದುಕೊಳ್ಳಬಾರದು.

ಶ್ರೀ ಬಿ. ಎಂ. ಪಾಟೀಲ್ ;—ಈ ೫ ಸಾವಿರ ಚಿಲ್ಲರೆ ಏನು ಖರ್ಚು ಮಾಡಿದ್ದಾರೆ, ಅದನ್ನು ಹಳೆಯ ಕಟ್ಟಡಗಳಿಗೆ ಮತ್ತು ಇತರ ಕಾರ್ಯಗಳಿಗೆ ಖರ್ಚು ಮಾಡಿದ್ದಾರೆ. ಅದನ್ನು ನಿಯಮ ಬಾಹಿರವಾಗಿ-ಖರ್ಚು ಮಾಡಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಸೆಟ್ಟಿ : ಈ ಬಿಲ್ಡಿಂಗ್ಸ್ ನೆಲಸಮ ಮಾಡಿ ಹೊಸದಾಗಿ ಕಟ್ಟುತ್ತೀರಾ ಮತ್ತು ಅದರ ರಿಪೇರಿ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಬಿ. ಎಂ. ಪಾಟೀಲ್ : ಅದಕ್ಕೆ ಸಂಬಂಧಪಟ್ಟದ್ದನ್ನು ಡೆಪ್ಯೂಟಿ ಕಮೀಷನರಿಗೆ ಬರೆದು ವಿವರ ತೆಗೆದುಕೊಂಡು, ಪುರ ಸಭೆಯವರು ಕಾನೂನು ಬಾಹಿರವಾಗಿ ನಡೆದಿದ್ದಾರೆಂದು ಸಿದ್ಧವಾದರೆ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತೇನೆ.

ಶ್ರೀ ಎಂ. ರಾಮಣ್ಣ :—ಮುನಿಸಿಪಾಲಿಟಿಯವರು ಸಾಂಕ್ಷನ್ ಆಂಟಿಸಿಪೇಟ್ ಮಾಡಿಕೊಂಡು ಕೆಲಸ ಮಾಡುವುದು ಸಾಮಾನ್ಯವಾದ ಪದ್ಧತಿಯಲ್ಲವೆ?

ಶ್ರೀ ಬಿ. ಎಂ. ಪಾಟೀಲ್ :—ಅಂಥದ್ದು ಸರ್ಕಾರದ ಗಮನಕ್ಕೆ ಯಾವುದು ಬಂದಿಲ್ಲ.

ಶ್ರೀ ಎಚ್ ಹುಚ್ಚು ಮಾಸ್ತಿಗೌಡ :—ಹೊಸ ಕಟ್ಟಡಕ್ಕೆ ಮಂಜೂರಾತಿ ತಯಾರಿಸಿ ಹಳೆಯ ಕಟ್ಟಡ ರಿಪೇರಿಗೋಸ್ಕರ ೫ ಸಾವಿರ ಚಿಲ್ಲರೆ ಖರ್ಚು ಮಾಡಿದ್ದಾರೆಂದು ಹೇಳಿದ್ದೀರಿ. ಇದು ಅನ್ಯಾಯವಾದುದು ಮತ್ತು ಅಕ್ರಮವಾದುದು. ಈ ರೀತಿ ಮಾಡಿರುವುದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ ಎಂ ಪಾಟೀಲ್ : ನಾನು ಈಗಾಗಲೇ ಹೇಳಿದ್ದೇನೆ. ಹೊಸ ಕಟ್ಟಡಕ್ಕೆ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಕೊಟ್ಟಿಲ್ಲ. ಆದ್ದರಿಂದ ಹೊಸ ಕಟ್ಟಡಕ್ಕೆ ಖರ್ಚು ಮಾಡುವ ಪ್ರಮೇಯ ಬರುವುದಿಲ್ಲ. ಹಳೆಯ ಕಟ್ಟಡಕ್ಕೆ ರಿಪೇರಿ ಸಲುವಾಗಿ ಅವರ ಪರಿಮಿತಿಯಲ್ಲಿ ಖರ್ಚು ಮಾಡಿರಬಹುದು.

CONFIRMATION OF LAND TO DWELLERS OF K. R. SAGAR RIGHT BANK AREAS.

386 SRI B. DODDABORE GOWDA (Srirangapatna).—
Will the Minister for Development be pleased to state :—

(*a*) the reason for not confirming the lands situated on the right Bank of K. R. Sagar, to about 300-400 persons who are dwelling there since about fifty years.

(*b*) the difficulties in not confirming the said area so far ;

(*c*) the reason for not including the people of the said area to any panchayat ;

(*d*) whether there is any proposal/ideal to make the said area as a panchayat ;

(*e* whether many representations have not been received for confirming the said places to the respective persons dwelling there ; if so the steps taken in this behalf ;

(*f*) the steps taken by the Government in respect of the permission that is being given by the neibghbouring panchayat to others for constructinn houses in the said area will not the people living in the said area be put to trouble on account of this?

SRI B. L. GOWDA (Deputy Minister for Co-operation):

(*a*) and (*b*) It was not possible to confirm the said area as it was not known to whose control the said area belonged.

(*c*) The said area has been included to Hulikere Panchayat since 1968.

(*d*) No.

(SRI B. L. GOWDA)

(*e*) Yes Recommendation has been made to Superintendent of Land Records, Mandya to measure and prepare sketch in this behalf.

(*f*) Orders have been issued to Deputy Commissioner not to issue licence to Hulikere panchayat to construct houses in the said area.

ಶ್ರೀ ಬಿ ದೊಡ್ಡಬೋರೆಗೌಡ : ಈಗ (ಅ) ಮತ್ತು (ಆ) ಪ್ರಶ್ನೆಗೆ ಕೊಟ್ಟ ಉತ್ತರದ ಪ್ರಕಾರ ಇದು ಯಾರ ವ್ಯಾಪ್ತಿಯಲ್ಲಿದೆ, ಕೇಂದ್ರ ಸರ್ಕಾರದವರ ವ್ಯಾಪ್ತಿಗೆ ಬರುತ್ತದೆಯೇ, ಅಥವಾ ಅಕ್ಕಪಕ್ಕದ ಮಹಾರಾಷ್ಟ್ರ, ಅಥವಾ ಆಂಧ್ರ ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತದೆಯೆಂದು ಪರಿಶೀಲನೆ ಮಾಡಿದ್ದಾರಾ?

ಶ್ರೀ ಬಿ ಎಲ್ ಗೌಡ : ಅಲ್ಲಿ ಕೆ. ಆರ್. ಸಾಗರದಲ್ಲಿ ಕೆಲಸ ಮಾಡುವ ಕೂಲಿಗಾರರು ಅಲ್ಲಿ ಕೆಲವು ಶೆಡ್ಡುಗಳನ್ನು ಹಾಕಿದ್ದರು. ಆದ್ದರಿಂದ ಅದು ಪಿ. ಡಬ್ಲ್ಯು. ಡಿಗೆ ಸೇರಿದ್ದೆಂದು ಹೇಳುತ್ತಾರೆ. ರೆವಿನ್ಯೂ ಇಲಾಖೆಯವರು ನಮಗೆ ಸೇರಿದ್ದೆಂದು ಹೇಳುತ್ತಿದ್ದರು. ಅದನ್ನು ಈಗ ಅಳತೆ ಮಾಡುತ್ತಿದ್ದಾರೆ. ಮತ್ತು ಅದು ಯಾರಿಗೆ ಸೇರಿದ್ದೆಂದು ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬಹುದು. ಈಗಾಗಲೇ ಇಲ್ಲಿರತಕ್ಕವರಿಗೆ ಓಟಿನ ಹಕ್ಕು ಕೊಟ್ಟಿದ್ದೇವೆ,

ಶ್ರೀ ಬಿ ದೊಡ್ಡಬೋರೇಗೌಡ : ಈಗ ಸ್ಕೆಚ್ ತಯಾರಿಸುತ್ತಿದ್ದಾರೆ, ಅದಕ್ಕೆ ಆದೇಶ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈಗಾಗಲೇ ಇದಕ್ಕೆ ೫೦ ವರ್ಷವಾಗಿದೆ. ಇನ್ನು ಎಷ್ಟು ವರ್ಷಗಳಲ್ಲಿ ಇದರ ಬಗ್ಗೆ ಒಂದು ನಿರ್ಧಿಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೀರೆಂದು ಹೇಳುತ್ತೀರಾ.

ಶ್ರೀ ಬಿ ಎಲ್ ಗೌಡ ; ಅವರಿಗೆ ಅದರಿಂದ ತೊಂದರೆ ಏನೂ ಆಗಿಲ್ಲ, ನಗರ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಇನ್ನು ಅಳತೆ ಮಾಡಿ ಖಾಯಂ ಮಾಡುವ ಪ್ರಶ್ನೆ ಇದೆ. ಅದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್ :—ಈ ಪರಿಶೀಲನೆ ಮಾಡುವುದು ಮತ್ತು ಅಳತೆ ಮಾಡುವುದು ಇವು ಯಾವಾಗ ಆರಂಭವಾಯಿತೆಂಬುದನ್ನು ನಿರ್ಧಿಷ್ಟವಾಗಿ ಹೇಳುತ್ತೀರಾ ಮತ್ತು ಇದು ಯಾವಾಗ ಮುಗಿಯುತ್ತದೆ?

ಶ್ರೀ ಬಿ. ಎಲ್. ಗೌಡ.:...ಎಷ್ಟು ಜಾಗ್ರತೆ ಆಗುತ್ತದೆ ಅಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಆಜೀಜ್ ಶೇಟ್ : ತಾವು ಈಗ ತಾನೆ ಹೇಳಿದಿರಿ, ಅವರಿಗೆ ತೊಂದರೆಯಾಗಿಲ್ಲ, ಓಟಿನ ಹಕ್ಕು ಕೊಟ್ಟಿದ್ದೇವೆಂದು. ೧೯೬೮ನೇ ಚುನಾವಣೆ ಮತ್ತು ತಾಲ್ಲೂಕು ಬೋರ್ಡು ಚುನಾವಣೆಗಳಲ್ಲಿ ಅವರ ಒಬ್ಬರ ಹೆಸರನ್ನೂ ಸೇರಿಸಿಲ್ಲ ಪಂಚಾಯ್ತಿಗೂ ಸೇರಿಸಿಲ್ಲ ಹೀಗಿರುವುದರಿಂದ ೫೦-೬೦ ವರ್ಷದಿಂದ ಅವರು ಇದ್ದಾರೆಂಬುದಕ್ಕೆ ಆಧಾರ ಎಲ್ಲಿದೆ? ನೀವು ಒಂದು ಡೆಫಿನೆಟ್ ಡೆಡ್‌ಲೈನ್ ಕೊಡಬೇಕು.

ಶ್ರೀ ಬಿ ಎಲ್ ಗೌಡ : ನಾನು ಈಗಾಗಲೇ ಹೇಳಿದ್ದೇನೆ. ೬೮ನೇ ಇಸವಿಯಲ್ಲಿ ನಡೆದ ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ ಓಟಿನ ಹಕ್ಕನ್ನು ಅವರು ಚಲಾವಣೆ ಮಾಡಿದ್ದಾರೆ, ಅಳತೆ ಮಾಡುವುದಕ್ಕೆ ನಿರ್ಧಿಷ್ಟವಾದ ತಾರೀಕನ್ನು ಹೇಳುವುದಕ್ಕಾಗುವುದಿಲ್ಲ. ಎಷ್ಟು ಜಾಗ್ರತೆಯಾಗುತ್ತದೆ, ಅಷ್ಟು ಜಾಗ್ರತೆ ಮಾಡುತ್ತೇವೆ

ಶ್ರೀ ಬಿ. ಪರಮೇಶ್ವರಪ್ಪ —ಈಗ ೫೦ ವರ್ಷವಾಗಿದೆ ಎಂದು ಹೇಳಿದ್ದಾರೆ. ೫೦ ವರ್ಷಗಳಿಂದಲೂ ಈ ಜಾಗ ಯಾರಿಗೆ ಸೇರಿದ್ದೆಂದು ಸರ್ಕಾರದವರು ನಿಗದಿ ಮಾಡದಿರತಕ್ಕದ್ದು ನಿಮ್ಮ ಅಸಹಾಯಕತೆಯನ್ನು ತೋರಿಸುತ್ತದೆ. ಇದನ್ನು ಹುಲಿಕೆರೆ ಪಂಚಾಯಿತಿಗೆ ಸೇರಿಸಿರುತ್ತದೆ ಎಂದು ಒಂದು ಕಡೆ ಹೇಳಿದ್ದೀರಿ

ಮತ್ತು ಇಲ್ಲಿ ಮನೆ ಕಟ್ಟುವುವಕ್ಕೆ ಅನುಮತಿ ನಿರಾಕರಿಸಿದ್ದಾರೆ. ಹಾಗೆ ಆದೇಶ ಕೊಡುವುದಕ್ಕೆ ಕಾರಣವೇನು?

ಶ್ರೀ ಬಿ ಎಲ್ ಗೌಡ :—ಈ ಪ್ರಶ್ನೆ ಇರುವುದು ಇಷ್ಟೆ, ಕೃಷ್ಣರಾಜ ಸಾಗರ ಕಟ್ಟುವ ಸಂದರ್ಭದಲ್ಲಿ ಕೂಲಿಗಾರರು ಅಲ್ಲಿ ಶೆಡ್ಡು ಹಾಕಿದ್ದಾರೆ. ಇದು ಉದ್ಭವವಾಗಿರುವುದು ಚುನಾವಣೆಯ ನಂತರ. ಈ ಪ್ರಶ್ನೆ ಇರುವುದು ಸುಮಾರು ೫-೬ ವರ್ಷಗಳಿಂದ. ಇದನ್ನು ಈಗ ಪರಿಶೀಲನೆ ಮಾಡುತ್ತಿದ್ದೇವೆ. ಡಿಮಾರ್ಕೇಶನಿಗೆ ಕಳಿಸಿ ಕೊಟ್ಟಿದ್ದೇವೆ. ಅವರಿಗೆ ಓಟಿನ ಹಕ್ಕು ಕೊಟ್ಟಿದ್ದೇವೆ, ಆದ್ದರಿಂದ ಇದು ೫೦ ವರ್ಷದಿಂದ ಬಂದ ಪ್ರಶ್ನೆಯಲ್ಲ.

CONSTRUCTION OF TANK NEAR KIRAGALA IN NANJANGUD.

397. SRI D. M. SIDDAIAH (Biligere).—

Will the Minister of the State for Minor Irrigation be pleased to state :—

(*a*) the estimated cost of construction of the tank near Kiragala in Nanjangud Taluk and when this work was started and the progress made so far;

(*b*) the number of times the estimates were revised and what was the the original estimate and the present revised estimate;

(*c*) the reasons for the delay in the execution of this work, whether the Government has taken any action against any person or persons responsible for the delay ;

(*d*) when the work is expected to be completed ;

(*e*) whether the Government has paid compensation to the persons whose lands have been acquired to put up this tank if so the details may be furnished ?

SMT. BASAVARAJESWARI (Deputy Minister for Social Welfare (on behalf of) SRI A.J.DODDAMETI (Minister of State for Minor Irrigation).—

(*a*) There is no tank by name "Kiragala" in Nanjangud Taluk. There is one tank under construction by "Kiragunda Tank" in Nanjangud Taluk. The work was started during 1961-62. Outlay to end of 12/69 is Rs. 3,12,747.

(*b*) The revised estimate of about Rs. 6.02 lakhs is not yet finalised. The original estimate cost of this work is Rs. 1.27 Lakhs.

(*c*) The concerned measurement books have been taken away by Vigilence Authorities hence the delay.

(*d*) As early as possible.

(*e*) No compensation is paid as yet. Acquisition proceedings have been intiated.

ಶ್ರೀ ಡಿ. ಎಂ. ಸಿದ್ದಯ್ಯ :—ಈ ಕೆರೆಯ ಮೂಲ ಅಂದಾಜು ವೆಚ್ಚ ೧-೨೭ ಲಕ್ಷ ರೂಪಾಯಿಗಳು ಮತ್ತು ಇಲ್ಲಿಯತನಕ ಖರ್ಚಾಗಿರುವುದು ೩,೧೨,೭೪೭ ರೂಪಾಯಿಗಳು ಎಂದು ಹೇಳಿದ್ದೀರಿ. ಇನ್ನೊಂದು ಎಸ್ಟಿಮೇಟ್ ತಯಾರು ಮಾಡಿದ್ದು ೬ ಲಕ್ಷ ಚಿಲ್ಲರೆಗೆ. ಅದು ಇನ್ನೂ ಫೈನಲೈಸ್ ಆಗಿಲ್ಲ. ಈಗ ಇದರಲ್ಲಿ ೮ ವರ್ಷದಿಂದ ಎಷ್ಟು ಕೆಲಸ ನಡೆದಿದೆ ಎಂದು ಹೇಳುತ್ತೀರಾ?

†ಶ್ರೀಮತಿ ಬಸವರಾಜೇಶ್ವರಿ .—ಮಾನ್ಯ ಸದಸ್ಯರು ಹೇಳಿದ ಹಾಗೆ ಮೊದಲನೇ ಸಲದ ಅಂದಾಜು ಒಂದು ಲಕ್ಷ ೨೭ ಸಾವಿರಕ್ಕೆ. ಆ ಮೇಲೆ ಈಗ ತಯಾರಾಗಿರತಕ್ಕದ್ದು ೬.೦೨ ಲಕ್ಷಕ್ಕೆ ಅದು ಇನ್ನೂ ಸ್ವಲ್ಪ ಹೆಚ್ಚಾಗುವ ಸಂಭವ ಇದೆ. ಈಗಾಗಲೇ ಎರಡು ಮೂರು ವಿಷಯಗಳನ್ನು ಚೀಫ್ ಇಂಜಿನಿಯರ್ ಇನ್ಸ್ಪೆಕ್ಟ್ ಮಾಡಿ ಅಬ್ಸರ್ವೇಷನ್ ಕೊಟ್ಟಿದ್ದಾರೆ. ಮೊದಲನೆಯ ಸ್ಟಾಂಡರ್ಡ್ ಪ್ರಕಾರ ಬಂಡಿಂಗ್ ಬಹಳ ಲೂಸಾಗಿರುತ್ತದೆ. ಮತ್ತು ಉತ್ತಮವಾಗಿ ವೇಸ್ಟ್ ವೇರ್ ಕಟ್ಟಬೇಕಾಗಿರುತ್ತದೆ, ಇವೆಲ್ಲಾ ಬದಲಾವಣೆ ಯಾದುದರಿಂದ ಎಸ್ಟಿಮೇಟ್ ಹೆಚ್ಚಾಗಿರುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ .—(ಸಿ) ಗೆ ಉತ್ತರವಾಗಿ ಜಾಗ್ರತಾ ಆಯೋಗದ ಅಧಿಕಾರಿಗಳು ಸಂಬಂಧ ಪಟ್ಟ ಅಳತೆ ನಮೂದಿಸಿರುವ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವುದರಿಂದಾಗಿ ವಿಳಂಬವಾಗಿದೆ. ಎಂದು ಹೇಳಿದ್ದಾರೆ. ಇದನ್ನು ಅವರು ಯಾವಾಗ ಮುಗಿಸಿದರು?

ಶ್ರೀಮತಿ ಬಸವರಾಜೇಶ್ವರಿ .—ವಿಜಿಲೆನ್ಸ್ ಕಮೀಷನರವರ ಯಾರು ದುರ್ವಿನಿಯೋಗ ಮಾಡಿದ್ದಾರೆ, ಅದು ಯಾವ ಹಂತದಲ್ಲಿ ದುರ್ವಿನಿಯೋಗವಾಗಿದೆ ಎಂಬುದನ್ನು ನೋಡಿ ಇನ್ನೂ ಅಂತಿಮವಾದ ವರದಿಯನ್ನು ಕೊಟ್ಟಿಲ್ಲ. ಆದರೆ ಪುಸ್ತಕಗಳನ್ನು ಮಾತ್ರ ಅವರಲ್ಲಿಟ್ಟುಕೊಂಡಿದ್ದಾರೆ. ಅವರಿಗೆ ಪುಸ್ತಕಗಳನ್ನು ವಾಪಸ್ಸು ಕಳಿಸಬೇಕೆಂದು ತಿಳಿಸಿದ್ದೇವೆ. ಅದನ್ನು ಆದಷ್ಟು ತೀವ್ರವಾಗಿ ತರಿಸಿಕೊಂಡು ಚೀಫ್ ಇಂಜನಿಯರ್ ಅಬ್ಸರ್ವೇಷನ್ ಪ್ರಕಾರ ಎಸ್ಟಿಮೇಟ್ ಮಂಜೂರು ಮಾಡಿಕೊಂಡು ಆದಷ್ಟು ಜಾಗ್ರತೆ ಕೆರೆ ಕಟ್ಟಿಸಿಕೊಡುತ್ತೇವೆ.

ಶ್ರೀ ಡಿ. ಎಂ. ಸಿದ್ದಯ್ಯ :—ಈಗ ಅಕ್ವಿಸಿಷನ್ ಕಂಪೆನ್ಸೇಷನ್ ಕೊಟ್ಟಿಲ್ಲ. ಪ್ರೊಸೀಡಿಂಗ್ಸ್ ಪ್ರಾರಂಭ ಮಾಡಿದ್ದಾರೆ. ಈಗಾಗಲೇ ಅಲ್ಲಿ ಅನ್‌ಆತರೈಸ್‌ಡ್ ಆಗಿ ಭೂಮಿಯನ್ನು ಕಲ್ಟಿವೇಟ್ ಮಾಡುತ್ತಿದ್ದಾರೆ ಆದ್ದರಿಂದ ಭೂಮಿಯನ್ನು ಕಳಕೊಂಡವರಿಗೆ ಕಂಪೆನ್ಸೇಷನ್ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ :—ಅಕ್ವಿಸಿಷನ್ ವಿಚಾರದಲ್ಲಿ ಅಲ್ಲಿ ವಿಳಂಬವಾಗಿದೆ. ೫೯ ಎಕರೆ ಮಾಡಬೇಕಾಗಿತ್ತು. ಉಳಿದ ೧೬ ಎಕರೆ ಸರ್ಕಾರ ಭೂಮಿ ಇದೆ. ಇನ್ನೂ ಅದು ಪ್ರಿಲಿಮಿನರಿ ಸ್ಟೇಜಿನಲ್ಲಿದೆ. ಸರ್ಕಾರಕ್ಕೆ ವಿಳಂಬವಾಗಿದೆ ಎಂದು ಗೊತ್ತಾಗಿದೆ. ಇನ್ನು ಮುಂದೆ ಇದನ್ನು ಆದಷ್ಟು ಜಾಗ್ರತೆ, ನೋಟಿಫಿಕೇಷನ್ ಎಲ್ಲಾ ಮಾಡಿ ಅವರಿಗೆ ಕಂಪೆನ್ಸೇಶನ್ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ :—ರಿವೈಸ್ಡ್ ಎಸ್ಟಿಮೇಟ್ ಇನ್ನೂ ಜಾಸ್ತಿಯಾಗುವ ಸಂಭವ ಇದೆಯೆಂದು ಹೇಳಿದ್ದೀರಿ. ಇದರಲ್ಲಿ ನೀರಾವರಿಯಾಗುವ ಪ್ರದೇಶ ಎಷ್ಟು?

ಶ್ರೀಮತಿ ಬಸವರಾಜೇಶ್ವರಿ :—ಸುಮಾರು ೩೧೦ ಎಕರೆ.

ಶ್ರೀ ಎಸ್. ಎಂ. ಗುರಡ್ಡಿ :—ಹಿಂದೆ ಮಾಡಿದಂತಹ ಎಸ್ಟಿಮೇಟಿಗೂ, ಈಗಿನ ಎಸ್ಟಿಮೇಟಿಗೂ ರಿವೈಸ್ ಆಗುವಾಗ ವ್ಯತ್ಯಾಸ ಬರಲು ಕಾರಣ ಸ್ವಾಯಿಲ್ ಎಂಬುದು ಸರಿಯಲ್ಲ. ಆವಾಗ ಇನ್ವೆಸ್ಟಿಗೇಟ್ ಮಾಡಿದಂತಹ ಇಂಜಿನಿಯರು ಯಾವ ದೇಶದವರು, ಈಗ ಆಲ್ಟರ್ನೇಟಿವ್ ಪ್ರೊಪೋಸಲ್ಸ್ ಇಟ್ಟವರು ಎಲ್ಲಿಯವರು.?

ಶ್ರೀಮತಿ ಬಸವರಾಜೇಶ್ವರಿ —ಇಂಜಿನಿಯರ್ ಒಬ್ಬರೇ ಇದ್ದಾರೆ. ಇತ್ತೀಚೆಗೆ ಅನೇಕ ಕೆರೆಗಳು, ಸೇತುವೆಗಳು ಆಗುತ್ತಾ ಇರುವುದನ್ನು ನೋಡಿ ಒಂದು ಕಮಿಟಿ ಮಾಡಿ ಈ ತರಹ ಸ್ಟಾಂಡರ್ಡ್ ಪ್ರಕಾರ ಕಟ್ಟಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚು ಹೆಚ್ಚು ದರಗಳನ್ನು ಹಾಕುವುದರಿಂದ ಈ ರೀತಿಯಾಗಿ ಅಂದಾಜು ಜಾಸ್ತಿಯಾಗುತ್ತದೆ.

ಶ್ರೀ ಎ. ಮುನಿಯಪ್ಪ :—ವಿಜಿಲೆನ್ಸ್ ಕಮಿಷನ್ನಿನವರು ಸಂಬಂಧಪಟ್ಟ ಅಳತೆ ನಮೂದಿಸಿರುವ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವುದರಿಂದ ವಿಳಂಬವಾಗಿದೆ ಎಂದು ಹೇಳುತ್ತೀರಿ ಪ್ರತಿಯೊಂದು ವರ್ಷವೂ ಷೆಡ್ಯೂಲ್ಡ್ ರೇಟ್ ಜಾಸ್ತಿಯಾಗುತ್ತಾ ಇರುವುದರಿಂದ ಅದನ್ನು ನೀವೇ ಕಟ್ಟಿಕೊಡುತ್ತೀರಾ ಅಥವಾ ವಿಜಿಲೆನ್ಸ್ ಕಮಿಷನ್ನಿನವರೇ ಷೆಡ್ಯೂಲ್ ರೇಟ್ ಹೆಚ್ಚು ಮಾಡುತ್ತಾರೊ?

ಶ್ರೀಮತಿ ಬಸವರಾಜೇಶ್ವರಿ :—ಯಾರೂ ಎಸ್ಟಿಮೇಟನ್ನು ಹೆಚ್ಚು ಮಾಡುವುದಿಲ್ಲ. ವಿಜಿಲೆನ್ಸ್ ಕಮಿಷನ್ನಿನವರಿಗೆ ದುರ್ವಿನಿಯೋಗವಾಗಿದೆಯೆಂದು ತಿಳಿದ ಮೇಲೆ ವಿಳಂಬ ಸ್ವಲ್ಪ ಮಟ್ಟಿಗೆಯಾಗಿದೆ. ಅನೇಕ ಕಾರಣಗಳಿಂದ ಎಸ್ಟಿಮೇಟ್ ರಿವೈಜ್ ಆಗುತ್ತಾ ಹೋಗುತ್ತಿದೆ. ಅದ್ದರಿಂದ ಅವರು, ಇದನ್ನು ಕಟ್ಟಿಕೊಡುವ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಬಿ. ದೊಡ್ಡಬೈರೇಗೌಡ :—ಸುಮಾರು ೧೨ ವರ್ಷಗಳಾದರೂ ಕೂಡ ಕೆರೆ ಕಾಮಗಾರಿ ಪೂರ್ಣ ವಾಗಿ ಮುಗಿದಿಲ್ಲ. ಪುನಃ ೪ ಲಕ್ಷ ರೂಪಾಯಿಗಳ ರಿವೈಜ್ಡ್ ಎಸ್ಟಿಮೇಟ್ ಆಗುತ್ತಿದೆ. ಆದ್ದರಿಂದ ಈ ೪ ಲಕ್ಷ ರೂಪಾಯಿಗಳನ್ನು ಕಂಟ್ರಾಕ್ಟ್‌ದಾರರಿಂದ ವಸೂಲು ಮಾಡುತ್ತೀರೋ ಅಥವಾ ಸರ್ಕಾರವೇ ಹೆಚ್ಚಿನ. ಹಣ ವನ್ನು ಕೊಡುತ್ತದೋ ?

ಶ್ರೀಮತಿ ಬಸವರಾಜೇಶ್ವರಿ :-ಆಗಿನ ಕೆಲಸಕ್ಕೂ, ಈಗಿನ ಕೆಲಸಕ್ಕೂ ಬಹಳ ವ್ಯತ್ಯಾಸ ಇರುವುದರಿಂದ, ಆ ಪರಿಸ್ಥಿತಿ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :--ವಿಜಿಲೆನ್ಸ್ ಕಮಿಷನ್ನಿನವರು ಮೆಜರ್‌ಮೆಂಟ್ ಪುಸ್ತಕಗಳನ್ನು ತೆಗೆದು ಕೊಂಡು ಹೋಗಿದ್ದಾರೆಂದು ತಿಳಿಸಿದ್ದೀರಿ ಅವರಿಗೆ ಯಾರೇ ಆರೋಪ ಕೊಟ್ಟಿದ್ದರೂ ಅದನ್ನು ಯಾವಾಗ ಕೊಟ್ಟರು? ಸರ್ಕಾರ ಇದನ್ನು ಇನ್‌ವೆಸ್ಟಿಗೇಷನ್ ಮಾಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದಾರೆಯೋ ? ಕೊಟ್ಟಿದ್ದರೆ, ಅದರ ಕಾಲ ಎಷ್ಟು ?

ಶ್ರೀಮತಿ ಬಸವರಾಜೇಶ್ವರಿ :—ಯಾರು ಆರೋಪ ಕೊಟ್ಟಿದ್ದಾರೆಂದು ನನ್ನಲ್ಲಿ ಆ ಮಾಹಿತಿ ಇಲ್ಲ. ಎರಡು ಮೂರು ವರ್ಷಗಳಿಂದಲೂ ಅದನ್ನು ಅವರು ವಿಚಾರ ಮಾಡುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಕೇಳಿದ್ದಾರೆ. ಒದಗಿಸಿಕೊಡುತ್ತೇನೆ.

ಶ್ರೀ ಬಿ. ಪರಮೇಶ್ವರಪ್ಪ : ಈಗ ಆರು ಲಕ್ಷ ಚಿಲ್ಲರೆ ರಿವೈಜ್ಡ್ ಎಸ್ಟಿಮೇಟ್ ಆಗಿದೆ. ಈಗಾಗಲೇ ೩ ಲಕ್ಷ ಚಿಲ್ಲರೆ ಟೆಟ್‌ಲೆ ಆಗಿದೆ ಒಂದು ಎಕರೆಗೆ ೧೨,೦೦ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದ ನಿಗದಿ ಇತ್ತು. ಆ ಪ್ರಕಾರ ಎಸ್ಟಿಮೇಟ್ ಮಾಡುತ್ತಿರುವಾಗ ಈಗ ಒಂದಕ್ಕೆರಡರಷ್ಟು ೩ ಲಕ್ಷ ಚಿಲ್ಲರೆಯಾಗು ವುದಕ್ಕೆ ಬದಲು ೬ ಲಕ್ಷ ಚಿಲ್ಲರೆ ಆಗಿದೆ. ಈ ಕೆರೆಗೆ ಇಷ್ಟೊಂದು ವ್ಯತ್ಯಾಸ ಇಟ್ಟುಕೊಂಡು ಹೆಚ್ಚು ಖರ್ಚು ಮಾಡುವ ಪ್ರಮೇಯವೇನು? ಅದೇ ರೀತಿಯಾಗಿ ಎಲ್ಲಾ ಕೆರೆಗಳಿಗೂ ಇದೇ ಪದ್ಧತಿಯನ್ನು ಅನುಸರಿಸಿ ಕೆಲಸ ಮಾಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ :-ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಗೌವರ್ನಮೆಂಟ್ ಆರ್ಡರ್ ಇದೆ. ಆ ಪ್ರಕಾರ ಯಾವುದು ಫೀಜಿಬಲ್, ಯಾವುದು ಫೀಜಿಬಲ್ ಅಲ್ಲವೆಂಬುದನ್ನು ಮತ್ತು ಯಾವುದು ಅರಿಡ್ ಜೋನ್ ಯಾವುದು ನಾನ್-ಅರಿಡ್ ಜೋನ್ ಎಂಬುದನ್ನು ನೋಡಿ ಮಾಡಬೇಕಾಗುತ್ತದೆ. ಇನ್ನು ಯಾವುದೂ ವರದಿ ಬಂದಿಲ್ಲ.

ಶ್ರೀ ಸಿ. ಕೆ ರಾಜಯ್ಯ ಶೆಟ್ಟಿ :—ಫೀಜಿಬಲಟಿ ಬರಬೇಕೆಂದು ಕಡಿಮೆ ಅಂದಾಜು ಮಾಡಿ ಆಮೇಲೆ ರಿವೈಜ್ಡ್ ಎಸ್ಟಿಮೇಟ್ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಬಸವರಾಜೇಶ್ವರಿ :—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ :—ನನ್ನ ಪ್ರಶ್ನೆಗೆ ಈಗಾಗಲೇ ಅನೇಕ ಉಪ-ಪ್ರಶ್ನೆಗಳನ್ನು ಕೇಳಿದ್ದಾರೆ. ಅನೇಕ ಸಾರಿ ಎಸ್ಟಿಮೇಟ್ ರಿವೈಜ್ಡ್ ಆಗಿರುವುದು ಇದೆ. ಡಿಫೆಕ್ಟಿವ್ ಕನ್‌ಸ್ಟ್ರಕ್ಷನ್ ಇದರಲ್ಲಿ ಇದೆ. ಆರು ಲಕ್ಷ ಅಂದಾಜು ಇನ್ನೂ ಜಾಸ್ತಿಯಾಗುತ್ತದೆಂದು ಹೇಳಿರುವುದನ್ನು ನೋಡಿದರೆ ಇದರಲ್ಲಿ ಬಹಳ ದೋಷಗಳು ಇವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ನೂರಕ್ಕೆ ನೂರರಷ್ಟು ಇದರಲ್ಲಿ ದುರುಪಯೋಗಪಡಿಸಿದ್ದಾರೆ, ಅಂತಹವರ ಮೇಲೆ ಸರ್ಕಾರದವರು ಸರಿಯಾಗಿ ಲಕ್ಷ್ಯವಿಡಬೇಕು. ಆಗ ಕೆರೆ ಕೆಲಸ ಚೆನ್ನಾಗಿ ಮಾಡುವುದಕ್ಕೆ ಆಗುತ್ತದೆ.

ಶ್ರೀಮತಿ ಬಸವರಾಜೇಶ್ವರಿ :—ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯವನ್ನು ಗಮನದಲ್ಲಿಟ್ಟು-ಕೊಂಡು ಏನು ಕೆಲಸವಾಗಿದೆ, ಎಷ್ಟು ಡಿಫೆಕ್ಟಿವ್ ಆಗಿದೆ, ಯಾರು ಜವಾಬ್ದಾರಿ ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

SRI DIGAMBARARAO B. KALMANKAR :—Who is the Contractor for this work and is there any charge against him?

ಶ್ರೀಮತಿ ಬಸವರಾಜೇಶ್ವರಿ :—ಆ ಕಂಟ್ರಾಕ್ಟರ್ ಹೆಸರು ನನಗೆ ಗೊತ್ತಿಲ್ಲ.

MISMANAGEMENT IN CO-OPERATIVE SOCIETIES AT SHIMOGA

421. SRI ABDUL KHUDUS ANWAR (Bhadravathi).—

Will the Minister for Development be pleased to state :—

(a) the number of Co-operative Societies that have become defunct, due to mismanagement and misuse of funds in Shimoga District (Talukwise figures may be furnished);

(b) the number of Co-operative Societies, where Administrators are appointed, due to mismanagement;

(c) the action taken against the Directors, who have mismanaged the Societies;

(d) whether the Government has issued a direction prohibiting these Directors from contesting election after the expiry of the term of the Administrator so as to enable the Co-operative Societies to run on smooth lines ?

SRI B. L. GOWDA (Deputy Minister for Co-operation).—

(a) 79.

Shimoga	...	18
Bhadravathi		11
Channagiri	...	27
Honnali	...	7
Thirthahalli	...	13
Shikaripur	...	1
Sorab	...	1
Sagar	...	1
	...	79

(b) 13.

(c) Civil and Criminal action has been taken in one case in which personal responsibility of Directors was fixed. The matter is under consideration in other cases.

(d) No.

ಶ್ರೀ ಅಬ್ದುಲ್ ಖುದ್ದುಸ್ ಅನ್ವಾರ್ :--ಸೊಸೈಟಿಗಳಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದಕ್ಕೆ ಕಾರಣ, ಅಲ್ಲಿರುವ ಮಾನೇಜ್‌ಮೆಂಟ್ ಇನ್‌ಎಫಿಷಿಯೆಂಟ್ ಆಗಿರುವುದು ಅಲ್ಲವೇ ?

† ಶ್ರೀ ಬಿ. ಎಲ್. ಗೌಡ :—ಎಲ್ಲಿ ಕ್ರಿಮಿನಲ್ ಮಿಸ್‌ಎಪ್ರೋಪ್ರಿಯೇಷನ್ ಆಗಿದೆ, ಅಲ್ಲೆಲ್ಲಾ ಇನ್‌ಎಫಿಷಿಯೆಂಟ್ ಮಾನೇಜ್‌ಮೆಂಟ್ ಇತ್ತು ಎಂದು ಹೇಳುವುದಕ್ಕಾಗುವುದಿಲ್ಲ.

2-00 P. M.

ಶ್ರೀ ಅಬ್ದುಲ್ ಖುದ್ದುಸ್ ಅನ್ವಾರ್ :—ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎಂದು ಆಡಿಟ್ ಮಾಡಿದಾಗ ಗೊತ್ತಾಗಿದೆ. ಡೀಟೇಲ್ಡ್ ರಿಪೋರ್ಟು ಬಂದಿಲ್ಲ ಎಂದು ಹೇಳಿ ಪ್ರಾಸಿಕ್ಯೂಷನ್ ಮಾಡದೆ ಹಾಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ :— ಯಾವ ಯಾವ ಕೇಸಿನಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದು ಗಮನಕ್ಕೆ ಬಂದಿದೆಯೋ ಅಲ್ಲೆಲ್ಲಾ ಕೇಸ್ ಫೈಲ್ ಮಾಡಿದ್ದೇವೆ. ಯಾವುದು ಹಾಕಿಲ್ಲ ಎಂದು ನನ್ನ ಗಮನಕ್ಕೆ ತಂದರೆ ಕೇಸ್ ಹಾಕಲಿಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ :—೭೯ ಸೊಸೈಟಿಗಳ ಪೈಕಿ ಒಂದರಲ್ಲಿ ಮಾತ್ರ ಹಣ ದುರುಪಯೋಗ-ವಾಗಿದೆ ಎಂದು ಹೇಳಿದ್ದೀರಿ. ಅಂದರೆ ೭೮ ಸೊಸೈಟಿಗಳಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ಆಗಿ ಒಂದರಲ್ಲಿ ಮಾತ್ರ ಹಣ ದುರುಪಯೋಗವಾಗಿದೆ ಎಂದು ಗ್ರಹಿಸುವುದು ಸರಿಯೇ ?

ಶ್ರೀ ಬಿ. ಎಲ್. ಗೌಡ :—ತಾವು ಬಹಳ ಚೆನ್ನಾಗಿ ಗ್ರಹಿಸಿದ್ದೀರಿ.

ಶ್ರೀ ಅಬ್ದುಲ್ ಖುದ್ದುಸ್ ಅನ್ವಾರ್ :—ಮಿಸ್‌ಅಪ್ರೋಪ್ರಿಯೇಷನ್ ಮಾಡಿರುವ ಡೈರೆಕ್ಟರು ಮುಂದೆ ಅಲ್ಲಿ ನಡೆಯುವ ಚುನಾವಣೆಯಲ್ಲಿ ಕಂಟೆಸ್ಟ್ ಮಾಡಕೂಡದೆಂದು ಡೈರೆಕ್ಟಿವ್ ಕೊಡುತ್ತೀರಾ ?

SRI B. L. GOWDA :—Unless it is proved in a court of law, we cannot give such direction.

ಶ್ರೀ ಅಬ್ದುಲ್ ಖುದ್ದುಸ್ ಅನ್ವಾರ್ :—ಪ್ರೂವ್ ಆಗಿರುವ ಕಡೆ ಹಾಗೆ ಡೈರೆಕ್ಷನ್ ಕೊಡುತ್ತೀರಾ ?

SRI B L GOWDA :—He is not eligible to stand for election.

ಶ್ರೀ ಎನ್. ಹುಚ್ಚ ಮಾಸ್ತಿಗೌಡ —ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎಂದು ಬಂದಿರುವ ಆಡಿಟ್ ರಿಪೋರ್ಟನ್ನು ಹಿಂದೆ ಬದಲಾವಣೆ ಮಾಡಿದ ಹಾಗೆ ಈಗಲೂ ಬದಲಾವಣೆ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ. ಎಲ್. ಗೌಡ :—ಹಿಂದೆ ಯಾವುದೂ ಮಾಡಿಲ್ಲ. ಈಗಲೂ ಯಾವುದೂ ಮಾಡುವುದಿಲ್ಲ.

MR. SPEAKAR :—Since electricity has failed I adjourn the House for Ten Minutes.

The house rose at Five Minutes past Two of the Clock and re-assembled at Twenty Minutes past Two of the Clock.

(MR. SPEAKER in the Chair)

BIDDING OF ARRACK SHOPS IN UDIPI TALUK

393. SRI B. BHASKARA SHETTY (Kaup):—

Will the Minister for Finance, Planning and Youth Welfare be pleased to state:—

(a) the contractors who have taken over the arrack shops through bids in Udipi Taluk, South Kanara District during the period from July 1969 to the end of Juue 1970 together with the amount of bid;

(b) the reasons for re-bidding these arrack shops and the amount secured by this bid;

(c) whether the contractor who contested the first bid has found fault with the Government and filed any case,

(d) if so, the reasons therefor,

(e) whether some the of shops have been bid for the third time,

(f) if so, the compelling reasons for the same?

SRI RAMAKRISHNA HEGDE (Minister for Finance, Planning and Youth Welfare).—

(a) Sri M. K. Sreenivasa, Rs. 2,79,000 per month.

(b) Failure on the part of the licensee to pay the monthly shop rent for October 1969 within the prescibed time and thereby committing breach of the condition of lease deed. The total bids secured by resale is Rs. 1,98,725 per month.

(c) No.

(d) Does not arise in view of reply to clause (c).

(e) Yes.

(f) Due to very low bid secured in the second sale.

ಶ್ರೀ ಬಿ. ಭಾಸ್ಕರಶೆಟ್ಟಿ:—ಈ ಕಾಂಟ್ರ್ಯಾಕ್ಟಿನ ಷರತ್ತನ್ನು ಉಲ್ಲಂಘಿಸಿದರು ಅಂತ ಯಾವಾಗ ಗೊತ್ತಾಯಿತು? ಸರ್ಕಾರದವರು ಯಾವಾಗ ಲೈಸನ್ಸ್ ರದ್ದು ಮಾಡಿದರು? ಉಡುಪಿ ತಹಸೀಲ್ದಾರರು ಯಾರ ಸಲಹೆ ಪಡೆದು ಆರ್ಡರ್ ಇಷ್ಯೂ ಮಾಡಿದರು?

ಶ್ರೀ ರಾಮಕೃಷ್ಣ ಹೆಗಡೆ: ಅಕ್ಟೋಬರ್ ತಿಂಗಳಿನಲ್ಲಿ ಇದು ಆದದ್ದು. ನಿಖರವಾದ ತಾರೀಖು ನನ್ನ ಹತ್ತಿರ ಇಲ್ಲ. ಉಡುಪಿ ತಾಲ್ಲೂಕು ತಹಸೀಲ್ದಾರರು ಬಹುಶಃ ತಮ್ಮ ಹಕ್ಕಿಗೆ ಸ್ವಲ್ಪ ಮೀರಿ ವರ್ತಿಸಿದ ಹಾಗೆ ಕಂಡುಬರುತ್ತದೆ, ಆದರ ಬಗ್ಗೆ ತನಿಖೆ ನಡೆಯುತ್ತಾ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ:—೬ನೇ ನವಂಬರ್ ೧೯೬೯ಕ್ಕೆ ಗೆಜೆಟ್ ನೋಟಿಫಿಕೇಷನ್ ಆಗಿ ಅವರ ಲೀಸ್ ಕ್ಯಾನ್ಸಲ ಆಗಿದೆ, ೧೧ನೇ ನವೆಂಬರ್ ೧೯೬೯ಕ್ಕೆ ತಹಸೀಲ್ದಾರರು ಅವರಿಂದ ಹಣ ಪಡೆದು ಅವರು ಡಿಫಾಲ್ಟರ್ ಅಲ್ಲ ಅಂತ ಹೇಳಿದ್ದಾರೆ. ಇದು ಏನಾಗಿದೆ ಎಂದರೆ ಈ ಹಿಂದೆ ಕೂಡ ಈ ಕಂಟ್ರಾಕ್ಟರು ಎರಡು ಸಲ ಡಿಫಾಲ್ಟರ್ ಆಗಿದ್ದರು. ಮುಂಚಿನ ತಿಂಗಳುಗಳಲ್ಲಿ ಒಂದು ಸಾರಿ ಎರಡು ದಿವಸ ಬಿಟ್ಟು ಕೊಟ್ಟಿದ್ದಾರೆ. ಇನ್ನೊಂದು ತಿಂಗಳಿನಲ್ಲಿ ೪ ದಿವಸ ಬಿಟ್ಟು ಕಟ್ಟಿದ್ದಾರೆ. ಈ ಎಂ. ಕೆ. ಶ್ರೀನಿವಾಸರವರು ಮಧ್ವರಾಜರವರ ಮಾವ ಆಗಿದ್ದಾರೆ. ಸರ್ಕಾರದ ಹಣ ಮುಳುಗಿದರೂ ಪರವಾಗಿಲ್ಲ ಅವರ ಹಣ ಬರಬೇಕೆಂದು ಮಧ್ವರಾಜರವರು ಕೋರ್ಟಿಗೆ ಹೋಗಿ ಸರ್ಕಾರಕ್ಕೆ ಮಾಡಿದ ವಂಚನೆ ಆದು ಅಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ:—ಇದು ಸರಿಯಲ್ಲ. ಈ ಅಪಾದನೆಯಲ್ಲಿ ಯಾವ ತರಹದ ತಿರುಳೂ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ:—೪ನೇ ನವಂಬರ್ ೧೯೬೯ಕ್ಕೆ ತಾವು ತಮ್ಮ ರೂಲ್ಸ್ ೧೫ರ ಪ್ರಕಾರ ಒಂದು ಅಮೆಂಡ್‌ಮೆಂಟ್ ತಂದು—ಡಿ ಸಿ ಅವರಿಗೆ ಡಿಸ್ಕ್ರಿಪ್‌ಷನರಿ ಪವರ್ ಇದ್ದು ಒಂದು ತಿಂಗಳು ವಾಯಿದೆ ಕೊಡಬೇಕೆಂದು ಇರುವಾಗ—೬ನೇ ನವಂಬರ್ ೧೯೬೯ಕ್ಕೆ ಎಂದರೆ ಎರಡು ದಿವಸದ ನಂತರ ಕಾಂಟ್ರಾಕ್ಟ್ ರದ್ದು ಮಾಡುವುದಕ್ಕೆ ಕಾರಣ ಏನಿತ್ತು?

ಶ್ರೀ ರಾಮಕೃಷ್ಣ ಹೆಗಡೆ:-ರೂಲ್ಸ್‌ಗನುಗುಣವಾಗಿ ರದ್ದು ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಕಂಟ್ರಾಕ್ಟರ್ಸ್ ಸೇಲ್ಸ್ ಕಡಿಮೆಯಾಗಿರುವುದರಿಂದ ತಮ್ಮ ಹಣದ ಅನಾನುಕೂಲತೆಯಿಂದ ದುಡ್ಡು ಕಟ್ಟುವುದಕ್ಕೆ ಆಗುವುದಿಲ್ಲ ಆದ್ದರಿಂದ ಸ್ವಲ್ಪ ಸೌಲತ್ತುಕೊಡಬೇಕೆಂದು ಕೇಳಿದ್ದರಿಂದ, ೧೫-೨೦ ದಿವಸದಿಂದ ವಿಚಾರ ಮಾಡಿ ಎಷ್ಟು ಮಟ್ಟಿಗೆ ಸೌಲತ್ತುಕೊಡುವುದಕ್ಕೆ ಸಾಧ್ಯವೋ ಅಷ್ಟು ಕೊಡಬೇಕೆಂದು ನಿರ್ಧಾರ ಮಾಡಿ ಒಂದು ನೋಟಿಫಿಕೇಷನ್ ಹೊರಡಿಸಿದ್ದೇವೆ.

ಶ್ರೀ ಜಿ. ಎಂ. ಇದಿನಬ್ಬ.— ಪುನಃ ಬಿಡ್ ಮಾಡಲು ಅವಕಾಶ ಮಾಡಿ ಹರಾಜು ಮಾಡಲು ಕಾರಣ ಲೈಸೆನ್ಸಿಯು ಕೊಡಬೇಕಾದ ರೆಂಟನ್ನು ಸಕಾಲದಲ್ಲಿ ಕೊಡದೇ ಹೋದುದು ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.- ಹೌದು, ಕಾಯಿದೆಗನುಗುಣವಾಗಿ ಮಾಡಲಾಗಿದೆ.

ಶ್ರೀ ಎಂ. ನಾಗಪ್ಪ.- ಎಕ್ಸೈಜ್ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಡಿ ಸಿ ಆ ಜಿಲ್ಲೆಯವರು ನವೆಂಬರ್ ನಾಲ್ಕರಲ್ಲಿ ಉಡುಪಿಗೆ ಹೋಗಿ ತಹಸಿಲ್ದಾರರನ್ನು ಕಂಡು ಅವರಿಗೆ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟರೇ ?

ಶ್ರೀ ರಾಮಕೃಷ್ಣ ಹೆಗಡೆ – ಓರಲ್ಲಾಗಿ ಕೊಟ್ಟಿರುವುದು ಗೊತ್ತಿಲ್ಲ. ಆದರೆ ಎಕ್ಸೈಜ್ ಕಮಿಷನರು ಮತ್ತು ಆ ಜಿಲ್ಲೆ ಡಿ. ಸಿ. ಅಲ್ಲಿಗೆ ಹೋಗಿದ್ದುದು ನಿಜ.

ಶ್ರೀ ಬಿ. ಭಾಸ್ಕರಶೆಟ್ಟಿ.– ಒಂದನೆ ಮತ್ತು ಎರಡನೆ ಮಾರಾಟದಿಂದ ವರ್ಷಕ್ಕೆ ೯ ಲಕ್ಷ ಉತ್ಪತ್ತಿ ಬರುವುದರಿಂದ ಷರತ್ತನ್ನು ಉಲ್ಲಂಘಿಸಿಲ್ಲ ಎಂದು ಸರಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ ಮತ್ತು ಹಣ ಕಟ್ಟಿದ್ದಾರೆ. ಮಧ್ವರಾಜ್ ಬೆಂಗಳೂರಿಗೆ ಬಂದು ಹೈಲೆವಲ್ಲಿನಲ್ಲಿ ವಿಚಾರ ಮಾಡಿ ಆರನೆಯ ತಾರೀಖು ಲೀಜ್ ಕ್ಯಾನ್ಸಲ್ ಮಾಡಿಸಿ ೧೧ನೇ ತಾರೀಖು ತಹಸಿಲ್ದಾರರಿಗೆ ಫೋನ್ ಮಾಡಿ ಮಧ್ವರಾಜ್‌ಗೆ ಹಣ ಸಿಕ್ಕುವಂತೆ ಮಾಡಿಲ್ಲವೇ ? ಅವರು ಅಹಮದಾಬಾದು ಕಾಂಗ್ರೆಸ್ ಅಧಿವೇಶನಕ್ಕೆ ೫೦ ಸಾವಿರ ರೂಪಾಯಿ ಕೊಟ್ಟಿರುವರಂತೆ. ೯ ಸಾವಿರ ರೂಪಾಯಿ ಮುಳುಗಿಸುವ ವಂಚನೆ ಮಾಡಿರುವುದಕ್ಕೆ ಕ್ರಮವೇನು ತೆಗೆದುಕೊಳ್ಳಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.– ಅದು ನಿಜವಲ್ಲ, ಈ ರೀತಿ ಆಪಾದಿಸುವುದು ಸರಿಯಲ್ಲ. ಯಾವುದೇ ರೀತಿಯ ಇನ್‌ಸ್ಟ್ರಕ್ಷನ್ ಫೋನ್ ಮೂಲಕ ಕೊಟ್ಟಿಲ್ಲ. ಯಾರಿಗೂ ಸಹಾಯ ಮಾಡಬೇಕಾದ ಅಗತ್ಯವಿರಲಿಲ್ಲ. ಆಕಸ್ಮಿಯಲ್ಲಾಗಿ ತಹಸೀಲ್ದಾರರ ವರ್ತನೆಯಲ್ಲಿ ಸಂದೇಹ ಕಂಡು ಬಂದುದರಿಂದ ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದೇವೆ ಕಾಂಗ್ರೆಸ್ಸಿಗೆ ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಯಾರಿಗೂ ಯಾರು ಕೊಟ್ಟರೋ ಗೊತ್ತಿಲ್ಲ. ಈ ತರದ ಆಪಾದನೆ ಮಾನ್ಯ ಸದಸ್ಯರಂಥ ಜವಾಬ್ದಾರಿ ಮನುಷ್ಯರು ಮಾಡಬಾರದು. ಈ ವಿಚಾರದಲ್ಲಿ ಎಲ್ಲಿಯೂ ಕೂಡ ಫೇವರಿಟಿಸಂ ಸರಕಾರ ತೋರಿಸಿಲ್ಲ.

SHORT NOTICE QUESTION AND ANSWER

— Unhappy Incident at Shimoga Town

7. Sri M. H. Jayaprakash Narayan (Sirsi):-

Will the Chief Minister be pleased to state.-

(a) whether it is a fact that police and students were injured when an unhappy incident occured on the night of 21st February 1970 in Shimoga Town ;

(b) whether it is a fact that merchants on seeing this unhappy incident closed their shops out of fear ;

(c) the names of the students and the police who were injured in this incident ;

(d) the damage caused to public vehicles and the street lights as a result of this incident :

(e) the suitable measures taken by the Deputy Commissioner and the police authority to bring the situation under control ;

(f) the reasons for this incident and the action taken by them in this behalf ?

Sri Veerendra Patil (Chief Minister):-

(a) There was a student trouble at Shimoga Town on the evening of 20th February 1970 and not on 21st February 1970. Except the Sub-Inspector of Police, Rural Police Station, no one received any injury in this incident.

(b) No.

(c) No student is injured in this incident. The name of the Police Sub-Inspector injured in this incident is Sri P. B. Padmanabha.

(d) Except the wind screen glass of the Police jeep which has been completely damaged, there has been no damage to any other public property.

(e) and (f) The reason for this incident is reported to be eve teasing by two students. All necessary measures to bring the situation under control have been taken. A case in Cr. No. 15/70 has also been registered in Dodpet Police Station and it is under investigation.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.– ಶಿವಮೊಗ್ಗದಲ್ಲಿ ಈ ಘಟನೆ ನಡೆದಾಗ "ಏನವ ನಷ್ಟವಾಗಿಲ್ಲ ಎಂದು ಉತ್ತರದಲ್ಲಿ" ತಿಳಿಸಲಾಗಿದೆ. ವಿದ್ಯಾರ್ಥಿಗಳಿಗೂ ವರ್ತಕರಿಗೂ ನಷ್ಟವಾಗಿರುವ ವಿಚಾರದಲ್ಲಿ ಪೋಲೀಸಿನವರಿಂದ ವರದಿ ಬಂದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.– ವರದಿಯೇನು ಬಂದಿದೆಯೋ ಅದರ ಪ್ರಕಾರ ಉತ್ತರ ಕೊಡಲಾಗಿದೆ.

ಅಧ್ಯಕ್ಷರು.– ಪ್ರಶ್ನೋತ್ತರಗಳ ಕಾಲ ಮುಗಿಯಿತು.

LEVY OF GRAZING TAX ON ANIMALS

428. SRI B. GANGANNA (Kallambella).—

Will the Minister of State for Forests be pleased to state.—

(a) whether Government has levied grazing tax on animals, if so, the date of levy and the rates ;

(b) whether Government has any proposal to withdraw the tax proposed long back in view of the fact that since then many taxes have been levied on raiyats ?

SRI ALUR HANUMANTHAPPA (Minister of State for Forests).—

(a) The Mysore Forest Rules, 1969, have come into force from 1st June 1969. As per Rule 60 Grazing in District forests except in closed areas, shall be free. But grazing in Reserved Forests or protected forests is allowed only on the basis of permit issued by the Forest Officer, for each official year commencing from 1st of April in Form No. 5.

The fees for issue of permits shall be as shown below ;

Cattle	*Local Rate*	*Foreign Rate*
Elephant	Rs. 3 per head per day.	Rs. 5 per head per day.
Camel	Re. 1 per head per day.	Rs. 1-50 per head per day.
Buffaloe	Rs. 2 per head per annum.	Rs. 5 per head per annum.
Horse, Mare, Gelding, Pony, Colt, Filly, Mule, Ass, Bull, Bullock, Cow, Calf or Heifer.	Rs. 1 do	Rs. 3 do
Pig, Ram, Ewe, Sheep, or Lamp.	Re. 0-75 do	Rs. 2 do

(b) No.

AREA UNDER DRY CULTIVATION IN DODDABALLAPUR CONSTITUENCY

522. Sri G. Rame Gowda (Doddaballapur).—

Will the Minister for Agriculture be pleased to state.—

(a) area under dry cultivation in Doddaballapur Constituency ;

(b) area taken up for contour bunding since last three years ;

(c) area completed so far ;

(d) the area taken up under relief works programme ?

Sri B. Rachaiah (Minister for Agriculture) —

(a) About 52,000 acres.

(b) 2,367 acres.

(c) 2,000 acres.

(d) 2,367 acres.

VACANCIES OF HEAD MASTERS IN FISHERIES HIGH SCHOOLS IN NORTH AND SOUTH KANARA DISTRICTS

607. Smt. Winnifred F. Fernades (Coondapur).—

Will the Minister of State for Fisheries and Ports be pleased to state.—

(a) whether 4 posts of Headmasters are kept vacant for nearly 4 years in the Fisher es Departmental High Schools in North and South Kanara Districts, and if so, the reasons for the delay in filling up those posts ;

(b) whether Government has taken a decision to hand over the Fisheries Departmental Schools to the Education Department, as from 1st April 1970, and if so, the reasons, it any, for the same ;

(c) whether Government proposes to fill the vacant posts before they hand over ?

Sri H.C. Linga Reddy (Minister of State for Fisheries and Ports).—

(a) Only one post has been vacant for nearly 4 years and not four posts.

(b) No.

(c) Does not areis in view of replies to Clauses (a) and (b) above.

SCARCITY OF DRINKING WATER IN H.A.L. SANITARY BOARD AREA

639. SRI K. PRABHAKAR (Varthur).—

Will the Minister of State for Municipal Administration be pleased to state :—

(a) the number of villages with drinking water wells in the H.A.L. Sanitary Board area in Bangalore south Taluk ;

(b) the number of such villages where there has been scarcity of drinking water during the summer since 1966 ;

(c) whether the H. A. L is giving the benefit of water supply to any of the villages at its own expense ?

SRI B M PATIL (Minister of State for Municipal Administration)—.

(a) 13.

(b) In all the Villages.

(c) No.

SPEECH OF THE FINANCE MINISTER ON NATIONALISATION OF BANKS

649. SRI M S. KRISHNAN (Malleswaram).—

Will the Minister for Finance, Planning and Youth Welfare be pleased to state :—

(a) whether the Government is aware that Sri Ramakrishna Hegde, Minister for Finance spoke deriding the Nationalisation of Banks as reported in " Deccan Herald " of 31st December, 1969 ?

SRI RAMAKRISHNA HEGDE (Minister for Flinance Panning and Youth welfare)—

(a) The Finance Minister had indicated at the meeting of the All-India Bank Depositors Association the dangers which may follow the Nationalisation of Banks.

SURVEY WORK OF BHIMA PROJECT

663. SRI K.R. NAD GOUDA (Yadgiri) —

Will the Chief Minister be pleased to state :—

(a) whether the Survey work of Bhima Projeet in Shahapur Taluk is completed ;

(SRI K. R. NAD GOUDA)

(*b*) if so, the extent of area that it would irrigate ;

(*c*) when the Project is likely to be taken up for execution ?

SRI VEERENDRA PATIL (CHIEF MINISTER).—

(*a*) Yes.

(*b*) About 1,35,000 acres.

(*c*) This Project will be considered when the Resources the State improve.

Business of the House

† ಶ್ರೀ ಎನ್. ಚನ್ನಯ್ಯ (ಕೃಷ್ಣರಾಜ) ಒಂದು ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತರಬೇಕೆಂದಿದ್ದೇನೆ. ನಿನ್ನೆ ಮಂತ್ರಿಗಳು ಜವಾಬು ಕೊಡಬೇಕೆಂದು ನಾವು ಕೆಲವರು ಹೇಳಿದವು ನಮ್ಮ ಪಕ್ಷದವರು ಕೇಳಿದೆವು. ಆದರೂ ಒಪ್ಪದೇ ಹೋದುದರಿಂದ ನಮ್ಮ ಪಕ್ಷದವರು ವಾಕ್‌ಔಟ್ ಮಾಡಿದೆವು, ಕೆಲವರು ನಮ್ಮನ್ನನುಸರಿಸಿದರು. ಆದರೂ ಕೂಡ ನಿನ್ನೆ ಸಭೆಯನ್ನು ಮುಂದುವರೆಸಿ ಸುಮಾರು ಎರಡು ಗಂಟೆ ಕಾಲ ನಡೆಸಲಾಗಿದೆ. ಯಾರೂ ಸರಕಾರ ಕೊಡುವ ಜವಾಬನ್ನು ಕೇಳಬಾರದು ಎಂದು ಹಾಗೆ ಮಾಡಿದಿರಾ? ಯಾರಿಗೂ ಗೊತ್ತಾಗಬಾರದು. ಯಾರಾದರೂ ಇದ್ದರೆ ಪ್ರಶ್ನೆ ಕೇಳುವರು ಎಂದು ಹಾಗೆ ಮಾಡಲಾಯ್ತೋ ? ಏಕೆ ಸದಸ್ಯರ ಮನ್ನಣೆ ಮಾಡುತ್ತಿಲ್ಲ ? ನಾವು ಹೇಳಿದ್ದಕ್ಕೆ ಮರ್ಯಾದೆ ಮಾಡಬೇಕು. ಕೋರಂ ಇಲ್ಲದೆ ಎರಡು ದಿವಸ ಅಡ್‌ಜರ್ನ್ ಮಾಡಿರುವುದುಂಟು ಹಾಗಿರುವಾಗ ನಿನ್ನೆ ಒರಿ ಕುರ್ಚಿಗಳಿಗೆ ಹೇಳಿದರೇ ? ನಾವು ಕೇಳುವುದಕ್ಕೆ ಬೆಲೆ ಕೊಡಬೇಡವೇ ? ಹತ್ತಾರು ಜನರು ಮನವಿ ಮಾಡಿದಮೇಲೆ ಈ ದಿವಸ ಜವಾಬು ಕೊಡಲು ತೊಂದರೆಯೇನಿತ್ತು.

SRI H. SIDDAVEERAPPA (Harihar):-I would like to add a few words to what my Hon. friend has stated. We read in the papers that the Hon.Ministers were addressing the empty chairs. Among those present, the Ministers were more than the Members.Even those who were present they were also not eager to sit. It was a very important subject, *viz.*, Agriculture, where this House was really interested in hearing the Government's view and the policies of the Government with regard to agriculture development. We are very sorry, that we were deprived of the opportunity to hear the policies of the Government. Sir, the Hon. Minister for Agriculture did not say anything especially about the burning problem of the Government *i. e.*, losing about Rs 30 crores of manure or fertilisers deal wherein the co-operative societies have caused an immeasurable havoc to the State. I am sorry we were not able to get opportunity to elicit that information from the Hon. Minister. What we want is that atleast by the stroke of 6 O, clock the Hon. Chair could apply the guillotine. We know that inspite of our best efforts we cannot get much time to speak. Therefore, I request the Hon. Chair to please see that this is strictly adhered to.

MR. SPEAKER:- I have heard the Hon. Members. Yesterday a note was passed on to me under the signatures of Hon. Members. Sri B. Bhaskar Shetty and Sri S. V. Agnihotri that the reply would commence by about 5-30 P. M. I was also told that Hon. Sri Hutchmasti Gowda, whip of the Congress-R party had also agreed to it.

ಶ್ರೀ ಎಸ್. ಹುಚ್ಚಮಾಸ್ತಿಗೌಡ:—ನನ್ನನ್ನು ಕೇಳಲಿಲ್ಲ.

MR. SPEAKER:—I was informed like that. Therefore I provided opportunity to all Hon. Members to speak upto 5-30 p. m. But it was a sad affair that some Hon. Members insisted upon speaking even after 5-30 p. m.

Then I said on the basis of the understanding reply should have started at 5-30 p. m. I requested the Hon. Minister to be brief in their reply and make good the loss of half-an-hour. I assumed that thewhole house had agreed to this proposal. I am the last person to cause any inconvenience to anybody. Hon Members could have asked the Minister to be brief. But instead some Hon. Members went from the House.

2-30 P. M.

SRI H SIDDAVEERAPPA:—We would have fainted if we had stayed on.

MR. SPEAKER: —I would have certainly requested the Ministers to be brief. Any way, let it stop at this. I have already said that I shal be very meticulous in the matter of time today. I shall apply guillotine at 6 p. m. I request the Hon. Members to confine themselves to the time limit and as soon as the time allotted to them is over, the Hon. Members speaking should automatically resume thric seats. I am one with the Hon'ble Leader of Congress(R) to be guided by the time limit. Let us conform to the schedule of timings. If we can do that, we shalll be able to carry out the work according to the time.

SRI VENKATAGIRIAPPA:—Sir, the Hon. Minister for Veterinary and Animal Husbandry Sri G. B. Shankar Rao has made a statement which is in contradiction with what the Chief Minister says... ... ...

MR. SPEAKER:—The Hon. Member may give me a notice on that subject. I will pass it on to the Minister and request him to make a statement.

ಶ್ರೀ ಬಿ. ಪಿ. ಗಂಗಾಧರ:—ಡಾಕ್ಟರ್ ಕೆ. ಎಲ್. ರಾವ್ ಅವರು ಕಾವೇರಿ ಬೇಸಿನ್‌ನಲ್ಲಿ ನಾವು ತೆಗೆದುಕೊಳ್ಳತಕ್ಕ ಕೆಲಸಗಳ ಬಗ್ಗೆ ಒಂದುತರಹ ಹೇಳಿಕೆಯನ್ನು ಕೊಟ್ಟಿದ್ದಾರೆ.

MR. SPEAKER:—I am admitting a motion on that subject.

ಶ್ರೀ ಎಚ್. ಎನ್. ನಂಜೇಗೌಡ;—ಡಾಕ್ಟರ್ ಕೆ. ಎಲ್. ರಾವ್ ಅವರು ಕಾವೇರಿ ನೀರಿನ ಬಗ್ಗೆ ಏನೊಂದು ಹೇಳಿಕೆಯನ್ನು ಲೋಕ ಸಭೆಯಲ್ಲಿ ಕೊಟ್ಟಿದ್ದಾರೆ, ಅದರಿಂದ ನಮ್ಮ ರಾಜ್ಯದ ಜನರ ಮನದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿದೆ. ಅದನ್ನು ಕುರಿತು ಚರ್ಚೆ ಮಾಡಬೇಕೆಂದು ಒಂದು ಸೂಚನೆಯನ್ನು ಕಳುಹಿಸಿದ್ದೆ. ಅದರ ಬಗ್ಗೆ ಏನು ಮಾಡಿದ್ದೀರಿ ಎನ್ನುವುದನ್ನು ಹೇಳಬೇಕೆಂದು ಕೇಳುತ್ತೇನೆ.

MR. SPEAKER:—Sri H. N. Nanje Gowda, Sri B. P. Gangadhar, Sri C. K. Rajiah Setty and others have given notice of a motion under Rule 59. I am very glad that the Hon. Members are so alert about the interests of the State, whether it is Krishna-Godavari or Cauvery. The motion is admitted and discussion on this motion will take place between 9-00 a. m. and 11 a. m. tomorrow.

CALL ATTENTION TO A MATTER OF URGENT PUBLIC IMPORTANCE.

Re:—Accidental fire at Nandanahosur Village, Holalkere Taluk.

SRI B. PARAMESWARAPPA (HONNALLI):—I call the attention of the Minister for Revenue to the fire accident at Nandanahosur Village, Holalkere Taluk, Chitradurga District.

† SRI H. C. LINGA REDDY (Minister of State for Fisheries and Ports) :—Sir, on behalf of the Hon. Minister for Revenue I am placing this information before the Hon. House.

An accidental fire took place on 22-2-1970 at Nandanahosur Village, Holalkere Taluk, Chitradurga District in which 15 houses, 31 haystacks and stack yet to be thrashed were destroyed. 15 families have lost their entire belonging. Out of these 15 families, 10 are Harijans. The total loss is estimated at Rs. 32,550 Necessary records have been built up for affording relief to the sufferers.

The Deputy Commissioner, Chithradurga, has sanctioned cash grant of Rs. 4,000 to the victims of the fire accident. He has also moved the Divisional Commissioner, Bangalore, for sanctioning an additional amount of Rs. 2,200 to be disbursed to the victims. He has also made arrangements for distributing building materials worth of Rs. 2,000.

The local citizens have also come forward with 4 quintals of Ragi for feeding the fire victims.

ಶ್ರೀ ಬಿ. ಪರಮೇಶ್ವರಪ್ಪ:—೧೫ ಮನೆಗಳಲ್ಲಿ, ೧೦ ಹರಿಜನರದ್ದು, ಇನ್ನು ೫ ಮನೆಗಳು ಬೇರೆಯುವರದು. ಹರಿಜನರಿಗೆ ಸರ್ಕಾರ ಫ್ರೀ ಗ್ರಾಂಟಿನಿಂದ ಮನೆ ಕಟ್ಟಿ ಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ. ಅದೇರೀತಿ ಬೇರೆ ಹಿಂದುಳಿದ ಜನಗಳಿಗೂ ಫ್ರೀ ಗ್ರಾಂಟಿನಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ? ಸುಟ್ಟುಕೊಂಡಿರತಕ್ಕ ಮನೆಗಳವರಿಗೆ ಅರಣ್ಯದಲ್ಲಿ ಬೇಕಾದ ಸಾಮಗ್ರಿಗಳನ್ನು ಫ್ರೀಯಾಗಿ ಕೊಡಲಿಕ್ಕೆ ಒಂದು ವಾರದೊಳಗಾಗಿ ಆಜ್ಞೆ ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ:—ಬೇರೆ ಕುಟುಂಬಗಳವರಿಗೆ ಕೂಡ ಸಹಾಯ ಮಾಡಬೇಕೆಂದು ಡೆಪ್ಯುಟಿ ಕಮಿಷನರು ಅಸಿಸ್ಟೆಂಟ್ ಕಮಿಷನರಿಗೆ ಸೂಚನೆ ಕಳಹಿಸಿದ್ದಾರೆ. ಮುಂದೆ ಇನ್ನೂ ಒಂದು ವರದಿಯನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ. ಸಂದರ್ಭಕ್ಕೆ ತಕ್ಕ ಹಾಗೆ ಏನೇನು ಸೌಕರ್ಯ, ಸಹಾಯ, ಒದಗಿಸಬಹುದೋ ಅದನ್ನೆಲ್ಲ ಒದಗಿಸುವುದಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಪರಮೇಶ್ವರಪ್ಪ:—ಕೊಟ್ಟಿರತಕ್ಕ ಕ್ಯಾಷ್ ಗ್ರ್ಯಾಂಟನ್ನು ಹಂಚಲು ಡೆಪ್ಯುಟಿ ಕಮಿಷನರಲ್ಲಾಗಲೀ, ಡಿವಿಜನಲ್ ಕಮಿಷನರಲ್ಲಾಗಲೀ ಹಣವಿಲ್ಲ ಎಂದು ಗೊತ್ತಾಗಿದೆ. ಆದುದರಿಂದ ಸರ್ಕಾರ ಕೂಡಲೇ ಹಣವನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾ ರೆಡ್ಡಿ:—ಅವರಲ್ಲಿ ಹಣವಿಲ್ಲವೆಂದು ತಿಳಿದು ಬಂದರೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹಂಜಿಶಿವಣ್ಣ:—ಸೌಲಭ್ಯಗಳನ್ನು ಒದಗಿಸುತ್ತೇವೆಂದು ಹೇಳಿದರು. ಏನೇನು ಸೌಲಭ್ಯಗಳನ್ನು ಒದಗಿಸುತ್ತಾರೆಂದು ನಿರ್ದಿಷ್ಟವಾಗಿ ಹೇಳುತ್ತಾರೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ:—ನಗದು ಹಣ ಕೊಡುತ್ತೇವೆ ಮತ್ತು ಮನೆ ಕಟ್ಟಿಕೊಳ್ಳುವುದಕ್ಕೆ ಸಾಮಾನು ಸರಂಜಾಮುಗಳನ್ನು ಒದಗಿಸುತ್ತೇವೆ. ವಿವರಗಳಿಗೆ ಎರಡನೆಯ ವರದಿಯನ್ನು ಕಳುಹಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ:—ಸೌಲಭ್ಯಗಳನ್ನೆಲ್ಲ ಒದಗಿಸಿದ್ದೀರಾ ಎಂಬುದನ್ನು ಖಚಿತವಾಗಿ ಹೇಳಿ ಎಂದರೆ ಜಿಲ್ಲಾಧಿಕಾರಿಗಳು ಒದಗಿಸುತ್ತಾರೆಂದು ಹೇಳುತ್ತಾರೆ.

ನೊಂದ ಹರಿಜನ ಸಂಸಾರಗಳಿಗೆ ಸೋಷಿಯಲ್ ವೆಲ್‌ಫೇರ್ ಇಲಾಖೆ ಕೊಡತಕ್ಕ ಯೋಜನೆಯಿಂದ ಸಹಾಯವನ್ನು ಒದಗಿಸಿಕೊಟ್ಟಿದ್ದೀರಾ ? ಇನ್ನು ಯಾವ ಇಲಾಖೆಯಿಂದ ಸಹಾಯ ದೊರತಿದೆ ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ:—ಇಂಥ ಸಂದರ್ಭದಲ್ಲಿ ಏನು ಸಹಾಯ ಮಾಡಬೇಕು ಎನ್ನುವುದಕ್ಕೆ ಸರ್ಕಾರಿ ಆದೇಶಗಳಿವೆ. ಅದರ ಪ್ರಕಾರ ತಕ್ಷಣ ಏನು ಸಹಾಯ ಮಾಡಬಹುದೋ ಅದನ್ನು ಮಾಡಿ ಆ ಮೇಲೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮುಖಾಂತರ ಏನು ಸಹಾಯ ಮಾಡಬೇಕು ಎನ್ನುವ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

PAPERS LAID ON THE TABLE

SRI K. V. SHANKARA GOWDA (Minister for Education):—Sir, on behalf of the Minister for Industries, I beg to lay the Regulation governing the disposal of lands by the Mysore Industrial Areas Development Board- 969. Notification No. CI.2.FDB 69 dated 4th September 1969 under Section 42 of the Mysore Industrial Areas Development Act, 1966.

SRI K. V. SHANKARE GOWDA :—On behalf of the Minister for Revenue I beg to lay the Mysore Land Reforms (Amendment)Rules 1969 *vide* Notification No. RD 254 LRY 69. dated 17th January 1970 : the Land Reforms (Legal Assistance to the poor tenants) (Amendment) Rules, 1969, *vide* (Notification No. RD 262 LRY 69, dated 1 th January 1970. under Section 140 of the Mysore Land Reforms Act, 1961.

BUDGET ESTIMATES FOR 1970-71.
DEMANDS FOR GRANTS

Demand No :17-Education

and No :37-Stationery and Printing.

SRI K. V SHANKARE GOWDA (Minister for Education) ;-On the recommendation of the Governor I beg to move:
"That a sum not exceeding Rs. 52,84,09,000 be granted to thet Government to defray the charges which will come in course of payment during the financial year for the period ending on the 31st day of March 1971 in respect of Education;

"That a sum not exceeding Rs. 1,26,12,000 be granted to the Government to defray the charges which will come in course of payment during the financial year for the period ending on the 31st day of March 1971 in respect of Stationery and Printing."

MR. SPEAKER :—Motions moved :

"That a sum not exceeding Rs. 52,84,09,000 be granted to the Government to defray the charges wich whill come in course of payment during the financial year for the period ending on the 31st day of March 1971 in respect of Education'

"Th at sum not exceeding Rs. 1,26,12,000 be granted to the Government to defray the charges which will come in course of payment during the financial year for the period ending on the 31st day of March 1971 in respect of Stationery and Printing."

Before the debate begins, I would like to inform the House that on the basis of three hours available for debate, 45 Minutes will go to S V.D.. 28 minutes to Congress (R) and 7 Minutes to other members. Out of that 1½ hours will go to Congress, including the Minister's reply Therefore, I will not be able to give more time and accommodate all members mentioned in the lists sent to me. I shall give 10 Minutes each to the S V D. members with additional 5 minutes to Sri. Srikantaiah who has to initiate the debate. As regards Congress (R) I have got 3 names and I shall give them 10 minutes each. I request Hon. Members to exercise a sort of self-restraint and keep up to the time schedule.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು):—ಸ್ವಾಮಿ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಈಗ ತಾನೆ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರ. ವಿದ್ಯಾಭ್ಯಾಸಕ್ಕೆ ೫೨ ಕೋಟಿ, ಮುದ್ರಣ ಇಲಾಖೆಗೆ ೧ ಕೋಟಿ ರೂಪಾಯಿಗಳನ್ನು ಬೇಡಿಕೆಯಲ್ಲಿ ಕೇಳಿದ್ದಾರೆ. ಈ ರೀತಿ ಕೇಳಿದ ದುಡ್ಡನ್ನು ಕೊಡಲಿಕ್ಕೆ ಯಾವ ಆತಂಕ ಸಂಕೋಚ ಇರುವುದಿಲ್ಲ. ರಾಜ್ಯದ ಬೊಕ್ಕಸದಲ್ಲಿ ಇನ್ನೂ ಹೆಚ್ಚಿಗೆ ಹಣ ಇದ್ದರೆ ಅದನ್ನು ಇದಕ್ಕಾಗಿ ಒದಗಿಸಲು ನಮಗೆ ಮನಸ್ಸು ಇದೆ. ಹೀಗಿ ಕೊಟ್ಟಿರತಕ್ಕಂಥ ದುಡ್ಡು ಸರಿಯಾದ ರೀತಿಯಲ್ಲಿ ವ್ಯಯವಾಗುತ್ತದೆಯೇ? ಸರಿಯಾದ ಮಾರ್ಗದಲ್ಲಿ ವ್ಯಯ ಮಾಡುತ್ತಿದ್ದಾರೆಯೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ.

ಈ ವಿದ್ಯಾಭ್ಯಾಸದ ಬೇಡಿಕೆ ಬಂದಾಗ್ಗೆ ಮಾತನಾಡುವಾಗ ಸ್ವಲ್ಪ ಮಟ್ಟಿಗೆ ತತ್ವ ಹಿಡಿದು ಮಾತನಾಡಬೇಕಾಗುತ್ತದೆ. ಇಂದು ಆರ್ಥಿಕ ಕ್ಷೇತ್ರದಲ್ಲಿ ಯಾವ ವಿಧವಾದ ಒಂದು ಗೊಂದಲಮಯ ವಾತಾವರಣ ಇದೆಯೋ ಅಂಥದೇ ಗೊಂದಲಮಯ ವಾತಾವರಣ ವಿದ್ಯಾಭ್ಯಾಸ ಕ್ಷೇತ್ರದಲ್ಲಿಯೂ ಇದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇದರಲ್ಲಿ ಪ್ರತಿಯೊಬ್ಬರೂ ಪರಿಣತರು, ತಜ್ಞರು, ನೈಪುಣ್ಯತೆ ಇದೆ ಒಂದು ಹೇಳುತ್ತಾರೆ. ಪ್ರತಿಯೊಬ್ಬ ಎಕ್ಸಪರ್ಟನು ತನ್ನ ಔಷಧಿಯನ್ನು ವಿದ್ಯಾಭ್ಯಾಸದ ಶಿಶುವಿಗೆ ಚುಚ್ಚುತ್ತಲೇ ಇರುತ್ತಾನೆ. ಇಂಥ ಒಂದು ಮದ್ದು ಕಾಲಕ್ರಮೇಣ ಯಾವ ಪರಿಣಾಮ ಉಂಟು ಮಾಡುತ್ತದೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಬ್ರಿಟಿಷರ ಕಾಲದಿಂದ ಬಂದಿರುವ ಈ ವಿದ್ಯಾಭ್ಯಾಸ ಪದ್ಧತಿ ನಮ್ಮಗೆ ಯಾವ ಪ್ರಯೋಜನವಿಲ್ಲ ಎಂದು ಒಂದು ಕಡೆ ಹೇಳುತ್ತಾರೆ. ಈ ಮಧ್ಯೆ ಕೆಲವರು ತಜ್ಞರು ಎನ್ನಿಸಿಕೊಂಡಂಥವರು ನಮ ಸಂಸ್ಕೃತಿಗೆ ಅನುಗುಣವಾಗಿ ವಿದ್ಯಾಭ್ಯಾಸ ವ್ಯವಸ್ಥೆ ಬೇಕು ಎಂದು ಹೇಳುತ್ತಾರೆ. ಆದರೆ ಯಾರೂ ಕೂಡ ನಿಜವಾಗಿ ಇದರಲ್ಲಿ ಲೋಪ ದೋಷಗಳು ಏನು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ. ಸಂಸ್ಕೃತಿಗೆ ಅನುಗುಣವಾಗಿ ಇರಬೇಕು ಎನ್ನುವುದಕ್ಕೆ ರೂಪರೇಖೆ ಯಾರೂ ಮುಂದೆ ಇಡುತ್ತಿಲ್ಲ. ಇನ್ನೊಂದು ಕಡೆ ಈಗಿನ ವಿದ್ಯಾಭ್ಯಾಸದ ಕ್ರಮದಲ್ಲಿ ಅವ್ಯವಸ್ಥೆ ಇದೆ, ವಿದ್ಯಾರ್ಥಿ ರಂಗದಲ್ಲಿ ಅಶಿಸ್ತು ಇದೆ, ನೈತಿಕ ಮಟ್ಟ ಕಡಿಮೆಯಾಗಿದೆ, ಇದನ್ನು ಸುಧಾರಿಸಲು ಶಾಲೆ ಕಾಲೇಜುಗಳಲ್ಲಿ ಸೂಕ್ತ ಪರಿಹಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ವಾದ ಇದೆ. ವಿದ್ಯಾಭ್ಯಾಸದ ಕ್ರಮದಲ್ಲಿ ವೈಜ್ಞಾನಿಕ ಕ್ಷೇತ್ರಕ್ಕೆ ಸರಿಯಾದ ಗಮನ ಕೊಟ್ಟಿಲ್ಲ. ಪಠ್ಯ-ಪುಸ್ತಕಗಳಿಂದ ಯುವಕರಿಗೆ ಪ್ರಯೋಜನವಾಗುತ್ತಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ನಿರುದ್ಯೋಗ ಸಮಸ್ಯೆ ಮುಖ್ಯ ಕಾರಣವಾಗಿ ಅಡ್ಡ ಕಟ್ಟಿದೆ, ಆದುದರಿಂದ ವಿದ್ಯಾಭ್ಯಾಸದ ಕ್ರಮ ಬದಲಿಸಬೇಕು ಎಂದು ಒಂದು ವಾದ ಇದೆ. ನನ್ನ ಮಟ್ಟಿಗೆ ಹೇಳುವುದಾದರೆ ನಾನು ತಜ್ಞನಲ್ಲ, ನನಗೆ ಇದರಲ್ಲಿ ಅಷ್ಟು ಪರಿಶ್ರಮವಿಲ್ಲ. ಸರಿಯಾದ ಉತ್ತರ ಕೊಡಲು ಹೆದರುತ್ತೇನೆ. ಆದರೆ ಕೆಲವು ವಿಷಯ ಮಾತ್ರ ಸ್ಪಷ್ಟವಾಗಿ ಕಾಣುತ್ತದೆ. ವಿದ್ಯಾಭ್ಯಾಸದ ಕ್ರಮದ ಬಗ್ಗೆ, ನಿರುದ್ಯೋಗ ಅಶಾಂತಿ ಬಗ್ಗೆ ಹೇಳುವುದಾದರೆ ಇದೂ ಒಂದು ಕಾರಣವಾಗಿದೆ. ವಿದ್ಯಾರ್ಥಿರಂಗದಲ್ಲಿ ಇತ್ತೀಚೆಗೆ ನಡೆಯುತ್ತಿರುವುದಕ್ಕೆ ಇನ್ನೊಂದು ಕಾರಣ ಕೊಡುತ್ತಾರೆ ಭಾಷೆ ಬಗ್ಗೆ ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಂಡಿಲ್ಲ. ದೇಶೀಯ ಭಾಷೆಯಲ್ಲಿ ವಿದ್ಯಾಭ್ಯಾಸ ಆಗಬೇಕು ಎನ್ನುವ ವಾದ ಎಬ್ಬಿಸಿದ್ದಾರೆ. ಈ ಗೊಂದಲಮಯ ವಾತಾವರಣದಲ್ಲಿ ಯಾವ ನೀತಿ, ಧೋರಣೆ ಅನುಸರಿಸಬೇಕು ಎನ್ನುವುದಕ್ಕೆ ಸೂತ್ರ ಕಂಡು ಹಿಡಿಯಲು ನನಗೆ ಧೈರ್ಯ ಸಾಲದು. ಮಂತ್ರಿ ಸ್ಥಾನಕ್ಕೆ ಯಾರೇ ಬರಲಿ, ಇದಕ್ಕೆ ಸರಿಯಾದ ಸೂತ್ರ ಕಂಡುಹಿಡಿಯುವುದು ಕಷ್ಟ. ವಿದ್ಯಾರ್ಥಿಗಳಲ್ಲಿ ಅಶಾಂತಿ ಉಂಟಾಗಲು ಕಾರಣ ಏನು ಎಂಬುದಕ್ಕೆ ಒಂದು ದಿನ ಮಾತನಾಡಿದರೂ ಸಾಲದು ಹಾಗೂ ಸೂಕ್ತ ಉತ್ತರ ಕೊಡಲು ಯಾರಿಗೂ ಧೈರ್ಯ ಸಾಲದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಎರಡನೆಯದಾಗಿ ಈ ಒಂದು ಅಭಿಪ್ರಾಯ ಕೊಡುವಾಗ ಅನೇಕ ವೇಳೆ ಇದು ತಪ್ಪು ನಡವಳಿಕೆ ಎಂದು ಅನಿಸುತ್ತದೆ. ವಿದ್ಯಾಭ್ಯಾಸದ ಬಗ್ಗೆ ಟೀಕೆ ಮಾಡುವಾಗ ನಿರುದ್ಯೋಗವೇ ಕಾರಣವಾಗಿದೆ ಎಂದು ಟೀಕೆ ಬಂದಿದೆ. ವಿದ್ಯಾವಂತ ವರ್ಗದಲ್ಲಿ ನಿರುದ್ಯೋಗ ಇದೆ, ಇದು ನಿಜ ಇದನ್ನು ಪರಿಹರಿಸಬೇಕಾದರೆ ವಿದ್ಯಾಭ್ಯಾಸದ ಕ್ರಮದಿಂದ ಇದು ಸಾಧ್ಯವಿಲ್ಲ. ಇದು ವೈಯುಕ್ತಿಕ ಕ್ರಾಂತಿ ಮೇಲೆ ಅವಲಂಬಿಸಿದೆ. ಪ್ರತಿಯೊಬ್ಬ ವಿದ್ಯಾವಂತನು ಇದನ್ನು ಬಗೆಹರಿಸಲು ಹೋರಾಡುವುದಾದರೆ ನಿದಾಕ್ಷಿಣ್ಯವಾದ ಅಭಿಪ್ರಾಯ ಹೊಂದಿರಬೇಕು. ಅಂದರೆ ಯೋಜನೆ ಫಲಕಾರಿಯಾಗುತ್ತದೆ. ನಮ್ಮ ಸಂವಿಧಾನದಲ್ಲಿ ಚಾಪ್ಟರ್ ೩ರಲ್ಲಿ ಇರುವ ಫಂಡಮೆಂಟಲ್ ರೈಟ್ಸನಲ್ಲಿ ಮಧ್ಯೆ ಅಡ್ಡಿ ಬರುತ್ತದೆ. ವಿದ್ಯಾಭ್ಯಾಸದ ಕ್ರಮದಿಂದ ನಿರುದ್ಯೋಗ ಸಮಸ್ಯ ಬದಲಾವಣೆಯಾಗುತ್ತದೆ ಎನ್ನುವುದು ನನಗೆ ಸಂಶಯ.

ಏಕೆಂದರೆ ಈ ದಿವಸ ಆ ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಲ್ಲೂ ಕೂಡ ನಿರುದ್ಯೋಗ ಸಮಸ್ಯೆ ಎನ್ನುವುದು ಎದ್ದು ಕಾಣುತ್ತಿದೆ. ಆದರೆ ಇದರ ಬಗ್ಗೆ ಒಂದು ಸಲಹೆಯನ್ನು ಕೊಡುವುದಕ್ಕೆ ನನಗಂತೂ ಬಹಳ ಹೆದರಿಕೆಯಾಗಿದೆ. ಆದರೆ ನಾನು ಈಗ ನಮ್ಮ ವಿದ್ಯಾಭ್ಯಾಸದಲ್ಲಿ ಎಲ್ಲೆಲ್ಲಿ ಏನೇನು ಲೋಪದೋಷಗಳಿವೆ ಮತ್ತು ಅವುಗಳನ್ನು ಸರಿಪಡಿಸುವುದು ಹೇಗೆ ಎನ್ನತಕ್ಕ ಬಗ್ಗೆ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಈಗ ಕೊಡಬಯಸುತ್ತೇನೆ.

ಈ ದಿವಸ ಸರ್ಕಾರದವರೇನೂ ಈ ವಿದ್ಯಾಭ್ಯಾಸಕ್ಕಾಗಿ ಬಡ್ಜೆಟ್ಟಿನಲ್ಲಿ ೫೩ ಚಿಲ್ಲರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ, ಅದರಲ್ಲಿ ನನಗೇನಾದರೂ ಅಧಿಕಾರವಿದ್ದರೆ ೪೦ ಕೋಟಿ ರೂಪಾಯಿಗಳನ್ನು ನಾನು ಕೇವಲ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಉಪಯೋಗಿಸುತ್ತಿದ್ದೇನು. ನಮ್ಮ ದೇಶಕ್ಕೆ ಈ ಯೂನಿವರ್ಸಿಟಿ ವಿದ್ಯಾಭ್ಯಾಸ ಅಷ್ಟು ಪ್ರಾಮುಖ್ಯವಾದದ್ದಲ್ಲ. ನಮ್ಮಲ್ಲಿ ಬಹಳ ಕಷ್ಟದಿಂದ ನಡೆಯುತ್ತಿರುವ ವಿದ್ಯಾಭ್ಯಾಸ ಎಂದರೆ ಅದು ಪ್ರಾಥಮಿಕ ಹಾಗೂ ಸೆಕೆಂಡರಿ ವಿದ್ಯಾಭ್ಯಾಸಗಳು. ಮಾನ್ಯ ವಿದ್ಯಾಮಂತ್ರಿಗಳೂ ಕೂಡ ಆಗಾಗ್ಗೆ ಗ್ರಾಮಾಂತರ ಪ್ರದೇಶಗಳತ್ತ ಪ್ರವಾಸ ಹೋಗುತ್ತಿರುವುದರಿಂದ ಈ ವಿದ್ಯಾಭ್ಯಾಸದಲ್ಲಿರತಕ್ಕ ಕಷ್ಟಗಳೇನ ಎಂಬುದು ಚೆನ್ನಾಗಿ ಅವರಿಗೂ ಮನದಟ್ಟಾಗಿರಬೇಕು. ಅನೇಕ ಗ್ರಾಮಗಳಲ್ಲಿ ಬಾಲಕರಿಗೆ-

(ಶ್ರೀ ಎಲ್. ಶ್ರೀಕಂಠಯ್ಯ)

ಕುಳಿತುಕೊಳ್ಳುವುದಕ್ಕೆ ಸ್ಥಳವೇ ಇರುವುದಿಲ್ಲ. ಕಟ್ಟಡಗಳೇ ಇಲ್ಲ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಭೂಮಿಯನ್ನು ಕೇಳೋಣವೆಂದರೆ ಆ ಗ್ರಾಮದ ಸುತ್ತಮುತ್ತಲೂ ಇರತಕ್ಕ ಭೂಮಿಯೆಲ್ಲಾ ದರಖಾಸ್ತಿನಲ್ಲಿ ವಿಲೇರಿಯಾಗಿ ಹೋಗಿರುವುದರಿಂದ ಅಲ್ಲಿ ಜಮೀನಿಲ್ಲ. ಇನ್ನು ಅಲ್ಲಿ ಸಾಲುಮರಗಳ ಕೆಳಗಡೆಯಾದರೂ ನೆರಳಲ್ಲಿ ಮಕ್ಕಳಿಗೆ ಪಾಠಹೇಳಿಸೋಣ ಎಂದರೆ ಆ ಸಾಲು ಮರಗಳನ್ನೂ ಇತ್ತೀಚೆಗೆ ಕಡಿದು ಹಾಕಿರುವುದರಿಂದ ಅಲ್ಲಿ ನೆರಳಿಗೂ ಅವಕಾಶವಿಲ್ಲದಂತಾಗಿದೆ. ಅಂದಾಗ ಆ ಮಕ್ಕಳಿಗೆ ಹೇಗೆ ವಿದ್ಯಾಭ್ಯಾಸ ಮಾಡಿಸಬೇಕು ? ಹೀಗಾಗಿ ಅಂಥಗ್ರಾಮಗಳಲ್ಲಿ ಉಪಾಧ್ಯಾಯರಾಗಿ ಕೆಲಸಮಾಡತಕ್ಕ ಜನರೇನಿದ್ದಾರೆ ಅವರಿಗೆ ಅಲ್ಲಿ ವಾಸಮಾಡುವುದಕ್ಕೆ ಮನೆಗಳು ಸಿಕ್ಕದೆ ೧೨–೧೫ ಮೈಲಿಗಳಿಂದ ಬರಬೇಕಾಗಿದೆ. ಅಂದಾಗ ಅವರು ಅನೇಕ ದಿನಗಳು ಬಾರದೆ ಶಾಲೆಗಳು ತಿಂಗಳಲ್ಲಿ ೧೫ ದಿನಗಳಕಾಲ ಮುಚ್ಚಿದ್ದ ಒಂದು ಪ್ರಸಂಗ ನನ್ನ ಚುನಾವಣಾ ಕ್ಷೇತ್ರದಲ್ಲಿ ನನ್ನ ಗಮನಕ್ಕೆ ಬಂದಿತ್ತು. ಅಲ್ಲಿ ಶಾಲೆಯ ಗೈರು ಹಾಜರಿ. ಹಾಜರಿ ವಿಷಯ ತೆಗೆದುಕೊಂಡರೆ ದಿನಂಪ್ರತಿ-ಶಾಲೆಗೆ ಹಾಜರಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆ ಒಂದು ಎರಡು. ಅಂತೂ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸಕ್ಕೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾಗ್ಯೂ ಸಾಕಷ್ಟು ಪ್ರಗತಿಯನ್ನು ಸಾಧಿಸುವುದಕ್ಕಾಗಿಲ್ಲ. ಸರ್ಕಾರದವರು ವಿದ್ಯಾಭ್ಯಾಸಕ್ಕೆ ತೆಗೆದಿಡತಕ್ಕ ಹಣದಲ್ಲಿ ನಾಲ್ಕನೇ ಒಂದು ಪಾಲುಕೂಡ ಸಿಕ್ಕುತ್ತಿಲ್ಲ. ಅದರ ಜೊತೆಗೆ ವಿದ್ಯಾ ಇಲಾಖೆಯ ಉಸ್ತುವಾರಿ ಕೂಡ ಸರಿಯಾಗಿಲ್ಲ. ಆ ಇಲಾಖೆ ಇದ್ದರೂ ಇಲ್ಲದಂತಾಗಿದೆ. ಈಗಲಾದರೂ ಮಾನ್ಯ ಸಚಿವರು ರಾಜ್ಯದಲ್ಲಿರತಕ್ಕ ಯಾವ ಯಾವ ಗ್ರಾಮಗಳಲ್ಲಿ ಪ್ರಾಥಮಿಕಶಾಲೆಗಳ ಕಟ್ಟಡಗಳಿಲ್ಲ ಎಂಬುದಕ್ಕೆ ಒಂದು ಸರ್ವೆಯನ್ನಾದರೂ ಮಾಡಿಸಿ ಆ ಮಹಾತ್ಮ ಗಾಂಧೀಜಿಯವರು ಹೇಳುತ್ತಿದ್ದರಲ್ಲ ಅಂಥ ಒಂದೊಂದು ಗುಡಿಸಲನ್ನಾದರೂ ಮಾಡಿಸಿಕೊಡಿ ಎಂದು ಹೇಳುತ್ತಿದೇನೆ. ನಾನು ಕೇಳುತ್ತಿರುವುದು ಆಧುನಿಕ ಯುಗದ ಸಿಮೆಂಟಿನ ಮನೆಗಳನ್ನಲ್ಲ. ಆದರ ಜೊತೆಗೆ ನಾನು ಕೇಳುತ್ತಿರುವುದು ಕುಳಿತುಕೊಳ್ಳುವುದಕ್ಕೆ ಸಾಗುವಾನಿ ಮರದ ಬೆಂಚುಗಳನ್ನಲ್ಲ, ಈಚಲಚಾಪೆಗಳನ್ನು ಸರಬರಾಯಿ ಮಾಡಿ ಎಂದು ಕೇಳುತ್ತಿದ್ದೇನೆ. ಇಷ್ಟು ಅನುಕೂಲಗಳನ್ನು ಕೊಟ್ಟು ದಿನಂ ಪ್ರತಿ ಉಪಾಧ್ಯಾಯರು ೧೧ ಗಂಟೆಯಿಂದ ಸಾಯಂಕಾಲ ೫ ಗಂಟೆಯವರೆಗೂ ಪಾಠಪ್ರವಚವನ ನಡೆಸುವುದಕ್ಕೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಸಾಕೆಂದು ಹೇಳುತ್ತಿದ್ದೇನೆ. ಆದರೆ ಈ ದಿವಸ ಸರ್ಕಾರದವರು ಖರ್ಚುಮಾಡುತ್ತಿರುವ ಹಣ ಸರಿಯಾಗಿ ವಿದ್ಯಾಭ್ಯಾಸದ ಮೂಲ ತಳಹದಿಯ ಹಂತದಲ್ಲಿ ವೆಚ್ಚವಾಗದೆ ಇರುವುದರಿಂದ ನಮ್ಮ ಪ್ರಯತ್ನಗಳೆಲ್ಲಾ ಮರಳುಕಾಡಿನಲ್ಲಿ ಬೇಸಾಯ ಮಾಡಿದ ಹಾಗಾಗಿದೆ. ವಿದ್ಯಾಭ್ಯಾಸಕ್ಕೆ ಮೊದಲು ತಳಹದಿಯಾದ ಮೂಲ-ವಿದ್ಯಾಭ್ಯಾಸಕ್ಕೆ ನಾವು ಹೆಚ್ಚಿನ ಗಮನಕೊಡಬೇಕು. ಅದನ್ನು ಮಾಡಿದರೆ ಮುಂದೆ ಆ ಡಿಗ್ರಿ ವಿದ್ಯಾಭ್ಯಾಸ ತನ್ನ ಪಾಡಿಗೆ ತಾನೆ ಸಾಗುತ್ತದೆ ಹಾಗಲ್ಲದೆ ನಾವು ಮೂಲ ವಿದ್ಯಾಭ್ಯಾಸಕ್ಕೆ ಸರಿಯಾಗಿ ನಿಗಾ ಕೊಡದೆ ಇದ್ದರೆ ಮುಂದೆ ಡಿಗ್ರಿ ವಿದ್ಯಕ್ಕೆ ಎಷ್ಟು ಖರ್ಚುಮಾಡಿದರೂ ವ್ಯರ್ಥವೇ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂಬ ಗಾದೆಗೆ ಸರಿಯಾಗಿ ಮೊದಲು ಪ್ರಾಥಮಿಕ ಹಾಗೂ ಸೆಕೆಂಡರಿ ವಿದ್ಯಾಭ್ಯಾಸಂಗಕ್ಕೆ ಹೆಚ್ಚಿನ ಹಣವನ್ನು ಖರ್ಚುಮಾಡಿ ಅಲ್ಲಿ ಸುಭದ್ರವಾದ ತಳಹದಿಯನ್ನು ಹಾಕಿದರೆ ಅದರಿಂದ ದೇಶಕ್ಕೆ ಉತ್ತಮ ಫಲ ದೊರೆಯುತ್ತದೆ.

ಇನ್ನು ಈ ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲೆಗಳು ಏಕೆ ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದರೆ ಅವುಗಳ ಬಗ್ಗೆ ಮೇಲುಸ್ತುವಾರಿ ಸಾಲದಿರುವುದೇ ಮೂಲ ಕಾರಣ. ಒಂದು ತಾಲ್ಲೂಕಿಗೊಬ್ಬ ಇನ್‌ಸ್ಪೆಕ್ಟರ್ ಇರುತ್ತಾರೆ ಅವರಿಗೇನಿದ್ದರೂ ಯಾರನ್ನು ಎಲ್ಲಿಗೆ ವರ್ಗಾಯಿಸಬೇಕು ಎಂಬುದೇ ಒಂದು ದೊಡ್ಡ ಕೆಲಸವಾಗಿ ಆತನಿಗೆ ಈ ಶಾಲೆಗಳನ್ನು ಚೆಕ್‌ಮಾಡುವುದಕ್ಕೆ ಕಾಲಾವಕಾಶ ಇರುವುದಿಲ್ಲ. ಅದೇರೀತಿ ಜಿಲ್ಲಾ ಮಟ್ಟದಲ್ಲಿರತಕ್ಕ ಜಿಲ್ಲಾ ಇನ್‌ಸ್ಪೆಕ್ಟರ ವಿಚಾರ ಹೀಗಾಗಿ ನಮ್ಮಲ್ಲಿ ಇತ್ತೀಚೆಗೆ ಕೆಲವು ಶಾಲೆಗಳ ಸಂಖ್ಯೆ ಜಾಸ್ತಿಯಾಗಿದ್ದರೂ ವಿದ್ಯೆಯ ಮಟ್ಟ ಮಾತ್ರ ಹಿಂದೆ ಹಿಂದಕ್ಕೆ ಹೋಗುವುದಕ್ಕೆ ಪ್ರಾರಂಭವಾಗಿದೆ. ಇಂಥ ಅವಕಾಶವಿರುವುದರಿಂದ ಶಾಲೆಗಳು ತೀಕ್ಷಣವಾಗಿ ಕೆಲಸಮಾಡುತ್ತಿಲ್ಲ. ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ವರ್ಕ್ ಲೋಡ್ ಇದೆಯೆಂಬುದನ್ನು ನೋಡದೆ ಚಿಕ್ಕ ಜಿಲ್ಲೆಯಾಗಲಿ ದೊಡ್ಡ ಜಿಲ್ಲೆಯಾಗಲಿ ಎರಡಕ್ಕೂ ಒಂದೇ ಮಟ್ಟದ ಸಿಬ್ಬಂದಿ ಅಂದರೆ ಮೈಸೂರು ಜಿಲ್ಲೆ ದೊಡ್ಡದಿದ್ದರೂ ಅಲ್ಲಿಗೆ ಹಾಕತಕ್ಕ ಸೂಪರ್‌ವೈಜರಿ ಅಧಿಕಾರಿಗಳ ಸಂಖ್ಯೆ ಆ ಕೊಡಗು ಜಿಲ್ಲೆ ಅಧಿಕಾರಿಗಳಿಗೆ ಸಮನಾಗಿರುತ್ತದೆ ಅಂದರೆ ಎರಡು ಜಿಲ್ಲೆಗಳಲ್ಲೂ ವರ್ಕ್ ಲೋಡ್ ಒಂದೇ ಇದೆಯೆಂದಾಯಿತು. ಅದು ಸರಿಯಾದದ್ದಲ್ಲ. ಎಲ್ಲಿ ಕೆಲಸ ಜಾಸ್ತಿ ಇದೆ; ಎಲ್ಲಿ ಕೆಲಸ ಕಡಿಮೆ ಇದೆ ಎಂಬುದನ್ನು ನೋಡಿ ಅಧಿಕಾರಿಗಳನ್ನು ವಿವೇಚನೆಯಿಂದ ಹಾಕತಕದ್ದು ಅಗತ್ಯ ಎಂದು ಹೇಳುತ್ತೇನೆ. ನಮ್ಮಲ್ಲಿ ಎಫಿಷಿಯೆನ್ಸಿಯನ್ನು ಕಾಪಾಡಿಕೊಳ್ಳಬೇಕಾದರೆ ಇಲ್ಲಿ ಚೆಕ್ಕಿಂಗ್ ಕೆಲಸ ಬಹಳ ಚುರುಕಾಗಿ ನಡೆಯಬೇಕು. ಇಲ್ಲದಿದ್ದರೆ ಅನೇಕ ಶಾಲೆಗಳು ಮಲಗಿಬಿಡುತ್ತವೆ.

ಇನ್ನು ದೇಶದಲ್ಲಿ ಒತ್ತಾಯ ಶಿಕ್ಷಣ ಶಾಸನವನ್ನು ಜಾರಿಗೆ ತಂದಿದ್ದಾಯಿತ್ತು. ಆದರೆ ಆ ಶಾಲೆಯಲ್ಲಿ ಅಭ್ಯಾಸಮಾಡತಕ್ಕ ಬಾಲಕರಲ್ಲಿ ನೂರಕ್ಕೆ ೨೦ ಜನರು ಮಾತ್ರ ಮುಂದೆ ಹೋಗುತ್ತಿದ್ದಾರೆಂದೂ ಇನ್ನುಳಿ-

ದವರು ಕಾರಣಾಂತರಗಳಿಂದ ಅಭ್ಯಾಸವನ್ನು ಮಧ್ಯದಲ್ಲೇ ಕೈ ಬಿಡುತ್ತಿದ್ದಾರೆಂದು ತಿಳಿದು ಬಂದಿದೆ. ಇದು ಏತಕ್ಕೆ ಹೀಗಾಗುತ್ತಿದೆ ಎಂಬುದನ್ನು ಪ್ರತ್ಯೇಕವಾಗಿ ಈ ಸಭೆಯು ಚರ್ಚೆಮಾಡಿ ಅದನ್ನು ನಿರ್ಧರಿಸಬೇಕಾದ್ದು ಅತ್ಯಗತ್ಯ. ಅದಕ್ಕೆ ಒಂದು ಸಮರ್ಪಕವಾದ ಪರಿಹಾರ ಮಾರ್ಗವನ್ನು ಕಂಡುಹಿಡಿಯಲೇಬೇಕು. ಅದು ಬಹಳ ಜಟಿಲವಾದಂಥ ಪ್ರಶ್ನೆ. ಇದನ್ನು ನಾವು ಕೂಡಲೇ ತಡೆಗಟ್ಟದಿದ್ದರೆ ಮುಂದೆ ರಾಜ್ಯದಲ್ಲಿ ಅನಕ್ಷರತೆ ಒಂದು ದೊಡ್ಡ ಆಲದಮರವಾಗಿ ಬೆಳೆಯುವುದಕ್ಕೆ ಅವಕಾಶವಾಗುವುದು.

ಇನ್ನು ರಾಜ್ಯದಲ್ಲಿ ವರ್ಷಂಪ್ರತಿ ೧೨ಲಕ್ಷ ರೂಪಾಯಿಗಳನ್ನು ಆ ವಯಸ್ಕರ ಶಿಕ್ಷಣಕ್ಕೆಂದು ಖರ್ಚುಮಾಡಲಾಗುತ್ತಿದೆ. ಆದರೆ ಅದರಿಂದ ಎಷ್ಟು ಜನರು ಸಾಕ್ಷರತೆ ಪಡೆದರು ಎಂಬುದು ಮಾತ್ರ ನಮಗೆ ಕಾಣುತ್ತಿಲ್ಲ. ಯಾವ್ಯಾವ ಗ್ರಾಮದಲ್ಲಿ ಎಷ್ಟೆಷ್ಟು ಜನರು ವಯಸ್ಕರು ವಿದ್ಯಾವಂತರಾದರೆಂಬುದು ಎಲ್ಲಿಯೂ ಪ್ರಚಾರವಾಗಿಲ್ಲ. ಆದ್ದರಿಂದ ನನಗೆ ಇದರ ಬಗ್ಗೆ ಬಹಳ ಸಂಶಯವುಂಟಾಗಿದೆ. ಜನರಿಗೆ ಹಾಗೆಲ್ಲಿಯೂ ವಿದ್ಯಾಭ್ಯಾಸ ಪ್ರಸಾರವನ್ನು ಮಾಡಿದ ನಿದರ್ಶನವನ್ನು ನಾನು ಕಂಡಿಲ್ಲ. ನಾನು ಕೇಳಿರತಕದ್ದು ಮತ್ತು ನೋಡಿರತಕ್ಕುದ್ದು ಎಂದರೆ ಈ ಸಂಸ್ಥೆಯ ವಾರ್ಷಿಕ ಮೀಟಿಂಗು, ವ್ಯಾಲಿಡಿಕ್ಟರಿ ಸ್ಪೀಚುಗಳನ್ನು ಕೇಳಿದ್ದೇನೆ. ಆದರೆ ಹಾಗೆ ಗ್ರಾಮಾಂತರಗಳಲ್ಲಿ ವಿದ್ಯಾದಾನ ಮಾಡಿದ್ದನ್ನು ನೋಡಿರುವುದಿಲ್ಲ. ಆ ರಷ್ಯಾ ದೇಶದಲ್ಲಿ ಒಂದ ಕ್ರಾಂತಿಯಾದ ೧೦ ವರ್ಷದಲ್ಲಿ ಅದ್ಭುತವಾದ ಪ್ರಗತಿಯನ್ನು ವಿದ್ಯಾರಂಗದಲ್ಲೂ ಪಡೆದರು. ಆದರೆ ನಾವಿಲ್ಲಿ ಸ್ವಾತಂತ್ರ ಒಂದು ೨೨ ವರ್ಷಗಳು ಕಳೆದಿದ್ದರೂ ಇಲ್ಲಿರತಕ್ಕ ಶೇಕಡ ೧೭ ಲಿಟ್ರೆಸಿ ಅಷ್ಟಿಷ್ಟು ಮುಂದೆ ಸಾಗಿದ್ದರೂ ಅದರಲ್ಲಿ ಸತ್ವವಿಲ್ಲ. ಇದಕ್ಕೇನು ಮಾಡಬೇಕೆಂಬುದೇ ನನಗೆ ಹೊಳೆಯುತ್ತಿಲ್ಲ. ಸರ್ಕಾರದವರಲ್ಲಿ ಒಂದು ಸರಿಯಾದ ಪ್ಲಾನ್ ಇಲ್ಲ. ಇಂತಿಂಥ ವರ್ಷದಲ್ಲಿ ಇಷ್ಟಿಷ್ಟು ವಿದ್ಯಾರ್ಥಿಗಳು ಇಂತಿಂಥ ದರ್ಜೆಯಲ್ಲಿ ಶಾಲಾಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮುಂದಿನ ವ್ಯಾಸಂಗಕ್ಕೆ ಬರುತ್ತಾರೆ, ಅವರಿಗೆ ಇಂತಿಂಥ ಕಾಲೇಜುಗಳು ಇಂತಿಷ್ಟು ಸೀಟುಗಳು ಬೇಕಾಗಬಹುದು ಎಂಬ ಒಂದು ಪ್ಲಾನ್ ಇಲ್ಲದಿದ್ದರೆ ಇವರು ಹೇಗೆ ಕೆಲಸ ಮಾಡುತ್ತಾರೆ ? ಇನ್ನು ಖಾಸಗೀ ವಿದ್ಯಾಶಾಲೆಗಳಿಗಾದರೂ ಸರ್ಕಾರದವರು ಸರಿಯಾದ ಒಂದು ಉತ್ತೇಜನವನ್ನು ಕೊಡುತ್ತಿದ್ದಾರೆಯೇ ಅದೂ ಕೂಡ ಇಲ್ಲ. ಏನೋ ಅಷ್ಟಿಷ್ಟು ಭಿಕ್ಷೆ ನೀಡುವಂತೆ ನೀಡುತ್ತಿದ್ದಾರೆ ಇದಕ್ಕೆ ಸರಿಯಾದ ಉಪಕರಣಗಳೂ ಇರುವುದಿಲ್ಲ.

3-00 P. M.

ನಾನಾ ಹೈಸ್ಕೂಲ್‌ಗಳಲ್ಲಿ ನೂರಾರು ವಿದ್ಯಾರ್ಥಿಗಳನ್ನು ಕಳುಹಿಸಿದರೂ ಒಬ್ಬರೂ ಪಾಸಾಗಲಿಲ್ಲ. ಅದು ಹುಡುಗರ ತಪ್ಪಲ್ಲ. ಮಾಸ್ಟರ್‌ಗಳು ಸರಿಯಾಗಿರಲಿಲ್ಲ. ಉಪಕರಣಗಳು ಇರಲಿಲ್ಲ. ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿರುತ್ತಾರೆ. ವಿದ್ಯಾರ್ಥಿಗಳು ಉಪಕರಣಗಳನ್ನು ನೋಡದೇ ಇದ್ದರೆ ವಿಷಯಗಳು ಗೊತ್ತಾಗುವುದಿಲ್ಲ. ಅವರು ಎಸ್.ಎಸ್.ಎಲ್.ಸಿ. ಯಲ್ಲಿ ಪಾಸಾಗುವುದು ಕಷ್ಟವಾಗುತ್ತದೆ. ಈ ಗೊಂದಲದಲ್ಲಿ ಏನಾಗುತ್ತದೆ ಎಂದರೆ ಖಾಸಗಿಯ ಶಾಲೆಗಳಿಗೆ ಪ್ರೋತ್ಸಾಹ ಸಿಕ್ಕುತ್ತದೆ. ಒಂದು ಕಡೆ ಹೇಳುತ್ತೀರಿ ಖಾಸಗಿ ಟ್ಯೂಷನ್‌ಅನ್ನು ಬೇರು ಸಹಿತ ಕಿತ್ತುಹಾಕಬೇಕು ಎಂದು. ಇನ್ನೊಂದು ಕಡೆ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುವುದಕ್ಕೆ ಹೆದರುತ್ತಾರೆ. ಸರ್ಕಾರಿ ಶಾಲೆಯಲ್ಲಿ ಎರಡು ರೂಪಾಯಿ ಫೀಸು ಇದ್ದರೂ ೧೦ ರೂಪಾಯಿ ಖರ್ಚು ಆದರೂ ಪರವಾಗಿಲ್ಲ ಎಂದು ಖಾಸಗಿ ಶಾಲೆಗೆ ಕಳುಹಿಸುತ್ತಾರೆ. ಕೆಲವರು ದೊಡ್ಡಸ್ತಿಕೆಗೂ ಅವರ ಹುಡುಗರನ್ನು ಅಲ್ಲಿಗೆ ಕಳುಹಿಸುತ್ತಿದ್ದಾರೆ. ಇದರಲ್ಲಿ ಒಂದು ಸಂಶಯ ಬರುತ್ತಾ ಇದೆ. ಅದೇನೆಂದರೆ ಸರ್ಕಾರದವರು ಈ ಶಾಲೆಗಳನ್ನು ಯೋಜನಾಬದ್ಧ ರೀತಿಯಲ್ಲಿ ನಡೆಸದೇ ಇರುವುದರಿಂದ, ಅಲ್ಲಿ ಒಂದು ಎಫಿಷಿಯೆನ್ಸಿ ಇಲ್ಲ. ಕ್ವಾಲಿಟಿ ಆಫ್ ಎಜುಕೇಷನ್ ಇಲ್ಲ. ನಮ್ಮ ಸರ್ಕಾರಿ ಶಾಲೆಗಳಲ್ಲಿ ಕ್ವಾಲಿಟಿ ಮತ್ತು ಎಫಿಷಿಯನ್ಸಿ ಸಂಪೂರ್ಣವಾಗಿ ಕೆಳಮಟ್ಟಕ್ಕೆ ಇಳಿದಿದೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ಸರ್ಕಾರದವರು ಶಾಲೆಗಳನ್ನು ಪ್ರಾರಂಭ ಮಾಡುತ್ತಾರೆ. ಆದರೆ ಕೇವಲ ಗುಡ್ ಇಂಟೆನ್‌ಷನ್ನಿಂದ ಜನರಿಗೆ ಪ್ರಯೋಜನವಾಗುವುದಿಲ್ಲ. ಪ್ರಾಕ್ಟಿಕಲ್ ಆಗಿ ಆ ಗುಡ್‌ಇನ್‌ಟೆನ್‌ಷನನ್ನು ಅನುಷ್ಠಾನಕ್ಕೆ ತರಬೇಕು. ಅಲ್ಲಿಯ ವಿದ್ಯಾರ್ಥಿಗಳ ಬಗ್ಗೆ ಸರ್ಕಾರ ವಿಜಿಲೆಂಟ್ ಆಗಿ ಇರಬೇಕು. ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕ್ವಾಲಿಟಿ ಆಫ್ ಎಜುಕೇಷನ್ ತರುತ್ತೇವೆಂದು ಪಣ ತೊಟ್ಟು ನಡೆದರೆ ಸರ್ಕಾರಿ ಶಾಲೆಗಳು ಯಾವ ಶಾಲೆಗಳಿಗೂ ಹಿಂದೆ ಬೀಳುವುದಿಲ್ಲ.

ಇನ್ನು ಒಂದೆರಡು ವಿಷಯಗಳನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೭೧ ರಿಂದ ಪಿ. ಯು.ಸಿ. ಯನ್ನು ಎರಡು ವರ್ಷದ ಕೋರ್ಸನ್ನಾಗಿ ಪರಿವರ್ತಿಸಬೇಕೆಂದು ಪ್ರಯತ್ನ ಮಾಡಿದ್ದೀರಿ ಇದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಇದನ್ನು ಕಾಲೇಜಿಗೆ ಕೊಡಬೇಕೆ ಅಥವಾ ಇರತಕ್ಕಂಥ ಹೈಯರ್ ಸೆಕೆಂಡರಿ ಶಾಲೆಗಳಿಗೆ ೧೨ನೇ ಸ್ಟಾಂಡರ್ಡ್ ಆಗಿ ಸೇರಿಸಬೇಕೇ ಅಥವಾ ಎರಡನೇ ಜೂನಿಯರ್ ಗೌರ್ನಮೆಂಟ್ ಕಾಲೇಜು ಆಗಿ ಪ್ರಾರಂಭ ಮಾಡಬೇಕೇ ಎನ್ನುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಇದರ ಬಗ್ಗೆ ನಿರ್ಣಯವನ್ನು ಕೈಗೊಳ್ಳಬೇಕು ಎಂದು ನಾನು ಹೇಳುತ್ತೇನೆ. ಅಷ್ಟೇ ಅಲ್ಲ ಈವೊತ್ತಿನ ದಿವಸ ಇಷ್ಟು ದುಡ್ಡು ಖರ್ಚು ಮಾಡಿ ಹರಿಜನರಿಗೂ ಬೇರೆ ಬೇರೆ ಡಿನಾಮಿನೇಷನ್ ಹಾಸ್ಟಲುಗಳನ್ನು ಕೊಟ್ಟಿದ್ದೀರಿ

(ಶ್ರೀ ಎಲ್. ಶ್ರೀಕಂಠಯ್ಯ)

ಇದು. ತಪ್ಪು ಎಲ್ಲಾ ಕೋಮಿನವರಿಗೂ ದೇಒಂೀ ಹಾಸ್ಟಲು ಇರಬೇಕು. ಬೇಕಾದರೆ ಹರಿಜನರಿಗೆ. ಗಿರಿಜನರಿಗೆ ವಿದ್ಯಾರ್ಥಿವೇತನಗಳನ್ನು ಸಪರೇಟ್ ಆಗಿ ಕೊಡಿ. ಆದರೆ ಡಿನಾಮಿನೇಷನ್ ಹಾಸ್ಟಲ್ಲುಗಳು ಬೇಡ. ಈಗ ಇರುವುದನ್ನು ಮುಚ್ಚಿಬಿಡಿ.

ಇನ್ನು ಗೌರ್ನಮೆಂಟ್ ಉರ್ದು ಸ್ಕೂಲುಗಳಿಗೆ ಶುಕ್ರವಾರ ರಜಾ ಇದೆ ನಮ್ಮ ಬಾಕಿ ಸ್ಕೂಲುಗಳಿಗೆ ಭಾನುವಾರ ರಜಾ ಇದೆ. ಏತಕ್ಕೆ ಈ ಪ್ರತ್ಯೇಕತೆ, ಆದುದರಿಂದ ಈ ರೀತಿ ಪ್ರತ್ಯೇಕತೆ ಯನ್ನುತೆಗೆದು ಹಾಕಿ ಎಮೋಷನಲ್ ಇಂಟಿಗ್ರೇಷನ್ ಮಾಡಬೇಕು ಎಂದು ಹೇಳುತ್ತೇನೆ ಉರ್ದು ಪ್ರಾಮುಖ್ಯವಾದ ಭಾಷೆ ಎನ್ನುವುದಾದರೆ ಅದನ್ನು ಐಚ್ಛಿಕ ವಿಷಯವನ್ನಾಗಿ ಮಾಡಿ. ಅದು ನಮ್ಮ ಸರ್ಕಾರಿ ಶಾಲೆಗೆ ಒಳಪಟ್ಟಮೇಲೆ ಒಂದೇ ಇಂಟಿಗ್ರೇಟೆಡ್ ಕೋರ್ಸ್ ಮಾಡಿ. ಡಿನಾಮಿನೇಷನಲ್ ಮೈನಾರಿಟಿ ಸ್ಕೂಲ್ಸ್ ಬೇಡ. ಒಬ್ಬರಿಗೆ ಭಾನುವಾರ ರಜ ಇನ್ನೊಬ್ಬರಿಗೆ ಶುಕ್ರವಾರ ರಜ ಈ ವ್ಯತ್ಯಾಸ ಏತಕ್ಕೆ ಉರ್ದು ಶಾಲೆಗಳಿಗೆ ಪ್ರಾಧಾನ್ಯತೆ ಕೊಡಬೇಕಾದರೆ ಸರಿಯಾದ ಕರಿಕ್ಯುಲಮ್ ಹಾಕಿ ಈ ಡಿನಾಮಿನೇಷನ್ ಉರ್ದು ಸ್ಕೂಲ್ ಗಳನ್ನೆಲ್ಲಾ ಜನರಲ್ ಸ್ಕೂಲ್ ಆಗಿ ಪರಿವರ್ತಿಸಬೇಕು ಎಂದು ನಾನು ಸರ್ಕಾರದವರಿಗೆ ಕೇಳಿಕೊಳ್ಳುತ್ತೇನೆ.

ಇನ್ನು ರಾಷ್ಟ್ರೀಕೃತ ಪಠ್ಯ ಪುಸ್ತಕದ ವಿಷಯವಾಗಿ ಹೇಳುವುದಾದರೆ ಸಬ್ಸಿಡೈಸ್ಡ್ ಟೆಕ್ಸ್ಟ್ ಬುಕ್ಸ್ ಕೆಲ್ಸ ಕೈಗೊಂಡಿದ್ದಾರೆ. ಅದು ಬಹಳ ಯೋಗ್ಯವಾದ ಕೆಲಸ. ಸಾಧ್ಯವಾದ ಮಟ್ಟಿಗೂ ಒಂದು ಎಮರ್ಜನ್ಸಿ ಬೇಸಿಸ್ ಮೇಲೆ ಪ್ರೈಮರಿ ಸ್ಕೂಲ್ ಮಕ್ಕಳಿಗೆ ಫ್ರೀ ಆಗಿ ಪುಸ್ತಕಗಳನ್ನು ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಪರಿಶೀಲಿಸಿ. ರಷ್ಯಾ ಮತ್ತು ಚೈನಾ ದೇಶಗಳಲ್ಲಿ ಒಂದು ದೊಡ್ಡ ಪುಸ್ತಕಕ್ಕೆ ಒಂದು ರೂಪಾಯಿ ಬೀಳುತ್ತದೆ, ಹಾಗೆ ಸಾರ್ವಜನಿಕರಿಗೂ ಕೂಡ ಸರ್ಕಾರದವರು ಸಬ್ಸಿಡಿ ಕೊಡುವುದನ್ನು ಪರಿಶೀಲಿಸಬೇಕು ಸರ್ಕಾರದವರೇ ಸಬ್ಸಿಡೈಸ್ ಮಾಡಿ ಟೆಕ್ಸ್ಟ್ ಬುಕ್‌ಗಳನ್ನು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಒದಗಿಸುವ ಯಾವರೀತಿಯ ಯೋಜನೆಯನ್ನೂ ಇದುವರೆಗೆ ಹಾಕಿಕೊಂಡಿಲ್ಲ ಇದು ಬಹಳ ಅವಶ್ಯಕವಾದ ಕೆಲಸ ಈಗ ಖಾಸಗಿ ಪ್ರಕಟಣಾಲಯದವರು ಪುಸ್ತಕಗಳಿಗೆ ವಿಪರೀತ ಚಾರ್ಜ ಮಾಡುತ್ತಿದ್ದಾರೆ ಈಗ ಮಾರ್ಕೆಟ್ಟಿನಲ್ಲಿ ಸಿಕ್ಕುತ್ತಾ ಇರುವ ಕನ್ನಡ ಪುಸ್ತಕಗಳು ಬೆಲೆ ಜಾಸ್ತಿ ಇರುವುದರಿಂದ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನ್ಯಾಷನಲ್ ಟೆಕ್ಸ್ಟ್ ಬುಕ್ಸ್ ಜೊತೆಯಲ್ಲೇ ಸಬ್ಸಿಡೈಸ್ಡ್ ಜನರಲ್ ಟೆಕ್ಸ್ಟ್ ಬುಕ್ಸ್‌ನ್ನು ಪ್ರಕಟಣೆ ಮಾಡುವುದನ್ನೂ ಯೋಜನೆ. ಹಾಕಿಕೊಂಡು ಸಾಧ್ಯವಾದಮಟ್ಟಿಗೂ ಸಾರ್ವಜನಿಕರಿಗೂ ದೊರಕುವಂತೆ ಮಾಡಲು ಸರ್ಕಾರದ ನೇತೃತ್ವದಲ್ಲಿ ಒಂದು ಕಮಿಟಿ ಸ್ಥಾಪಿಸಿ ಪುಸ್ತಕಗಳನ್ನು ಪ್ರಕಟಣೆ ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಒಂದೇ ಒಂದು ವಿಷಯ ಹೇಳುತ್ತೇನೆ. ಇನ್ನು ನಮ್ಮ ಮೈಸೂರಿನಲ್ಲಿ ಆರ್ಕಿಯಾಲಜಿ ವಿಭಾಗ ಯಾವ ಸ್ಥಿತಿಯಲ್ಲಿದೆ ಎನ್ನುವುದನ್ನು ನೋಡಬೇಕು. ಕೇಂದ್ರ ಸರ್ಕಾರ ಇದನ್ನು ವಹಿಸಿಕೊಂಡ ಮೇಲೆ ನಮ್ಮ ಮೈಸೂರು ಯೂನಿವರ್ಸಿಟಿಯವರಾಗಲಿ, ಸರ್ಕಾರವಾಗಲಿ ಮೈಸೂರು ಸಂಸ್ಥಾನದಲ್ಲಿರತಕ್ಕ ಆರ್ಕಿಯಾಲಜಿ ವೆಲ್ತನ್ನು ಪರಿಶೋಧನೆ ಮಾಡಿಲ್ಲ ಅದನ್ನು ಮಾಡದೇ ಪ್ರಾಚೀನ ವಸ್ತುಗಳನ್ನು ಸಂಗ್ರಹಣೆ ಮಾಡಿಕೊಳ್ಳದೇ ಹೋದರೆ ಅನೇಕ ಅವಶೇಷಗಳು ಮರೆಯಾಗುಗುತ್ತವೆ. ಆರ್ಕಿಯಾಲಜಿ ಇಲಾಖೆಯನ್ನು ಕೇಂದ್ರದವರು ವಹಿಸಿಕೊಂಡ ಮೇಲೆ ಸ್ಥಳೀಯ ವಿದ್ಯಮಾನಗಳಿಗೆ ಹೊಂದಿಕೊಳ್ಳುವಂಥ ಆರ್ಕಿಯಾಲಜಿ ವಸ್ತುಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ ಶ್ರೀ ಎಂ. ಎ. ಕೃಷ್ಣರವರು ಸತ್ತುಹೋದಮೇಲೆ ನಮ್ಮ ರಾಜ್ಯದಲ್ಲಿ ರ್ಕಿಯಾಲಜಿ ಇಲಾಖೆಯು ಸತ್ತು ಹೋಯಿತು. ಎಂದು ಜನ ಆಡಿಕೊಳ್ಳುತ್ತಿದ್ದಾರೆ ಈಚೆಗೆ. ವಿಶ್ವವಿದ್ಯಾನಿಲಯದವರಾಗಲಿ, ರಾಜ್ಯಸರ್ಕಾರದವರಾಗಲಿ ಯಾವ ವಿಧವಾದ ಆಸಕ್ತಿಯನ್ನೂ ಆರ್ಕಿಯಾಲಜಿಯಲ್ಲಿ ವಹಿಸುತ್ತಾ ಇಲ್ಲ ಅಮೂಲ್ಯವಾದ ಅವಶೇಷಗಳು ಕಣ್ಮರೆಯಾಗಿ ಹೋಗುತ್ತಿವೆ ಇದಕ್ಕೆ ಆದ್ಯತೆ ಕೊಟ್ಟು ಸರ್ಕಾರದವರು ಶೇಖರಿಸುತ್ತಾರೆಂದು ನಾನು ನಂಬಿದ್ದೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ):— ಮಾನ್ಯ ಸಭಾಪತಿಗಳೇ, ಈ ದಿವಸ ವಿದ್ಯಾಸಚಿವರು ಮಂಡಿಸಿರತಕ್ಕ ಈ ವಿಶೇಷ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಮಾತುಗಳನ್ನು ಆಡುವುದಕ್ಕೆ ಇಚ್ಛಿಪಡುತ್ತೇನೆ ಮಾನ್ಯ ಸದಸ್ಯರಾದ ಶ್ರೀಮಾನ್ ಎಲ್. ಶ್ರೀಕಂಠಯ್ಯನವರು ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವರಿಗೆ ಇನ್ನೂ ಕಾಲಾವಕಾಶ ಕೊಟ್ಟಿದ್ದರೆ. ಅವರ ಅನುಭವದಿಂದ ತಿಳಿದುಬಂದಂಥ ಇನ್ನೂ ಅನೇಕ ಉತ್ತಮವಾದ ಸಲಹೆಗಳನ್ನು ಅವರು ಕೊಡುತ್ತಿದ್ದರು. ಆದರೆ ಅನಿವಾರ್ಯವಾಗಿ, ಗತ್ಯಂತರವಿಲ್ಲದೆ ಅವರ ಭಾಷಣವನ್ನು ಮೊಟಕು ಮಾಡಬೇಕಾಯಿತು. ಪ್ರೈಮರಿ

ವಿದ್ಯಾಭ್ಯಾಸಕ್ಕೆ ೫೩ ಕೋಟಿ ರೂಪಾಯಿನಲ್ಲಿ ೨೫–೨೭ ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕೆಂದು ಅವರು ಹೇಳಿದ್ದಾರೆ ನಾನು ಅವರ ಧಾಟಿಯನ್ನೇ ಹಿಡಿದು ಅದಕ್ಕಿಂತ ಇನ್ನೂ ೧೦ ಕೋಟಿ ರೂಪಾಯಿ ಹೆಚ್ಚಾಗಿ ಖರ್ಚು ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ಕಂಪಲ್ಸರಿ ಪ್ರೈಮರಿ ವಿದ್ಯಾಭ್ಯಾಸವನ್ನು ಜಾರಿಗೆ ತಂದಿದ್ದರಿಂದ ಲಕ್ಷೋಪಲಕ ಮಕ್ಕಳು ಪ್ರೈಮರಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಆದರಲ್ಲಿ ಒಂದು ಕೊರತೆ ಏನೆಂದರೆ ಕಂಪಲ್ಸರಿ ವಿದ್ಯಾಭ್ಯಾಸ ಜಾರಿಗೆ ತಂದಮೇಲೆ ಹೀನ ಆರ್ಥಿಕ ಪರಿಸ್ಥಿತಿಯಿಂದ ಸ್ಕೂಲುಗಳಿಗೆ ಹೋದಾಗ ಅನೇಕ ಜನ ಮಕ್ಕಳು ಉಟ್ಟುಕೊಳ್ಳುವುದಕ್ಕೆ ಬಟ್ಟೆ, ಹೊಟ್ಟೆಗೆ ಅನ್ನ ಇಲ್ಲದೆ ತಪ್ಪಿಸಿಕೊಳ್ಳುತ್ತಿದ್ದಾರೆ ನಾನು ಮೊನ್ನೆ ನಮ್ಮ ಕ್ಷೇತ್ರದಲ್ಲಿ ಒಂದು ಸ್ಕೂಲನ್ನು ಪ್ರಾರಂಭ ಮಾಡಬೇಕಾಯಿತು. ಅಲ್ಲಿಗೆ ಹೋದಾಗ ಅಲ್ಲಿ ಷೆಡ್ಯೂಲ್ ಕ್ಯಾಸ್ಟ್ ವಡ್ಡರ ಕಮ್ಯೂನಿಟಿಯವರೇ ಜಾಸ್ತಿ ಇದ್ದಾರೆ ತಾಲ್ಲೂಕು ಬೋರ್ಡ್‌ನವರು ಆ ಸ್ಕೂಲ್ ಬಿಲ್ಡಿಂಗನ್ನು ಕಟ್ಟಿಸಿದ್ದಾರೆ. ಆ ಸ್ಕೂಲಿಗೆ ದಿನ ಹಾಜರಾಗುವ ಮಕ್ಕಳ ಸಂಖ್ಯೆ ೩. ಅಲ್ಲಿಯ ಶಾಲೆಯ ಹುಡುಗರ ಸಂಖ್ಯೆ ೩೦. ಅಲ್ಲಿ ನಾನು ವಿಚಾರಿಸಿದ್ದಲ್ಲಿ ಆ ಹುಡುಗರಿಗೆ ಹೊಟ್ಟೆಗೆ ಅನ್ನ ಇಲ್ಲದೆ ಮೈಗೆ ಬಟ್ಟೆ ಇಲ್ಲದೆ ಹುಡುಗರುಬರುತ್ತಾ ಇಲ್ಲ ಎಂದು ಹೇಳಿದರು ಅಲ್ಲಿ ಇನ್‌ಸ್ಪೆಕ್ಟರೂ ಕೂಡ ೮–೧೦ ಜನಕ್ಕೆ ಬಟ್ಟೆ ಕೊಟ್ಟರು ಸರ್ಕಾರದರೇನೋ ಕಂಪಲ್ಸರಿ ಎಜುಕೇಷನ್ ಎಂದು ಜಾರಿಗೆ ತಂದರು ಆದರೆ ಅವರ ಆರ್ಥಿಕ ಸಮಸ್ಯೆಯನ್ನು ಕೂಡ ಸ್ವಲ್ಪ ಆಲೋಚಿಸಿ ತಕ್ಕ ಪರಿಹಾರವನ್ನು ಕಂಡುಹಿಡಿಯಬೇಕು. ಕೇರ್ ಸಂಸ್ಥೆಯವರೇನೋ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದಾರೆ ಅದರಲ್ಲೂ ಬಹಳ ಕಷ್ಟದಿಂದ ಇರುವಂಥ ಮಕ್ಕಳಿಗೆ ಈ ವಿದ್ಯಾಭ್ಯಾಸ ಸಫಲವಾಗಬೇಕಾದರೆ ಈ ಒಂದು ಆರ್ಥಿಕ ನೆರವನ್ನು ಕೊಡುವುದು ಸೂಕ್ತ, ಯೋಗ್ಯ ಎಂದು ನಾನು ಸೂಚಿಸಲು ಬಯಸುತ್ತೇನೆ.

ಪ್ರೈಮರಿ ವಿದ್ಯಾಭ್ಯಾಸದಲ್ಲಿ ಈಗ ಇನ್‌ಸ್ಪೆಕ್ಟರು ತೃಪ್ತಿಕರವಾಗಿ ಕೆಲಸ ಮಾಡುತ್ತಾ ಇಲ್ಲ ಪ್ರೊಫೆಸರ್ ಶ್ರೀಕಂಠಯ್ಯನವರು ಹೇಳಿದ ಹಾಗೆ ಅನೇಕ ಸ್ಕೂಲುಗಳಿಗೆ ಒಬ್ಬೊಬ್ಬ ಇನ್‌ಸ್ಪೆಕ್ಟರು ಇರುತ್ತಾರೆ ಅವರು ಎಲ್ಲವನ್ನೂ ಸುಧಾರಿಸುವುದು ಕಷ್ಟ ೩೦ ಸ್ಕೂಲುಗಳಿಗೆ ಒಬ್ಬ ಇನ್‌ಸ್ಪೆಕ್ಟರ್ ಇರಬೇಕು ಎನ್ನುವ ಒಂದು ಯೋಜನೆ ಮಾಡಿದೆ ಎಂದು ಸರ್ಕಾರದ ವರದಿಯಲ್ಲಿ ಹೇಳಿದೆ ಅದು ಉಪಯುಕ್ತವಾದುದು ವಿಜಿಲೆಂಟ್ ಆಗಿ ಇದ್ದು ಇನ್‌ಸ್ಪೆಕ್ಟರುಗಳು ಇನ್‌ಸ್ಪೆಕ್ಷನ್ ಮಾಡಿ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳು ಪಾಠ ಹೇಳುವಂತೆ ಮಾಡಬೇಕು. ಉಪಾಧ್ಯಾಯರುಗಳಲ್ಲಿ ಕೊರತೆ ಏನೆಂದರೆ ಟ್ರೈನಿಂಗ್ ಆದ ಉಪಾಧ್ಯಾಯರು ಇಲ್ಲ ಅಂಥವರು ಇದ್ದರೆ ಕಂಪಲ್ಸರಿ ಎಜುಕೇಷನ್ನಿಗೆ ಉತ್ತಮ ಟ್ರೈನಿಂಗ್ ಆದ ಉಪಾಧ್ಯಾಯರು ಸಾಕಷ್ಟು ಸಂಖ್ಯೆಯಲ್ಲಿಲ್ಲ.

ಅದಕ್ಕಾಗಿ ಒಂದು ಒಳ್ಳೆಯ ಆದರ್ಶವಾದ ಯೋಜನೆಮಾಡಿ ಅದನ್ನು ಎಕ್ಸ್‌ಪೆರಿಮೆಂಟಲ್ ಆಗಿ ಮಾಡಬೇಕೆಂಬ ಅಭಿಪ್ರಾಯವನ್ನಿಟ್ಟು ಕೊಂಡಿದ್ದಾರೆ. ಎಂದು ಇಲ್ಲಿ ನಮಗೆ ಒದಗಿಸಿರುವ ವರದಿಯಿಂದ ಗೊತ್ತಾಗುತ್ತದೆ. ಅದೇನೆಂದರೆ ಗ್ರಾಜ್ಯುಯೇಟು ಟೀಚರುಗಳನ್ನು ಪ್ರೈಮರಿ ಸ್ಕೂಲುಗಳಲ್ಲಿ ಹೆಡ್ ಮಾಸ್ಟರಾಗಿ ನೇಮಕ ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ. ಅದು ಬಹಳ ಉತ್ತಮವಾದ ಮತ್ತು ಉಪಯುಕ್ತವಾದ ನಿರ್ಧಾರ ಎಂದು ಕರೆಯಬಹುದು. ಹಾಗಾದರೇನೇ ಎಲ್ಲ ಪ್ರೈಮರಿ ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಚೆನ್ನಾಗಿ ಸಿಗಲು ಒಂದು ಅವಕಾಶ ಸಿಗುತ್ತದೆ ಮತ್ತು ಗ್ರಾಜ್ಯುಯೇಟು ಟೀಚರುಗಳು ಇಂತಹ ಸ್ಕೂಲುಗಳಲ್ಲಿ ಇದ್ದರೆ ವಿದ್ಯಾಭ್ಯಾಸ ಉತ್ತಮವಾಗಿರುತ್ತದೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಲು ನಾನು ಇಚ್ಛಿಸುತ್ತೇನೆ. ಪ್ರೈಮರಿ ವಿದ್ಯಾಭ್ಯಾಸದಲ್ಲಿ ಇದೊಂದು ಬಹಳ ಪ್ರಾಮುಖ್ಯವಾದ ವಿಚಾರ ಮತ್ತು ವಿದ್ಯಾರ್ಥಿಗಳು ಒಂದು ಒಳ್ಳೆಯ ಸ್ಥಿರವಾದ ಆಧಾರದ ಮೇಲೆ ವಿದ್ಯಾಭ್ಯಾಸ ಪಡೆಯಲು ಇದರಿಂದ ಅನುಕೂಲವಾಗುತ್ತದೆ.

ಮತ್ತೊಂದು ಪ್ರಾಮುಖ್ಯವಾದ ವಿಚಾರ ಇದರಲ್ಲಿರುವುದು ಎಂದರೆ ಈ ಶಾಲೆಗಳಲ್ಲಿರುವ ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸತಕ್ಕದ್ದು. ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀಕಂಠಯ್ಯನವರು ಇದರ ಬಗ್ಗೆ ಹೇಳುತ್ತಾ ಈಗ ಎಲ್ಲಾ ಕಡೆಗಳಲ್ಲೂ ತಾಲ್ಲೂಕ್ ಬೋರ್ಡುಗಳು ಬಂದಿರುವುದರಿಂದ ಈ ಬೋರ್ಡುಗಳ ಜವಾಬುದಾರಿ ಪ್ರೈಮರಿ ಶಾಲೆಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವ ಹೊಣೆಯೂ ಇರುವುದರಿಂದ ಎಲ್ಲೆಲ್ಲೂ ಬೇಕಾದಷ್ಟು ಕಟ್ಟಡಗಳು ಆಗುತ್ತಿವೆ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಹಾಗೂ ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀಕಂಠಯ್ಯನವರ ಕ್ಷೇತ್ರದಲ್ಲಿ ತಾಲ್ಲೂಕ್ ಬೋರ್ಡುಗಳು ಶಾಲೆಗಳ ಕಟ್ಟಡವನ್ನು ಕಟ್ಟಬೇಕೆಂದು ಅವರಿಗೆ ವಹಿಸಿರುವುದರಿಂದ ಅವರು ನೂರಾರು ಸ್ಕೂಲುಗಳಿಗೆ ಅಲ್ಲಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ ಇನ್ನು ಉಳಿದಿರುವ ಎಂಟು ಹತ್ತು ಹಳ್ಳಿಗಳಲ್ಲಿ ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿದರೆ ನಮ್ಮ ಕ್ಷೇತ್ರದಲ್ಲಿ ಇರುವ ಎಲ್ಲ ಹಳ್ಳಿಗಳಲ್ಲೂ ಪ್ರೈಮರಿ ಶಾಲೆಗಳ ಕಟ್ಟಡಗಳು ಪೂರ್ತಿಯಾಗುತ್ತವೆ. ಆದರೆ ಹಳ್ಳಿಗಳಲ್ಲಿ ಇರುವ ಪ್ರೈಮರಿ ಶಾಲೆಗಳ ಉಪಾಧ್ಯಾಯರುಗಳಿಗೆ ವಾಸಮಾಡುವುದಕ್ಕೆ

(ಶ್ರೀ ಡಿ. ಎಂ. ಸಿದ್ದಯ್ಯ)

ಮನೆಗಳೇ ಇರುವುದಿಲ್ಲ. ಅಲ್ಲಿರುವ ಉಪಾಧ್ಯಾಯರುಗಳಿಗೆ ಬರುತ್ತಿರುವ ಸಂಬಳವೂ ಕಡಿಮೆ. ಕೆಲವು ಗ್ರಾಮಗಳಲ್ಲಿ ಇರುವ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳು ಮೂರು ನಾಲ್ಕು ಮೈಲಿಗಳ ದೂರದ ಹಳ್ಳಿಗಳಿಂದ ಹೋಗಿ ಬರುತ್ತಾರೆ. ಅನೇಕ ವೇಳೆ ಇವರು ಶಾಲೆಗಳಿಗೆ ಲೇಟಾಗಿ ಬರುವುದೂ ಉಂಟು, ಕೆಲವು ವೇಳೆ ಶಾಲೆಗಳಿಗೇ ಬರುವುದಿಲ್ಲ. ಇಂತಹ ಸ್ಕೂಲುಗಳನ್ನು ಇನ್ಸ್‌ಪೆಕ್ಟ್ ಮಾಡಲು ಇನ್ಸ್‌ಪೆಕ್ಟೊರೇಟ್ ಇದೆ. ಆದರೆ ಇವರು ಎಲ್ಲ ಕಡೆಗೂ ಹೋಗಲು ಆಗುತ್ತಿಲ್ಲ. ಇದರಿಂದಾಗಿ ಕೆಲವು ಕಡೆ ಇರುವ ಶಾಲೆಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ ಇಲ್ಲವೇ ಎನ್ನುವುದನ್ನು ತಿಳಿಯುವುದಕ್ಕಾಗುತ್ತಿಲ್ಲ. ಈಚೆಗೆ ಚಿತ್ರದುರ್ಗಾ ಜಿಲ್ಲೆಯಲ್ಲಿ ಒಂದು ಶಾಲೆಯಲ್ಲಿರುವ ಉಪ್ಯಾಧಾಯರು ಸುಮಾರು ಎರಡು ವರ್ಷಗಳ ಕಾಲ ಸ್ಕೂಲಿಗೆ ಹೋಗದೆ ಸಂಬಳವನ್ನು ತೆಗೆದುಕೊಂಡಿದ್ದಾರೆಂದು ಅಲ್ಲಿನ ಒಬ್ಬರು ಇನ್ಸ್‌ಪೆಕ್ಟರ್‌ರವರು ಚೆಕ್ ಮಾಡಿದಾಗ ಗೊತ್ತಾಯಿತು ಎಂದು ನಮಗೆ ತಿಳಿದು ಬಂದಿದೆ. ಬಹುಶಃ ನಮ್ಮ ಈ ರಾಜ್ಯದಲ್ಲಿ ಇಂತಹ ಕೆಲಸಗಳು ಆಗಬಾರದು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಇವನ್ನೆಲ್ಲಾ ಸುಧಾರಣೆ ಮಾಡಿ ಸರಕಾರದವರು ನಮಗೆ ಇಲ್ಲಿ ಒಂದು ವರದಿ ಕೊಟ್ಟಿದ್ದಾರೆ. ಇದು ಬಹಳ ಸ್ತುತ್ಯಾರ್ಹವಾದ ಕ್ರಮ. ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಿದರೂ ಬಹಳ ಉಪಯುಕ್ತವಾದ ಕೆಲಸಗಳಿಗೆ ಖರ್ಚು ಮಾಡಿದಂತಾಗುತ್ತದೆ. ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ಪ್ರೈಮರಿ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದು ಬಹಳ ಉತ್ತಮವಾದ ಕೆಲಸ, ಬಾಲ್ಯದಲ್ಲಿ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಬೇಕು ಮತ್ತು ಸರಿಯಾದ ರೀತಿಯಲ್ಲಿ ತರಬೇತಿ ಕೊಡಬೇಕು. ಇಲ್ಲಿ ಬರುವ ವಿದ್ಯಾರ್ಥಿಗಳಿಗೆ ಇದೊಂದು ಕ್ಯಾರೆಕ್ಟರ್ ಮೌಲ್ಡಿಂಗು ಪೀರಿಯಡ್. ಇಲ್ಲಿ ವಿದ್ಯಾರ್ಥಿಗಳಿಗೆ ಫೌಂಡೇಷನ್ ಸರಿಯಾಗಿ ಇದ್ದರೆ ಮುಂದೆ ಯೂನಿವರ್ಸಿಟಿ ಎಜುಕೇಷನ್‌ಗೆ ಬರುವ ವಿದ್ಯಾರ್ಥಿಗಳಿಗೆ ಚೆನ್ನಾಗಿ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುತ್ತದೆ. ಎಂತೆಂತಹ ಯೂನಿವರ್ಸಿಟಿಗಳು ಪರದೇಶಗಳಲ್ಲಿ ಇದ್ದವು ಎನ್ನುವ ಉದಾಹರಣೆಗಳನ್ನು ಮಾನ್ಯ ಶ್ರೀ ಶ್ರೀಕಂಠಯ್ಯನವರು ಇಲ್ಲಿ ಹೇಳಿದರು. ಯೂನಿವರ್ಸಿಟಿ ಆಫ್ ಈಟನ್ ಇತ್ಯಾದಿ ಕೆಲವು ಯುನಿವರ್ಸಿಟಿಗಳಲ್ಲಿ ಯಾವ ರೀತಿ ವಿದ್ಯಾಭ್ಯಾಸ ಕೊಡುತ್ತಿದ್ದಾರೆ ಎನ್ನವುದರ ಬಗ್ಗೆ ಅವರು ಇಲ್ಲಿ ವಿವರವಾಗಿ ಹೇಳಿದ್ದಾರೆ. ನಮ್ಮ ದೇಶದಲ್ಲೂ ಉನ್ನತ ವಿದ್ಯಾಭ್ಯಾಸ ಕೊಡುವಾಗ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ದೊರೆಯುವಂತಾಗಬೇಕು ಮತ್ತು ನಮ್ಮ ಹುಡಗರಿಗೆ ಓದಲು ಯೋಗ್ಯವಾದ ಉತ್ತಮ ಟೆಕ್ಸ್ಟ ಬುಕ್‌ಗಳು ಇರಬೇಕು, ದೇಶಭಕ್ತರ ಹಾಗೂ ಮಹಾ ಪುರಷರ ಚರಿತ್ರೆಗಳು ಮತ್ತು ಆದರ್ಶ ಮಹಾ ಪುರಷರ ಜೀವನ ಚರಿತ್ರೆಗಳನ್ನು ವಿದ್ಯಾರ್ಥಿಗಳಿಗ ಬೋಧಿಸಿ ತಿಳಿಸಬೇಕು. ಇವನ್ನೆಲ್ಲಾ ತಿಳಿಸಿ ಪ್ರೈಮರಿ ಎಜುಕೇಷನ್ ಮುಗಿಸಿ ಸೆಕಂಡರಿ ಎಜುಕೇಷನ್‌ಗೆ ಬರುವ ವೇಳೆಗೆ ಒಳ್ಳೆಯ ಶಿಸ್ತಿನಿಂದ ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುವ ವ್ಯವಸ್ಥೆ ಮಾಡಬೇಕು. ಆದರೆ ಇಂದು ವಿಶ್ವವಿದ್ಯಾನಿಲಯಗಳಲ್ಲಿ ಈಚೆಗೆ ಪರಿಸ್ಥಿತಿಯನು ನೋಡಿದರೆ ಕೆಲವು ವಿಧ್ವಂಸಕಾರಕ ಶಕ್ತಿಗಳಿಂದ ಬಹಶಃ ಇಂತಹ ಗೊಂದಲಮಯವಾದ ಪರಿಸ್ಥಿತಿಯುಂಟಾಗಿದೆ.

ಶ್ರೀ ಬಿ.ಎಲ್. ನಾರಾಯಣಸ್ವಾಮಿ ; ಪ್ರೈಮರಿ ಶಾಲೆಗಳಲ್ಲಿ ಕಾಗುಣಿತವನ್ನು ಕೂಡ ಸರಿಯಾಗಿ ಕಲಿಸುವುದಿಲ್ಲವಲ್ಲಾ, ಸ್ವಾಮಿ.

ಶ್ರೀ ಡಿ. ಎಂ. ಸಿದ್ದಯ್ಯ ;—ವಿದ್ಯಾಭ್ಯಾಸದ ವಿಚಾರವನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವಾಗ ಎಲ್ಲರೂ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಗ್ರಾಜುಯೇಟರುಗಳು ಆಗಲು ಸಾಧ್ಯವಿಲ್ಲ. ಮೊದಲ ಈ ದೇಶದಲ್ಲಿ ಪ್ರೈಮರಿ ಶಾಲೆಗಳಿಂದ, ಮಿಡಲ್ ಸ್ಕೂಲುಗಳಿಂದ ವಿದ್ಯಾಭ್ಯಾಸ ಪಡೆದು ಹೈಸ್ಕೂಲುಗಳಿಗೆ ಬರುತ್ತಿದ್ದರು. ಆದರೆ ಈಗ ನಮ್ಮಲ್ಲಿ ಎಸ್ ಎಸ್ ಎಲ್ ಸಿ ಆದ ಮೇಲೆ ಪಿ ಯುಸಿ ಹಾಗೇ ಅನಂತರ ಬಿ ಎ ಅಥವಾ ಬಿ ಎಸ್‌ಸಿ ಡಿಗ್ರಿ ಪಡೆಯಬೇಕೆಂದು ಇದೆ. ಪ್ರತಿಯೊಬ್ಬರೂ ಡಿಗ್ರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಲ್ಲ ವಿದ್ಯಾರ್ಥಿಗಳೂ ವಿಶ್ವವಿದ್ಯಾನಿಲಯಕ್ಕೇ ಹೋಗುತ್ತಾರೆಂದು ಹೇಳಲಾಗುವುದಿಲ್ಲ. ಇಂದು ಸೆಕಂಡರಿ ಶಿಕ್ಷಣ ಪಡೆಯುವ ಶಾಲೆಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ವಿದ್ಯಾರ್ಥಿಗಳು ಯೋಗ್ಯವಾದ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಹೇಳಲು ಅವಕಾಶವಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ. ವಿದ್ಯಾಭ್ಯಾಸದ ಪದ್ಧತಿಯನ್ನು ಬದಲಾಯಿಸಬೇಕಾದರೆ ಮತ್ತು ಈಗಿರುವ ಸಮಸ್ಯೆಯನ್ನು ಬಗೆಹರಿಸಬೇಕಾದರೆ ವಿದ್ಯಾಭ್ಯಾಸದ ಸ್ಟ್ಯಾಂಡರ್ಡ್‌ನ್ನು ಉತ್ತಮವಾಗಿರುವಂತೆ ಮಾಡಬೇಕು. ಆದರೆ ಇಂದಿನ ವಿದ್ಯಾಭ್ಯಾಸ ಪದ್ಧತಿ ನೋಡಿದರೆ ಯಾವ ಒಂದು ಗುರಿಯೂ ಇಲ್ಲದೆ ಲಂಗು ಲಗಾಮಿಲ್ಲದಂತೆ ಹೋಗುತ್ತಿದೆ ಎಂದು ಹೇಳಲು ವ್ಯಸನವಾಗುತ್ತದೆ. ಇಂದು ವಿಶ್ವ ವಿದ್ಯಾನಿಲಯಕ್ಕೆ ಹೇಗಾದರೂ ಸರಿ ಇಲ್ಲಿಗೆ ಪ್ರವೇಶ ಮಾಡಬೇಕು ಎಂದು ಬರುತ್ತಾರೆ. ಇಲ್ಲಿಗೆ ಬರುವವರು ವಿದ್ಯಾಭ್ಯಾಸಕ್ಕಾಗಿ ಬರುವವರು ಬೇರೆ, ಕೆಲವರು ಬರೀ ಪಾಸು ಮಾಡಬೇಕೆಂದು ಬರುತ್ತಾರೆ ಮತ್ತು ಕೆಲವರು ಯೂನಿವರ್ಸಿಟಿ ಪ್ರೊಫೇಸರುಗಳನ್ನು ಹಿಡಿದುಕೊಂಡು ಪೇಪರುಗಳಿಗೆ ಕಾದು ಕ್ಲಾಸುಗಳಿಗೆ ಬರದೆ ಪಾಸು ಮಾಡ ಬೇಕೆಂದು ಬರುತ್ತಾರೆ. ಇಲ್ಲಿ ಬರುವ

ವಿದ್ಯಾರ್ಥಿಗಳಿಗೆ ತಮ್ಮ ಕರ್ತವ್ಯವೇನು ಎನ್ನುವುದೇ ಗೊತ್ತಿರುವುದಿಲ್ಲ. ಈಗಿರುವ ಪರಿಸ್ಥಿತಿಯನ್ನು ಸರಿಪಡಿಸಬೇಕು. ಇದನ್ನು ಸರಿಪಡಿಸದೇ ಹೋದರೆ ಮುಂದೆ ವಿಶ್ವವಿದ್ಯಾನಿಲಯಗಳಿಗೆ ಇರುವ ಪಾವಿತ್ರ್ಯತೆಯೇ ಹೋಗುತ್ತದೆ. ಇದರಿಂದಾಗಿ ಇವೊತ್ತು ಇರುವ ನಿರುದ್ಯೋಗದ ಸಮಸ್ಯೆ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಇವೊತ್ತಿನ ದಿನ ಪ್ರತಿಯೊಬ್ಬರೂ ಡಿಗ್ರಿ ಪಡೆಯಬೇಕು ಹಾಗೆ ಪಡೆದ ಮೇಲೆ ಎಲ್ಲಿಯಾದರೂ ಒಂದು ಕೆಲಸಕ್ಕೆ ಸೇರಬೇಕು ಎಂದು ಇಟ್ಟುಕೊಳ್ಳುವ ಗುರಿ ಸರಿಯಲ್ಲ. ಪ್ರತಿಯೊಬ್ಬರೂ ವಿದ್ಯಾವಂತನಾಗಬೇಕಾದುದೇನೋ ಸರಿ. ಆದರೆ ವಿದ್ಯಾವಂತರಾದ ಮೇಲೆ ತಮ್ಮ ಪರಿಸ್ಥಿತಿ ಏನು ಎನ್ನುವುದನ್ನೇ ಮರೆತು ಬರೀ ಕೆಲಸಕ್ಕೆ ಹೋಗಬೇಕೆಂದು ಆದರೆ ಅವರ ಗುರಿ ಸರಿಯಲ್ಲ. ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ಇಲ್ಲಿ ಬಹಳ ಪ್ರಾಮುಖ್ಯವಾದ ಒಂದು ಬೇಡಿಕೆಯನ್ನು ಮಂಡಿಸಿದ್ದಾರೆ. ಅವರು ಹೇಳಿದಂತೆ ವಿದ್ಯಾಭ್ಯಾಸಕ್ಕಾಗಿ ನಾವು ಎಷ್ಟು ಖರ್ಚು ಮಾಡಿದರೂ ಅದು ಸರಿಯಾಗಿರುತ್ತದೆ. ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಈಗ ಇರುವ ಪ್ರೈಮರಿ ಎಜುಕೇಷನ್‌ಅನ್ನು ಸುಧಾರಣೆ ಮಾಡಬೇಕು ಎಂದು ಮಾಡುತ್ತಿದ್ದಾರೆ. ನಮ್ಮ ದೇಶಕ್ಕೆ ಇರುವ ಸಂಸ್ಕೃತಿಯ ಪರಿಸ್ಥಿತಿಗೆ ಅನುಸಾರವಾಗಿ ಇದಕ್ಕೆ ಹೊಂದಾಣಿಕೆಯಾಗುವಂತಹ ವಿದ್ಯಾಭ್ಯಾಸ ಇರಬೇಕು ಆದರೆ ಇಂದು ನಾವು ನೋಡುತ್ತಿರುವ ಒಂದು ಗೊಂದಲಮಯವಾದ ಪರಿಸ್ಥಿತಿ ನೋಡಿದರೆ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಮನಸ್ಸು ಒಂದು ರೀತಿಯ ಕಲುಷಿತ ವಾತಾವರಣದಲ್ಲಿದೆ. ಇದಕ್ಕೆ ಕಾರಣ ಇಲ್ಲಿ ಬೋಧನ ಮಾಡುವವರು ಹಾಗೂ ಇನ್ನಿತರ ಕಾರಣಗಳಿಂದ ಆಗುತ್ತಿದೆ ಎಂದು ನಾನು ಇಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಹಿಂದಿನ ಮೈಸೂರಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಆಗ ಇದ್ದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂತೆಂತಹ ಮಹಾಮಹಿಮರು ಇದ್ದರು ಎಂದರೆ ಡಾ॥ ರಾಧಾಕೃಷ್ಣನ್, ಬ್ರಜೇಂದ್ರನಾಥ ಸೀಲ್, ಶ್ರೀ ಬಿ. ಎಂ. ಶ್ರೀಕಂಠಯ್ಯ ಇವರೆಲ್ಲಾ ಇದ್ದರು. ನಮಗೆ ಪ್ರೊಫೆಸರಾಗಿದ್ದ ಶ್ರೀ ವಿ. ಸೀತಾರಾಮಯ್ಯನವರು ಎಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ ಒಂದು ಸಾರಿ ಶ್ರೀ ವಿಶ್ವೇಶ್ವರಯ್ಯನವರು ನಮ್ಮ ಪ್ರೊಫೆಸರ್ ಸೀತಾರಾಮಯ್ಯನವರಿಗೆ You must be proud of your University, ಎಂದು ಹೇಳಿದರು. ಅವರಿಗೆ ಬಡ ಹುಡುಗರು ಎಂದರೆ ಬಹಳ ಅಭಿಮಾನ. ಅಂತಹ ಅಭಿಮಾನವುಳ್ಳವರಿಂದಲೇ ಅಂದಿನ ಮಂತ್ರಿಮಂಡಲ ಇದ್ದುದು. ಇಂದು ಕೂಡ ನಮ್ಮ ರಾಜ್ಯ ಸರಕಾರದ ಮಂತ್ರಿ ಮಂಡಲ, ಅವರ ನೀತಿಗನುಸಾರವಾಗಿಯೇ ಶ್ರೀ ಸರ್. ಎಂ. ವಿಶ್ವೇಶ್ವರಯ್ಯನವರು ಹಾಕಿದ ತಳಹದಿಯ ಮೇಲೆಯೇ, ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಅವರು ಜನಾನುರಾಗಿಗಳಾಗಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ಇಂದು ನಾವೆಲ್ಲಾ ನೋಡುತ್ತಿದ್ದೇವೆ ಮತ್ತು ಅದೇ ಆದರ್ಶಗಳನ್ನು ನಮ್ಮ ಸರಕಾರದವರೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅಂತಹ ವಿದ್ಯಾಭ್ಯಾಸ ಇರಬೇಕು ಎಂದು ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI. AZIZ SAIT (NARASIMHARAJA):—I rise to oppose the demand for the reasons I state now. Sir, we have been spending Rs. 3.93 lakhs on University and about 20.23 lakhs on Secondary and 23.33 lakhs on Primary Education. We have been giving by way of grant some amount to the Mysore University Karnatska University and Bangalore University. Besides this, you have been providing some amount to the Government Colleges. Every year you are spending lakhs and lakhs of rupees on education. But what have you done all these 22 years? Even to-day, you have not decided which language should be the medium of instruction. We have got Range inspectorates — one for Urdu and another for Kannada. You have befurcated the inspectorate. But it is a different system altogether The Kannada Range Inspector can travel as much as he can and draw the T.A. But the Urdu Range Inspector has got the fixed T.A. of Rs. 40. I have been pointing out this defect since a long time and I was urging this point even in the Legislative Council. You have not provided language inspectorate for Urdu. We have been part and parcel of the State to the extent of 27 Lakhs. What I feel is that there should be one Range Inspectorate to look after this executive

(Sri Azeez Sait)

work instead of one Language Inspector for Urdu in every Department The Kannada language was made compulsory since 1961. But on the agitation of Maharastrians, the Government of Mysore in 1962 changed its policy in the matter of language. The Government should not change its policy according to the whims and fancies of the people. Kannada is the official language of the State because it is the language of all the people. It should be the property of everybody. Everybody in the State should learn this language and there should be no exception. Why the Muslims are not given an opportunity to learn this language? Let all the people living in the State should learn this language compulsorily. In the neighbouring State i.e., Tamil Nadu, they have made the Tamil language as a compulsory and everybody will have to learn this language. There should not be political feeling in learning the State language. The state language should be the language of all. Therefore, I request the Government to see that this language is made compulsory atleast from 4th or 5th standard irrespective of the mother tongue of the pupil I would suggest to appoint a teacher of a language if there are more than 10 boys of that particular language in a particular school, so that you could save money on establishment. There will be no botheration of collecting all the boys of that particular language and putting them in a particular building. By following this method, you can save money on establishment. You can also put an end to the tendency of creating separate schools for for separate language. As the boys go up for higher education in old Mysore area, they will have to take either Kannada as medium of instruction or English as medium of instruction. This is not so in the case of Hyderabad region, and Madras region. English is the language of minority people. Why are you making them to study in English medium? The pupils are being denied of their legitimate right of chosing and studying either in their mother tongue or in the State language. Though there is Kannada medium of instruction, some boys of other language cannot study in that language In Bangalore University and Karnataka University, Urdu is not made as medium of instruction. In Government Colleges, there is no Urdu at all in the syllabus. You have been completely ignoring the language of the minority. It is a secular State? But you have not been following the principles of secularism. Some Hon. Member wants only Sunday as a holiday and no other day should be declared as holiday. The Muslims are having Friday as holiday since a long time. It is a sentimental day of Muslims. This day is sentimental to Hindus also because they perform Laxmipooja on that day. Therefore, Urdu schools will follow the principles laid down long, long ago. Let them follow the secular character. Why should they be denied this just because somebody has come in the way?

I will say one or two words about text books. Urdu teachers are appointed to be on the text book committees. There will be a tendency on the part of the Government officials to be subordinate to the Director and we cannot expect a good work from such officials to whichever community they belong. Therefore, I say there must be learned non-officials on the Committee. If a taxt book of a particular language is to be examined and prescribed, there should be experts of that particular subject of particular language on the Committee. The Muslim representation is not there on the Text book Committee. I will come to the point of accommodation in the school. In some places you are paying rent of rupees 3 to 4 and conducting schools even this day. In some places, 4 or 5 classes are being conducted in one room. For instance, in Mandi Mohalla of Mysore, there is a School where 4 classes are being conducted by 3 teachers in a room. I have brought these things to your notice and see that all these things are set right.

Thanking you Sir.

3-30 P. M.

†ಶ್ರೀ ಎಂ ಎಚ್. ಜಯಪ್ರಕಾಶ ನಾರಾಯಣ (ಸಿರಸಿ) :— ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಈ ಸಭೆಯ ಮುಂದೆ ಮಂಡಿಸಿರತಕ್ಕ ೫೩ ಕೋಟಿ ರೂಪಾಯಿಗಳ ಬೇಡಿಕೆ ಏನಿದೆ ಇದರ ಬಗ್ಗೆ ನಾನು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಇದರಲ್ಲಿ ದುರ್ಬಲ ವರ್ಗಗಳ ಬಗ್ಗೆ, ಬಡವರ ಬಗ್ಗೆ, ಮತ್ತು ಪರಿಶಿಷ್ಟ ವರ್ಗದ ಬಗ್ಗೆ ವಿಶೇಷವಾದ ರಿಯಾಯಿತಿಯನ್ನು ತೋರಿಸತಕ್ಕಂಥ ಯಾವ ಒಂದು ವಿಧವಾದ ಅವಕಾಶಗಳೂ ಹೆಚ್ಚಿನ ರೀತಿಯಲ್ಲಿ ಮಾಡಿಲ್ಲ. ಪ್ರೈಮರಿ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ೧೯೫೬–೫೭ನೇ ಸಾಲಿನಲ್ಲಿ ೧೮ ಲಕ್ಷ ವಿದ್ಯಾರ್ಥಿಗಳು ಪ್ರೈಮರಿ ಶಾಲೆಗಳಿಗೆ ಹೋಗುತ್ತಿದ್ದರು. ಈಗ ಅದು ೩೮ ಲಕ್ಷಕ್ಕೆ ಏರಿದೆ. ಎನ್ನತಕ್ಕ ಅಂಶವನ್ನೂ, ೧೯೫೬–೫೭ನೇ ಸಾಲಿನಲ್ಲಿ ೨೭ ಸಾವಿರ ಶಾಲೆಗಳನ್ನು ತೆರದಿದ್ದರು, ಈಗ ೩೨,೨೦೦ ಶಾಲೆಗಳನ್ನು ತೆರದಿದ್ದೇವೆ. ಇದರ ಮೇಲೆ ವಿಶೇಷ ಪ್ರಗತಿಯಾಗಿದೆ ಎನ್ನತಕ್ಕ ಅಂಶಗಳನ್ನೂ ನಾನು ಬಡ್ಜೆಟ್ ಭಾಷಣದಲ್ಲಿ ನೋಡಿದೆ. ಬಡವರು ಕೂಲಿಗಾರರು, ಮತ್ತು ಗ್ರಾಮಾಂತರ ಪ್ರದೇಶ ಗಳಲ್ಲಿರತಕ್ಕ ಜನರ ಕಂಪಲ್ಸರಿ ಎಜುಕೇಷನ್ ಸ್ಕೀಮು ಎಂದರೆ ೬ ವರ್ಷದಿಂದ ೧೧ ವರ್ಷಗಳವರೆಗಿನ ಕಂಪಲ್ಸರಿ ವಿದ್ಯಾಭ್ಯಾಸಕ್ಕೆ ಹೋಗತಕ್ಕಂಥ ಮಕ್ಕಳ ಸಂಖ್ಯೆ ೨೨ ಲಕ್ಷದಿಂದ ೩೩ಲಕ್ಷಕ್ಕೆ ಏರಿದೆ. ಹೀಗಿರುವಾಗ ನಿಮ್ನವರ್ಗ ಮತ್ತು ನಿಮ್ನ ಪಂಗಡಗಳಿಗೆ ಸೇರಿದಂತಹ ಕರ್ನಾಟಕ ರಾಜ್ಯದಲ್ಲಿರುವಂಥಾ ೫೦ ಲಕ್ಷ ಜನಗಳಲ್ಲಿ ೫ಲಕ್ಷ ಮಕ್ಕಳು ಓದುತಿದ್ದಾರೆ. ಇನ್ನೂ ಲಕ್ಷೋಪಲಕ್ಷ ಮಕ್ಕಳು ಕಂಪಲ್ಸರಿ ವಿದ್ಯಾಭ್ಯಾಸದ ಯೋಜನೆಯು ಬೆನಿಫಿಟ್ ಹೊಂದುತ್ತಿಲ್ಲ. ಇದಕ್ಕೆ ಮೂಲ ಕಾರಣವೇನೆಂದರೆ ಅವರ ತಂದೆ ತಾಯಿಗಳು ಕೂಲಿಗಾರರು, ಬಡವರು, ಅವರಿಗೆ ಓದುವುದಕ್ಕೆ ಅನುಕೂಲವಿಲ್ಲ. ಅವರಿಗೆ ಬಟ್ಟೆ ಇಲ್ಲ. ಅವರಿಗೆ ಸರಿಯಾದಂತಹ ಒಂದು ವ್ಯವಸ್ಥೆ ಇಲ್ಲ ಅವರು ಅನ್ನ ಅನ್ನ ಎಂದು ಬೀದಿ ಭಿಕಾರಿಗಳಾಗಿದ್ದಾರೆ. ಇಂಥಾ ಮಕ್ಕಳನ್ನು ಶಾಲೆಗಳಿಗೆ ಸೇರಿಸತಕ್ಕಂಥ ಯಾವ ವಿಧವಾದ ಅಟ್ರಾಕ್ಟೀವ್ ಸ್ಕೀಮು, ಲಿಬ್ರಲೈಜ್ಡ್ ಸ್ಕೀಮು, ರಾಜ್ಯಾಂಗದಲ್ಲಿರತಕ್ಕ ವಿಶೇಷವಾದ ರಿಯಾಯಿತಿಗಳನ್ನು ಅನುಸರಿಸಿ ಮಾನ್ಯ ಮಂತ್ರಿಗಳು ಇದರಲ್ಲಿ ಯಾವ ಯೋಜನೆಯನ್ನೂ ಅವರಿಗೆ ಇಟ್ಟಿಲ್ಲ. ಪ್ರತಿ ವರ್ಷವೂ ಒಂದು ಲಕ್ಷ ಹರಿಜನ ಗಿರಿಜನರ ಮಕ್ಕಳಿಗಾಗಿ ಒಂದು ಲಿಬ್ರಲೈಜ್ಡ್ ಯೋಜನೆಯನ್ನು ತಯಾರು ಮಾಡಿ ಅದರಲ್ಲಿ ಹರಿಜನ ಮತ್ತು ಗಿರಿಜನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಪ್ರತಿವರ್ಷವೂ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಹೇಳುತ್ತೇನೆ. ಆ ರೀತಿ ಮಾಡದೇ ಹೋದರೆ ಹರಿಜನ ಗಿರಿಜನರ ಮಕ್ಕಳು ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಮಹರಾಜರ ಸರ್ಕಾರದಲ್ಲಿ ಹರಿಜನ ಗಿರಿಜನರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಪುಸ್ತಕಗಳನ್ನು ಕೊಡುತ್ತಿದ್ದರು; ಅವರಿಗೆ ಬಟ್ಟೆಗಳನ್ನು ಕೊಡುತ್ತಿದ್ದರು. ಪೆನ್ಸಿಲ್ ಮತ್ತು ಬಳಪಗಳನ್ನು ಕೊಡುತ್ತಿದ್ದರು. ಮತ್ತು ಇತರ ಎಲ್ಲ

(ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ)

ಅನುಕೂಲತೆಗಳನ್ನು ಮಾಡಿಕೊಡುತ್ತಿದ್ದರು. ಈಗ ಹರಿಜನ ಗಿರಿಜನರ ಮಕ್ಕಳಿಗೆ ಪ್ರೈಮರಿ ಶಾಲೆಗಳಲ್ಲಿ ಯಾವ ವಿಧವಾದ ಸಹಾಯವೂ ದೊರೆಯುತ್ತಾ ಇಲ್ಲ. ಆದ್ದರಿಂದ ನಾನು ಈಗಾಗಲೇ ಹೇಳಿದ ಹಾಗೆ ಹರಿಜನ ಮತ್ತು ಗಿರಿಜನರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗಿ ಒಂದು ಲಿಬ್ರಲೈಜ್ಡ್ ಯೋಜನೆಯನ್ನು ಸರ್ಕಾರದವರು ಮಾಡಬೇಕು ಎಂದು ಹೇಳುತ್ತೇನೆ. ನೀವು ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕಾದರೆ ಮುಖ್ಯವಾಗಿ ಹರಿಜನ ಗಿರಿಜನರಿಗೆ ವಿಶೇಷವಾದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಎಂದು ನಾನು ಹೇಳುತ್ತೇನೆ. ಹಿಂದೆ ಪಂಚಮ ಶಾಲೆಗಳೆಂದು, ಕಮ್ಯೂನಲ್ ಶಾಲೆಗಳೆಂದು ಇದ್ದವು. ಈಗ ಅವುಗಳನ್ನೆಲ್ಲಾ ಜನರಲ್ ಶಾಲೆಗಳಾಗಿ ಮಾಡಿದ್ದಾರೆ, ಮತ್ತು ಅವುಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಆದ್ದರಿಂದ ಈಗ ಮತ್ತೆ ಎ.ಕೆ ಕಾಲೋನಿಗಳಲ್ಲಿ ಪಂಚಮ ಶಾಲೆಗಳನ್ನು ಸ್ಥಾಪನೆ ಮಾಡುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಆ ಶಾಲೆಗಳಿಗೆ ಬೇರೆಯವರೂ ಬರುವಂತೆ ಮಾಡಬೇಕು. ಚಾಮರಾಜ ನಗರ ತಾಲ್ಲೂಕಿನಲ್ಲಿಯೇ ಇದೇ ರೀತಿ ಆಗಿದೆ, ಆದ್ದರಿಂದ ಅಲ್ಲಿಯೂ ಸಹ ಪಂಚಮ ಶಾಲೆಗಳನ್ನು ಸ್ಥಾಪನೆ ಮಾಡಿ ಅವು ಸಾರ್ವಜನಿಕರಿಗಾಗಿ ಉತ್ತಮವಾದ ಕೆಲಸವನ್ನು ನಡೆಸುವಂತಹ ಕೆಲಸವನ್ನು ಮಾಡಬೇಕು. ಈಗ ಹರಿಜನ ಗಿರಿಜನರಿಗೆ ಮಿಡಲ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಹಾಸ್ಟಲುಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದ್ದಾರೆ. ಆದರೆ ಅವು ಉತ್ತಮವಾದ ರೀತಿಯಲ್ಲಿ ನಡೆಯುತ್ತಿಲ್ಲ. ಇವು ೯೨ ಪರ್ಸೆಂಟ್ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಾಗಿವೆ. ಇವು ವಿದ್ಯಾ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿವೆ. ಇವುಗಳ ಪರಿಸ್ಥಿತಿ ಚೆನ್ನಾಗಿಲ್ಲ. ಈ ಹಾಸ್ಟಲುಗಳಿಗೆ ಒಬ್ಬ ವಿದ್ಯಾರ್ಥಿಗೆ ೩೦ ರೂಪಾಯಿಗಳನ್ನೇನೋ ಕೊಡುತಿದ್ದಾರೆ ಇದನ್ನು ೪೦ ರೂಪಾಯಿಗಳಿಗೆ ಏರಿಸಬೇಕು ಮತ್ತು ಆ ಹಾಸ್ಟಲುಗಳಿಗೆ ಎಲ್ಲಾ ವಿಧವಾದ ಅನುಕೂಲತೆಗಳನ್ನು ಮಾಡಿಕೊಡಬೇಕು. ನರಸಿಂಹರಾಜ, ಸಿ.ಎ.ಕೆ ಇನ್‌ಸ್ಟಿಟ್ಯೂಷನ್, ಬಂಕಮ್ಮ ಬೋರ್ಡಿಂಗ್ ಹೋಮ್ ಇವುಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ವಿಧವಾದ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆಯೋ ಅದೇ ರೀತಿ ಬೇರೆ ಬೋರ್ಡಿಂಗ್ ಹೋಮ್‌ಗಳಿಗೂ ಅನುಕೂಲತೆಗಳನ್ನು ಮಾಡಿಕೊಡಬೇಕು. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಹರಿಜನ ಗಿರಿಜನರ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲ್ ಹಾಸ್ಟಲುಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮವಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ೨೫.೪ ಪರ್ಸೆಂಟ್ ಅಕ್ಷರಸ್ಥರು ವಿದ್ಯಾವಂತರು ಇರತಕ್ಕಂಥ ನಮ್ಮ ದೇಶದಲ್ಲಿ, ದೇಶದ ಬೆನ್ನು ಮೂಳೆಯಾಗಿರತಕ್ಕ ನಿಮ್ನ ವರ್ಗ ಮತ್ತು ನಿಮ್ನ ಪಂಗಡಗಳ ವಿದ್ಯಾವಂತರುಗಳು ೫ ಪರ್ಸೆಂಟ್ ಕೂಡ ಇಲ್ಲ. ಆದ್ದರಿಂದ ಸರ್ಕಾರದವರು ಅವರ ಅಭಿವೃದ್ಧಿಯ ಕಡೆ ಅವರ ವಿದ್ಯಾಭ್ಯಾಸದ ಕಡೆ ಗಮನ ಕೊಡದೇ ಹೋದರೆ ಅವರನ್ನು ವಿದ್ಯಾವಂತರನ್ನಾಗಿ ಜ್ಞಾನವಂತರನ್ನಾಗಿ ಮಾಡದಿದ್ದರೆ ಅವರನ್ನು ಎಲ್ಲಾ ಜನಾಂಗದವರೂ ಎಕ್ಸ್‌ಪ್ಲಾಯ್ಟ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಅವರನ್ನು ವಿದ್ಯಾವಂತರನ್ನಾಗಿ ಮಾಡಿದರೆ ತಾವಾಗಿಯೇ ಅರಿತುಕೊಳ್ಳತಕ್ಕ ಶಕ್ತಿ ಅವರಿಗೆ ಬರುತ್ತದೆ ಅವರಿಗೆ ಹೆಂಚ್ ಕೊಡುವುದು ಬೇಡಿ, ಮನೆ ಕೊಡುವುದು ಬೇಡಿ ಅವರನ್ನು ಒಳ್ಳೆಯ ಪೌರರನ್ನಾಗಿ ಸೃಷ್ಟಿ ಮಾಡಿ. ಅವರನ್ನು ವಿದ್ಯಾವಂತರನ್ನಾಗಿ ಮಾಡಿರಿ. ಏತಕ್ಕೆಂದರೆ ವಿದ್ಯೆಯೇ ಮುಖ್ಯ ವಿದ್ಯೆಯೇ ಸಿರಿರೂಪು, ವಿದ್ಯೆಯೇ ಗುರುವು, ವಿದ್ಯೆಯೇ ಕಳ್ಳನಪಹರಿಸದಿಹ ಧನವು, ವಿದ್ಯೆಯಿಂದಲೆ ಕೀರ್ತಿ, ಸುಖ, ಭೋಗ ಅಹುದು, ವಿದ್ಯೆ ಇಲ್ಲದವ ಪಶುವು ಧರೆಗೆ. ಈ ದೃಷ್ಟಿಯಿಂದ ಮನುಷ್ಯನಿಗೆ ವಿದ್ಯೆಯು ಬಹಳ ಮುಖ್ಯವಾದುದು. ಆದ್ದರಿಂದ ನಿಮ್ನ ವರ್ಗಮತ್ತು ನಿಮ್ನ ಪಂಗಡದವರ ವಿದ್ಯಾಭ್ಯಾಸಕ್ಕಾಗಿ ಒಂದು ವಿಶೇಷ ರೀತಿಯ ಸೌಲಭ್ಯ ಒದಗಿಸಿ ಕೊಡಬೇಕು. ಪಿ. ಯು ಸಿಯಿಂದ ಡಿಗ್ರಿಯವರೆಗೂ ೪ ಯೂನಿವರ್ಸಿಟಿಗಳಲ್ಲಿಯೂ ನಾಲ್ಕು ಹಾಸ್ಟಲುಗಳು ಕಾಲೇಜ್ ಲೆವಲ್‌ನಲ್ಲಿ ನಡೆಯುತ್ತಿವೆ. ಆದರೆ ಅಲ್ಲಿ ಉತ್ತಮವಾದ ವಾತಾವರಣವಿಲ್ಲ. ಸರಿಯಾದಂತಹ ಸೌಕರ್ಯಗಳಿಲ್ಲ. ಅವರಿಗೆ ಉತ್ತಮ ರೀತಿಯ ಬಿಲ್ಡಿಂಗ್ ಇಲ್ಲ ಅದನ್ನು ವ್ಯವಸ್ಥೆ ಮಾಡಬೇಕು. ಡಿಪ್ರೆಸ್ಡ್ ಕ್ಲಾಸಿನವರಿಗೆ ಲೈಬ್ರರಿಯನ್ನು ಒದಗಿಸಿಕೊಡಬೇಕು. ಐ.ಎ.ಎಸ್ ಹುದ್ದೆಗಳಲ್ಲಿ ಮತ್ತು ಡಿ.ಇ.ಓ ಹುದ್ದೆಗಳಿಗೆ ಡಿಪ್ರೆಸ್ಡ್ ಕ್ಲಾಸಿನವರನ್ನು ನೇಮಕಮಾಡಿ ಅವರಿಗೆ ಅದರಲ್ಲಿ ಪ್ರಾತಿನಿಧ್ಯ ದೊರೆಯುವಂತೆ ಮಾಡಬೇಕು. ಕೆಲವು ಜಿಲ್ಲೆಗಳಲ್ಲಿ ವಿದ್ಯಾಧಿಕಾರಿಗಳು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ೯ ವರ್ಷಗಳಿಂದ ನಮ್ಮ ದೇಶದ ಪರಿಶಿಷ್ಟ ವರ್ಗದವರಿಗೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಎಸ್ ಎಸ್.ಎಲ್ ಸಿ ಪಾಸಾದವರಿಗೆ ಕೆಲಸ ಕೊಡಿ ಎಂದರೆ ಟಿ ಸಿ,ಎಚ್ ಆಗಿಲ್ಲ, ಟಿ.ಸಿ.ಎಲ್, ಆಗಿಲ್ಲ ಎಂದು ಹೇಳುತ್ತಾರೆ, ಬಿ.ಎ ಪಾಸಾದವರಿಗೆ ಕೆಲಸವನ್ನು ಕೊಡಿ ಎಂದರೆ ಅವರಿಗೆ ಬಿ.ಇ.ಡಿ ಆಗಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ವಿದ್ಯಾ ಇಲಾಖೆಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ದೊರೆಯುವಂತೆ ಮಾಡುವ ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಅವರಿಗೆ ವಿಶೇಷ ರೀತಿಯ ಟ್ರೇನಿಂಗ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಅವರಿಗೆ ಅಲ್ಲಿ ಕೆಲಸ

ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಹಾಗೆ ಮಾನ್ಯ ವಿದ್ಯಾ ಮಂತ್ರಿಗಳು ಬಹಳ ಉದಾರವಾಗಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ. ಇ.ಡಿ ೧೫೦ ಸಿ.ಎಸ್.ಎಸ ೬೭ ೧೪ನೇ ಮಾರ್ಚಿ ೧೯೬೮ ಈ ಒಂದು ಆಜ್ಞೆಯನ್ನು ಹೊರಡಿಸಿ ಹರಿಜನ ಗಿರಿಜನರ ಮಕ್ಕಳು ಪ್ರೈಮರಿ ಶಾಲೆಯಿಂದ ಹಿಡಿದು ಯೂನಿವರ್ಸಿಟಿ ಯಾವ ಕ್ಲಾಸಿನವರೆಗೆ ಹೋಗಿ ಓದಿದರೂ ಕೂಡ ಅವರುಗಳಿಗೆ ಫೀಜು ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ ಹರಿಜನ ಮತ್ತು ಗಿರಿಜನರ ಉದ್ಧಾರಕ್ಕಾಗಿ ಈ ಒಂದು ಆಜ್ಞೆಯನ್ನು ಮಾನ್ಯ ವಿದ್ಯಾ ಸಚಿವರು ಮಾಡಿದ್ದಾರೆ. ಅದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಈ ನಿಯಮವನ್ನು ಪರಿಪಾಲನೆ ಮಾಡಿದ್ದಾರೆ. ಆದರೆ ಪ್ರೈವೇಟ್ ಕಾಲೇಜ್ ಏಡೆಡ್ ಇನ್‌ಸ್ಟಿಟೂಷನ್ ಪ್ರೈವೇಟ್ ಇನ್‌ಸಿಟ್ಯೂಷನ್‌ಗಳಲ್ಲಿ ಇದನ್ನು ಪರಿಪಾಲನೆ ಮಾಡುತ್ತಿಲ್ಲ. ಇದಕ್ಕಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಅವರಿಗೆ ಫೀಜು ಕೊಡುವ ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ಪ್ರೈವೇಟ್ ಸ್ಕೂಲ್, ಕಾಲೇಜುಗಳಲ್ಲಿ, ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ, ಮತ್ತು ಸರ್ಕಾರದಿಂದ ಗ್ರಾಂಟ್ ಪಡೆಯತಕ್ಕ ಎಲ್ಲಾ ವಿದ್ಯಾ ಸಂಸ್ಥೆಗಳಲ್ಲಿಯೂ ಈ ಹರಿಜನ ಗಿರಿಜನರ ಮಕ್ಕಳನ್ನು ಅಡ್ಮಿಟ್ ಮಾಡಿಕೊಳ್ಳುವಾಗ ಯಾವ ಪ್ರತಿಬಂಧಕವೂ ಇಲ್ಲದೆ ಅವರನ್ನು ಅಡ್ಮಿಟ್ ಮಾಡಿಕೊಳ್ಳಬೇಕು ಎಂದು ಸರ್ಕಾರದವರು ಒಂದು ಸರ್ಕ್ಯುಲರ್ ಅನ್ನು ಶಾಲಾ ಕಾಲೇಜುಗಳು ಪ್ರಾರಂಭವಾಗುವಾಗಲೇ ಅವುಗಳಿಗೆ ಕಳುಹಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸೆಕೆಂಡರಿ ಎಜುಕೇಷನ್ ಬೋರ್ಡ್, ಯೂನಿವರ್ಸಿಟಿ, ಸೆನೆಟ್, ಸಿಂಡಿಕೇಟ್, ಅಡಲ್ಟ್ ಎಜುಕೇಷನ್ ಕೌನ್ಸಿಲ್, ಸ್ಟೇಟ್ ಕೌನ್ಸಿಲ್ ಮತ್ತು ಕಮಿಟಿಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡುವಂತೆ ಮಾಡಬೇಕು. ವಿದ್ಯಾ ಮಂತ್ರಿಗಳು ಮಾಡತಕ್ಕ ಪ್ರತಿಯೊಂದು ಬೋರ್ಡ್, ಕೌನ್ಸಿಲ್ ಮತ್ತು ಕಮಿಟಿಗಳಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟು ಅವರ ರಕ್ಷಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಈ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ ಸ್ಕಾಲರ್‌ಶಿಪ್ ವಿಷಯ. ಡಾ॥ ಅಂಬೇಡ್ಕರ್‌ರವರು ೧೯೫೭ರಲ್ಲಿ ಶೆಡ್ಯೂಲ್ಡ್ ಕಾಸ್ಟ್, ಶೆಡೂಲ್ ಟ್ರೈಬ್ಸ್ ಸ್ಕಾಲರ್‌ಶಿಪ್ ಜಾರಿಗೆ ತಂದಿದ್ದಾರೆ. ನಾನ್ ಹಾಸ್ಟೆಲಿನವರಿಗೆ ೨೫ ರೂಪಾಯಿ, ಹಾಸ್ಟೆಲಿನವರಿಗೆ ೪೦ ರೂಪಾಯಿ ಎಂದು ಇತ್ತು. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಪೋಸ್ಟು ಮೆಟ್ರಿಕ್ ಸ್ಕಾಲರ್‌ಶಿಪನ್ನು ದ್ವಿಗುಣ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹಾಸ್ಟೆಲುಗಳ ವಿಚಾರ. ಜನರಲ್ ಹಾಸ್ಟೆಲ್‌ಗಳಲ್ಲಿ ಸ್ಕೀಮು ಮಾಡಿದ್ದಾರೆ ಅದರಲ್ಲಿ ೭೫ ಪರಸೆಂಟ್ ಹರಿಜನರು ಮತ್ತು ೨೫ ಪರ್‌ಸೆಂಟ್ ಇತರ ಜನರು ಇರಬೇಕೆಂದು ಮಾಡಿದ್ದಾರೆ. ಅದು ಸ್ವಾಗತಾರ್ಹವಾದ ವಿಚಾರ. ಆದರೆ ಅದೇ ರೀತಿ ಒಕ್ಕಲಿಗರ, ಲಿಂಗಾಯಿತರ ಕುರುಬರ ಹಾಸ್ಟೆಲ್ ಎಂದು ಇವೆ, ಅದರದೂ ೧೦ ಪರಸೆಂಟ್ ಸೀಟ್ ಕೊಡಬೇಕೆಂದು ಇದೆ. ಆದರೆ ಆ ಪ್ರಕಾರ ರಾಮಕೃಷ್ಣ ಆಶ್ರಮದಲ್ಲಾಗಲಿ, ಅಥವಾ ಇತರ ಕಡೆಗಳಲ್ಲಾಗಲಿ ಒಬ್ಬರನ್ನೂ ಸೇರಿಸುತ್ತಾ ಇಲ್ಲ. ಅಲ್ಲಿ ಕೂಡ ಇವರನ್ನು ಸೇರಿಸಬೇಕು ಇಲ್ಲದಿದ್ದರೆ ಗ್ರಾಂಟ್ ನಿಲ್ಲಿಸುತ್ತೇವೆಂದು ಹೇಳಬೇಕು ಹೀಗೆ ಹರಿಜನರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿ, ಅವರನ್ನು ಉದ್ಧಾರ ಮಾಡಬೇಕೆಂದು ಕೇಳಿಕೊಂಡು, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ, ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಚಿತಾಪುರ) ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಂಡಿಸಿದಂತಹ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಮೊದಲನೆಯದಾಗಿ ಶಿಕ್ಷಣ ಕ್ಷೇತ್ರದಲ್ಲಿ ಗುಣ ಮಟ್ಟವನ್ನು ಉತ್ತಮಗೊಳಿಸುವ ಸಲುವಾಗಿ ಸರ್ಕಾರದವರು ಅನೇಕ ಪ್ರಯತ್ನಗಳನ್ನು ನಡೆಸಿದ್ದಾರೆ. ಹೈಸ್ಕೂಲುಗಳಲ್ಲಿ ಟ್ರೈನ್ಡ್ ಉಪಾಧ್ಯಾಯರುಗಳನು ಹೆಡ್‌ಮಾಸ್ಟರಾಗಿ ಮಾಡಿದ್ದಾರೆ. ಮತ್ತು ಅನ್ ಕ್ವಾಲಿಫೈಡ್ ಟೀಚರುಗಳನ್ನು ಟ್ರೈನಿಂಗಿಗೆ ಕಳಿಸಿದ್ದಾರೆ. ಮತ್ತು ಕೆಲವೊಂದು ಮಿಡ್ಲ್ ಸ್ಕೂಲುಗಳಿಗೆ ಟ್ರೈನ್ಡ್ ಟೀಚರುಗಳನ್ನು ಹೆಡ್‌ಮಾಸ್ಟರನ್ನಾಗಿ ಮಾಡಿ ಅನೇಕ ರೀತಿಯಲ್ಲಿ ಶಿಕ್ಷಣದಲ್ಲಿತಕ್ಕಂತಹ ಗುಣವನ್ನು ಹೆಚ್ಚಿಸುವುದಕ್ಕೆ ಸರ್ಕಾರದವರು ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನಿರೀಕ್ಷಿಸಿದಷ್ಟು ಶಿಕ್ಷಣದ ಗುಣ ಮಟ್ಟ ಹೆಚ್ಚಾಗಲಿಲ್ಲ, ಅದಕ್ಕೆ ಇನ್ನೂ ಹೆಚ್ಚಿನ ಪ್ರಯತ್ನವನ್ನು ಭರದಿಂದ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಎಸ್. ರುದ್ರಪ್ಪ)

ಇನ್ನು ಹೈದರಾಬಾದು ಕರ್ಣಾಟಕದ ಬಗ್ಗೆ ಹೇಳುವುದಾದರೆ, ಆ ಭಾಗದಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ೧೦ ವರ್ಷದ ಹಿಂದೆ ಕೆಲವು ಹೈಸ್ಕೂಲುಗಳಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಜೀರೋ ಪರಸೆಂಟ್ ಇತ್ತು. ಈಗ ಅದು ೧೫-೨೦ ಪರ್‌ಸೆಂಟ್‌ಗೆ ಏರಿದೆ. ಅದೇ ರೀತಿ ಯಾವ ಹೈಸ್ಕೂಲಲ್ಲಿ ೧೫ ಪರ್‌ಸೆಂಟ್ ಹಿಂದೆ ಇತ್ತೋ ಅಲ್ಲಿ ಈಗ ೩೦ ಪರಸೆಂಟ್ ಆಗಿದೆ. ಸರ್ಕಾರದವರು ಈ ಭಾಗದಲ್ಲಿ ಹೆಚ್ಚು ಪ್ರಯತ್ನ ಪಟ್ಟು ವರ್ಕ್‌ಷಾಪ್‌ಗಳನ್ನು, ಸೆಮಿನಾರುಗಳನ್ನು ಮತ್ತು ಇನ್ನಿತರ ಕಾರ್ಯಕ್ರಮ ಗಳನ್ನು ತೆಗೆದುಕೊಂಡು ಶಿಕ್ಷಣದ ಗುಣ ಮಟ್ಟವನ್ನು ಏರಿಸುವದಕ್ಕೆ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಶಿಕ್ಷಣ ಮಂತ್ರಿಯವರಿಗೆ ಮತ್ತು ಇತರ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನೊಂದು ವಿಷಯವೇನೆಂದರೆ. ಇನ್ಸ್‌ಪೆಕ್ಟರ್ ಸ್ಟಾಫ್, ಅದನ್ನು ತುಕೋಳ್ ಕಮಿಶನ್ನಿನವರೂ ಪ್ರಸ್ತಾಪ ಮಾಡಿದ್ದಾರೆ. ಇನ್‌ಸ್ಪೆಕ್ಟಿಂಗ್ ಸ್ಟಾಫ್ ೧೨ ವರ್ಷಗಳ ಹಿಂದೆ ಏನು ಇತ್ತು, ಅದರಲ್ಲಿ ಏನು ವ್ಯತ್ಯಾಸ ವಾಗಲಿಲ್ಲ, ಅಷ್ಟೇ ಇದ್ದಾರೆ. ಪ್ರತಿಯೊಂದು ಡಿವಿಜನಿಗೂ ಡೆಪ್ಯೂಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಇದ್ದಾರೆ, ಜಿಲ್ಲೆಗೆ ಡಿ.ಇ.ಓ ಇದ್ದಾರೆ ಮತ್ತು ತಾಲ್ಲೂಕಿಗೆ ಇನ್‌ಸ್ಪೆಕ್ಟರ್ ಇದ್ದಾರೆ. ಆದರೆ ೧೦ ವರ್ಷಗಳಲ್ಲಿ ಬಹಳ ಹೈಸ್ಕೂಲುಗಳು ಹೆಚ್ಚಾಗಿವೆ. ಮಿಡ್ಲ್ ಸ್ಕೂಲುಗಳು ಹೆಚ್ಚಾಗಿವೆ. ಪ್ರತಿಯೊಂದು ತಾಲ್ಲೂಕುಗಳಲ್ಲೂ ೫-೬ ಹೈಸ್ಕೂಲುಗಳನ್ನು ತಾಲ್ಲೂಕು ಬೋರ್ಡಿನವರು ನಡೆಸುತ್ತಿದ್ದಾರೆ. ಅಂತೂ ಸ್ಕೂಲುಗಳು ಹೆಚ್ಚಾಗಿವೆ. ಅದೇ ರೀತಿ ವಿದ್ಯಾರ್ಥಿಗಳೂ ಹೆಚ್ಚಾಗಿದ್ದಾರೆ. ಆದರೆ ಇನ್ಸ್‌ಪೆಕ್ಟರ್ ಮಾಡತಕ್ಕಂತಹ ಸಿಬ್ಬಂದಿ ವರ್ಗ ಮಾತ್ರ ಹೆಚ್ಚಾಗಿಲ್ಲ. ಹೋದಸಲ ವಿದ್ಯಾಮಂತ್ರಿಯವರು ಹೇಳಿದ್ದರು ಇಸ್ಪೆಕ್ಟಿಂಗ್ ಸ್ಟಾಫ್ ಹೆಚ್ಚು ಮಾಡುತ್ತೇವೆ. ಎಂದು, ಆದನ್ನು ತುಕೋಳ್ ಕಮಿಷನವರೂ ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಗೂ ಒಬ್ಬ ಡೆಪ್ಯೂಟಿ ಡೈರೆಕ್ಟರನ್ನು ನೇಮಿಸಬೇಕೆಂದು ಮತ್ತು ಸಬ್ ಡಿವಿಜನಿಗೆ ಒಬ್ಬ ಡಿ.ಇ.ಓ. ರನ್ನು ಮಾಡಬೇಕು, ಮತ್ತು ೪೦-೫೦ ಸ್ಕೂಲುಗಳಿಗೆ ಒಬ್ಬ ಇನ್‌ಸ್ಪೆಕ್ಟರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಇದರಿಂದ ಆಡಳಿತದಲ್ಲಿ ಒಂದು ಬಿಗಿ ಬರುತ್ತದೆ. ಮತ್ತು ಶಿಕ್ಷಣದ ಗುಣ ಮಟ್ಟ ಕೂಡ ಉತ್ತಮವಾಗುತ್ತದೆ. ಆದರೆ ಇದರ ಬಗ್ಗೆ ಯಾವ ಕಾರ್ಯಕ್ರಮ ಕೂಡ ತೆಗೆದುಕೊಂಡಿಲ್ಲ. ಇದನ್ನು ಬೇಗನೇ ಮಾಡಿದ್ದಾದರೆ, ಆಡಳಿದಲ್ಲಿ ಇನ್ನೂ ಹೆಚ್ಚಿನ ಬಿಗಿ ಬರುತ್ತಗೆ ಮತ್ತು ಮೇಲ್ವಿಚಾರಣೆಗೂ ಒಳ್ಳೆಯದಾಗುತ್ತದೆ. ಶಾಲೆಗಳಲ್ಲಿ ಏನಾದರೂ ಲೋಪ ದೋಷಗಳಿದ್ದರೆ ಆದನ್ನು ತೆಗೆದು ಉತ್ತಮ ಪಡಿಸ ಲಾಗುತ್ತದೆ. ಇನೊಂದು ವಿಚಾರವೇನೆಂದರೆ, ಹೈಸ್ಕೂಲುಗಳಲ್ಲಿ ಇನ್‌ಸ್ಪೆಕ್ಟ್ ಏನು ಮಾಡುತ್ತಾರೆ, ಆಗ ಅಲ್ಲಿ ಏನಾದರೂ ಲೋಪ ದೋಷಗಳು ಕಂಡು ಬಂದರೆ, ಅವರಿಗೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಕೊಡಬೇಕು. ಅವರು ಬರೇ ಇನ್‌ಸ್ಪೆಕ್ಟ ಮಾಡಿ ರಿಪೋರ್ಟು ಮಾಡುವುದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಅವರು ಇನ್‌ಸ್ಪೆಕ್ಟ್ ಮಾಡಿ ಡಿ.ಇ.ಓ. ಗಾಗಲಿ, ಡೆಪ್ಯೂಟಿ ಡೈರೆಕ್ಟರಿಗಾಗಲಿ ರಿಪೋರ್ಟು ಮಾಡಿದರೆ ಕೂಡ ಯಾವ ಕ್ರಮವೂ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಇನ್‌ಸ್ಪೆಕ್ಟ್ ಮಾಡುವವರಿಗೇ ಈ ಅಡ್ಮಿನಿಸ್ಟ್ರೇಟೀವ್ ಪವರ್ಸ್ ಕೊಟ್ಟರೆ, ಯಾವ ಹೈಸ್ಕೂಲಿನಲ್ಲಿ ಲೋಪ ಹೋಷಗಳು ಇವೆ ಅದರ ಮೇಲೆ ಆಗಲೇ ಸರಿಪಡಿಸಲು ಕ್ರಮ ತೆಗೆದು ಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಅಲ್ಲಿಯ ಆಡಳಿತ ಮತ್ತು ಗುಣ ಮಟ್ಟದಲ್ಲಿಯೂ ಸುಧಾರಣೆಯಾಗುತ್ತದೆ. ಆದ್ದರಿಂದ ಅವರಿಗೆ ಈ ಪವರ್ಸ್‌ನ್ನು ಡಿಸೆಂಟ್ರಲೈಸ್ ಮಾಡಿ, ಪವರ್ಸ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳು ಹೆಚ್ಚಾಗಿ ಇಲ್ಲ. ಅದರಲ್ಲೂ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳಲ್ಲ. ಸರ್ಕಾರದವರು ಈಗ ಒಂದು ಕೋಣೆಗೆ ಒಂದು ಸಾವಿರ ರೂಪಾಯಿಯಂತೆ ಕೊಡುತ್ತಿದ್ದಾರೆ. ಈಗ ಗಾಂಧಿ ಶತಾಬ್ದಿಯಲ್ಲಿ ೨೦೦೦ ರೂಪಾಯಿ ಕೊಡುತ್ತಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಅದನ್ನು ನಿಲ್ಲಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ಅದನ್ನು ಇನ್ನೂ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಪುಸ್ತಕಗಳನ್ನು ಸರ್ಕಾರದವರು ರಾಷ್ಟ್ರೀಕರಣ ಮಾಡಿದ್ದಾರೆ. ಇದನ್ನು ಏಜಂಟರ ಮೂಲಕ ಮಾರುತದ್ದಾರೆ. ಅವರಿಗೆ ೧೫ ಪರ್‌ಸೆಂಟ್ ಕಮಿಶನ್ ಕೊಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಕೆಲವು ಮಾರಾಟದಾರರು ಸಕಾಲದಲ್ಲಿ ತರದೆ, ಬ್ಲಾಕ್ ಮಾರ್ಕೆಟ್ ಕೂಡ ಆಗುತ್ತದೆ. ಮತ್ತು ಏಜಂಟರುಗಳು ಈ ಪುಸ್ತಕಗಳನ್ನು ಮಾರುವಾಗ ಗೈಡ್ ಪುಸ್ತಕಗಳನ್ನೂ ಕಡ್ಡಾಯವಾಗಿ ತೆಗೆದುಕೊಳ್ಳ ಬೇಕೆಂದು ಒತ್ತಾಯ ಮಾಡುತ್ತಿದ್ದಾರೆ, ಇಲ್ಲದಿದ್ದರೆ ಪುಸ್ತಕ ಇಲ್ಲವೆಂದು ಹೇಳುತ್ತಾರೆ. ನನ್ನ ಅಭಿಪ್ರಾಯ ದಲ್ಲ ಈ ರೀತಿ ಈ ಪುಸ್ತಕಗಳನ್ನು ಮಾರಾಟ ಮಾಡುವುದರ ಬದಲು, ಆಯಾ ಹೈಸ್ಕೂಲುಗಳಲ್ಲಿ ಕೊಪರೇಟೀವ್ ಸೊಸೈಟಿಗಳನ್ನು ಮಾಡಿ ಅಲ್ಲಿ ಪುಸ್ತಕಗಳನ್ನು ಸೊಸೈಟಿಗಳ ಮೂಲಕ ಮಾರಿದ್ದಾದರೆ, ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳು ದೊರೆಯುತ್ತದೆ. ಮತ್ತು ಇಂಥ ಲೋಪ ದೋಷಗಳಿಗೂ ಆಸ್ಪದ ಇರುವುದಿಲ್ಲ. ಆದೆ: ೧೫ ಪರ್ಸೆಂಟ್ ಕಮಿಷನನ್ನು ಆ ಕೊಪರೇಟಿವ್ ಸೊಸೈಟಿಗಳಿಗೆ ಕೊಡಬಹುದು.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರಿಗೆ ಅದರಲ್ಲೂ ಹರಿಜನರಿಗೆ ಮನೆಗಳು ಸಿಗುವುದು ಬಹಳ ಕಷ್ಟ. ಅವರು ಎಲ್ಲಿಗದರೂ ಗುಡಿಸಲುಗಳಲ್ಲಿ, ಅಥವಾ ಸೇತ್ನಹಿತರ ಮನೆಗಳಲ್ಲಿ ಇರಬೇಕಾಗುತ್ತದೆ. ಆದ್ದರಿಂದ ಇಂಥ ಉಪಾಧ್ಯಾರಿಗೆ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದವರು ಹೌಸಿಂಗ್ ಬೋರ್ಡಿನವರೊಡನೆ ಇದರ ಬಗ್ಗೆ ಒಂದು ಏರ್ಪಾಡನ್ನು ಮಾಡಬೇಕು. ತಾಲ್ಲೂಕು ಬೋರ್ಡಿನವರು ಒಂದು ಎರಡು ಸಾವಿರ ರೂಪಾಯಿ, ಪಂಚಾಯಿತಿನವರು ಒಂದು ಎರಡು ಸಾವಿರ ರೂಪಾಯಿ ಹಾಕಬೇಕು ಮತ್ತು ಹೌಸಿಂಗ್ ಬೋರ್ಡಿನವರು ಎರಡು ಸಾವಿರ ರೂಪಾಯಿ ಸಾಲ ಕೊಡಬೇಕು ಐದು ಸಾವಿರ ರೂಪಾಯಿ ಒಂದರಂತೆ ಮನೆಗಳನ್ನು ಕಟ್ಟುವ ವ್ಯವಸ್ಥೆ ತಾಲ್ಲೂಕು ಬೋರ್ಡಿನವರು ಮಾಡಬೇಕು. ಹೀಗೆ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಮನೆಗಳು ದೊರೆಯಲು ಅನುಕೂಲವಾಗುತ್ತದೆಂದು ನಾನು ತಿಳಿದು ಕೊಂಡಿದ್ದೇನೆ. ಅದೇ ರೀತಿಯಲ್ಲಿ ಈಗಾಗಲೇ ಹೌಸಿಂಗ್ ಬೋರ್ಡಿನವರು ತಾಲ್ಲೂಕು ಮಟ್ಟದಲ್ಲಿಯೂ ಮತ್ತು ಜಿಲ್ಲಾ ಮಟ್ಟದಲ್ಲಿಯೂ ಅನೇಕ ಮನೆಗಳನ್ನು ಕಟ್ಟಿದ್ದಾರೆ. ಆದರೆ ತಾಲ್ಲೂಕು ಮಟ್ಟಗಲ್ಲಿಯೂ ಕೂಡ ಉಪಾಧ್ಯಾಯರಿಗೆ ಸಾಕಷ್ಟು ಮನೆಗಳು ಇಲ್ಲ. ಹೌಸಿಂಗ್ ಬೋರ್ಡಿನಿಂದ ಸರ್ಕಾರದವರು ಹೈರ್ ಪರ್ಚೆಸ್ ಸಿಸ್ಟಂನಲ್ಲಿ ತೆಗೆದುಕೊಂಡು ಅವರು ೨೫ ಇನ್‌ಸ್ಟಾಲಮೆಂಟುಗಳಲ್ಲಿ ಆ ಹಣವನ್ನು ಕಟ್ಟಬಹುದು, ಉಪಾಧ್ಯಾಯರಿಂದ ಶೇಕಡ ಹಿರಷ್ಟು ರೆಂಟನ್ನು ಕಲೆಕ್ಟ್ ಮಾಡಿ ಅವರಿಗೆ ಮನೆಗಳನ್ನು ಒದಗಿಸಬೇಕು. ಇದುವರೆಗೂ ಸರ್ಕಾರದವರು ಈ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ಫೈನಲೈಜ್ ಮಾಡಲಿಲ್ಲ. ಗ್ರಾಜುಯೇಟ್ ಟೀಚರ್ಸ್‌ನಲ್ಲಿಯೂ ಮತ್ತು ಸಿಬ್ಬಂದಿಯಲ್ಲಿಯೂ ಒಂದು ತರಹ ಫ್ರಸ್ಟ್ರೇಷನ್ ಇದೆ. ಇದರಿಂದ ಆಡಳಿತದಲ್ಲಿ ಬಿಗಿ ಇಲ್ಲ. ಇದನ್ನು ಬೇಗನೆ ಫೈನಲೈಜ್ ಮಾಡಿದರೆ ಉಪಾಧ್ಯಾಯರು ಸ್ವಲ ತೃಪ್ತಿಯಾಗಿ, ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ನನಗೆ ತಿಳಿದಿರುವ ಹಾಗೆ ಯೂನಿವರ್ಸಿಟಿ–ಗ್ರಾಂಟ್ ಕಮಿಷನ್ನಿನವರು ಗುಲ್ಬರ್ಗಾದಲ್ಲಿ ಪೋಸ್ಟ್ ಗ್ರಾಜುಯೇಟ್ ಸೆಂಟರುಗಳನ್ನು ಪ್ರಾರಂಭ ಮಾಡಬೇಕೆಂದು ಮಂಜೂರು ಮಾಡಿದ್ದಾರೆ. ಕರ್ಣಾಟಕ ಯೂನಿವರ್ಸಿಟಿಯವರು ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅಲ್ಲಿ ಸೈಟು ಮುಂತಾದುವನ್ನು ವ್ಯವಸ್ಥೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ಸರ್ಕಾರದವರು ಪೋಸ್ಟ್ ಗ್ರಾಜುಯೇಟ್ ಸೆಂಟರುಗಳನ್ನು ಪ್ರಾರಂಭ ಮಾಡುವುದಕ್ಕೆ ಮ್ಯಾಚಿಂಗ್ ಗ್ರಾಂಟ್ ಎಂದು ಸುಮಾರು ೨೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಬಡ್ಜೆಟ್ಟಿನಲ್ಲಿ ಈ ಬಾಬಿಗೆ 'ಏನೂ ಹಣವನ್ನು ಇಟ್ಟಿಲ್ಲ. ಸರ್ಕಾರದವರು ಈಗಲಾದರೂ ಪುನರಾಲೋಚನೆ ಮಾಡಿ ಜೂನ್ ಒಳಗೆ ಪೋಸ್ಟ್ ಗ್ರಾಜುಯೇಟ್ ಸೆಂಟರನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನೊಂದು ವಿಷಯ, ಸುಮಾರು ೨ ವರ್ಷಗಳ ಹಿಂದೆ ಖಾಸಗೀ ಕಾಲೇಜುಗಳು ೧೪–೧೫ ಪ್ರಾರಂಭವಾಗಿವೆ, ಅವುಗಳಿಗೆ ಇನ್ನೂ ಗ್ರಾಂಟ್ ಕೊಟ್ಟಿಲ್ಲ. ಸರ್ಕಾರದವರು ಖಾಸಗೀ ರಂಗದಲ್ಲಿ ಬಹಳ ಪ್ರೋತ್ಸಾಹ ಮಾಡುತ್ತಿದ್ದಾರೆ. ಖಾಸಗೀ ರಂಗದವರು ವಿದ್ಯೆಯಲ್ಲಿ ಬಹಳ ಮಹತ್ವವಾದಂಥ ಪಾತ್ರವನ್ನು ವಹಿಸಿ ಶಿಕ್ಷಣ ಮಟ್ಟ ಏರಬೇಕೆಂದು ಅನೇಕ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೂ ಇದುವರೆಗೆ ಅಂತಹವರಿಗೆ ಗ್ರಾಂಟ್ ಇನ್–ಏಡ್ ಕೊಟ್ಟಿಲ್ಲ. ಅವರಿಗೆ ಬಹಳ ಕಷ್ಟವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರವರು ಒಂದು ನಿರ್ಣಯವನ್ನು ತೆಗೆದುಕೊಂಡು ಅವರಿಗೆ ಗ್ರಾಂಟ್ ಕೊಡಬೇಕೆಂದು ಹೇಳಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ)–ಅಧ್ಯಕ್ಷರೇ, ಈ ದಿವಸ ಸರ್ಕಾರದವರು ವಿದ್ಯಾಭ್ಯಾಸದ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ನಾನು ವಿರೋಧಿಸುತ್ತೇನೆ. ಪ್ರತಿ ವರ್ಷದಲ್ಲಿಯೂ ಕೂಡ ವಿದ್ಯಾಭ್ಯಾಸಕ್ಕೆ ಸಾಕಷ್ಟು ಜಾಸ್ತಿಯಾಗಿ ಮೊಬಲಗನ್ನು ಒದಗಿಸುತ್ತಿದ್ದರೂ ಹೋದ ವರ್ಷ ೪೪ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, ಈ ವರ್ಷ ೫೪ ಕೋಟಿ ರೂಪಾಯಿಗಳಿಗೆ ಹೋಗಿದೆ. ಆದರೆ ಅದೇ ರೀತಿಯಲ್ಲಿ ಪರೀಕ್ಷಾ ಫಲತಾಂಶವನ್ನು ನೋಡುತ್ತಾ ಹೋದರೆ ಅದು ಈಗ ಇಳಿಮುಖ ವಾಗುತ್ತಿದೆ. ಹಣವನ್ನು ಎಷ್ಟು ಜಾಸ್ತಿಯಾಗಿ ಖರ್ಚು ಮಾಡಬೇಕೋ ಅಷ್ಟು ಮಾಡುತ್ತಿದ್ದರೂ ಫಲಿತಾಂಶವೇನೋ ಪ್ರತಿ ವರ್ಷವು ಇಳಿಮುಖವಾಗುತ್ತಿದ್ದರೂ ಎಂದು ನಾನು ವ್ಯಥೆಯಿಂದ ಹೇಳಬೇಕಾಗಿದೆ ಈಗಿರತಕ್ಕ ಪರಿಸ್ಥಿತಿಯಲ್ಲಿ ಅಡ್ಮಿನಿಸ್ಟ್ರೇಟಿವ್ ವಿಷಯವನ್ನು ತೆಗೆದುಕೊಂಡು ಮಾತನಾಡಿದರೆ ಬಹುಶಃ ಯಾವ ಕಾಲದಲ್ಲಿಯೂ ಕೂಡ ಈ ವಿದ್ಯಾಭ್ಯಾಸ ಇಲಾಖೆ ಈ ಮಟ್ಟಕ್ಕೆ ಇಳಿದು ಹೋಗುತ್ತದೆಂದು ಯಾರೂ ಕೂಡ ಭಾವಿಸಿರಲಿಲ್ಲ. ಇವತ್ತು ಮೊಟ್ಟ ಮೊದಲನೆಯದಾಗಿ ಪ್ರೈಮರಿ ಸ್ಕೂಲುಗಳನ್ನು ತೆಗೆದುಕೊಂಡು ವಿಚಾರ ಮಾಡೋಣ. ಇವತ್ತು ನಮ್ಮ ಸರ್ಕಾರದ ಆಶ್ರಯದಲ್ಲಿರತಕ್ಕ ದೊಡ್ಡ ದೊಡ್ಡ ಕಾಲೇಜುಗಳಲ್ಲಿ ಕಾಲೇಜು ಡೇ ಮಾಡುವುದು ಅಲ್ಲಿ ಇತರ ಫಂಕ್ಷನ್‌ಗಳನ್ನು ಮಾಡುವುದು ಮಂತ್ರಿಗಳನ್ನು ಕರೆಯುವುದು

(ಶ್ರೀ ಕೆ. ಎನ್. ವೀರಪ್ಪ ಗೌಡ)

ಇವೆಲ್ಲವು ನಡೆಯುತ್ತಿವೆ. ಅಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರತಕ್ಕ ವಿದ್ಯಾರ್ಥಿಗಳು, ಪ್ರೊಫೆಸರುಗಳು, ಅವರು ಅಂಥಾದ್ದಕ್ಕೆ ಏನೇನು ಮಾಡಬೇಕು, ಕಟ್ಟುವುದಕ್ಕೆ ಎಷ್ಟು ಕೋಟಿ ರೂಪಾಯಿಗಳ ಒಂದು ಕಟ್ಟಡವನ್ನು ಕಟ್ಟಬೇಕು ಎಂದು ಯೋಚಿಸಿ ಕೊನೆಗೆ ಫೌಂಡೇಷನ್ ಇಲ್ಲದೇ ಇರುವ ಕಟ್ಟಡಗಳನ್ನು ಹೋಗುತ್ತಿದ್ದಾರೆ. ಫೌಂಡೇಷನ್ ಇರುವ ಕಡೆ ಹೋಗುವುದಿಲ್ಲ. ಎಷ್ಟೋ ಪ್ರೈಮರಿ ಸ್ಕೂಲುಗಳಲ್ಲಿ ಮಾಸ್ಟರುಗಳೇ ಇರುವುದಿಲ್ಲ. ಶಾಲೆಗಳಿಗೆ ಬೀಗ ಹಾಕಿರುತ್ತಾರೆ. ಆಗ ಹುಡಗರ ಪರಿಸ್ಥಿತಿ ಏನು ಎಂಬುದಾಗಿ ಅನೇಕ ಸಾರಿ ಪ್ರಶ್ನೆಗಳನ್ನು ಕೇಳಿದರೂ ಇವರಿಗೆ ಅದರ ಬಗ್ಗೆ ಉತ್ತರ ಕೊಡಲು ಯಾವ ಇಲ್ಲಾಖೆಯನ್ನು ಹುಡಕಬೇಕೋ ಗೊತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಇವತ್ತು ಆಡಳಿತ ನಡೆಯುತ್ತಿದೆಯೆಂದು ಹೇಳಿದರೆ ನಾವು ನಿಜವಾಗಿ ವ್ಯಥೆಪಡಬೇಕಾಗಿದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅನೇಕ ಶಾಲೆಗಳಲ್ಲಿ ಮಾಸ್ಟರುಗಳು ಇಲ್ಲ. ಯಾವುದೋ ಒಂದು ಕೇಸು ಹೈಕೋರ್ಟಿಗೆ ಬಂದು ಸ್ಟೇ ಆರ್ಡರ್ ಆಗಿ ಅದು ಈಗ ವೆಕೇಟ್ ಆಗಿರಬೇಕು. ಅದನ್ನು ಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ಸೆಕ್ರೆಟರಿಗಳಿಗೂ ಹೇಳಿದ್ದೇನೆ. ಬಹುಶಃ ಎರಡು ವರ್ಷಗಳು ಆಗಿವೆ. ಹೊಸದಾಗಿ ಮಾಸ್ಟರುಗಳನ್ನು ನೇಮಕ ಮಾಡುತ್ತಲೂ ಇಲ್ಲ. ಎರಡು ವರ್ಷಗಳಿಂದಲೂ ಅವರನ್ನು ಟ್ರೈನಿಂಗಿಗೆ ಕಳುಹಿಸುವುದೇ ಆಗಿವೆ. ಅದನ್ನು ನಿಲ್ಲಿಸಿಯೂ ಇಲ್ಲ. ಈ ಪದ್ಧತಿಯನ್ನು ಮುಂದುವರಿ-ಯುವಂತೆ ಮಾಡಿದರೆ ಆಡಳಿತ ದೃಷ್ಟಿಯಲ್ಲಿ ವಿಮರ್ಶೆ ಸರಿಯಾಗಿ ಮಾಡಿದ್ದಾರೆಂದು ಹೇಳುವುದಕ್ಕೆ ಅವಕಾಶವಿಲ್ಲ. ಟ್ರೈನಿಂಗ್ ಗೋಸ್ಕರ ಅವರನ್ನು ಕಳುಹಿಸುವುದನ್ನು ನಿಲ್ಲಿಸಬೇಕು ಚಿಕ್ಕಮಗಳೂರಿನಲ್ಲಿ ಆಗಿರುವ ತೊಂದರೆಗಳನ್ನು ಹೇಳುವುದಕ್ಕಾಗುವುದಿಲ್ಲ ಅದನ್ನು ಅನೇಕ ಬಾರಿ ಮಂತ್ರಿಗಳಗಮನಕ್ಕೆ ತಂದಿದ್ದೇನೆ. ಇತ್ತೀಚೆಗೆ ಅಲ್ಲಿಗೆ ಒಬ್ಬ ಡಿ. ಡಿ. ಪಿ. ಐ. ಬಂದಾಗ್ಗ ಸ್ಕೂಲ್ ರೇಂಜ್ ಇನ್‌ಸ್ಪೆಕ್ಟರ್ ಅವರಿಗೆ ಅಲ್ಲಿ ನೇಮಕಕ್ಕೆ ಅವಕಾಶ ಕೊಟ್ಟರೂ ಹೈಕೋರ್ಟಿನವರು ಡಿ. ಇ. ಓ ಅವರು ನೇಮಕ ಮಾಡಬಾರದೆಂದು ಹೇಳಿದ್ದಾರೆ. ಈಗ ಪರೀಕ್ಷೆ ಕಾಲ ಹೋದ ತಿಂಗಳು ಜನವರಿ ೩೧ನೇ ತಾರೀಖಿಗೆ ಅವರನ್ನು ಮನೆಗೆ ಕಳುಹಿಸಿದರು. ಪರೀಕ್ಷೆ ಕಾಲದಲ್ಲಿ ಹುಡುಗರಿಗೆ ಪಾಠ ಹೇಳಲು ಮಾಸ್ಟರುಗಳಿಲ್ಲ. ಡೆಪ್ಯೂಟಿ ಮಿನಿಸ್ಟರ್ ಅವರಿಂದ ಉತ್ತರ ಬಂತು. ಅವರು ಮನೆಗೆ ಹೊರಟು ಹೋದರು ಎಂದು. ಆದ್ದರಿಂದ ಇವರಿಗೆ ಬಾವಿ ಜನಾಂಗವನ್ನು ಬೆಳಸುವ ಫೌಂಡೇಷನ್ ಇದೆಯೇ ? ಇದನ್ನು ನಾವು ಈಗಲೇ ಸರಿಪಡಿಸುವುದಕ್ಕೆ ಅವಕಾಶವನ್ನು ಮಾಡಿಕೊಳ್ಳದೇ ಹೋದರೆ ಇನ್ನು ನಾವು ಮಾಡುವ ಕಾರ್ಯವೇನು ? ಮೊಟ್ಟ ಮೊದಲನೆಯ ದಾಗಿ ನಾವು ತಿಳಿದುಕೊಂಡಿರುವ ಹಾಗೆ ಲಂಚ ಎನ್ನುವುದು ಎಜುಕೇಷನ್ ಡಿಪಾರ್ಟ್‌ಮೆಂಟನಲ್ಲಿ ಆಗುವುದಕ್ಕೆ ಅವಕಾಶವಿಲ್ಲವೆಂದು ಎಲ್ಲರೂ ಸ್ವಾಭಾವಿಕವಾಗಿ ತಿಳಿದುಕೊಂಡಿದ್ದರು. ಈಚೆಗೆ ಅಲ್ಲಿರುವಷ್ಟು ಲಂಚ ಇನ್ನೆಲ್ಲಯೂ ಇಲ್ಲವೆಂದು ಹೇಳುವುದಕ್ಕೆ ಬಹಳ ವ್ಯಥೆ ಯಾಗುತ್ತದೆ. ಮಾನ್ಯ ಶ್ರೀ ರುದ್ರಪ್ಪನವರು ಹೇಳಿದ ಹಾಗೆ ಯಾರಾದರೂ ಉಪಾಧ್ಯಾಯರು ಒಂದು ಕಡೆ ನೇಮಕವಾದರೆ ೧೦-೧೫ ವರ್ಷಗಳವರೆಗೂ ಒಂದೇ ಕಡೆ ಇರಿಸುತ್ತಾರೆ ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆಗೆ ಬರೆದರೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದೇ ಇಲ್ಲ. ಒಂದು ಕಡೆ ಇಷ್ಟೇ ವರ್ಷಗಳು ಇರಬೇಕೆಂದು ಒಂದು ನಿಗದಿ ಇಲ್ಲ. ಎಲ್ಲಿ ನೇಮಕವಾಗುತ್ತಾರೋ ಅಲ್ಲಿಯೇ ರಿಟೈರ್ ಆಗುವಂಥ ಸನ್ನಿವೇಶಗಳು ಅನೇಕ ಇವೆ ಇದರಲ್ಲಿ ಒಂದು ಕಡ್ಡಾಯವಾದ ರೀತಿ, ನೀತಿ, ನಿಯಮ ಏನೂ ಇಲ್ಲ. ಮಾದರಿಗಾಗಿ ಹೇಳುವುದಾದರೆ ಶಮಃ ಎಂಬ ಊರಿನಲ್ಲಿ ತಮ್ಮಯ್ಯಗೌಡ ಎಂಬ ಒಬ್ಬ ಉಪಾಧ್ಯಾಯರು ೧೭ ವರ್ಷಗಳಿಂದ ಅಲ್ಲಿಯೇ ಒಂದು ಮೈಲಿ ಆ ಕಡೆ, ಈ ಕಡೆಯಲ್ಲಿದ್ದಾರೆ ಇನ್ನು ಕೆಲವು ಕಡೆಗಳಲ್ಲಿ ಅನೇಕ ಜನ ಉಪಾಧ್ಯಾಯರು ಸರ್ಕಾರದವರು ಕಟ್ಟಿಸಿದ ಬಿಲ್ಡಿಂಗನ್ನು ಬಾಡಿಗೆಗೆ ಕೊಟ್ಟು ಅವರ ಸ್ವಂತ ಊರಿನಲ್ಲಿಯೇ ವಾಸವಿದ್ದು ಅಲ್ಲಿ ಉಪಾಧ್ಯಾಯರಾಗಿದ್ದು ಕೊಂಡಿರುತ್ತಾರೆ.

ಇನ್ನೊಂದು ವಿಷಯ. ನನಗೆ ತಿಳಿದಿರುವ ಹಾಗೆ ಇವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸನಲ್ಲಿ ಒಂದು ರಜ ಮಂಜೂರು ಮಾಡಬೇಕಾದರೆ ೨ ರೂಪಾಯಿಗಳಷ್ಟು ಲಂಚ ತೆಗೆದುಕೊಳ್ಳುತ್ತಾರೆ ಮಂತ್ರಿಗಳ ಆಫೀಸಿನಲ್ಲಿಯೇ ಕೆಲಸ ಮಾಡುವವರಿಂದ ಎರಡೆರಷ್ಟು ರೂಪಾಯಿಗಳನ್ನು ಲಂಚ ತೆಗೆದುಕೊಂಡು ಕೆಲಸ ಮಾಡಿಕೊಡುತ್ತಾರೆ. ಅವರ ಸರ್ವಿಸ್ ರಿಜಿಸ್ಟರುಗಳೇ ಇರುವುದಿಲ್ಲ. ಎಷ್ಟೋ ರಿಕಾರ್ಡ್‌ಗಳನ್ನು ತೆಗೆದು ಬಿಸಾಡಿದ್ದಾರೆ. ಆದರೂ ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಆ ಇಲಾಖೆಗಳಲ್ಲಿ ಫೈಲುಗಳೇ ಎಷ್ಟೋ ಇರುವುದಿಲ್ಲ. ಆದ್ದರಿಂದ ಇಂತಹ ಪ್ರಾಮುಖ್ಯವಾದ ಇಲಾಖೆಯ ಬಗ್ಗೆ ಮಂತ್ರಿಗಳು ಸಾಧ್ಯವಾದಷ್ಟು ಮೇಲ್ವಿಚಾರಣೆ ನಡೆಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಇವತ್ತು ನಮ್ಮಲ್ಲಿ ತಾಲ್ಲೂಕು ಬೋರ್ಡ್ ಹೈಸ್ಕೂಲುಗಳಿವೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ಒಂದು ರಿಟ್ ಹಾಕಿದರೆ, ಬದಲಾವಣೆ ಮಾಡಲು ಡಿ. ಪಿ. ಐ. ಗೆ ಅವಕಾಶವಿಲ್ಲ, ಅದನ್ನು ಮಾಡಕೂಡದು ಎಂದು ಹೇಳಿದರು. ಇದರ ಬಗ್ಗೆ 'ಏನಾದರೂ ಕಾನೂನನ್ನೇ ಬದಲಾವಣೆ ಮಾಡಬೇಕೋ ಅಥವಾ 'ಏನು ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಲಿಲ್ಲ

ಒಂದು ವೇಳೆ ತಾಲ್ಲೂಕು ಬೋರ್ಡಿನವರು ಯಾರಾದರೂ ಒಬ್ಬರನು ನೇಮಕ ಮಾಡಿಕೊಂಡರೆ ಅವರು ನೇಮಕವಾಗಿ ಅಲ್ಲಿಯೇ ರಿಟೈರ್ ಆಗಬೇಕು, ಇಲ್ಲದಿದ್ದರೆ, ಆ ಜಾಗ ಖಾಲಿ ಆಯಿತೆಂದು ನಾವು ತಿಳಿದುಕೊಳ್ಳಬೇಕು ಅವರು ಕೇವಲ ಅಸಿಸ್ಟೇಟ್ ಮಾಸ್ಟರ್ ಆಗಿ ಅಲ್ಲಿಯೇ ಇರುವುದಕ್ಕೆ ಒಂದು ಸನ್ನಿವೇಶ ಒದಗಿದರೆ ಹೇಗೆ ? ಅವರು ೮-೧೦ ವರ್ಷಗಳಾದರೂ ಅಲ್ಲಿಯೇ ಇರಬೇಕಾಗುತ್ತೆ, ಈ ಬಗ್ಗೆ 'ಏನಾದರೂ ಒಂದು ಕ್ರಮವನ್ನು ಕಂಡುಹಿಡಿಯಬೇಕು, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಇನ್ನು ಸ್ಕೂಲುಗಳನ್ನು ಕೊಡತಕ್ಕ ವಿಷಯ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಒಂದು ಕಡೆ ಎರಡು ಫರ್ಲಾಂಗಿಗೆ ಒಂದೊಂದು ಪ್ರೈಮರಿ ಸ್ಕೂಲು ಇದೆ. ತಾಲ್ಲೂಕು ಬೋರ್ಡಿನವರು ರೆಸಲ್ಯೂಷನ್ ಮಾಡಿ ಸ್ಕೂಲುಗಳನ್ನು ಕೊಡುವುದು ಸರಿ. ಈ ರೀತಿ ಮಾಡಿದರೆ ಸರಕಾರ ಎಲ್ಲಿಂದ ಹಣ ಕೊಡಬೇಕು, ಯಾರು ದುಡ್ಡು ಕೊಡುತ್ತಾರೆ ಎಂದರೆ ರೈತರು ತಾನೇ ? ನಂತರ ನಮ್ಮ ತಾಲ್ಲೂಕು ಬೋರ್ಡಿನವರು ತೀರ್ಮಾನಮಾಡಿ ಕಳುಹಿಸಿದರೆ ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಒಂದು ದೊಡ್ಡ ರಾಜಕೀಯವನ್ನೇ ನಡೆಸಿದರು. ಅಧಿಕಾರಿಗಳು ಅರೇಹಳ್ಳಿಕ್ಕೆ ಎರಡು ಮೈಲಿ ಸುತ್ತ ಮುತ್ತ ಸ್ಕೂಲು ಇಲ್ಲದೇ ಇದ್ದರೂ ಅಲ್ಲಿಗೆ ಒಂದು ಸ್ಕೂಲು ಕೊಡುವುದಕ್ಕೆ ಅಧಿಕಾರಿಗಳು ಒಪ್ಪಲಿಲ್ಲ. ಈಗ ಒಂದು ಕಡೆ ಎರಡು ಫರ್ಲಾಂಗಿಗೆ ಒಂದು ಸ್ಕೂಲು ಕೊಡುವುದು ಇನ್ನೊಂದು ಕಡೆ ಎರಡು ಮೈಲಿ ದೂರ ಇದ್ದರೂ ಸ್ಕೂಲುಕೊಡದೆ ಇರುವುದು ಈ ರೀತಿ ಅಡಮಿನಿಸ್ಟ್ರೇಷನ್ ನಡೆಸಿಕೊಂಡು ಹೋದರೆ ಎಲ್ಲಿಯವರೆಗೆ ಹೀಗೆ ಬಿಡುವುದಕ್ಕೆ ಸಾಧ್ಯ ? ದಯಂವಿಟ್ಟು ಮಂತ್ರಿಗಳು ಇದನ್ನು ಯೋಚನೆ ಮಾಡಬೇಕು. ಈವೊತ್ತು ತಾಲ್ಲೂಕು ಬೋರ್ಡಿಗೆ ಸ್ಕೂಲು ಬಿಲ್ಡಿಂಗ್ ಕಟ್ಟುವುದಕ್ಕೆ ದುಡ್ಡು ಕೊಡುತ್ತಿದ್ದಾರೆ. ವಾರ್ಷಿಕ ರಿಪೇರಿಗೆ ಸರಕಾರದಿಂದ ದುಡ್ಡು ಕೊಡುತ್ತಿದ್ದಾರೆ. ಈಚೆಗೆ ಇದ್ದಕ್ಕಿದ್ದಹಾಗೆ ಈ ವರ್ಷದ ಡಿ. ಸಿ. ಯವರು ಒಂದು ಆರ್ಡರ್ ಕೊಟ್ಟು ತಾಲ್ಲೂಕ್ ಬೋರ್ಡ್ ಶೇ. ೨೫ರಷ್ಟು ಪಂಚಾಯಿತಿಯವರು ಶೇಕಡಾ ೨೫ ರಷ್ಟು ಮತ್ತು ಸರಕಾರದವರು ಶೇಕಡಾ ೫೦ರಷ್ಟು ಹೀಗೆ ಹಾಕಬೇಕೆಂದು ಮಾಡಿದ್ದಾರೆ. ಹೀಗಾಗಿ ಸ್ಕೂಲು ಕಟ್ಟಡದ ರಿಪೇರಿ ನಿಂತು ಹೋಗಿ ಸರಕಾರದವರು ಇದಕ್ಕಾಗಿ ಕೊಟ್ಟಿದ್ದ ಹಣ ಅವರಿಗೆ ವಾಪಸ್ಸು ಬರುತ್ತಿದೆ. ಈ ರೀತಿ ಮಾಡುವುದು ಸರಿಯಾದದ್ದು ಅಲ್ಲ. ಹಾಲಮತ್ತೂರು ಊರಿನಲ್ಲಿ ಒಬ್ಬರು ಉಪಾಧ್ಯಾಯರು ರಾಜೀನಾಮೆ ಕೊಟ್ಟು ಎರಡು ವರ್ಷಗಳಾದರೂ ಕೂಡ ಮಂಜೂರಾತಿ ಕಳುಹಿಸಿ ಕೊಟ್ಟಿಲ್ಲ. ಅವರಿಗೆ ಇನ್ಷೂರೆನ್ಸ್ ಪಾಲಸಿಯಿಂದ ತೊಂದರೆ ಆಗಿದೆ. ಕೆಲವರು ಪೆನ್ಷನ್, ವಿಚಾರ ತಮ್ಮ ನೋಟೀಸಿಗೆ ತಂದಿದ್ದಾರೆ. ಅವರು ಅಪ್ಲಿಕೇಷನ್ ಕೊಟ್ಟು ಎರಡು ಮೂರು ವರ್ಷಗಳಾದರೂ ಅವರ ರೆಕಾರ್ಡ್ ಫೈಸಲಾಗಿಲ್ಲ. ಬಡ ಉಪಾಧ್ಯಾಯರ ರೆಕಾರ್ಡ್‌ನ್ನು ಬೇಗನೆ ಫೈಸಲ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇನ್ನು ಸ್ಕೂಲ್ ಟೀಚರ್ಸ್‌ಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಅವರು ಅಲ್ಲಿಯೇ ವಾಸಮಾಡುತ್ತಾರೆ. ಇಲ್ಲದಿದ್ದರೆ ಉಪಾಧ್ಯಾಯರಿಗೆ ಹೊರಗಡೆ ವಾಸಿಸಲು ಅನುಕೂಲವಾಗುವುದಿಲ್ಲ. ಆದುದರಿಂದ ಅವರ ಕಡೆ ತೀವ್ರ ಗಮನ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

SRI M. S. KRISHNAN (Malleswaram) :— Mr. Speaker. Sir, I am rising to oppose the demand for Education of about Rs. 53 crores. It is very well known to all of us that education is very important and vital subject. On that depends the nation's progress itself. It is also told by educationists as well as economists all the world over and those who get education that it is not merely a question of education, but it is a question of developing the economy of the country. If the economy of the country has to be developed, education has to increase. Similarly, if education is to develop, the economy of the country has also to develop. These are two interlinked subjects which have been accepted by the famous educationists as well as economists and politicians in this country. As you very well know, the Kothari Commission's recommendations were published. We have been hearing quite a lot of it earlier. In fact, when the recommendations themselves came to be published, quite a lot was spoken about the recommendations. It was also told by the Hon.

(SRI M. S. KRISHNAN).

Minister for Education that the number of recommendations that could be implemented would be examined and they would also see to it that all of them are implemented or at least quite a majority of them are implemented. I do not know how many of these recommendations are implemented now. But I can only say this much that in recent days we do not hear anything about the Kothari Commission's recommendations. Not much is being spoken about them either by the Education Minister or the Deputy Minister for Education. So I am getting a suspicion that they are trying to water them down. I think they will be doing the greatest harm to the cause of education in our country. So I wish to say once again that the recommendations contained in this report are very vital in the interests of the country and it is only by the implementation of those recommendations that our country can progress.

In this connection I would also bring to your notice two things. Our country is lagging behind many other countries in respect of education. I have quite a number of interesting points and facts in regard to education to show how we are lagging behind. I would like to tell you at this juncture how Japan has progressed in the matter of education. Whenever I speak, I am asked to quote about the Soviet Union, but I do not wish to quote the instance of Soviet Union here. On the contrary, I would like to show how Japan has progressed in a very short time.

> "As is well known, Japan during the post-second world war period has achieved an extremely high rate of economic growth of nearly 10% yearly rise in its Gross National Product. This is regarded as almost a miracle. Within a generation Japan has transformed its economy from an underdeveloped to a developed level. It has increased its per capita G. N. P. from less than 100 Dollars to above 800 Dollars, more than sevenfold increase in less than 20 years. Many think that the special attention paid to technical and general education has been a very important factor in this transformation."

This is the point that I would like to refer from the report of Kothari Commission itself.

In this connection I would like to refer to development made by China in the words of a Japanese scholar G. Uchida :

> "Mr. G. Uchida, an eminent Japanese scholar of Chinese development has observed that China with its stress on technology and industrialisation, could in 10 to 15 years attain a per capita income of 600 Dollars The

> Chinese explosion of a thermo-nuclear device is a technological feat of a very high order; and the synthesis of insulation provides example of a regular pace of industrial work. The lesson and significance of all this for the developing world is apparent."

This is what has been said not by me but by Mr. Kothari himself in his report and so I am bringing it to your notice for implementation of the recommendations of the Kothari Commission.

One outstanding feature of our progress in education is that the number of pupils has increased tremendously in the elementary and higher secondary stage, but the teacher-student ratio has not made much progress.

The teacher-student ratio stands like this :

Primary education	...	1 : 40
Elementary	...	1 : 23
Higher Education	...	1 : 27
Commerce Education	...	1 : 40

Though there has been some quantitative increase, there has not been any qualitative improvement. What we would like to have much is qualitative improvement and not so much quantitative improvement. In this connection I would like to bring to your notice two or three points from the report of the Kothari Commission.

The percentage of passes has been reduced. In the S. S. L. C. the percentage of passes is only 38.

Coming to primary education, on page 5 of the Report it has been stated that the return on primary education has not been sufficient and useful and that ways and means should be found to increase it. If a qualitative change is to take place, it depends upon the teaching staff. The teaching staff has been absolutely poor Various schemes have been suggested for improving the teaching staff but I must say that teaching is an art by itself. Now what happens is that anybody who passes the S. S. L. C. or graduates who have no aptitude for teaching go in for the teaching profession. It is not like circus training. In the case of teachers that kind of training is not enough. It must be specialised and oriented with regard to the social objectives. I am sorry to say that in this connection not much has been done.

You have been having T. C. H. S. and T L H. S. They have become commercial rackets. One Mr. Jon who has written a very good article has said that these are just commercial rackets by which people make lot of money, particularly those which are run by private institutions. I have got a letter fr m a friend of mine that Rs. 300 are taken for teachers' training in an institution in Frazer Town. On the quality of teaching depends the development of educa-

(SRI M. S. KRISHNAN)

tion in our country and so more attention should be paid to this particular aspect. I would suggest that this responsibility should not be entrusted to private institutions and that Government themselves should take the responsibility of training teachers in a proper manner. The Government may say that they have no money. I would therefore suggest that they should lay down priorities. Priorty may not be given to the addition of a class room. The most important thing is the training of teachers and Government themselves should undertake this responsibility.

Another thing I want to touch upon is the grant-in-aid code. It is good you have got it and it is also good that hundred percent maintenance grant is given. But does it cover the pay of peons and clerks? It does not. Five percent is supposed to be given for furniture, peons, clerks, etc. How is it possible to pay the rent and also for furniture and pay of peon, clerk and so on within this meagre amount? It is impossible to do so. This will only give room for all sorts of malpractices. On the one hand you introduce the cheque system while on the other hand by not giving proper grant for maintenance you see that malpractices are increased in the educational system. Either nationalise the entire system or see that full grant is given for this purpose. Even Mr. Tukol has mentioned how it has become commercialised.

Coming to text-books, last time I pointed out from one text book certain mistakes. I do not wish to repeat them but I want to read one particular passage form a text-book prescribed for Standard X.

"At seventeen minutes and thirty-six seconds past 6 a. m. Greenwich meantime, on June 2, 1966, an uncanny looking man-made object over ten feet tall, landed gently on the surface of the moon and proceeded to write a brilliant new chapter in spaceage history. The object was Surveyor-I, bnilt and launched under the auspices of the U. S, Aeronautics and Space Administration with Caltech Jet Propulsion Laboratory as project manager."

An body who knows history and space history will not accept this; Please verify whether it is the American Surveyor-I or Lunar-I which landed on the moon first. Let there be historical accuracy at least.

With these words, I conclude my speech.

ಶ್ರೀ ಕೆ. ಎಂ. ದಾಸನಕೊಪ್ :—(ಧಾರವಾಡ) ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ನಾನು ಈ ಎಜ್ಯುಕೇಷನ್ ಡಿಮ್ಯಾಂಡನ್ನು ಸಮರ್ಥಿಸಿ ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ಮೊಟ್ಟ ಮೊದಲನೆಯದಾಗಿ ಪ್ರಾಥಮಿಕ ಶಿಕ್ಷಣ ನಮ್ಮ ರಾಜ್ಯದೊಳಗೆ ಬಹಳ ಕೆಳಮಟ್ಟಕ್ಕೆ ಬಂದಿದೆ. ಗ್ರಾಮಾಂತರ ಶಾಲೆಗಳಲ್ಲಿ ಎಲ್ಲೆಲ್ಲಿ ನೋಡಲಿ ಹುಡುಗರು ಇಲ್ಲದೆ ಮತ್ತು ಮಾಸ್ತರು ಇಲ್ಲದೆ ಶಾಲೆಗಳು ನಡಯಲಿಕ್ಕೆ ಹತ್ತಿವೆ. ಏಕೆಂದರೆ ಗ್ರಾಮ ಪಂಚಾಯಿತಿಯಾಗಲಿ, ತಾಲ್ಲೂಕು ಲೋಕಲ್ ಬೋರ್ಡ್ ಆಗಲಿ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ತಯಾರಾಗಿಲ್ಲ. ಅಲ್ಲಿ ಕೆಲವು ವೇಳೆ ನಾವು ನೋಡಿದಾಗ ಮಾಸ್ತರು ಜನರು ಇರುವುದಿಲ್ಲ, ಹುಡುಗರು ಇರುವುದಿಲ್ಲ. ನಮ್ಮ ಸರ್ಕಾರದವರು ಪಗಾರ ಮತ್ತು

ಅವರಿಗೆ ಆಗತಕ್ಕ ಖರ್ಚನ್ನು ಕೊಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಬಹಳ ಕೆಟ್ಟ ರೀತಿಯಲ್ಲಿ ಪರಿಣಾಮವಾಗಿದೆ. ಇದು ಮೊಟ್ಟಮೊದಲು ನಮ್ಮ ದೇಶದೊಳಗೆ ಉತ್ತಮ ಸ್ಥಿತಿಗೆ ಬರಬೇಕು. ಪಾಶ್ಚಿಮಾತ್ಯ ದೇಶದೊಳಗೆ ನೋಡಲಿಕ್ಕಾಗಿ ಅವರು ಉಚ್ಚ ತರಗತಿಯ ಶಿಕ್ಷಣ ಕೊಡಲು ಶಿಕ್ಷಕರನ್ನು, ಉಪಾಧ್ಯಾಯರನ್ನು ನೇಮಕ ಮಾಡುತ್ತಾರೆ. ನಮ್ಮ ದೇಶದೊಳಗೆ ಟ್ರೈನಿಂಗ್ ಇಲ್ಲದ ಜನರನ್ನು ಶಿಕ್ಷಕರನ್ನಾಗಿ ನೇಮಕ ಮಾಡಿ ಶಿಕ್ಷಣ ಮಟ್ಟ ಕೆಳಗೆ ಬರಲಿಕ್ಕೆ ಹತ್ತಿದೆ, ಆದ್ದರಿಂದ ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಹಚ್ಚಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಮಂತ್ರಿಗಳಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ಕೆಲವು ಹಳ್ಳಿಗಳೊಳಗೆ ಶಿಕ್ಷಕರಿಗೆ ಮನೆಗಳು ಇಲ್ಲ. ಬೇರೆ ಜಾತಿಯವರು ಹೋದರೆ ಮನೆಗಳು ಸಿಕ್ಕುತ್ತವೆ. ಹರಿಜನರಿಗೆ ಮನೆಗಳು ಸಿಕ್ಕುವುದು ಬಹಳ ಕಠಿಣವಾಗಿದೆ- ಹೌಸಿಂಗ್ ಬೋರ್ಡಿನವರಾಗಲಿ ಅಥವಾ ಇತರ ನೌಕರರಿಗೆ ಯಾವ ಪ್ರಕಾರ ಮನೆಗಳನ್ನು ಕಟ್ಟಿಸಿದ್ದೀರೋ ಅದೇ ಪ್ರಕಾರ ಗ್ರಾಮಾಂತರದೊಳಗೆ ಇರತಕ್ಕ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಹುಡುಗರ ಶಿಕ್ಷಣವನ್ನು ಮುಂದುವರಿಸಬೇಕೆಂದು ಬಿನ್ನೈಸುತ್ತೇನೆ.

ಇನ್ನೊಂದು ಕೂಗು ಇದೆ, ಧಾರವಾಡ ಜಿಲ್ಲೆಯಲ್ಲಿ ಒಂದೊಂದು ಕಡೆ ಮಾಸ್ತರರು ಕೆಲವು ಜನರು ೧೦ ವರ್ಷದವರೆಗೂ ಅಲ್ಲೇ ಇದ್ದಾರೆ. ನನಗೆ ತಿಳಿದ ಮಟ್ಟಿಗೆ ಒಬ್ಬೊಬ್ಬ ಮಾಸ್ತರು ೨೦ ವರ್ಷದಿಂದ ಇದ್ದಾರೆ ಅವರಿಗೆ ಟ್ರಾನ್ಸ್‌ಫರ್ ಆಗಿಲ್ಲ. ಇಂತಹ ಕೆಲವು ಉದ:ಹರಣೆಗಳನ್ನು ಕೊಡಬಹುದು. ಅಲ್ಲಿ ಅವರು ವ್ಯಾಪಾರ, ಬೇರೆ ಉದ್ಯೋಗಗಳನ್ನು ಮಾಡಿಕೊಳ್ಳುತ್ತಾರೆ, ಕಾಲ ಕಳೆಯುತ್ತಾರೆ. ಶಿಕ್ಷಣದ ಕಡೆಗೆ ಧ್ಯಾನ ಕೊಡುವುದಿಲ್ಲ ಎಂದು ಹೇಳಬಯಸುತ್ತೇನೆ. ಮತ್ತೊಂದು ಮಾತು. ನಮ್ಮ ಗಂಡುಮಕ್ಕಳ ಉರ್ದು ಟ್ರೈನಿಂಗ್ ಕಾಲೇಜಿನ ಸಲುವಾ। ಹೇಳಬೇಕಾದರೆ ಅದನ್ನು ಧಾರವಾಡದಿಂದ ಬಿಜಾಪುರಕ್ಕೆ ವರ್ಗ ಮಾಡಲಾಗಿದೆ. ಬಿಜಾಪುರದಲ್ಲಿ ಈ ಕಾಲೇಜಿನ ಸಲುವಾಗಿ ಪ್ರತ್ಯೇಕ ಸ್ಟಾಫ್ ಇಲ್ಲ, ಪ್ರಿನ್ಸಿಪಾಲ್ ಇಲ್ಲ ಮತ್ತು ಶಿಕ್ಷಕರಿಗೆ ಪ್ರತ್ಯೇಕ ಹಾಸ್ಟೆಲಿಲ್ಲ. ಅವರಿಗೆ ಒಂದು ಜೋಪಡಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದ ಬಹಳ ತೊಂದರೆಯಾಗಿದೆ. ಉರ್ದು ಟ್ರೈನಿಂಗ್ ಕಾಲೇಜಿಗೆ ಮತ್ತು ಶಿಕ್ಷಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಇದೇ ಪ್ರಕಾರ ಧಾರವಾಡ ಹೆಣ್ಣುಮಕ್ಕಳ ಉರ್ದು ಟ್ರೈನಿಂಗ್ ಕಾಲೇಜಿನಲ್ಲಿ ಸೆಪರೇಟ್ ಪ್ರಿನ್ಸಿಪಾಲ್ ಇಲ್ಲ, ಅಲ್ಲಿ ಹೆಚ್ಚು ಸೌಕರ್ಯ ಕೊಟ್ಟು ಶಿಕ್ಷಣ ಮುಂದುವರೆಸಲು ಅವಕಾಶ ಮಾಡಿಕೊಡಬೇಕು.

ನಮ್ಮ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ನ ಮೇಯರ್ ಮತ್ತು ಕೆಲವು ಸದಸ್ಯರು, ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಇರುವ ಹಾಗೆ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿಗೂ ಒಂದು ಸ್ಕೂಲು ಬೋರ್ಡು ಮಾಡಬೇಕು ಎಂದು ಮಂತ್ರಿಗಳಿಗೆ ಹೇಳಿದರು, ಇದುವರೆಗೂ ಅದು ಆಗಿಲ್ಲ, ತೀವ್ರ ಆಗಬೇಕು.

ಸರಕಾರದವರು ನಮ್ಮ ಕರ್ನಾಟಕದ ೪ ಸ್ಕೂಲು ಬೋರ್ಡುಗಳನ್ನು ರದ್ದುಮಾಡಿ ಜುಲೈ ೬೯ರಲ್ಲಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಆದರೆ ಅಲ್ಲಿರುವ ೭-೮ ಜನ ಪೆನ್‌ಷನ್‌ದಾರರಿಗೆ ಪೆನಷನ್ ಸಿಕ್ಕಿಲ್ಲ, ಅವರು ದಾರಿಯಲ್ಲಿ ಭಿಕ್ಷೆ ಬೇಡಬೇಕಾಗಿದೆ, ಈ ಕಾರಣ ಅವರಿಗೆ ತೀವ್ರವಾಗಿ ಪೆನ್‌ಷನ್ ಬರುವಹಾಗೆ ಮಾಡಬೇಕು. ಈ ಮೊದಲು ೧೯೬೩ರ ಒಳಗೆ ರಿಟೈರ್ ಆದ ಉಪಾಧ್ಯಾಯರಿಗೆ ಪೆನ್‌ಷನ್ ಸಿಕ್ಕಿಲ್ಲ, ಅದನ್ನು ಕೊಡುವಂತೆ ತೀವ್ರ ಆರ್ಡರು ಹೊರಡಿಸಬೇಕು. ಅಲ್ಲದೆ ಕೆಲವರು ಈ ಮೊದಲೇ ೧೯೬೩ರಲ್ಲಿ ರಿಟೈರ್ ಆಗಿರುವವರು ತೀರಿಹೋಗಿದ್ದಾರೆ, ಅವರ ಮನೆಯವರು ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿದ್ದಾರೆ. ಕಾರಣ ಅವರಿಗೆ ತೀವ್ರ ಪೆನ್‌ಷನ್ ಬರುವಹಾಗೆ ಮಾಡಬೇಕು

ನಮ್ಮ ಒಬ್ಬ ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ಶುಕ್ರವಾರ ಉರ್ದು ಶಾಲೆಗೆ ರಜ ಏಕೆ ಕೊಡುವುದು, ಭಾನುವಾರ ಕೊಡಿ ಎಂದು ಹೇಳಿದರು. ಆದರೆ ನಾನು ಹೇಳುವುದು ಉರ್ದು ಶಿಕ್ಷಕರಿಗೆ ಮತ್ತು ಹುಡುಗರಿಗೆ ಶುಕ್ರವಾರ ರಜ ಕೊಡುವುದು ಏಕೆಂದರೆ ಆದಿವಸ ಎಲ್ಲಾ ಶಿಕ್ಷಕರಿಗೂ ಮತ್ತು ಹುಡುಗರಿಗೂ ನಮಾಜು ಮಾಡುವುದಕ್ಕೆ ಅವಕಾಶವಿದೆ, ನೂರಾರು ವರ್ಷಗಳಿಂದ ಇರುವ ಪದ್ಧತಿ ಹಾಗೆಯೇ ಇರಬೇಕು ಎಂದು ಬಿನ್ನವಿಸಿ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇವೆ.

† SRI R. DAYANANDASAGAR (Chamarajapet) :—

Mr. Speaker Sir. The educational system in our State is the very embodiment of confusion. Neither the Minister of Education nor the Heads of the Departments in the Education Department have a very

(SRI R. DAYANANDASAGAR)

clear idea as to how the education system ought to be. Experiments after experiments have been made poor students and innocent students. In the High School, they wanted the students stating the optional subjects. Afterwards, they had a brain-wave and they stated that there should not be any optional subject and they made the subjects compulsory. And this Kind of thing is going on and often.

In the Teachers' Training Institute, they had one years's course and they increased it to two years for reasons best known to themselves. I would think that one year's training is enough for a Teacher teaching in the primary Schools. While one year training is there for Graduate Teachers to teach the students in High Schools, they have now insisted that Teachers teaching in primary Schools should have two years training. All right. Even granting that they are having two years' training, what is the benefit they are going to derive ? The Government is not giving anything very attractive to them by way of salary or increments. The student who is forced to undergo training for two years, would rather go to the University, spend two more years and become a Graduate ; and better his educational status as well as his prospects.

So, this kind of foolhardy thinking and implementing of schemes is more dangerous than doing any good ; as a result of which, to-day no teacher is willing to come to the Teacher Training Institute to get himself trained.

We had two years' Intermediate Course. When I was a student, I underwent two years' training in the University in the Intermediate College. Afterwards, our great educationists reduced the course to one year and called it P. U. C. And now again a brain-wave has come and they want to increase it by one more year and make it two years. I tell you that this kind of experimentation on innocent students is not fair or correct. If by experimenting on a particular policy, the Government had tried to improve the educational system, I would have really appreciated. Instead of that, they are trying to bring in confusion into the educational system.

As a result, there is no good standard of education in the State today. I would question most of the Ministers whether they a e sending their children to the Government Schools. Nobody is sending his children to the Government Schools. because the standard of education in the Government Schools is so bad and so backward and tso hopeless that no right-thinking person would ever venture to send his children to the Government Schools. Now Government is spending crores and crores of rupees on the Education Department. They bring the Demand aud ask us to sanction it. We do not grudge sanctioning it provided they utilise the money for the benefit of the public and even the right-thinking man feels satisfied that his child

is getting the right type of education. Today the Government Schools exist only for the sake of the forlorn and ship-wrecked who cannot afford to send his children to the Convent Schools or any other school where the standard of education is good. It is only his children that go to the Government Schools. Is it for this purpose the Government run these Government Schools, increase their number and spend crores of rupees. I would suggest to the Government to just concentrate their effort and resources on improving the education at the primary level, the High School level and the Pre-University or Intermediate level. How many in the Government who are in charge of the Education Department, think as to how best they can improve the educational system ? I do not think for the last 21 years of Independence anybody has bestowed his thaught to improve the standard of education. In the city of Bangalore I have had occasion to go round my constituency and elsewhere and see the plight of our schools. You can see even high schools accommodated in small buildings ; even in kitchens class rooms are held. So far as play ground is concerned, it is a pathetic sight The children of the city, don't have good playgrounds. After all sound mind and sound body go together. What is the use of sound mind without sound body ? After all. there is no sound mind and you are creating neither sound mind nor sound body in our institutions. You go round the city and see. Except one or two high schools which were started long ago, like the Fort High School and National High School, the children have absolutely no playground whatsoever in the State. I would suggest to the Hon. Education Minister that there are so many vacant lands in the city : acquire them for the benefit of the school going childern so that they may have playground and also for the grown-up boys who would like to play cricket or football. I lived in England for five years and have seen even small schools having five to 10 acres of land where the children could play and build themselves as sturdy and worthy citizens of the country. This is a very important thing and I hope our Education Minister will bestow his thoughts not only on the schools in Bangalore but elsehwere also in the State.

4-30 P. M.

Sir, if you start in your car and drive towards Mysore you will find a board about 7 miles from Bangalore, called Bangalore University. If you see behind the board you will only see desolate vast land and nothing has been done. Is it for this purpose you put a board and decieve us, the citizens of Bangalore ? Is it for this purpose that you are building a great university and ask us to look at the grounds. You have provided 40 lakhs for Bangalore University Mysore university gets 64 lakhs and Karnatak University gets 58 lakhs.

AN HON. MEMBER.—That university has to be constructed out of the U. G. C. quota.

SRI R. DAYANANDA SAGAR.—There is neither U. G. C. quota nor the quota of Mysore.

SRI K. V. SHANKARA GOWDA.—U. G. C. quota is there.

SRI R. DAYANANDA SAGAR —How long you want us to see the board ? Afterall the city of Bangalore is congested day by day and our boys need good class rooms, play grounds, auditorium, beautiflu departments for mathematics, physics, chemistry, economics and so on and so forth. You are huddling the entire university Offices in the mathematics block here. This is not fair ; yau have to find money somehow. So much money is given: why don't you allocate sufficient money and build university Offices. You cannot say let the Central Government do it : we want it to be Central university. We do not want all these arguments. I tell you, please go to Delhi and plead with them. If you don't get, I would only say that you are incapable of getting. Madras gets ; panjab gets and other States get ? What have you brought us for Mysore ? The Central Government and your Government actually exploit us by way of levying several taxes, income tax and so on and so forth. But, what is it you have brought from Delhi to our people to build up our universities and our institutions ? I am happy a mention is made that the Government would like to build up Kannada as a langauge to be adopted in the administration and in the university. I welcome the suggestion. After all this language Kannada has a tradition of its own, has richness of its own so far as literature is concerned. But when you make it as a medium of instruction you will have to labour hard before doing tha . Sir, in the universities our students in the degree classes and in the post-graduate Classes must have enough literature, text books, books of reference, and so on. What is it you have done to build up a beautiful library ? How many textbooks made to be written ; how many authors have been encouraged ? Therefore, it is necessary that before we make this Kannada as the medium of instruction and making it as a language of our universities that we build up textbooks, reference books in our libraries in this language. This is what the Japanese have done. We alwa s quote Japan. Japanese people have built up their language libraries literature and the rest of it. Then progress is available. Similarly I expect and hope that the Government of Mysore will spend not only money but their thoughts on building up a great library of books.

Thank you.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಅಧ್ಯಕ್ಷರೇ, ಈ ದೇಶದ ಭವಿಷ್ಯವನ್ನು ರೂಪಿಸತಕ್ಕ ಹೊಣೆಗಾರಿಗೆ ಎಲ್ಲ ಇಲಾಖೆಗಳಿಗಿಂತಲೂ ಜಾಸ್ತಿಯಾಗಿ ವಿದ್ಯಾ ಇಲಾಖೆಯ ಮೇಲಿದೆ ಎಂದು ಹೇಳಿದರೆ ಅದು ಹೆಚ್ಚಲ್ಲ. ಮತ್ತು ಈ ಅಂಶವನ್ನು ಸ್ನೇಹಿತರೂ ಹೇಳಿದ್ದಾರೆ. ಈ ದೇಶದಲ್ಲಿ ಒಳ್ಳೆಯ

ನಾಗರಿಕರು ತಯಾರಾಗಬೇಕು. ಈ ರಾಜ್ಯ ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಕೆಲಸಮಾಡಬೇಕು ಎಂದು ಹೇಳುವುದಾದರೆ, ನಮ್ಮ ವಿದ್ಯಾರ್ಥಿಗಳನ್ನು ಸುಸಂಸ್ಕೃತರನ್ನಾಗಿ, ವಿದ್ಯಾ ಚತುರರನ್ನಾಗಿ, ದೊಡ್ಡ ದೊಡ್ಡ ವಿಜ್ಞಾನಿಗಳನ್ನಾಗಿ, ಕೈಗಾರಿಕಾ ಧುರೀಣರನ್ನಾಗಿ ಮಾಡಬೇಕು. ನನ್ನ ಸ್ನೇಹಿತರಾದ ಕೃಷ್ಣನ್ ಅವರು ಹೇಳಿದ ಹಾಗೆ Economy of the country is inter-linked with education ಅದು ನಿರ್ವಿವಾದವಾದ ವಿಷಯವೆಂದು ನಾನು ತಿಳಿದುಕೊಂಡಿದ್ದೇನೆ. ವಿದ್ಯಾಭ್ಯಾಸ ಜಾಸ್ತಿಯಾದಷ್ಟೂ ಕೈಗಾರಿಕಾದೃಷ್ಟಿಯಲ್ಲಾಗಲೀ ವ್ಯಾಪಾರ ದೃಷ್ಟಿಯಲ್ಲಾಗಲೀ ವಿದ್ಯಾರ್ಥಿಗಳು ಒಳ್ಳೆಯ ವಿದ್ಯಾಭ್ಯಾಸವನ್ನು ಪಡೆದವರಾಗಿ, ಪ್ರವೃದ್ಧಮಾನಕ್ಕೆ ಬಂದು ದೊಡ್ಡ ದೊಡ್ಡ ವಿದ್ವಾಂಸರಾಗಿ, ಚತುರರಾಗಿ ನಮ್ಮ ದೇಶದ ಉತ್ಪತ್ತಿ ದಿನೇ ದಿನೇ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ. ಅವರು ತಮ್ಮ ಬುದ್ಧಿ ಚತುರತೆಯನ್ನು ಪ್ರದರ್ಶನ ಮಾಡಿ ಈ ದೇಶವನ್ನು ದೊಡ್ಡ ದೇಶವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಪ್ರವೃದ್ಧಮಾನಕ್ಕೆ ಬಂದಿರುವ ದೊಡ್ಡ ದೊಡ್ಡ ದೇಶಗಳಲ್ಲಿ ವಿದ್ಯಾಭ್ಯಾಸ ಉತ್ತಮ ಮಟ್ಟದಲ್ಲಿರುವುದೇ ಮುಖ್ಯ ಕಾರಣ ಎನ್ನುವುದನ್ನು ನಾವು ಮರೆಯಬಾರದು.

ನಮ್ಮ ದೇಶದಲ್ಲಿ ವಿದ್ಯಾ ಸಂಸ್ಥೆಗಳು ಜಾಸ್ತಿಯಾಗಿವೆ, ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿಯಾಗಿದೆ. ವಿದ್ಯಾ ಮಂತ್ರಿಗಳು ಎಲ್ಲರಿಗೂ ಹಂಚಿರುವ ಪುಸ್ತಕದಲ್ಲಿ ಎಲ್ಲವನ್ನೂ ಹೇಳಿದ್ದಾರೆ. ವಿದ್ಯಾಭ್ಯಾಸದ ಮಟ್ಟ ಕೆಳಮಟ್ಟಕ್ಕೆ ಹೋಗುತ್ತಿದೆ ಎನ್ನುವುದನ್ನು ಅವರೂ ಒಪ್ಪಿಕೊಳ್ಳುತ್ತಾರೆ, ಎಲ್ಲರೂ ಒಪ್ಪಿಕೊಳ್ಳುತ್ತಾರೆ.

What is the use of having so many people without any standard !

ಬೇಕಾದಷ್ಟು ಜನ ವಿದ್ಯಾಭ್ಯಾಸ ಮಾಡಿದ್ದಾರೆ, ಚತುರರಾಗಿದ್ದಾರೆ, ಅವರಿಗೆಲ್ಲ ಟೈಟಲ್ ಕೊಟ್ಟಿದ್ದೀರಿ ಆದರೆ ಅವರು ಪರಿಣತರಾಗಬೇಕಾದರೆ ಏನು ಇರಬೇಕೋ ಅದಿಲ್ಲದೆ ಇದ್ದರೆ ನಮ್ಮ ವಿದ್ಯಾಭ್ಯಾಸಕ್ಕೆ ಎಷ್ಟೇ ಖರ್ಚು ಮಾಡಿದರೂ ಅದೆಲ್ಲ ನೀರಿನಲ್ಲಿ ಹೋಮ ಮಾಡಿದ ಹಾಗಾಗುತ್ತದೆ ಎಂದು ಹೇಳಬಹುದು. ವಿದ್ಯಾಭ್ಯಾಸವನ್ನು ಒಳ್ಳೆಯ ರೀತಿಯಲ್ಲಿ ಮಾಡಬೇಕಾಗಿದ್ದರೆ ಅಥವಾ ತರಬೇತಿ ಒಳ್ಳೆಯ ರೀತಿಯಿಂದ ಆಗಬೇಕಾಗಿದ್ದರೆ, ಒಳ್ಳೆಯ ಸ್ಟಾಂಡರ್ಡ್ ಸಿಕ್ಕಬೇಕಾಗಿದ್ದರೆ ನಾನು ಮೂರು ಸಲಹೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತಿದ್ದೇನೆ. ಅವನ್ನು ವಿದ್ಯಾ ಮಂತ್ರಿಗಳು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

(೧) ಮಾನ್ಯ ದಯಾನಂದ ಸಾಗರ್ ಅವರು ಹೇಳಿದ ಹಾಗೆ ಯಾರಿಗೆ ಕೆಲಸವಿಲ್ಲ ಅಂಥವರು ಉಪಾಧ್ಯಾಯರಾಗಿ ಕೆಲಸ ಮಾಡಲು ಬರುತ್ತಾರೆ. ಅಂಥ ಉಪಾಧ್ಯಾಯರಿಂದ ತಯಾರಾದ ವಿದ್ಯಾರ್ಥಿಗಳು ಚತುರರಾಗಿ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ಉಪಾಧ್ಯಾಯರನ್ನು ನೇಮಕ ಮಾಡುತ್ತಾರೆ ಅಲ್ಲಿ ಸುಸಂಸ್ಕೃತರಾದವರನ್ನು, ಸುಶಿಕ್ಷಿತರಾದವರನ್ನು ವಿದ್ಯಾಭ್ಯಾಸದಲ್ಲಿ ತರಪೇತಿ ಹೊಂದಿದಂಥ ಜನರನ್ನು ಮಾತ್ರ ನೇಮಕ ಮಾಡಬೇಕೇ ಹೊರತು ಎಸ್ ಎಸ್.ಎಲ್ ಸಿ ಅಥವಾ ಬಿ.ಎ. ಅಥವಾ ಬಿ.ಎಸ್.ಸಿ. ಮಾಡಿಕೊಂಡವರನ್ನು ನೇಮಕ ಮಾಡಿದರೇ ಒಳ್ಳೆಯ ವಿದ್ಯಾರ್ಥಿಗಳನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಟ್ರೇನಿಂಗ್ ಇಲ್ಲದೆ ಇರತಕ್ಕ ಜನರನ್ನು ಅವರು ಯಾರೇ ಆಗಿರಲಿ ಉಪಾಧ್ಯಾಯ ವೃತ್ತಿಗೆ ನೇಮಕ ಮಾಡುವುದನ್ನು ನಿಲ್ಲಿಸಬೇಕು. ಸರ್ಕಾರ ಇದರ ಬಗ್ಗೆ ಗಮನ ಕೊಡಬೇಕು ಎಂದು ಹೇಳುತ್ತೇವೆ.

ಇನ್ನು ಎರಡನೇಯದು ವಿದ್ಯಾಭ್ಯಾಸ ಸೌಲಭ್ಯ ಜಾಸ್ತಿಯಾಗಿ ಕಂಪಲ್ಸರಿ ಎಜ್ಯುಕೇಷನ್ ಕಾರ್ಯಗತ ಮಾಡುತ್ತಿದ್ದಾರೆ. ಆದರೆ ಒಂದು ಶಾಲೆಯಲ್ಲಿ ಒಂದೇ ರೂಮಿನಲ್ಲಿ ನಾಲ್ಕು ಕ್ಲಾಸುಗಳನ್ನು ನಡೆಸುತ್ತಿದ್ದಾರೆ. ಇದಕ್ಕೆ ಒಬ್ಬ ಶಿಕ್ಷಕ ಇರುತ್ತಾನೆ ಒಂದೇ ರೂಮಿನಲ್ಲಿ ನಾಲ್ಕು ಕ್ಲಾಸುಗಳು ನಡೆಯುತ್ತಿರುವುದರಿಂದ ಒಂದು ಕಡೆ ಮಾತನಾಡುವುದು ಇನ್ನೊಂದು ಕ್ಲಾಸಿನಲ್ಲಿ ಇದ್ದವರಿಗೆ ಕೇಳುತ್ತದೆ ಇದರಿಂದ ಎರಡೂ ಕಡೆ ಏನೂ ಕೇಳುವುದಿಲ್ಲ. ಒಂದು ತರಗತಿಗೆ ಒಂದು ರೂಮು ಇರಬೇಕು ಅಂದರೆ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತದೆ. ಇದಕ್ಕೆ ಒಂದು ನಿದರ್ಶನ ಹೇಳುವುದಾದರೆ ತುಮಕೂರಿನಲ್ಲಿ ಚಿಕ್ಕಪೇಟೆಯಲ್ಲಿ ಒಂದು ಸ್ಕೂಲು ಇದೆ. ಅಲ್ಲಿ ಆರು ಕ್ಲಾಸುಗಳಿಗೆ ಒಂದೇ ಒಂದು ಹಾಲ್ ಇದೆ ಎಲ್ಲರೂ ಒಂದೇ ಹಾಲಿನಲ್ಲಿ ಕುಳಿತುಕೊಳ್ಳುತ್ತಾರೆ. ಕಾಟಾಚಾರಕ್ಕೆ ಅಲ್ಲಿಯ ಮೇಷ್ಟ್ರು ಪಾಠ ಹೇಳಿಕೊಡುತ್ತಾರೆ. ಈ ಬಗ್ಗೆ ನಾನು ಈ ಸಭೆಯಲ್ಲಿ ಎರಡು ಮೂರು ಸ್ಟಾರ್ಡ್ ಕ್ವಶ್ಚನ್ಸ ಕಳಿಸಿ ಪ್ರಶ್ನೆ ಕೇಳಿದೆ. ತುಮಕೂರು ಸ್ಕೂಲಿಗೆ ಭೇಟಿ ಕೊಡಲು ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಲಿಲ್ಲ ಈ ರೀತಿ ಪರಿಸ್ಥಿತಿ ಇರುವುದು ಅಲ್ಲಿ, ಒಂದೇ ಕಡೆ ಅಲ್ಲ, ಇದು ಇಡೀ ರಾಜ್ಯದಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಗೂ ಇದೆ. ಆದುದರಿಂದ ಒಂದು ತರಗತಿಗೆ ಒಂದು ಕೊಠಡಿ ಇರುವ ಹಾಗೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅದು ದನಗಳ ದೊಡ್ಡಿಯಾಗುತ್ತದೆ. ವಿದ್ಯಾ ಇಲಾಖೆಯವರು ಹಿಂದುಳಿದವರಿಗೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್

(ಶ್ರೀ ಬಿ. ಪಿ. ಗಂಗಾಧರ್)

ಟ್ರೈಬ್ಸದವರಿಗೆ ಸಹಾಯ ಸೌಲಭ್ಯ ಕೊಡುತ್ತಾರೆ. ಆದರೆ ಬೇರೆ ಜಾತಿಯಲ್ಲಿ ಇರತಕ್ಕಂಥ ಬಡವರು ಅನೇಕರು ಇದ್ದಾರೆ. ಅವರಿಗೂ ಈ ಸಹಾಯ ದೊರೆಯದೇ ಇದ್ದರೆ ಇದರ ಅರ್ಥ ಏನು ? ಅವರೂ ಸಹ ನಮ್ಮ ಭೂಮಿ ತಾಯಿಯ ಮಕ್ಕಳು ಅಲ್ಲವೇನು ? ಈ ಒಂದು ಬಡತನದಲ್ಲಿರುವ ವರ್ಗಕ್ಕೆ ಸಹಾಯ ಮಾಡದೇ ಹೋದರೆ ಅವರಿಗೆ ಊಟ ಇಲ್ಲ ಬಟ್ಟೆ ಇಲ್ಲ ವಿದ್ಯಾಭ್ಯಾಸದ ಸೌಕರ್ಯ ಇಲ್ಲ ಅಂದರೆ ಅವರು ಬೇರೆ ಜಾತಿಗೆ ಅಟೋಮ್ಯಾಟಿಕ್ ಆಗಿ ಹೊರಟು ಹೋಗುತ್ತಾರೆ ಇದು ಸರ್ಕಾರದ ಹೊಣಗಾರಿಕೆಯಾಗಿದೆ. ಆದುದರಿಂದ ವಾರ್ಷಿಕ ಉತ್ಪತ್ತಿ ಒಂದು ಲಿಮಿಟ್‌ಕ್ಕಿಂತ ಕಡಿಮೆ ಇರತಕ್ಕಂಥ ಬಡವರ ಮಕ್ಕಳಿಗೆ ಅವರು ಯಾವ ಯಾವ ಜಾತಿಯವರೇ ಇರಲಿ ಅವರಿಗೂ ಹರಿಜನರಿಗೆ ಒದಗಿಸುವ ಸಹಾಯವನ್ನು ಮಾಡಬೇಕು. ಹಾಗೆ ಮಾಡದೇ ಇದ್ದರೆ ಈ ಬಡ ಮಕ್ಕಳಿಗೆ ಮೋಸ ಮಾಡುತ್ತೀರಿ, ದ್ರೋಹ ಮಾಡುತ್ತೀರಿ, ಅಂಥ ಮಕ್ಕಳು ಒಂದು ಸ್ಟಾಂಡರ್ಡಕ್ಕೆ ಬರಲು ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಇನ್ನೊಂದು ವಿಷಯ ಹೇಳಲು ಮನಸ್ಸಿಗೆ ನೋವು ಆಗುತ್ತದೆ. ಯೂನಿವರ್ಸಿಟಿಯನ್ನು ಆಟಾನಮಸ್ ಬಾಡಿ ಮಾಡಿದ್ದಾಗೆ. ಅಲ್ಲಿ ಕೇಳುವವರೇ ಇಲ್ಲ ಹೇಳುವವರೇ ಇಲ್ಲ ಹೇಳುವವರೇ ಇಲ್ಲಿ ಎಂದು ಆಗಿದೆ. ಈ ಸಭೆಯಲ್ಲಿ ಎರಡು ಮೂರು ಪ್ರಶ್ನೆಗಳನ್ನು ಸಹ ನಾನು ಕೇಳಿದ್ದೇನೆ. ವಿಶ್ವವಿದ್ಯಾನಿಲಯದಲ್ಲಿ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ವಿಚಾರಣೆ ನಡೆಸಲಿಲ್ಲ. ಒಂದು ಜಾತಿಗೆ ಸಂಬಂಧಪಟ್ಟವರಿಗೆ ಅನ್ಯಾಯವಾಗುತ್ತಿದೆ. ಯೂನಿವರ್ಸಿಟಿಯಲ್ಲಿ ನೇಮಕ ಮಾಡುವುದರಲ್ಲಿ ಅನ್ಯಾಯವಾಗಿದೆ. ಇದರ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು, ಇದು ಸರ್ಕಾರದ ಕರ್ತವ್ಯವಾಗಿದೆ. ಇನ್ನೂ ಅನೇಕ ವಿಷಯ ಹೇಳ ಬೇಕಾಗಿದೆ. ಆದರೆ ಕಾಲಾವಕಾಶವಿಲ್ಲದ ಮೂಲಕ ನನ್ನ ಮಾತು ಇಲ್ಲಿಗೆ ಮುಗಿಸುತ್ತೇನೆ.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು,): ಮಾನ್ಯ ಸಭಾಪತಿಗಳೇ, ಮಾನ್ಯ ಶಿಕ್ಷಣ ಮಂತ್ರಿಗಳು ಮಂಡಿಸಿದ ೫೭,೮೪,೮೯,೦೦೦ ರೂಪಾಯಿ ವಿದ್ಯಾಭ್ಯಾಸದ ಬೇಡಿಕೆಯನ್ನು ನಾನು ಅನುಮೋದಿಸುತ್ತೇನೆ. ಇಂದು ಹಳ್ಳಿಗಳಲ್ಲಿ ಪ್ರಾಥಮಿಕ ಸಾಲೆಗಳು ಹೆಚ್ಚಾಗಿವೆ ಆದರೆ ಎಲ್ಲಾ ಸಾಲೆಗಳಿಗೆ ಸ್ವಂತ ಕಟ್ಟಡ ಇಲ್ಲ. ಸ್ವಂತ ಕಟ್ಟಡ ಇರಬೇಕಾದುದು ಅತಿ ಆವಶ್ಯಕವಾಗಿದೆ. ಗಾಂಧಿ ಶತಮಾನೋತ್ಸವ ಆಚರಿಸುವ ಈ ವರ್ಷದಲ್ಲಿ ಒಂದು ರೂಮು ಕಟ್ಟಿಸಿ ಕೊಡುತ್ತಾ ಇದ್ದಾರೆ. ಇದು ಸಾಕಷ್ಟು ಆಗಿಲ್ಲ ಇದಕ್ಕೆ ಡಿಬಿ ಲಕ್ಷ ಕೊಟ್ಟಿಲ್ಲ, ಪಂಚಾಯತಿಯವರು ಲಕ್ಷ ಕೊಟ್ಟಿಲ್ಲ. ಆದುದರಿಂದ ಎಲ್ಲ ಸ್ಕೂಲುಗಳಿಗೆ ಸ್ವಂತ ಕಟ್ಟಡ ಮಾಡಿ ಕೊಡುವುದಕ್ಕೆ ಸರ್ಕಾರ ಲಕ್ಷ ಕೊಡಬೇಕು. ಪಟ್ಟಣಗಳಲ್ಲಿ ಕಾಲೇಜು ಬಿಲ್ಡಿಂಗ್ ಕಟ್ಟಿಸಲು ಸಾಕಷ್ಟು ಹಣ ಖರ್ಚು ಮಾಡಲಾಗುತ್ತದೆ. ಆದರೆ ಹಳ್ಳಿಗಳಲ್ಲಿ ಪ್ರಾಥಮಿಕ ಸಾಲಿಯ ಕಟ್ಟಡ ಕಟ್ಟಿಸಲಿಕ್ಕೆ ಹೆಚ್ಚು ಲಕ್ಷ ಕೊಡಬೇಕು ಎಂದು ಹೇಳುತ್ತೇನೆ.

ಇಂದು ಶಿಕ್ಷಣ ಮಟ್ಟ ಮಾತ್ರ ಕೆಳಗೆ ಇಳಿದಿರುವುದು ಬಹಳ ದುಃಖದ ಮಾತು. ಏಳು ವರ್ಷದ ನನ್ನ ಒಬ್ಬ ಮಗನು ಎರಡನೇ ತರಗತಿಯಲ್ಲಿ ಓದುತ್ತಾನೆ, ಆದರೆ ಆವನಿಗೆ ಶಬ್ದ ಕೂಡಿಸಲಿಕ್ಕೆ ಬರುವುದಿಲ್ಲ. ಅಂದರೆ ಎಷ್ಟು ಕೆಳಮಟ್ಟದಲ್ಲಿ ಶಿಕ್ಷಣ ಇದೆ ಎನ್ನುವುದು ಇದರಿಂದ ತಿಳಿದು ಬರುತ್ತದೆ. ಆದುದರಿಂದ ಶಿಕ್ಷಣ ಮಟ್ಟದಲ್ಲಿ ಸುಧಾರಣೆಯಾಗಬೇಕಾದುದು ಅವಶ್ಯಕವಾಗಿದೆ. ಸ್ಕೂಲುಗಳಲ್ಲಿ ಪದವೀಧರ ಟ್ರೇಂಡ್ ಶಿಕ್ಷಕರನ್ನು ನೇಮಕ ಮಾಡಬೇಕು.

ಈ ಸಂಖ್ಯೆಗಳ ಕಡೆಗೂ ಹೆಚ್ಚಿನ ಗಮನ ಕೊಡಬೇಕು. ಈ ದಿವಸ ಎಲ್ಲ ಕಡೆಗಳಲ್ಲೂ ಶಾಲೆಗಳ ಸಂಖ್ಯೆ ಹೆಚ್ಚಿದೆ. ಆದರೆ ಹೈಸ್ಕೂಲಿಗೆ ಬರತಕ್ಕ ಮಕ್ಕಳ ವಿದ್ಯಾಭ್ಯಾಸದ ಮಟ್ಟ ಮಾತ್ರ ಬಹಳ ಕಡಮೆಯಾಗಿರುತ್ತದೆ. ಅದಕ್ಕೆ ಕಾರಣ ಕೆಳದರ್ಜೆಯಲ್ಲಿ ಪಾಠಹೇಳತಕ್ಕ ೫ ಮತ್ತು ೬ನೆಯ ಇಯತ್ತೆಯಲ್ಲಿ ಹೇಳತಕ್ಕ ಆ ಇಂಗ್ಲೀಷ್ ಪಾಠಗಳೇನಿರುತ್ತವೆ ಅವುಗಳ ಸ್ಟಾಂಡರ್ಡ್ ಬಹಳ ಕಡಮೆ ; ಕೆಳಮಟ್ಟದಲ್ಲಿರುತ್ತದೆ. ಆ ಬಳಿಕ ಅವರು ಹೈಸ್ಕೂಲಿಗೆ ಬಂದು ಎಸ್.ಎಸ್.ಎಲ್.ಸಿಯನ್ನು ಪಾಸ್ ಮಾಡಿ ಕಾಲೇಜಿಗೆ ಸೇರತಕ್ಕವೇಳೆಗೆ ಅವರ ಇಂಗ್ಲೀಷ್ ಬಹಳ ಕೆಳಮಟ್ಟದಲ್ಲಿರುವುದರಿಂದ ಕಾಲೇಜ್ ಪರೀಕ್ಷೆಗಳಲ್ಲಿ ನೂರಕ್ಕೆ ಹತ್ತು ಜನರು ಪಾಸಾಗುವುದೂ ಬಹಳ ಕಠಿಣವಾಗಿರುತ್ತದೆ. ಆದ್ದರಿಂದ ನಮ್ಮ ಕೆಳಮಟ್ಟದ ಶಿಕ್ಷಣದಲ್ಲಿ ಬಹಳ ಸುಧಾರಣೆಯಾಗಬೇಕಾಗಿದೆ. ಅದಕ್ಕಾಗಿ ಪ್ರಾಥಮಿಕ ಶಾಲೆಗಳಿಗೆ ಬರತಕ್ಕ ಉಪಾಧ್ಯಾಯರೇನಿದ್ದಾರೆ ಅವರು ಪದವೀಧರರಾಗಿರಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ಎಂ ಸಾಣಿಕೊಪ್ಪ)

ಇನ್ನು ನಮ್ಮ ಕರ್ನಾಟಕದಲ್ಲಿ ಮೂಲ ಉದ್ಯೋಗದ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಇದನ್ನು ನಾವು ಸರಿಯಾಗಿ ನಡೆಸಿಕೊಂಡು ಬಂದಹಾಗೂ ಅಲ್ಲ ಅಥವಾ ಇದನ್ನು ನಾವು ಕೈ ಬಿಟ್ಟ ಹಾಗೂ ಅಲ್ಲ. ಅಲ್ಲಿ ಈ ದಿವಸ ಮೂಲ ಶಿಕ್ಷಣ ವ್ಯಾಸಂಗದ ಬಗ್ಗೆ ಅರಿವಿಗಳನ್ನು ಮಾಡುವುದನ್ನು ಹೇಳಿಕೊಡ ಲಾಗುತ್ತಿದೆ. ಆದರೆ ಆ ಅರಳಿಯನ್ನು ನೂತು ಅರಿವಿ ಮಾಡುವುದಿರಲಿ, ಅವರು ಮಾಡಿದಂಥ ಆ ಅರಿವಿಯನ್ನು ಬಾಲಕರಾಗಲಿ ಅಥವಾ ಉಪಾಧ್ಯಾಯರಾಗಲೀ ಒಬ್ಬರೂ ತೋಡುವುದಿಲ್ಲ. ಆದ್ದರಿಂದ ಅದು ಅಷ್ಟು ಉಪಯೋಗ ಕಾಣುವುದಿಲ್ಲ. ಅದಕ್ಕೆ ಪ್ರತಿಯಾಗಿ ಆ ಬಾಲಕರಿಗೆ ವ್ಯವಸಾಯದಲ್ಲಿ ಶಿಕ್ಷಣ ಅಥವಾ ಬಡಗೀ ಕಸುಬು ಅಥವಾ ಕಮ್ಮಾರಿಕೆ ಇಂಥ ಯಾವುದಾದರೊಂದು ವೃತ್ತಿ ಶಿಕ್ಷಣವನ್ನು ಕಲಿಸಿ ಕೊಡುವುದು ಉತ್ತಮವಾದೀತೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮುಂಬೈ ಪ್ರಾಂತ್ಯದಲ್ಲಿದ್ದು ಶಾಲೆಗಳೆಲ್ಲ ಜಿಲ್ಲಾ ಬೋರ್ಡಿನ ಸ್ವಾಧೀನದಲ್ಲಿದ್ದವು. ಈಗ ಅವೆಲ್ಲಾ ಸರ್ಕಾರದವರ ಕಡೆಗೆ ಬಂದಿವೆ. ಆದರೆ ಮೊದಲು ಆ ಕಟ್ಟಡಗಳ ರಿಪೇರಿ ವಗೈರೆಗಳಿಗೆಲ್ಲಾ ಆ ಬೋರ್ಡಿನಿಂದಲೇ ಹಣವನ್ನು ಕೊಡಲಾಗುತ್ತಿತ್ತು ಆದರೆ ಈ ದಿವಸ ಆ ಬಾಬಿಗೆ ಸರ್ಕಾರದಿಂದ ಹಣ ದೊರೆಯುತ್ತಿಲ್ಲ. ಅದನ್ನು ಕೊಡುವುದಕ್ಕೆ ಏರ್ಪಾಡನ್ನು ಮಾಡಬೇಕು. ಇನ್ನು ಖಾಸಗೀ ಶಾಲೆಗಳಲ್ಲಿ ಬಹಳ ಉತ್ತೇಜನದಿಂದ ಪಾಠಪ್ರವಚನಗಳನ್ನು ನಡೆಸುತ್ತಿರುವುದರಿಂದ ಆ ಸಂಸ್ಥೆಗಳಿಗೆ ಗ್ರಾಂಟನ್ನು ಉದಾರವಾಗಿ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರಿ ಶಾಲೆಗಳಿಗಿಂತಲೂ ಖಾಸಗೀ ಶಾಲೆಗಳಲ್ಲಿ ಪಾಸಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಸರ್ಕಾರಿ ಶಾಲೆಗಳು ಎಲ್ಲಿ ಕಡಮೆಯಾಗಿರುತ್ತವೋ ಅಂಥ ಕಡೆಗಳಲ್ಲಿ ಮಾತ್ರ ಅವುಗಳನ್ನು ತೆರೆಯಲಾಗಿದೆ. ಆ ಖಾಸಗಿ ಶಾಲೆಗಳ ಆಡಳಿತ ವೆಚ್ಚದಲ್ಲಿ ಹಣವೇನೂ ಉಳಿತಾಯಾಗುತ್ತಿಲ್ಲ. ಆದಾಗ್ಯೂ ಅವರೇನಾದರೂ ಸ್ಥಳಾವಕಾಶವಿಲ್ಲದೆ ಇಮಾರತಿಗಳನ್ನು ತೆಗೆದು ಕೊಂಡಿದ್ದರೆ ಸರ್ಕಾರದವರು ಅದಕ್ಕೆ ಶೇ: ೩ ಪರ್ಸೆಂಟ್ ಪ್ರಕಾರ ಅಂದರೆ ಆ ಆಡಳಿತದ ವೆಚ್ಚದಲ್ಲಿ ಶೇ. ೩ ರಷ್ಟನ್ನು ಕೊಡಬೇಕೆಂದು ಮಾಡಿದ್ದಾರೆ. ಇದು ನ್ಯಾಯವಾದ್ದಲ್ಲ. ಅವರಿಗೆ ಪಿ.ಡಬ್ಲ್ಯು.ಡಿ. ರೇಟನ್ನು ಕೊಡುವುದಕ್ಕೆ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರಿಗೆ ಒಂದು ಕಟ್ಟಡವನ್ನೇ ಕಟ್ಟಿಸಿಕೊಡಿ ಎಂದರೆ ಅವರಿಗೆ ಎಷ್ಟು ಖರ್ಚಾಗುತ್ತದೆ ? ಆದ್ದರಿಂದ ಇಂಥ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ಉದಾರವಾಗಿ ವರ್ತಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕಾಲೇಜುಗಳಿಂದ ಉತ್ತೀರ್ಣರಾಗಿ ಬರತಕ್ಕ ನಾನಾ ಬಗೆಯ ಪದವೀಧರರೇನಿದ್ದಾರೆ ಅವರಿಗೆಲ್ಲಾ ಸರ್ಕಾರದವರು ಉದ್ಯೋಗಗಳನ್ನು ಒದಗಿಸುವುದಕ್ಕೆ ವ್ಯವಸ್ಥೆಮಾಡಬೇಕು. ಇಲ್ಲವೇ ಅವರು ಭೂಮಿಯನ್ನು ಅವಲಂಬಿಸಿ ವ್ಯವಸಾಯದಲ್ಲಿ ತೊಡಗುವುದಕ್ಕೆ ಅವಕಾಶವಾಗುವಂತೆ ವ್ಯವಸ್ಥೆಗಳನ್ನು ಮಾಡಬೇಕು.

ಇನ್ನು ನಮ್ಮ ಸರ್ಕಾರದವರು ಈಗ ಹೈಸ್ಕೂಲಿನ ವ್ಯಾಸಂಗವನ್ನು ಉಚಿತವಾಗಿ ದೊರೆಯುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಕಾಲೇಜು ವ್ಯಾಸಂಗಕ್ಕೂ ಏನಾದರೂ ಒಂದು ಆಲೋಚನೆ ಮಾಡಿ ೨೪೦೦ ರೂಪಾಯಿಗಳ ಅಥವ ಅದಕ್ಕೆ ಸ್ವಲ್ಪ ಹೆಚ್ಚಿನ ಉತ್ಪನ್ನವುಳ್ಳವರಿಗೆ ಯಾವ ಶುಲ್ಕವನ್ನೂ ಹಾಕದಂತೆ ವಿದ್ಯಾದಾನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ೨೨ ವರ್ಷಗಳಾದರೂ ರಾಜ್ಯಭಾಷೆಯಾದ ಕನ್ನಡ ಇನ್ನೂ ತಾಲ್ಲೂಕ್ ಮಟ್ಟದಲ್ಲಿ ಜಾರಿಗೆ ಬರಲಿಲ್ಲ ಇದನ್ನು ನಾವು ಆದಷ್ಟು ಬೇಗ ಮಾಡಬೇಕಾಗಿದೆ ದೇಶಭಾಷೆಯಲ್ಲಿ ಜನರಿಗೆ ಪರಿಚಯಮಾಡಿಕೊಂಡು ನಮ್ಮ ಜನರನ್ನು ನಾವು ಹೆಚ್ಚು ವಿದ್ಯಾವಂತರನ್ನಾಗಿ ಮಾಡಬೇಕು. ಹರಿಜನ ಗಿರಿಜನರಿಗೆ ಉತ್ತಮ ಶಿಕ್ಷಣ ದೊರೆಯಬೇಕು. ಅವರ ವಿದ್ಯಾಮಟ್ಟ ಹೆಚ್ಚಬೇಕು. ಹೈಸ್ಕೂಲುಗಳು ಇರತಕ್ಕ ಕಡೆಗಳಲ್ಲಿ ಎಲ್ಲಾ ಒಂದೊಂದು ಜನರಲ್ ಹಾಸ್ಟಲನ್ನು ಸರ್ಕಾರದವರು ತೆಗೆಯಬೇಕಾದ್ದು ಅತ್ಯಗತ್ಯ ಹಾಗೆ ಪ್ರಾಥಮಿಕ ಶಿಕ್ಷಕರಿಗೆ ವಾಸದ ಮನೆಗಳು ಸಿಕ್ಕದೆ ಬಹಳ ತೊಂದರೆಯಾಗಿದೆ ಆದ್ದರಿಂದ ಅವರಿಗೆ ಸರ್ಕಾರದವರು ಈ ಗೃಹನಿರ್ಮಾಣ ಯೋಜನೆಯಲ್ಲಿ ವಾಸದ ಮನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳಿಗೆ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಇಷ್ಟೆಲ್ಲಾ ಸುಧಾರಣೆಗಳಾಗಬೇಕೆಂದು ಸರ್ಕಾರಕ್ಕೆ ಸೂಚಿಸಿ ನನಗೆ ಇಷ್ಟು ವಿಷಯಗಳನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರ್ಕಲಗೂಡು):—ಅಧ್ಯಕ್ಷರೇ : ನಾನು ಮತ್ತು ರಾಜ್ಯದ ಜನತೆ ಸಹಾ ಮಾನ್ಯ ಶಂಕರೇಗೌಡರು ವಿದ್ಯಾಮಂತ್ರಿಗಳಾಗಿ ಬಂದಿದ್ದಾರೆ, ಇವರ ಕಾಲದಲ್ಲಿ ಈ ವಿದ್ಯಾಭ್ಯಾಸದ ಕ್ರಮದಲ್ಲಿ ಕ್ರಾಂತಿಕಾರಿಕ ಬದಲಾವಣೆಗಳಾಗುತ್ತವೆಂದು ಭಾವಿಸಿದ್ದೆವು. ಆದರೆ ಈ ನಮ್ಮೆಲ್ಲರ ನಿರೀಕ್ಷಣೆ

(ಶ್ರೀ ಎಚ್. ಎನ್. ನಂಜೇಗೌಡ)

ನಿಷ್ಫಲವಾಗಿದೆ. ನಮ್ಮ ವಿಶ್ವವಿದ್ಯಾನಿಲಯಗಳ ವಿಚಾರದಲ್ಲಾದರೂ ಒಂದು ಏಕರೂಪತೆಯ ಶಾಸನವನ್ನು ಜಾರಿಗೆ ತರಬಹುದಾಗಿತ್ತು. ಅದನ್ನೂ ಸಹಾ ಮಾಡಿಲ್ಲ. ಒಂದೊಂದು ಕಡೆ ಒಂದೊಂದು ನಿಯಮಾವಳಿಗಳಿವೆ. ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನ ವಿಚಾರದಲ್ಲಿ ಹೇಳುವುದಾದರೆ ನವು ಮೈಸೂರು ಯೂನಿವರ್ಸಿಟಿಯ ವಿಚಾರವೇ ಒಂದು ರೀತಿ-ಅಲ್ಲಿ ಅಪಾಯಿಂಟ್‌ಮೆಂಟನ್ನು ವೈಸ್‌ಛಾನ್ಸ್‌ಲರ್ ಮಾಡುತ್ತಾರೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಿಂದ ಶಿಫಾರ್ಸಾಗಿ ಬಂದ ಮೇಲೆ ಅದು ನೇರವಾಗಿ ಛಾನ್ಸಲರಿಗೆ ಹೋಗುತ್ತದೆ. ಅದು ಸಿಂಡಿಕೇಟಿಗೆ ಬರುವುದಿಲ್ಲ. ಅದೇ ವಿಚಾರದಲ್ಲಿ ಬೆಂಗಳೂರು ಯೂನಿವರ್ಸಿಟಿಯನ್ನು ತೆಗೆದುಕೊಂಡರೆ ಅಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟನ್ನು ಸಿಫಾರ್ಸನ್ನು ಸಿಂಡಿಕೇಟ್‌ಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಅದು ಶಿಫಾರ್ಸಾಗಿ ವಾಪಸ್ ಬಂದಮೇಲೆ ಅದನ್ನು ಛಾನ್ಸಲರಿಗೆ ಕಳುಹಿಸಲಾಗುತ್ತದೆ. ಇದು ಅಲ್ಲಿರತಕ್ಕ ಪದ್ಧತಿ ಆದರೆ ಆ ಕರ್ನಾಟಕ ಯೂನಿವರ್ಸಿಟಿಯಲ್ಲಿರತಕ್ಕ ಪದ್ಧತಿಯೇ ಒಂದು. ಅಲ್ಲಿ ಸಿಂಡಿಕೇಟಿನವರೇ ಬೋರ್ಡ್ ಆಫ್ ಅಪಾಯಿಂಟ್‌ಮೆಂಟನ್ನು ಮಾಡುತ್ತಾರೆ. ಅಲ್ಲಿ ಅವರೇ ಸರ್ವಾಧಿಕಾರಿಗಳು. ಅಲ್ಲಿ ಅವರ ಶಿಫಾರ್ಸು ವೈಸ್‌ಛಾನ್ಸ್‌ಲರನ್ನು ಬಿಟ್ಟು ಮುಂದಕ್ಕೆ ಛಾನ್ಸಲರಿಗೆ ಹೋಗುವುದಿಲ್ಲ. ಅವರು ಏನೇ ಒಂದು ಆಟಾನಮಸ್ ಬಾಡಿಯಾಗಿದ್ದರೂ ಸರ್ಕಾರದವರೇಕೆ ಇಷ್ಟು ಅತ್ಯಲ್ಪಕಾಲದಲ್ಲಿ ಒಂದು ಪೆಟ್ಟಿಗೆಯನ್ನು ತುಂಬುವಷ್ಟು ತಿದ್ದುಪಡಿಗಳನ್ನು ಮಾಡಿದ್ದೀರಿ ?

5-00 P.M.

ಎಲ್ಲಾ ವಿಶ್ವವಿದ್ಯಾನಿಲಯಕ್ಕೂ ಸೇರಿದಂಥ ಒಂದು ಏಕರೂಪವಾದ ಕಾನೂನನ್ನು ಜಾರಿಗೆ ತರದೆ, ಮೈಸೂರಿಗೆ ಒಂದು, ಬೆಂಗಳೂರಿಗೊಂದು, ಕರ್ನಾಟಕಕ್ಕೆ ಒಂದು ಈ ರೀತಿ ಮಾಡಿದ್ದೀರಿ. ಈ ರೀತಿಯಾಗಿ ಏಕರೂಪತೆ ಇಲ್ಲದೇ ಇರುವುದರಿಂದ ವಿಶ್ವವಿದ್ಯಾನಿಲಯ ಮಟ್ಟದಲ್ಲೂ ರಾಜಕೀಯ ಕೈವಾಡ ಇದೆ ಎಂದು ನನಗೆ ಖಚಿತವಾಗಿ ತಿಳಿದುಬಂದಿದೆ. ಬೇಕಾದ್ದಕ್ಕೆಲ್ಲಾ ತಿದ್ದುಪಡಿ ಮಾಡುತ್ತೀರಿ, ಇದಕ್ಕೇಕೆ ಮಾಡಿಲ್ಲ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಈ ಕ್ಷೇತ್ರವನ್ನು ರಾಜಕೀಯಕ್ಕೆ ಬಳಸುವುದು ಸರಿಯಾದುದದಲ್ಲ. ನಿಮ್ಮ ಪಕ್ಷವನ್ನು ಭದ್ರತೆ ಮಾಡಿಕೊಳ್ಳಲು ಕೃಷಿ ವಿಶ್ವವಿದ್ಯಾನಿಲಯಕ್ಕೆ ನಿಮಗೆ ಬೇಕಾದವರನ್ನು ರಾಜಕಾರಣಿಯೊಬ್ಬರನ್ನೂ ಅಲ್ಲಿಯ ವೈಸ್‌ಛಾನ್ಸ್‌ಲರ್ ಆಗಿ ನೇಮಿಸುತ್ತಾರೆಂದು ತಿಳಿದುಬಂದಿದೆ. ಆ ರೀತಿ ಮಾಡಿದರೆ ಅದು ತಪ್ಪು, ಅದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ :—ನಿನ್ನೆಯಿಂದ ಮಾನ್ಯ ಸದಸ್ಯರು ಊಹಾಪೋಹ ಮಾಡಿಕೊಂಡು ಹೇಳುತ್ತಿದ್ದಾರೆ. ಯಾವ ರಾಜಕಾರಣಿಯನ್ನೂ ಅಲ್ಲಿ ವೈಸ್‌ಛಾನ್ಸಲರನ್ನಾಗಿ ಮಾಡಬೇಕೆನ್ನುವ ಉದ್ದೇಶವಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ :—ಹಾಗಿಲ್ಲದಿದ್ದರೆ ಸಂತೋಷ. ಯಾರೋ ಮಾಜಿ ಮಂತ್ರಿಗಳನ್ನು ವೈಸ್‌ಛಾನ್ಸಲರ್ ಆಗಿ ನೇಮಕ ಮಾಡುತ್ತಾರೆಂದು ನನಗೆ ತಿಳಿದು ಬಂತು.

ಶ್ರೀ ಬಿ. ರಾಚಯ್ಯ :—ಮಾನ್ಯ ಸದಸ್ಯರು ನಾನು ಹೇಳಿದ್ದನ್ನು ನಂಬಬೇಕು.

ಶ್ರೀ ಹೆಚ್. ಎನ್. ನಂಜೇಗೌಡ :—ನುಡಿದಂತೆ ನಡೆದಿದ್ದರೆ ನಿಮ್ಮನ್ನು ನಂಬಬಹುದಾಗಿತ್ತು.

ಶ್ರೀ ಬಿ. ರಾಚಯ್ಯ :—ನುಡಿದಂತಲೇ ನಾವು ನಡೆಯುತ್ತೇವೆ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಹೆಚ್. ಎನ್. ನಂಜೇಗೌಡ:—ಅಗ್ರಿಕಲ್‌ಚರ್ ಯೂನಿವರ್ಸಿಟಿ ಮಾನ್ಯ ಮಂತ್ರಿಗಳ ಹತೋಟಿಯಲ್ಲಿದೆ. ಇದು ವ್ಯವಸಾಯ ಮಂತ್ರಿಗಳಿಗೆ ಗೊತ್ತಿಲ್ಲದೇ ಇರಬಹುದು. ಹಾಗಾದರೆ ಮುಖ್ಯಮಂತ್ರಿಗಳು ತಮ್ಮ ಪಕ್ಷವನ್ನು ಭದ್ರ ಮಾಡಿಕೊಳ್ಳುವುದಕ್ಕೆ ಇದನ್ನು ಮಾಡುತ್ತಾ ಇರಬಹುದು.

ಇನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇದುವರೆಗೆ ಯು.ಜಿ.ಸಿ ಸ್ಕೇಲ್ ಕೊಟ್ಟಿರಲಿಲ್ಲ. ಈಗ ಕೊಟ್ಟಿದ್ದಾರೆ ಎಂದು ತಿಳಿದು ಬಂತು. ಸಿಲ್ವರ್ ಜ್ಯೂಬಿಲಿಯ ಒಂದು ಫಂಡ್‌ನಿಂದ ಈ ಹಣವನ್ನು

ಕೊಟ್ಟಿದ್ದಾರೆ ಎಂದು ತಿಳಿದು ಬಂತು. ಈ ಫಂಡ್‌ನಿಂದ ಇದಕ್ಕಾಗಿ ೨೫ ಲಕ್ಷ ರೂಪಾಯಿಗಳನ್ನು ಬಳಸಿ ನಾವು ಇಲ್ಲಿರುವ ಅಧ್ಯಾಪಕರಿಗೆ ಯು.ಜಿ ಸಿ ಸ್ಕೇಲ್ ಕೊಟ್ಟಿದ್ದೇವೆ ಎಂದು ಬೆನ್ನುತಟ್ಟಿ ಕೊಳ್ಳುವುದಾದರೆ ಅದು ಬಹಳ ಕಷ್ಟವಾಗುತ್ತದೆ. ಇದರಲ್ಲಿ ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕು ಸಿಲ್ವರ್ ಜ್ಯೂಬಲಿ ಫಂಡ್‌ಗೆಂದು ಇಟ್ಟಿರುವ ದುಡ್ಡನ್ನು ಅದಕ್ಕೆ ಸಂಬಂಧಪಟ್ಟ ಕೆಲಸಕ್ಕೆ ಬಳಸಬೇಕೇ ವಿನಃ ಇವರಿಗೆ ಯು.ಜಿ.ಸಿ ಸ್ಕೇಲ್ ಕೊಡುವುದಕ್ಕೆ ಬಳಸಬಾರದು. ಅವರಿಗೆ ಯುಜಿಸಿ ಸ್ಕೇಲ್ ಕೊಡುವುದಾದರೆ ಸರ್ಕಾರದಿಂದಲೇ ಈ ಹಣವನ್ನು ಕೊಡಬೇಕೆಂದು ಎಚ್ಚರಿಕೆ ಕೊಡುತ್ತೇನೆ. ಇನ್ನು ಈ ಅಧ್ಯಾಪಕರುಗಳಿಗೆ ಏನು ಯುಜಿಸಿ ಸ್ಕೇಲ್ ಕೊಟ್ಟಿದ್ದೀರೋ ಅದರಲ್ಲಿ ೧೫ ವರ್ಷದಿಂದ ಅಧ್ಯಾಪಕರಾಗಿ ಕೆಲಸ ಮಾಡುತ್ತಾ ಇದ್ದವರೂ ಅವರಿಗೂ ಒಂದೇ ಸ್ಕೇಲು, ಹೊಸದಾಗಿ ಸೇರಿದಂಥ ಅಧ್ಯಾಪಕನಿಗೂ ಒಂದೇ ಸ್ಕೇಲು. ಈ ರೀತಿ ಮಾಡಿದ್ದೀರಿ. ಇದು ಯಾವ ಧರ್ಮ ? ಇದನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಗಲಾಟೆ ಮಾಡಿದ ಸಂದರ್ಭದಲ್ಲಿ ಯುಜಿಸಿಯಿಂದ ತನಿಖೆ ಮಾಡಿಸುತ್ತೇವೆಂದು ಧೀರೋಧಾತ್ತವಾದ ಒಂದು ಸ್ಟೇಟ್‌ಮೆಂಟನ್ನು ಕೊಟ್ಟರು ಅವರು ಕೊಟ್ಟಿದ್ದ ಈ ಒಂದು ಭರವಸೆ ಈ ದಿವಸ ನಿರಾಶೆಯಾಗಿದೆ. ಪುನಃ ಯುಜಿಸಿ ಅವರು ಸ್ಟೇಟ್ ಗೌರ್ನ್ಮೆಂಟ್ ತನಿಖೆ ನಡೆಸಬಹುದು ಎಂದು ಸೂಚಿಸಿದ್ದಾರೆ. ಈ ರೀತಿ ಮಾಡುವುದರಿಂದ ಇದನ್ನು ಮೊದಲೇ ಯೋಚಿಸಬಾರದಾಗಿತ್ತೆ ? ಏತಕ್ಕೆ ಈ ರೀತಿ ಮಾಡಿದರು ? ವಿದ್ಯಾರ್ಥಿಗಳು ಪುನಃ ಚಳುವಳಿ ಮಾಡಬೇಕು ಎನ್ನುವ ಉದ್ದೇಶವೇ ? You must keep up your promise. ಈ ಮಾನ್ಯ ಸಭೆಗೆ ಅವರು ಭರವಸೆ ಕೊಟ್ಟ ಮೇಲೆ ನುಡಿದಂತೆ ನಡೆದುಕೊಳ್ಳಬೇಕು ಅದಲ್ಲದೆ ಹಾದಿ ಬೀದಿಯಲ್ಲಿ ಮಾತನಾಡುವಂತೆ ಈ ಮನೆಯಲ್ಲಿ ಒಣ ಭರವಸೆ ಕೊಡಬಾರದು ಎಂದು ನಾನು ಸೂಚನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮೈಸೂರು ಯೂನಿವರ್ಸಿಟಿ ವಿಚಾರ ತೆಗೆದುಕೊಂಡರೆ ೧೯೬೨ನೇ ಇಸವಿಯಲ್ಲಿ ಇದರ ಉದ್ದೇಶ "to promote reasearch and Education" ಅಂತ ಇತ್ತು. The aim with which this university was started has not been achieved even to-day. It has not yet become a reasearch oriented University. ಆದುದರಿಂದ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡರೂ ಕೂಡ ಅದನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಎಜುಕೇಷನ್ ಬಗ್ಗೆ ಹೇಳುವುದಾದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ೫೩ ಕೋಟಿ ರೂಪಾಯಿ ಯಷ್ಟು ಹಣವನ್ನು ಒದಗಿಸಿದ್ದಾರೆ. ಫ್ರೀ ಪ್ರೈಮರಿ ಎಜುಕೇಶನ್ ವಿಷಯದಲ್ಲಿ ಹೇಳಬೇಕಾಗಿದ್ದರೆ ಮಕ್ಕಳು they learn immitation. ಮತ್ತು ಯಾವುದಾದರೂ ಊರಿನಲ್ಲಿ ಶಾಲೆಗಳಿಗೆ ಕಟ್ಟಡ ಕಟ್ಟಬೇಕಾಗಿದ್ದರೆ ಒಂದೊಂದು ರೂಮಿಗೆ ಒಂದೊಂದು ಸಾವಿರ ರೂಪಾಯಿಯನ್ನು ಕೂಡಿಸಿ ಕೊಟ್ಟರೆ ಕಟ್ಟಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಪಂಚಾಯಿತಿಯವರು ಕೇಳಿದರೆ ಕಾಂಟ್ರಿಬ್ಯೂಷನ್ ಮಾಡಿ ಕೊಡಿರಿ ಕಟ್ಟಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಹಣವಂತರು ಇರುವ ಕಡೆ ಕಾಂಟ್ರಿಬ್ಯೂಷನ್ ಮಾಡುತ್ತಾರೆ, ಅಂಥ ಕಡೆ ರೂಮುಗಳು ಆಗುತ್ತದೆ, ಇಲ್ಲದಿದ್ದ ಕಡೆ ಆಗುವುದಿಲ್ಲ. ಆದುದರಿಂದ ನಾನು ಹೇಳುವುದು ಶಿಶುವಿಹಾರದ ಕಟ್ಟಡವನ್ನು ಕಟ್ಟುವುದಾದರೂ ಕೂಡ ಸರ್ಕಾರದವರು ಹಣವನ್ನು ಹಾಕಿ ಫ್ರೀ ಗ್ರ್ಯಾಂಟ್ಸ್ ಮೂಲಕ ಕಟ್ಟಿಕೊಡಬೇಕು ಎಂದು ಹೇಳುತ್ತೇನೆ. ಮತ್ತು ಸ್ಕೂಲ್‌ಗೆ ಹೋಗುವ ಮಕ್ಕಳಲ್ಲಿ school-going Temptation and Habit ಅನ್ನು ಡೆವಲಪ್ ಮಾಡಬೇಕು. ಆದುದರಿಂದ ಈ ಫ್ರೀಪ್ರೈಮರಿ ಎಜುಕೇಷನ್‌ಗೆ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಕಾಂಟ್ರಿಬ್ಯೂಷನ್ ಕೊಡುವುದರಲ್ಲಾಗಲಿ, ಬೇರೆ ಯಾವ ರೀತಿಯಲ್ಲೇ ಆಗಲಿ ಕಿರುಕುಳ ಕೊಡುವುದು ಸರಿಯಲ್ಲ. ನಮ್ಮ ದೇಶದಲ್ಲಿ ಎಜುಕೇಶನ್ ಚೆನ್ನಾಗಿ ಬೆಳೆಯಬೇಕು. ಮಕ್ಕಳ ಕ್ಯಾರೆಕ್ಟರ್‌ನ್ನು ಬಿಲ್ಡ್ ಅಪ್ ಮಾಡಬೇಕಾದರೆ ಉಪಾಧ್ಯಾಯರನ್ನು ಕನಿಷ್ಟಪಕ್ಷ ಒಂದೇ ಜಾಗದಲ್ಲಿ ೭ ವರ್ಷದವರೆಗೂ ಇಡಬೇಕು, ಹಾಗಾದರೆ ಪ್ರೈಮರಿ ಒಂದನೇ ಸ್ಟಾಂಡರ್ಡ್‌ನಿಂದ ೭ನೇ ಸ್ಟಾಂಡರ್ಡ್‌ನವರೆಗೂ ಚಿಕ್ಕವಿದ್ಯಾರ್ಥಿಗಳಾಗಿದ್ದಾಗಲೇ ಮಕ್ಕಳಿಗೆ ಸಮರ್ಪಕವಾದಂಥ ವಿದ್ಯಾಭ್ಯಾಸ ದೊರೆಯುತ್ತದೆ. ಆದರೆ ರಾಜಕೀಯ ಕಾರಣದಿಂದ ಅವರನ್ನು ಟ್ರಾನ್ಸ್‌ಫರ್ ಮಾಡಿದರೆ ಅದರಲ್ಲಿ ಅಭ್ಯಂತರವಿಲ್ಲ ಇವರ ಒಂದು ಟ್ರಾನ್ಸ್‌ಫರ್‌ನಿಂದ ಇವರ ಟಿ.ಎ ಮತ್ತು ಡಿ ಎ.ಗೆ ೨ ೧/೨ ಕೋಟಿ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಆದಷ್ಟು ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡೀನ್ ಆಫ್ ಸ್ಟ್ಯೂಡೆಂಟ್ಸ್ ಫಾಕಲ್ಟೀಸ್ ವಿಚಾರ ಹೇಳಬೇಕಾದರೆ ಯೂನಿವರ್ಸಿಟಿಯಲ್ಲಿ ಡೀನ್ ಆಫ್ ಫಾಕಲ್ಟೀಸ್ ಅನ್ನು ಸೆಲೆಕ್ಷನ್ ಮಾಡಬೇಕಾದರೆ, ಇಂಟರ್‌ನ್ಯಾಷನಲ್ ಯೂತ್ ಕಾನ್‌ಫರೆನ್ಸ್

(ಶ್ರೀ ಎಚ್. ಎನ್. ನಂಜೇಗೌಡ)

ನಲ್ಲಿ ಅನುಭವಪಟ್ಟುಕೊಂಡಿರುವವರು ಮತ್ತು ಯೂತ್ ಆರ್ಗನೈಸೇಷನ್‌ಗೆ ಸೆಕ್ರಿಟರಿಯಾಗಿ ಕನ್‌ವೀನರ್ ಆಗಿ ಮತ್ತು ಯು.ಎಸ್ ಐ.ಎಸ್.ನಲ್ಲಿ ವರ್ಕ್ ಮಾಡಿ, ಬೆಂಗಳೂರಿನಲ್ಲಿ ಟೀಚರ್ಸ್-ಕೆಲಸ ಮಾಡಿ ಅದರ ಅನುಭವ ಇದ್ದಂಥ ವ್ಯಕ್ತಿಗಳನ್ನು ನೋಡಿ ಸೆಲೆಕ್ಟ್ ಮಾಡಬೇಕು. ಹಾಗಿಲ್ಲದೇ ಯಾರು ಯಾರಿಗೋ ತಮಗೆ ಬೇಕಾದವರಿಗೆ ಸೆಲಕ್ಷನ್ ಮಾಡಿದ್ದಾರೆ. How are we to justify that Selection? I for one will never appreciate such things? ಆದುದರಿಂದ ಸರ್ಕಾರ ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ. ಮತ್ತು ಇದರಲ್ಲಿ ಸಾಕಷ್ಟು ಸರ್ವಿಸ್ ಮತ್ತು ಅನುಭವ ಪಡೆದಂಥ, ಈ ಕ್ಷೇತ್ರದಲ್ಲಿರುವಂಥ ವ್ಯಕ್ತಿಗಳನ್ನು ಡೀನ್ ಆಫ್ ಫಾಕಲ್ಟೀಸ್ ಆಗಿ ಸೆಲೆಕ್ಷನ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಈ ಪ್ರೈಮರಿ-ವಿದ್ಯಾಭ್ಯಾಸಕ್ಕೆ ಶಾಲೆಗಳಿಗೆ ಕಟ್ಟಡ ಒದಗಿಸುವ ವಿಚಾರದಲ್ಲಿ ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿಗೆ ಒಂದೊಂದು ವರ್ಷಕ್ಕೆ ಒಂದೊಂದು ರೂಮಿನಂತೆ ೨೦ ರೂಮುಗಳನ್ನಾದರೂ ಕಟ್ಟಿಸುವ ಒಂದು ಏರ್ಪಾಡು ಮಾಡಬೇಕು ಇದಕ್ಕಾಗಿ ಸರ್ಕಾರದವರು ಪೂರ್ತಾ ಗ್ರಾಂಟನ್ನು ಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER:—The Next Hon. Member to speak is Sri S.H. Basanna He is not present. Now I call upon the Hon. Minister to reply.

ಶ್ರೀ ಕೆ.ವಿ. ಶಂಕರ ಗೌಡ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಈ ಬೇಡಿಕೆಯ ಮೇಲೆ ಈ ಸಭೆಯ ಹನ್ನೆರಡು ಜನ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಅವರು ಮಾಡಿದಂತಹ ಟೀಕೆಗಳನ್ನು ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. ಆ ಟೀಕೆಗಳಿಂದ ನನಗಾದರೂ ಅಷ್ಟೇನೂ ವಿಷಾದವಾಗಿಲ್ಲ. ಅದಕ್ಕಿಂತ ಬಹಳವಾಗಿ ಒಂದು ರೀತಿಯಲ್ಲಿ ನನಗೆ ಸಂತೋಷವೇ ಆಗಿದೆ ಎಂದು ಹೇಳಲು ಇಚ್ಛಿಸುತ್ತೇನೆ. ಕೊಟ್ಟಿರುವ ಅನೇಕ ಟೀಕೆಗಳು ರಚನಾತ್ಮಕವಾಗಿ ಶಿಕ್ಷಣ ಪದ್ಧತಿಯನ್ನು ಉತ್ತಮಪಡಿಸುವ ಸಲುವಾಗಿ ಇದಕ್ಕೆ ಸಹಾಯಕವಾಗುವ ರೀತಿಯಲ್ಲಿದ್ದವು ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಟೀಕೆಗಾಗಿ ಟೀಕೆಗಳನ್ನು ಮಾಡಿಲ್ಲ. ಟೀಕೆ ಲಯಕಾರಿಯಾಗದೇ ಸ್ಪಷ್ಟಾತ್ಮಕವಾದ ಅಭಿಪ್ರಾಯಗಳನ್ನು ಕೊಟ್ಟು ಸಾರ್ಥಕತೆ ಪಡೆದಿದೆ. ಅಂತಹ ಕಠಿಣವಾದ ಟೀಕೆ ಯಾವುದೂ ಬರಲಿಲ್ಲ. ಯಾವುದಕ್ಕೆ ಉತ್ತರ ಕೊಡಬೇಕು ಯಾವುದಕ್ಕೆ ಇಲ್ಲ ಎನ್ನುವ ಒಂದು ಸನ್ನಿವೇಶ ಬಂದಿದೆ. ಸಾಧಾರಣವಾಗಿ ವರ್ಷೇ ವರ್ಷೇ ಬರತಕ್ಕ ಸಾಧಾರಣ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವರು ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕ ವಿಷಯಗಳು ಎಂದರೆ ಶಾಲೆಗಳಿಗೆ ಕೊಠಡಿಗಳಿಲ್ಲ. ಅನೇಕ ಕಡೆಗಳಲ್ಲಿ ಶಾಲೆಗಳಿಗೆ ಉಪಾಧ್ಯಾಯರುಗಳಿಲ್ಲ, ಕೆಲ ಕೆಲವು ಕಡೆಗಳಲ್ಲಿ ಸರಿಯಾಗಿ ಕ್ಲಾಸುಗಳೇ ನಡೆಯುತ್ತಿಲ್ಲ, ನುರಿತ ಹಾಗೂ ತರಬೇತಿ ಪಡೆದ ಅಧ್ಯಾಪಕರುಗಳು ಇಲ್ಲ, ಹೀಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀಕಂಠಯ್ಯನವರು ಭಾಷಣ ಮಾಡುತ್ತಾ ನಮ್ಮ ವಿದ್ಯಾಭ್ಯಾಸ ಪದ್ಧತಿ ನಮ್ಮ ಸಂಸ್ಕೃತಿಗೆ ಅನುಗುಣವಾಗಿರಬೇಕು ಆದರೆ ಇಲ್ಲಿ ಒಂದು ರೀತಿಯಾದ ಗೊಂದಲಮಯವಾದ ವಾತಾವರಣ ಇದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದರು. ಇಂತಹ ಗೊಂದಲಮಯವಾದ ವಾತಾವರಣ ಕೆಲವು ವರ್ಷಗಳ ಹಿಂದೆ ಇತ್ತು. ಈಗ ಇಲ್ಲ ಎಂದು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಶಿಕ್ಷಣ ನಮ್ಮ ಸಂಸ್ಕೃತಿಗೆ ಅನುಗುಣವಾಗಿರಬೇಕು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ನಮ್ಮ ಜನರ ಆಸೆ ಮತ್ತು ಆಶೋತ್ತರಗಳನ್ನು ಈಡೇರುವಂಥದ್ದು ಆಗಿರಬೇಕು. ಜನರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಇಂಬುಗೊಡತಕ್ಕಂತಹ ಶಿಕ್ಷಣ ಪದ್ಧತಿಯಾಗಬೇಕು. ಇದನ್ನು ಗಮನದಲ್ಲಿಟ್ಟುಕೊಂಡೇ ಕೋಠಾರಿ ಆಯೋಗದವರು ಒಂದು ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದರು. ಅವರು ಅನೇಕ ಶಿಫಾರಸುಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೃಷ್ಣನ್‌ರವರು ಭಾಷಣ ಮಾಡುತ್ತಾ ಶಿಕ್ಷಣ ಮಂತ್ರಿಗಳಾಗಲೀ, ಉಪ ಮಂತ್ರಿಗಳಾಗಲೀ ಕೋಠಾರಿ ಆಯೋಗದ ವಿಷಯವಾಗಿ ಮಾತನಾಡುತ್ತಿಲ್ಲ. ಬಹುಶಃ ಅದನ್ನು ಮರೆತುಬಿಟ್ಟರೋ ಏನೋ ಎಂಬ ಶಂಕೆಯನ್ನು ವ್ಯಕ್ತಪಡಿಸಿದರು. ವಿದ್ಯಾ ಕ್ಷೇತ್ರದ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದ್ದರೆ ಅವರು ಈ ವಿಧವಾದ ಅಭಿಪ್ರಾಯಕ್ಕೆ ಬರುತ್ತಿರಲಿಲ್ಲ ಎಂದು ನನ್ನ ಖಚಿತವಾದ ಅಭಿಪ್ರಾಯ ಏಕೆಂದರೆ ಈಗ ಕೊಠಾರಿ ಆಯೋಗದವರು ಮಾಡಿರುವ ಶಿಫಾರಸುಗಳಲ್ಲಿ ಅನೇಕ ಶಿಫಾರಸುಗಳು ಈಗಾಗಲೇ ಜಾರಿಗೆ ಬಂದಿವೆ. ಬಹು ಸಂಖ್ಯೆಯ ಶಿಫಾರಸುಗಳನ್ನು ಜಾರಿಗೆ ತಂದಿರುವುದರಲ್ಲಿ ನಮ್ಮ ರಾಜ್ಯ ಮೊಟ್ಟ ಮೊದಲನೆಯ ಸ್ಥಾನವನ್ನು ಪಡೆದಿದೆ ಎಂದು ನಾನು ಹೆಮ್ಮೆಯಿಂದ ಹೇಳಬಹುದು. ಬಿಲ್ಡಿಂಗುಗಳನ್ನು ಕಟ್ಟತಕ್ಕ ವಿಚಾರ, ಹತ್ತನೆ ಸ್ಟಾಂಡರ್ಡನ್ನು ಬದಲಾವಣೆ ಮಾಡುವ ವಿಚಾರ, ಉಪಾಧ್ಯಾಯರುಗಳಿಗೆ ತರಬೇತಿ ಕೊಡುವ ವಿಚಾರ,

ಶಿಕ್ಷಕರ ಸಂಬಳ ಸಾರಿಗೆ ವಿಚಾರ, ಶಾಲೆಗಳಲ್ಲಿ ಕಾಯಕದ ಅನುಭವವನ್ನುಂಟುಮಾಡತಕ್ಕ ಉಪಾಧ್ಯಾಯರುಗಳ ವಿಚಾರ ಮತ್ತೆ ಕಾಲೇಜಿನ ಶಿಕ್ಷಣದ ವಿಚಾರ, ಹೀಗೆ ಈ ಎಲ್ಲಾ ವಿಚಾರಗಳಲ್ಲಿ ಕೊಠಾರಿ ಕಮಿಷನ್ನಿನವರು ಏನು ಶಿಫಾರಸುಗಳನ್ನು ಮಾಡಿದ್ದಾರೆ ಆ ಶಿಫಾರಸುಗಳಲ್ಲಿ ಬಹುಸಂಖ್ಯೆಯ ಶಿಫಾರಸುಗಳನ್ನು ನಾವು ಈಗಾಗಲೇ ಜಾರಿಗೆ ತಂದಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ದಯಾನಂದ ಸಾಗರ್‌ರವರು ಶಿಕ್ಷಣ ಕ್ಷೇತ್ರದಲ್ಲಿ ವಿಧ್ಯಾರ್ಥಿಗಳ ಮೇಲೆ ಒಂದು ವಿಧವಾದ ಪ್ರಯೋಗತೀ ನಡೆಯುತ್ತಿದೆ, ಅದೇಕೆ ನಡೆಯುತ್ತಿದೆ, ಒಂದು ವರ್ಷದಲ್ಲಿ ಇದ್ದಂತಹ ಪದ್ಧತಿ ಮತ್ತೊಂದು ವರ್ಷದಲ್ಲಿರುವುದಿಲ್ಲ; ಎಲ್ಲವೂ ಒಂದು ರೀತಿಯಾದ ಗೊಂದಲಮಯವಾದ ಸ್ಥಿತಿಯಲ್ಲಿ ಇದೆ ಎಂದು ಆರೋಪಣೆಯನ್ನು ಬಹಳ ಕಟುವಾಗಿಯೇ ಮಾಡಿದರು. ಇದು ಸತ್ಯಕ್ಕೆ ದೂರವಾದ ಮಾತು. ಹಿಂದೆ ಎರಡು ವರ್ಷಗಳು ಪ್ರೌಢ ಶಿಕ್ಷಣ ಇರಬೇಕು ಎಂದು ಹನ್ನೊಂದು ವರ್ಷಗಳಿಂದು ಮಾಡಿತ್ತು. ಇದನ್ನು ೧೦ ವರ್ಷಗಳಿರಬೇಕೆಂದು ಮಾಡಿದ್ದು ನಿಜ. ಆಗ ಕೊಠರಿ ಆಯೋಗ ರಚಿತವಾಗಿರಲಿಲ್ಲ. ಈ ಆಯೋಗ ಶಿಫಾರಸು ಮಾಡಿದ ಮೇಲೆ ಅದಕ್ಕನುಗುಣವಾಗಿ ನಮ್ಮ ಶಿಕ್ಷಣ ಪದತಿಯನ್ನು ಮಾರ್ಪಾಡು ಮಾಡಲಾಗಿದೆ. ಅದಕ್ಕೆ ವ್ಯತಿರಿಕ್ತವಾಗಿ ಮಾಡುತ್ತಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಗೊಂದಲ ಇದೆ ಎನ್ನತಕ್ಕ ಮಾತು ಒಪ್ಪತಕ್ಕದ್ದಲ್ಲ. ಕೊಠಾರಿ ಆಯೋಗದವರು ಏನೇನು ಶಿಫಾರಸುಗಳನ್ನು ಸೂಚಿಸಿದ್ದರೋ ಅದಕ್ಕನುಸಾರವಾದ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಶ್ರೀಮಾನ್ ಶ್ರೀಕಂಠಯ್ಯನವರು ವಿಧ್ಯಾರ್ಥಿಗಳ ಶಿಸ್ತಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಭವಿಷ್ಯವನ್ನು ರೂಪಿಸತಕ್ಕ ದೇಗುಲಗಳು ನಮ್ಮ ಶಾಲೆಗಳು. ಅಲ್ಲಿ ಎಂತಹ ಮಕ್ಕಳನ್ನು ನಾವು ತಯಾರು ಮಾಡುತ್ತೇವೋ ಅಂತಹ ಮಕ್ಕಳ ಭವಿಷ್ಯವೇ ಮುಂದಿನ ಪೀಳಿಗೆಯ ಭವಿಷ್ಯ ಎನ್ನುವುದು ಒಪ್ಪತಕ್ಕ ಮಾತು. ಇಂದಿನ ವಿದ್ಯಾರ್ಥಿ ವೃಂದದಲ್ಲಿ ಒಂದು ರೀತಿಯಾದ ಆಸಕ್ತಿ ಮತ್ತು ಜಾಗೃತಿ ಬಹಳ ಹೆಚ್ಚಾಗಿ ಕಂಡುಬರುತ್ತಿದೆ. ಈ ಯುಗವನ್ನು ಒಂದು ವಿಧದಲ್ಲಿ ವಿದ್ಯಾರ್ಥಿಯುಗ ಎಂದು ನಾವು ಕರೆಯಬಹುದು. ಅವರಲ್ಲಿ ಜಾಗೃತಿ ಇದೆ. ಅದು ಹೇಗಿದೆ ಎಂದರೆ ಕಟ್ಟೆ ಒಡೆದು ಭೋರ್ಗರೆಯುವ ನೀರಿನ ಪ್ರವಾಹವಾಗದೇ ಅಣೆಗೊಂಡ ಜಲಧಿಯಂತೆ ಫಲವತ್ತಾಗಿ ಮಾಡಬೇಕು. ಇದು ಪೋಷಕರ, ಬೋಧಕರುಗಳ ಮತ್ತು ರಾಜಕಾರಣಿಗಳ ಕರ್ತವ್ಯ. ನಮ್ಮ ರಾಜ್ಯದಲ್ಲಿ ಅಶಿಸ್ತಿನ ವಿಷಯವನ್ನು ಪರಿಶೀಲನೆ ಮಾಡಿದರೆ ಎಲ್ಲ ರಾಜ್ಯಗಳಿಗಿಂತಲೂ ನಮ್ಮ ರಾಜ್ಯದಲ್ಲಿ ಬಹಳ ಹೆಚ್ಚಿನ ಶಿಸ್ತಿನಿಂದ ವಿದ್ಯಾರ್ಥಿಗಳು ಇದ್ದಾರೆ ಎನ್ನುವುದನ್ನು ತೋರಿಸುತ್ತದೆ. ವಿದ್ಯಾರ್ಥಿಗಳಲ್ಲಿರುವ ಅಶಿಸ್ತನ್ನು ಸರಿಪಡಿಸಬೇಕಾದರೆ ಪೋಷಕರು, ಬೋಧಕರುಗಳು ಮತ್ತು ರಾಜಕಾರಣಿಗಳು ಮುಂದೆ ಬಂದು ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಇಂದು ದೇಶದ ವಿದ್ಯಾ ಕ್ಷೇತ್ರದಲ್ಲಿ ಬದಲಾವಣೆಯಾಗಿ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ಅನೇಕರ ಆಸೆ ನಿರಾಸೆಗಳಿಗೆ ವಿದ್ಯಾರ್ಥಿಗಳು ತುತ್ತಾಗಬೇಕಾಗಿದೆ. ಇದನ್ನು ತೊಡೆದು ಹಾಕಬೇಕಾದರೆ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕು. ಮಾತೃಭಾಷೆಯಲ್ಲಿ ಶಿಕ್ಷಣ ಇರಬೇಕು ಎಂದು ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ಇಲ್ಲಿ ಪ್ರಸ್ತಾಪ ಮಾಡಿದರು ನಾವು ಈಗಾಗಲೇ ತ್ರಿಭಾಷಾ ಸೂತ್ರ ಇರಬೇಕು ಎಂದು ಒಪ್ಪಿಕೊಂಡಿದ್ದೇವೆ. ಪ್ರಾಥಮಿಕ ಮಟ್ಟದಲ್ಲಿ ಮಾತೃಭಾಷೆಯಲ್ಲಿಯೇ ಶಿಕ್ಷಣವಾಗಬೇಕು ಎನ್ನುವುದನ್ನೂ ಒಪ್ಪಿಕೊಂಡಿದ್ದೇವೆ. ಆ ರೀತಿ ಶಿಕ್ಷಣವನ್ನು ಈಗ ನಾವು ಕೊಡುತ್ತಿದ್ದೇವೆ. ಕೆಲವು ಮಾನ್ಯ ಸದಸ್ಯರು ಯಾರ ಮಾತೃ ಭಾಷೆ ಕನ್ನಡವಲ್ಲದೆ ಬೇರೆ ಭಾಷೆಯಾಗಿರುತ್ತದೋ ಅಂತಹವರು ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗಿರತಕ್ಕ ರೀತಿಯಲ್ಲೇ ಯಾರಿಗೆ ಕನ್ನಡ ಮಾತೃ ಭಾಷೆಯಾಗಿಲ್ಲವೋ ಅವರುಗಳು ನಾಲ್ಕನೇ ತರಗತಿಯಿಂದ ಮುಂದಕ್ಕೆ ಕನ್ನಡವನ್ನು ಐಚ್ಛಿಕ ಭಾಷೆಯಾಗಿ ವಿದ್ಯಾಭ್ಯಾಸ ಮಾಡಬಹುದು ಎನ್ನುವ ನಿಯಮ ಇದೆ. ಆದರೆ ಇದನ್ನು ಮೂರು ಮತ್ತು ನಾಲ್ಕನೆಯ ವರ್ಷಗಳಿಂದ ಕನ್ನಡ ಮಾತೃ ಭಾಷೆ ಅಲ್ಲದವರಿಗೆ ಕಡ್ಡಾಯ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಈ ಬಗ್ಗೆ ನೇಮಕ ಮಾಡಲಾಗಿದ್ದ ಕರಿಕ್ಯುಲಂ ಕಮಿಟಿಯವರು ಸೂಚಿಸಿದ್ದಾರೆ. ನನ್ನ ಅಭಿಪ್ರಾಯವೂ ಕೂಡ ಇದೇ ಆಗಿದೆ ಎಂಬುದನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೆರೆಯ ರಾಜ್ಯಗಳಾದ ಮದ್ರಾಸ್, ಮಹಾರಾಷ್ಟ್ರಗಳಲ್ಲಿಯೂ ಕೂಡ ಅವರವರ ಪ್ರಾದೇಶಿಕ ಭಾಷೆಗಳನ್ನೇ ಕಡ್ಡಾಯ ಮಾಡಿರುವ ನಿದರ್ಶನಗಳು ಉಂಟು. ನಮ್ಮ ರಾಜ್ಯದಲ್ಲಿಯೂ ಕೂಡ ಇದೇ ರೀತಿ ೧೯೫೮ ರಲ್ಲಿ ಮಾಡಲಾಗಿತ್ತು. ಕೆಲವು ಮೂಲಗಳಿಂದ ಪ್ರತಿರೋಧ ಬಂದಿದ್ದರಿಂದ ಬದಲಾವಣೆ ಮಾಡಲಾಯಿತು. ಈಗ ಮತ್ತೆ ಪುನರ್ವಿಮರ್ಶೆ ಮಾಡುವ ಕಾಲ ಬಂದಿದೆ. ಅದು ಸರ್ಕಾರದ ಗಮನದಲ್ಲಿ ಇದೆ. ಅದನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಪ್ರಾಥಮಿಕ ಶಿಕ್ಷಣವನ್ನು ಮತ್ತು ಸೆಕೆಂಡರಿ ಶಿಕ್ಷಣವನ್ನು ನಿರ್ಲಕ್ಷಿಸಲಾಗಿದೆ ಎಂಬ ದೂರನ್ನು ಕೆಲವರು ಮಾಡಿದ್ದಾರೆ. ಅದು ಅಷ್ಟಾಗಿ ಒಪ್ಪುವ ಮಾತಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದೆ. ಅದರಂತೆ ಸೆಕೆಂಡರಿ ಶಿಕ್ಷಣಕ್ಕೂ ಕೂಡ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗಿದೆ. ೬ ರಿಂದ ೧೦ನೇ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿದ್ದೇವೆ. ಅದರ ಪ್ರಕಾರ ಶಾಲೆಗಳಿಗೆ ದಾಖಲಾಗಿರುವ ಮಕ್ಕಳ ಸಂಖ್ಯೆ ೧೦೦ಕ್ಕೆ ೮೬ ರಷ್ಟು ಗಂಡುಮಕ್ಕಳು ಇದ್ದರೆ ೧೦೦ಕ್ಕೆ ೮೫ ರಷ್ಟು ಹೆಣ್ಣುಮಕ್ಕಳು ಇದ್ದಾರೆ. ಆಲ್-ಇಂಡಿಯಾ ಆವರೇಜ್ ತೆಗೆದುಕೊಂಡರೆ ನಮ್ಮ ರಾಜ್ಯದ ಪರ್‌ಸೆಂಟೇಜ್ ಜಾಸ್ತಿ ಇದೆ.

(ಶ್ರೀ ಕೆ. ವಿ. ಶಂಕರಗೌಡ)

ಇದಕ್ಕಾಗಿ ಸಂತೋಷಪಡಬೇಕಾಗಿದೆ. ೧೦೦ಕ್ಕೆ ೮೬ ರಷ್ಟು ಮಕ್ಕಳು ದಾಖಲಾಗಿದ್ದರೂ ಕೂಡ ಶಾಲೆಗೆ ಬರುವವರ ಸಂಖ್ಯೆ ಸ್ವಲ್ಪ ಕಡಿಮೆ ಇದೆ. ಇದನ್ನು ಒಪ್ಪಿಕೊಳ್ಳಬಹುದು. ವೇಸ್ಟೇಜ್ ಮತ್ತು ಸ್ಟಾಗ್‌ನೇಷನ್ ಸಾಕಷ್ಟು ಪ್ರಮಾಣದಲ್ಲಿ ಇದೆ. ಇದನ್ನು ಕಡಿಮೆ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದೇವೆ. ೧೦೦ಕ್ಕೆ ೮೫ ರಿಂದ ೮೬ ರಷ್ಟು ಎನ್-ರೋಲ್ ಆಗಿದ್ದರೂ ಕೂಡ ಪಾಠಶಾಲೆಗೆ ಬರುವವರ ಸಂಖ್ಯೆ ಶೇಕಡ ೬೩-೬೪ ಎಂದು ತಿಳಿದುಬಂದಿದೆ. ಅಂದರೆ ನೂರಕ್ಕೆ ೨೦ ರಷ್ಟು ಮಕ್ಕಳು ಹಾಜರಾಗುತ್ತಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದ್ದರೂ ಕೂಡ ೫ನೇ ತರಗತಿಗೆ ಬರುವವರ ಸಂಖ್ಯೆ ೧೦೦ಕ್ಕೆ ೨೦ ರಷ್ಟು ಮಾತ್ರ ಎಂಬುದಾಗಿ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದರು. ಕಡ್ಡಾಯ ಶಿಕ್ಷಣ ಇರುವುದು ನಾಲ್ಕನೇ ತರಗತಿಯವರೆಗೆ ಮಾತ್ರ. ಅದರ ಮುಂದಿನ ಶಿಕ್ಷಣ ಕಡ್ಡಾಯವಿಲ್ಲ. ಬಹುತೇಕ ವಿದ್ಯಾರ್ಥಿಗಳು ನಾಲ್ಕನೇ ವರ್ಷದವರೆಗೆ ಇರುವ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಪ್ರಯೋಜನವನ್ನು ಪಡೆಯುತ್ತಾರೆ. ಮುಂದಿನ ವರ್ಷಗಳಲ್ಲಿ ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುವುದಿಲ್ಲ. ಈ ಕಾರಣದಿಂದ ಪರ್‌ಸೆಂಟೇಜನ್ನು ಅಳತೆ ಮಾಡುವುದಕ್ಕಾಗುವುದಿಲ್ಲ ಎಂಬ ವಿಷಯವನ್ನು ವ್ಯಕ್ತಪಡಿಸುತ್ತೇನೆ. ಪ್ರಾಥಮಿಕ ಶಿಕ್ಷಣವನ್ನು ಇನ್ನೂ ಉತ್ತಮಪಡಿಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಪ್ರಮುಖ ಸ್ಥಳಗಳಲ್ಲಿರುವ ಶಾಲೆಗಳಿಗೆ ಪದಪೀಧರರಾದಂಥವರನ್ನು ಮುಖ್ಯೋಪಾಧ್ಯಾಯರನ್ನಾಗಿ ನೇಮಕ ಮಾಡಿದ್ದೇವೆ. ಅವರ ಜವಾಬ್ದಾರಿ ಅವರ ಶಾಲೆಯ ಮೇಲ್ವಿಚಾರಣೆಯನ್ನು ಮಾಡುವುದು ಮಾತ್ರವಲ್ಲ, ಅವರ ಶಾಲೆಯ ಜೊತೆಗೆ ಸುತ್ತಮುತ್ತ ಇರತಕ್ಕಂಥ ಏಕ ಉಪಾಧ್ಯಾಯ ಶಾಲೆಗಳಿಗೂ ಮಾರ್ಗದರ್ಶನ ಮಾಡಬೇಕೆಂದು ಅವರಿಗೆ ಆದೇಶ ಕೊಟ್ಟಿದ್ದೇವೆ. ಅದರಂತೆ ಅವರು ಕೆಲಸ ಮಾಡುತ್ತಿದ್ದಾರೆ. ಈಗ ೩೨ ಸಾವಿರ ಶಾಲೆಗಳ ಪೈಕಿ ೧೪ ಸಾವಿರಕ್ಕೂ ಮೇಲ್ಪಟ್ಟು ಏಕ ಉಪಾಧ್ಯಾಯರ ಶಾಲೆಗಳು ಇವೆ. ಅಂತಹ ಶಾಲೆಗಳಿಗೆ ಮಾರ್ಗದರ್ಶನ ಮಾಡುವ ಅವಶ್ಯಕತೆ ಹೆಚ್ಚಾಗಿದೆ. ಅದನ್ನು ಮನಗಂಡು ಪದವೀಧರ ಮುಖ್ಯೋಪಾಧ್ಯಾರು ಅಂತಹ ಶಾಲೆಗಳಿಗೆ ಮಾರ್ಗದರ್ಶನ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅದರಂತೆ ಅವರು ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಸೈನ್ಸ್ ಕಿಟ್‌ನ್ನು ಅನೇಕ ಶಾಲೆಗಳಿಗೆ ಒದಗಿಸಿ ದ್ದೇವೆ. ಮತ್ತು ಯೂನಿಸೆಫ್ ಮತ್ತು ಯುನೆಸ್ಕೋ ಸಹಾಯದಿಂದ ಕೆಲವು ಮುಖ್ಯ ಶಾಲೆಗಳನ್ನು ಆರಿಸಿ ಕೊಂಡು ಅಂತಹ ಶಾಲೆಗಳಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಬೋಧನೆಯನ್ನು ದೃಢೀಕರಿಸುವುದಕ್ಕೆ, ಶ್ರೀಮಂತ ಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ಅನೇಕ ದಿಕ್ಕಿನಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹಾಗಿದ್ದಾಗ್ಯೂ ಕೂಡ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡಿದಂತಹ ವಿದ್ಯಾರ್ಥಿಗಳು ೧೦ನೇ ಸ್ಟಾಂಡರ್ಡ್‌ನಲ್ಲಿ ಯಾವ ಮಟ್ಟದಲ್ಲಿ ಪಾಸ್ ಮಾಡುತ್ತಿದ್ದಾರೆ ಎನ್ನುವುದರ ಅನುಭವ ನೋಡಿಕೊಂಡು ಅದರ ಆಧಾರದ ಮೇಲೆ ಗುಣಮಟ್ಟವನ್ನು ಅಳಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಪರಿಕ್ಷೆಗಳಲ್ಲಿ ಪಾಸಾಗುವವರ ಸಂಖ್ಯೆಯ ಮೇಲೆ ಗುಣವನ್ನು ಅಳತೆ ಮಾಡುವುದ ಕ್ಕಾಗುವುದಿಲ್ಲ. ಇವತ್ತು ನಾವು ಶೀಲ ಮತ್ತು ಚಾರಿತ್ರ್ಯವುಳ್ಳವರನ್ನು ತಯಾರು ಮಾಡಬೇಕಾಗಿದೆ. ಶೀಲ ಇಲ್ಲದ ಶಿಕ್ಷಣ ಸಪ್ತ ಸಾಮಾಜಿಕ ಪಾತಕಗಳಲ್ಲಿ ಒಂದು ಎಂದು ಮಹಾತ್ಮಗಾಂಧಿಯವರು ಹೇಳಿದ್ದರು. ಇವತ್ತು ಹೆಚ್ಚು ವಿದ್ಯಾರ್ಥಿಗಳು ಪಾಸಾಗುತ್ತಿಲ್ಲ ಎನ್ನುವ ಬಗ್ಗೆ ಕಳವಳ ಪಡಬೇಕಾಗಿಲ್ಲ. ಅದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಲ್ಲಿ ಶೀಲ ಮತ್ತು ಚಾರಿತ್ರ್ಯ ಇಲ್ಲದಿದ್ದರೆ ಕಳವಳ ಪಡಬೇಕು. ಇವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸ ಬೇಕಾದರೆ ಮುಖ್ಯವಾಗಿ ನೈತಿಕ ಶಿಕ್ಷಣವನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಡಬೇಕಾಗಿದೆ. ನಾವು ವಿದ್ಯಾರ್ಥಿ ಗಳಾಗಿದ್ದಾಗ ನೈತಿಕ ಶಿಕ್ಷಣ ಒಂದು ರೂಪದಲ್ಲಿ ನಮಗೆ ಶಾಲೆಗಳಲ್ಲಿ ದೊರೆಯುತ್ತಿತ್ತು. ಅದು ಇತ್ತೀಚೆಗೆ ಕಡಿಮೆಯಾಗಿದೆ. ಅದನ್ನು ಮತ್ತೆ ಬಲಪಡಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದಕ್ಕಾಗಿ ಶಾಲೆ ಗಳಲ್ಲಿ ಒಂದೆರಡು ಗಂಟೆಗಳನ್ನು ವಾರದಲ್ಲಿ ಮೀಸಲಿಡಬೇಕೆಂದು ಶೀರ್ಮಾನ ಮಾಡಿಕೊಂಡಿದ್ದೇವೆ ಈ ದೃಷ್ಟಿ ಯಿಂದ ಇನ್ನು ಮುಂದೆ ವಿದ್ಯಾರ್ಥಿಗಳಲ್ಲಿ ಶೀಲ ಮತ್ತು ಚಾರಿತ್ರ್ಯ ಜಾಸ್ತಿಯಾಗುತ್ತದೆಂದು ತಿಳಿದು ಕೊಂಡಿದ್ದೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ನೈತಿಕ ಶಿಕ್ಷಣ ಎಂದರೆ ನನಗೆ ಅರ್ಥವಾಗಲಿಲ್ಲ?

ಶ್ರೀ ಕೆ ವಿ. ಶಂಕರೇಗೌಡ.—ನೈತಿಕ ಶಿಕ್ಷಣ ಎಂದರೆ ವಿದ್ಯಾರ್ಥಿಗಳಿಗೆ ಸತ್ಯ, ಧರ್ಮ ಮತ್ತು ಅಹಿಂಸೆಯ ಬಗ್ಗೆ ಬೋಧನೆ ಮಾಡುವುದು. ಮತ್ತು ಅವುಗಳ ಸ್ವರೂಪವನ್ನು ತಿಳಿಸುವುದು. ನಿಜ ಜೀವನದಲ್ಲಿ ಇದನ್ನು ಅನುಸರಿಸಿದರೆ ಒಳ್ಳೆಯದಾಗುತ್ತದೆ ಎಂದು ಹೇಳಿಕೊಡುವುದು. ಈಗ ನಾವು ಕೊಡುತ್ತಿರುವುದು ಸಾಮೂಹಿಕ ಶಿಕ್ಷಣ ಅನೇಕ ವಿಧ್ಯಾರ್ಥಿಗಳ ತಂದೆತಾಯಿಗಳು ವಿದ್ಯಾವಂತರಾಗಿರುವುದಿಲ್ಲ. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವಂತಹ ವಾತಾವರಣದಲ್ಲಿ ಅವರು ಇರುವುದಿಲ್ಲ. ಇಂತಹ ಪರಿಸ್ಥಿತಿಯಿಂದ

ಬಂದಿರುವ ಮಕ್ಕಳು ಏಕ್‌ದಮ್ ಪರೀಕ್ಷೆಯಲ್ಲಿ ಪಾಸು ಮಾಡುವುದು ಕಷ್ಟವಿದೆ. ಈ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪಾಸಾಗುತ್ತಿಲ್ಲ. ಅದಕ್ಕಾಗಿ ಯಾರೂ ವಿವಂಚನೆಗೆ ಗುರಿಯಾಗಬೇಕಾಗಿಲ್ಲ. ಕೆಲವು ಕಾಲ ಈ ರೀತಿ ಇರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿದ್ಯಾರ್ಥಿಗಳಲ್ಲಿ ವಿದ್ಯಾಮಟ್ಟವನ್ನು ವೃದ್ಧಿಪಡಿಸುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಉಪಾಧ್ಯಾಯರುಗಳಿಗೆ ತರಬೇತಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ವಿಜ್ಞಾನ ಬೋಧನೆಯ ಬಗ್ಗೆ ಉಪಾಧ್ಯಾಯರುಗಳಿಗೆ ಹೆಚ್ಚಿನ ಮಾಹಿತಿ ಕೊಡುವುದಕ್ಕಾಗಿ ಪಾರ್ಟ್ ಟವರ್ಮ್ ಟ್ರೈನಿಂಗ್ ಕೋರ್ಸನ್ನು ಪ್ರಾರಂಭ ಮಾಡಿದ್ದೇವೆ. ತರಬೇತಿ ಇಲ್ಲದವರನ್ನು ಶಿಕ್ಷಕರನ್ನಾಗಿ ನೇಮಕ ಮಾಡಬಾರದೆಂದು ತೀರ್ಮಾನ ಕೈಕೊಂಡಿದ್ದೇವೆ. ಪರೀಕ್ಷೆಯಲ್ಲಿ ಇಷ್ಟೊಂದು ವಿದ್ಯಾರ್ಥಿಗಳು ಫೇಲಾಗುವುದಕ್ಕೆ ಕಾರಣ ಏನು ಮತ್ತು ಅದರ ಬಗ್ಗೆ ಸಮಯೋಚಿತವಾದ ಪರಿಹಾರ ಕೊಡುವುದಕ್ಕೆ ಡಿ.ಪಿ.ಐ. ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಆ ಕಮಿಟಿಯವರು ಕೆಲವೊಂದು ಶಿಫಾರಸ್ ಮಾಡಿದ್ದಾರೆ. ಆ ಶಿಫಾರಸ್‌ಗಳನ್ನು ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ವಯಸ್ಕರ ಶಿಕ್ಷಣಕ್ಕೆ ಸಾಕಷ್ಟು ಶಾಲೆಗಳು ರಾಜ್ಯದಲ್ಲಿ ಇಲ್ಲ ಎಂದು ಹೇಳಿದರು. ಈಗ ವಯಸ್ಕರ ಶಿಕ್ಷಣ ಸಮಿತಿಯವರು ೧೦೦೦ ಶಾಲೆಗಳನ್ನು ನಡೆಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಲೈಬ್ರರಿ ಮತ್ತು ವಿದ್ಯಾಪೀಠಗಳನ್ನು ನಡೆಸುತ್ತಿದ್ದಾರೆ. ಈ ಒಂದು ಕಾರ್ಯವನ್ನು ಇನ್ನೂ ವ್ಯಾಪಕವಾಗಿ ನಡೆಸಬೇಕೆಂಬ ದೃಷ್ಟಿಯಿಂದ ಇದನ್ನು ಒಂದು ಸ್ಟ್ಯಾಚ್ಯೂಟರಿ ಬಾಡಿಯನ್ನಾಗಿ ಮಾಡಬೇಕೆಂದು ತೀರ್ಮಾನ ಕೈಕೊಂಡು ಒಂದು ಬಿಲ್ಲನ್ನು ತಯಾರು ಮಾಡಲಾಗುತ್ತಿದೆ. ಸ್ವಲ್ಪ ಕಾಲದಲ್ಲಿಯೇ ಆ ಒಂದು ಬಿಲ್ ಈ ಸಭೆಯ ಮುಂದೆ ಬರಬಹುದು. ಆಗ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಕೊಡಬಹುದು.

ಶ್ರೀ ಎಲ್. ಶ್ರೀಕಂಠಯ್ಯ: ರಷ್ಯಾ ದೇಶದಲ್ಲಿ ಅನಕ್ಷರತೆಯನ್ನು ಕೇವಲ ೫ ವರ್ಷಗಳಲ್ಲಿ ಹೋಗಲಾಡಿಸಿದರು ನಮಗೆ ಸ್ವಾತಂತ್ರ್ಯ ಬಂದು ೨೩ ವರ್ಷಗಳಾದರೂ ಕೂಡ ಅನಕ್ಷರತೆಯನ್ನು ಹೋಗಲಾಡಿಸಲು ಏತಕ್ಕೆ ಆಗಲಿಲ್ಲ ?

ಆಯಾದೇಶದ ಪದ್ಧತಿ ಬೇರೆ ಬೇರೆ ಇರುತ್ತದೆ. ನಮ್ಮ ದೇಶದ ಪ್ರಜಾಪ್ರಭುತ್ವಕ್ಕೂ, ಬೇರೆ ದೇಶದ ಪದ್ಧತಿಗೂ ಸರಿಹೋಗುವುದಿಲ್ಲ. ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಶಾಲೆಗಳ ಉಸ್ತುವಾರಿ ಸಾಲದು ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಉಸ್ತುವಾರಿ ಸಾಲದು. ಇದುವರೆಗೂ ಮಾಡಿರತಕ್ಕದ್ದು ವಿಸ್ತರಣಾಕಾರ್ಯ. ಬಹಳ ಮಟ್ಟಿಗೆ ವಿಸ್ತರಣೆಯಾಗಿದೆ. ಈಗ ವಿಸ್ತರಣೆ ಯಾವ ಮಟ್ಟದಲ್ಲಿ ಆಗಿದೆಯೋ ಅದೇ ಮಟ್ಟದಲ್ಲಿ ಉಸ್ತುವಾರಿ ನೋಡಿಕೊಳ್ಳಬೇಕಾಗಿದೆ. ಆದಕ್ಕಾಗಿ ಉಸ್ತುವಾರಿಯನ್ನು ನೋಡಿಕೊಳ್ಳತಕ್ಕ ಜನರನ್ನು ನಾವು ನೇಮಕ ಮಾಡುವುದಕ್ಕೆ ಸಾಧ್ಯವಾಗಿಲ್ಲ ಅದಕ್ಕೆ ಒಂದು ಪ್ರಪೋಜಲ್ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ. ಅದರ ಪ್ರಕಾರ ೫೦ ಶಾಲೆಗಳಿಗೆ ಒಬ್ಬರು ಇನ್‌ಸ್ಪೆಕ್ಟರರು ಇರಬೇಕು. ಆಯಾ ಜಿಲ್ಲೆಯ ವಿದ್ಯಾಶಾಲೆಗಳು, ವಿದ್ಯಾಸಂಸ್ಥೆಗಳಿಗನುಗುಣವಾಗಿ ಡಿ.ಇ.ಓ. ಇರಬೇಕು. ಪ್ರತಿ ಜಿಲ್ಲೆಗೂ ಡೆಪ್ಯುಟಿ ಡೈರೆಕ್ಟರು ಇರಬೇಕು. ಪ್ರತಿ ಡಿವಿಜನ್ನಿಗೂ ಜಾಯಿಂಟ್ ಡೈರೆಕ್ಟರು ಇರಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಅದನ್ನು ಸರ್ಕಾರದವರು ತೀವ್ರವಾಗಿ ಗಮನಿಸುತ್ತಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ಮಾಡಿ ಶಾಲೆಗಳ ಉಸ್ತುವಾರಿ ಚೆನ್ನಾಗಿ ನಡೆಯುವುದಕ್ಕೆ ಏರ್ಪಾಟು ಮಾಡಬೇಕೆಂದು ನಾನು ಆಶೆಯನ್ನು ಇಟ್ಟುಕೊಂಡಿದ್ದೇನೆ.

5-30 P. M.

ಕೆಲವು ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ, ಉಪಾಧ್ಯಾಯರು ಶಾಲೆಗಳಿಗೆ ಕಾಲಕಾಲಕ್ಕೆ ಬರುತ್ತಾ ಇಲ್ಲ ಎನ್ನತಕ್ಕಂಥ ದೂರನ್ನು ಕೆಲವು ಮಾನ್ಯ ಸದಸ್ಯರು ಮಾಡಿದರು. ಒಟ್ಟು ನಮ್ಮ ರಾಜ್ಯದಲ್ಲಿ ೯೩ ಸಾವಿರ ಉಪಾಧ್ಯಾಯರು ಇದ್ದಾರೆ. ಈ ೯೩ ಸಾವಿರದಲ್ಲಿ ಇಂಥಾ ಕೆಲಸ ಮಾಡತಕ್ಕವರು ಬಹುಶಃ ೧೦೦ಕ್ಕೆ ಒಬ್ಬರೂ ಸಿಕ್ಕುವುದಿಲ್ಲ. ಸಾವಿರಕ್ಕೆ ಒಬ್ಬರು ಇರಬಹುದು. ಉಪಾಧ್ಯಾಯರಲ್ಲಿ ಬಹಳ ಜನ ಒಳ್ಳೆಯ ಕೆಲಸ ಮಾಡತಕ್ಕವರು ಇದ್ದಾರೆ. ಅವರುಗಳಿಗೆಲ್ಲಾ ನ್ಯಾಷನಲ್ ಅವಾರ್ಡ್ ಸ್ಟೇಟ್ ಅವಾರ್ಡ್‌ಗಳು ಬಂದಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಉಪಾಧ್ಯಾಯರು ಆ ರೀತಿ ಮಾಡುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಎಡೆ ಕೊಡದಂತೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಆದಕ್ಕೆ ಏರ್ಪಾಡು ಮಾಡಿದ್ದೇವೆ. ಉಸ್ತುವಾರಿಯನ್ನು ಹೆಚ್ಚು ಮಾಡಿದ ಮೇಲೆ ಅದಕ್ಕೆ ಸಾಕಷ್ಟು ಗಮನ ಕೊಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ.

(ಶ್ರೀ ಎಲ್. ಶ್ರೀಕಂಠಯ್ಯ)

ಶಾಲಾ ಮತ್ತು ಕಾಲೇಜುಗಳಲ್ಲಿ ಅಡ್ಮಿಷನ್ ಆಗುವಾಗ ಹುಡುಗರ ನೂಕು ನುಗ್ಗಲು ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಎಷ್ಟು ಜನ ಪಾಸಾಗುತ್ತಾರೆಯೋ ಅಷ್ಟು ಜನಗಳಿಗೂ ಸೌಲಭ್ಯವನ್ನು ಒದಗಿಸುವ ಪ್ರೌಢ ಶಾಲೆಗಳು ಮತ್ತು ಕಾಲೇಜುಗಳು ನಮ್ಮಲ್ಲಿ ಇವೆ. ಆದರೆ ವಿದ್ಯಾರ್ಥಿಗಳು ಯಾವುದೋ ಒಂದು ಪರ್ಟಿಕ್ಯುಲರ್ ಸಂಸ್ಥೆಗೆ ಸೇರಬೇಕು ಎಂದು ಬರುತ್ತಾರೆ. ಆ ಸಂಸ್ಥೆಗೆ ಸೇರಿಸುವುದಕ್ಕೆ ಕಷ್ಟವಾಗುತ್ತದೆ. ಗೌರ್ನಮೆಂಟ್ ಕಾಲೇಜಿಗೆ, ನ್ಯಾಷನಲ್ ಕಾಲೇಜಿಗೆ, ವಿಜಯ ಕಾಲೇಜಿಗೆ ಸೇರಬೇಕೆಂದು ಒತ್ತಾಯ ಮಾಡುತ್ತಾರೆ. ಎಲ್ಲಾ ಕಾಲೇಜು ಮತ್ತು ಹೈಸ್ಕೂಲುಗಳಿಗೂ ಸರಿಯಾಗಿ ವಿದ್ಯಾರ್ಥಿಗಳು ಹಂಚಿಕೊಂಡರೆ ಯಾವ ತೊಂದರೆಯೂ ಆಗುವುದಿಲ್ಲ. ಕೆಲವರು ಇಂಥಾ ಒಂದೂ ಸಂಸ್ಥೆಗೇ ಸೇರಬೇಕು ಎಂದು ಒತ್ತಾಯ ಮಾಡುವುದರಿಂದ ಈ ವಿಧವಾದ ತೊಂದರೆಗಳು ಬರುತ್ತವೆ. ಆದ್ದರಿಂದ ಇದನ್ನು ನಾವು ಯಾವ ಪ್ಲಾನು ಇಲ್ಲದೆ ಮಾಡುತ್ತಿದ್ದೇವೆ ಎಂದು ಹೇಳುವ ಹಾಗಿಲ್ಲ.

ಪ್ರೀಯೂನಿವರ್ಸಿಟಿ (ಪಿ. ಯು. ಸಿ) ಕೋರ್ಸನ್ನು ಎರಡು ವರ್ಷ ಮಾಡಬೇಕೆಂದು ನಾವು ತೀರ್ಮಾನವನ್ನು ಕೈಗೊಂಡಿದ್ದೇವೆ. ಕೊಠಾರಿ ಆಯೋಗದ ಶಿಫಾರಸ್ಸಿನ ಪ್ರಕಾರ ಎರಡು ವರ್ಷ ಮಾಡಿದಂತಹ ಕೋರ್ಸನ್ನು ಎಲ್ಲಿಡಬೇಕೆಂಬ ಜಿಜ್ಞಾಸೆ ಇದೆ. ಅದು ಹೈಸ್ಕೂಲಿನಲ್ಲಿಯೇ ಇರಬೇಕೇ ಅಥವಾ ಕಾಲೇಜಿನಲ್ಲಿರಬೇಕೇ ಎನ್ನುವುದು ಯಾವುದೂ ನಿರ್ಧಾರವಾಗಿಲ್ಲ. ತೀರ್ಮಾನವಾಗಿಲ್ಲ. ಅವುಗಳನ್ನು ಎಲ್ಲಿ ಮಾಡಬೇಕೆಂಬ ಬಗ್ಗೆ ಅಡ್ವೈಜರಿ ಕಮಿಟಿ ಅದನ್ನು ಚರ್ಚೆ ಮಾಡುತ್ತಿದೆ. ಅವು ತಾತ್ಕಾಲಿಕವಾಗಿ ಸ್ವಲ್ಪ ಕಾಲ ಈಗಿರುವ ಸ್ಥಳದಲ್ಲಿಯೇ ಇರಬೇಕಾದ್ದು ಅನಿವಾರ್ಯವಾಗುತ್ತದೆ. ಮುಂದೆ ಉತ್ತರೋತ್ತರ ಅವುಗಳಿಗೆ ಪ್ರತ್ಯೇಕವಾಗಿ ಜೂನಿಯರ್ ಕಾಲೇಜುಗಳನ್ನು ಮಾಡಿ ಪ್ರತ್ಯೇಕವಾದ ಕಾಲೇಜುಗಳನ್ನು ಮಾಡತಕ್ಕ ಅವಶ್ಯಕತೆ ಕಂಡುಬರುತ್ತದೆ. ಆದರೆ ಹಣದ ಅಭಾವದ ದೃಷ್ಟಿಯಿಂದ ಅವುಗಳನ್ನು ಈಗಲೇ ಮಾಡುವುದಕ್ಕೆ ಸಾಧ್ಯವಿಲ್ಲ. ಸಮಯವನ್ನು ಅರಿತು ಹಣವನ್ನು ತೆಗೆದುಕೊಂಡು ಅವುಗಳಿಗೆ ಪ್ರತ್ಯೇಕವಾದ ಶಾಲೆಗಳನ್ನು ಮಾಡಬೇಕು ಎಂದು ನಾನು ಭಾವಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ:— ಈಗ ಪಿ.ಯು.ಸಿ, ಎರಡು ವರ್ಷ ಕೋರ್ಸ್ ಬರುತ್ತದೆ. ಇದು ಬಹಳ ಮುಖ್ಯವಾದ ಹಂತ. ಆದ್ದರಿಂದ ಪಿ. ಯು. ಸಿ. ಗೇ ಆಗಲಿ, ಡಿಗ್ರಿ ಕೋರ್ಸಿಗೇ ಆಗಲಿ ಆಗ ಇಂಗ್ಲೀಷ್ ಭಾಷೆಯ ಸ್ಥಾನಮಾನವೇನು ? ಮತ್ತು ಅವರು ಇಂಗ್ಲೀಷ್ ಮೀಡಿಯಂ ತೆಗೆದುಕೊಂಡರೆ ಆಲ್ ಇಂಡಿಯಾ ಸರ್ವೀಸಸ್ ಎಗ್ಸಾಮಿನೇಷನ್ನಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಅವರು ಕನ್ನಡ ಮೀಡಿಯಂ ತೆಗೆದುಕೊಂಡರೆ ಹಿಂದೆ ಬೀಳುತ್ತಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ಕೆ. ವಿ. ಶಂಕರೇಗೌಡ:—ಇಂಡಿಯಾ ಸರ್ಕಾರದವರ ಎಗ್ಸಾಮಿನೇಷನ್‌ನಲ್ಲಿ ಕನ್ನಡದಲ್ಲಿ ಉತ್ತರ ಕೊಡಬಹುದು ಎಂದು ತೀರ್ಮಾನ ಮಾಡಿದೆ. ಆದ್ದರಿಂದ ಕನ್ನಡ ಮಾಧ್ಯಮವನ್ನು ಮಾಡುವುದಕ್ಕೆ ಕಷ್ಟವಾಗುವುದಿಲ್ಲ. ಇಂಗ್ಲೀಷನ್ನು ಐಚ್ಛಿಕವಾಗಿ ಅಭ್ಯಾಸ ಮಾಡಬಹುದು. ಆದರೆ ಅದು ಕಡ್ಡಾಯವಾಗಿ ಇರುವುದಿಲ್ಲ.

ಪಠ್ಯ ಪುಸ್ತಕಗಳ ವಿಚಾರವಾಗಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆ ಬಗ್ಗೆ ಮಾನ್ಯ ಸದಸ್ಯರು ತಮ್ಮ ಸಂತೋಷವನ್ನು ವ್ಯಕ್ತ ಮಾಡಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಸದಸ್ಯರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ೧೦ನೇ ಸ್ಟ್ಯಾಂಡರ್ಡ್‌ವರೆಗೆ ಎಲ್ಲಾ ಪುಸ್ತಕಗಳನ್ನೂ ನಾವು ರಾಷ್ಟ್ರೀಕರಣ ಮಾಡಿದ್ದೇವೆ. ಬಹಳ ಪುಸ್ತಕಗಳನ್ನು ನಾವು ರಾಷ್ಟ್ರೀಕರಣ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಏಕರೂಪವಾದ ಪಠ್ಯ ಪುಸ್ತಕಗಳನ್ನು ಜಾರಿಗೆ ತಂದಿದ್ದೇವೆ. ಪುಸ್ತಕಗಳು ಸರಬರಾಜು ಆಗುವುದರಲ್ಲಿ ಸ್ವಲ್ಪ ವಿಳಂಬವಾಗಿದೆ ಎನ್ನುವ ದೂರು ಒಂದೆರಡು ಸನ್ನಿವೇಶದಲ್ಲಿ ಬಂದಿದೆ. ಎಲ್ಲಾ ಪುಸ್ತಕಗಳ ಸರಬರಾಜಿನಲ್ಲಿಯೂ ವಿಳಂಬವಾಗಿಲ್ಲ. ಒಂದೆರಡು ಪುಸ್ತಕಗಳ ಸಂಬರಾಜಿನಲ್ಲಿ ಸ್ವಲ ವಿಳಂಬವಾಗಿರಬಹುದು. ಲಕ್ಷಾಂತರ ಪುಸ್ತಕಗಳನ್ನು ಪ್ರಿಂಟ್ ಮಾಡಬೇಕು. ಅಂಥಾ ಸಂದರ್ಭದಲ್ಲಿ ಕೆಲವು ಅನಿವಾರ್ಯ ಕಾರಣಗಳಿಂದ ಒಂದೆರಡು ಪುಸ್ತಕಗಳು ಸರಬರಾಜಾಗುವುದು ನಿಧಾನವಾಗಿರಬಹುದು. ಎಲ್ಲಾ ಪುಸ್ತಕಗಳನ್ನೂ ಆಯಾ ಯತರಗತಿಗಳಿಗೆ ಸಕಾಲದಲ್ಲಿ ಒದಗಿಸಲಾಗಿದೆ. ಈಗ ಇದಕ್ಕೆ ಪ್ರತ್ಯೇಕವಾಗಿ ಬಾಕಿ ಒಬ್ಬ ಡೈರೆಕ್ಟರನ್ನು ನೇಮಕ ಮಾಡಿದ್ದೇವೆ. ಈ ಕೆಲಸ ಬಹಳ ತೀವ್ರವಾಗಿ ನಡೆಯುತ್ತದೆ. ಈ ಕೆಲಸದಲ್ಲಿ ಇನ್ನು ಮುಂದೆ ಯಾವ ಅಡ್ಡಿ ಆತಂಕಗಳೂ ಬರುವುದಿಲ್ಲ ಎಂದು ನಾನು ಆಶೆಯನ್ನು ಇಟ್ಟುಕೊಂಡಿದ್ದೇನೆ.

ಆರ್ಕ್ಯಲಾಜಿಕಲ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.........

ಶ್ರೀ ಎಂ. ಎಸ್. ಕೃಷ್ಣನ್:—ಪುಸ್ತಕಗಳಲ್ಲಿರುವ ತಪ್ಪುಗಳನ್ನು ತೋರಿಸಿಕೊಟ್ಟರೆ ಬಹುಮಾನ ಕೊಡುವುದಾಗಿ ತಾವು ಹೇಳಿದ್ದೀರಿ. ಈಗ ಅನೇಕರು ಕೆಲವು ಪುಸ್ತಕಗಳಲ್ಲಿ ತಪ್ಪುಗಳನ್ನು ತೋರಿಸಿಕೊಟ್ಟಿದ್ದಾರೆ. ಅವರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಕೆ. ವಿ. ಶಂಕರಗೌಡ:—ಇಂಥಾ ಪುಸ್ತಕದಲ್ಲಿ ತಪ್ಪುಗಳು ಇವೆ ಎಂದು ಸರ್ಕಾರಕ್ಕೆ ಬರೆದರೆ ಖಂಡಿತ ಬಹುಮಾನವನ್ನು ಕೊಡುತ್ತೇವೆ. ಆರ್ಕ್ಯಲಾಜಿಕಲ್ ವಿಷಯದಲ್ಲಿ ಸಪರೇಟ್ ಸರ್ಕಲ್ ಮಾಡಬೇಕೆಂದು ಇಂಡಿಯಾ ಸರ್ಕಾರದವರನ್ನು ನಾವು ಒತ್ತಾಯ ಮಾಡುತ್ತಿದ್ದೇವೆ. ಅದು ಶೀಘ್ರದಲ್ಲಿಯೇ ಆಗಬಹುದು ಎನ್ನುವ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಕನ್‌ಸರ್‌ವೇಟಿವ್ ಕೆಲಸಕ್ಕೆ ಅಡ್ಡಿ ಬಂದಿದೆ. ಅನೇಕ ಪ್ರಾಚೀನ ವಸ್ತುಗಳು ಶಿಲ್ಪಗಳು ನಾಶವಾಗುವ ಸ್ಥಿತಿಯಲ್ಲಿದೆ ಅವುಗಳನ್ನು ಕಾಪಾಡುವುದು ಅವಶ್ಯಕ ಅದಕ್ಕೆ ಪ್ರತ್ಯೇಕವಾದ ಸರ್ಕಲ್ ಕೊಡಬೇಕೆಂದು ನಾವು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಅವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ನಮಗೆ ಒಂದು ಸರ್ಕಲ್ ಆಗುತ್ತದೆ. ಈ ಕೆಲಸ ಚೆನ್ನಾಗಿ ನಡೆಯುತ್ತದೆನ್ನುವ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಆರ್ಕ್ಯಲಾಜಿಕಲ್‌ಗಾಗಿ ಪ್ರತ್ಯೇಕ ಒಬ್ಬರು ಡೈರೆಕ್ಟರನ್ನು ನೇಮಿಸಬೇಕೆಂಬುದು ನಮ್ಮ ಉದ್ದೇಶ.

ಬಡ ಮಕ್ಕಳಿಗೆ ಅನ್ನ ಮತ್ತು ಬಟ್ಟೆಯನ್ನು ಕೊಟ್ಟರೆ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗಿ ಆಗುತ್ತದೆ ಎಂದು ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಿದ್ದಾರೆ. ಈಗ ನಾವು ಅದನ್ನು ಮಾಡುತ್ತಿದ್ದೇವೆ. ಕೇರ್ ಸಂಸ್ಥೆಯವರ ನೆರವಿನಿಂದ ಪ್ರಾಥಮಿಕ ಶಾಲೆಯಲ್ಲಿರತಕ್ಕ ೧೨ ಲಕ್ಷ ಮಕ್ಕಳಿಗೆ ಮತ್ತು ಇತರ ಶಾಲೆಯಲ್ಲಿರತಕ್ಕ ೯ ಲಕ್ಷ ಮಕ್ಕಳಿಗೆ ನಾವು ಉಪಹಾರವನ್ನು ಒದಗಿಸುತ್ತಿದ್ದೇವೆ. ಕೆಲವರಿಗೆ ಸಮವಸ್ತ್ರಗಳನ್ನು ಒದಗಿಸುತ್ತಿದ್ದೇವೆ. ಬಡವರ ಮಕ್ಕಳಿಗೆ ಪುಕ್ಕಟೆಯಾಗಿ ಪುಸ್ತಕಗಳನ್ನು ಕೊಡುವ ಏರ್ಪಾಟು ಮಾಡಿದ್ದೇವೆ. ಆದ್ದರಿಂದ ಬಡ ಮಕ್ಕಳಿಗೆ ಸಹಾಯ ಮಾಡುತ್ತಾ ಇಲ್ಲ ಎಂದು ಹೇಳುವುದು ಸರಿಯಲ್ಲ.

ಇನ್ನು ಬಹಳ ಪುಸ್ತಕಗಳನ್ನು ಸಬ್ಸಿಡೈಸ್‌ಮಾಡಿ ಜನರಿಗೆ ಒದಗಿಸಬೇಕೆಂದು ಸಲಹೆ ಬಂದಿದೆ. ಇದನ್ನು ಈಗಾಗಲೇ ತಮಗೆ ಗೊತ್ತಿರುವ ಹಾಗೆ ಜೈಮಿನಿ ಭಾರತ ಮತ್ತು ಇತರ ಕಾವ್ಯಗಳನ್ನು ಜನರಿಗೆ ಕಡಿಮೆ ದರದಲ್ಲಿ ಪ್ರಿಂಟ್ ಮಾಡಿಸಿ ಒದಗಿಸುವ ಏರ್ಪಾಡು ಮಾಡಿದ್ದೇವೆ. ಮಹಾಕವಿ ಕುವೆಂಪುರವರ ಭಾರತ ದರ್ಶನವನ್ನು ಹೆಚ್ಚಾಗಿ ಪ್ರಿಂಟ್ ಮಾಡಿ, ಅದನೂ ಜನರಿಗೆ ಒದಗಿಸುವ ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ:—ಪ್ರೈಮರಿ ಶಾಲೆಯ ಮಕ್ಕಳಿಗೆ ಫ್ರೀಯಾಗಿ ಪುಸ್ತಕಗಳನ್ನು ಒದಗಿಸುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ:—ಅದನ್ನೂ ನಾವು ಮಾಡುತ್ತಿದ್ದೇವೆ. ಅನೇಕ ನಿರ್ಗತಿಕ ಮಕ್ಕಳಿಗೆ, ಬಡವರಿಗೆ ಫ್ರೀಯಾಗಿ ಒದಗಿಸುತ್ತಿದ್ದೇವೆ. ಕೆಲವು ಜಾಗಗಳಲ್ಲಿ ಸರಿಯಾದ ಸಮಯಕ್ಕೆ ಸಪ್ಲೈಯಾಗದೆ ಇರಬಹುದು. ಇನ್ನು ಮಾನ್ಯ ಅಜೀಜ್ ಶೇಠರು ಉರ್ದು ಸ್ಕೂಲುಗಳ ಇನ್‌ಸ್ಪೆಕ್ಟರೇಟ್ ಪ್ರತ್ಯೇಕ ಏಕೆ ಅದನ್ನು ಅಬಾಲಿಶ್ ಮಾಡಬೇಕೆಂದು ಹೇಳಿದರು. ಅವರು ಒಪ್ಪುವುದಾದರೆ ನಾವು ನಾಳೆ ಮಾಡುತ್ತೇವೆ. ಆದರೆ ಮತ್ತೆ ಅವರು ಗಲಾಟೆ ಮಾಡಬಾರದು. ಎಲ್ಲಾ ಕಡೆಯೂ ಏಕರೂಪವಾದ ಶಾಲೆಗಳು ಇರಬೇಕೆಂಬುದು ನನ್ನ ಅಭಿಪ್ರಾಯ ಬೇರೆ ಬೇರೆ ಮಾಡುವುದಕ್ಕಿಂತ, ಒಂದೇ ಮಾಡುವುದು ಒಳ್ಳೆಯದು. ಆದರೆ ಇದರಲ್ಲಿ ಮತ್ತೆ ಗೊಂದಲ ಬರಬಾರದು.

ಶ್ರೀ ಎಲ್ ಶ್ರೀಕಂಠಯ್ಯ:—ಇದರಲ್ಲಿ ಎಂಥ ಗೊಂದಲ ಬರುತ್ತದೆ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ:—ಇದು ಎಲ್ಲರ ಭಾವಗಳನ್ನು ಉದ್ರೇಕಗೊಳಿಸುವ ವಿಷಯ. ಇನ್ನು ಕನ್ನಡವನ್ನು ಕಡ್ಡಾಯ ಭಾಷೆಯನ್ನಾಗಿ ಮಾಡುವುದರ ಬಗ್ಗೆ ಆಗಲೇ ಹೇಳಿದ್ದೇನೆ. ಮತ್ತು ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಜಾಗ್ರತೆ ಮಾಡಬೇಕೆಂದು ಮಾನ್ಯ ಸಾಗರವರು ಹೇಳಿದ್ದಾರೆ. ಇದನ್ನು ಎಷ್ಟು ಜಾಗ್ರತೆ ಮಾಡಬೇಕೋ, ಅಷ್ಟು ಜಾಗ್ರತೆ ಮಾಡುತ್ತೇವೆ. ಈಗ ಮೂರು ಯೂನಿವರ್ಸಿಟಿಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥಗಳನ್ನು ತಯಾರು ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅವುಗಳ ಸಹಾಯದಿಂದ ಮೂರು ವಿಶ್ವವಿದ್ಯಾನಿಲಯಗಳಲ್ಲೂ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಈಗಾಗಲೇ ರಚಿಸಿ ಪ್ರಕಟಿಸಿದ್ದಾರೆ. ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಕನ್ನಡ ಪಠ್ಯ ಪುಸ್ತಕಗಳನ್ನು ಸಾಕಾದಷ್ಟು ಪ್ರಮಾಣದಲ್ಲಿ ತಯಾರು ಮಾಡಿದ್ದಾರೆ. ಮುಂದೆ ಬರತಕ್ಕ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡಬಹುದು.

ಶ್ರೀ ಆರ್. ದಯಾನಂದಸಾಗರ್:—ಈಗ ಸಾಯನ್ಸ್, ಟೆಕ್ನೋಲಜಿ, ಮೆಡಿಸಿನ್ ಮತ್ತು ಇನ್ನಿತರ ಪುಸ್ತಕಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ತಾವು ಏನಾದರೂ ಸಹಾಯ, ಸಹಕಾರ ನೀಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ:—ನಾವು ರಾಯಲ್ಟಿ ಕೊಡುತ್ತೇವೆ, ಸ್ಕ್ರಿಪ್ಟ್ ಪ್ರಿಂಟ್ ಮಾಡಿಸುತ್ತೇವೆ. ಇವತ್ತಿನ ದಿವಸ ಎಷ್ಟು ದಿವಸ ಇಷ್ಟು ಪುಟ ಇರತಕ್ಕ ಪುಸ್ತಕಗಳಿಗೆ ಇಷ್ಟು ಕೊಡಬೇಕೆಂಬ ನಿಯಮ ಇದೆ. ಅದನ್ನು ಕೊಡಲಾಗುತ್ತದೆ. ಇದರಲ್ಲಿ ಕನ್ನಡ ಭೋದನಾ ಭಾಷೆ ಆಗಬೇಕೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ನಾವು ಈಗಾಗಲೇ ಬಹಳ ವಿಳಂಬ ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ವಿಳಂಬ ಮಾಡುವುದರಲ್ಲಿ ಅರ್ಥ ವಿಲ್ಲ. ಈ ವಿಷಯದ ಕಡೆಗೆ ಮಕ್ಕಳು ಅಷ್ಟು ಆಕರ್ಷಿಸಲ್ಪಟ್ಟಿಲ್ಲ. ಕಾರಣವೇನೆಂದರೆ, ನಮ್ಮ ರಾಷ್ಟ್ರದ ಭಾಷೆ ಕನ್ನಡದಲ್ಲಿರತಕ್ಕದ್ದರಿಂದ. ಕನ್ನಡದಲ್ಲಿ ಕಲಿತರೆ, ಮುಂದೆ ಅವರ ಭವಿಷ್ಯಕ್ಕೆ ಧಕ್ಕೆ ಬರುತ್ತದೋ, ಎಂಬ ಭಯ ಉಂಟಾಗಿದೆ. ಆ ಭಯ ಹೋದರೆ ಇದನ್ನು ಸುಲಭವಾಗಿ ಮಾಡಬಹುದು. ಅದಷ್ಟು ಜಾಗ್ರತೆ ಮಾಡಬೇಕೆಂಬುದು ನಮ್ಮ ಅಭಿಪ್ರಾಯ.

ಇನ್ನು ಮಾನ್ಯ ದಯಾನಂದಸಾಗರ್‌ರವರು, ಬೆಂಗಳೂರು ಯೂನಿವರ್ಸಿಟಿಗೆ ಏನೂ ದುಡ್ಡು ಸಾಲದು ಯಾವ ಕಟ್ಟಡವೂ ಬರುತ್ತಾ ಇಲ್ಲವೆಂದು ಹೇಳಿದರು. ಅವರು ಬಹುಶಃ ವಿಷಯವನ್ನು ತಿಳಿದುಕೊಳ್ಳದೆ ಹೇಳಿದಂತೆ ಕಾಣುತ್ತದೆ. ಈಗ ಅಡ್ಮಿನಿಸ್ಟ್ರೇಟಿವ್ ಬ್ಲಾಕ್ ಜುಲೈ ೭೦ರಲ್ಲಿ ಪೂರ್ತಿಯಾಗುತ್ತದೆ. ಹ್ಯೂಮ್ಯಾನಿಟೀಸ್ ಬ್ಲಾಕ್, ಹಾಸ್ಟೆಲ್ ಬ್ಲಾಕ್ ಫಾರ್ ಬ್ವಾಸ್ ಅಂಡ್ ಗರ್ಲ್ಸ್, ಹೆಲ್ತ್ ಸೆಂಟರ್, ಕೇಫೆಟೇರಿಯಾ ಇವೆಲ್ಲಾ ಕಟ್ಟಲ್ಪಡುತ್ತಿದೆ. ಕೆಲವು ಸಮಯದಲ್ಲಿ ಅವುಗಳು ಪೂರ್ತಿಯಾಗುತ್ತದೆ. ಇನ್ನು ನಾಲ್ಕನೇ ಪ್ಲಾನ್ ಅಲೋಕೇಷನಿನಲ್ಲಿ ಯು ಜಿ ಸಿ ಯಿಂದ ೭೮ ಲಕ್ಷ ೪೫ ಸಾವಿರ ರೂಪಾಯಿ ಬಂದಿದೆ. ಅಂದರೆ ಎಲ್ಲಾ ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ, ಅದನ್ನು ನಾಲ್ಕಾರು ವರ್ಷ ಸ್ಪ್ರೆಡ್ ಮಾಡಬೇಕಾಗುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಏಕರೂಪವಾದ ಶಾಸನ ಇರಬೇಕೆನ್ನುವ ವಿಚಾರವಾಗಿ ಮಾನ್ಯ ನಂಜೇಗೌಡರು ಬಹಳವಾಗಿ ಪ್ರಸ್ತಾಪ ಮಾಡಿದರು. ಮತ್ತು ನಾನು ನಿರೀಕ್ಷೆ ಮಾಡಿಕೊಂಡದ್ದು ಎಲ್ಲಾ ನಿರಾಶೆಯಾಗಿದೆ ಎಂದು ಹೇಳಿದ್ದಾರೆ. ನಾನು ಕೇಳುತ್ತೇನೆ, ಅವರು ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಬೇಕು. ನಾನಾದರೂ ಕೇಳುತ್ತೇನೆ, ಏಕರೂಪತೆ ಏಕೆ ಇರಬೇಕು ? ಎಂದು. ಒಂದೊಂದು ಸ್ಥಳದಲ್ಲಿ ಒಂದೊಂದು ತರಹ ಇದೆ. ಏಕರೂಪತೆ ಇಲ್ಲದಿರುವುದರಿಂದ ಏನು ತೊಂದರೆ ? ಮೂರು ವಿಶ್ವವಿದ್ಯಾನಿಲಯದಲ್ಲೂ ಏಕರೂಪತೆ ಇರಬೇಕು ಎನ್ನುವ ವಾದ ಸರಿಯಲ್ಲವೆಂದು ನನ್ನ ಅಭಿಪ್ರಾಯ. ಆಯಾ ಸ್ಥಳಗಳಲ್ಲಿ, ಒಂದೊಂದು ವಿಶ್ವವಿದ್ಯಾನಿಲಯಗಳಲ್ಲಿ, ಅಲ್ಲಿಯ ವಾತಾವರಣಕ್ಕೆ ಸರಿಯಾಗಿ ಅಲ್ಲಿಯ ಆಡಳಿತ ಇರುತ್ತದೆ.

ಶ್ರೀ ಎಚ್. ನಂಜೇಗೌಡ:—ಈ ವೈಸ್ ಚಾನ್ಸಲರನ್ನು ನಾಮಕರಣ ಮಾಡುವಾಗ, ಧಾರವಾಡದಲ್ಲಿ ಒಂದು ರಾಜಕೀಯ ಗುಂಪಿನ ಪಂಗಡ ಇರಬೇಕೇ, ಮೈಸೂರಿನಲ್ಲಿ, ಒಂದು ಪಂಗಡ ಇರಬೇಕೇ, ಮತ್ತು ಬೆಂಗಳೂರಿನಲ್ಲಿ ಇರಬೇಕೇ ? ಈ ದೃಷ್ಟಿಯಲ್ಲಿ ಆಡಳಿತ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ : ವೈಸ್ ಛಾನ್ಸಲರನ್ನು ಒಂದೊಂದು ಕಡೆಗಳಲ್ಲಿ ಮಾಡುವುದರಿಂದ ಏನೂ ಕಷ್ಟಗಳು ಉದ್ಭವವಾಗಿಲ್ಲ. ಏಕರೂಪವಾದ ಶಾಸನವನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹುಶಃ ಅದು ಈ ಸಭೆಯ ಮುಂದೆ ಶೀಘ್ರವಾಗಿ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ ಆದರೆ ಎಲ್ಲಾ ವಿಚಾರದಲ್ಲೂ ಏಕರೂಪತೆ ಇರಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ಸಾಧಾರಣವಾಗಿ ಮುಖ್ಯವಾದ ವಿಷಯಗಳಲ್ಲಿ ಏಕರೂಪತೆಯನ್ನು ಸಾಧಿಸುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆಂಬ ಅಶ್ವಾಸನೆಯನ್ನು ನಾನು ಕೊಡುತ್ತೇನೆ. ವಿದ್ಯಾರ್ಥಿಗಳ ಗಲಭೆ ಸಂದರ್ಭದಲ್ಲಿ ಬೀಸುವ ದೊಣ್ಣೆ ತಪ್ಪಿದರೆ ೧೦೦ ವರ್ಷಗಳ ಆಯುಸ್ಸು ಎಂಬುದಾಗಿ ಹೇಳುವ ಹಾಗೆ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದು ಅನ್‌ಚಾರಿಟಬಲ್ ಎಂದು ನಾನು ಹೇಳಬೇಕಾಗಿದೆ. ಆ ವಿಚಾರವನು ಯು. ಜಿ. ಸಿ. ಅವರಿಗೆ ರೆಫರ್ ಮಾಡಿದ್ದೇವೆ. ಅವರು ಸರಿಯಾದ ಕೆಲವು ವಿವರಗಳನ್ನು ಕೇಳಿದ್ದಾರೆ. ಆದ್ದರಿಂದ ನಾವು ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಾ ಇಲ್ಲ. ಆದ್ದರಿಂದ ಬೀಸುವ ದೊಣ್ಣೆಯಿಂದ ನಾವು ತಪ್ಪಿಸಿಕೊಳ್ಳುವುದಕ್ಕೆ ಏನೂ ಪ್ರಯತ್ನ ಮಾಡಲಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ .—ಮಾನ್ಯ ಉಪ-ಮಂತ್ರಿಗಳು ಒಂದು ಸಾರಿ ಈ ಸಭೆಯಲ್ಲಿ ಆ ವಿಚಾರವನ್ನು ಕೈಬಿಡುತ್ತೇವೆಂದು ಉತ್ತರ ಕೊಟ್ಟರು. We were given to understand like that because it was answered in the House.

ಶ್ರೀ ಕೆ. ವಿ. ಶಂಕರಗೌಡ .—ಉಪ-ಮಂತ್ರಿಗಳು ಆ ವಿಚಾರವನ್ನು ಕೈಬಿಟ್ಟಿದ್ದೇವೆಂದು ಹೇಳಲಿಲ್ಲ. ಅದನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. The matter has been referred to the U. G. C. They have called for certain details and we have sent them. In spite of that if they say that they are unable to conduct any enquiry what can we do.

SRI R. DAYANANDASAGAR .—If they say so, will you conduct a Judicial enquiry.

SRI K. V. SHANKARA GOWDA.—Not necessary. After receiving reply we will consider what to do.

SRI H. N. NANJE GOWDA : The other day the Deputy Minister said that they have advised the Government that the State Government is in a better position to conduct an enquiry.

ಶ್ರೀ ಕೆ. ವಿ. ಶಂಕರಗೌಡ .—ಇನ್ನು ಖಾಸಗೀ ಶಾಲೆಗಳ ಬಗ್ಗೆ ಕೆಲವು ಮಾತುಗಳನ್ನು ಮಾನ್ಯ ಸದಸ್ಯರು ಆಡಿದ್ದಾರೆ,

ಶ್ರೀ ಎಚ್. ಎನ್. ನಂಜೇಗೌಡ : ಮೈಸೂರು ಯೂನಿವರ್ಸಿಟಿಯವರು ಗೋಲ್ಡನ್ ಜುಬಿಲಿ ಫೀಸನ್ನು ವಸೂಲು ಮಾಡಿದ್ದಾರೆ. ಅದು ಏನಾಯಿತು.

ಶ್ರೀ ಕೆ. ವಿ. ಶಂಕರಗೌಡ : ಅವರು ಅದನ್ನು ಯಾವ ರೀತಿಯಾಗಿ ಉಪಯೋಗಿಸಬೇಕೆಂಬುದು ಅವರಿಗೆ ಸೇರಿದ್ದು. ಅದನ್ನು ಇದೇ ರೀತಿಯಲ್ಲಿ ಉಪಯೋಗಿಸಿ ಎಂಬುದಾಗಿ ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ.

ಈಗ ಖಾಸಗೀ ಶಾಲೆಗಳು ಬಹಳ ಹೆಚ್ಚಾಗಿವೆ.

SRI H. N. NANJE GOWDA .—On a point of order. I am sorry to say that it would not be proper on the part of the Minister to say that they have collected for Golden Jubilee and they can utilise it for any purpose. Is the University meant for that purpose. Is it air on the part of the Minister to say like that ನಾಳೆ ಅದನ್ನು ಮದುವೆ ಮನೆಗೆ ಉಪಯೋಗಿಸಿ ಎಂಬುದಾಗಿ ಕೂಡ ಹೇಳಬಹುದು. ಒಂದು ರಾಜ್ಯದಲ್ಲಿರತಕ್ಕ ವಿಶ್ವವಿದ್ಯಾನಿಲಯದಲ್ಲಿ ವಸೂಲಾಗತಕ್ಕ ಫೀಸನ್ನು ಯಾವ ರೀತಿ ಉಪಯೋಗಿಸಬೇಕೆಂಬ ಬಗ್ಗೆ I will bring them to order ಎಂಬುದಾಗಿ ಹೇಳುವುದನ್ನು ಬಿಟ್ಟು I am sorry ಎಂದು ಹೇಳಿದರೆ ಹೇಗೆ

MR. SPEAKER .—There is no point of order.

SRI K. V. SHANKARA GOWDA .—They have utilised the amount for the purpose they have collected. I cannot enter into these details because the University is an autonomous body. I once again repeat it.

ಕೆಲವರ ಖಾಸಗಿ ಸಂಸ್ಥೆಗಳು ಉತ್ತಮವಾದ ಸೇವೆಯನ್ನು ಸಲ್ಲಿಸಿವೆ. ಅವುಗಳ ಬಗ್ಗೆ ವಿಶೇಷವಾಗಿ ದೂರು ಬೆಂಗಳೂರು ಪಟ್ಟಣದಿಂದ ಬಂದಿದೆ. ಖಾಸಗೀ ಸಂಸ್ಥೆಗಳು ವ್ಯಾಪಾರ ಸಂಸ್ಥೆಗಳಾಗಿವೆಯೆಂದು ಕೆಲವರು ಹೇಳಿದರು. ಅದರಲ್ಲಿ ಸತ್ಯಾಂಶವಿದೆ. ಖಾಸಗೀ ಶಾಲೆಗಳು ಯಾವ ಮಟ್ಟದಲ್ಲಿ ಕೆಲಸ ಮಾಡ

(Sri K. V. SHANKARA GOWDA)

ಬೇಕೋ ಆ ರೀತಿ ಮಾಡುತ್ತಾ ಇಲ್ಲ. ಕೆಲವು ಖಾಸಗೀ ಶಾಲೆಗಳು ವ್ಯಾಪಾರ ಸಂಸ್ಥೆಗಳಾಗಿ ಶೋಷಣೆ ಮಾಡುವ ಕೆಲಸದಲ್ಲಿ ಉದ್ಯುಕ್ತವಾಗಿವೆ. ಆದ್ದರಿಂದ ಅವುಗಳನ್ನು ಕಂಡುಹಿಡಿದು ಅವುಗಳ ಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಖಾಸಗಿ ಶಾಲೆಗಳು ಯಾವ್ಯಾವುವು ಸರ್ಕಾರದ ಅನುದಾನವನ್ನು ಪಡೆಯುತ್ತಾ ಇಲ್ಲವೋ ಅಂತವುಗಳು ಜಾಸ್ತಿ ಫೀಸು ತೆಗೆದುಕೊಳ್ಳಬಾರದು ಎಂಬ ನಿಯಮವನ್ನು ಜಾರಿಗೆ ತರಬೇಕೆಂದು ಹೇಳಿದರು. ಈಗ ಗ್ರಾಂಟ್ ಇನ್ಎಡ್ ರೂಲ್ಸ್‌ನ್ನು ಬದಲಾವಣೆಮಾಡುತ್ತಿದ್ದೇವೆ. ಈ ಬೆಂಗಳೂರು ಸಿಟಿಯಲ್ಲಿ ಇಂಥಹ ಸಂಸ್ಥೆಗಳು ಯಾವ್ಯಾವಿವೆ ಎಂಬುದನ್ನು ಕಂಡುಹಿಡಿದು ಪರಿಣಾಮಕಾರಿಯಾದ ಹಾಗೂ ಕಠಾರುವಾಕ್ಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ವಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್ .—ತಾವು ಈಗ ಖಾಸಗೀ ಸಂಸ್ಥೆಗಳ ವಿಷಯವಾಗಿ ಮಾತನಾಡಿದಿರಿ. ಒಂದು ವಿಚಾರವಾಗಿ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ತಾವು ಖಾಸಗೀ ಸಂಸ್ಥೆಗಳಲ್ಲಿ ಉಪಾಧ್ಯಾಯರಿಗೆ ಸಂಬಳವನ್ನು ಈಗ ಚೆಕ್ ಮೂಲಕ ಕೊಡತಕ್ಕದ್ದೆಂದು ಹೇಳಿದಿರಿ, ಕೆಲವು ಕಡೆಗಳಲ್ಲಿ ಮೊದಲೇ ರುಜು ಹಾಕಿ ಚೆಕ್‌ಬುಕ್ ಮತ್ತು ಪಾಸ್ ಬುಕ್ಕುಗಳನ್ನು ತಮ್ಮ ಪೆಟ್ಟಿಗೆಗಳಲ್ಲಿ ಇಟ್ಟುಕೊಂಡು ತೋರಿದರೆ ಕೊಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ .—ಆ ರೀತಿ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್ .—ಇದರ ಬಗ್ಗೆ ಅನೇಕ ದೂರುಗಳನ್ನು ಕೊಟ್ಟಿದ್ದರೂ ಡೈರೆಕ್ಟರ್ ಅವರು ಇದಕ್ಕೆ ನಿಗಾಕೊಟ್ಟಿಲ್ಲ. ಇದನ್ನು ಮಂತ್ರಿಗಳು ತೀವ್ರವಾಗಿ ನೋಡಬೇಕು.

ಶ್ರೀ ಕೆ. ವಿ. ಶಂಕರಗೌಡ .—ಅಂಥಾದ್ದು ಯಾವುದಾದರೂ ಗಮನಕ್ಕೆ ತಂದರೆ ಅದನ್ನು ತೀವ್ರವಾಗಿ ವಿಚಾರಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ .—ಮಾನ್ಯ ಶ್ರೀ ಅರಸ್ ಅವರು ಹೇಳಿದ್ದಲ್ಲದೆ ಈ ಬಡ್ಜೆಟ್ ಎಸ್ಟಿಮೇಟುಗಳಲ್ಲಿ ಅಪೆಂಡಿಕ್ಸ್ 'ಸಿ' ಮತ್ತು 'ಡಿ' ಗಳಲ್ಲಿ ಒಂದು ದೊಡ ಪಟ್ಟಿಯನ್ನು ಕೊಟ್ಟಿದ್ದಾರೆ. ಅದು ೮೫ನೇ ಪುಟದಿಂದ ಹಿಡಿದು ಮುಂದುವರಿಯುತ್ತಿದೆ. ಅಲ್ಲಿ ಒಂದೊಂದು ಸ್ಕೂಲ್ ಹೆಸರನ್ನು ಹಾಕಿದ್ದಾರೆ. ಎಷ್ಟೋ ಕೋಟಿ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದಾರೆ. ಈ ಅನುದಾನವನ್ನು ಕೊಡುವುದಕ್ಕೆ ಮುಂಚೆ ಯಾವ್ಯಾವ ಪ್ರೈಮರಿ ಶಾಲೆಗಳು ನಡೆಯುತ್ತಿವೆ. ಯಾವ್ಯಾವುದು ನಡೆಯುತ್ತಾ ಇಲ್ಲ, ಯಾವ್ಯಾವುದು ಅರ್ಥಂಬಧಕವಾಗಿ ನಡೆಯುತ್ತಿವೆ ಎಂಬುದನ್ನು ನೋಡಿಕೊಂಡು ಕೊಡಬೇಕು. ಸುಮ್ಮನೆ ಒಂದು ದೊಡ್ಡ ಲಿಸ್ಟನ್ನು ಅಲ್ಲಿಟ್ಟಿದ್ದೀರಿ. ಸರಿಯಾದ ಲಿಸ್ಟನ್ನು ವಿವರವಾಗಿ ಇಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತು.

ಶ್ರೀ ಕೆ. ವಿ. ಶಂಕರಗೌಡ .—ಯಾವ್ಯಾವ ಸಂಸ್ಥೆಗಳು ಚೆನ್ನಾಗಿ ನಡೆಯುತ್ತಿವೆ, ಯಾವ್ಯಾವುದು ಚೆನ್ನಾಗಿ ನಡೆಯುತ್ತಿಲ್ಲಾವೆಂಬುಗಳನ್ನು ನೋಡಿಯೇ ಅನುದಾನಗಳನ್ನು ಕೊಡುತ್ತಾ ಇರುವುದು, ಕಣ್ಣುಮುಚ್ಚಿಕೊಂಡೇನೂ ಗ್ರಾಂಟ್ ಯಾರಿಗೂ ಕೊಡುವುದಿಲ್ಲ.

ಆಡಿಟರ್ಸ್ ಸ್ಟೇಟ್‌ಮೆಂಟ್ ಬರುತ್ತದೆ ಇವೆಲ್ಲವನ್ನೂ ನೋಡಿ ಅನುದಾನಗಳನ್ನು ಕೊಡಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ : ಒಂದು ಪಕ್ಷ ಆ ರೀತಿಯಾಗಿ ಕೊಟ್ಟಿದ್ದರೆ ನೀವು ನಿಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ ?

(ಉತ್ತರವಿಲ್ಲ)

ಶ್ರೀ ಎಚ್. ಸಿದ್ಧವೀರಪ್ಪ : ಹೋದಸಾರಿ ಇವರ ವಿಚಾರವಾಗಿ ನಾನು ಹೇಳಿದ್ದೇನೆ. ಅನೇಕ ಜನ ಸ್ಕೂಲ್ ಉಪಾಧ್ಯಾಯರು ಆದರಲ್ಲಿಯೂ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳು ಈ ದೇಶದ ರಾಜಕೀಯುವನ್ನು ನಡೆಸುತ್ತಾ ಇರುವುದು ಕಂಡುಬಂದಿದೆ. ಅದಕ್ಕಾಗಿ ಅವರನ್ನು ಕೊನೆಯ ಪಕ್ಷ ಮಗ್ಗುಲ

ಜಿಲ್ಲೆಗೆ ವರ್ಗಮಾಡಿ, ಅದೂ ಆಗದಿದ್ದರೆ ತಾಲ್ಲೂಕಿನಿಂದ ತಾಲ್ಲೂಕಿಗೆ, ವರ್ಗಮಾಡಿ ಎಂದು ಹೇಳಿದೆ. ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದರು. ಈಗ ಅದರಲ್ಲಿಯೂ ರಾಜಕೀಯ ಮಾಡುತ್ತಿದ್ದಾರೆ. ಈ ವಿಚಾರವನ್ನು ಇಂತಹವರು ಹೇಳಿದರು, ಅದಕ್ಕೋಸ್ಕರ ವರ್ಗ ಮಾಡಿದ್ದೇನೆಂದು ಹೇಳುತ್ತಾರೆ. ಶಿಕ್ಷಣಕ್ಕಾಗಿಯೇ ೫೫ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ ೨೫ ಕೋಟಿ ರೂಪಾಯಿಗಳನ್ನು ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಕೊಟ್ಟಿದ್ದಾರೆ. ಅದು ಸಫಲವಾಗುತ್ತಾ ಇಲ್ಲ. ಆದ್ದರಿಂದ ನಾನು ಹೇಳಿದ ಸಲಹೆ ಪ್ರಕಾರ ಪ್ರೈಮರಿ ಸ್ಕೂಲಿನ ಉಪಾಧ್ಯಾಯರನ್ನು ಮಗ್ಗುಲ ಜಿಲ್ಲೆಗೆ ವರ್ಗಮಾಡುವುದು ಒಳ್ಳೆಯ ದಲ್ಲವೆ.?

ಶ್ರೀ ಕೆ. ವಿ. ಶಂಕರಗೌಡ : ನಮ್ಮ ಶಿಕ್ಷಕರು ಈಗ ೯೩ ಸಾವಿರ ಜನರು ಇದ್ದಾರೆ. ಅವರನ್ನು ಏಕ್‌ದಂ ವರ್ಗಮಾಡಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಡಿ.ಎ. ಮತ್ತು ಟಿ.ಎ ಬೇಕಾಗುತ್ತದೆ. ಮುಂದೆ ಇನ್ನು ೫ ವರ್ಷಗಳಲ್ಲಿ ಇದನ್ನು ಜಾರಿಗೆ ಕೊಡಬೇಕಾಗುತ್ತದೆ. ಸುಮಾರು ಶೇಕಡ ೧೫ ರಿಂದ ೨೦ರ ವರೆಗೆ ಯಾರು ಬಹಳ ಕಾಲ ಒಂದೇ ಕಡೆ ಇದ್ದಾರೋ ಅವರನ್ನು ಮಗ್ಗುಲ ಜಿಲ್ಲೆಗೆ ವರ್ಗ ಮಾಡುವುದಕ್ಕೆ ತೀರ್ಮಾನಮಾಡಿದ್ದೇವೆ. ಕೆಲವು ಸಾರಿ ಮಾನ್ಯ ಶ್ರೀ ಸಿದ್ಧವೀರಪ್ಪನವರೇ ಇದರ ಬಗ್ಗೆ ಎಷ್ಟೋ ರೆಪ್ರಸೆಂಟೇಷನ್‌ಗಳನ್ನು ಕೊಡುತ್ತಾರೆ. (ನಗು) ಈಗ ರಾಜಕಾರಣ ಮಾಡುವ ಉಪಾಧ್ಯಾಯರು ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆಂಬುದನ್ನು ನೋಡಬೇಕು· ಕೆಲವರು ಅವರಲ್ಲ ಪಟಿಂಗರು ಇದ್ದಾರೆ. ಅವರು ಧೀರ್ಘಕಾಲ ಅಲ್ಲಿ ಇರುವ ಹಾಗೆ ಇಲ್ಲ. ಅವರನ್ನು ಸೇಕಡ ೧೫ ರಿಂದ ೨೦ರ ವರೆಗೆ ವರ್ಗಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್ : ಒಬ್ಬ ಪಟಿಂಗ ಮಾಸ್ಟರ್ ಕ್ರಿಮಿನಲ್ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಅಂತಹ ಕಡೆಯಲ್ಲಿ ಇದುವರೆಗೆ ಏನೊಂದೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅವರು ಒಂದು ಸಣ್ಣ ಊರಿನಲ್ಲಿದ್ದಾರೆ. · ಅಲ್ಲಿ ಮಕ್ಕಳ ವಿದ್ಯಾಭ್ಯಾಸ ಹಾಳಾಗಿ ಹೋಗುತ್ತಿದೆಯೆಂದು ಗ್ರಾಮಸ್ಥರು ಒಂದು ಪತ್ರ ಬರೆದಿದ್ದಾರೆ, ನಾಲ್ಕು ತಿಂಗಳು ಆಯಿತು ಆ ಕಡೆಗೆ ಸರ್ಕಾರದವರು ಕಿಂಚಿತ್ ಗಮನವನ್ನೂ ಕೊಟ್ಟಿಲ್ಲ.

ಶ್ರೀ ಕೆ. ವಿ. ಶಂಕರಗೌಡ : ಕೆಲವು ವೇಳೆ ಹೊಟ್ಟೆಕಿಚ್ಚಿನಿಂದಲೂ ಅರ್ಜಿಗಳು ಬರುತ್ತವೆ. ಅವನ್ನು ಪರಿಶೀಲನೆ ಮಾಡಬೇಕಾಗಿದೆ. ಅಂತಹ ವಿಷಯಗಳನ್ನು ವಿಚಾರಣೆ ಮಾಡಬೇಕಾದರೆ ಕೆಲವುಕಾಲ ಹಿಡಿಯುತ್ತದೆ, ವಿಚಾರಣೆ ಮಾಡಿದ ಮೇಲೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹಂಜಿ ಶಿವಣ್ಣ : ನಮ್ಮ ತಾಲ್ಲೂಕಿನಲ್ಲಿ ಕೊಲೆ ಮಾಡಿರತಕ್ಕ ಉಪಾದ್ಯಾಯರು ಇದ್ದಾರೆ. ಡಿ.ಇ.ಓ.ಗೆ ಹೆದರಿಸುತ್ತಾರೆ.

ಶ್ರೀ ಕೆ. ವಿ. ಶಂಕರಗೌಡ : ಪೋಲೀಸ್ ಕಂಪ್ಲೆಂಟ್ ಕೊಡಿ. ಅವರು ಕೊಲೆ ಮಾಡಿದ್ದಾರೆ ಎಂದು ಕಂಡುಬಂದರೆ ಅವರು ಕೆಲಸದಿಂದ ಡಿಸ್‌ಮಿಸ್ ಆಗುತ್ತಾರೆ.

ಶ್ರೀ ಚಿಕ್ಕೇಗೌಡ : ತಾಲ್ಲೂಕು ಬೋರ್ಡ್ ಉಪಾಧ್ಯಾಯರ ಮೇಲೆ ನಿಮ್ಮ ಅಧಿಕಾರ ಇದೆಯೇ?

ಶ್ರೀ ಕೆ. ವಿ. ಶಂಕರಗೌಡ : ತಾಲ್ಲೂಕು ಬೋರ್ಡ್ ಉಪಾಧ್ಯಾಯರ ಮೇಲೆ ನಮಗೆ ಅಧಿಕಾರ ವಿಲ್ಲ. ಈಗ ಇರತಕ್ಕ ಆಕ್ಟ ಪ್ರಕಾರ ಅವರು ತಾಲ್ಲೂಕು ಬೋರ್ಡ್ ಎಂಪ್ಲಾಯಿಸ್ ಆದುದರಿಂದ ಅದು ಅವರಿಗೆ ಸಂಬಂಧಪಟ್ಟಿದೆಯೇ ಹೊರತು ನಮಗೆ ಅವರ ಮೇಲೆ ಏನೂ ಅಧಿಕಾರವಿಲ್ಲ· ಇಷ್ಟು ಮಾತು ಹೇಳಿ ಈ ಮಾನ್ಯ ಸಭೆಗೆ ನಾನು ಇಟ್ಟಿರುವ ಬೇಡಿಕೆಗೆ ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

M· R. SPEAKER :—I have stated earlier that I will put the demand to vote at 6 "0" Clock, Now that all the doubts have been cleared, I do not permit any more clarifications now.

The question is :

"That the respective sums not exceeding the amounts mentioned in demands No. 17 and 37 be granted to the Government to defray the charges which will come in course of payment during the financial year for the period ending 31st day of March 1971."

The motion was adopted

As Ordered by the Chair the Motion for Demands for grants adopted by the Chair are reproduced below.

DEMAND No. 17.—EDUCATION.

28. Education.

"That a sum not exceeding Rs. 52,84,09,000 be granted to the Government to defray the charges which will come in course of payment during the financial year for the period ending 31st day of March 1971, in respect of ,Education'.".

DEMAND No. 37,—STATIONERY AND PRINTING.

68. Stationery and Printing.

"That a sum not exceeding Rs. 1,26,12,000 be granted to the Government todefray the charges which will come in course of payment during the financial year for the period ending 31st day of March 1971 in respect of 'Stationery and Printing'.".

MR. SPEEKER: Tomorrow there would be two sittings one at 9 A.M. and another at 1 P.M. with an interval of 2 hours. No. the House will rise and meet tomorrow at 9 A.M.

The House adjourned at Five Minutes past Six of the Clock to meet again at Nine of the Clock on Thursday the 12th March 1970.

WD—14702—GPB—550—28-7-70.

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 12th March 1970

The House met in the Assembly Chamber, Vidhana Soudha, Bangalore, at Nine of the Clock.

MR. SPEAKER (S. D. KOTHAVALE) in the Chair.

(Quorum was formed at 9.05)

Discussion for short Duration on the situation arising out of the statement by DR. K. L. RAO, Union Minister for Irrigation,

Regarding : Cauvery Water Dispute.

SRI H. N. NANJE GOWDA:—Sir, I beg to move ;

That the situation arising out of the statement made by DR. K. L. RAO, Union Minister for Irrigation, on 10th March 1970 in the Parliament regarding Cauvery Water dispute, be taken into consideration.

MR. SPEAKER : Motion moved:—

That the situation arising out of the statement made by DR K. L. RAO, Union Minister for Irrigation, on 10th March 1970 in the Parliament regarding Cauvery Water Dispute, be taken into consideration.

†ಶ್ರೀ ಎಚ್. ಎನ್ ನಂಜೇಗೌಡ:—ಮಾನ್ಯ ಅಧ್ಯಕ್ಷರೇ, ದಿನಾಂಕ ೧೦ನೇ ಮಾರ್ಚಿ ೧೯೭೦ರಂದು ಡಾ॥ ಕೆ. ಎಲ್. ರಾವ್‌ರವರು ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದ ಸೂಚನೆಗೆ ಅವರು ಕೊಟ್ಟಿರುವ ಉತ್ತರ ಯಾವ ಉದ್ದೇಶದಿಂದ ಇದೆ ಎನ್ನುವುದನ್ನು ನಾನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ನಮ್ಮ ಕ್ಷೇತ್ರದ ಒಬ್ಬರು ಪಾರ್ಲಿಮೆಂಟು ಸದಸ್ಯರಿಗೆ ನಿನ್ನೆ ದಿನ ಟ್ರಂಕ್‌ಕಾಲ್ ಮಾಡಿ ಅವರು ಹೇಳಿರುವ ಹೇಳಿಕೆಯನ್ನೂ ಖಚಿತಪಡಿಸಿಕೊಂಡೆ. It has liquidated the confidence that we Mysoreans had in the Centre. The cat is out of the bag. ಸ್ವಾಮೀ ಕೇಂದ್ರದ ನೀರಾವರಿ ಸಚಿವರು ಮಾತನಾಡಿರತಕ್ಕ ಸಂದರ್ಭದಲ್ಲಿ ಅವರು ಎಂಟು ಅಂಶಗಳನ್ನು ಹೊರಗೆಡಹಿದ್ದಾರೆ.

The following are the points which emerge out of his speech:—

1. The Mysore Government was clearly exceeding the 1924 Agreement.

(ಶ್ರೀ ಹೆಚ್. ಎನ್. ನಂಜೇಗೌಡ)

2. The Centre would be most unhappy if any State were to take up projects arbitrarily and in excess of the sanctioned schemes or without a settlement under the River Water Disputes Act.

3 Kabini Project was sanctioned to irrigate only 30,000 acres at a cost of 2·50 crores ; the present project is in excess of the sanctioned scheme.

4. Mysore can impound only 45 TMCFT of water under certain conditions.

5. Harangi Project was not covered by the 1924 Agreement.

6 The C.W.P.C. and the Planning Commission have not cleared the Hemavathi and Harangi projects.

7. No Central aid would be given to Cauvery Valley Projects.

8. If no settlement through negotiation is possible, the Centre would have no option but to refer the matter to the Tribunal.

Sir, I want to rebut these points one by one. The first point is whether Mysore has violated the Agreement of 1924. Our case is Madras has violated the Agreement long back. We have complained to the Centre that Madras has violated the said Agreement and that complaint is still pending since 1949.

Both Dr. Rao and the Central Government have not said a word about the violation of the Agreement by the Madras Government. But now Dr. Rao jumps and says that we have violated the Agreement. A few days ago the Madras Government complained that we are not functioning within this Agreement and then Dr. Rao declared in Parliament that we have violated the Agreement. I want to know why Dr. Rao or the Central Government are so eager to take sides with Madras ? With all that, what is this Agreement ?

Is this a valid agreement I want to ask Dr. Rao and the Central Government. I want to request my Government to examine whether this is a valid agreement at all, because I am of the opinion that this is void. It is void on many counts. Firstly, this Agreement was entered into and Mysore was made to sign this Agreement putting undue influence and force. Section 6 of the Contract Act says that if an agreement is entered into by use of undue influence such an agreement would amount to a void agreement. Madras was potentially a British Province and Mysore was a princely State and therefore Madras was in a better position. History reveals that and everybody knows that since undue

† Indicates that remarks or speeches have not been revised by the member concerned.

influence was used on Mysore. Since Mysore was forced to sign this Agreement with undue influence, this cannot but be a void agreement. Also the parties were under a mistaken impression as to a matter of fact essential to the agreement. The fact which is essential to the agreement is the quantum of water in the Cauvery basin. All that they took into consideration was assumption and presumption and it was not a real matter of fact. In fact, they thought that their would be excess water even in 1974. They thought that so much of water will be there for future development also even after Bhavani, Amravati and Kattilai projects were constructed. They thought that there would be more water for future development after 1974 also and therefore they were not definite as to a matter of fact which is quite an essential element in an agreement. When they were under a mistaken impression about a matter of fact, according to section 20 of the Indian Contract Act which came into force in 1872 this is void. So even under any canon of law can anybody justify that this is an equitable allocation ? I for one feel that it is against equity, natural justice and the law of the land. We have questioned the very agreement itself and we have said that this is a void agreement. We have lodged our complaint with the Union Government as far back as 1959. Without taking pains to go into the details of the complaint of Mysore, Dr. Rao now jumps and says that we are violating the agreement. I want to ask Dr. Rao, is he an arbitrator ? Can he give a decision or judgment in Parliament ? Who is he to give such a verdict ? It is very unfortunate that the Centre should take such a partisan attitude in favour of Madras He says that the Centre would be most unhappy if Mysore takes up projects which are not sanctioned by the Central Government or the C.W.P.C. I want to tell Dr Rao that we are not bothered, we are not worried whether they are pleased or displeased. We do not care whether he is pleased or displeased, whether the Union Government is happy or unhappy Our duty is to function in the interests of the State. We are not functioning as a Government here to please Dr. Rao or the Central Government. It is their funeral whether they are pleased or displeased We are not bothered whether they are happy or unhappy. So I advise my Government to take all necessary steps to guard the interests of this State. It is quite natural for Dr. Rao on behalf of the big brother, the Central Government, to support the small brother, the Madras Government and so I warn this Government to be cautious in its further dealings and think twice before relying upon the Centre or even Dr. Rao to do justice to us. I want to ask Dr. Rao whether he was not unhappy when Madras violated the agreement, when Madras intercepted the flow of water. At that time the Central Government never felt unhappy and now because we want to construct our projects within the scope of this void agreement the Central Government is unhappy and Dr. Rao is unhappy This is a very sorry state of affairs. I do not know why they gave clearance to the projects which were not in accordance with this agreement, which were constructed by the Madras Government.

(ಶ್ರೀ ಎಚ್. ಎನ್. ನಂಜೇಗೌಡ)

DR. RAO has further stated that Kabini was designed whit a capacity to irrigate 30,000 acres I advise Dr. Rao to go through sub clause (14) of clause 10 of this agreement. It says that we are entitled to 60% of the water... ... ...

SRI B. P. GANGADHAR:—Sir, will it be possible to make available to the members copies of this agreement for their information and use ?

SRI VEERENDRA PATIL (Chief Minister):—I do not know how many copies are immediately available. If hon. members want I may place a few copies on the table of the House so that members can look into it

MR. SPEAKER:—There are two copies of the agreement available and they will be placed on the table of the House for reference.

SRI H. N. NANJE GOWDA:—I would advise Dr. Rao to go through this clause of the agreement. Looking to what he has stated, we feel that he has become one with Madras to fight us and so he is incapable of functioning judiciously as a Union Government Minister and so I would advise the Prime Minister to be cautious on this point and if possible to relieve him from his Ministership. Clause 14 also says that neither Madras nor Mysore should intercept the water that flows to the Upper Anecut. Now Madras has intercepted it across Bhavani and Amaravathi. They have also particularly violated sub-clause 14. of clause 10 I am sorry to say and it is impossible for me to believe that the Union Government could stoop to such a level and take such an attitude, without examining even the provision of the Act. He has further stated that Mysore can impound 45 TMC ft. under certain conditions. This clause 10 (7) is by itself repugnant. When a right is created how is it that we can be prevented from exercising it? This violates the Indian Contracts Act and on this score it is a void agreement. We are not bound by the conditions under which we can impound 45 TMC ft. We are bound to utilise it and even more because we say it is a void agreement. He has stated that Harangi is not covered by the 1924 Agreement and if that is so, what made him not to give clearance to this project. It may be due to some deep reasons or prejudicial attitude. Why should Dr. Rao or the Union Government take so many years to sanction this project? He has stated that the CWPC and the Planning Commission have not cleared it. These two agencies are the limbs of the Government of India created byan executive order: they are not statutory bodies. I want to tell Dr. Rao that decision regarding any clearance by these two agencies is not binding on us now, let along on the Union Government. I also advise the Mysore Government to examine whether we can

question in any court of law the attitude taken by Dr.Rao regarding this matter. We know who are all there in the CWPC and the Planning Commission. There are more number of Andhrites and Madrasis on them and for one reason or another they will find out small technical flaws to withhold consent. History has proved that they have taken 8 to 10 years to decide on these projects. If they have not cleared these projects, they were purposely avoiding giving clearnace to them. I do not know whether I would be correct in attributing motives to the CWPC and the Planning Commission, but I can saw that it was unjust on their part to drag on for 8 to 10 years. They could have at the most taken 2-3 years for giving a decision: it has been pending since 1960. They have become partisan favouring Madras in order to safeguard the interest of Andhra. Dr. Rao has said that no Central aid will be given to Cauvery Projects. I want to tell Dr. Rao that Central aid is meant to remove imbalances in the country. The most under-developed State is ours in the matter of irrigation and Madras is having the major portion of it. I want to ask him whose money is it? Are we not paying by way of taxation? Every citizen is paying tax. So, he is not correct when he says that. I advise the Mysore Government to examine this aspcct and see whether we can see the Union Government in any court of law. I also want to tell Dr. Rao that Central aid is given within the State Plan ceiling. His saying that no Central aid will be given to our projectis would amouut to abuse of power. If they have exceeded the power given to them, I think it is a fit case to sue them in a court of law.

Lastly, if no settlement is possible through negotiation, the Central Government will have no objection to refer the matter to a Tribunal. In that case it amounts to Rao's mediation. "ಇದಕ್ಕೆ ಕನ್ನಡದಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ ಹೊಳಗೆ ಬೀಳುವಾಗ ಜೊತೆಯು ಕಲ್ಲು ಕಟ್ಟಿಕೊಂಡು ಬೀಳಬೇಕು. ಇಲ್ಲದಿದ್ದರೆ ದೇಹ ತೇಲುತ್ತದೆ. ಜೊತೆಗೆ ಕಲ್ಲು ಕಟ್ಟಿಕೊಂಡು ಬಿದ್ದರೆ ಸಾಯುಬಹುದು. I warn this Government to be very very cautious about Rao's media tion: I have no trust in him. Our position was better in 1924 and though the British Government was in power then and though Madras was a British Province, and though they were favourable to Madras they were not inimical to Mysore. Now the position of tihat though the agreement is not so favourable to Madras, it a nimical to our State. When such is the case, under this voidi agreement if we enter into negotiation or go for arbitration, what the result would be I cannot imagine. Under this void agreement, the Central Government is the agency to arbitrate in this matter. But unfortunately the Union Government has revealed through Dr. Rao that they have taken a partisan attitude in favour of Madras. Dr Rao has prejudged the issue and stated that we have violated the agreement. I do think Dr. Rao is a legal expert. If the Government of India has become Julius Dr. Rao has be come Cassius and I warn that he will be the cause for the

(SRI H. N. NANJE GOWDA)

political death of Indira Gandhi. If she tolerates this Cassius we will be forced to become her enemies If this trend continues in the country, to day it may be Mysore and tomorrow it may be some other State. In that case there will be more enemies to her and it will ultimately lead to her political death. It is a case dere liction of duty and if we hind acted properly, promptly and within time these things would not have been there. We have suffered because of the lethargic attitude of this Government. We are determined to safeguard our interest and go ahead with our projects.

9-30 P.M.

†Sri. H. M. CHANNABASAPPA (Periyapatna) :-Mr. Speaker, Sir, the story of Cauvery waters is a pathetic story; so also the story of Krishna waters and so also the border issue. We have had very big landslides in Mysore over this one decade. These landslides pertain to Krishan, border and lastly the Cauvery. The present catastrophe or the deplorable situation for Mysore on the Cauvery front is according to to the reports made in the press and on the platform, is due to the Government of India. It is for us to assess to what extent Government of India is responsible for this deplorable situation, to what extent Madras is responsrible for this situation and to what extent we are also responsible for this situation.

Before I proced further, the two or three important points which Dr. K.L. Rao has made out, have got to be taken into consideration from the technical and legal aspects. He has said in yesterday's statement that Mysore has violated the 1924 Agreement because Mysore has admittedly been going ahead with its projects, Harangi, Hemavati and Kabini also without reference to 1924 Agreement and so they are outside the scope of the Agreement or to put it in other words Mysore has violated the 1924 Agreement. That is one damaging statement, probably the most damaging statement that Dr. K.L. Rao has made. The next point he has made and which is very relevant is that unless it is cleared by the Planning Commission he will stop the Central aid to any of these projects. The third point he has made is... it is only a suggestion......I don't call it an ultimatum or mandate because it is none of them under any statute that we know ..it is not even a direction......he has no powers to give a direction...he has made a suggestion that still negotiation is possible in order to come to a fair settlement : he has suggested to the Chief Minister of Mysore to stop the project and come forward with proposals for negotiations. I would like to dwell on these three important points and another point which he has made about Kabini is something very cruel, very hard and ununderstandable. How it is so is a matter which I will deal one by one.

I have to go back to 1959 and 1960 if we are to properly appreciate the Centre's stand-point. What happened in 1960 was this. We made a reference to the Government of India that Madras has violated the 1924 Agreement, and it is an admitted fact that Government of India has said in Parliament that Mysore has submitted an application that there has been violation of 1924 Agreement in the year 19'9 and 1960. They have also admitted that a dispute has arisen and they have also said in Parliament that Government of India is seized of the matter and they are calling an Inter-State Conference of Ministers concerned in order to settle this issue fairly. The papers are before me, but I do not want to go through them because it will take a long time. Suffice it to say that the Government of India was seized of our case in 1959. On 28th April 1959, the Union Minister for Irrigation and power has made a statement in parliament in reply to a question by Sri Shivananjappa of revered memory and Sri H. C. Dasappa of revered memory...it is not merely a statement...it is an admission that Government of Mysore has submitted an application for revision of the Agreement. Now I proceed with this background. When an application has been submitted, it was the bounden duty of the Government of India to immediately take action and I am glad they have announced in parliament that the Centre is to intiate Madras-Mysore talks for settlement and that they are going immediately to proceed on that basis. Why did not Dr. K.L, Rao pursue its? Eleven long years have passed since the application was submitted to them After sleeping over the entire issue for eleven long years, is it open today to Dr. Rao or any other Minister to say that Mysore is violating the 1924 Agreement ? It is a travesty of truth. I would like to make a clear remark against the Government of India. They did not proceed on that basis. I would like to ask Dr. Rao, through you Sir......of course he is not here to answer ...at the time when Kalembadi, Kalaiyadim Mettur and other projects were constructed by Madras, whether Government of India was a party to this violation of 1924 Agreement. What did they do? They did not inform Mysore, they did not take the concurrence of Mysore and knowing full well that the construction or these pr jects is outside the 1924 Agreement they have given clearane, the Planning Commission have given clearance and the Government of India has given clearance. Now I charge the Government of India that they are a party for an illegal action which affects the interests of Mysore; and the Government of India will have to answer before an appropriate Court of Law. That is my first point.

The next point is, after abdicating their powers so settle the issue and the issue that we have presented, after ten long years he comes and tells that the Mysore Government is violating the provisions of the Agreement. Now at this stage, lest I should forget, I would

(SRI H. M. CHANNABASAPPA)

like to paint out that in sub-clause 15 of clause 10 of the Agreement it is provided that :

(*e*) Proposal to reorganise the set up of the Institute to intensify Poultry Disease Investigation and Production of more vaccine are under active consideration.

ಶ್ರೀ ಜಿ. ರಾಮೇಗೌಡ.—ಈ ಔಷಧಿ ತಯಾರಿಸುವ ಯಂತ್ರ ಕೆಟ್ಟು ಎಷ್ಟು ವರ್ಷವಾಯ್ತು ? ರಿಪೇರಿಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಅದು ಕೆಟ್ಟುಹೋಗಿ ಎರಡು ವರ್ಷವಾಯ್ತು.

It is a foreign equipment which could not be repaired here. We tried four institutions for its repair. But at the moment we have not received any favourable reply. That is why we have requested the Government of India to allow us some foreign exchange to procure the equipment from England.

ಶ್ರೀ ಜಿ. ರಾಮೇಗೌಡ.—ಈಗ ರಾಣಿಖೇಟ್ ವ್ಯಾಕ್ಸೀನನ್ನು ಎಲ್ಲಿಂದ ತರಿಸಲಾಗುವುದು ? ಅದಕ್ಕೆ ವೆಚ್ಚವೆಷ್ಟು ತಗಲುವುದು

ಶ್ರೀ ಜಿ. ಬಿ. ಶಂಕರ ರಾವ್.— ಅದರಲ್ಲಿ ಎರಡು ರೀತಿಯದು ಇದೆ, ಒಂದು ಲಿಕ್ವಿಡ್, ಇನ್ನೊಂದು ಫ್ರೀಜ್ಡ್. ಲಿಕ್ವಿಡ್ ನಾವು ತಯಾರು ಮಾಡಿರುವುದು, ಫ್ರೀಜ್ಡ್ ವ್ಯಾಕ್ಸೀನ್ ಇಜತ್‌ನಗರ, ರಾಣಿಪೇಟೆ, ಹೈದರಬಾದು ಮತ್ತು ಬಿಜಾಪುರ ಮುಂತಾದ ಕಡೆಗಳಿಂದ ತರಿಸಲಾಗುವುದು.

ಶ್ರೀ ಎನ್. ಎ. ಚನ್ನೇಗೌಡ.—ಇಜ್ಜತ್‌ನಗರದಿಂದ ತರಿಸುವುದು ಪರಿಣಾಮಕಾರಿಯಾಗಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ? ಎರಡು ವರ್ಷದಿಂದ ಯಂತ್ರ ಕೆಟ್ಟಿದ್ದರಿಂದ ತೊಂದರೆಯಾಗಲಿಲ್ಲವೆ ?

ಶ್ರೀ ಜಿ. ಬಿ. ಶಂಕರ ರಾವ್.—ಅದು ಫಾರಿನ್ ಎಕ್ವಿಪ್‌ಮೆಂಟ್, ಅದನ್ನು ನಮ್ಮಲ್ಲಿ ರಿಪೇರಿ ಮಾಡುವುದಕ್ಕಾಗಲಿಲ್ಲ, ನಾಲ್ಕು ಕಡೆ ವಿಚಾರಮಾಡಿದರೂ ಸಾಧ್ಯವಾಗಲಿಲ್ಲ. ಕೇಂದ್ರ ಸರಕಾರಕ್ಕೆ ಬರೆದೆವು. ಎರಡು ಎಕ್ವಿಪ್‌ಮೆಂಟ್ ಯೂನಿಟ್ ಬೇಕೆಂದು ಕೇಳಿದ್ದೇವೆ. ಫಾರಿನ್ ಎಕ್ಸ್‌ಛೇಂಜ್ ೪ ಲಕ್ಷ ರೂಪಾಯಿ ಕೇಳಿದ್ದೇವೆ. ಅದಕ್ಕೆ ಹಣ ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಫಾರಿನ್ ಎಕ್ಸ್‌ಛೇಂಜ್ ಕೊಡಲು ತಯಾರಿದ್ದಾರೆ. ನಮ್ಮ ದೇಶದಲ್ಲಿ ರುಪಿ ಪೇಮೆಂಟ್‌ಮೇಲೆ ಯಂತ್ರೋಪಕರಣ ಒದಗಿಸುವ ಒಂದು ಆರ್ಗನೈಸೇಷನ್ ಇದೆ. ಅದು ಯಾವುದೆಂದರೆ ಮೆಸರ್ಸ್ ಲಾರೆನ್ಸ್ ಅಂಡ್ ಮೇಯೋ, ಅವರಿಗೆ ಹೇಳಿದ್ದೆವೆ. ಅವರು ನಾಲ್ಕು ಅನುಕೂಲ ಒದಗಿಸಬೇಕೆಂದು ತಿಳಿಸಿದ್ದಾರೆ.

1) Actual user import license,

(2) Letter of authority in favour of the firm.

(3) Exemption Certificate to be obtained from the Chief Controller of Exports and Imports, New Delhi,

(4) Release of Foreign Exchange.

ಈ ನಾಲ್ಕೂ ಒದಗಿಸಿದರೆ ತರಿಸಿಕೊಡುವುದಾಗಿ ಹೇಳಿದ್ದಾರೆ.

ಶ್ರೀ ಎಸ್. ಜೆ. ಪುಟ್ಟರಂಗನಾಥ್.—ಈಗಾಗಲೇ ಲಿಕ್ವಿಡ್ ವ್ಯಾಕ್ಸೀನ್ ತಯಾರಿಸುತ್ತಿದ್ದೇವೆ ಎಂದು ಹೇಳಿದಿರಿ. ರಾಮೇಗೌಡರು ಮೇಷೀನ್ ಕೆಟ್ಟಿದೆ, ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ, ಆದುದರಿಂದ ತಾವು ಹೇಳುವುದು ನಿಜವಲ್ಲ ಎಂಬುದನ್ನು ಒಪ್ಪುತ್ತೀರಾ ? ಕೆಟ್ಟಿರುವುದನ್ನು ರಿಪೇರಿಮಾಡಿ ಸಾಧ್ಯವಾದಷ್ಟು ಬೇಗ ಕೋಳಿ ರೋಗ ತಡೆಗಟ್ಟಲು ಪ್ರಯತ್ನಮಾಡುವಿರಾ ?

ಶ್ರೀ ಜಿ. ಬಿ. ಶಂಕರ ರಾವ್.—ಇದಕ್ಕೆ ಉತ್ತರ ಆಗಲೇ ಹೇಳಿದೆ. ಇಲ್ಲಿ ಎರಡು ರೀತಿಯ ವ್ಯಾಕ್ಸೀನ್ ಇದೆ. ಒಂದು ಲಿಕ್ವಿಡ್, ಇನ್ನೊಂದು ಫ್ರೀಜ್ಡ್. ಲಿಕ್ವಿಡ್ ವ್ಯಾಕ್ಸೀನ್ ಪ್ರಿಪೇರ್ ಮಾಡುತ್ತೇವೆ, ಮೆಷೀನ್ ಕೆಟ್ಟಿದೆ ಲಿಕ್ವೀಡ್‌ನಲ್ಲಿ ಒಂದು ದೋಷ ಇದೆ. ಅದನ್ನು ಮಾಡಲು ಯಂತ್ರ ಬೇಕಾಗಿಲ್ಲ, ಅದು ಬಹಳ ಕಾಲ ಇರುವುದಿಲ್ಲ, ಬಹಳದೂರ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಬಹಳ ದೂರದಿಂದ ತಂದರೆ ಪರಿಣಾಮಕಾರಿಯಾಗುವುದಿಲ್ಲವೆಂದು ಚನ್ನೇಗೌಡರು ಹೇಳಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಪಂತ.—ಈ ಯಂತ್ರ ಸರಬರಾಯಿ ಮಾಡುವ ಫಾರಿನ್ ಕಂಪೆನಿ ಲಿಕ್ವಿಡೇಷನ್ನಿಗೆ ಬಂದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರ ರಾವ್.—೧೯೫೦ರಲ್ಲಿ ಮೇಷಿನರಿ ಕೊಟ್ಟಿರುವುದು, ೧೪ ವರ್ಷ ಹಗಲು ರಾತ್ರಿ ಉಪಯೋಗಮಾಡಿ ಇಂದು ರಿಪೇರಿ ಮಾಡಬೇಕಾಗಿದೆ. It has outlived its utility. We cannot think of repairing it. We cannot probe into the point whether the institution which supplied, has gone into liquidation or not. It is not our concern.

ಶ್ರೀ ಜಿ. ರಾಮೇಗೌಡ.—ಈ ಸೆಕ್ಷನ್ ರೀ ಆರ್ಗನೈಜ್ ಮಾಡಿ ಹೆಚ್ಚು ಉತ ತ್ತಿ ಮಾಡುವುದಾಗಿ ತಿಳಿಸಿದ್ದಾರೆ: ಈ ಸಾಲಿನಲ್ಲಿ ಇದಕ್ಕೆ ಎಷ್ಟು ಹಣ ಖರ್ಚುಮಾಡಲು ಅಂದಾಜಾಗಿದೆ. ?

ಶ್ರೀ ಜಿ. ಬಿ. ಶಂಕರ ರಾವ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೪ ಲಕ್ಷ ಖರ್ಚುಮಾಡಿ ಯಂತ್ರೋಪಕರಣ ಹೆಚ್ಚಿಸಬೇಕು. ಸಿಬ್ಬಂದಿಯಲ್ಲಿ ೪ ಜನ ಹೆಚ್ಚುಮಾಡಬೇಕು ಎಂಬ ಯೋಜನೆ ಇದೆ. ಇದಕ್ಕಾಗಿ ನಮ್ಮ ರಾಜ್ಯದಲ್ಲಿರುವ ೪ ರೀಜನಲ್ ಕ್ಲಿನಿಕಲ್ ಲ್ಯಾಬೋರೇಟರಿಗಳನ್ನು ಬಲಪಡಿಸಲು ಅದಕ್ಕೆ ೨೦ ಸಾವಿರ ರೂಪಾಯಿ ಒದಗಿಸಲಾಗಿದೆ.

LAND REFORMS PROBLEM ON WAR FOOTING

650 Sri M. S. KRISHNAN (Malleswaram).—

Will the Minister for Revenue be pleased to state.—

(*a*) whether the Government is aware of the call given by the Union Home Minister at the recent Southern Zonal Council Meeting to tackle Land Reforms problems on a war footing so as to ensure effective imposition of ceilings and systematic distribution of surplus and Government lands to landless agriculturists.

(*b*) if so, the steps the Government is taking or proposing to take to tackle the land reforms problems on a war footing ?

Sri H. V. KOUJALGI (Minister for Revenue.—)

(*a*) Yes.

(*b*) The number of Courts which will dispose of the applications filed under the Land Reforms Act has been practically doubled. The pace of disposal is expected to be further improved by transfer of functions of an executive character to the Revenue Department from the Land Tribunal Courts. A State Level Review Committee with the Chief Minister as Chairman and including several Hon,ble Members of the Legislature has been constituted periodically to review progress and suggest measures to further improve speed and efficiency in implementation of the Land Reforms Programme. The Land Grant rules have been throroughly revised and simplified and higher powers are vested in local officers of the Revenue Department. Taluk Level Consultative Committees including responsible non-officials are about to be set up in order to ensure quick, fair and systematic disposal to the poor and landless of Government lands available for being given out for cultivation.

ಶ್ರೀ ಎಂ. ಎಸ್. ಕೃಷ್ಣನ್.—(ಬಿ) ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ ಕೋರ್ಟುಗಳು ಇತ್ಯರ್ಥ ಮಾಡುವುದರಿಂದ ಬೇಗ ಕೇಸುಗಳು ಡಿಸ್‌ಪೋಸ್ ಆಗುತ್ತವೆಯೇ ? ಇದನ್ನು ವಾರ್ ಫೂಟಿಂಗ್ ಎಂದು ಕರೆಯಬಹುದೇ ?

ಶ್ರೀ ಎಚ್. ವಿ. ಕೌಜಲಗಿ.— ಮುನ್ಸೀಫ್ ಕೋರ್ಟಿಗೆ ಎಲ್ಲಾ ಅಧಿಕಾರವನ್ನೂ ಕೊಡಲಾಗಿದೆ. ಈಗ ಕೋರ್ಟುಗಳ ಸಂಖ್ಯೆ ಇನ್ನೂರಕಿಂತ ಹೆಚ್ಚಾಗಿದೆ, ಜ್ಯುಡಿಷಿಯಲ್ ಮತ್ತು ಎಗ್ಸಿಕ್ಯೂಟಿವ್ ಫಂಕ್‌ಷನ್ ಬೇರೆ ಮಾಡಲಾಗಿದೆ, ಕೋರ್ಟುಗಳು ಜ್ಯುಡಿಷಲ್ ಫಂಕ್‌ಷನ್ ಮಾತ್ರ ನೋಡಿಕೊಳ್ಳುವುದರಿಂದ ತೀವ್ರವಾಗಿ ಕೆಲಸವಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಭೂ ಪರಿಮಿತಿ ಕಡಿಮೆಮಾಡಬೇಕು, ೧೫-೨೦ ಎಕರೆ ಮಾಡಬೇಕು, ಇದರ ಜೊತೆಗೆ ಭೂಮಿಯನ್ನು ಟೆನೆಂಟುಗಳಿಗೆ ಕೊಡಬೇಕು, ಅದಕ್ಕೆ ತಾರೀಖು ನಿಗದಿಮಾಡಬೇಕು ಎಂದು

(ಶ್ರೀ ಎಂ ಎಸ್. ಕೃಷ್ಣನ್)

ಹೇಳುವಾಗ ಇಂಥ ದಿವಸದಿಂದ ಹಾಗೆ ಮಾಡುತ್ತೇವೆಂದು ಗೊತ್ತುಮಾಡಬೇಡವೇ. ಫೇರ್ ರೆಂಟ್ ನಿಗದಿ ಮಾಡಲು ಇರುವ ಪ್ರೊಸಿಜರ್ ಸರಿಯಾಗಿಲ್ಲ, ಇದರಿಂದ ನ್ಯಾಯ ದೊರೆಯುತ್ತಿಲ್ಲ ಎಂದು ದಕ್ಷಿಣ ಕನ್ನಡ ದವರು ಹೇಳಿಲ್ಲವೇ ಇದರ ಬಗ್ಗೆ ಸರಿಯಾದ ಅಭಿಪ್ರಾಯವೇನು ?

ಶ್ರೀ ಎಚ್. ವಿ. ಕೌಜಲಗಿ.—ಜಾಗ್ರತೆಯಾಗಿ ಕಾನೂನನ್ನು ಅಮಲಿಗೆ ತರಬೇಕೆಂಬ ಉದ್ದೇಶದಿಂದಲೇ ಕೋರ್ಟುಗಳ ಸಂಖ್ಯೆ ಜಾಸ್ತಿಮಾಡುವುದು ಮುಂತಾದ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—೧೯೩೩–೧೯೩೪ರಲ್ಲಿ ಮಹಾತ್ಮಾ ಗಾಂಧಿಯವರು ಪ್ರಚಾರ ಮಾಡಿದಾಗ ಎರಡು ಕಮಿಟಿಗಳಿದ್ದುವು. ಆ ಎರಡು ಸಮಿತಿಗಳೂ ಕೆಲಸಮಾಡುವುದಾದರೆ ಅದಕ್ಕೆ ಉತ್ತೇಜನ ಕೊಡುವಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಯಾವುದೋ ಗೊತ್ತಿಲ್ಲ. ಅವು ಜೀವಂತ ಇವೆಯೋ ಎಂಬುದೂ ತಿಳಿಯದು. ೧೯೩೦ನೆಯ ಇಸವಿಯ ವಿಚಾರ ೧೯೬೦ನೆಯ ಇಸವಿಯಲ್ಲಿ ಹೇಳಲು ಆಗುವುದಿಲ್ಲ.

೨-೦೦ ಪಿ.ಎಂ.

ಶ್ರೀ ಎನ್. ಚಿಕ್ಕೇಗೌಡ.—ಹೆಚ್ಚುವರಿ ಭೂಮಿಯನ್ನು ಹಂಚುವುದಕ್ಕೆ ಕಮಿಟಿಗಳನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಕಮಿಟಿಗಳು ಆಗುವವರೆಗೂ ಜಮೀನನ್ನು ದರಖಾಸ್ತು ಮೂಲಕ ಹಂಚಬಾರದು ಎಂದು ಆದೇಶವನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೊಟ್ಟಿಲ್ಲವೇ? ಆದುರಿಂದ ಮೀನು ಹಂಚಿಕೆ ಕೆಲಸ ಸ್ಥಗಿತಗೊಂಡಿಲ್ಲವೆ? ತಾಲ್ಲೂಕು ಸಲಹಾ ಸಮಿತಿಗಳನ್ನು ಯಾವಾಗ ಮಾಡಲಾಗುತ್ತದೆ

ಶ್ರೀ ಎಚ್. ವಿ. ಕೌಜಲಗಿ —ತಾಲ್ಲೂಕು ಕಮಿಟಿಗಳನ್ನು ಆದಷ್ಟು ಜಾಗ್ರತೆ, ಈ ಅಧಿವೇಶನ ಮುಗಿಯುವುದರೊಳಗಾಗಿ ಮಾಡುತ್ತೇವೆ ಎಂದು ಕೆಲವುದಿನಗಳ ಹಿಂದೆ ಹೇಳಿದ್ದೇನೆ. ಕಮಿಟಿಗಳು ಆಗುವವರೆಗೂ ಇರತಕ್ಕ ಭೂಮಿಯನ್ನು ಹಂಚಬಾರದು ಎನ್ನುವ ಆದೇಶವನ್ನು ಯಾವತ್ತೂ ಜಿಲ್ಲಾಧಿಕಾರಿಗಳಿಗೆ ಕೊಟ್ಟಿಲ್ಲ.

ಶ್ರೀ ಬೋಳರಘುರಾಮ ಶೆಟ್ಟಿ.—ಭೂಮಸೂದೆಯನ್ನು ಆವಸರದಿಂದ ತರಲಾಗಿದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿಶೇಷ ಪರಿಸ್ಥಿತಿ ಎಂದರೆ ಅಳಿಯ ಸಂತಾನ ಪದ್ಧತಿ, ಮತ್ತು ರೈತವಾರಿ ಪದ್ಧತಿ ಏನಿದೆ ಅದಕ್ಕೆ ಅನ್ಯಾಯವಾಗಿದೆ ಎಂದು ಬಹಳ ಸಮಯದಿಂದ ಚಳುವಳಿ ಮಾಡುತ್ತಿದ್ದಾರೆ. ಮೊನ್ನೆ ಅಲ್ಲಿ ಧರಣಿ ಮುಷ್ಕರ ಕೂಡ ಮಾಡಿದಾರೆ. ರಾಜ್ಯ ಮಟ್ಟದಲ್ಲಿ ಕೂಡ ಆಗಬಹುದು. ಅವರಿಗೆ ಶೀಘ್ರವಾಗಿ ಪರಿಹಾರ ಒದಗಿಸುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಕಾಯದೆಯನ್ನು ಅವಸರಲ್ಲಿ ತಂದಿಲ್ಲ. ೧೯೬೧ರಲ್ಲಿ ಪಾಸಾಗಿ ೧೯೬೫ರಲ್ಲಿ ಅಮಲಿನಲ್ಲಿ ಬಂದಿದೆ. ಅಳಿಯಸಂತಾನದ ವಿಚಾರ ಇದರೊಳಗೆ ಬರುವುದಿಲ್ಲ. ಭೂ ಮಾಲೀಕ ಮತ್ತು ಗೇಣಿದಾರರಿಗೆ ಇರುವ ಸಂಬಂಧದಬಗ್ಗೆ ಮಾತ್ರ ನಮ್ಮಮುಂದೆ ಇದೆ.

Sri D. B. KALMANKAR.—May I know whether the Government thinks that the steps taken are sufficient to meet the problems of land reforms in the villages or some drastic steps are necessary?

Sri H. V. KOUJALGI.—So far as the Government is concerned, present measure is sufficient. If any other measure is suggested by the Hon. Member, it will be considered.

ಶ್ರೀ ಬಿ. ಪಿ. ಗಂಗಾಧರ.—ವಾರ್ ಪುಟಿಂಗ್‌ನಲ್ಲಿಮಾಡಬೇಕು ಎಂದು ಶ್ರೀ ಕೃಷ್ಣನ್ ಅವರು ಹೇಳುತ್ತಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ಪವರ್‌ಫುಲ್ ಆಗಿರುವ ಜನ ಗೇಣಿದಾರರನ್ನು ತಪ್ಪಿಸಿ, ಪಹಣಿಯಲ್ಲಿ ತಮ್ಮ ಹೆಸರನ್ನು ಬರಸಿಕೊಂಡು ವಾರ್ ಪುಟಿಂಗ್ ಮೇಲೆ ಎವಿಕ್ಟ್ ಮಾಡುತ್ತಿದ್ದಾರೆ ಅಂಥವರಿಗೆ ಏನಾದರೂ ರಕ್ಷಣೆಯನ್ನು ಸರ್ಕಾರ ಕೊಡುವುದೆ?

ಶ್ರೀ ಎಚ್. ವಿ. ಕೌಜಲಗಿ.—ವಾರ್ ಪುಟಿಂಗ್ ಎಂದರೆ ಪದಶಃ ಅರ್ಥವಲ್ಲ ಹೆಚ್ಚು ಜಾಗ್ರತೆಯಾಗಿ ಆಗಬೇಕು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳುವಂಥದ್ದು ಏನೂ ಆಗಿಲ್ಲ.

ಶ್ರೀ ಎಂ. ನಾಗಪ್ಪ.—ಅನೇಕ ತಾಲ್ಲೂಕು ಕೋರ್ಟುಗಳಲ್ಲಿ ೮೦೦, ಒಂದುಸಾವಿರ, ಎರಡುಸಾವಿರ ಹೀಗೆ ಅರ್ಜಿಗಳು ಪೆಂಡಿಂಗ್ ಇವೆ. ಒಂದು ದಿವಸಕ್ಕೆ ಒಂದು ಅಪ್ಲಿಕೇಷನ್ ಇತ್ಯರ್ಥ ಮಾಡಿದರೂ ಸಹಿತ ಎಷ್ಟು ವರ್ಷಗಳಾಗುತ್ತವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ದೃಷ್ಟಿಯಿಂದ ವಾರ್ ಪುಟಿಂಗ್ ಮೇಲೆ ಮಾಡಿದರೂ ೨೦ ವರ್ಷಕಾಲ ಹಿಡಿಯುತ್ತದೆ, ಎನ್ನುವುದನ್ನು ಒಪ್ಪುತಾರೆಯೇ? ಇಲ್ಲ ಎಂದರೆ ಎಷ್ಟು ವರ್ಷದೊಳಗೆ ಭೂ ಸುಧಾರಣಾ ಕಾಯದೆಯನ್ನು ಪೂರ್ತಿಯಾಗಿ ಕಾರ್ಯಗತ ಮಾಡುತ್ತಾರೆ ಎಂದು ಸಮಯವನ್ನು ನಿಗದಿ ಮಾಡಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಎಲ್ಲೋ ಒಂದೆರಡು ಕೋರ್ಟಿನ ಉದಾಹರಣೆಯನ್ನು ಹೇಳುತ್ತಿದ್ದಾರೆ. ಕೆಲವುಕಡೆ ಸಿವಿಲ್‌ಗೆ ಸಂಬಂಧಪಟ್ಟ ಕೇಸುಗಳಿಲ್ಲ. ಕ್ರಿಮಿನಲ್ ಕೇಸುಗಳು ಕೆಲವುಕಡೆ ಇವೆ. ಆದ್ದರಿಂದ ಕೆಲಸ ಹೆಚ್ಚಿಗೆ ನಡೆಯುತ್ತದೆ. ಎಲ್ಲಿ ಹೆಚ್ಚು ಕೆಲಸವಿರುತ್ತದೆ ಅಲ್ಲಿ ಅವಶ್ಯವೆನಿಸಿದರೆ ಹೆಚ್ಚಿನ ಕೋರ್ಟು ನೇಮಿಸುವುದಕ್ಕೆ ವಿಚಾರಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಜುಡಿಷಿಯಲ್ ಫಂಕ್ಷನ್ಸ್‌ನಲ್ಲಿ ಬಹಳಕಾಲ ವಿಳಂಬವಾಗುತ್ತಿರುವುದರಿಂದ ಅದನ್ನು ತೀವ್ರಗೊಳಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.—ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಇಲ್ಲ. ಇದನ್ನು ಕಾಯದೆಬದ್ಧವಾಗಿ ಅಮಲು ಮಾಡಬೇಕಾಗುತ್ತದೆ.

ಶ್ರೀ ಬಿ ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರ ಸಂಖ್ಯೆ ಜಾಸ್ತಿ ಇದೆ ಐದು ವರ್ಷಗಳಿಂದ ಬಲಿಷ್ಠವಾದ ಹಿಡುವಳಿದಾರರು ಗೇಣಿದಾರರನ್ನು ಒಕ್ಕಲು ಎಬ್ಬಿಸುತ್ತಿದ್ದಾರೆ, ಬಲಿಷ್ಠವಾದ ಒಕ್ಕಲುಗಳು ಗೇಣಿ ಕೊಡುತ್ತಿಲ್ಲ. ಇದುವರೆಗೂ ನ್ಯಾಯ ಗೇಣಿನಿಗದಿಮಾಡಿಲ್ಲ. ಇಲ್ಲಿ ಸೂಕ್ತ ಪರಿಹಾರವನ್ನು ಕೊಡಲ, ಒಂದು ಎಮರ್ಜೆನ್ಸಿ ಮೆಷರ್ ತೆಗೆದುಕೊಂಡು ಬಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿಸಿಕ್ಕುವ ಹಾಗೆ ಏನಾದರೂ ಕಾನೂನು ಮಾಡುತ್ತಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ದಕ್ಷಿಣ ಕನ್ನಡ ಜಿಲ್ಲೆಯ ಗೇಣಿ ಸಂಬಂಧದಲ್ಲಿ ಮಾನ್ಯ ಸದಸ್ಯರ ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಆ ಸಂಬಂಧವಾಗಿ ಕೋರ್ಟಿಗೆ ಹೋಗಿ ತಡೆ ಆಜ್ಞೆ ಆದುದರಿಂದ ತಡವಾಗಿದೆ. ಈಗ ತಡೆ ಆಜ್ಞೆ ತೆಗೆದಿದ್ದಾರೆ. ಎಲ್ಲಕೋರ್ಟುಗಳಲ್ಲಿಯೂ ಈಗ ಒತ್ತಡದಿಂದ ಕೆಲಸ ನಡೆಸಿದ್ದಾರೆ.

ಶ್ರೀ ಎಂ. ಎಸ್ ಕೃಷ್ಣನ್.—ಈ ಕಾನೂನು ಪೂರ್ತಿಯಾಗಿ ಜಾರಿಗೆ ಬರಲು ಇನ್ನು ಕಾಲ ವಿಳಂಬವಾಗುತ್ತದೆ ಎನ್ನುವುದನ್ನು ಸರ್ಕಾರ ಮನಗಂಡಿದೆಯೇ? ಭೂ ಸುಧಾರಣಾ ಕಾನೂನನ್ನು ತಂದು ಏನು ಗುರಿಗಳನ್ನು ಸಾಧಿಸಬೇಕು ಎಂದು ಇದ್ದಾರೆ ಅದನ್ನು ನಿಜವಾಗಿಯೂ ಸಾಧಿಸುತಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಈ ಕಾಯದೆಯ ಪ್ರಯೋಜನವನ್ನು ಬೇಗ ರೈತರಿಗೆ ಮಾಡಿಕೊಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ.

MR. SPEAKER.—Now Question Hour is over. Now short Notice Question.

SHORT NOTICE QUESTION AND ANSWER

Development of Karwar Port

(8) Sri B. M. Idinabba (Mangalore).—

Will the Minister of State for Fisheries and Ports be pleased to state:—

(*a*) Whether the development of Karwar Port would lag behind as the Central Government would decide to develop Goa Port;

(*b*) whether the export of iron are would not very much suffer if the development of Karwar Port lags behind:

(*c*) the programmes envisaged by Government for development of the Karwar Port expeditiously.

Sri H. C. Linga Reddy (Minister of State for Fisheries and Ports)

(*a*) No, this is not the intention of the State Government.

(*b*) Yes

(*c*) A phased programme for development of Karwar Port, in stages, as an all wheather, deep-draft harbour with mechanised ore-loading facilitics is under consideration.

ಶ್ರೀ ಬಿ. ಎಂ. ಇದಿನಸಬ್ಬ.—ಕುದುರೆಮುಖದಲ್ಲಿ ಕಬ್ಬಿಣದ ಅದಿರು ಹೇರಳವಾಗಿ ಸಿಕ್ಕುವ ಪರಿಸ್ಥಿತಿ ಇರುವುದರಿಂದ ಮತ್ತು ಬೇರೆಕಡೆ ಬೇಕಾದಷ್ಟು ಅದಿರು ಇರುವುದರಿಂದ ಕಾರವಾರ ಬಂದರು ಆದರೆ ಮಾತ್ರ ಬಹಳ ಲಾಭದಾಯಕವಾಗಿ ಮತ್ತು ಬಹಳಬೇಗ ಅದಿರನ್ನು ಸಾಗಿಸಬಹುದು ಎಂದು ಹೇಳುತ್ತಿರುವ ಕಾಲದಲ್ಲಿ, ಕಾರವಾರ ಬಂದರು ಆಗುವುದು ಬಹಳ ಹಿಂದೆ ಬೀಳುವಂಥ ಪರಿಸ್ಥಿತಿ ಇರುವುದನ್ನು ತಪ್ಪಿಸಿ ನಮ್ಮ ರಾಜ್ಯಕ್ಕೆ ಆಗತಕ್ಕ ಅನ್ಯಾಯವನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮ ತೆಗದುಕೊಳ್ಳುತ್ತಿದ್ದಾರೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕಾರವಾರ ಬಂದರು ಮೂಲಕ ಕುದುರೆ ಮುಖ ಕಬ್ಬಿಣದ ಅದಿರನ್ನು ಸಾಗಿಸತಕ್ಕ ಯೋಜನೆ ಈವಾಗ ಇಲ್ಲ. ಹೊಸಪೇಟೆ ಮತ್ತು ಬಳ್ಳಾರಿ ಕಡೆಯಿಂದ ಹೇರಳವಾಗಿ ಸಿಕ್ಕತಕ್ಕ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಕಾರವಾರ ಬಂದರು ಅಭಿವೃದ್ಧಿಪಡಿಸಬೇಕು ಎಂದು ಯೋಜನೆ ಮಾಡುತ್ತಿದ್ದೇವೆ,

ಶ್ರೀ ಬಿ. ಎಂ. ಇದಿನಬ್ಬ.—ಕೆಲವು ಸಮಯದಹಿಂದ ಭುವನೇಶ್ವರದಲ್ಲಿ ಬಂದರುಗಳ ಸಮಿತಿಗೆ ಮಾನ್ಯ ಮಂತ್ರಿಗಳು ಹೋಗಿದ್ದರು. ಕಾರವಾರ ಬಂದರನ್ನು ಅಭಿವೃದ್ಧಿಪಡಿಸುವಬಗ್ಗೆ ಏನಾದರೂ ಸಲಹೆ, ಸೂಚನೆಗಳು ಬಂದಿದ್ದುವೆ ಅದರ ಪ್ರಕಾರ ಆದಷ್ಟುಬೇಗ ಕಾರವಾರ ಬಂದರು ಆಗುವುವಕ್ಕೆ ಏನಾದರೂ ಸೌಲಭ್ಯಗಳು ದೊರೆಯುತ್ತವೆಯೋ

ಶ್ರೀ ಎಚ್. ಸಿ. ಲಿಂಗಾರೆಡ್ಡಿ .—ಕಾರವಾರ ಬಂದರನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಮಾಸ್ಟರ್ ಪ್ಲಾನ್ ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದೇವೆ. ೧೬ ಕೋಟಿ ೭ ಲಕ್ಷ ರೂಪಾಯಿ ಅಂದಾಜಿನಲ್ಲಿ ಐದು ಹಂತಗಳಲ್ಲಿ ಮುಗಿಸಬೇಕು ಎಂದು ಇದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಂತ.— ಕಾರವಾರ ಬಂದರು ಅಭಿವೃದ್ಧಿಮಾಡುವ ಸಂಬಂಧದಲ್ಲಿ ಹುಬ್ಬಳ್ಳಿ ಕಾರವಾರ ರೈಲ್ವೆ ಲೈನ್ ಬಗ್ಗೆ ಏನು ಕಾರ್ಯಕ್ರಮವಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹುಬ್ಬಳಿ ಕಾರವಾರ ರೈಲ್ವೆ ಲೈನ್ ಆಗಬೇಕು, ಅದು ಬ್ರಾಡ್‌ಗೇಜ್ ಆಗಬೇಕು ಮತ್ತು ಆ ರೀತಿ ಆಗುವುದರಿಂದ ಬಳ್ಳಾರಿ ಮತ್ತು ಹೊಸಪೇಟೆ ಕಡೆಯಿಂದ ಹೆಚ್ಚಿನ ಕಬ್ಬಿಣದ ಅದಿರನ್ನು ಸಾಗಿಸಿಕೊಂಡು ಕಾರವಾರ ಬಂದರನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶವಾಗುವುದರಿಂದ, ರೈಲ್ವೆ ಮಾರ್ಗವನ್ನು ಬೇಗಮಾಡಿಕೊಡಬೇಕು ಎಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—೧೬ ಕೋಟಿ ರೂಪಾಯಿ ಯೋಜನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಹೇಳಿದಮಾತ್ರಕ್ಕೆ ತಕ್ಷಣ ಕಾರವಾರ ಬಂದರು ಆಗಲ್ಲಿಲ್ಲ. ಇದರಲ್ಲಿ ಬರತಕ್ಕ ಕಾರ್ಯಗಳ ಮತ್ತು ಖರ್ಚುಮಾಡಿರತಕ್ಕ ಹಣವೆಷ್ಟು?

ಶ್ರೀ ಎಚ್. ಸಿ ಲಿಂಗಾರೆಡ್ಡಿ.—ಕಾರವಾರ ಬಂದರನ್ನು ಈಗ ಮೀನುಗಾರಿಕೆ ಬಂದರನ್ನಾಗಿ ಮತ್ತು ಮೈನರ್ ಬಂದರಾಗಿ ಅಭಿವೃದ್ಧಿ ಪಡಿಸಿಕೊಂಡು ಸಾಮಾನು ಸರಂಜಾಮು, ಕಾರ್ಗೋ ಬಂದರಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ೧೨ ಲಕ್ಷಟನ್ ಕಬ್ಬಿಣದ ಅದಿರನ್ನು ಸಾಗಿಸತಕ್ಕ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಮೀನುಗಾರಿಕೆಯ ಬಂದರಾಗಿ ಅಭಿವೃದ್ಧಿ ಪಡಿಸುತ್ತಿದ್ದೇವೆ. ಅಲ್ಲಿ ನಾರ್ವೆಲಜಿಯನ್‌ಪ್ರಾಜೆಕ್ಟ್‌ನಡೆಯುತ್ತಿದೆ. ೨೦ ಲಕ್ಷ ರೂಪಾಯಿ ಮಂಜೂರಾಗಿ ಕೆಲಸನಡೆಯುತ್ತಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ—೧೬ಕೋಟಿ ಚಿಲ್ಲರೆ ರೂಪಾಯಿಗಳನ್ನು ಹಂತ ಹಂತವಾಗಿ ವಿನಿಯೋಗಿಸುವ ಕಾರ್ಯಕ್ರಮವನ್ನು ಪರಿಶೀಲಿಸುತ್ತಿದ್ದಾರೆಂದು ಹೇಳಿದ್ದಾರೆ. ಈ ಯೋಜನೆಯನ್ನು ಕಾರ್ಯಗತಮಾಡಲು ಪೋರ್ಟ್ ಡಿಪಾರ್ಟ್‌ಮೆಂಟನಲ್ಲಿ ಏನಾದರೂ ಸಭೆ ಕಮಿಟಿಯನ್ನು ಮಾಡಿದ್ದಾರೆಯೇ? ಹಂತ ಹಂತವಾಗಿ ಮುಗಿಯುತ್ತದೆ ಎಂದರೆ ೧೬ ಕೋಟಿ ರೂಪಾಯಿಗಳನ್ನು ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಖರ್ಚು ಮಾಡಲಾಗುತ್ತದೆ ಕೇಂದ್ರ ಸರ್ಕಾರ ಇದಕ್ಕೆ ಮಂಜೂರಾತಿಯನ್ನುಕೊಡುವ ಪರಿಸ್ಥಿತಿಯಲ್ಲಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪೋರ್ಟ್ಸ್ ಅಡ್ವೈಸರಿ ಬೋರ್ಡಿನಲ್ಲಿ ಈಚೆಗೆ ಒಂದು ಸಬ್ ಕಮಿಟಿ ಮಾಡಿದ್ದು ಆ ಕಮಿಟಿಯವರು ಕಾರವಾರ ಬಂದರು ಬಹಳ ಅಗತ್ಯವಾಗಿದೆ, ಬಹಳ ತೀವ್ರತರರೀತಿಯಿಂದ ಅದನ್ನು ಮುಗಿಸಬೇಕು ಎಂದು ಈ ಬಗ್ಗೆ ಒಂದು ಮೆಮೋರಾಂಡಮ್, ಕೂಡ ತಯಾರುಮಾಡಿ ಅದನ್ನು ಇಂಡಿಯಾ ಸರ್ಕಾರದ ರೈಲ್ವೆ ಮಂತ್ರಿಗಳು ಮತ್ತು ಷಿಪ್ಪಿಂಗ್ ಮಂತ್ರಿಗಳಿಗೆ ಕೊಟ್ಟು ಅವರು ಹೆಚ್ಚುಗಮನ ಕೊಟ್ಟು, ಗೋವ ಬಂದರನ್ನು ೨೪.೭೯ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಹೇಗೆ ಅಭಿವೃದ್ಧಿ ಪಡಿಸುತ್ತಾರೆಯೋ ಅದಕ್ಕಿಂತ ಹೆಚ್ಚುಗಮನವನ್ನು ಕಾರವಾರ ಬಂದರಿಗೆ ಕೊಡಬೇಕು, ಬಳ್ಳಾರಿ ಮತ್ತು ಹೊಸಪೇಟೆಯಲ್ಲಿ ಸಿಕ್ಕುವ ಸಾವಿರ ಅಥವಾ ಸಾವಿರದಐನೂರು ದಶಲಕ್ಷ ಟನ್ ಅದಿರನ್ನು ಸಾಗಿಸಲು ಹತ್ತಿರ ವಿರತಕ್ಕ ಮತ್ತು ಅಗ್ಗವಾಗಿ ಸಾಗಿಸುವುದಕ್ಕೆ ಅವಕಾಶವಿರುವಂಥ ಕಾರವಾರ ಬಂದರಿಗೆ ಅದಿರನ್ನು ಕಳುಹಿಸತಕ್ಕ ಏರ್ಪಾಡುಮಾಡಬೇಕೆಂದು ಹೇಳಿದ್ದೇವೆ.

Sri C. K. RAJIAH SETTY.—You know that Karwar Port is the best Port and it needs immediate development. May I know the size of the draft that is provided for the Port?

Sri H. C. LINGA REDDY.—In the Master Plan we have suggested a draft of 50′.

QUESTIONS FOR ANSWERS ON THE DAY (BUT NOT TAKEN UP)

TRANSFER OF BLOCK DEVELOPMENT OFFICERS IN TUMKUR DISTRICT

438. Sri G. T. GOVINDA REDDY (Madhugiri).—Will the Minister for Development be pleased to State :—

(*a*) the number of Block Development Officers, transferred within one year in Tumkur District during the year 1969-70;

(*b*) particulars of transfers be given?

Sri P. M. NADGOUDA, (Minister for Development).—

(*a*) One.

(*b*) Sri B. R. Rangadass, Block Development Officer, Madhugiri. He was transferred and posted to Pavagada.

HARIJAN GIRIJAN HOUSE BUILDING CO-OPERATIVE SOCIETY LIMITED, NELAMANGALA TALUK.

645. Sri K. PRABHAKAR (Varthur).—Will the Minister for Development be pleased to state :—

(*a*) the last date of conducting the last General Body Meeting of the Harijan Girijan House Building Co-operative Society Limited, in Nelamangala Taluk;

(*b*) whether there was any objection petition given to postpone the said General Body Meeting;

(*c*) the authority to whom it was given and when;

(*d*) the nature of objections raised or indicated in the said objection petition, and how many irregularities were pointed out therein;

(*e*) the action taken to postpone the said General Body Meeting;

(*f*) the rank of the concerned official of the Co-operative Department deputed for postponing General Body Meeting?

Sri P. M. NADGOUDA, (Minister for Development).—

(*a*) 30th April 1969, for the year 1967-68.

(*b*) Yes.

(*c*) The Deputy Registrar of Co-operative Societies, Bangalore District, Bangalore, on 29th April 1969.

(*d*) Regarding the procedure that was being followed by the society in connection with the holding of the General Body Meeting. It was also requested that the General Body Meeting might be postponed from the date fixed on the 30th April 1969 to a future date. Fourteen irregularities have been pointed out in the petition.

(*e*) It was considered unnecessary to postpone the General Body Meeting.

(*f*) Does not arise.

CALLING ATTENTION TO A MATTERS OF URGENT PUBLIC IMPORTANCE

Re : Mosquito menace and drinking water scarcity in Tumkur Town.

Sri B. P. GANGADHAR (Tumkur).—I call the attention of the Minister of State for Municipal Administration to the Mosquito menace and drinking water scarcity in Tumkur Town.

Sri B.M. PATIL, (Minister of State for Municipal Administration).—It is true that the mosquito menace exists in varying degrees in the several extensions of Tumkur town; it may be stated here that it is a general feature of all towns now-a-days in the State, especially, during the hot season. However, the Municipal authorities have been instructed to do the needful to spray the necessary pesticides, to clean up all slum areas regularly, etc. Unless underground drainage scheme is introduced and implemented in the Town Municipal area, the mosquito menace cannot be eliminated completely.

The Town Municipal Council has called for tenders to sink up a borewell behind the Executive Engineer's Office and after the receipt of tenders, the sinking of borewell will be expedited. Regarding the scarcity of drinking water, efforts are being made to trace the additional sources of water in the areas nearby, to augment the existing water resources. The Public Health and Engineering Departments have already been addressed to take up the question. For the present, it is reported that there is no sudden development of any acute shortage of drinking water in the Tumkur Town due to timely rains during this year.

ಶ್ರೀ ಬಿ. ಪಿ. ಗಂಗಾಧರ.—ಸೊಳ್ಳೆ ಕಾಟ ತಪ್ಪಿಸುವ ಕ್ರಮದ ಬಗ್ಗೆ ಮುನಿಸಿಪಾಲಿಟಿಯನ್ನು ಕೇಳಿದಾಗ ಸ್ಪ್ರೇ ಮಾಡಲಿಕ್ಕೆ ಬೇಕಾದ ಆಯಿಲ್ ಸಿಕ್ಕತ್ತಾ ಇಲ್ಲ ಎಂದು ಹೇಳಿ ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ತಮ್ಮ ಇನ್-ಅಬಿಲಿಟಿ ಪ್ಲೀಡ್ ಮಾಡುತ್ತಾರೆ. ಸರಕಾರ ಎಣ್ಣೆ ಒದಗಿಸಲು ಏರ್ಪಾಡು ಮಾಡುತ್ತಾರೆಯೇ?

ಶ್ರೀ ಬಿ. ಎಂ. ಪಾಟೀಲ್.—ಪೌರ ಸಭೆ ಏಣ್ಣೆ ಕಂಪನಿಗೆ ಬರೆದಿದ್ದಾರೆ. ಇದರಲ್ಲಿ ತೊಂದರೆ ಬಂದರೆ ಅವರ ಸಹಾಯಕ್ಕೆ ಹೋಗಲು ಸರಕಾರ ಸಿದ್ಧವಿದೆ.

ಶ್ರೀ ಬಿ. ಪಿ. ಗಂಗಾಧರ.—ತುಮಕೂರಿನ ಬಡಾವಣೆಯಲ್ಲಿ ಹೆಚ್ಚಾಗಿ ಬಡವರು ಇರುವ ಕಡೆ ನೀರಿನ ಕೊರತೆ ಇದೆ. ಮೊದಲು ಇದ್ದಷ್ಟೇ ನೀರಿನ ಸಪ್ಲೈ ಇಂದೂ ಸಹ ಇದೆ. ಪ್ರತಿಯೊಬ್ಬ ನಾಗರೀಕನಿಗೆ ಇಂತಿಷ್ಟು ಗ್ಯಾಲನ್ ನೀರು ಒದಗಿಸ ಬೇಕು ಎಂದು ಸರಕಾರ ನಿಗದಿ ಮಾಡಿದೆಯೇ?

ಶ್ರೀ ಬಿ. ಎಂ. ಪಾಟೀಲ್.—ಬೇಸಿಗೆ ಕಾಲದಲ್ಲಿ ತುಮಕೂರಿನಲ್ಲಿ ನೀರಿನ ಅಭಾವ ಇದೆ. ಅದು ಅಷ್ಟೇನೂ ತೀವ್ರವಾಗಿಲ್ಲ. ಬೋರ್ ವೆಲ್ ಹಾಕಿ ಎಲ್ಲಿ ಅಂಡರ್ ಗ್ರೌಂಡ ನೀರು ಇದೆ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಸರಕಾರಕ್ಕೆ ಈ ಬಗ್ಗೆ ಪ್ಲಾನ್ ಎಸ್ಟಿಮೇಟು ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಪಿ. ಗಂಗಾಧರ.—ಪ್ರತಿಯೊಬ್ಬರಿಗೆ ಎಷ್ಟು ಗ್ಯಾಲನ್ ನೀರು ತುಮಕೂರಿನಲ್ಲಿ ಸಪ್ಲೈ ಮಾಡುತ್ತೀರಿ? ಇದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ?

ಶ್ರೀ ಬಿ. ಎಂ. ಪಾಟೀಲ್.—ಎಲ್ಲಾ ಪೌರ ಸಭೆಯವರೂ ಪರ್ ಹೆಡ್ ಇಷ್ಟಿಷ್ಟು ಗ್ಯಾಲನ್ ನೀರು ಒದಗಿಸಬೇಕು ಎಂದು ಆ ರೀತಿ ಏನೂ ಇಲ್ಲ. ಸಾಧ್ಯವಾದಷ್ಟು ಹೆಚ್ಚಿಗೆ ನೀರು ಕೊಡಬೇಕು. ಇಂತಿಷ್ಟು ಎಂದು ನಿಗದಿ ಮಾಡುವುದಿಲ್ಲ. ಟೆಸ್ಟ್ ಬೋರ್ ವೆಲ್ಸ್ ತೆಗೆಯುವುದಕ್ಕೆ ಅಲ್ಲಿ ತೊಂದರೆ ಉಂಟಾಗಿದೆ. ಡಿ.ಸಿ.ಗೆ ಬರೆದು ತಿಳಿಸಿದ್ದೇವೆ. ಅಲ್ಲಿಯ ರೈತರಿಗೆ ಕನ್‌ವಿನ್ಸ್ ಮಾಡಿ ಟೆಸ್ಟ ವೆಲ್ಸ್ ತೆಗೆಯಲು ಅವಕಾಶ ಮಾಡಿ ಕೊಡ ಬೇಕು ಎಂದು ಬರೆದಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ.—ತುಮಕೂರಿನಲ್ಲಿ ಕುಡಿಯುವ ನೀರಿನ ಅಗತ್ಯ ಇದೆ. ನೀರು ಸಿಕ್ಕುತ್ತಾ ಇಲ್ಲ. ಟೆಸ್ಟ ವೆಲ್ಸ್ ತೆಗೆಸಲು ಏನಾದರೂ ಮಾಡಿ, ಪೋಲೀಸರ ಸಹಾಯ ಉಪಯೋಗ ಮಾಡಿಕೊಂಡಾದರೂ ಕೂಡ ಧೈರ್ಯವಾಗಿ ಬಾವಿ ತೆಗೆಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಕುಡಿಯುವ ನೀರು ಒದಗಿಸಲು ಪ್ರಾಶಸ್ತ್ಯ ಕೊಡಲಿಕ್ಕೇ ಬೇಕು, ಇದಕ್ಕೆ ಪ್ರಯಾರಿಟಿ ಕೊಡುತ್ತೇವೆ. ಟೆಸ್ಟ ವೆಲ್ಸ್ ತೆಗೆಯಲು ರೈತರು ಅಡ್ಡಿ ಪಡಿಸುತ್ತಿದ್ದಾರೆ. ಡಿ.ಸಿ.ಗೆ ಬರೆದಿದ್ದೇವೆ. ಅಲ್ಲಿಗೆ ಹೋಗಿ ರೈತರಿಗೆ ತಿಳಿಸಿ ಹೇಳಿ ಅವರಿಗೆ ಮನದಟ್ಟಾಗುವಂತೆ ಮಾಡಿ ಎಂದು. ಟೆಸ್ಟ ವೆಲ್ಸ್ ಹಾಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

BUDGET ESTIMATES FOR 1970-71—DEMANDS FOR GRANTS DEMAND Nos. 10,12 & 13

Sri VEERENDRA PATIL.—Sir, on the recommendation of the Governor, I beg to move:

"That a sum not exceeding Rs. 5,13,15,000 be granted to the Government to defray the charges which will come in course of payment during the financial year for the period ending 31st day of March 1971, in respect of General Administration".

Mr. Speaker:

"That a sum not exceeding Rs. 5,13,15,000 be granted to the Government to defray the charges which will come in

course of payment during the financial year for the period ending 31st day of March 1971, in respect of General Administration".

Along with this Demand, the Demands 12 & 13 are deemed to have been moved.

Mr. SPEAKER:—The other two demands are also before the House for discussion. Before proceeding with the discussion I would just like to bring to the notice of the Hon. Members that two days have been alloted for these Demands. Altogether about seven hours would be available. Out of that, 3½ hours are allotted to the ruling party and 3½ hours to opposition parties. The S V. D. is allotted 112 minutes the Congress-R is allotted 61 minutes, and the Independents are given 37 minutes time. I request the respective Whips of the parties to regulate the number of speakers within the time allotted to their parties. Now I call upon Hon. Member Sri Siddaveerappa to initiate the debate.

Sri H. SIDDAVEERAPPA — (Harihar) Sir, I rise to oppose the demands that have just now been moved by the Hon. Leader of the House. I will take about 20 minutes or even less in order to give time to my other friends. Last time I was given one hour to speak on this subject. Now since the time at my disposal is very limited it is very difficult to condense one's thoughts and put it in as short a speech as possible. However, I will try my best.

Firstly, I will deal with the matters concerning law and order. The Governor in his Address stated that in the year 1969 the law and order situation was generally satisfactory. He has stated.

> "The law and order situation during the year 1969 has also been generally satisfactory and excepting for the unfortunate aberration of a communal trouble at Hubli in March and the interlude of student agitation during September. Mysore has lived up to its reputation for peace and stability"

This is what he stated. But I would like to tell the Governor and also the Government on this occasion that the year 1970 may not be as reported in his Address. The forecasting is ominous. We have been seeing from all sides the shape of things to come in 1970 due to unfortunate political developments and other reasons. The party in power has raised its iron fist against its oppontents and they have been trying to pull down the opponents. I would like to make it very clear by giving one or two instances.

Sir, I wrote a letter to the Chief Minister some time back stating that when the dignitary of the Mysore State Congress organisation Dr. Nagappa Alva went to Ajjampur he accused the Prime Ministerof

(SRI H. SIDDAVEERAPPA)

India to his heart' s eontent and naturally some citizens present at the meeting took exception to it began to raise objections. The people who raised objctions were taken to the police Station and a complaint was lodged against them. For my letter I have just now rceeived the reply half an hour back which I will read out for the information of this Hon. House. The letter is from the Home Department of the Government of Mysore. It reads thusn.

> In continuation of this Departments' letter of even number dated 21st February 1970 on the subject mentioned above I am directed to state that the matter was enquired into. Some persons are alleged to have obstructed the meeting and misbehaved in a disorderly manner using abusive language in public place. The police had to intervene in the interest of maintaining law and order. The concerned persons have been charge-sheeted under the Mysore Police Act and the case is pending trial.

What I want to say is this. There seems to be double standards.

MR. SPEAKER.—A charge sheet has already been filed in the court. How can the member refer to the merits of the case?

SRI H. SIDDAVEERAPPA.—I am not referring to the merits of the case. Sir, When Hon. Member Sri D. Devaraj Urs and Hon. Member Sri Channaiah and others addressed meeting at Mandya, when people obstructed them and even the pandal was pulled down, no action was taken by the Police, though the Police officers were present on the spot. again, what has happened in Gulbarga? We have been seeing that hon. M.Ps were included in the second charge sheets as some Hon. members have stated. I know there are many more things to come. I would like to tell this Government that we cannot be deterred by these methods. That is why a few days ago I started in this House, that instructions have gone from the Government to the effect that those belonging to the Congress-R will have to be harassed. charge-sheeted and action taken against them. Hitler did the same thing But he never succeeded. Sir, I am saying this with a purpose . I know the Chief Minister has been saying that law and order or the police come within the State list, But I would like to tell him that a time will come when the Central Government, in the interest of maintenance of law and order in the State, has to intervene. The Central Intelligence is also working in Mysore State and almost all the Senior State officers about 87 or so, are in the state. Let the Hon. Chief Minister should not be under the delusion that he is the sole master of Mysore State. There are articles 256 and 257 in the Constitution. Let him examine the implications of those articles. In a given time, if the Central Govern-

ment is satisfied that because the Syndicate is rulling in the Mysore State and law and order is in danger, it can intervene. I know even some other States are also being ruled by Syndicate Congress, but there the relationship is quite cordial and they are getting on well, but I cannot understand why these people should try to single-out and think of only this party for this preferential treatment. I will give a number of cases.

Sir, a member of this House who was on the other side and who has come over to this side, had addressed a letter to convene a special A. I. C. C session. He was also the president of same Taluk Society and complaint for misappropriation had already been filed against him. After one year, as soon as he sent the letter to convene a special A. I C. C. meeting, they began to think of implicating him in that case. It seems one of the Ministers told him why can't you write. letter to Sri Nijalingappa stating that you have withdrawn your signature for calling for special A. I. C. C meeting, so that the case against you could be. withdrawn Because he refused to withdraw his signature, the prosecution is going on. That is one case. I can tell you what has happened to Sri Devaraj Urs. He wrote a letter about the Mandya affair, The Chief Minister has not the courtesy even to acknowledge that letter or give a reply as to what has happend. If this is the way things are managed, how can you carry on ? Then a Chikmagalur, a journalist was belaboured. At Gulbarga what hast happened is sad story, Lawyers, medical practitioners and the gentry of the place seem to have been belaboured and some of them have sustained injuries and fractures. That is how things are done at Gulbarga at the fag-end of the meeting, probably at the instance of the Government. Again in Mysore, what happened when Smt. Tarakeswari Sinha addressed a meeting there? Unnecessarily some boys, some children were taken into police custody and they were harassed. Over and above this, I have learnt on reliable authority, that the police have been going round the State to collect the names of villagers who had the courage to attend the Bombay Session of the AICC. I want to know why they want this information?

2-30 P.M.

I know many police people in Mysore State. Left to themselves, they can administer the State impartially, objectively and in a better manner. But unfortunately, what has happend ? At each stage, those who are sitting on the other side of the House, seem to think that the policemen are their own property, and they do not belong to the State. I have heard there are orders to the effect X Circle Inspector, should not be transferred from this place although he commits 101 mistakes. Generally speaking the top officers, the IGP the SP the IPS Officers are not bad. But those at the lower level, Circle Inspectors and

(SRI H. SIDDAVEERAPPA)

Sub-Inspectors and others in the lower cadre. have been contaminated, It is impossible to correct them unless and until corrective process is started by the IGP. Fortunately, we have got a Home Secretary in Mysore State who is one of our most impartial Officers. The IGP is a senior IP officer. He has been here for qu'te a number of years. I understand he isgoing on promotion to a higher cadre. I wish him well. But before that I want him to see that this Police Department is given a new face lift and the officials are made really policemen, I mean those who really go to the rescue of people. In England, each Constable is liable to dismissal, that is the minimum punishment in addition to the punishment he may be liable under the law. I want him to follow this example If they do not do it, what will happen? People will hav to organise themselves into a police force. They will have their own organisation to protect themselves. Under the Indian Penal Code, it is permitted. That sort of an organisation will have to come into being in order to protect lifeand property. Let them not compel us to do it.

Let me say one word in conclusion before I pass on to General utdministration. I do not want the Chief Minister to keep with him this Aort-folio. I am sure that all the trouble has arisen beeause of concenpration of important port-folios, namely Major Irrigation, Police General Administration inhim, It is time that he is bereft of this police port-folio. it may be given to a Minister who has not much work. There are quite a number of young men who could shoulder this responsibility and see that Police administration is carried on satisfactorily.

One word about traffic control. I am very happy to say in Bangalore though traffic is increasing and has increased ten times, proper control is there. I want that most of the vehicles should be specially checked. Vehicle Transfers must be specially and periodically checked.

Now I come to the General Administration. General Administration is something like a colussus. What is it that we are getting here? Please see at page 57, "Secretariat, Ministers and staff." Sir, in this State for about 2½ lakhs of people, I have been repeatedly saying we have been spending Rs. 75 crores. Nearly one-third of our revenue, we have been paying them. But still, what is it that we are getting in return? You give them tons of money, you cannot pump loyalty in to them you cannot pump efficiency into them. You cannot expect any good work from them. I am not one of those who has thought that effice incycan be measured in terms of money. I know there are very good officers. But they are a very small number, here and th re. Almost all have become indolent in this Administration. I remember on a certain day, an Hon'ble Lady member

sitting on the other side of the House, came to the Secretariat as she wanted to get some information, and she phoned to 13 Ministers All of them were not found in the Secretariat. Where had they gone? They go about from place to place and they run about. They squander money. They squander! That is the only word which I can use. Where is economy? We have been proclaiming that extravagant spending must be stopped at once, and that money diverted for purpose of getting major irrigation projects completed. What is the reason? We have spent so much money. We have been crying hoarse for more than 215 days from 1967, after spending 25,000 rupees for each day's expenses of the Assembly. We have been telling it. May I ask them how many of our suggestions have been carried out? Have the Government taken this House seriously at all? I once put it to my friend Sri Koujalgi, you have so many Tahsildars. There are many Tasildars who take even Rs 2 as brief. He said what can I do? 90 per cent of the people are like that. I want to tell him, if I were the Minister, I would have committed suicide l if such dishonesty had prevailed. I would have straightway dismissed some. I have with me a copy of the report of the Vigi ance Commission. The Chairman is a good friend of mine. He is a respected man and I know him very well. He is a cultured man also. But, he is soft. He is not able to strike terror in the minds of the delinquent officers. I will cite one or two instance : it is said that in the case of a Tahsildar who had become Assistant Commissioner, one increment was ordered to be withheld in the present scale with cumulative effect. One other man faltered in check measurements involving an amout of Rs. 367 It was ordered to be recovered from an Assistant Commissioner.

There is another instance of a Joint Director of Public instruction. I do not know who he is Probably he is. drawing more than Rs1000 as pay

On a charge of mal-practice a sum of Rs. 187 was ordered to be recovered from one Joint Director being the rent for the portion of the office building occupied for residential purposes.

"On a charge of acquisition of land in the name of his wife the next increment of one Tahsildar was ordered to be withheld."

The Vigilance Commission have not been able to discharge their duties properly. I want them to be very powerful and I want the Government, if necessary, to amend the rules The suggestions of the vigilance commission should be more effective. I want to see that this year at least not less than 100 to 200 dismissals are made. Then alone there will be some toning-up in the administration. If you do not do it, the administration is not going to improve. I am a little harsh because my heart burns to see that only 2% of the population of the State has been enjoying such a high percentage of the State's revenue.

ಶ್ರೀ ಎಂ. ನಾಗಪ್ಪ: – ಈಗ ಮಾಡಿರುವ ವಿಜಿಲೆನ್ಸ್ ಕಮಿಷನ್ ಬರೀ ಒಂದು ರೆಕಮೆಂಡೇಟರಿ ಬಾಡಿಯಾಗಿ ಕೆಲಸ ಮಾಡುತ್ತಿದ್ದೆ. ಇವರು ಮಾಡಿದ ಶಿಫಾರಸುಗಳ ಮೇಲೆ ಶಿಕ್ಷೆ ಕೊಡುವ ಅಧಿಕಾರ ಸರಕಾರಕ್ಕೆ ಇದೆಯೇ ವಿನಾ ವಿಜಿಲೆನ್ಸ್ ಕಮಿಷನ್ನಿಗೆ ಇಲ್ಲ. ವಿಜಿಲೆನ್ಸ್ ಕಮಿಷನ್‌ನವರೇ ಶಿಕ್ಷೆಯನ್ನು ಕೊಡಬೇಕಾದರೆ ಈಗಿರುವ ನಿಯಮವನ್ನು ಬದಲಾವಣೆ ಮಾಡವೇಕು, ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೇ ಹೇಗೆ ಎನ್ನುವುದನ್ನು ತಿಳಿಸಿದರೆ ಇಲ್ಲಿ ಸರಿಯಾಗಿರುತ್ತದೆ.

SRI H. SIDDAVEERAPPA:—I have said that if necessary the rules will have to be amended.

A periodical review of the work will have to be made. I am told that very many new changes are being sought to be made. This was thought of 3 or 4 months, back and I do not know why there has been so much delay. Probably it needs certain Constitutional amendment because certain judicial decisions will have to be overcome.

Come what may, you have to punish the wrong-doers and see that the level of administration is raised and administration is toned up.

Then I want to say something above police charge-sheets. I know there are cases where charge-sheets are unduly delayed for over 2 years. If you delay charge-sheets for such a long time, it means, as we lawyers know, justice delayed is justice denied, because all clues will be lost and it will be rather difficult for us to see that justice is meted out. Yesterday I heard the radio talk by our esteemed friend Sri Nittur Srinivasa Rao. He was also advocating various methods by which corruption and other things will have to be put down because he was the Vigilance Commissioner in Delhi.

Then as regards entertainment and hospitality charges. I think it is high time our Ministers give up these extravagant ways of living.

About minorities, I feel that in this State, minorities are entitled to protection just like Scheduled Castes and Scheduled Tribes. The police must certainly come to their protection. I know of a case in my Constituency, where the house of a poor Brahmin was threatened to qg burnt by certain influential Congressmen belonging to the rulein Congress. They harassed him so much that he told me: "I am leaving this place." I told him, "It does not matter even if you die, but don't leave this place." This is cnly one instance. There may be several instances like this and so it is the duty of the police to give protection t· minorities.

Then with regard to officers, whenever I phone any officers or Secretaries or Heads of Departments, usually the reply that I get is, "He has gone to attend a meeting." So I want a blanket ban to be placed on all these meetings. There are many such meetings every day. Where is the time for these gentlemen to attend to their normal duty? If they want, let them have a "Meetings Week" and let them notify the public that in that particular week they will be attending meetings and they will not be able to meet the public.

About the Forest Department administration, I understand that just like the Indian Administrative Service, they want to constitute the Indian Forest Service. We have got the Indian Administrative Service and the Indian Police Service. Now they want to create All-India Service for Medical, Engineering, Forests and Education. More than 9 months are over after the creation of the I.F.S. was quashed by the High Court. Grave injustice is done to some of our junior officers. There are nearly 20 to 30 of them. What has happened is that 3 seniormost officers have been given extension twice and their term is going to close by 31st March 1970, on the plea that their names were in the list of I.F.S. they want to give them 3 years' extension and another 5 more are coming up for extension of service. Four of them who are only Matriculates, have been made D.F.O.s. I have quoted this only by way of illustration. Perhaps there may be several cases in the other Departments too. I want the General Administration Department to adopt a uniform policy and not to give extension of service which is detrimental to several junior officers who have been waiting for promotion.

Since my time is over, without going into further details, I close my speech and oppose these demands.

†ಶ್ರೀ ಎಂ.ಎನ್. ರಾಮಣ್ಣ (ತುರುವೇಕೆರೆ);—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇಟ್ಟಿರತಕ್ಕ ಡಿಮ್ಯಾಂಡು ೧೦, ೧೨ ಮತ್ತು ೧೩ ಇವುಗಳನ್ನು ಅನುಮೋದಿಸುತ್ತಾ ನಾಲ್ಕಾರು ಸೂಚನೆಗಳನ್ನು ಸರಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಲ್. ಗಂಗಾಧರ್;—ಸಂಬಂಧಪಟ್ಟ ಮಂತ್ರಿಗಳೇ ಇಲ್ಲಿಲ್ಲ.

ಶ್ರೀ ಎಂ. ಎನ್. ರಾಮಣ್ಣ :—ಈಗಾಗಲೇ ಮಾನ್ಯ ಸಿದ್ಧವೀರಪ್ಪನವರು ಈ ಡಿಮ್ಯಾಂಡಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳಿದಾ ರೆ. ನಾನು ಕೂಡ ಕೆಲವು ವಿಷಯಗಳನ್ನು ಹೇಳುವುದು ಸೂಕ್ತ ಎಂದು ಕಾಣುತ್ತಿದೆ. ನಿಜವಾಗಿಯೂ ಕೂಡ ಇವತ್ತು ಆಡಳಿತ ಯಂತ್ರ ಸಮರ್ಪಕವಾಗಿ ದಕ್ಷತೆಯಿಂದಕೆಲಸ ಮಾಡುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಒಂದು ತಾಲ್ಲೂಕ್ ಕಛೇರಿಯನ್ನೇ ಉದಾಹರಣೆ ತೆಗೆದುಕೊಂಡರೆ, ರೈತರು ಒಂದು ಅರ್ಜಿ ಹಾಕಿಕೊಂಡರೆ ಆ ಬಗ್ಗೆ ಒಂದು ಕಾಗದವನ್ನು ಸಹ ತಾಲೂಕ್ ಕಛೇರಿಯವರು ಬರೆಯುವ ಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಕಾರಣ 'ಏನು ಎಂಬುದು ನನಗೆ ತಿಳಿಯುತ್ತಿಲ್ಲ. ಯಾರಾದರೂ ಕಾಗದ ಬರೆದರೆ ಅದಕ್ಕೆ ಉತ್ತರ ಕೊಡಬೇಕೆಂದು ಸರ್ಕಾರದಿಂದ ಆದೇಶ ಹೋಗಿದ್ದರೂ ಕೂಡ ತಾಲ್ಲೂಕ್ ಕಛೇರಿಯವರು ಉತ್ತರ ಕೊಡುತ್ತಿಲ್ಲ. ತಾಲ್ಲೂಕ್ ಕಛೇರಿಗಳಲ್ಲಿ ಎಷ್ಟರಮಟ್ಟಿಗೆ ಕೆಲಸವಾಗುತ್ತಿದೆ ಎಂಬುದು ಅಲ್ಲಿ ನೋಡಿ ಅನುಭವಿಸಿದವರಿಗೇ ಗೊತ್ತು.

ಶ್ರೀ ಎಂ. ನಾಗಪ್ಪ;—ಈಗ ಮಂತ್ರಿಗಳೇ ಕಾಗದ ಬರೆದರೆ ಉತ್ತರ ಕೊಡುತ್ತಿಲ್ಲ.

ಶ್ರೀ ಎಂ. ಎನ್. ರಾಮಣ್ಣ —ಇದಕ್ಕೆ ಕಾರಣ 'ಏನು ಎಂಬುಂದನ್ನು ಯೋಚನೆ ಮಾಡಬೇಕಾಗಿದೆ ನನ್ನ ಮಟ್ಟಿಗೆ ಹೇಳುವುದಾದರೆ ಇದಕ್ಕೆ ರಾಜಕೀಯ ಮಾಡತಕ್ಕಂಥ ಜನರೇ ಕಾರಣ ಎಂದು ಯೋಚನೆ ಮಾಡಿದ್ದೇನೆ. ಮಾನ್ಯ ಸಿದ್ಧವೀರಪ್ಪನವರು ಹೇಳಿದಂತೆ ಅಧಿಕಾರ ಕೊಟ್ಟಮೇಲೂ ಕೂಡ ಅವರು ಅಧಿಕಾರವನ್ನು ಚಲಾಯಿಸದಿದ್ದ ಮೇಲೆ ಮತ್ತು ಅಧಿಕಾರಿಗಳು ಯಶಸ್ವಿಯಾಗಿ ಕೆಲಸವನ್ನು ನಿರ್ವಹಿಸಲು ಹಿಂಜರಿದರೆ ಅವರು ಕೂಡ ರಾಜಕೀಯ ಒತ್ತಡದಿಂದಲ್ಲೋ 'ಏನೋ ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಬಹುದು. ಇಂತಹ ಅಧಿಕಾರಿಗಳಿಗೆ ಉಗ್ರವಾದಂಥ ಶಿಕ್ಷೆವಿಧಿಸಲು ಈಗಿರತಕ್ಕಂಥ ಕಾನೂನಿನಲ್ಲಿ .ಏನಾದರೂ ಎಡರುತೊಡರುಗಳು ಇದ್ದರೆ ಆ ಕಾನೂನನ್ನು ಬದಲಾವಣೆ ಮಾಡುವುದು

(ಶ್ರೀ ಎಂ. ಎನ್. ರಾಮಣ್ಣ)

ಒಳ್ಳೆಯದೆಂದು ಹೇಳುತ್ತೇನೆ. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಯಲ್ಲದೆ ದಕ್ಷವಾದಂಥ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಕೆಲವು ಕಡೆ ಪೋಲೀಸರಿಗೆ ವಸತಿ ಸೌಕರ್ಯವನ್ನು ಒದಗಿಸಿದ್ದೀರಿ. ಇದು ಬಹಳ ಕಡಿಮೆ. ಎಲ್ಲೆಲ್ಲಿ ಇವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಇಂತಿಷ್ಟೇ ವರ್ಷಗಳಲ್ಲಿ ಮೈಸೂರು ಸಂಸ್ಥಾನದಲ್ಲಿರುವ ಎಲ್ಲ ಕೆಳಮಟ್ಟದ ಪೋಲೀಸಿನವರಿಗೂ ಮನೆಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು ಇಲ್ಲದೆ ಇದ್ದರೆ ಈಗ ಕೊಡುತ್ತಿರುವ ಮನೆ ಬಾಡಿಗೆ ಭತ್ಯವನ್ನು ಹೆಚ್ಚು ಮಾಡಬೇಕು. ನಾನು ಮೊನ್ನೆ ಎಸ್ಟಿಮೆಟ್ ಕಮಿಟಿಯ ಜೊತೆಯಲ್ಲಿ ಬಂದೀಖಾನೆಗೆ ಹೋಗಿ ನೋಡಿದಾಗ ನನಗೆ ಬಹಳ ಸಂತೋಷವಾಯಿತು. ೧೯೪೨ನೇ ಇಸವಿಯಲ್ಲಿ ನಾನೂ ಕೂಡ ಜೈಲಿನಲ್ಲಿ ಇದ್ದೆ. ಆ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ಸುಧಾರಣೆಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್ :—ನೀವು ಸೆಂಟ್ರಲ್ ಜೈಲನ್ನು ನೋಡಿಲ್ಲವೆಂದು ಕಾಣುತ್ತದೆ;

ಶ್ರೀ ಎಂ. ಎನ್. ರಾಮಣ್ಣ.—ನಾನು ಹೋಗುವ ಕಾಲ ಒಂದು ಇತ್ತು. ಈಗ ನೀವು ಹೋಗುವ ಕಾಲ ಬಂದಿದೆ. ಗಾಡಿಯ ಚಕ್ರ ತಿರಗುತ್ತಿರುವಂತೆ ಒಬ್ಬೊಬ್ಬರಿಗೆ ಒಂದೊಂದು ಕಾಲ ಬರುತ್ತದೆ. ಅದರಂತೆ ನೀವು ಹೋಗುವ ಕಾಲ ಬರುತ್ತದೆ. ಇವತ್ತು ಬಂದೀಖಾನೆಗಳಲ್ಲಿ ೧೦೦ಕ್ಕೆ ೧೦೦ರಷ್ಟು ಸೌಲಭ್ಯಗಳನ್ನು ಒದಗಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅಲ್ಲಿರುವ ಖೈದಿಗಳಿಗೆ ಕೈಗಾರಿಕೆಗಳಲ್ಲಿ ಉತ್ತಮ ರೀತಿಯ ತರಪೇತಿ ಕೊಡುತ್ತಿದ್ದಾರೆ. ನಾವು ಅವರನ್ನು ನೋಡುವುದಕ್ಕೆ ಹೋದಾಗ ಅವರು ನಮ್ಮನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ಅವರ ಕೆಲಸಗಳನ್ನು ಅವರು ಮಾಡುತ್ತಿದ್ದರು. ಅವರಲ್ಲಿ ಒಳ್ಳೆಯ ಡಿಸಿಪ್ಲಿನ್ ತರುವುದಕ್ಕೆ ಅಲ್ಲಿಯ ಅಧಿಕಾರಿಗಳು ಪ್ರಯತ್ನ ಪಟ್ಟಿದ್ದಾರೆ. ಅಲ್ಲಿರುವ ಕೈದಿಗಳಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಒದಗಿಸಲಾಗಿದೆಯೇ ವಿನ ; ಅಲ್ಲಿರುವ ಅಧಿಕಾರಿಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು ಇವತ್ತು ಹೊರಗಡೆ ಇರುವ ಪೋಲೀಸ್ ಅಧಿಕಾರಿಗಿಂತ ಜೈಲಿನಲ್ಲಿರುವ ಪೋಲೀಸ್ ಅಧಿಕಾರಿಗೆ ಹೆಚ್ಚಿನ ಜವಾಬ್ದಾರಿ ಇದೆ. ಒಬ್ಬ ಪೋಲೀಸ್ ಅಧಿಕಾರಿ ಕಳ್ಳರನ್ನು ಹಿಡಿದು ಕೋರ್ಟಿನಲ್ಲಿ ಕಟ್ಟಲೆ ಹಾಕಿಬಿಟ್ಟರೆ ಅವರ ಕೆಲಸ ಮುಗಿಯಿತು. ಆದರೆ ಜೈಲಿನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ನೂರಾರು ಜನ ಖೈದಿಗಳನ್ನು ತಿದ್ದಿ ಸತ್‌ಪ್ರಜೆಗಳನ್ನಾಗಿ ಮಾಡುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಈ ಒಂದು ದೊಡ್ಡ ಜವಾಬ್ದಾರಿಯನ್ನು ಅವರು ನಿರ್ವಹಿಸಬೇಕಾದರೆ ಅದಕ್ಕೆ ತಕ್ಕ ಪತಿಫಲವನ್ನು ಸರ್ಕಾರದವರು ಅವರಿಗೆ ಕೊಡಬೇಕು. ಈಗ ಬೆಂಗಳೂರ ಸೆಂಟ್ರಲ್ ಜೈಲ್‌ನಲ್ಲಿರುವ ಸೂಪರಿಂಟೆಂಡೆಂಟ್ ಅವರಿಗೆ ಮನೆ ಒದಗಿಸಲಾಗಿದೆಯೇ ಹೊರತು ಅವರ ಕೈಕೆಳಗೆ ಕೆಲಸ ಮಾಡುತ್ತಿರುವ ನೌಕರರಿಗೆ ಮನೆ ಒದಗಿಸಿಲ್ಲ. ಇವರಿಗೆ ವಸತಿ ಸೌಕರ್ಯ ಒದಗಿಸಿಕೊಡುವುದು ಬಹಳ ಮುಖ್ಯ ಎಂಬುದು ಎಲ್ಲರಿಗೂ ತಿಳಿದಿದೆ. ಜಾಸ್ತಿ ಹೊತ್ತು ಕೆಲಸ ಮಾಡುವ ಈ ನೌಕರರಿಗೆ ಉತ್ತಮ ವಸತಿಸೌಕರ್ಯ ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಿ ಆದಷ್ಟು ಜಾಗ್ರತೆ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಸಂಬಳಸಾರಿಗೆಯಲ್ಲಿಯೂ ಕೂಡ ಈ ನೌಕರರಿಗೆ ಅನ್ಯಾಯವಾಗಿದೆ ಐ. ಜಿ. ಪಿ. ಅವರನ್ನು ಬಿಟ್ಟರೆ ಬೇರೆಯವರಿಗೆ ಸಮರ್ಪಕವಾದಂಥ ವೇತನವನ್ನು ಕೊಟ್ಟಿಲ್ಲ. ಇವತ್ತು ಜೈಲಿನಲ್ಲಿರುವ ಸೂಪರಿಂಟೆಂಡೆಂಟ್ ಅವರಿಗೂ, ಪೋಲೀಸ್ ಇನ್ಸ್‌ಪೆಕ್ಟರ್ ಅವರಿಗೂ ಮತ್ತು ಜೈಲಿನಲ್ಲಿರುವ ಡಿಸ್ಟ್ರಿಕ್ಟ್ ಸರ್ಜನ್ ಅವರಿಗೂ ಇಟ್ಟಿರುವ ವೇತನ ಒಂದೇ ರೀತಿ ಇದೆಯೆಂದ ನನಗನ್ನಿಸುತ್ತದೆ, ಬೆಳಿಗ್ಗೆಯಿಂದ ಸಂಜೆಯವರಿಗೆ ಖೈದಿಗಳ ಜೊತೆಯಲ್ಲಿಯೇ ಇದ್ದು ಕೆಲಸ ಮಾಡುತ್ತಿರುವ ಜೈಲ್ ಸೂಪರಿಂಟೆಂಡೆಂಟ್ ಅವರಿಗೆ ಹೆಚ್ಚಿನ ಸಂಬಳ ಕೊಡಬೇಕು. ಒಂದು ರೀತಿಯಲ್ಲಿ ಇವರು ಸರ್ಕಾರಿ ಕೆಲಸಕ್ಕೆ ಸೇರಿದ ಮೇಲೆ ರಿಟೈರ್ ಆಗುವವರೆಗೂ ಖೈದಿಗಳೇ ಆಗಿರುತ್ತಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಇವರ ಸ್ಕೇಲನ್ನು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರ ಸ್ಕೇಲಿನ ದರಕ್ಕೆ ಹೆಚ್ಚಿಸಬೇಕು. ಆ ರೀತಿ ಹೆಚ್ಚಿಸಿದರೆ ಅವರು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಈಗಾಗಲೇ ಅನೇಕ ದೇಶಗಳಲ್ಲಿ ಇದನ್ನು ಮಾಡಿದ್ದಾರೆ. ಕೇರಳದಲ್ಲಿ ಇದನ್ನು ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ, ಗುಜರಾತಿನಲ್ಲಿ ಮತ್ತು ಯು.ಪಿ. ನಲ್ಲಿ ಇದನ್ನು ಮಾಡಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಪ್ರಿಜನ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಈ ನೌಕರವರ್ಗದವರ ಒಂದು ವೇತನ ಏನಿದೆ ಇದು ಬಹಳ ಕಡಿಮೆ ಇದೆ ಆದ್ದರಿಂದ ಇವರಿಗೆ ಒಂದು ಸೂಕ್ತವಾದ ಸ್ಕೇಲನ್ನು ಮಾಡಿಕೊಡುವುದು ಬಹಳ ಉತ್ತಮ

3-00 P.M.

ಮೂರನೆಯದಾಗಿ ಖೈದಿಗಳು ಜೈಲಿನಲ್ಲಿ ಇದ್ದು ಕೆಲಸ ಮಾಡಿ ಹೊರಗಡೆ ಏನು ಬರುತ್ತಾರೆ ಅವರು ಸಮಾಜಕ್ಕೆ ಉತ್ತಮ ಪ್ರಜೆ ಆಗಬೇಕು. ಅವರು ಜೈಲಿನಲ್ಲಿ ಇದ್ದು ಕೆಲಸ ಮಾಡಿ ಅವರನ್ನು ಹೊರಗಡೆ ಕಳುಹಿಸಿದ ಮೇಲೆ ಅವರನ್ನು ನೋಡಿಕೊಳ್ಳತಕ್ಕಂಥ ಜವಾಬ್ದಾರಿ ಪ್ರಿಜನ್ಸ್ ಡಿಪಾರ್ಟ್‌ಮೆಂಟಿನವರಿಗೆ ಇಲ್ಲ. ಅವರನ್ನು ಸತ್‌ಪ್ರಜೆಗಳಾಗಿ ಪರಿವರ್ತನೆ ಮಾಡತಕ್ಕ ಜವಾಬ್ದಾರಿ ಪ್ರಿಜನ್ಸ್ ಡಿಪಾರ್ಟ್‌ಮೆಂಟಿನವರಿಗೆ ಇಲ್ಲ. ಅದು ಕೆಲವು ಸಮಯದಲ್ಲಿ ಮಾತ್ರ ಅವರ ಜವಾಬ್ದಾರಿಯನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಿಗೆ ಕೊಟ್ಟಿದ್ದಾರೆ. ಅದು ಸರಿಯಲ್ಲ ಅನಿಸುತ್ತದೆ. ೨ ವರ್ಷ, ೩ ವರ್ಷ, ೪ ವರ್ಷ, ೧೦ ವರ್ಷ ಹೀಗೆ ಜೈಲಿನಲ್ಲಿದ್ದು ಅವರಿಗೆ, ಅಧಿಕಾರಿಗಳಿಗೆ ನಿಕಟಸಂಪರ್ಕ ಇದ್ದು ಅಧಿಕಾರಿಗಳಿಗೆ ಆ ಖೈದಿಗಳ ಮನಸ್ಸನ್ನು ಹೇಗೆ ಪರಿವರ್ತನೆ ಮಾಡಬಹುದು ಎನ್ನುವ ಅಭಿಪ್ರಾಯ ಅವರಿಗೆ ಇರುತ್ತದೆ. ಆದ್ದರಿಂದ ಅವನು ಜೈಲಿನಲ್ಲಿದ್ದಾಗ ಕೆಲಸ ಮಾಡುವ ಬಗ್ಗೆ ಏನೇನು ಸೌಲಭ್ಯವನ್ನು ಕೊಟ್ಟಿದ್ದರೋ ಅದನ್ನೆಲ್ಲಾ ಅವರಿಗೆ ಹೊರಗಡೆ ಬಂದಮೇಲೂ ಕೊಟ್ಟು ಆ ಜೈಲಿನ ಅಧಿಕಾರಿಗಳೇ ಇವರನ್ನು ಸೂಪರ್‌ವೈಜ್ ಮಾಡತಕ್ಕಂಥ ಅವಕಾಶವನ್ನು ಕೊಟ್ಟರೆ ಅವನು ತನ್ನ ಜೀವನವನ್ನು ಸರಿಯಾದ ರೀತಿಯಲ್ಲಿ ಸಾಗಿಸುವುದಕ್ಕೆ ಅವಕಾಶವಾಗುತ್ತದೆ. ಈಗ ಈ ಕೆಲಸವನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಿಗೆ ಏನು ವಹಿಸಿದ್ದೀರಿ ಅದನ್ನು ತೆಗೆದು ಪ್ರಿಜನ್ಸ್ ಡಿಪಾರ್ಟ್‌ಮೆಂಟಿಗೆ ವಹಿಸಿದರೆ ಅವರಿಂದ ಒಳ್ಳೆಯ ಉತ್ತಮವಾದ ಕೆಲಸಗಳಾಗುತ್ತವೆ. ಇದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಇಲ್ಲಿ ಮಾಡತಕ್ಕಂಥ ಅನೇಕ ಕೈಗಾರಿಕೆಗಳು ಎಂದರೆ ಟೈಲರಿಂಗ್, ವೀವಿಂಗ್, ಕಾರ್ಪೆಂಟ್ರಿ, ಮ್ಯಾಟಿಂಗ್ ಇತ್ಯಾದಿ ಕೈಗಾರಿಕೆಗಳನ್ನು ಈ ಖೈದಿಗಳು ಮಾಡುತ್ತಾರೆ. ಮತ್ತು ಹೋಮ್ ಗಾರ್ಡುಗಳಿಗೆ ಬಟ್ಟೆ ಹೊಲಿಯುವ ಜವಾಬ್ದಾರಿಯನ್ನೂ ಇವರಿಗೇ ಕೊಟ್ಟಿದ್ದಾರೆ. ಈ ಪ್ರಿಜನ್ಸ್‌ನಲ್ಲಿ ಖೈದಿಗಳು ಹೋಮ್ ಗಾರ್ಡುಗಳ ಬಟ್ಟೆಯನ್ನು ಏನು ಹೊಲಿಯುತ್ತಾರೆ ಅದಕ್ಕೆ ಅವರಿಗೆ ಒಂದು ಬಟ್ಟೆಗೆ ೯೦ ಪೈಸೆಯನ್ನು ಕೊಡುತ್ತಾರೆ. ಇದು ಸರಿಯಲ್ಲ. ಆ ಬಟ್ಟೆಗಳನ್ನು ಹೊಲಿಯಲು ಬೇರೆ ಟೈಲರಿಗೆ ಏನು ಒಂದು ಬಟ್ಟೆಗೆ ಚಾರ್ಜ್ ಕೊಡುತ್ತಾರೆಯೋ ಅದೇ ಚಾರ್ಜನ್ನು ಖೈದಿಗಳಿಗೆ ಕೊಡಬೇಕು. ಈಗ ಹೋಮ್ ಗಾರ್ಡುಗಳಿಗೆ, ಪೋಲೀಸ್ ಸಿಬ್ಬಂದಿಯವರಿಗೆ ಬೇಕಾದಂತಹ ಬಟ್ಟೆಯನ್ನು ಹೊಲಿಯುವುದಕ್ಕೆ ಟೆಂಡರ್ ಕರೆದು ಏನು ರೇಟನ್ನು ಕೊಡುತ್ತಾರೆಯೋ ಅದೇ ರೇಟನ್ನು ಅವರಿಗೆ ಕೊಡಬೇಕು. ಈ ಜೈಲಿನಲ್ಲಿ ನಡೆಯತಕ್ಕ ಕೈಗಾರಿಕೆಗಳಿಗೆ ಸರ್ಕಾರದವರು ಹೆಚ್ಚಿನ ಹಣವನ್ನು ಖರ್ಚು ಮಾಡಿದರೆ ಅದರಿಂದ ಹೆಚ್ಚಿನ ಆದಾಯ ಬರುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಬೇಕಾದಂತಹ ಸಿಬ್ಬಂದಿ ವರ್ಗ ಮತ್ತು ಮೆಷನರಿಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಪ್ರಿಜನ್ಸ್ ಇಲಾಖೆಯ ನೌಕರರಿಗೆ ಆದಷ್ಟು ಜಾಗ್ರತೆ ವಸತಿಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ತೀವ್ರವಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಆದಷ್ಟು ಜಾಗ್ರತೆ ಅವರಿಗೆ ಮನೆಗಳನ್ನು ಒದಗಿಸಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನ ಹಳ್ಳಿ):— ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕ ಮೂರು ಬೇಡಿಕೆಗಳನ್ನೂ ವಿರೋಧಿಸುತ್ತಾ ಈ ಬೇಡಿಕೆಗಳ ವಿಚಾರದಲ್ಲಿ ಅನೇಕ ಲೋಪ ದೋಷಗಳನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. "What is the yardstick to measure the efficiecy of the administration?" ದೇಶದ ಆಡಳಿತದ ಒಂದು ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಲೆಕ್ಕ ಹಾಕಿದರೆ, ಅದು ಎಷ್ಟರಮಟ್ಟಿಗೆ ನಡೆಯುತ್ತದೆ ಎಂದರೆ ಅದು ಒಂದು ಮೂಲಕ್ಕೆ ಹೋಗುತ್ತದೆ ಎಂದು ಭಾವನೆ ಮಾಡಬೇಕಾಗಿದೆ. ಇದರಲ್ಲಿ ಇವೊತ್ತಿನ ದಿವಸ ನಾವು ಒಂದು ಯೋಚನೆ ಮಾಡೋಣ. ನಮ್ಮ ದೇಶಕ್ಕೆ ಯಾರಾದರೂ ಪರದೇಶದವರು ಇಲ್ಲಿ ಬಂದು ನೋಡಿದರೆ ಈ ದೇಶದಲ್ಲಿ ಉತ್ತೇಜನವಿಲ್ಲ. ಇಲ್ಲಿ ಇರತಕ್ಕ ಸರ್ಕಾರದಲ್ಲಿ, ಇವರು ಕಟ್ಟತಕ್ಕ ಸಮಾಜದಲ್ಲಿ ಸಂಸ್ಕೃತಿಯಿಲ್ಲ ಎನ್ನುವ ವಿಚಾರವನ್ನು ಈ ಸರ್ಕಾರದ ಆಡಳಿತದಲ್ಲಿ ಅವರು ನೋಡಬೇಕಾಗುತ್ತದೆ. ಆ ರೀತಿ ಇವರು ಇಲ್ಲಿ ಆಡಳಿತವನ್ನು ನಡೆಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಯಾವ ರೀತಿಯಲ್ಲಿ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದಾರೆ ಎಂದು ಸರ್ಕಾರದ ವಿಶಿಷ್ಟ ಆಡಳಿತವನ್ನು ತೆಗೆದುಕೊಂಡು ನೋಡಿದರೆ ಸರ್ಕಾರ ಏನೋ ಸುಮ್ಮನೆ ಒಂದು ಕೆಲಸ ಮಾಡುವ ಒಂದು ಮೆಷನರಿ ಎನ್ನುವ ಭಾವನೆ ಬರುತ್ತದೆ. ಸರ್ಕಾರದ ಆಡಳಿತ ರಿಪೋರ್ಟ್ ಕೊಡಬೇಕಾದರೆ ಆಡಿಟರ್‌ಗಳಿಗೆ ಅಧಿಕಾರವನ್ನು ಕೊಟಿದ್ದಾರೆ. ಸರ್ಕಾರ ಎಷ್ಟರಮಟ್ಟಿಗೆ ನಡೆಯುತ್ತಿದೆ, ಎಂದರೆ, ಆಡಳಿತದ ಒಂದು ವೈಶಿಷ್ಟ್ಯವನ್ನು ನೋಡಿದರೆ ೧೯೬೭ನೇ ಇಸವಿಯಲ್ಲಿ ಈ ಸರ್ಕಾರದಲ್ಲಿ ೨೭,೩೮೦ ಅಬ್ಜೆಕ್ಷನ್‌ಗಳು ಇವೆ. ಇದು ಸುಮಾರು ೩೪-೩೬ ಕೋಟಿ ರೂಪಾಯಿಗಳಿಗೆ ಸಂಬಂಧಿಸಿದ್ದು. ೧೯೬೮ನೇ ಇಸವಿಯಲ್ಲಿ ೩೦,೩೦೨ ಅಬ್ಜೆಕ್ಷನ್‌ಗಳು ಬಂದಿವೆ. ಇದು

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

೬೭.೧೬ ಕೋಟಿ ರೂಪಾಯಿಗಳಿಗೆ ಸಂಬಂಧಿಸಿದುದು. ೧೯೬೯ನೇ ಇಸವಿಯಲ್ಲಿ ೨೪,೩೦೯ ಅಬ್ಜಕ್ಷನ್‌ಗಳು ಬಂದಿವೆ. ಇದು ೮೧.೭೪ ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಿದೆ. ಇನ್ನು ನೋಡಿದ ಪಕ್ಷದಲ್ಲಿ ಈ ಸರ್ಕಾರ ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳುತ್ತದೆಯೇ? ಹಿಂದೆ ಮಾಡಿದ ತಪ್ಪನ್ನು ಮುಂದೆ ತಿದ್ದಿಕೊಂಡು ಸರಿಯಾಗಿ ನಡೆಯುತ್ತಾರೆ ಎಂದರೆ ಪರವಾಯಿಲ್ಲ. ಆ ಭಾವನೆಯೇ ಇವರಲ್ಲಿ ಇಲ್ಲ. ಏನೋ ಸುಮ್ಮನೆ ಒಬ್ಬ ಮಂತ್ರಿಗಳಾದರೆ ಸಾಕು ಎನ್ನುವ ಭಾವನೆ ಇದೆ ಈ ದೇಶದ ಆಡಳಿತದ ಒಂದು ವೈಶಿಷ್ಟ್ಯವನ್ನು ಅಳೆಯಬೇಕಾದರೆ ಮಂತ್ರಿಗಳ ಭಾಷಣದಿಂದ ಅಲ್ಲ. ಅಥವಾ ಪತ್ರಿಕೆಗಳಲ್ಲಿ ಮಂತ್ರಿಗಳನ್ನು ಹೊಗಳುತ್ತಾರಲ್ಲ ಅದರಿಂದ ಅಲ್ಲ. ನಿಜವಾದ ಅಂಶ ಯಾವುದು ಎಂಬುದನ್ನು ತಿಳಿದುಕೊಳ್ಳಬೇಕಾದರೆ ಅವರಿಗೆ ಎಷ್ಟರಮಟ್ಟಿಗೆ ದಕ್ಷತೆ ಮತ್ತು ಪ್ರಾಮಾಣಿಕತೆ ಇದೆ, ಮಂತ್ರಿಮಂಡಲದವರಿಗೆ ಮತ್ತು ಆಡಳಿತ ವರ್ಗದಲ್ಲಿ ಎಷ್ಟರಮಟ್ಟಿಗೆ ದಕ್ಷತೆ ಮತ್ತು ಪ್ರಾಮಾಣಿಕತೆ ಇದೆ ಎಂಬುದನ್ನು ನೋಡಿದರೆ ಸರ್ಕಾರ ತಲೆ ತಗ್ಗಿಸಬೇಕು. ಇವರಿಗೆ ಎಷ್ಟರಮಟ್ಟಿಗೆ ಯೋಗ್ಯತೆ ಇದೆಯೆಂದರೆ ಇವರು ನಮ್ಮ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಮತ್ತು ಕೇಂದ್ರ ಸರ್ಕಾರದವರು ಕೊಡತಕ್ಕಂಥ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನಮಗೆ ನಾರ್ವೇಜಿಯನ್ ಸ್ಕೀಮಿಗೆ ಫಿಷರೀಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದಿಂದ ೬೦ ಲಕ್ಷ ರೂಪಾಯಿಗಳನ್ನು ಸಹಾಯ ಮಾಡತಕ್ಕಂಥ ಒಂದು ಯೋಜನೆಯನ್ನು ಹಾಕಿತ್ತು. ಇದರಲ್ಲಿ ೪೬ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಯಿತು. ಒಂದು, ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಫ್ಲಡ್ಸ್ ಕಂಟ್ರೋಲ್‌ಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದವರು ೬ ಕೋಟಿ ರೂಪಾಯಿಗಳ ಸಾಲವನ್ನು ನೀಡಿದ್ದರು. ಇವರು ಅದನ್ನು ಉಪಯೋಗಿಸದೆ ಲ್ಯಾಪ್ಸ್ ಮಾಡಿದರು. ಹೀಗೆ ಇವರು ನಮ್ಮ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನಮ್ಮ ಮೈಸೂರು ಸರ್ಕಾರದವರು ಕೇಂದ್ರ ಸರಕಾರದಿಂದ ಬರತಕ್ಕ ಹಣ ಸಹಾಯವನ್ನು ಪೂರ್ಣವಾಗಿ ತೆಗೆದುಕೊಳ್ಳುತ್ತಾ ಇಲ್ಲ. ಇವೊತ್ತಿನ ದಿವಸ ಸರ್ಕಾರದವರು ಮಾಡುವ ತಪ್ಪಿಗೆ ಈ ದೇಶದ ಜನತೆ ತೆರಿಗೆಯನ್ನು ಕೊಟ್ಟು ಸಾಯುವ ಪರಿಸ್ಥಿತಿ ಬರುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕಾಗಿ ನಾನು ಹೇಳುವುದು ಇಷ್ಟೆ. ಈ ಸರ್ಕಾರದಲ್ಲಿ ರಾಜ್ಯಾಂಗ ಶಾಸನಾಂಗ ಮತ್ತು ನ್ಯಾಯಾಂಗ ಎಂದು ೩ ವ್ಯವಸ್ಥೆ ಇದೆ. ಇವೊತ್ತಿನ ದಿವಸ ನಮ್ಮ ಆಡಳಿತ ವರ್ಗ ಹೇಗಿದೆ ಎಂದರೆ ಆಡಳಿತ ವರ್ಗ ತನ್ನಷ್ಟಕ್ಕೆ ತಾನು ಇದ್ದರೆ ಚೆನ್ನಾಗಿತ್ತು ಎನ್ನುವ ಭಾವನೆ ಬಂದಿದೆ. ಹಿಂದೆ ಮೈಸೂರು ಮಾದರಿ ಮೈಸೂರಾಗಿತ್ತು. ಪ್ರಾಮಾಣಿಕತೆಯಿಂದ ಆಡಳಿತವನ್ನು ನಡೆಸುತ್ತಿದ್ದರು. ಆದರೆ ಇವೊತ್ತು ದಕ್ಷತೆ ಹೇಗಿದೆ ಎಂದರೆ ದೇಶದಲ್ಲಿ ನಾಲ್ಕು ತರಹ ಗುಲಾಮರಾಗಿದ್ದಾರೆ. ಸಾಮಾನ್ಯ ಜನಗಳು ಅಧಿಕಾರಿಗಳ ಗುಲಾಮರಾಗಿದ್ದಾರೆ. ಅಧಿಕಾರಿಗಳು ಪುಡಾರಿಗಳ ಗುಲಾಮರಾಗಿದ್ದಾರೆ ಪುಡಾರಿಗಳು ಸರ್ಕಾರದ ಮಂತ್ರಿಗಳ ಗುಲಾಮರಾಗಿದ್ದಾರೆ ಮಂತ್ರಿಗಳು ಸಾಹುಕಾರರ ಗುಲಾಮರಾಗಿದ್ದಾರೆ. ಈ ರೀತಿಯಾಗಿ ನಾಲ್ಕು ತರಹ ಗುಲಾಮಗಿರಿಯನ್ನು ಸರ್ಕಾರ ಸೃಷ್ಟಿ ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ದೇಶಕ್ಕೆ ಎರಡು ಕಡೆಯಿಂದ ಅಪಾಯ ಇದೆ. ಒಂದು ಕಡೆ ನಿರುದ್ಯೋಗ ಪದವೀಧರರಿಂದ, ಇನ್ನೊಂದು ವಿದ್ಯಾವಂತ ನಿರುದ್ಯೋಗ ರಾಜಕಾರಿಣಿಗಳಿಂದ ದೇಶಕ್ಕೆ ಅಪಾಯವುಂಟಾಗುತ್ತದೆ. ಇವೊತ್ತಿನ ದಿವಸ ಪ್ರತಿಯೊಂದು ಹಂತದಲ್ಲಿಯೂ ಕೈವಾಡ ಇದೆ. ಪುಡಾರಿಗಳು ಮಂತ್ರಿಗಳಿಗೆ ಹೇಳಿದ ಪಕ್ಷದಲ್ಲಿ ಒಬ್ಬನು ನ್ಯಾಯವಾಗಿರುವವನಿಗೆ ಅನ್ಯಾಯದಾಗುತ್ತದೆ, ಯೋಗ್ಯನಾಗಿರುವವನು ಅಯೋಗ್ಯನಾಗುತ್ತಾನೆ, ಪ್ರಾಮಾಣಿಕನಾಗಿರುವವನು ಅಪ್ರಾಮಾಣಿಕನಾಗುತ್ತಾನೆ. ಇವರು ಮಾಡತಕ್ಕಂಥ ಕೆಲಸದಿಂದ ಯಾವ ಅಧಿಕಾರಿಯೂ ಪ್ರಾಮಾಣಿಕತೆಯಿಂದ ಇರುವುದಕ್ಕೆ ಸಾಧ್ಯವಿಲ್ಲ. ಯಾರಾದರೂ ಅಧಿಕಾರಿಗಳು ಒಂದು ಕಡೆ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರೆ ಅಂಥವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುತ್ತಾರೆ. ಇಂಥಾ ಒಂದು ಪರಿಸ್ಥಿತಿ ಬಂದಿದೆ. ಇತ್ತೀಚೆಗಂತೂ ಕೆಲವು ಅಧಿಕಾರಿಗಳು ಪ್ರಾಮಾಣಿಕರಾಗಿದ್ದರೂ ಅವರು ಸರ್ಕಾರದಲ್ಲಿ ಕೆಲಸಮಾಡುವುದಕ್ಕಾಗುವುದಿಲ್ಲ. ಇವರಿಂದ ಪ್ರಾಮಾಣಿಕರಾಗಿದ್ದವರೂ ಕೂಡ ಅಪ್ರಾಮಾಣಿಕರಾಗಿದ್ದಾರೆ. ಇದಕ್ಕೆ ಪುಡಾರಿಗಳ ಒಂದು ಸಹವಾಸ ಜಾಸ್ತಿಯಾಗಿದೆ. ನಮ್ಮ ದೇಶದಲ್ಲಿ ಲೆಕ್ಕ ಹಾಕಿದರೆ ಅಧಿಕಾರಿಗಳಲ್ಲಿ ೨೦ ಜನ ಪ್ರಾಮಾಣಿಕರಾಗಿದ್ದಾರೆ. ೫೦ ಪರ್ಸೆಂಟ್ ಜನ ಅಧಿಕಾರಿಗಳು ಸರ್ಕಾರಿ ಉದ್ಯೋಗ ಒಂದು ಉಪಕಸಬು ಎಂದು ಭಾವನೆ ಮಾಡಿಕೊಂಡಿದ್ದಾರೆ. ೧೦೦ಕ್ಕೆ ೩೦ರಷ್ಟು ಜನರಿಗೆ ಸರ್ಕಾರಕ್ಕೆ ತಾವು ಏನೂ ಅನ್ಯಾಯ ಮಾಡದೆ ನಿರುತ್ಸಾಹಶಾಲಿಗಳಾಗಿ ನಾವು ಕಾಲ ಕಳೆದರೆ ಸಾಕು, ರಿಟೈರ್ ಆದರೆ ಆಯಿತು ಎನ್ನುವ ಭಾವನೆ ಬಂದಿದೆ. ಅಧಿಕಾರಿಗಳ ಸಂಬಳವನ್ನು ಜಾಸ್ತಿ ಮಾಡಿದರೆ ಉತ್ತಮ ಆಡಳಿತ ಬರುತ್ತದೆ ಎನ್ನುವುದು ಬರೀ ನಾಮಕಾವಸ್ಥೆ. ಅನೇಕ ಜನ ಅಧಿಕಾರಿಗಳು ವ್ಯಾಪಾರಸ್ಥರಾಗಿದ್ದಾರೆ, ಕಂಟ್ರಾಕ್ಟುದಾರರಾಗಿದ್ದಾರೆ, ಇನ್‌ಷ್ಯೂರೆನ್ಸ್ ಏಜೆಂಟರಾಗಿದ್ದಾರೆ. ಹೀಗೆ ಬೇರೆ ಬೇರೆ ವೃತ್ತಿಗಳನ್ನು ಮಾಡಿಕೊಂಡು ತಮ್ಮ ಮತ್ತು ಊರಿನ ಅಕ್ಕಪಕ್ಕದ ಊರುಗಳಿಗೆ ಟ್ರಾನ್ಸ್‌ಫರ್‌ಗಳನ್ನು ಮಾಡಿಸಿಕೊಂಡು ಹತ್ತಾರು ವರ್ಷಗಳಿಂದ ಕಾಲವನ್ನು ಕಳೆಯುತ್ತಿದ್ದಾರೆ.

ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಕೊರಟಗೆರೆ ತಾಲೂಕಿನಲ್ಲಿ ಒಬ್ಬ ಎಜುಕೇಶನ್ ಇಲಾಖೆಯ ಇನ್ಸ್‌ಪೆಕ್ಟರ್, ಇನ್‌ಶೂರೆನ್ಸ್ ಏಜೆಂಟನಾಗಿದ್ದಾರೆ, ಅವರ ಮಗ ಒಬ್ಬ ವಿದ್ಯಾರ್ಥಿ. ಮಗನ ಹೆಸರಿನಲ್ಲಿ ಇನ್‌ಶೂರೆನ್ಸ್ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಅವರಿಗೆ ಒಂದು ಸಾವಿರದ ಇನ್ನೂರು ರೂಪಾಯಿ ಕಮಿಷನ್ ಬರುತ್ತಿದೆ. ಇನ್ನೊಬ್ಬ ಬಿಡಿಒ ಇದ್ದಾರೆ. ಅವರೂ ಇನ್‌ಶೂರೆನ್ಸ್ ಏಜೆಂಟ್. ಅವರ ಕೆಲಸವೇನೆಂದರೆ, ಬರೇ ಇನ್‌ಶ್ಯೂರೆನ್ಸ್ ತೆಗೆದುಕೊಳ್ಳುವುದು. ಇದರಿಂದ ಏನಾಗುತ್ತದೆ ಅಂದರೆ, ಹಾಗೆ ಪಾಲಿಸಿ ತೆಗೆದುಕೊಂಡವರ ಆಬ್ಲಿಗೇಶನಿಗೆ ಇವರು ಒಳಗಾಗ ಬೇಕಾಗುತ್ತದೆ. ಮತ್ತು ನ್ಯಾಯವಾಗಿ ಅವರ ಕೆಲಸಕಾರ್ಯಗಳನ್ನು ಮಾಡಲಾಗುವುದಿಲ್ಲ. ಅದೇ ರೀತಿ ಅನೇಕ ಅಸಿಸ್ಟೆಂಟ್ ಇಂಜಿನಿಯರುಗಳು, ಜೂನಿಯರ್ ಇಂಜಿನಿಯರುಗಳು ಕಂಟ್ರಾಕ್ಟರುಗಳ ಜೊತೆ ತಾವೂ ಬಂಡವಾಳ ಹಾಕಿ ಕೆಲಸಮಾಡುತ್ತಿದ್ದಾರೆ, ಇವೊತ್ತಿನ ದಿವಸ ನೋಡಿದ ಪಕ್ಷದಲ್ಲಿ ಶೇಕಡಾ ೫೦ ಭಾಗ ಅಧಿಕಾರಿಗಳು ತಮ್ಮ ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಂಡಿರುತ್ತಾರೆ. ಅಲ್ಲಲ್ಲಿ, ಸರ್ಕಾರೀ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾ ಇಲ್ಲ. ಇವತ್ತು ಕೆಲವರು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದಾರೆ, ಕೆಲವರು ಇನ್‌ಶ್ಯೂರೆನ್ಸ್ ಏಜೆನ್ಸಿ ಮಾಡುತ್ತಿದ್ದಾರೆ, ಮತ್ತು ಕೆಲವರು ಕಂಟ್ರಾಕ್ಟ್ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಿ ಕೆಲಸ ೧೫ ದಿನದಲ್ಲಿ ಆಗುವಂತದ್ದು, ಒಂದು ತಿಂಗಳು, ೩ ತಿಂಗಳು ತಡವಾಗುತ್ತದೆ. ಹೇಗೆ ಮಾಡಿದರೂ, ಅವರಿಗೆ ತಿಂಗಳು ತಿಂಗಳು ಸಂಬಳ ಬಂದೇ ಬರುತ್ತದೆ. ನಮಗೆ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಇಂಗ್ಲೆಂಡಿನಲ್ಲಿ ಒಳ್ಳೆಯ ಆಡಳಿತ, ದಕ್ಷತೆಯ ಆಡಳಿತ ಇದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಯಾವ ಸರ್ಕಾರ ಬರಲಿ, ಹೋಗಲಿ, ಸರ್ಕಾರದ ಆಡಳಿತ ಮಾತ್ರ ಒಂದು ದಕ್ಷತೆಯಿಂದ, ಒಂದು ಪ್ರಮಾಣಿಕತೆಯಿಂದ ಇದೆ ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಆ ರೀತಿಯಿಲ್ಲ. ಹಿಂದೆ ಹಳೇ ಮೈಸೂರಿನಲ್ಲಿ ಪ್ರಾಮಾಣಿಕ ಐ ಎ ಎಸ್ ಆಫೀಸರುಗಳು, ಇಂಜಿನಿಯರುಗಳು ಯಾರು ಇದ್ದರೋ, ಇವೊತ್ತಿನ ದಿವಸ ಅವರನ್ನು ಕೆಳಗಡೆ ಹಾಕಿ, ಕೆಳಗಡೆ ಇರತಕ್ಕ ಅಧಿಕಾರಿಗಳಿಗೆ ಪ್ರೊಮೋಶನ್ಸ್ ಕೊಡುತ್ತಿದ್ದಾರೆ ಪ್ರಾಮಾಣಿಕರಾದ ಅಧಿಕಾರಿಗಳು ಹಿಂದೆ ಇದ್ದ ಹಾಗೆಯೇ ಇದ್ದು, ಅವರ ಕೆಳಗಡೆ ಇರತಕ್ಕವರು ಮೇಲಕ್ಕೆ ಹೋಗಿ ಎಕ್ಸಿಕ್ಯೂಟಿವ್ ಇಂಜಿನಿಯರಾಗಿದ್ದಾರೆ. ಆದರ ಹಿಂದೆ ಇದ್ದ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಚೀಫ್ ಇಂಜಿನಿಯರು ಆಗುವುದಕ್ಕೆ ಲಾಯಕ್ಕಿಲ್ಲವೆಂದು ಹೇಳುತ್ತಿದ್ದಾರೆ, ಮತ್ತು ಅವರು ಕೆಳಗಡಯೇ ಹೋಗುತ್ತಿದ್ದಾರೆ. ಈ ರೀತಿ ಒಂದು ರಾಜಕೀಯವನ್ನು ಅಲ್ಲಿಯೂ ತಂದಿರುವುದರಿಂದ ಸರ್ಕಾರಿ ಆಡಳಿತವು ದಕ್ಷತೆಯಿಂದ ನಡೆಯುವುದಕ್ಕಾಗುವುದಿಲ್ಲ. ಹೋಗಲಿ, ಇವತ್ತು ಜನರಿಂದ ತೆರಿಗೆ ತೆಗೊಂಡು, ಸಾಧಾರಣ ೨೦೦ ಕೋಟಿ ರೂಪಾಯಿ ಸರಕಾರಕ್ಕೆ ಆದಾಯ ಬರುತ್ತದೆ. ಅದನ್ನು ದೇಶದ ಕಲ್ಯಾಣಕ್ಕಾಗಿ ಉಪಯೋಗಿಸುತ್ತಾರೆಯೇ ಎಂದು ನೋಡಿದರೆ, ಅದೂ ಇಲ್ಲ. ಇವತ್ತು ನಮ್ಮ ಕೋಪರೇಟೀವ್ ಸೊಸೈಟಿಗಳಿಗೆ ಹಾಕಿರತಕ್ಕ ಬಂಡವಾಳ. ನಾವು ಪ್ರೈವೈಟ್ ಎಂಟರ್ ಪ್ರೈಸಸ್‌ಗೆ ಪಬ್ಲಿಕ್ ಸೆಕ್ಟರ್ರಿಗೆ ಹಾಕಿರತಕ್ಕ ಭಂಡವಾಳ, ಮತ್ತು ಸರ್ಕಾರ ಗ್ಯಾರೆಂಟಿ ನಿಂತಿರುವ ಸಂಸ್ಥೆಗಳು ಇವಕ್ಕೆಲ್ಲಾ ಹಾಕಿರುವ ಭಂಡವಾಳವನ್ನು ನೋಡಿದರೆ, ನಮ್ಮ ಆಸ್ತಿ ಇವತ್ತು ೪೦೦ ಕೋಟಿ ಇದ್ದರೆ, ಇದಕ್ಕೇನೆ ೩೦೦ ಕೋಟಿ ಚಿಲ್ಲರೆ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಕಾಣುತ್ತದೆ. ಹಾಕಿದ ಹಣಕ್ಕೆ ಇವತ್ತು ಬಡ್ಡಿ ಕೂಡ ಬರುತ್ತಾ ಇಲ್ಲ. ಇವತ್ತು ಶೇಕಡಾ ೬ ರಂತೆ ಸಾಲಾ ಕೊಡುತ್ತಿದ್ದಾರೆ. ಇದನ್ನು ಪ್ರತೀ ವರ್ಷ ಜನರಿಗೆ ತೆರಿಗೆ ಹಾಕಿ ತುಂಬಿಕೊಳ್ಳುತ್ತಿದ್ದಾರೆ. ಇವೊತ್ತಿನ ದಿವಸ ಮಂತ್ರಿಯವರೆಲ್ಲಾ ಕೆಲವು ಜನರನ್ನು ಹೊಗಳಿಸಿಕೊಳ್ಳುವುದಕ್ಕೆ ಇಟ್ಟುಕೊಂಡಿದ್ದಾರೆ.

ಹಿಂದೆ ಮೈಸೂರಿನಲ್ಲಿ ದಕ್ಷ ಮತ್ತು ಆದರ್ಶವಾದ ಆಡಳಿತವಿತ್ತು. ಸಹಕಾರಿ ಸಂಘಗಳು ಕಡಿಮೆ ಇದ್ದರೂ, ಆದರ್ಶವಾದ ಸಹಕಾರಿ ಸಂಘಗಳು ಇದ್ದವು. ಅದೇ ರೀತಿ ಆಸ್ಪತ್ರೆಗಳು, ಶಾಲೆಗಳು ಎಲ್ಲಾ ಕಡಿಮೆ ಇದ್ದರೂ ಬಹಳ ದಕ್ಷತೆಯಿಂದ ನಡೆದು ಆದರ್ಶವಾಗಿತ್ತು. ಅದೇ ರೀತಿ ನಮ್ಮ ಪಿ ಡಬ್ಲ್ಯೂ ಡಿ ಕೂಡ ಎಷ್ಟೋ ದಕ್ಷತೆಯಿಂದ ಕೆಲಸಮಾಡುತ್ತಿತ್ತು ಮತ್ತು ಇಡೀ ಭರತಖಂಡದಲ್ಲೇ ಅದು ಹೆಸರು ಪಡೆದಿತ್ತು. ಆದರೆ ಇವೊತ್ತಿನ ದಿವಸ ಒಂದು ಸಹಕಾರಿ ಸಂಘವಾಗಲಿ, ಒಂದು ಶಾಲೆಯಾಗಲಿ, ಒಂದು ಆಸ್ಪತ್ರೆಯಾಗಲಿ, ಸರಿಯಾಗಿ ದಕ್ಷತೆಯಿಂದ ಕೆಲಸ ಮಾಡುತ್ತಾ ಇಲ್ಲ. ಮೊನ್ನೆ ಒಂದು ಪ್ರಶ್ನೆಗೆ ಉತ್ತರದಲ್ಲಿ ಒಂದು ರಸ್ತೆಯೊಳಗೆ ೧೦ ಸೇತುವೆ ಹಾಕಿದ್ದರೆ, ಅದರಲ್ಲಿ ೭ ಸೇತುವೆಗಳು ಡ್ಯಾಮೇಜ್ ಆಗಿದೆ ಎಂದು ಹೇಳಿದ್ದರೆ. ಇನ್ನೊಂದು ಪ್ರಶ್ನೆಯಲ್ಲಿ ಮಾನ್ಯ ಸಿದ್ದವೀರಪ್ಪನವರು ೪-೬ ಕೆರೆ ಬ್ರೀಚ್ ಆಗಿವೆ ಎಂದು ಹೇಳಿದ್ದಾರು. ನಮ್ಮ ತಾಲೂಕಿನಲ್ಲಿ ೫-೬ ಕೆರೆಗಳನ್ನು ಕಟ್ಟಿದ್ದಾರೆ. ಅದರಲ್ಲಿ ಎರಡು ಕೆರೆಗಳು ಬ್ರೀಚ್ ಆಗಿವೆ. ಇನ್ನೊಂದು ಕೆರೆಯಲ್ಲಿ ಎಂಟು ತಿಂಗಳು ನೀರೇ ಇಲ್ಲದೆ ಹೋಗುತ್ತದೆ. ಇವೊತ್ತಿನ ದಿವಸ ಇವರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಇವರಲ್ಲಿಯ ಎಫಿಶಿಯನ್ಸಿ ಎಲ್ಲಿ ಹೋಯಿತು? ಇವತ್ತು ಪಿ ಡಬ್ಲ್ಯೂ ಡಿ ಇಲಾಖೆಯಲ್ಲಿ ಮಂತ್ರಿಗಳಿಗೆ ಸಂಬಂಧಪಟ್ಟವರೇ ಕಂಟ್ರಾಕ್ಟ್ ಮಾಡುವುದಕ್ಕೆ ಶುರು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಮಂಗಳೂರಿನ ಫರ್ಟಿಲೈಸರ್ಸ್ ಕಾರ್ಖಾನೆಗೆ ವಾಟರ್ ಸಪ್ಲೈಯ ಕೆಲಸವನು ಟೆಂಡರ್ ಇಲ್ಲದೆ ಹ್ಯಾಗೆ ಕೊಟ್ಟಿರಿ, ಒಂದು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಕೋಟಿ ರೂಪಾಯಿ ಚಿಲ್ಲರೆಯ ಟೆಂಡರನ್ನು ಯಾವ ರೀತಿ ಕೊಟ್ಟಿರಿ, ಎಂದು ಕೇಳಿದಾಗ, ನೀರು ಸರಬರಾಜು ಬೇಗನೇ ಮಾಡದಿದ್ದರೆ, ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳಿ ಎರಡು ವರ್ಷವಾಯಿತು. ಆದರೆ ಫರ್ಟಿಲೈಸರ್ಸ್ ಫ್ಯಾಕ್ಟರಿ ಯಾವ ಸ್ಟೇಜಿನಲ್ಲಿದೆ ಅಂದರೆ, ಯಾವುದೂ ಕಾಣುತ್ತಾ ಇಲ್ಲ. ಅವರಿಗೆ ಕೇಂದ್ರ ಸರ್ಕಾರದಿಂದ ಯಾವ ಪತ್ರ ಬಂದಿದೆ ಎಂಬುದನ್ನು ಅವರು ಹೇಳಬೇಕು. ಇವೊತ್ತಿನ ದಿವಸ ದೊಡ್ಡ ದೊಡ್ಡ ಕಂಟ್ರಾಕ್ಟುದಾರರಿಗೂ, ಇವರಿಗೂ ಒಂದು ಸಂಬಂಧ ಇದೆಯೆಂದು ಹೇಳುತ್ತೇನೆ. ಅದೇ ರೀತಿ ಬೆಂಗಳೂರು ವಾಟರ್ ಸಪ್ಲೈಯ ವಿಚಾರ ಕೂಡ. ಇದರಲ್ಲಿ ಕೂಡ ಟೆಂಡರ್ ಕರೆಯುವ ಮುನ್ನ ಸರಿಯಾಗಿ ಯೋಚನೆ ಮಾಡದೆ, ಯಾರೋ, ತಮ್ಮವರು ಇದ್ದಾರೆ ಎಂದು ರಾತ್ರೋ ರಾತ್ರಿ ಏನೇನೋ ಮಾಡಿಕೊಂಡು, ಅದರಿಂದ ನಮ್ಮ ಸರ್ಕಾರಕ್ಕೆ ಕೋಟಿಗಟ್ಟಲೆ ಹಣ ಲುಕ್ಸಾನು ಮಾಡುತ್ತಿದ್ದಾರೆ. ನನಗೆ ತಿಳಿದ ಪ್ರಕಾರ ಈ ಮಧ್ಯೆ ಕಂಟ್ರಾಕ್ಟರು ಏನಿದ್ದಾರೆ, ಅವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಇಂಥ ಕೆಲಸಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ನಮ್ಮ ಅಸೆಂಬ್ಲಿಯಲ್ಲಿರುವ ೩-೪ ಬುದ್ಧಿವಂತರ ತಜ್ಞರ ತಂಡವನ್ನು ಮಾಡಿ, ಅವರನ್ನು ಕರೆಸಿಕೊಂಡು, ಇದರಲ್ಲಿ ನಿಜವಾಗಿಯೂ ಯಾರು ತಪ್ಪು ಮಾಡಿದ್ದಾರೆ, ಅದನ್ನು ಕಂಡುಹಿಡಿದು ಅವರ ಮೇಲೆ ಕ್ರಮ ಏಕೆ ತೆಗೆದುಕೊಳ್ಳಬಾರದು? ಅವತ್ತಿನ ದಿವಸ ಒಂದು ಅಜರ್ನಮೆಂಟ್ ಮೋಷನ್ ಕಳಿಸಿದರೂ ಕೂಡ, ಕೇವಲ ಅದನ್ನು ತಳ್ಳಿಹಾಕುವುದಕ್ಕೋಸ್ಕರ ನಮ್ಮ ಮುನಿಸಿಪಲ್ ಮಂತ್ರಿಯವರು ಏನೋ ಒಂದು ಉತ್ತರವನ್ನು ಕೊಟ್ಟರು.

ಅದೇ ರೀತಿ ಇವತ್ತು ನಮ್ಮ ಪಿ ಡಬ್ಲ್ಯು ಡಿ ಇಲಾಖೆಯಲ್ಲೂ ಕೂಡ ಮೇಜರ್ ವರ್ಕ್ಸ್ ಮೀಡಿಯಂ ವರ್ಕ್ಸ್ ಎಲ್ಲಾ ತೆಗೆದುಕೊಂಡು ನೋಡಿ. ಮೂರು ಲಕ್ಷದ ಕೆಲಸಗಳು ೧೦ ಲಕ್ಷಕ್ಕೆ ಏರಿವೆ ೫ ಲಕ್ಷದ ಕೆಲಸವು ೧೫ ಲಕ್ಷಕ್ಕೆ ಏರಿದೆ. ನಮ್ಮ ತಾಲ್ಲೂಕಿನಲ್ಲಿ ನಡೆಯುವ ಕೆಲಸಗಳು ಕೂಡ ಸಾರ್ವಜನಿಕರಿಗೋಸ್ಕರ ನಡೆಯುವ ಕೆಲಸವೆಂದು ಹೇಳುವುದಕ್ಕಾಗುವುದಿಲ್ಲ. ಅಂಥ ಪರಿಸ್ಥಿತಿ ಅಲ್ಲಿ ಬಂದಿದೆ. ಇದನ್ನೆಲ್ಲಾ ನೋಡಿದರೆ, ಅನೇಕ ಮಂತ್ರಿಗಳ ಕೈವಾಡ ಏನೋ ಇದೆಯೆಂದು ಅರ್ಥವಾಗುವುದಿಲ್ಲವೆ? ನಾನು ಒಂದು ಸಾರಿ ಒಬ್ಬ ಆಫೀಸರರ ಹತ್ತಿರ ಕೂತುಕೊಂಡಿರುವಾಗ, ಸಂಬಂಧಪಟ್ಟ ಆಫೀಸರರಿಗೆ ಒಂದು ಟೆಲಿಫೋನ್ ಬಂತು. ಫೋನಿನಲ್ಲಿ ಈ ಕಂಟ್ರಾಕ್ಟನ್ನು ಏನಾದರೂಮಾಡಿ ಇವನಿಗೇ ಕೊಡಬೇಕು ಎಂದು ಹೇಳಿದರು.

ಈಗ ಇಂಜಿನಿಯರುಗಳು ಏನು ಮಾಡುತ್ತಾರೆಂದರೆ, ಬರೀ ಟೆಂಡರುಗಳನ್ನು ಕರೆದು ಸರ್ಕಾರದ ಪರವಾಗಿ ಅಥವಾ ಮಂತ್ರಿಗಳ ಪರವಾಗಿ ಯಾರು ಇದ್ದಾರೋ ಅಂತಹವರಿಗೆ ಕೆಲಸ ಕೊಡಬೇಕೆಂದು ಹೇಳುತ್ತಾರೆ. ಏನಾದರೂ ಮಾಡಿ ಒಂದು ಕೆಲಸವನ್ನು ಕೊಡಿಸುತ್ತೇವೆಂದು ಮಂತ್ರಿಗಳು ಉದ್ದೇಶ ಪಟ್ಟಿದ್ದಾರೆ. ಇದನ್ನು ನೋಡಿದರೆ ಎಷ್ಟು ಅಂದಾಜುಗಳು ಒಂದಕ್ಕೆ ನಾಲ್ಕರಷ್ಟು ಆಗುತ್ತದೆಂಬುದನ್ನು ನೋಡಬೇಕು. ಇದರಲ್ಲಿ ಕೆಲವರ ಹಿತರಕ್ಷಣೆಯಾಗುತ್ತದೆಂದು ಲೆಕ್ಕ ಹಾಕಬಹುದು. ಈ ದೇಶದಲ್ಲಿ ಮರಾಮತ್ತು ಇಲಾಖೆಯಲ್ಲಿ ಎಫಿಷಯನ್ಸಿ ಹಾಳಾಗಿ ಹೋಗಿದೆ. ಹತ್ತಾರು ತಾಲ್ಲೂಕುಗಳಿಗೆ ಬೇಕಾದರೆ ನಾನು ಮಂತ್ರಿಗಳನ್ನು ಕರೆದುಕೊಂಡು ಹೋಗಿ ಇಂತಹ ನಿದರ್ಶನಗಳನ್ನು ತೋರಿಸುತ್ತೇನೆ. ಕೆಲವು ಕಟ್ಟಡಗಳನ್ನು ಕಟ್ಟಿದ ಎರಡು ವರ್ಷಗಳಲ್ಲಿ ಅವನ್ನು ಹೊಡೆದು ಹಾಕಿದ್ದಾರೆ. ಎಷ್ಟೋ ಕಟ್ಟಡಗಳು ಕುಸಿದುಹೋಗಿವೆ. ರೋಡ್ ಟ್ರಾನ್ಸ್‌ಪೋರ್ಟ್ ಬಸ್ ಸ್ಟ್ಯಾಂಡ್ ಎರಡು ವರ್ಷಗಳಿಂದಲೂ ಆಗಿಲ್ಲ. ಇವತ್ತು ಫ್ಲೋರಿಂಗ್ ಎಲ್ಲಾ ಕಿತ್ತುಹೋಗಿದೆ. ನಮ್ಮ ದೇಶದ ಆಡಳಿತಕ್ಕಾಗಿ ನಾವು ಹಣವನ್ನು ಖರ್ಚು ಮಾಡುವಾಗ ಎಷ್ಟರಮಟ್ಟಿಗೆ ಪ್ರಾಮಾಣಿಕತೆ ಇದೆಯೋ ಅಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ನಡೆಯುತ್ತದೆ. ಕೊಟ್ಟ ಹಣಕ್ಕೆ ಸರಿಯಾದ ಕೆಲಸ ಆಗುತ್ತಾ ಇಲ್ಲ. ಒಟ್ಟಿನಲ್ಲಿ ಆಡಳಿತ ಯಂತ್ರ ಕುಸಿದು ಬೀಳುತ್ತಿದೆ. ಇವತ್ತಿನ ದಿವಸ, ಈಗ ಇವರು ಸೆಲೆಕ್ಷನ್ ಪೋಸ್ಟ್ಸ್ ಎಂಬುದಾಗಿ ಇಟ್ಟಿದ್ದಾರೆ: ಅವರಲ್ಲಿ ತಪ್ಪುಮಾಡಿದಂತಹವರಿಗೆ ಡಿಸ್‌ಮಿಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಡೈರಿ ಇಲಾಖೆಯಲ್ಲಿ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಅವರು ಆಡಳಿತವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಆಡಿಟ್ ರಿಪೋರ್ಟನಲ್ಲಿ ೧೩.೫೦೦ ಕೆ.ಜಿ. ಬೆಣ್ಣೆಯನ್ನು ಸುಟ್ಟುಹಾಕಿದ್ದಾರೆಂದು ಹೇಳಿದ್ದಾರೆ. ಅಂತಹವರಿಗೆ ಏನು ಶಿಕ್ಷೆಮಾಡಿದ್ದೀರಿ? ಈಗ ಬಿ. ಎಂ. ಡಿ. ಯಲ್ಲಿ ಒಂದು ಕೋಟಿ ರೂಪಾಯಿಗಳು ನಷ್ಟವಾಗಿದೆ. ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದರು ತಪ್ಪು ಮಾಡಿದ ಅಧಿಕಾರಿಗೆ ಏನು ಶಿಕ್ಷೆ ಮಾಡಿದ್ದಾರೆ? ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಸರ್ಕಾರದಿಂದ ಪುರಸ್ಕಾರ ಕೊಡುತ್ತಾ ಇಲ್ಲ. ಇವತ್ತಿನ ದಿವಸ ಐ. ಎ. ಎಸ್. ಅಧಿಕಾರಿಗಳಲ್ಲಿ ಕೆಲವರು ಸರ್ಕಾರದ ಶಿಫಾರ್ಸಿನಿಂದ ನೇಮಕರಾಗಿದ್ದಾರೆ. ಇನ್ನು ಮೈಸೂರು ದೇಶದಲ್ಲಿ ರಾಜ್ಯದ ಆಡಳಿತದ ದಕ್ಷತೆ ಮತ್ತು ಅದರ ಸ್ಟಾಂಡರ್ಡ್ ನೋಡಿದರೆ ಮನುಷ್ಯನ ಕಿರುಬೆರಳು ಮಟ್ಟಕ್ಕೆ ಇಳಿಯುವುದು ಸರಿಯಲ್ಲ. ಅದರ ದಕ್ಷತೆಯು ಆಡಳಿತ ಈಗ ಮೈಸೂರು ದೇಶದಲ್ಲಿಲ್ಲ. ಹಿಂದೆ ಮಾಡಿದಂಥ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ನ್ಯಾಯವಾದ ರೀತಿಯಲ್ಲಿ ನಡೆದುಕೊಂಡರೆ ಈ ದೇಶಕ್ಕೆ ಕೀರ್ತಿ ಬರುತ್ತದೆ. ಮೈಸೂರು ಮಾದರೀ

ಸಂಸ್ಥಾನವೆಂದು ಹೆಸರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ, ನಾನು ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ) :—

"ಸರ್ವೇಜನಾ: ಸುಖಿನೋಭವಂತು" ಎಂಬುದು ಸಾರ್ವತ್ರಿಕ ಆಡಳಿತದ ಬೀಜಮಂತ್ರ. ಆದರೆ ಈ ಮಂತ್ರ ಮಂತ್ರವಾಗಿಯೇ ಉಳಿದು " ಸಚಿವೋ ಜನಾ ; ಸುಖಿನೋಭವಂತು " ಎಂಬ ತಂತ್ರವಾದಾಗ—ಸಾರ್ವತ್ರಿಕ ಆಡಳಿತ ಸಹಜವಾಗಿಯೇ ಶಿಥಿಲವಾಗುತ್ತದೆ. ನಮ್ಮ ರಾಜ್ಯದ ಸಾರ್ವತ್ರಿಕ ಆಡಳಿತ ಹೀಗಾಗುತ್ತಿದೆ ಎಂಬುದಕ್ಕೆ ೧೯೫೭ರಿಂದ ಪ್ರಾರಂಭವಾದ ಪ್ರಜಾರಾಜ್ಯದ ಮುಖ್ಯ ಮಂತ್ರಿಗಳ ಕಾಲದಿಂದ, ಇಂದಿನ ಮುಖ್ಯ ಮಂತ್ರಿಗಳವರೆಗೂ ಉದಾಹರಣೆಗಳು ದೊರೆಯುತ್ತವೆ. ೧೯೫೭ರ ಮುಖ್ಯ ಮಂತ್ರಿಗಳು "ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ " ಎಂಬ ತತ್ವದಿಂದ ಆಡಳಿತ ನಡೆಸಿದರು. ಆಗ ಇದ್ದದ್ದು, ಈಗಿನ ಅರ್ಧರಾಜ್ಯ ಮಾತ್ರ. ಮಿತಿಯಾದ ಮಂತ್ರಿಮಂಡಲದಿಂದ ಇತಿಮಿತಿಯಿಂದ ಇದ್ದದ್ದರಲ್ಲೇ ಅಚ್ಚುಕಟ್ಟಾಗಿ ಆಡಳಿತ ನಡೆಯಿತು. ನಂತರ ಮೈಸೂರು ಬಳ್ಳಾರಿಗೆ ಸೇರಿತು ಆಗಿನ ಮುಖ್ಯಮಂತ್ರಿ ಆಡಳಿತ, ದಕ್ಷತೆಯಿಂದಿದ್ದರೂ "ಅಹಂಬ್ರಹ್ಮ ಅಹಂವಿಷ್ಣು ಅಹಂರುದ್ರ" ಎಂಬ ಮನೋಭಾವ ಅತಿಯಾದ್ದರಿಂದ ಆಡಳಿತಕ್ಕೆ ಇತಿಶ್ರೀ ಆಯಿತು. ಆಮೇಲೆ ಒಬ್ಬ ಕಡ್ಡಿ ಪೈಲ್ವಾನರು ಮುಖ್ಯಮಂತ್ರಿಗಳಾದರು. ಅವರ ಅವಧಿ ಅತ್ಯಲ್ಪ. ಅವರು ಆಡಳಿತ ಶುದ್ಧವಾಗಿರಬೇಕು, ಚೊಕ್ಕವಾಗಿರಬೇಕೆಂದು ಹೇಳುತ್ತಾ ಹೇಳುತ್ತಾ ರಾಜಕೀಯದಿಂದಲೇ ನಿವೃತ್ತರಾದರು.

ಶ್ರೀ ಆರ್. ದಯಾನಂದಸಾಗರ್ :—ಮುಖ್ಯ ಮಂತ್ರಿಗಳಲ್ಲಿ ಕಡ್ಡಿಪೈಲ್ವಾನರು ಯಾರು ? ಆ ಕಡೆಯೇ ಪೈಲ್ವಾನ್ ಇದ್ದಾರೆಂದು ಮಾತನಾಡಬಾರದು. ಈ ಕಡೆಯೂ ಅಂತಹವರು ಇದ್ದಾರೆ.

ಶ್ರೀ ಎಸ್ ಚನ್ನಯ್ಯ :—ಮಾನ್ಯ ಸದಸ್ಯಣಿಯರಿಗೆ ಅಭಿಮಾನವಿದ್ದರೆ, ಆ ಮಾತು ಬರುವುದಿಲ್ಲ. ಅಭಿಮಾನವಿಲ್ಲದಿದ್ದರೆ ಆ ಮಾತು ಬರುತ್ತದೆ. ಆದರೂ ಅದಕ್ಕೆ ಕಂಟ್ರೋಲ್ ಮಾಡಬೇಕು. ಹೆಣ್ಣು ಮಕ್ಕಳ ಬಾಯಿಯಿಂದ ಅದು ಬರಬಾರದು.

ಶ್ರೀಮತಿ ನಾಗರತ್ನಮ್ಮ ಹಿರೇಮಠ :—"ನಂತರ" ಎಲೈ ಕಾಕರಾಜ ನಿನ್ನ ಸ್ವರ ಎಷ್ಟು ಮಧುರವಾಗಿದೆ, ಒಮ್ಮೆ ಹಾಡಬಾರದೇ ಎಂದು ನರಿ ಕಾಕರಾಜನ ಬಾಯಿ ಬಿಡಿಸಿ ಅದರ ಬಾಯಲ್ಲಿದ್ದ ಮಾಂಸದ ತುಂಡು ಕಚ್ಚಿಕೊಂಡು ಹೋದಂತೆ ನರಿಯ ಉಪಾಯ ಬಲ್ಲವರು ಆಡಳಿತಕ್ಕೆ ಬಂದರು. ಅವರ ಕಾಲದಲ್ಲಿಯೂ ಸಾರ್ವತ್ರಿಕ ಆಡಳಿತ ನರಿಯ ಉಪಾಯದಂತೆಯೇ ನಡೆದು ಹೋಯಿತು. ಈ ಮಧ್ಯೆ ಅಭಿನವ ಭಾರತ —ಮೂರು ತಿಂಗಳು ಮುಖ್ಯಮಂತ್ರಿಯಾದರು. ಅವರು ಈಗಿಲ್ಲ, ಅವರ ಆತ್ಮಕ್ಕೆ ಶಾಂತಿ ದೊರೆಯಲಿ. ಈವೊಳಗೆ ಅಖಂಡ ಕರ್ನಾಟಕ ಆಗಿತ್ತು. ಅಖಂಡ ಕರ್ನಾಟಕದ ಪ್ರಥಮ ಮಂತ್ರಿಯಾಗಿ ಒಬ್ಬರು ಬಂದರು. "ಸೀತರೆ ಬಿದ್ದು ಹೋಗುವ ಮೂಗು ಅಂಟಿಸಿಕೊಂಡರೆ ನಿಲ್ಲುವುದೇ ಎಂದು ಹೇಳಿ ರಾಜಿನಾಮೆ ಕೊಟ್ಟರು ಮತ್ತೆ ಅಭಿನವ ಭಾರತ ನಂತರ, ಅಧಿಕಾರಕ್ಕೆ ಬಂದರು. ಅವರ ಆಡಳಿತದಲ್ಲಿ ಎಲ್ಲವೂ ಸಂದೇಹಾತ್ಮಕವೇ, ಅವರು ಹಾಗೇನು ? ಇವರು ಹೀಗೇನು ? ನೀವು ನಂಬುತ್ತೀರಾ, ಹೀಗೆ ಎಲ್ಲಾ ಸಂದೇಹಾತ್ಮಕ. ಅವರ ಕಾಲದಲ್ಲಿ ಸತ್ಯ ಹೇಳಿದರೆ ಗುದ್ದು ಮಿಥ್ಯ ಹೇಳಿದರೆ ಮುದ್ದು" .

ಹೀಗಿರುವಾಗ ಸಾರ್ವತ್ರಿಕ ಆಡಳಿತ ಅಭದ್ರವಾಗದಿದ್ದೀತೆ ? ಅವರ ಕಾಲದಲ್ಲಿ ಒಂದು ಮಾತ್ರ ಭದ್ರವಾಯಿತು. ಅವರ ಪಕ್ಷದ ಆಡಳಿತ ಭದ್ರವಾಯಿತು. ಅದಕ್ಕಾಗಿ ಅವರು ಇತಿಮಿತಿಗಳನ್ನು ಲೆಕ್ಕಿಸಲಿಲ್ಲ. ದಂಡಿನಲ್ಲಿ ದ್ರೋಣನೆ —ಕಾಳಗದಲ್ಲಿ ಕುಲಪಿತಾಮಹನೆ ಎಂಬಂತೆ ನ್ಯಾಯವೋ ಅನ್ಯಾಯವೋ ನಿರ್ನಾಮವಾದರೆ ನಿನ್ನ ವೈರಿಗಳು ಎಂಬಂತೆ ಪಕ್ಷದ ಆಡಳಿತ ಭದ್ರತೆಗಾಗಿ ಅವರ ಅವಧಿಯನ್ನು ಸವೆಸಿದರು ಆದರೇನು ಕಂಸ ಕೈಗೆ ದೊರೆತ ವೈರಿಗಳನ್ನು ಕೊಂದನೇ ಹೊರತು, ಗೋಕುಲದಲ್ಲಿ ಬೆಳೆಯುತ್ತಿದ್ದ ವೈರಿಗಳ ಸುಳಿವೇ ಹತ್ತಲಿಲ್ಲ. ಆ ವೈರಿಗಳು ಗೋಕುಲದಲ್ಲಿ ಬೆಳೆಯುತ್ತಿದ್ದಾರೆ. ಮುಂದಿನದು ಭವಿಷ್ಯಕ್ಕೆ ಸೇರಿದ್ದು. ಸಾರ್ವತ್ರಿಕ ಆಡಳಿತ ಆಗಲೂ ಸರಿಯಾಗಲಿಲ್ಲ. ಇನ್ನು, ಈಗಿನ ಮುಖ್ಯಮಂತ್ರಿಗಳು, ಅವಧಿ ಪೂರ್ಣ ಆಡಳಿತ ಭದ್ರವಾಗಿರಬೇಕೆಂದು ದುಬಾರಿ ಮಂತ್ರಿಮಂಡಲ ಮಾಡಿಕೊಂಡು ಅಧಿಕಾರ ವಹಿಸಿಕೊಂಡರು. "ಆರೇನು ಮಾಡುವರು, ಆರಿಂದಲೇನಹುದು, ಪೂರ್ವ ಜನ್ಮದ ಕರ್ಮವಿಧಿ ಬೆನ್ನ ಬಿಡದು" ಎಂಬಂತೆ ಹಿಂದಿನ ಸಾಂಪ್ರದಾಯ ನಿಷ್ಠೆಗೆ ಅಂಟಿಕೊಂಡು ಆಡಳಿತ ಸೂತ್ರ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಹಿಡಿದಿದ್ದಾರೆ. ಒಳ್ಳೆಯ ಆಡಳಿತ ಕೊಡಬೇಕೆಂಬ ಉತ್ಸಾಹದಿಂದ ಇದ್ದಾರೆ. ಆದರೆ ಹಾಳಾದ್ದು ವಾಸ್ತು ಪುರುಷನ ದೃಷ್ಟಿ ಇವರ ಮೇಲೂ ಬೀಳಬೇಕೆ ಗಡಿ ತಕರಾರು, ನೀರಿನ ಹಂಚಿಕೆ ತಕರಾರು, ತೆರಿಗೆಗಳ ತಕರಾರು, ಇಂಡಿಕೇಟ್—ಸಿಂಡಿಕೇಟ್ ತಕರಾರು, ಕೇಂದ್ರದ ವಕ್ರದೃಷ್ಟಿಯ ತಕರಾರು—ಹೀಗೆ ಅಸಂಖ್ಯಾತ ತಕರಾರುಗಳ ಸಮಸ್ಯಾತ್ಮಕ ಆಡಳಿತವನ್ನು ಎದುರಿಸಬೇಕಾಗಿದೆ. ಅವರ ವಿಧಿ ಹೇಗಿದೆಯೋ ಮುಖಂಡಾನುಕರಣ ಪ್ರಿಯ ವೀರೇಂದ್ರನೇ ಬಲ್ಲ. ಆದರೂ ಧಿಟ್ಟತೆಯಿಂದ ಸಮಸ್ಯೆಗಳನ್ನು ಎದುರಿಸಿ ಸಾರ್ವತ್ರಿಕ ಆಡಳಿತ ಶುದ್ಧಿಗೊಳಿಸಲೆಂದು ಹಾರೈಸುತ್ತೇನೆ.

3-30 p. m.

ಸಾರ್ವತ್ರಿಕ ಆಡಳಿತದ ಯಶಸ್ಸಿಗೆ ದಕ್ಷತೆ, ಶುದ್ಧ ಹಸ್ತ ಮುಖ್ಯ ಕಾರಣ. ಭ್ರಷ್ಟ ಅಧಿಕಾರಿಗಳನ್ನು ನಿರ್ದಯೆಯಿಂದ ಶಿಕ್ಷಿಸಲಾಗುವುದು ಎಂಬ ಕೆಚ್ಚಿನ ಹೇಳಿಕೆಯನ್ನು ನಮ್ಮ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವುದೇ ಸಮಸ್ಯೆಯಾಗಿದೆ. ಹಿಂದೆ ದುರ್ಯೋಧನ ತನ್ನ ಸಭೆಯಲ್ಲಿದ್ದ ಕೃಷ್ಣನನ್ನು ಬಂಧಿರಿಸಿ ಎಂದು ಆಜ್ಞೆ ಮಾಡಿದ. ಹಿಡಿಯ ಹೋದವರಿಗೆ ಎಲ್ಲರೂ ಕೃಷ್ಣನಂತೆ ಕಂಡರು. ಸ್ವತಃ ದುರ್ಯೋಧನನೂ ಕೃಷ್ಣನಂತೆ ಕಂಡುಬಂದನಂತೆ. ಆ ರೀತಿ ಮಾಯಾಜಾಲ ಕೃಷ್ಣ ನಿರ್ಮಿಸಿದ. ಆಡಳಿತದಲ್ಲೂ ಅಷ್ಟೇ, ಎಲ್ಲಾ ಇಲಾಖೆಯಲ್ಲಿ ಕೃಷ್ಣರು ಇದ್ದಾರೆ. ಕೃಷ್ಣ ಜಾಲ ಇದೆ. ಯಾವ ಇಲಾಖೆಯನ್ನೇ ತೆಗೆದುಕೊಳ್ಳಿ ಎಲ್ಲಾ ಕಡೆಯೂ ಮಾಮೂಲು ಜಾಲ, ಎಲ್ಲೆಲ್ಲಿಯೂ ಕೃಷ್ಣರೇ ಇರುವಾಗ ಮುಖ್ಯ ಮಂತ್ರಿಗಳ ದೃಷ್ಟಿಗೆ ದುರ್ದೈವೀ ಮಂಕು ತಿಮ್ಮರು ಒಬ್ಬಬ್ಬರು ಸಿಕ್ಕರೆ ಹೆಚ್ಚು. ಮಾದರಿ ಮೈಸೂರು ಎನಿಸಿಕೊಂಡದ್ದು ಈಗ ಮಾಮೂಲು ಮೈಸೂರಾಗಿದೆ. ಈ ಅಪಕೀರ್ತಿಯನ್ನು ಹೋಗಲಾಡಿಸುವ ಹೊಣೆಗಾರಿಕೆ ತರುಣ ಮುಖ್ಯ ಮಂತ್ರಿಗಳ ಮೇಲೆ ಬಿದ್ದಿದೆ. ಇದಕ್ಕೆ ಅಧಿಕಾರದಲ್ಲಿರುವವರೂ ಸಹಕಾರ ಮಾಡಬೇಕು. ಇವೆಲ್ಲಾ ಕುಂದು ಕೊರತೆಗಳನ್ನು ನಿವಾರಿಸಿ ಸಾರ್ವಜನಿಕ ಆಡಳಿತ ಶುದ್ಧಿಗೊಳಿಸಲೆಂದು ಹಾರೈಸುತ್ತೇನೆ.

ಪೋಲೀಸ್ ಇಲಾಖೆಯಲ್ಲಿ ಉತ್ತಮವಾದ ಕಾರ್ಯಚಟುವಟಿಕೆ ಕಂಡುಬಂದರೂ ಗೋಕರ್ಣ ಲಿಂಗದಂತೆ ಪಾತಾಳಕ್ಕೆ ಇಳಿದಿರುವ ಮಾಮೂಲಿ ಬೇರುಗಳನ್ನು ಕತ್ತರಿಸಲು ಇಲಾಖಾ ಮುಖ್ಯಾಧಿಕಾರಿಗಳು ಪ್ರಯತ್ನಿಸುವರೆಂದು ಹೇಳಬಯಸುತ್ತೇನೆ ಇನ್ನು ವಿಳಂಬ ನೀತಿ ಎಲ್ಲಾ ಇಲಾಖೆಗಳಲ್ಲೂ ತುಂಬಿದೆ. ಇನ್ನು ರಾಜ್ಯ ನೌಕರರ ಸೀನಿಯಾರಿಟಿ ಲಿಸ್ಟ್ ತಯಾರಾಗಿಲ್ಲ. ಜಿ. ಐ. ಡಿ. ಎಫ್. ಡಿ. ಎಲ್. ಡಿ. ಗಳಲ್ಲಂತೂ ಫೈಲುಗಳ ವಿಲೇವಾರಿ ತೀರ್ಮಾನ ಇನ್ನೂ ಅವರ ನಡಿಗೆಯಲ್ಲೇ ಇದೆ. ಅದರ ಬಗ್ಗೆ ಸರ್ಕಾರ ಪೂರ್ಣ ನಿಗಾ ಕೊಡಬೇಕು. ಫೈಲುಗಳ ವಿಲೇವಾರಿ ಬಗ್ಗೆ ಸರಕಾರ ಎಷ್ಟು ಮುತುವರ್ಜಿ ವಹಿಸಿದರೆ ಅಷ್ಟು ಒಳ್ಳೆಯದು. ಇನ್ನು ಜೈಲುಗಳಲ್ಲಿ ೧೨ ವರ್ಷ ಶಿಕ್ಷೆ ಅನುಭವಿಸಿರುವ ಖೈದಿಗಳನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ತುಂಬಾ ವಿಳಂಬವಾಗುತ್ತಿದೆ. ಈ ಬಗ್ಗೆ ಜೈಲುಗಳ ಸಲಹಾ ಸಮಿತಿ ಶಿಫಾರಸ್ಸು ಮಾಡಿ ಕಳುಹಿಸಿದರೂ ಸರಕಾರ ಆಖೈರು ತೀರ್ಮಾನಕ್ಕೆಗೊಳ್ಳಲು ಕೊಂಕಣ ಸುತ್ತಿ ಮೈಲಾರಕ್ಕೆ ಬರುತ್ತಿದೆ. ಜೈಲಿನಲ್ಲಿದ್ದು ಕಷ್ಟನಷ್ಟಗಳನ್ನು ಅನುಭವಿಸಿದವರಿಗೆ ಮಾತ್ರ ವಿಳಂಬದಿಂದಾಗುವ ಮಾನಸಿಕ ವ್ಯಥೆ ಎಷ್ಟೆಂಬುದು ಗೊತ್ತಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳಲು ಗೃಹ ಸಚಿವ ಮರಿ ಮಂತ್ರಿಗಳಿಗೆ ವಿನಂತಿಸುತ್ತೇನೆ. ಕಂಡದ್ದನ್ನು ಹೇಳಿದರೆ ಕೇಡದಂಥ ಸಿಟ್ಟು ಸರಕಾರಕ್ಕೆ ಬರುತ್ತದೆ. ಎಂಬುದು ಗೊತ್ತಿದ್ದರೂ, ನಾನು ಮೊದಲಿನಿಂದಲೂ ಕಂಡದ್ದನ್ನು ಕಂಡಂತೆ ಹೇಳುತ್ತಾ ಬಂದಿದ್ದೇನೆ. ಈಗಲೂ ಹೇಳುತ್ತೇನೆ, ಮುಂದೆಯೂ ಹೇಳುತ್ತೇನೆ ಯಾವ ಆಸೆ ಆಮಿಷಗಳಿಗೂ ಬಲಿಯಾಗಲಾರೆ. ಸ್ವಾಭಿಮಾನಿ, ನಿರ್ದಾಕ್ಷಿಣ್ಯ ಸ್ವಭಾವದವರಿಗೆ ಪದವಿಗಳು ಸಾಮಾನ್ಯ. ಈ ಸ್ವಭಾವದಿಂದಲೇ ಆಡಳಿತಗಾರರ ದೃಷ್ಟಿಯಲ್ಲಿ ಮಾತ್ರ ನಾನು ಆ ಪದವಿಗಳಿಗೆ ಡಿಸಕ್ವಾಲಿಫೈಡ್ ಆಗಿದ್ದೇನೆ. ಸಾರ್ವಜನಿಕರ ದೃಷ್ಟಿಯಲ್ಲಿ ಕ್ವಾಲಿಫೈಡ್. ಯಾರ ದಾಕ್ಷಿಣ್ಯವೂ ಇಲ್ಲದೆ ಇದ್ದದ್ದನ್ನು ಇದ್ದಂತೆ ತಮ್ಮ ಮುಂದೆ ಹೇಳಿದ್ದೇನೆ. ಆಡಳಿತ ಹಿತದೃಷ್ಟಿ ಹಿತನುಡಿಗಳನ್ನು ಸ್ವಾಗತಿಸುತ್ತಾರೆಂದು ಭಾವಿಸಿದ್ದೇನೆ.

"ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ? ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ? ಹಸುವಿದ್ದು ಫಲವೇನು ಹಯನ ವಿಲ್ಲದನ್ನಕ್ಕ ? ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ ? ಸಚಿವರಿದ್ದು ಫಲವೇನು ಜನರ ಕಷ್ಟದ ಅರಿವಿಲ್ಲದನ್ನಕ್ಕ"

‡ಶ್ರೀ ಎಸ್. ಹೆಚ್. ಪುಟ್ಟರಂಗನಾಥ (ಬೇಲೂರು):—ಅಧ್ಯಕ್ಷರೇ, ಈವೊತ್ತು ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಈ ಮೂರು ಡಿಮ್ಯಾಂಡುಗಳ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಜನರಲ್ ಆಡ್ಮಿನಿಸ್ಟ್ರೇಷನ್‌ನಲ್ಲಿ ನಡೆಯುತ್ತಾ ಇರತಕ್ಕ ಕೆಲವು ನ್ಯೂನತೆಗಳನ್ನು ಪ್ರಸ್ತಾಪಮಾಡಲು ಇಚ್ಛಿಸುತ್ತೇನೆ. ಈಗತಾನೇ ಶ್ರೀಮತಿ ನಾಗರತ್ನಮ್ಮ ಅವರು ವಿಶದವಾಗಿ ಎಲ್ಲವನ್ನೂ ಹೇಳಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರಣವಾದರೂ ಇಷ್ಟೇ, ನಾನೂ ಸರಕಾರಿ ನೌಕರಿಯಲ್ಲಿ ಇದ್ದವನೇ. ನನಗೂ ಈ ಅಧಿಕಾರಿಗಳು ಏನೇನು ಕೆಲಸಗಳನ್ನು ಮಾಡುತ್ತಾರೆ ಎನ್ನತಕ್ಕ ಅನುಭವ ಸ್ವಲ್ಪ ಇದೆ. ಈ ಸೆಕ್ರೆಟ್ರಿಯಟಿನಲ್ಲಿ ಇರತಕ್ಕ ಅಧಿಕಾರಿಗಳು ಬಹಳ ವರ್ಷಗಳಿಂದ ಇಲ್ಲಿಯೇ ಇದ್ದು ತಮ್ಮ ಪ್ರಭಾವವನ್ನು ಬೆಳೆಸಿ ಕೊಳ್ಳುವುದಕ್ಕೆ ಅವಕಾಶವಾಗಿದೆ.ಒಬ್ಬ ಶಾಸನಸಭಾಸದಸ್ಯರಾಗಿರತಕ್ಕಂಥ ಅಥವಾಪರಿಷತ್ತಿನ ಸದಸ್ಯರು ಆಗಿರತಕ್ಕಂಥವರು ಕಾಗದ ಬರೆದರೆ ಆ ಕಾಗದಕ್ಕೆ ಉತ್ತರಿಸುವ ಜವಾಬ್ದಾರಿಯನ್ನೂ ಕೂಡ ಇಟ್ಟು ಕೊಂಡಿರುವುದಿಲ್ಲ. ನಾವು ಆಫೀಸಿಗೆ ಬಂದು ಆ ಕಾಗದವನ್ನು ಹೊರಕ್ಕೆ ತೆಗೆಸಬೇಕಾದರೆ ಎರಡು ಮೂರು ದಿವಸಗಳು ಬೇಕಾಗುತ್ತದೆ.ನನಗೆ ಒಂದು ಸ್ಕೂಟರ್ ಅಲಾಟ್ ಆದಾಗ ನನ್ನ ಇನ್‌ಷಿಯಲ್ ತಪ್ಪಾಗಿತ್ತು. ಆದಕ್ಕೆ ಒಂದು ಅರ್ಜಿಯನ್ನು ಕೊಟ್ಟಾಗ ನಾನು ಲೆಜಸಲೇಟರ್ ಅಲ್ಲ ಎಂದು ತಿಳಿದುಕೊಂಡು ಆಗಬಾ, ಈಗಬಾ ಎಂದು ಹೇಳಿ, ನಾಲ್ಕಾರು ದಿವಸ ನನಗೆ ಅಲೆದಾಡಿಸಿದರು. ಒಬ್ಬ ಶಾಸನಸಭಾಸದಸ್ಯರಾಗಿರುವನು ಕಚೇರಿಗೆ ಹೋಗಿ ತನ್ನ ಕಾಗದ ಏನಾಗಿದೆ ಎಂದು ವಿಚಾರಿಸುವ ಪರಿಸ್ಥಿತಿಗೆ ಬಂದಿದೆ. ಕಾರಣ ಏನೆಂದರೆ ಅವರು ಅವರ ಮನೋವೃತ್ತಿಯನ್ನು ಆ ರೀತಿ ಬೆಳಸಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಅನೇಕ ಸಂದರ್ಭ ದಲ್ಲಿ ಇಲ್ಲಿ ಭಾಷಣ ಮಾಡಿದ ಕಾಲಕ್ಕೆ ಹೇಳಿದ್ದಾರೆ ಯಾವ ಒಬ್ಬ ಅಧಿಕಾರಿ ಮಿಸಬಿಹೇವ್ ಮಾಡಿದರೆ ಅಥವಾ ಅವನಲ್ಲಿ ಲಂಚಗುಳಿತ ಇದ್ದರೆ ಅದನ್ನು ತೊಡೆದುಹಾಕುವುದರಲ್ಲಿ ನಾನು ಮೊದಲಿಗ ಎಂದು

ಅವರಿಗೆ ಆ ಉತ್ಸಾಹ ಇದೆ. ಮಂತ್ರಿಗಳನ್ನು, ರಾಜಕೀಯದಲ್ಲಿರತಕ್ಕವರನ್ನು ಅವಲಂಬಿಸಿಕೊಂಡು ಸುಮಾರು ೧೦–೧೫–೨೦ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕೆಲವು ಅಧಿಕಾರಿಗಳು ಇದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಅವರು ಅಲ್ಲಿ ಇರುವುದರಿಂದ ಬಡವರಿಗೆ ಅಲ್ಲಿ ಅಪಾಯಿಂಟ್‌ಮೆಂಟ್ ಸಿಕ್ಕುವಂತಹ ಸನ್ನಿವೇಶ ಕಂಡುಬರುವುದಿಲ್ಲ. ಒಂದೇ ಒಂದು ನಿದರ್ಶನ ಕೊಡುತ್ತೇನೆ, ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಒಂದು ಫ್ಯಾಮಿಲಿಯ – ಜನ ಕೆಲಸ ಮಾಡುತ್ತಾ ಇದ್ದಾರೆ, ಇಂತಹ ಒಂದು ಪರಿಸ್ಥಿತಿ ಆಗಬಾರದು. ತಮ್ಮದೇ ಆದಂತಹ ಗುಂಪುಗಾರಿಕೆಯನ್ನು ಬೆಳೆಸುವುದಕ್ಕೆ ಅವಕಾಶ ಕೊಡಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ.

೧೯೬೩ರಲ್ಲಿ ಮಾಡಿರತಕ್ಕ ಆರ್ಡರನ್ನು ಸೂಪರಸೀಡ್ ಮಾಡಿ ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರ ಬಗ್ಗೆ ಹೊಸದಾಗಿ ಒಂದು ಆರ್ಡರ್ ಇಷ್ಯೂ ಮಾಡಿದ್ದಾರೆ. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದು ಬರೀ ಕಾಗದದಲ್ಲಿ ಇದ್ದರೆ ಸಾಲದು, ಕಾರ್ಯರೂಪದಲ್ಲಿ ಜಾರಿಗೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲಿಯವರೆಗೂ ಸೆಪರೇಟ್ ಲಿಸ್ಟ್ ಮಾಡಿ ಕೊನೆಯಲ್ಲಿ ಮಾರ್ಕ್ಸ್ ಕಮ್ಮಿ ತೆಗೆದು ಕೊಂಡಿದ್ದಾರೆ ಅಂತ ನೌಕರಿಗೆ ಸೇರಿಸುವುದಕ್ಕಾಗಲಿ ಮತ್ತು ಪ್ರಮೋಷನ್ ಕೊಡುವಾಗಲಾಗಲಿ ಯಾವ ವಿಧವಾದ ಸಹಾಯವೂ ದೊರೆಯುತ್ತಾ ಇರಲಿಲ್ಲ. ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ ರಕ್ಷಣಾ ಇಲಾಖೆಯಲ್ಲಿ ಇವರ ಸಂಖ್ಯೆ ಬಹಳ ಕಮ್ಮಿ ಇದೆ. ಆದ್ದರಿಂದ ರಕ್ಷಣಾ ಇಲಾಖೆಯಲ್ಲಿ ಹಿಂದುಳಿದಿರತಕ್ಕ ಪಂಗಡದವರಿಗೆ ಹೆಚ್ಚಿನ ಒಂದು ಪ್ರಿಫರೆನ್ಸ್ ಕೊಡಬೇಕು, ಇಲ್ಲದೇ ಇದ್ದರೆ ಅವರ ರಕ್ಷಣೆಯಾಗುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ.

ಎಷ್ಟು ಕೇಸುಗಳನ್ನು ಹಾಕಿದ್ದೀರಿ, ಎಷ್ಟು ಕೇಸುಗಳನ್ನು ವಿತ್‌ಡ್ರಾ ಮಾಡಿದ್ದೀರಿ ಎಂಬುದನ್ನು ನೋಡಿದಾಗ ಈ ವಿಜಿಲೆನ್ಸ್ ಕಮೀಷನ್‌ನಲ್ಲಿ ನಡೆಯತಕ್ಕ ಅನ್ಯಾಯಗಳು ಬಹಳಜಾಸ್ತಿಯಾಗಿವೆ ಎಂಬುದನ್ನುಬಹಳ ಕಳಕಳಿಯಿಂದ ಹೇಳುತ್ತೇನೆ. ಕ್ಲಾಸ್ ೧ ಆಫೀಸರ್ಸ್ ಯಾರೂ ಶಿಕ್ಷೆಗೆ ಒಳಗಾಗಿಲ್ಲ. ಕ್ಲಾಸ್ ೩ಎಂಪ್ಲಾಯೀಸ್ ಮಾತ್ರ ಜಾಸ್ತಿ ಶಿಕ್ಷಗೆ ಒಳಗಾಗಿರುವುದಕ್ಕೆ ಕಾರಣವೇನು ಇನ್‌ಫ್ಲುಯೆನ್ಸ್ ಜಾಸ್ತಿಯಾಗಿ ಯಾರು ಲಂಚ ಹೊಡೆಯುತ್ತಾರೋ ಅವರನ್ನು ಹಿಡಿಯುವುದಿಲ್ಲ ಇದು ಹೋಗಬೇಕು. ವಿಜಿಲೆನ್ಸ್ ಕಮೀಷನ್‌ನ್ನು ವಿಸರ್ಜಿಸಿಬಿಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಆದಕ್ಕೆ ಬದಲಾಗಿ ಒಂದು ಜ್ಯುಡಿಷಯಲ್ ಬಾಡಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ: ನ್ಯಾಯ ಎನ್ನುವುದು ಪ್ರತಿಯೊಬ್ಬರಿಗೂ ಸರಿಸಮಾನವಾಗಿ ದೊರೆಯಬೇಕು, ಆದು ವಿಜಿಲೆನ್ಸ್ ಕಮೀಷನ್‌ನಲ್ಲಿ ದೊರೆಯುತ್ತಾ ಇಲ್ಲ. ೪೦–೫೦ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕವನನ್ನು ಡಿಸ್‌ಮಿಸ್ ಮಾಡುತ್ತಾರೆ, ಸಾವಿರ ರೂಪಾಯಿ ಸಂಬಳ ಪಡೆಯತಕ್ಕ ದೊಡ್ಡ ದೊಡ್ಡ ಅಧಿಕಾರಿಗಳನ್ನು ಕೈ ಬಿಡುತ್ತಾರೆ ಎಂದು ಬಹಳ ವಿಷಾದ ದಿಂದ ಹೇಳಬೇಕಾಗುತ್ತದೆ.

ಪೋಲೀಸ್ ಇಲಾಖೆಯಲ್ಲಿ ಬಹಳ ತೊಂದರೆಯಾಗುತ್ತಾ ಇದೆ. ಟ್ರಾಫಿಕ್‌ನಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದ್ದೀರಿ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಕ್ರೈಮ್ ನಲ್ಲಿ ಏನು ಮಾಡುತ್ತಾ ಇದ್ದೀರಿ ಎಂಬುದನ್ನು ವಿವೇಚನೆ ಮಾಡಬೇಕಾಗಿದೆ. ನನ್ನ ತಾಲ್ಲೂಕಿನ ಉದಾಹರಣೆ ಕೊಡುವುದಾದರೆ ಎರಡು ಸಾರಿ ಮಂತ್ರಿಗಳ ಹತ್ತಿರ ಹೋಗಿ ಅವರ ಆಫೀಸಿನಲ್ಲಿ ಹೇಳಿದ್ದೇನೆ, ನಮ್ಮ ತಾಲ್ಲೂಕಿನಲ್ಲಿರತಕ್ಕ ಒಬ್ಬ ಸಬ್-ಇನ್‌ಸ್ಪೆಕ್ಟರು ಹಳ್ಳಿಹಳ್ಳಿಗಳಲ್ಲಿ ವ್ಯಾಜ್ಯ ಷುರುಮಾಡುವುದು, ಕಳ್ಳತನ ಮಾಡಿಸುವುದು, ಖೂನಿ ಕೇಸುಗಳನ್ನು ಹಷಪ್ ಮಾಡುವುದು, ಇಂತಹ ಕೆಲಸಗಳಲ್ಲಿ ತೊಡಗಿದ್ದಾರೆ ಅವರನ್ನು ಆ ಜಾಗದಿಂದ ಬಿಡಿಸಬೇಕು ಅಂತ ಹೇಳಿ ಐ ಜಿ ಪಿ ಯವರೆಗೂ ಸಹ ಒಂದು ತಿಂಗಳ ಹಿಂದೆ ನಾನು ಒಂದು ಡಿ ಓ ಲೆಟರ್ ಬರೆದಿದ್ದೇನೆ. ಇದುವರೆಗೂ ಉತ್ತರ ಬಂದಿಲ್ಲ. ಮೆ ಐ ಹೆಲ್ಪ್ ಯೂ ಅಂತ ಪೋಲೀಸ್ ಸ್ಟೇಷನ್ ಮುಂದೆ ಬೋರ್ಡ್ ಹಾಕಿರುತ್ತಾರೆ, ಅದಕ್ಕೆ ಬದಲಾಗಿ ಮೆ ಐ ಸರ್ವ್ ಯೂ ಅಂತ ಹಾಕಿದರೆ ಚೆನ್ನಾಗಿರುತ್ತದೆ ಎಂದು ಹೇಳುತ್ತೇನೇ ಏಕೆಂದರೆ ಯಾರು ಕಂಪ್ಲೇಂಟ್ ಕೊಡುತ್ತಾರೆ ಅವರನ್ನು ವಿಚಾರಿಸುವುದಿಲ್ಲ, ಅವರಿಗೆ ರಕ್ಷಣೆ ಕೊಡುವುದಿಲ್ಲ. ಅದಕ್ಕೆ ಬದಲಾಗಿ ತೊಂದರೆ ಕೊಡುತ್ತಾ ಇದ್ದಾರೆ, ಇದರಿಂದ ಬಹಳ ತೊಂದರೆಯಾಗುತ್ತಾ ಇದೆ. ಸಣ್ಣ ಅಧಿಕಾರಿಗಳು ತಪ್ಪುಮಾಡಿದಾಗ ಮೇಲಿನ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಬೇಕು. ಪೋಲಿನವರು ಸರಿಯಾದ ರೀತಿಯಲ್ಲಿ ವರ್ತಿಸಿದರೆ ಬಡವರಿಗೆ ನ್ಯಾಯ ದೊರಕುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ಇನ್ನು ಜೈಲಿನ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಫೆಬ್ರವರಿ ೭ನೇ ತಾರೀಖು ಎಸ್ಟಿಮೇಟ್ ಕಮಿಟಿ ವತಿಯಿಂದ ಜೈಲಿಗೆ ಹೋಗಿದ್ದೆವು. ಅಲ್ಲಿ ಕೊಡತಕ್ಕ ಆಹಾರ ಉತ್ತಮವಾದ ಆಹಾರವಲ್ಲ ಆದಷ್ಟು ಶೀಘ್ರದಲ್ಲಿ ಅದನ್ನು ಸರಿಪಡಿಸಬೇಕು. ರೊಟ್ಟಿ ಕೊಡುತ್ತಾರೆ, ದನ ಕೂಡ ತಿನ್ನುವುದಕ್ಕೆ ಸಾಧ್ಯವಿಲ್ಲ, ಇದನ್ನು ಸರಿಪಡಿಸಬೇಕು. ಅವರನ್ನು ಮೃಗಗಳಂತೆ ಟ್ರೀಟ್ ಮಾಡುತ್ತಾರೆ, ಆ ರೀತಿ ಮಾಡದೆ ಅವರೂ ಕೂಡ ಮನುಷ್ಯರು ಅಂತಭಾವನೆ ಮಾಡಬೇಕು. ಜೈಲಿನಲ್ಲಿ ಅವರ ಬಿಡುಗಡೆಯಾದ ನಂತರ ಸರಿಯಾದಂತಹ ಎಕನಾಮಿಕ್ ಏಡ್ ಸಿಕ್ಕುವಂತೆ ಮಾಡಲು ಈಗ ಅವರಿಗೆ ಕೊಡುತ್ತಾ ಇರುವ ವೇಜಸನ್ನು ಕಡೇ ಪಕ್ಷ ೪ ಆಣೆಯಷ್ಟನ್ನಾದರೂ ಏರಿಸಬೇಕು ಎಂದು ಹೇಳುತ್ತೇನೆ. ೬೧ ಲಕ್ಷರೂಪಾಯಿ ಪ್ರಾಫಿಟ್ ಆಗಿದೆ. ಅವರು ಜೈಲಿನಿಂದ ಬಿಡುಗಡೆಯಾದ ನಂತರ ಅವರಿಗೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ. ಜೈಲಿನಲ್ಲಿ ಅವರಿಗೆ ನಾನಾ ಕೈಗಾರಿಕೆಗಳನ್ನು ಕಲಿಸುತ್ತೀರಿ. ಯಾವಯಾವ ಭಾಗದಲ್ಲಿ ತರಬೇತು ಪಡೆದಿರುತ್ತಾರೆ, ಅದಕ್ಕೆ ಯಾವ ಸಲಕರಣೆಗಳು ಬೇಕೋ ಅದನ್ನು ಅವರಿಗೆ ಒದಗಿಸಿದರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡಲಪೇಟೆ) :—ಮಾನ್ಯ ಅಧ್ಯಕ್ಷರೇ, ಈ ದಿವಸ ಮಂಡಿಸಿರತಕ್ಕ ಜನರಲ್ ಅಡ್ಮಿನಿಸ್ಟ್ರೇಷನ್, ಪೋಲೀಸು ಮತ್ತು ಜೈಲುಗಳು-ಈ ಎಲ್ಲಾ ಡಿಮ್ಯಾಂಡುಗಳ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಲು ಮತ್ತು ತಿಳಿದುಕೊಳ್ಳಲು ನಿಂತಿದ್ದೇನೆ. ಸುಮಾರು ೧೫-೧೬ ಕೋಟಿ ರೂಪಾಯಿ ಈ ಎಲ್ಲಾ ಡಿಮ್ಯಾಂಡುಗಳಿಗೆ ಖರ್ಚಾಗುತ್ತಿದೆ. ಆದರೆ ಹೀಗೆ ಖರ್ಚಾಗುವುದು ಸಾರ್ಥಕವಾಗುತ್ತದೆಯೋ ಎಂದು ಸ್ವಲ್ಪ ಯೋಚನೆ ಮಾಡಬೇಕಾದ ಸಂದರ್ಭ ಒದಗಿದೆ. ಇಷ್ಟರವರೆಗೆ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಕುಳಿತಿದ್ದರು, ಅದರಿಂದ ನನಗೆ ಸಂತೋಷವಾಗಿತ್ತು. ಏಕೆಂದರೆ ನನ್ನ ಸ್ವಭಾವ ಹಿಂದೆ ಬಯ್ಯುವುದಲ್ಲ ಅಥವ ಚಾಡಿ ಹೇಳುವುದು ಅಥವ ಕೇಳುವುದಲ್ಲ. ಅವರ ಮುಂದೆಯೇ ಹೇಳಿದರೆ ಜವಾಬು ಹೇಳುವರು ಎಂಬ ಆಸೆಯಿತ್ತು. ಆದರೆ ಈಗ ಇಲ್ಲಿಂದ ಹೊರಟುಹೋಗಿದ್ದಾರೆ. ಅವರ ಸೆಕ್ರೆಟರಿಗಳು ಇಲ್ಲಿರಬಹುದು, ಅವರು ಅವರಿಗೆ ತಿಳಿಸಬಹುದು.

ನಿನ್ನೆ ದಿವಸ ಅಜೆಂಡಾ ಪೇಪರುಗಳ ಜೊತೆಯಲ್ಲಿ ೧೦-೧೫ ಪುಟಗಳ ವರದಿ ಕೊಟ್ಟಿದ್ದಾರೆ. ಅದರಲ್ಲಿ ಹೀಗೆ ತಿಳಿಸಿದ್ದಾರೆ:

General Administration covers a broad spectrum of administrative activity having an important bearing on matters pertaining to services their recruitment, morale and discipline.

ಇದು ಮೊದಲನೆಯ ವಾಕ್ಯ. ಕೊನೆಯ ವಾಕ್ಯ ಹೀಗಿದೆ:

"It frames and issues all general rules relating to service conditions and it is also concerned with hospitality and protocal activity.

One of the important functions of the General Administration Department is to provide continual review and assessment of matters relating to administrative efficiency at all levels in the State"

೧೯೬೨-೬೩ರ ವರದಿಯೇ ಲೇಟೆಸ್ಟ್, ಅದು ೬೯ರಲ್ಲಿ ನಮ್ಮ ಕೈಸೇರಿದೆ. ಇದನ್ನು ನೋಡಿದರೆ ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಎಷ್ಟು ಮಹತ್ವವಿದೆ, ಪ್ರಾಮುಖ್ಯತೆ ಇದೆ, ದಕ್ಷತೆ ಹೇಗಿದೆ ಎಂಬುದು ಗೊತ್ತಾಗುವುದು, ಇದು ಎಫಿಷಿಯನ್ಸಿ.

ಎರಡನೆಯದಾಗಿ ಪೋಲೀಸು ಡಿಮ್ಯಾಂಡ್ ಬಗ್ಗೆ ಮಾತನಾಡಬೇಕೆಂದಿದ್ದೇನೆ. ನಮ್ಮ ಮುಖ್ಯ ಮಂತ್ರಿಗಳು ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಹೇಗೆ ಜವಾಬ್ದಾರರೋ ಹಾಗೆಯೇ ಗೃಹಶಾಖೆಗೂ ಜವಾಬ್ದಾರರು ಅವರ ಮೇಲೆ ಆ ಜವಾಬ್ದಾರಿಯೆಲ್ಲಾ ಇದೆ. ಅವರಿಗೆ ನಮ್ಮ ಮೈಸೂರು ಎಸ್‌ಪಿ ಮೇಲೆ ಬಹಳ ಪ್ರೇಮ, ಆ ಎಸ್ ಪಿ ಇವರ ಆದರದ ಶಿಷ್ಯರು, ಭಂಟ ಎಂದು ಹೇಳಬಹುದು. ಅವರು ಹೇಳುವುದನ್ನೆಲ್ಲಾ ಮಾಡುತ್ತಾರೆ, ಕೇಳಿದ್ದನ್ನೆಲ್ಲಾ ಕೊಡುತ್ತಾರೆ. ಹೀಗಾಗಿ ಅವರವರಿಗೆ ದೊಡ್ಡ ಭಾಂದವ್ಯವಿದೆ. ಮುಖ್ಯ ಮಂತ್ರಿಗಳಾಗುವುದಕ್ಕೆ ನಮ್ಮ ಊರಿನ ಎಂ ಎಲ್ ಸಿ ಗಳ ಒಂದು ಓಟಿತ್ತು. ಒಂದು ಆರ್ಡರು ಮಾಡಿದರೆ ಅವರು ನಡೆಸುತ್ತಾರೆ ಇದನ್ನು ಸುಮ್ಮನೆ ಹೇಳುವುದಿಲ್ಲ. ಇದಕ್ಕೆ ಕೆಲವು ಉದಾಹರಣೆಗಳನ್ನು ಹೇಳುತ್ತೇನೆ ಅದರಿಂದ ನಾನು ಹೇಳುವುದು ನಿಜವೇ ಅಥವ ಅಲ್ಲವೇ ಎಂಬುದನ್ನು ತಿಳಿಯಬಹುದು. ಅವರಿಗೆ ಕಾಗದದ ಮೇಲೆ ಕಾಗದ ಬರೆಯುವರು. ಆ ಎಸ್ ಪಿ ಗೆ ಮೂರು ಮಂದಿ ಶಿಷ್ಯರಿದ್ದಾರೆ, ನಾಗರಾಜ, ರಾಮಸ್ವಾಮಿ ಮತ್ತು ವೀರಭದ್ರಯ್ಯ ಎನ್ನುವವರು ಶಿಷ್ಯರು. ಆ ಮೂರು ಜನರೂ ಸರ್ವಾಧಿಕಾರಿಗಳು, ಅವರು ದಫೇದಾರ್, ಪಿ ಸಿ ಕೆಲಸಗಳಲ್ಲಿದ್ದಾರೆ. ಈ ಎಸ್ ಪಿ ಮುಖ್ಯ ಮಂತ್ರಿಗಳಿಗೆ ಬೇಕಾದವರು, ಆದುದರಿಂದ ಇವರನ್ನು ಯಾರೂ ಅಳ್ಳಾಡಿಸುವುದಕ್ಕಾಗುವುದಿಲ್ಲ ಎಂದು ಈ ಶಿಷ್ಯರು ಎಲ್ಲರ ಹತ್ತಿರವೂ ಹೇಳುವರು. ಯಾರಾದರೂ ದೂರು ಕೊಟ್ಟರೆ ದೂರು ಕೊಟ್ಟವರನ್ನೇ ಹಿಡಿದುಕೊಂಡು ಹೊಡೆಯುವುದು, ಅವರನ್ನು ಪೋಲೀಸು ಸ್ಟೇಷನ್‌ನಲ್ಲಿಟ್ಟು ರಾತ್ರಿಯೆಲ್ಲಾ ಹಿಂಸೆಮಾಡುವುದು, ಮಾನ ಮರ್ಯಾದೆ ಕಳೆಯುವುದು ಬಲಿಹಾಕುವುದು, ಈ ರೀತಿ ಮಾಡುತ್ತಿದ್ದಾರೆ. ಇನ್ನು ಸಿದ್ದಯ್ಯನವರಿಲ್ಲ, ಅವರಿಗೆ ಗೊತ್ತಿದೆ ಬಡಿಗ ಕೇಸು ಏನಾಯ್ತು ಎಂಬುದು. ಅದು ನಿರ್ಣಯವಾಯ್ತು. ಅವರಿಗೆ ಆ ವರ್ಷತಾನೆ ಮದುವೆಯಾಗಿತ್ತು. ಕೇಸು ಮುಚ್ಚಿಹೋಯ್ತು. ಅವರ ಹೆಂಡತಿ ಮಕ್ಕಳ ಗತಿಯೇನಾಗಬೇಕು ? ಅದರಿಂದ ಕೆಲವರು ಪುಟ್ಟ ಗಂಟು ಮಾಡಿಕೊಂಡರು. ಹೀಗಿದೆ ಅಧಿಕಾರ. ಆಮೇಲೆ ತೆರಕಣಾಂಬಿ ಸಂತೆ ದೊಡ್ಡ ಸಂತೆ, ಅಲ್ಲಿ ಲಕ್ಷಾಂತರ ರೂಪಾಯಿಗಳ ವ್ಯಾಪಾರ ನಡೆಯುವುದು, ಆ ಸಂತೆಯಲ್ಲಿ ಸಾವಿರಾರು ಜನರು ಸೇರುವರು. ಪಿಕ್‌ಪಾಕೆಟ್, ಕಳ್ಳತನ ಮುಂತಾದುವೆಲ್ಲಾ ಅಲ್ಲಿ ನಡೆಯುವುದು. ಅಲ್ಲಿ ಒಬ್ಬ ದಫೇದಾರ ಇದ್ದ. ಯಾವುದೋ ಸಿನೀಮಾ ವಿಚಾರ ನೆಪಮಾಡಿಕೊಂಡು ಅವನನ್ನು ಒಂದು ವರ್ಷದಲ್ಲಿ ೭ ಕಡೆಗೆ ವರ್ಗಮಾಡಿದ್ದಾರೆ. ಅವನು ಎಲ್ಲೂ ಇರುವುದಕ್ಕೆ ಬಿಟ್ಟಿಲ್ಲ. ವರ್ಗಮಾಡುವ ವಿಚಾರದಲ್ಲಿ ರೂಲ್ಸ್ ಮಾಡುವುದಾಗಿ ಹೇಳುತ್ತಾರೆ. ಅದು ಬರೀ ಪುಸ್ತಕದಲ್ಲಿದೆ. ಟೂರಿಂಗ್ ಟಾಕೀಸ್ ವ್ಯವಹಾರ. ನಮ್ಮ ಊರಿನಲ್ಲಿ ಒಂದು ಟೂರಿಂಗ್ ಟಾಕೀಸಿನ ಯಜಮಾನ ಲೈಸೆನ್ಸಿಗೆ ಡಿ ಸಿ ಗೆ ಅರ್ಜಿ ಹಾಕಿದ. ಡಿ ಸಿ ಲೈಸೆನ್ಸ್ ಕೊಟ್ಟರು. ಆದರೆ ಅಲ್ಲಿ ಪಾರ್ಟಿ ಇದೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಅಲ್ಲಿ ಪಾರ್ಟಿ ಇರುವುದರಿಂದ ಟಾಕೀಸಿಗೆ ಲೈಸೆನ್ಸ್ ಕೊಟ್ಟರೆ, ಅದರಿಂದ ಗಲಾಟೆಯಾದರೆ ಅದಕ್ಕೆ ಪೋಲೀಸಿನವರು ಜವಾಬ್ದಾರರಲ್ಲ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ಜವಾಬ್ದಾರರು ಆಗಬೇಕು ಎಂದು ಎಸ್ ಪಿ ಹೇಳಿದರು. ಇದು ನ್ಯಾಯವೇ ? ಅಲ್ಲಿನ ಎಸ್ ಪಿ ಮುಖ್ಯ ಮಂತ್ರಿಗಳ ಪಟ್ಟದ ಶಿಷ್ಯರು. ಆಮೇಲೆ ಟೂರಿಂಗ್ ಟಾಕೀಸ್ ಮುಚ್ಚಿದರು. ಆದರೆ ಪರ್ಮನೇಟ್ ಟಾಕೀಸ್ ಏಕೆ ಮುಚ್ಚಲಿಲ್ಲ ? ಯಾವುದೇ ಕಮ್ಯೂನಿಟಿ ಗಲಾಟೆ ಮಾಡಿದರೆ ಎಲ್ಲಾ ಮುಚ್ಚಬೇಕು. ಅದನ್ನು ಬಿಟ್ಟು ಟೂರಿಂಗ್ ಟಾಕೀಸ್ ಒಂದನ್ನೇ ಏಕೇ ಮುಚ್ಚಬೇಕು ? ಇದರಿಂದ ಜನರಿಗೆ ಎಷ್ಟು ಅನ್ಯಾಯವಾಗುವುದು ? ಓಟು ಅವರಿಗೆ ಕೊಟ್ಟಿರುವುದರಿಂದ ಯಾವುದೋ ಸ್ನೇಹಿತ ಹೇಳಿದ ಮಾತ್ರಕ್ಕೆ ಮಾಡಿಬಿಡುವುದೇ ?

ನಾವು ಚುನಾಯಿತ ಪ್ರತಿನಿಧಿಗಳು, ನಮಗೆ ಕೊಡಬೇಕಾದ ಮರ್ಯಾದೆ ಕೊಡಬೇಕಾದ್ದು ಧರ್ಮ ಎಂದು ನಾವು ತಿಳಿದುಕೊಂಡಿದ್ದೇವೆ. ದಸರ ಒಂದು ನಾಡಹಬ್ಬ, ಅದನ್ನು ಮಾಡುತ್ತೇವೆ, ಅದಕ್ಕೆ ಬೇಕಾದಷ್ಟು ಹಣ ಖರ್ಚುಮಾಡುತ್ತೇವೆ. ಅದನ್ನು ಮಾಡುವುದೇಕೆ ? ಅವರು, ಅವರ ಮನೆಯವರು, ಅವರ ಆಫೀಸರನ್ನು ಪಿ ಎ ಮುಂತಾದವರು ನೋಡಿಕೊಂಡು ಹೋಗಬೇಕೆಂದೇ ಅದನ್ನು ಮಾಡುವುದು ? ಒಂದು ಉದಾಹರಣೆ ಹೇಳುತ್ತೇನೆ. ನಾವು ಅಲ್ಲಿರುವುದರಿಂದ ಗೆಸ್ಟ್‌ಗಳು ಬಹಳ ಬಂದು ನಮ್ಮ ಮನೆ ಛತ್ರವಾಗುವುದು.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

4-00 P..M

ಬರ್ಮ ಬಾರ್ಡರಿನಲ್ಲಿ ನನ್ನ ತಂಗಿ, ಆಕೆಯ ಗಂಡ ಇದ್ದಾರೆ. ಅವರು ಅವರ ಮಕ್ಕಳು ಮತ್ತು ನಮ್ಮ ತಾಯಿ ಎಲ್ಲರೂ ಬಂದಿದ್ದು ಟಾರ್ಚ್‌ಲೈಟ್ ಪೆರೇಡ್ ನೋಡುವುದಕ್ಕೆ ಹೋದೆವು. ನಮಗೆಲ್ಲ ವಿ. ಐ. ಪಿ. ಪಾಸು ಬಂದಿತ್ತು. ಇವರೆಲ್ಲ ಹೇಳುವಂತೆ ನಾವು ಕೇರಾಫ್ ಫುಟ್‌ಪಾತ್ ಅಲ್ಲ. ನಾವೂ ಮನುಷ್ಯರು. ಪಾಸ್‌ಕೈಯಲ್ಲಿ ಹಿಡಿದುಕೊಂಡು ಹೋದೆವು. ಹೋಗುವಾಗ ಪೋಲೀಸರಿಗೆ ಪಾಸ್ ಇದೆ, ಹೋಗುತ್ತೇವೆಂದು ಹೇಳಿ ಗಲಾಟೆ ಮಾಡಿಕೊಂಡೇ ಹೋದೆವು. ಒಳಗೆ ಹೋದರೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಅಲ್ಲಿದ್ದ ಕುರ್ಚಿಗಳನ್ನು ಕಾದುಕೊಂಡು ನಿಂತಿದ್ದ, ಪೋಲೀಸ್ ಸೂಪರಿಂಟೆಂಡೆಂಟ್ ಸಹ ನಿಂತಿದ್ದರು. ನಾವೆಲ್ಲ ಕೆಳಗಡೆ ಕುಳಿತುಕೊಳ್ಳುತ್ತೇವೆ. ನಮಗೆ ಪ್ರೋಟೋಕೇಲ್ ಬೇಕಾಗಿಲ್ಲ. ವಯಸ್ಸಾದ ನಮ್ಮ ತಾಯಿ ಇದ್ದಾರೆ. ಅವರಿಗೆ ಕುರ್ಚಿ ಕೊಡಿ ಎಂದರೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ. ಎಸ್. ಪಿ. ಅಲ್ಲಿ ನಿಂತುಕೊಂಡೇ ಇದ್ದ. ನಮ್ಮ ಹತ್ತಿರ ವಿ. ಐ. ಪಿ. ಪಾಸಿದೆ. ಕುರ್ಚಿ ಕೊಡಿ ಎಂದರೆ ಕೊಡುವುದಿಲ್ಲ ವೆಂದರೆ ಕೊಡುವುದಿಲ್ಲವೆಂದು ಹೇಳಿದ. ಎಲ್ಲರ ಮನೆಯ ಮಕ್ಕಳೂ ಅಧಿಕಾರಿಗಳ ಮನೆಯ ಮಕ್ಕಳೂ ಅಲ್ಲಿ ಬಂದು ಕುಳಿತಿದ್ದರು. ಅವರೆಲ್ಲಾ ಕುರ್ಚಿಯ ಮೇಲೆಯೇ ಕುಳಿತುಕೊಂಡಿದ್ದರು. ಆದರೆ ಒಬ್ಬ ಮುದುಕಮ್ಮನಿಗೆ ಕುರ್ಚಿ ಇರಲಿಲ್ಲ. ಅಲ್ಲಿ ಎಸ್. ಪಿ. ಮತ್ತು ಸಬ್ ಇನ್‌ಸ್ಪೆಕ್ಟರ್ ನಿಂತುಕೊಂಡಿದ್ದರು. ಅವರ ಬಾಯಿಂದ ಚಕಾರವೂ ಬರಲಿಲ್ಲ. ನಾನು ಬಿ. ಎಲ್. ಗೌಡರನ್ನು ಕೇಳಿದಾಗ ಅವರು ತಮ್ಮ ಮಗುವನ್ನು ತೊಡೆಯ ಮೇಲೆ ಕೂಡಿಸಿಕೊಂಡು ನಮ್ಮ ತಾಯಿಯವರಿಗೆ ಸ್ಥಳ ಕೊಟ್ಟರು. ನಾನು ಬಂದು ಕೆಳಗಡೆ ಕುಳಿತುಕೊಂಡೆ. ವಿ. ಐ. ಪಿ. ಆಗಿ ಬರುವವರು ಎಂದರೆ ಯಾರು. ಅನಂತರ ಮುಖ್ಯ ಮಂತ್ರಿಯವರ ಹಿಂದೆ ಬಂದರು ನೋಡಿ, ಒಂದು ಸೈನ್ಯದ ಹಾಗೆ. ಬಂದವರಿಗೆಲ್ಲಾ ಕುರ್ಚಿಗಳನ್ನು ಎತ್ತಿ ಹಾಕಿ ಸ್ಥಳ ಮಾಡಿಕೊಟ್ಟರು. ಮುಖ್ಯ ಮಂತ್ರಿಗಳ ಪರ್ಸನಲ್ ಅಸಿಸ್ಟೆಂಟ್, ಮಕ್ಕಳು ಅವರ ನೆಂಟರು ಹೀಗೆ ಯಾರು ಯಾರೋ ಬಂದರು. ಅವರಿಗೆಲ್ಲ ಸ್ಥಳ ಮಾಡಿಕೊಟ್ಟರು ಮುಖ್ಯ ಮಂತ್ರಿಗಳ ಹಿಂದೆ ಬಟ್ಟೆ ಬರೆ, ಕೋಟು, ಸೂಟು ಕಾಲು ಚೀಲ ಇವನ್ನೆಲ್ಲಾ ಹಾಕಿಕೊಂಡು ಸೆಂಟ್ ಬಳಿದುಕೊಂಡು ಹೋದರೆ ವಿ. ಐ. ಪಿ. ಗಳು ಗೌನು ಹಾಕಿಕೊಂಡು ಹೋದರೆ ವಿ. ಐ. ಪಿ. ಗಳೇ ? ನಾವೂ ಅಲ್ಲವೋ ? ಯಾವ ಪ್ರೋಟೋಕೋಲ್ ರೂಲ್ಸ್ ಮಾಡಿಕೊಂಡಿದ್ದಾರೆ ? ಏತಕ್ಕೋಸ್ಕರ ಇಷ್ಟು ದುಡ್ಡು ಖರ್ಚಾಗುತ್ತ ಇರಬಹುದು ? ಅಲ್ಲಿನ ಎಸ್. ಪಿ. ಗೆ ನಾನು ಎಂ. ಎಲ್. ಎ. ಎಂಬುದು ಗೊತ್ತಿಲ್ಲವೇ ? ನನಗೋಸ್ಕರ ಕುರ್ಚಿಯನ್ನು ನಾನು ಕೇಳಲಿಲ್ಲ. ಒಬ್ಬ ಮುದುಕಮ್ಮನಿಗೆ ಸೀಟು ಕೊಡಿ ಎಂದರೆ ಇಲ್ಲ ಎಂದು ಹೇಳಬೇಕಾದರೆ ಎಷ್ಟು ಉದ್ಧಟತನ ? ನಾನು ಕೊಡುತ್ತಿರತಕ್ಕ ಕೋಟ್ಯಾಂತರ ರೂಪಾಯಿಗಳಿಂದ ಇವರು ರಾಜಕೀಯ ನಡೆಸುತ್ತಿದ್ದಾರೆ, ಇಲ್ಲದೆ ಹೋದರೆ ಅವರಿಗೆ ಏನೂ ಇಲ್ಲ ಎಂದೆಲ್ಲ ಹೇಳುತ್ತಾನೆ. ನಮ್ಮ ಊರಿನಲ್ಲಿ ಹೇಳುತ್ತಾರೆ, ಎಲ್ಲರೂ ಹೇಳುತ್ತಾರೆ. ಪೆರೇಡ್ ಮೈದಾನದಲ್ಲಿ ನಡೆದಿದ್ದು ಗೊತ್ತಾಗಿ ಐ. ಜಿ. ಪಿ. ಅವರು ಬಂದು ಅಪಾಲಜೈಸ್ ಮಾಡಿಕೊಂಡರು ಹೀಗಾದದ್ದು ಅನ್ಯಾಯ. ಗೊತ್ತಾಗಲಿಲ್ಲ. ಎಂದು ಅವರು ಹೇಳಿದರು. ಒಬ್ಬ ಚೋಟುದ್ದ ಎಸ್. ಪಿ. ಮಾಡಿದಂಥ ತಪ್ಪಿಗೆ ಐ. ಜಿ. ಪಿ. ಬಂದು ಅಪಾಲಜೈಸ್ ಮಾಡಿಕೊಳ್ಳಬೇಕಾಯಿತು. ಐ. ಜಿ. ಪಿ. ಒಳ್ಳೆಯವರು, ನಮ್ಮ ಹೋಂ ಸೆಕ್ರೆಟರಿಯವರೂ ಒಳ್ಳೆಯವರು ಎಂದು ನಮಗೆ ಗೊತ್ತು. ಈ ಕೆಲಸಕ್ಕೆ ಬಾರದ ಆಫೀಸರುಗಳು ಎಲ್ಲೆಲ್ಲೋ ತಿರುಗುತ್ತಾರೆ. ಇವರು ಹೇಳಿದ ಹಾಗೆ ನಾವು ಕೇರಾಫ್ ಫುಟ್‌ಪಾತ್ ಆಗಬೇಕಾಗಿದೆ.

ನಮ್ಮ ಪಕ್ಷದ ನಾಯಕರು ಮಂಡ್ಯ ಮತ್ತು ಗುಲ್ಬರ್ಗದಲ್ಲಿ ಏನಾಯಿತು ಎಂದು ಹೇಳಿದ್ದಾರೆ. ಆ ವಿಷಯಕ್ಕೆ ನಾನು ಹೋಗುವುದಿಲ್ಲ.

ಡಿವಿಜನಲ್ ಕಮಿಷನರ ಆಫೀಸು ವಿಷಯವಾಗಿ ಸ್ವಲ್ಪ ಹೇಳುತ್ತೇನೆ. ಡಿವಿಜನಲ್ ಕಮಿಷನರ ಆಫೀಸಿಗೆ ಹೋಗಿ ನಮ್ಮ ಬಿ. ಡಿ. ಒ. ಹೀಗಿದ್ದಾರೆ ಏನಾದರೂ ಮಾಡಿ ಸರಿ ಮಾಡಿಕೊಡಿ ಎಂದರೆ ನಮಗೆ ಏನೂ ಅಧಿಕಾರವಿಲ್ಲ. ನೀವು ಹೋಗಿ ನಾಡ ಗೌಡರನ್ನು ನೋಡಿ ಎಂದು ಹೇಳಿದರು. ತಹಸೀಲ್ದಾರರು ಈ ತರಹ ಇದ್ದಾರೆ ಎಂದು ಹೇಳಿದರೆ ನಮಗೆ ಗೊತ್ತಿಲ್ಲ. ರೆವೆನ್ಯೂ ಮಂತ್ರಿಗಳ ಹತ್ತಿರ ಹೋಗಿ ನೋಡಿ ಎಂದು ಹೇಳುತ್ತಾರೆ. ಹೀಗಾದರೆ ನಿಮ್ಮ ಡಿವಿಜನಲ್ ಕಮಿಷನರು ಏಕೆ ಇರಬೇಕು ? ಏಕೆ ಅವರಿಗೆ ಮತ್ತು ಅವರ ಸಿಬ್ಬಂದಿಗೆ ಇಷ್ಟು ದುಡ್ಡು ಖರ್ಚು ಮಾಡುತ್ತೀರಿ : ನೀವೇ ಎಲ್ಲ ಕೆಲಸವನ್ನೂ ಮಾಡುವಾಗ ಡಿವಿಜನಲ್ ಕಮಿಷನರ್ ಏಕೆ ಬೇಕು ? ಡೆಪ್ಯುಟಿ ಕಮಿಷನರು ಏಕೆ ಬೇಕು ? ಇವರಿಗಾಗಿ ಆಗುವ ಖರ್ಚನ್ನು ಬೇರೆ ಯಾವುದಕ್ಕಾದರೂ ಉಳಿಸಿಕೊಳ್ಳಿ.

ಇರಿಗೇಷನ್ ಅಡ್ಮಿನಿಸ್ಟ್ರೇಷನ್ ವಿಚಾರ ಸ್ವಲ್ಪ ಹೇಳುತ್ತೇನೆ. ನಮ್ಮಲ್ಲಿ ನಳೂರು ಅಮಾನಿಕೆರೆ ಎಂದು ಇದೆ. ಇರಿಗೇಷನ್ ಇಲಾಖೆಯಿಂದ ನಮ್ಮ ತಾಲ್ಲೂಕಿಗೆ ಶಾಪವಾಗಿದೆ. ಹಿಂದೆ ಮಾನ್ಯ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗಲೂ ಹಾಗೆಯೇ ಇತ್ತು. ಇವರು ಬಂದ ಮೇಲೂ ಹಾಗೆಯೇ ಇತ್ತು. ಮಾನ್ಯ ವೀರಣ್ಣ ಗೌಡರು—ಅವರ ಮನೆ ಚೆನ್ನಾಗಿರಬೇಕು. ಅವರು ತಣ್ಣಗೆ ಇರಬೇಕು—ನಮಗೆ ಸ್ವಲ್ಪ ಅನುಕೂಲ ಮಾಡಿ ಕೊಟ್ಟರು. ನಳೂರು ಅಮಾನಿಕೆರೆ ವಿಚಾರವಾಗಿ ಒಂದು ಮಾತು ಹೇಳುತ್ತೇನೆ. ಮೂರು ಜನ ಚೀಫ್ ಇಂಜಿನಿಯರುಗಳು ಅದನ್ನು ನೋಡಿದ್ದಾರೆ. ಶ್ರೀ ಬಸಣ್ಣನವರು ಚೀಫ್ ಇಂಜಿನಿಯರಾಗಿದ್ದಾಗ ಅಲ್ಲಿ ನೋಡಿ ಒಂದು ಅಣೆಕಟ್ಟು ಕಟ್ಟಿದರೆ ೪.೧೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅದು ತಯಾರಾಗಿ ೪೦೦ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ ಎಂದು ಹೇಳಿದರು. ಎರಡೂವರೆ ಲಕ್ಷ ರೂಪಾಯಿ ಖರ್ಚಾಗಿ, ಫೌಂಡೇಷನ್ ಆಗಿ, ಅಣೆಕಟ್ಟು ಅರ್ಧಮರ್ಧ ಆಯಿತು. ಆದರಿಂದ ಮುಳುಗಡೆಯಾಗುವ ಜಮೀನು ಕೇವಲ ೫ ಎಕರೆ ೩೭ ಕುಂಟೆ. ಹೀಗಿದ್ದರೂ ಕೆಲಸವನ್ನು ನಿಲ್ಲಿಸಿಬಿಟ್ಟರು. ಅಷ್ಟು ಹೊತ್ತಿಗೆ ಶ್ರೀ ಬಾಳೆಕುಂದ್ರಿ ಅವರು ಚೀಫ್ ಇಂಜಿನಿಯರಾಗಿ ಬಂದರು. ಅವರೂ ನೋಡಿ ಎಷ್ಟು ಪೊಟೆನ್‌ಷಿಯಲ್ ಇದೆ. ಅನ್ಯಾಯ ವಾಗಿ ಗುಂಡ್ಲುಪೇಟೆಗೆ ಇರುವ ಜೀವನದಿಯು ನೀರಿನ ಸೌಕರ್ಯ ಇಲ್ಲದಂತಾಗುತ್ತಿದೆ ಎಂದು ಅವರು ಅದನ್ನು ಸರ್ವೆ ಮಾಡಿಸಿದರು. ರೀಸರ್ವೆ ಮಾಡಿದನಂತರ ೭೪.೫ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ೫,೦೨೦ ಎಕರೆಗೆ ನೀರಾವರಿ ಸೌಲಭ್ಯ ಸಿಕ್ಕುತ್ತದೆ ಎಂದು ಒಂದು ಯೋಜನೆಯನ್ನು ತಯಾರು ಮಾಡಿದರು. ಇದು ಮಾನ್ಯ ದೊಡ್ಡಮೇಟಿ ಅವರ ಹತ್ತಿರ ಉಳಿದುಕೊಂಡಿತು. ಈಗ ಲಿಫ್ಟ್ ಇರಿಗೇಷನ್ ಮಾಡುತ್ತೇವೆಂದು ಹೊರಟಿದ್ದಾರೆ. ಇದಕ್ಕೆ ೧,೨೦,೦೦೦ ರೂಪಾಯಿ ಖರ್ಚಂತೆ. ೩೦೦ ಎಕರೆಗೆ ನೀರಾವರಿ ಯಾಗುತ್ತದಂತೆ. ೫೦೦೦ ಎಕರೆಗೆ ಅನುಕೂಲ ಮಾಡಿಕೊಡದೆ ೩೦೦ ಎಕರೆಗೆ ಅನುಕೂಲ ಮಾಡುತ್ತೇವೆಂದು ಹೊರಟಿದ್ದಾರೆ. ಇದರಲ್ಲಿ ಏನು ಮಾಡಿದ್ದಾರೆ. ಎನ್ನುವುದೇ ಇರುವಂಥ ಸ್ವಾರಸ್ಯ. ಮಂಗಳ ಪ್ರಾಜೆಕ್ಟ್ ಎಂದು ಮಂಜೂರು ಮಾಡಿದ್ದಾರೆ. ೧೪,೯೮,೦೦೦ ರೂಪಾಯಿ ವೆಚ್ಚದಲ್ಲಿ ಆಗುವ ಪ್ರಾಜೆಕ್ಟ್‌ನಿಂದ ಮುಳುಗಡೆಯಾಗುವ ಜಮೀನು ೨೦೦ ಎಕರೆ ೩೪ ಗುಂಟೆ ಅರಣ್ಯ ಭೂಮಿ. ಅರಣ್ಯ ಭೂಮಿ ಎಂದರೆ ಗೇಮ್ ಸಾಂಕ್ಚುಯರಿ ಎಂದು ಬಂಡೀಪುರ ಅರಣ್ಯದಲ್ಲಿ ಮೀಸಲಾಗಿಟ್ಟಿರುವ ಜಾಗ ಮುಳುಗಡೆಯಾಗುತ್ತದೆ. ಯಾರು ಬಂದು ನೋಡಿದರೂ ಇಂಡಿಯಾ ದೇಶದಲ್ಲೆಲ್ಲ ಅದು ಅತ್ಯುತ್ತಮವಾದ ಸಾಂಕ್ಚುಯರಿ ಎಂದು ಅದನ್ನು ನೋಡಿದವರೆಲ್ಲ ಹೇಳುತ್ತಾರೆ. ಇಂಥ ಪ್ರದೇಶದ ಮುಳುಗಡೆಯಾಗುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ಕಣಿವೆಯಲ್ಲಿ ಒಂದು ತೊಟ್ಟು ನೀರೂ ಇಲ್ಲ. ಕಂಟ್ರಾಕ್ಟರು ಅನೇಕ ಬಾವಿಗಳನ್ನು ತೋಡಿಸಿದ್ದಾರೆ. ಒಂದು ತೊಟ್ಟು ನೀರೂ ಕೆಲಸಕ್ಕೆ ಸಿಕ್ಕಿಲ್ಲ. ಗೇಮ್ ಸಾಂಕ್ಚುಯರಿ ಸುತ್ತಲೂ ಗ್ರೀನ್ ರೆವಲ್ಯೂಷನ್ ಮಾಡುತ್ತೇವೆಂದು ಹೊರಟಿದ್ದಾರೆ. ಅಲ್ಲಿ ನೀರು ಬಂದಾಗ ಬಿತ್ತ ಹಾಕಿದರೆ, ಆವಾಗ ಕಡವೆ ಏನಾದರೂ ನೀರು ಕುಡಿಯುವುದಕ್ಕೆ ಹೋದರೆ ಅದನ್ನು ಕೊಲ್ಲುವ ಹಾಗೆ ಇಲ್ಲ. ಕೊಲ್ಲದೆ ಹೋದರೆ ಬೆಳೆ ಕೈಗೆ ಸಿಕ್ಕುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಇವರು ಅಲ್ಲಿ ಕೆರೆ ಕಟ್ಟಿಸುವುದಕ್ಕೆ ಹೊರಟಿದ್ದಾರೆ. ಅಲ್ಲಿ ಕೆಲಸ ಮಾಡು ವುದಕ್ಕೆ ಸಹ ನೀರಿಲ್ಲದೆ ಇರುವುದರಿಂದ ಅಲ್ಲಿಗೆ ಚೀಫ್ ಇಂಜಿನಿಯರು ಹೋಗಿ, ಬರ ಬೇಸಿಗೆಯಲ್ಲಿ ವನ್ಯ ಮೃಗಗಳು ಕುಡಿಯಲು ನೀರು ಇರುವಂಥ ಕೊಳಕ್ಕೆ ಪೈಪ್‌ಗಳನ್ನು ಹಾಕಿ, ಎಂಟು ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಪೈಪ್‌ಲೈನ್ ಎಳಸಿಕೊಂಡು ಕೆಲಸ ಮಾಡುವುದಕ್ಕೆ ಹೊರಟದ್ದಾರೆ. ಎಲ್ಲಿಯಾದರೂ ಇಂಥ ವಿಚಾರವನ್ನು ಕೇಳಿದ್ದೀರಾ ?

ಚುನಾವಣೆಯಲ್ಲಿ ಓಟು ಕೊಡುವವರಿಗೋಸ್ಕರ ಜನರಲ್ ಅಡ್ಮಿನಿಸ್ಟ್ರೇಷನ್ ಇದೆಯೇ ? ಇಂಥ ಚೀಫ್ ಎಂಜಿನಿಯರರನ್ನು ಕೂಡಲೆ ಡಿಸ್‌ಮಿಸ್ ಮಾಡಬೇಕು. ಇಷ್ಟು ದುಡ್ಡು ಖರ್ಚು ಮಾಡಿ ಯಾವ ಪ್ರಾಜೆಕ್ ಮಾಡಿರುವುದು? ಇಬ್ಬರು ಚೀಫ್ ಎಂಜಿನಿಯರರನ್ನು ಡಿಸ್‌ಮಿಸ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಮಾಡಿದ ಮಂಗಲಾ ಟ್ಯಾಂಕ್ ಒಂದನ್ನು ಬಿಟ್ಟರೆ ಬೇರೆ ಯಾವುದು ಇಲ್ಲ ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದರು. ಅಲ್ಲಿಂದ ಊಟಕ್ಕೆ ಹೋದರು. ಮುಖ್ಯ ಮಂತ್ರಿಗಳ ವಿಚಾರದಲ್ಲಿ ಎಷ್ಟು ಗೌರವ ಇದೆ, ಅವರು ನಮ್ಮನ್ನು ಹೇಗೆ ಟ್ರೀಟ್ ಮಾಡುತ್ತಾರೆ ಹೇಳುತ್ತೇನೆ. ಅವರ ಸೆಕ್ರರಿಯಟ್ಟಿನಿಂದ ನನಗೆ ಒಂದು ಟೂರ್ ಪ್ರೋಗ್ರಾಂ ಕಾಪಿ ಬಂದಿತ್ತು. ಅವರು ಕುಬ್ಬಳ್ಳಿ ಮಾರ್ಗವಾಗಿ ಬರುತ್ತಾರೆ ಎಂದು ಗೊತ್ತಾಯಿತು. ಅವರಿಗೆ ಮರ್ಯಾದೆ ಮಾಡಬೇಕು ಎಂದು ಪಂಚಾಯತಿಯವರು ನೂರಾರು ಜನರು ಹಾರ ಹಣ್ಣು ಇಟ್ಟುಕೊಂಡು ಕುಬ್ಬಳ್ಳಿಯಲ್ಲಿ ನಿಂತುಕೊಂಡಿದ್ದರು. ಆದರೆ ಮುಖ್ಯ ಮಂತ್ರಿಗಳ ಕಾರು ಪಂಚಾಯತಿಯ ಹತ್ತಿರ ಜನ ನಿಂತ ಕಡೇ ಕಾರು ನಿಲ್ಲಿಸದೇ ಬಂದು ಬಿಡುವುದು ಅಂದರೆ ಏನು? ಇದು ಡೆಮಾಕ್ರಸಿಯೇ ಡೆಮಾಕ್ರಸಿ ಬಾಯಿ ಮಾತಿನಲ್ಲಿ ಅಷ್ಟೇ ಇದೆ. ಮರ್ಯಾದೆ ಕೊಡಬೇಕು ಮರ್ಯಾದೆ ತೆಗೆದುಕೊಳ್ಳಬೇಕು. ಜನ ಹಾರ ಹಾಕಿ ಮರ್ಯಾದೆ ಮಾಡಬೇಕೆಂದು ನಿಂತುಕೊಂಡ ಕಡೆ ಒಂದು ಅರ್ಜಿ ಕೊಡಬೇಕು ಎಂದು ನಿಂತುಕೊಂಡ ಜನರನು ವಿಚಾರಿಸದೇ ಹೋದರೆ ಇದೆಂಥ ಅಕ್ರಮ, ಇದೆಂಥ ಮಹಾ ಪಾಪ ಇದಕ್ಕಾಗಿ ಎಚ್ಚರಿಕೆ ಕೊಡಬಯಸು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ತ್ತೇನೆ. ಇನ್ನೂ ಹೇಳುವುದು ಬೇಕಾದಷ್ಟು ಇದೆ. ಟ್ರ್ಯಾನ್ಸಫರ್ ಅಕ್ರಮಗಳಿವೆ ದುರವ್ಯವಹಾರಗಳಿವೆ, ಇವತ್ತು ನನಗೆ ಮೈಯಲ್ಲಿ ಚೆನ್ನಾಗಿಲ್ಲ. ಆದುದರಿಂದ ಇನ್ನೊಂದು ದಿನ ಅವಕಾಶ ತೆಗೆದುಕೊಂಡು ಹೇಳು ತ್ತೇನೆ. ನನಗೆ ಮಾತಾಡಲು ಅವಕಾಶ ಕೊಟ್ಟದಕ್ಕೆ ಅಧ್ಯಕ್ಷರ ಆಭಾರ ಮನ್ನಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್, (ಮಲ್ಲೇಶ್ವರಂ) :— ಮಾನ್ಯ ಸಭಾಪತಿಗಳೇ, ಸಾಮಾನ್ಯ ಆಡಳಿತ, ಪೋಲೀಸ್, ಜೈಲು ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತು ಗಳನ್ನು ಆಡಲು ಇಚ್ಛಿಸುತ್ತೇನೆ ಮೊದಲು ಜೈಲು ಬಗ್ಗೆ ಮಾತನಾಡುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಾನು ಹಲವಾರು ಬಾರಿ ಜೈಲಿಗೆ ಹೋಗಿ ಬಂದಿದ್ದೇನೆ. ಈಗಲೂ ಹೋಗುತ್ತಾ ಬರುತ್ತಾ ಇದ್ದೇನೆ ನಾನು ಜೈಲಿಗೆ ಹೋಗಿರುವುದು ಅನೇಕ ಬಾರಿ ರಾಜಕೀಯ ಕೈದಿಯಾಗಿ ಕಾರ್ಮಿಕರ ಹೋರಾಟ ಬಂದಾಗ್ಗೆ ನನ್ನನ್ನು ಸೆಂಟ್ರಲ್ ಜೈಲಿನಲ್ಲಿ ಹಾಕಿದ್ದಾರೆ. ಜೈಲಿನಲ್ಲಿ ಸರಿಯಾಗಿ ಊಟ ಹಾಕಬೇಕು ಆದರೆ ಕಲ್ಲು ಬೆರಸಿ, ತೌಡು ಬೆರಸಿ, ನೋಡಲಿಕ್ಕೆ ಆಗದಷ್ಟು ತಿನುವುದಕ್ಕೆ ಆಗದಷ್ಟು ಇರತಕ್ಕಂಥ ಚಪಾತಿ ಕೊಡುತ್ತಾರೆ. ಅದರಲ್ಲಿ ಏನೇನು ಬೆರಸಿರುತ್ತಾರೋ ನನಗೆ ಗೊತ್ತಿಲ್ಲ. ಮನುಷ್ಯರು ಬದುಕ ಬೇಕು ಎಂಬ ದೃಷ್ಟಿಯಿಂದಾದರೂ ಸರಿಯಾದ ಊಟ ಕೈದಿಗಳಿಗೆ ಕೊಡಬೇಕು ಎಂದು ಮಾತ್ರ ಹೇಳಲು ಇಚ್ಛಿಸುತ್ತೇನೆ.

ಎರಡನೇಯದಾಗಿ ಅನೇಕ ವರ್ಷಗಳಿಂದ ಬಂದೀಖಾನೆಯಲ್ಲಿ ಇರುವ ಕೈದಿಗಳಿಗೆ ರೆಮಿಷನ್ ಕೊಡು ವುದಕ್ಕೆ ಕಷ್ಟವಾಗಿದೆ. ಶಿಫಾರಸ್ಸು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದರೂ ಕೂಡ ಅದನ್ನು ಇಟ್ಟುಕೊಂಡು ಬಿಡುತ್ತಾರೆ. ಇದರಿಂದ ಬಹಳ ತೊಂದರೆಯಾಗಿದೆ. ರೆಮಿಷನ್ ಬರಬಹುದು ಬಿಡುಗಡೆಯಾಗಬಹುದು ಎಂದು ದಾರೀ ಕಾಯುವಾಗ ಅದು ಬಾರದೆ ಹೋದರೆ ತೀರ್ಮಾನ ಆಗದೇ ಇದ್ದರೆ ಮನುಷ್ಯನಿಗೆ ಬೇಜಾರಾಗುತ್ತದೆ. ಆದುದರಿಂದ ರೆಮಿಷನ್ ಕೊಡುವುದನ್ನು ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು.

ಮೂರನೇಯದಾಗಿ ಜೈಲು ವಾರ್ಡರುಗಳನ್ನು ಪೋಲೀಸರ ಜೊತೆಗೆ ಸೇರಿಸಿಲ್ಲ. ಜೈಲು ವಾರ್ಡರರಿಗೆ ಖಾದಿ ಬಟ್ಟೆಯ ಖಾಕಿ ಯುನಿಫಾರ್ಮ ಕೊಡುತ್ತಾರೆ. ಖಾದಿ ಬಟ್ಟೆ ಬೇಡ ಪೋಲೀಸರಿಗೆ ಕೊಡುವ ಹಾಗೆ ಖಾಕಿ ಬಟ್ಟೆ ಕೊಡಿ ಎಂದು ಕೇಳುತ್ತಾರೆ. ಈ ಖಾದಿ ಬಟ್ಟೆಗೆ ಗ್ರೀಜ ಇರುವುದಿಲ್ಲ ನೋಡುವುದಕ್ಕೆ ಅಸಹ್ಯ ವಾಗಿರುತ್ತದೆ, ಈ ಬಟ್ಟೆಯಲ್ಲಿ ಗ್ಯಾಂಗ್ ಮನ್ ಕಂಡ ಹಾಗೆ ಕಾಣುತ್ತಾರೆ ಮರ್ಯಾದೆ ಬರುವುದಿಲ್ಲಆದುದ ರಿಂದ ಮರ್ಯಾದೆ ಬರುವ ಉಡುಪು ಸರಿಯಾದ ಉಡುಪು ಇವರಿಗೆ ಕೊಡ ಬೇಕು ಎಂದು ಸೂಚಿಸುತ್ತೇನೆ. ಜೈಲು ವಾರ್ಡರುಗಳಿಗೆ ವಾಸ ಮಾಡಲು ಮನೆ ಕಟ್ಟಿಸಿ ಕೊಡಬೇಕು. ಪೋಲೀಸರಿಗೆ ಕ್ವಾರ್ಟರ್ಸ್ ಕೊಡುವ ಹಾಗೆ ಅದೇ ರೀತಿ ಇವರಿಗೂ ಕಟ್ಟಿಸಿ ಕೊಡಬೇಕು ಎಂದು ಕೇಳುತ್ತೇನೆ.

ನಾಲ್ಕನೇಯದಾಗಿ ಜೈಲುಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇದರಿಂದ ಲಾಭವಾಗುತ್ತಿದೆ. ಜೈಲಿನಲ್ಲಿರುವ ಕೈದಿಗಳಲ್ಲಿ ಅನೇಕರು ಕುಶಲ ಕಾರ್ಮಿಕರಾಗಿದ್ದಾರೆ. ಅವರು ಮಾಡುವ ಕೆಲಸಕ್ಕೆ ದಿನಕ್ಕೆ ನಾಲ್ಕಾಣೆ ಎಂಟಾಣೆ ಕೂಲಿ ಕೊಡುತ್ತಾರೆ. ಆದರೆ ಕೂಲಿಯಿಂದ ಬಂದಂಥ ಈ ಹಣವನ್ನು ಮಂತ್ರಿಗಳು ವಿಜಿಟ್ಟಿಗೆ ಬಂದರೆ ಇರುವ ಫಂಕ್ಷನ್ನಿಗೆ ಖರ್ಚು ಮಾಡುತ್ತಾರೆ. ಈ ಕೂಲಿ ದುಡ್ಡನ್ನು ಇಂಥ ಒಂದು ಸಮಾ ರಂಭಕ್ಕೆ ಖರ್ಚು ಮಾಡಲು ಕಸಿದುಕೊಳ್ಳುತ್ತಾರೆ. ಇದು ನ್ಯಾಯವಲ್ಲ. ಅವರಿಗೆ ವೇತನವನ್ನು ಜಾಸ್ತಿ ಕೊಡಬೇಕು ಹಾಗು ಅದನ್ನು ಕಸಿದುಕೊಳ್ಳುವುದನ್ನು ನಿಲ್ಲಿಸಬೇಕು ಅಂದರೆ ಅವರ ಅಭಿವೃದ್ಧಿಯಾಗುತ್ತದೆ.

ಇನ್ನು ಪೋಲೀಸ್ ಆಡಳಿತ ವಿಷಯ ಹೇಳುತ್ತೇನೆ.

ಇನ್ನು ನಾನು ಪೋಲೀಸ್ ಅಧಿಕಾರಿಗಳ ವಿಷಯ ಹಾಗೂ ಪೋಲೀಸ್ ಆಡಳಿತದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀಮತಿ ನಾಗರತ್ನಮ್ಮನವರೂ ಮತ್ತು ಶ್ರೀ ಸಿದ್ಧವೀರಪ್ಪನವರೂ ಈಗಾಗಲೆ ವಿವರವಾಗಿ ಬೇಕಾದಷ್ಟು ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಈ ಮಾನ್ಯ ಸದಸ್ಯರುಗಳು ಇದುವರೆವಿಗೂ ಹೀಗೆ ಎಂದೂ ಮಾತನಾಡಿರಲಿಲ್ಲ. ಆದರೆ ಅವರು ಇತ್ತೀಚೆಗೆ ಹೀಗೆ ಮಾತನಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ನಾನು ತಿಳಿದಿರುವ ಮಟ್ಟಿಗೂ ಪೋಲೀಸಿನವರ ಮೊದಲನೆಯ ಕರ್ತವ್ಯ ಎಂದರೆ ಕಳ್ಳರನ್ನು ಹಿಡಿಯುವುದು, ರಾಜ್ಯದಲ್ಲಿ ಲಾ ಅಂಡ್ ಆರ್ಡರನ್ನು ಕಾಪಾಡುವುದು ಮತ್ತು ಸಮಾಜದಲ್ಲಿರ ತಕ್ಕ ಜನರಿಗೆ ನ್ಯಾಯ ದೊರಕಿಸಿಕೊಡುವುದು ಎಂದು ತಿಳಿದಿದ್ದೆ. ಆದರೆ ನಮ್ಮ ರಾಜ್ಯದಲ್ಲಿರತಕ್ಕ ಪೋಲೀಸಿನವರಿಗೆ ಆ ವಿಚಾರಗಳೇ ಗೊತ್ತಿದ ಂತೆ ಕಾಣುತ್ತಿಲ್ಲ. ಅವರೇನಿದ್ದರೂ ಇಲ್ಲಿರುವುದು ಆಡಳಿತ ಪಕ್ಷವನ್ನು ಬೆಳೆಸುವುದಕ್ಕೆ ಮಾತ್ರ ಮತ್ತು ವಿರೋಧ ಪಕ್ಷಗಳನ್ನು ಅಳಿಸುವುದಕ್ಕೆಂದು ಈಗಾಗಲೆ ಶ್ರೀ ಸಿದ್ಧ. ವೀರಪ್ಪನವರು ಹೇಳಿದ್ದಾರೆ. ಈ ದಿವಸ ನಮ್ಮ ರಾಜ್ಯದಲ್ಲಿ ಯಾರಾದರೂ ಇಂದಿರಾ ಗಾಂಧಿಕೀ ಜೈ ಎಂದರೆ

ಅವರನ್ನೂ ಕೂಡ ಹಿಡಿದು ಜೈಲಿಗೆ ಹಾಕುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಇಂಡಿಕೇಟಿಗೂ ಸಿಂಡಿಕೇಟಿಗೂ ಜಗಳವಾಗಿರುವುದೇ ಆಗಿದೆ. ಇನ್ನು ನಮ್ಮ ಪೋಲೀಸಿನವರಿಗೆ ಕಮ್ಯುನಿಸ್ಟರನ್ನು ಕಂಡರೆ ಇಲ್ಲದ ಕೋಪ ಅಷ್ಟೇ ಅಲ್ಲ ಅವರ ಪಕ್ಷಕ್ಕೆ ಸೇರದೆ ಇದ್ದರೂ ಅವರ ಜೊತೆಯಲ್ಲಿರತಕ್ಕ ಇತರೇ ಜನರ ಬಗ್ಗೆಯೂ ಬಹಳ ಕೋಪ, ಅವರ ಮೇಲೆ ಯಾವಾಗಲೂ ವಕ್ರದೃಷ್ಟಿಯೇ ? ಈ ವಿಚಾರದಲ್ಲಿ ಪೋಲೀಸಿನವರು ಜನರಿಗೆ ಏನೇನು ಕಿರುಕೂಳ ಕೊಡುತ್ತಿದ್ದಾರೆಂಬ ಬಗ್ಗೆ ನನಗೆ ಅನೇಕ ಕಾಗದ ಪತ್ರಗಳು ಬಂದಿವೆ. ಯಾರೋ ಒಬ್ಬ ಬಡ ಮೇಷ್ಟ್ರರ ಮೇಲೆ ಬಡ ಕಾರ್ಮಿಕರ ಮೇಲೆ ಇವರ ದಬ್ಬಾಳಿಕೆ. ಆದರೆ ಇದಕ್ಕೆ ಎರಡೇ ಎರಡು ನಿದರ್ಶನಗಳನ್ನು ಕೊಡಲಿಚ್ಛಿಸುತ್ತೇನೆ. ಕಳೆದ ಡಿಸೆಂಬರ್ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಎರಡು ಮೂರು ಕಾರ್ಮಿಕ ಮುಷ್ಕರಗಳು ಒಂದು ಕಿರ್ಲೋಸ್ಕರ್ ಕಂಪೆನಿಯ ಕಾರ್ಮಿಕರದು ಇನ್ನೊಂದು ಬಿ.ಇ.ಎಲ್ ದ್ದು, ಈ ಕಾರ್ಮಿಕರ ಬಗ್ಗೆ ಪೋಲೀಸಿನವರು ಹೇಗೆ ವರ್ತಿಸಿದ್ದಾರೆಂಬುದನ್ನು ಕೇಳಿದರೆ ಕಣ್ಣಿನಲ್ಲಿ ನೀರು ಬರುತ್ತೆ. ಇದೇ ರೀತಿಯಾಗಿ ಆ ಎಚ್. ಎಂ. ಟಿ. ಕಾರ್ಮಿಕರ ಬಗ್ಗೆ ಕೂಡ ವರ್ತಿಸಿದ್ದಾರೆ. ಅದರಲ್ಲಿ ಬಹಳ ಯಾತನೆಗೊಳಪಟ್ಟವರೆಂದರೆ ಹನುಮಂತ, ಶೇಷಾದ್ರಿ. ಇವರಿಗೆ ಕೊಟ್ಟ ಯಾತನೆಯನ್ನು ಕೇಳಿದರೆ ನಮಗೆ ಕರಳು ಕಿತ್ತು ಬರುತ್ತಿದೆ. ನಿಜ, ಅವರು ಮುಷ್ಕರ ಮಾಡಿದರು. ಅವರ ಮೇಲೆ ಕೇಸ್ ಹಾಕಲಿ ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಅದನ್ನು ಬಿಟ್ಟು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಲಾಕಪ್ಪಿನಲ್ಲಿ ಹಾಕಿ ಲಾಠಿಗಳಿಂದ ಹೊಡೆಯುವುದು, ಪಿನ್ನುಗಳಿಂದ ಚುಚ್ಚುವುದು ಮತ್ತು ಕಾಲಿನಿಂದ ಒದೆಯುವುದು ಇದು ಸರಿಯಾದ್ದಲ್ಲ. ನಾನು ಈ ಪೈಕಿ ಆಗಲೇ ಹೇಳಿದಂತೆ ಹನುಮಂತ ಶೇಷಾದ್ರಿ ಮತ್ತು ಸುಬ್ರಹ್ಮಣ್ಯ ಇವರನ್ನು ಖುದ್ದಾಗಿ ಕರೆದುಕೊಂಡು ಬಂದು ಮುಖ್ಯಮಂತ್ರಿಗಳಿಗೆ ಅವರ ಛೇಂಬರಿನಲ್ಲೆ ತೋರಿಸಿ ಅವರ ಬೆನ್ನುಗಳ ಮೇಲೆ ಬರೆಗಳು ಬಂದಿದ್ದುದನ್ನು ತೋರಿಸಿದ್ದೇನೆ. ಆದರೆ ಹೊರಗಡೆಯಲ್ಲಿ ಕಾರ್ಮಿಕರು ನಮ್ಮ ದೇಶದ ಬೆನ್ನೆಲುಬು ಎಂದು ಬಾಯಲ್ಲಿ ಮಂತ್ರಿಗಳು ಹೇಳುತ್ತಿರುವುದು ಶೋಚನೀಯ. ಆ ದಿವಸ ಇನ್ನೂ ೧೩ ಜನರಿಗೆ ಹಾಗೆ ಹೊಡೆದಿದ್ದಾರೆ. ಅಲ್ಲಿ ಬರಿ ಹೊಡೆಯುವುದು ಒಂದಲ್ಲದೆ ಆ ಕಾರ್ಮಿಕರಿಗೆ ಓಹೋ ನಿಮಗೆ ಆ ಎಂ. ಎಸ್. ಕೃಷ್ಣ, ಬೇಕೋ ನಿಮಗೆ ಸಂಘ ಸಂಸ್ಥೆಗಳು ಬೇಕೋ ? ನಿಮಗೆ ಜಿಂದಾಬಾದ್ ಬೇಕೋ ! ಎಂದು ಮಾನಾಹೀನವಾಗಿ ಮಾತುಗಳನ್ನು ಬೇರೆ ಆಡುವುದು ಯಾವ ನ್ಯಾಯ ? ಅಂತೂ ನಮ್ಮ ಪೋಲೀಸಿನವರು ಜನರ ಬಗ್ಗೆ ನರರಾಕ್ಷಸರಂತೆ ವರ್ತಿಸುತ್ತಿದ್ದಾರೆ. ನಾನು ಹೇಳಿದಂಥ ನಿದರ್ಶನಗಳು ಆ ಭಾರತ್ ಎಲೆಕ್ಟ್ರಾನಿಕ್ಸ್ ಹೋರಾಟ ನಡೆಸಿದಾಗಲೂ ಕಂಡುಬಂದಿವೆ. ಇದೇ ರೀತಿ ಪೋಲೀಸರು ದೌರ್ಜನ್ಯದಿಂದ ವರ್ತಿಸಿದ್ದಾರೆ. ಇಂಥ ದೌರ್ಜನ್ಯವರ್ತನೆಯಲ್ಲಿ ತೊಡಗಿರತಕ್ಕವರು ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ನಿನವರು, ರಾಜಾಜಿನಗರ ಮತ್ತು ಯಶವಂತಪುರ ಪೋಲೀಸ್ ಸ್ಟೇಷನ್ನಿನವರು, ಅವರು ಈ ಅಕ್ರಮ ನಡವಳಿಕೆಯಲ್ಲಿ ತೊಡಗಿದ್ದಾರೆ. ಆದ್ದರಿಂದ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿ, ಅವರನ್ನು ಅವರು ಮಾಡತಕ್ಕ ದುಷ್ಕೃತ್ಯಕ್ಕೆ ಡಿಸ್‌ಮಿಸ್ ಮಾಡಿ ಎಂತಲೇ ಹೇಳಬೇಕಾಗುತ್ತದೆ, ಅದು ಬೇಡ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿ ಎಂದರೆ ಅದನ್ನೂ ಕೂಡ ಮಾಡುತ್ತಿಲ್ಲ. ಅವರಲ್ಲಿ ಈ ದೌರ್ಜನ್ಯವೊಂದೇ ಅಲ್ಲದೆ ಲಂಚಗೋಳಿತನ ಬೇರೆ ವಿಪರೀತವಾಗಿದೆ. ಈ ವಿಚಾರದಲ್ಲಿ ನಾವು ಮೇಲಧಿಕಾರಿಗಳಿಗೆ ದೂರನ್ನು ಕೊಟ್ಟರೆ ಅಂಥವರು ಯಾರೂ ಅಲ್ಲಿಲ್ಲ ಎಂದು ಹೇಳುತ್ತಿದ್ದಾರೆ. ಇನ್ನು ಅಕ್ರಮವಾಗಿ ಪೋಲೀಸ್ ಸ್ಟೇಷನ್ನಿಗೆ ಜನರನ್ನು ಎಳೆದುಕೊಂಡು ಹೋಗತಕ್ಕ ಬಗ್ಗೆ ನಾವೇನಾದರೂ ಆ ಇನ್‌ಸ್ಪೆಕ್ಟರುಗಳಿಗೆ ಫೋನ್ ಮಾಡಿ ಇಂಥವನು ಈಗ ನಿಮ್ಮ ಸ್ಟೇಷನ್ನಿನಲ್ಲಿ ಇಟ್ಟು ಕೊಂಡಿದ್ದೀರಲ್ಲ ಅವನ ಮೇಲೆ ಕೇಸೇನಿದೆ ಎಂದು ಕೇಳಿದರೆ ಅಂಥ ವ್ಯಕ್ತಿ ಅಲ್ಲಿಲ್ಲ ಎಂತಲೇ ಹೇಳಿಬಿಡುತ್ತಾರೆ. ಹಾಗೆ ಹೇಳುವಂತೆ ಅವರಿಗೆ ಮೇಲಿನ ಅಧಿಕಾರಿಗಳಿಂದ ಆಜ್ಞೆಯಾಗಿರುತ್ತದೆ. ಹೀಗೆ ಅವರು ಇರುವುದು ಕೇವಲ ಜನರನ್ನು ನಾಶಮಾಡುವುದಕ್ಕಾಗೀ ಎಂದು ನಮಗೆ ಮನದಟ್ಟಾಗಿದೆ. ಹೀಗೆ ಪೋಲೀಸಿನವರ ದೌರ್ಜನ್ಯ ಕೇವಲ ಕಾರ್ಮಿಕ ವರ್ಗವೊಂದರ ಮೇಲೆ ಅಲ್ಲ. ಪತ್ರಿಕಾ ಕರ್ತರ ಮೇಲೂ ಇದೆ. ರಣಭೇರಿ ಎಂಬ ಒಂದು ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಸಾದ್ ಎನ್ನತಕ್ಕವರು ತಮ್ಮ ಪತ್ರಿಕೆಯಲ್ಲಿ ಮಧುಗಿರಿ ಪ್ರಕರಣದಲ್ಲಿ ಪೋಲೀಸರು ಬಹಳ ಕ್ರೂರವಾದ ರೀತಿಯಲ್ಲಿ ವರ್ತಿಸಿದ್ದಾರೆ ಎಂದು ಲೇಖನ ಬರೆದಿದ್ದಾರೆಂದೂ ಮತ್ತು ಮುಖ್ಯಮಂತ್ರಿಗಳ ಬಗ್ಗೆ ಟೀಕೆ ಮಾಡಿದ್ದಾರೆಂದೂ, ಆತನ ಮೇಲೆ ಕಣ್ಣಿಟ್ಟು ಆತನ ಮೇಲೆ ಕ್ರಮ ಕೈಗೊಳ್ಳತಕ್ಕ ಬಗ್ಗೆ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಅವರಿಗೆ ಬರೆದಿದ್ದಾಗ ಅವರು ಆ ಪತ್ರಿಕೆಯ ಮಾಲೀಕರ ಬಗ್ಗೆ ಕ್ರಮ ಕೈಗೊಳ್ಳಲು ಯಾವ ಕಾರಣಗಳೂ ಇಲ್ಲ ಒಂದು ಪೋಲೀಸಿನವರಿಗೂ ಮತ್ತು ಸರ್ಕಾರದ ಮುಖಕ್ಕೂ ಮಸೀ ಬಳಿಯತಕ್ಕ ರೀತಿಯಲ್ಲಿ ರಿಪೋರ್ಟನ್ನು ಕಳುಹಿಸಿದ್ದಾರೆ. ಅದು ನಮ್ಮ ಸರ್ಕಾರಕ್ಕೆ ೨೦ನೇ ಫೆಬ್ರವರಿ ೧೯೭೦. ರಲ್ಲಿ ಬಂದಿರುತ್ತೆ. ಅವರು ಏನೇ ಹೇಳಿರಲಿ – ಯಾವಾಗಲೂ ಆ ಮಾರಿಯ ಕಣ್ಣು ಹೋತನ ಮೇಲೆ – ಎಂದು ಹೇಳುವಂತೆ ಪೋಲೀಸಿನವರ ಕಣ್ಣು ಯಾವಾಗ್ಲೂ ಕಾರ್ಮಿಕರ ಬಗ್ಗೆಯೇ ಇರುತ್ತದೆ.

" Murder by Police in the Police Station. Police are responsible for thefts and burglaries-nobody enquired into this.

(ಶ್ರೀ ಎಂ. ಎಸ್. ಕೃಷ್ಣನ್)

"Murder of autorickshaw driver Munichandra in Vyalikaval Police Station"

Murder of Venkatesh in Magadi Police Station.

ಮುಕ್ಕಾಲುಮೂರುವೀಸೆ ಪಾಲು ಆ ಮುನಿಚಂದ್ರನ ವಿಷಯ ನನಗೇ ಚೆನ್ನಾಗಿ ಗೊತ್ತಿದೆ. ಅಂತೂ ನಾವು ನಮ್ಮ ಪೋಲೀಸಿನವರ ಮನೋಭಾವವನ್ನು ಬದಲಾವಣೆ ಮಾಡಬೇಕಾದ್ದು ಅತ್ಯಗತ್ಯ. ನಮ್ಮಲ್ಲಿ ಸರ್ಕಾರದವರು ಈ ಇಲಾಖೆಗೆ ರೌಡಿಗಳನ್ನೆ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಅಂಥವರಿಗೆ ದೇಶದ ಲಾ ಅಂಡ್ ಆರ್ಡರ್ ವಿಚಾರದ ಅರಿವು ಎಲ್ಲಿಂದ ಬರಬೇಕು ?

ಶ್ರೀ ಐ. ಸೋಮಶೇಖರಪ್ಪ :— ಬಂಗಾಳದಲ್ಲಿರತಕ್ಕ ಮತ್ತು ಇಲ್ಲಿರತಕ್ಕ ಪೋಲೀಸ್ ಎರಡನ್ನೂ ಹೋಲಿಕೆ ಮಾಡಿ ನೀವು ಮಾತನಾಡುತ್ತಿದ್ದೀರಾ ? ಆ ಬಂಗಾಳ ಪರಿಸ್ಥಿತಿಯು ಇಲ್ಲಿಗೂ ಬರಲಿ ಎಂಬುದು ನಿಮ್ಮ ಅಭಿಪ್ರಾಯವೋ ?

ಶ್ರೀ ಎಂ. ಎಸ್. ಕೃಷ್ಣನ್ ;— ತಪ್ಪುಮಾಡಿದವರನ್ನು ಕೇರಳದಲ್ಲೂ ಹೊಡೆಯುವುದಿಲ್ಲ ಎಲ್ಲಿಯೂ ಹೊಡೆಯುವುದಿಲ್ಲ. ಅವರ ಮೇಲೆ ಕೇಸನ್ನು ಹಾಕುತ್ತಾರೆ. ಆದರೆ ಆ ಬಂಗಾಳದಲ್ಲಿದ್ದಂತೆ ಇಲ್ಲಿಯೂ ಆ ಯುನೈಟೆಡ್ ಫ್ರಂಟ್ ಆಡಳಿತಕ್ಕೆ ಬರಲಿ ಆಗ ನಾನು ನಿಮಗೆ ತೋರಿಸುತ್ತೇನೆ, ಆಗ ನಿಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದು.

4-30 P.M.

ಆದುದರಿಂದ ನಾನು ಈಗ ಇಷ್ಟು ಮಾತ್ರ ಹೇಳುತ್ತೇನೆ. ಪೋಲೀಸ್ ಡಿಪಾರ್ಟ್‌ಮೆಂಟ್ ವಿಷಯವಾಗಿ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಪೋಲೀಸ್ ಆಡ್ಮಿನಿಸ್ಟ್ರೇಷನ್ ಬಗ್ಗೆ ಈ ಪುಸ್ತಕದಲ್ಲಿ ಚೆನ್ನಾಗಿ ಬರೆದಿದ್ದಾರೆ. ಅದನ್ನು ಈಗ ಓದುತ್ತೇನೆ. ಅದು ಈರೀತಿ ಇದೆ—
This is a book called "Police and Community Relations:"

> "The Police are a social institution concerned with social problems. They are the agency around which the community often rallies in times of tension and emergency. They cannot respond by force alone. They must have other means of developing and sustaining civic peace, wihth greater emphasis than in the past upon preventative policing, i.e., programmes aimed at anticipating and heading of social conflict. and causes of which are so intimately related to the causes of crime and delinquency. Crime prevention is generally recognized as an important police function. But the Police can do little without community co-operation and assistance. The Police must take the initiative and show the way in effect, to assist the community to meet its responsibility, and at the same time, hopefully to impove Police community relations. If the police fail in providing such leadership, as has been the case too often in the past, the community tends to blame the Police cry out defensively at such scapegoating, but they have only themselves to blame for the situation."

ಕೊನೆಯದಾಗಿ ಜಿ.ಎ.ಡಿ. ವಿಚಾರವಾಗಿ ಒಂದು ವಿಷಯ ಮಾತ್ರ ಹೇಳುತ್ತೇನೆ. ತುಕೋಳ್ ಆಯೋಗದ ಶಿಫಾರಸುಗಳನ್ನು ಕೆಲವು ಬದಲಾವಣೆ ಮಾಡಿದ್ದೀರಿ. ಅದರಲ್ಲಿ ಕೆಲವು ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಶ್ರೀಮತಿ ಮೇರಿದೇವಾಸಿಯ ಅವರು ಸೆಕ್ರೆಟೇರಿಯೇಟ್‌ನಲ್ಲಿ ಕೆಲಸ ಮಾಡುತ್ತಾ ಇದ್ದರು. ಅವರನ್ನು ಇನ್ನೂ ರೀಇನ್‌ಸ್ಟೇಟ್ ಮಾಡಿಲ್ಲಾ. ಅವರನ್ನು ಡಿಸ್ಮಿಸ್ ಮಾಡಿದ್ದು ಸರಿಯಲ್ಲ ವೆಂದು ಹೈಕೋರ್ಟ್ ತೀರ್ಮಾನ ಕೊಟ್ಟಿದ್ದರೂ ಕೂಡ ಅವರನ್ನು ಇನ್ನೂ ರೀಇನ್‌ಸ್ಟೇಟ್ ಮಾಡಿಲ್ಲ. ಇದರಿಂದ ಎಂಟೈರ್ ಅಡ್ಮಿನಿಸ್ಟ್ರೇಷನ್‌ಗೆ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ. ಎಲಾ ಎನ್.ಜಿ.ಓ. ಗಳು ಇದನ್ನು ಬಹಳ ಕುತೂಹಲದಿಂದ ನೋಡುತ್ತಾ ಇದ್ದಾರೆ ಆದುದರಿಂದ ತಾವು ಇದರಲ್ಲಿ ಒಂದು ಉದಾತತೆ ತೋರಿಸಬೇಕು. ತಾವು ಅವರನ್ನು ರೀಇನ್‌ಸ್ಟೇಟ್ ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ನಂಜಪ್ಪ:—(ಶಾಂತಿನಗರ) ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಮಂಡಿಸಿರುವ ಡಿಮ್ಯಾಂಡ್ಸ್ ೧೦, ೧೨, ೧೩ ನ್ನು ಸ್ವಾಗತಮಾಡಿ ಅದರ ಬಗ್ಗೆ ಎರಡು ಮಾತುಗಳನ್ನಾಡಲು ಇಚ್ಛೆ ಪಡುತ್ತೇನೆ.

ಈ ರಾಜ್ಯದಲ್ಲಿ ನಮ್ಮ ಮುಖ್ಯಮಂತ್ರಿಗಳು ಛಾರ್ಜು ತೆಗೆದುಕೊಂಡಮೇಲೆ ನಾವಲ್ಲದಿದ್ದರೂ ದೇಶದ ಜನವಾದರೂ ನೋಡಿ ಅವರ ಆಡಳಿತ ಚೆನ್ನಾಗಿ ನಡೆಯುತ್ತಾ ಇದೆ ಎಂದು ಹೇಳುತ್ತಾರೆ. ನಮ್ಮನ್ನು ಆರಿಸಿ ಕಳುಹಿಸಿದ ಜನರೇ ಆ ರೀತಿ ಹೇಳುತ್ತಾರೆ. ಆದುದರಿಂದ ಈಗ ಸೆಕ್ರೆಟೇರಿಯೇಟ್‌ನೊಳಗೆ ನಡೆಯುತ್ತಾ ಇರುವ ಕೆಲಸ ಚೆನ್ನಾಗಿ ನಡೆಯುತ್ತಾ ಇದೆ ಎಂದು ಹೇಳುತ್ತೇನೆ. ಅಲ್ಲದೆ ಹೊರಗಡೆಯಲ್ಲಿರ ತಕ್ಕಂಥ ಜನರೂ ಕೂಡ ಹೇಳುತ್ತಿದ್ದಾರೆ. ಯಾರೋ ಸ್ವಲ್ಪ ಅಧಿಕಾರಿಗಳು ತಪ್ಪುಮಾಡಿದರೆ ಅದರಿಂದ ಎಲ್ಲರನ್ನೂ ಆರೋಪಮಾಡುವುದು ಸರಿಯಲ್ಲ. ನಾವು ಅವರನ್ನು ಪರ್ಸನಲ್ ಆಗಿ ಟೀಕೆ ಮಾಡುವುದು ಉಂಟು. ಆದರೆ ಜನರ ಬಾಯಲ್ಲೇ ಇವರ ಆಡಳಿತ ಚೆನ್ನಾಗಿ ನಡೆಯುತ್ತಾ ಇದೆ ಎಂದು ಹೇಳುವುದನ್ನು ಕೇಳಿದ್ದೇವೆ. ಆದರೆ ನಾವು ಇದರ ಬಗ್ಗೆ ಇನ್ನೂ ಚೆನ್ನಾಗಿ ಕೆಲಸ ಮಾಡಲಿ ಎಂದು ಹೇಳಬೇಕೇ ಹೊರತು ಈ ರೀತಿ ಟೀಕೆ ಮಾಡುವುದು ಸರಿಯಲ್ಲ. ತಪ್ಪು ಮಾಡಿದರೆ ಶಿಕ್ಷೆ ಮಾಡಬೇಕು ಎಂದು ಹೇಳುವ. ಅನೇಕ ಭಾಗಗಳಲ್ಲಿ ತಪ್ಪುಮಾಡಿರಬಹುದು. ಮಾಡಿದ್ದರೆ ಅದನ್ನು ಸರಿಪಡಿಸುವ. ಅದಕ್ಕಾಗಿ ನಾವೂ, ನೀವೂ ಎಲ್ಲರೂ ಸೇರಿ ಅವರ ಕಡೆ ಗಮನ ಕೊಟ್ಟರೆ ತಪ್ಪನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಸಂದರ್ಭದಲ್ಲಿ ಶಾಸನ ಸಭಾ ಸದಸ್ಯರೇ ಅಧಿಕಾರಿಗಳನ್ನು ಟೀಕೆ ಮಾಡುತ್ತಾರೆ. ಈ ರೀತಿ ಅಧಿಕಾರಿ ತಪ್ಪು ಮಾಡಿದ್ದರೂ ನಾವೇ ಮಂತ್ರಿಗಳ ಹತ್ತಿರ ಹೋಗಿ ಅಧಿಕಾರಿಯನ್ನು ಇಲ್ಲೇ ಇರಿಸಬೇಕು, ಬೇರೆ ಕಡೆ ಎಲ್ಲಿಯೂ ಹಾಕಬೇಡಿ. ಎಂದು ಹೇಳುತ್ತೇನೆ. ಅದರಂತೆ ಅವರು ಕೆಲಸ ಮಾಡಿಕೊಟ್ಟರೆ ಒಳ್ಳೆಯವರು ಎಂದು ಹೇಳುತ್ತೇವೆ ಇಲ್ಲದಿದ್ದರೆ ಅವರನ್ನು ಟೀಕೆ ಮಾಡುತ್ತೇವೆ, ಆದುದರಿಂದ ಸುಮ್ಮನೆ ಅವರ ಮೇಲೆ ದೋಷಾರೋಪಣೆ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಅವರೇನಾದರೂ ತಪ್ಪು ಮಾಡಿದರೆ ತಪ್ಪು ಎಂದು ಹೇಳುತ್ತೇವೆ. ಉದಾಹರಣೆಗೆ ಹೇಳುವುದಾದರೆ ಅನೇಕ ಸಲ ರಿಟೈರ್ಡ್ ಅಂಥವರಿಗೆ ೧ ವರ್ಷ ೨ ವರ್ಷ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ, ಆ ರೀತಿ ಮಾಡುವುದು ನ್ಯಾಯವಲ್ಲ. ಆ ರೀತಿ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಡಬಾರದು. ಈ ಒಂದು ಪದ್ಧತಿ ತಪ್ಪಬೇಕು. ಏತಕ್ಕೆಂದರೆ ಕೆಲವರಿಗೆ ದಕ್ಷತೆ ಇಲ್ಲದಿದ್ದರೂ ಅವರಿಗೆ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಡುತ್ತಾರೆ, ನಾವು ದಕ್ಷತೆಯಿಂದ ಕೆಲಸ ಮಾಡಿದರೂ ನಮಗೆ ಎಕ್ಸ್‌ಟೆನ್‌ಷನ್ ಕೊಡುವುದಿಲ್ಲ ಎಂಬ ದೂರು ಇದೆ. ಆಗ ಅವರು ಶಾಸನಸಭಾ ಸದಸ್ಯರ ಹತ್ತಿರ ಬಂದು ಅವರನ್ನು ಹಿಡಿಯುತ್ತಾರೆ. ಆಗ ಈ ಪರಿಸ್ಥಿತಿಯನ್ನು ನಾವು ಬಂದು ಹೇಳ ಬೇಕಾಗುತ್ತದೆ. ನೀವು ಈ ರೀತಿ ತಪ್ಪು ಮಾಡುತ್ತೀರಿ, ಈ ರೀತಿ ಮಾಡಬೇಡಿ ಎಂದು ಅನೇಕ ಸಲ ಇದರ ಬಗ್ಗೆ ಕಾಗದ ಬರೆದಿದ್ದೇನೆ. ಮತ್ತು ಅದೇ ಗೌರ್ನಮೆಂಟ್ ಆರ್ಡರನ್ನು ತೋರಿಸಿ ಇಂಥ ಮನುಷ್ಯನಿಗೆ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ. ಈ ರೀತಿ ಮಾಡಬಾರದು ಎನ್ನುವುದನ್ನೂ ಕೂಡ ಅವರ ಗಮನಕ್ಕೆ ತಂದಿದ್ದೇನೆ. ಮತ್ತು ಅವನ್ನು ಸರಿಪಡಿಸಬೇಕೆಂದೂ ಹೇಳಿದ್ದೇನೆ. ಹಾಗೆ ಹೇಳದೆ ಅವರನ್ನು ಸುಮ್ಮನೆ ಟೀಕೆ ಮಾಡುವುದು ಸರಿಯಲ್ಲ. ಅಧಿಕಾರಿಗಳನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ ನೀವು ನಿಮ್ಮ ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು ಎಂದು ತಿಳಿದುಕೊಂಡುಕೆಲಸ ಮಾಡಿದರೆ ಆಗ ಎಲ್ಲವೂ ಸರಿಹೋಗುತ್ತದೆ. ಅದು ಬಿಟ್ಟು ಅವನ ಮೇಲೆ ಕ್ರಮ ತೆಗೆದುಕೊಂಡರೆ ಏನುಪ್ರಯೋಜನವಾಗುವುದಿಲ್ಲ. ಯಾವ ಅಧಿಕಾರಿಯೇ ಆಗಿರಲಿ. ಕ್ಲಾಸ್ ಫಸ್ಟ್ ಆಫೀಸರ್ಸ್ ಆಗಲಿ, ಕ್ಲಾಸ್ ಸೆಕೆಂಡ್ ಆಫೀಸರ್ಸ್ ಆಗಲಿ, ಕ್ಲಾಸ್ ೩ ನೇ ಗ್ರೇಡ್ ಆಫೀಸರ್ಸ್ ಆಗಲಿ ಕ್ಲಾಸ್ ೪ ನೇ ಗ್ರೇಡ್ ಆಫಿಸರ್ಸ್ ಆಗಲಿ ಸಂಬಳ ತೆಗೆದು ಕೊಳ್ಳುವವರು, ಸರ್ಕಾರಿ ದುಡ್ಡು ತಿನ್ನುವವರು ನಾವು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು ಎಂದು ಅವರು ತಿಳಿದುಕೊಂಡರೆ ಆಗ ಜನಗಳಿಗೆ ನ್ಯಾಯಸಿಕ್ಕುತ್ತದೆ, ಇಲ್ಲದಿದ್ದರೆ ಜನಗಳಿಗೆ ತೊಂದರೆಯಾಗುತ್ತದೆ.

(ಶ್ರೀ ಎ. ನಂಜಪ್ಪ)

ಈವೊತ್ತಿನ ದಿವಸ ಯಾವ ಕಛೇರಿಯಲ್ಲಾಗಲಿ ಫೈಲುಗಳು ಮೂವ್ ಆಗುವುದಿಲ್ಲ. ಆದುದರಿಂದ ಅವರಿಗೆ ಬರುವ ಫೈಲುಗಳನ್ನು ಹದಿನೈದು ದಿನದೊಳಗೆ ನಿರ್ಧರಿಸಿ ಸಂಬಂಧಪಟ್ಟವರಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಆ ಫೈಲುಗಳು ೧೫ ದಿವಸದ ಮೇಲೆ ಇರಕೂಡದು. ಈ ತರಹ ಒಂದು ಆಜ್ಞೆಯನ್ನು ಮಾಡಬೇಕು. ಆಗ ಈಗ ಇರತಕ್ಕಂತ ಲಂಚ ಭ್ರಷ್ಟಾಚಾರ ಎಲ್ಲವೂ ಹೋಗುತ್ತದೆ. ಟ್ರಸ್ಟ್‌ಬೋರ್ಡ್‌ನಲ್ಲಾಗಲಿ, ಸೆಕ್ರೆಟೇರಿಯೇಟ್‌ನಲ್ಲಾಗಲಿ, ಪಿ.ಡಬ್ಲ್ಯೂ.ಡಿ. ನಲ್ಲಾಗಲಿ ಜನಗಳಿಂದ ಬಂದ ಪೇಪರ್ಸ್ ೧೫ ದಿನದೊಳಗೆ ಇತ್ಯರ್ಥವಾಗಿ ಪಾರ್ಟಿಗೆ ಯಾವುದಾದರೂ ಒಂದು ಇನ್‌ಫರ್ಮೇಷನ್ ತಲುಪುವಂತೆ ಮಾಡಬೇಕು. ಹಾಗಾದರೆ ಅಡ್ಮಿನಿಸ್ಟ್ರೇಷನ್ ಒಳ್ಳೆಯ ಅಡ್ಮಿನಿಸ್ಟ್ರೇಷನ್ ಆಗುತ್ತದೆ. ಅದಕ್ಕಾಗಿ ಸರ್ಕಾರದವರು ಇದರ ಕಡೆ ಹೆಚ್ಚಿನ ಗಮನ ಕೊಡಬೇಕು. ಇಲ್ಲದಿದ್ದರೆ ಅವರಿಗೆ ಎಷ್ಟೇ ಸಂಬಳ ಕೊಟ್ಟರೂ ಸರಿಹೋಗುವುದಿಲ್ಲ. ಈ ಭ್ರಷ್ಟಾಚಾರ ಮೊದಲಿನಿಂದಲೂ ಇದ್ದೇ ಇದೆ ಬರಬರುತ್ತಾ ಜಾಸ್ತಿ ಆಗುತ್ತಾ ಇದೆ. ನಮ್ಮ ಸೆಕ್ರೆಟೇರಿಯೆಟ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಯಾರೇ ಆಗಿರಲಿ, ಅವರಿಗೆ ಬಂದ ಪೇಪರ್‌ಗೆ ಅವರು ೧೫ ದಿವಸದೊಳಗೆ ಸಂಬಂಧಪಟ್ಟವರಿಗೆ ಯಾವುದಾದರೂ ಉತ್ತರ ಕಳುಹಿಸದಿದ್ದಲ್ಲಿ ಅಂಥವರ ಮೇಲೆ ಕ್ರಮ ತೆಗೆದುಕೊಂಡರೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಹೀಗೆಮಾಡದೇ ಹೋದರೆ ನಮ್ಮನ್ನು ಆರಿಸಿ ಕಳುಹಿಸಿದಂಥ ರೈತರಿಗೆ ಬಹಳ ಕಷ್ಟವಾಗುತ್ತದೆ. ನಾವು ಅವರ ಕಷ್ಟ ಸುಖಗಳನ್ನು ನೋಡಬೇಕು. ಮತ್ತು ಅಧಿಕಾರಿಗಳೂ ಜನರ ಕಷ್ಟಸುಖಗಳನ್ನು ನೋಡಬೇಕು. ಈ ಕೆಲಸವನ್ನು ನಾವೂ ಮಾಡಬೇಕು, ನೀವೂ ಮಾಡಬೇಕು. ಈ ವೊತ್ತಿನ ದಿವಸ ದೇಶದಲ್ಲಿ ಒಂದು ಕೂಗು ಎದ್ದಿದೆ. ಆದುದರಿಂದ ನಾನು ಅವರಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಪ್ರತಿಯೊಬ್ಬರೂ ಕೂಡ ಅವರವರ ಆತ್ಮಸಾಕ್ಷಿಯಂತೆ ಕೆಲಸಮಾಡಿದರೆ ನಮಗೆ ಏನೂ ತೊಂದರೆ ಯಾಗುವುದಿಲ್ಲ. ಆದುದರಿಂದ ಅವರಿಗೆ ಬಂದ ಪೇಪರ್‌ಮೇಲೆ ೧೫ ದಿನದೊಳಗಾಗಿ ತಕ್ಕ ಕ್ರಮ ತೆಗೆದು ಕೊಳ್ಳುವುದಕ್ಕೆ ಒಂದು ತಿದ್ದುಪಡಿ ಬೇಕಾದರೂ ಮಾಡಿ. ಸಂಬಂಧಪಟ್ಟಪಾರ್ಟಿಗೆ ಏನಾದರೂ ಒಂದು ಜವಾಬುಹೋಗುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಅನೇಕರು ಟೀಕೆ ಮಾಡಿದ್ದಾರೆ. ಯಾವ ರಾಜ್ಯ ಬಂದರೂ ಪೋಲೀಸಿನವರು ಕಷ್ಟ ಕೊಡುತ್ತಾರೆ. ಬ್ರಿಟಿಷರ ಕೈಯಲ್ಲಿ ಈ ರಾಜ್ಯ ಇದ್ದಾಗ ಇದರ ಎರಡರಷ್ಟು ಕಷ್ಟ ಇತ್ತು. ಅದನ್ನು ನೆನಪು ಇಟ್ಟುಕೊಳ್ಳಬೇಕು. ಅಂತಹ ಕಷ್ಟ ಈ ವೊತ್ತು ಇಲ್ಲ. ಮಹಾತ್ಮಾಗಾಂಧೀಜಿಯವರು ಅಹಿಂಸಾರೂಪದಲ್ಲಿ ಈ ರಾಜ್ಯವನ್ನು ಪಡೆಯಬೇಕಾದಾಗ ಅವರಿಗೆ ಪೋಲೀಸಿನವರು ಎಷ್ಟು ಕಷ್ಟ ಕೊಟ್ಟರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಪೋಲೀಸಿನವರು ಎಂತೆಂಥ ಕೆಟ್ಟಕೆಲಸಗಳನ್ನು ಮಾಡಿದ್ದಾರೆ. ಹುಡುಗರಿಗೆಲ್ಲಾ ಎಷ್ಟು ತೊಂದರೆ ಕೊಟ್ಟಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಅಂತಹ ಕಷ್ಟಗಳನ್ನು ಈಗ ಕೊಡುತ್ತಾ ಇಲ್ಲ. ಯಾರೋ ಸ್ವಲ್ಪ ಜನ ಕಷ್ಟ ಕೊಡಬಹುದು. ಆದರೆ ಒಬ್ಬ ವ್ಯಕ್ತಿಗೆ ಈ ಲಾ ಅಂಡ್ ಆರ್ಡರನು ಹೋಲಿಸುವುದು ಸರಿಯಲ್ಲ. ಈ ವೊತ್ತಿನ ದಿವಸ ಲಾ ಅಂಡ್ ಆರ್ಡರ್ ಇಲ್ಲದೇ ಹೋದರೆ ಯಾರೂ ರೋಡ್‌ನಲ್ಲಿ ತಿರುಗಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಹೆಣ್ಣು ಮಕ್ಕಳು ಕಾಲೇಜುಗಳಿಗೆ ಹೋಗುವಾಗ ಅವರನ್ನು ಕೆಲವರು ಅನುಸರಿಸಿಕೊಂಡು ಅವರ ಮೇಲೆ ಅಚಾತುರ್ಯಗಳನ್ನು ಮಾಡುವಾಗ ಪೋಲೀಸರು ಅವರ ರಕ್ಷಣೆಗೆ ಬರುವುದಿಲ್ಲ. ಇಂತಹ ಜನ ನಮ್ಮ ದೇಶದಲ್ಲಿದ್ದಾರೆ. ಇವರು ಮಾಡುವುದು ಸರಿಯೋ ತಪ್ಪೋ, ಅದನ್ನು ಕಂಡು ಹಿಡಿಯಲು ಸರಿಯಾದ ಕ್ರಮ ತೆಗೆದುಕೊಳ್ಳುತ್ತಿಲ್ಲ. ಒಂದು ನ್ಯಾಯವಾದ ತತ್ವವನ್ನು ಪೋಲೀಸಿನವರು ಪಾಲಿಸಿಕೊಂಡು ಬರಬೇಕು. ಪೋಲೀಸಿನವರಿಲ್ಲದೆ ನಮ್ಮ ದೇಶದ ಜನರನ್ನು ಕಾಪಾಡಲು ಆಗುವುದಿಲ್ಲ. ಪೋಲೀಸಿನವರಿಗೆ ಬಹಳ ಕಡಿಮೆ ಸಂಬಳ ಕೊಡುತ್ತಿದ್ದಾರೆ. ನಾನು ಹೋದ ಸಲ ಬಡ್ಜೆಟ್ಟು ಅಧಿವೇಶನದಲ್ಲಿ ನಾನು ಇದೇ ಜನರಲ್ ಆಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಮಾತನಾಡುವಾಗ ಹೇಳಿದ್ದೆ. ಪೋಲೀಸಿನವರಿಗೆ ಸರಿಯಾದ ಸಂಬಳವನ್ನು ಕೊಟ್ಟು ಅವರಿಂದ ಸರಿಯಾದ ಕೆಲಸಗಳನ್ನು ಮಾಡುವಂತೆ ತಕ್ಕ ಕ್ರಮಗಳನ್ನು ತೆಗೆದು ಕೊಳ್ಳಬೇಕು. ಮತ್ತು ಎಲ್ಲಿಯಾದರೂ ಸರಿಯಾದ ಕೆಲಸ ಮಾಡದೇ ಇದ್ದರೆ ಅಂತಹ ಕಡೆಗಳಲ್ಲಿ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಅವರಿಂದ ಸರಿಯಾದ ಕೆಲಸಗಳನ್ನು ಮಾಡಿಸಬೇಕು. ಇದನ್ನು ಮಾಡುವುದನ್ನು ಬಿಟ್ಟು ಇಲ್ಲಿ ಸುಮ್ಮನೆ ಟೀಕೆ ಮಾಡುವುದರಿಂದ ಏನೂ ಆಗುವುದಿಲ್ಲ. ನಮ್ಮ ಕಣ್ಣಿಗೆ ಕಾಣುವ ಅವ್ಯವಸ್ಥೆ ಇದ್ದರೆ ಅದನ್ನು ತಿಳಿಸಿ ಸರಿಪಡಿಸಬಹುದು. ಇವೊತ್ತಿನ ದಿವಸ ನಮ್ಮ ಬೆಂಗಳೂರು ನಗರದಲ್ಲಿರುವ ಪೋಲೀಸು ಕಮೀಷನರವರು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇವರು ಬಹಳ ಒಳ್ಳೆಯ ವ್ಯಕ್ತಿ. ಚೆನ್ನಾಗಿ ಕೆಲಸ ಮಾಡುವ ಪೋಲೀಸು ಕಮೀಷನವರು ಎಂದು ಎಲ್ಲರೂ ಹೇಳುತ್ತಾರೆ. ತಪ್ಪು ಮಾಡಿದವರನ್ನು ಪೋಲೀಸಿನವರಿಗೆ ಹಿಡಿದು

ಕೊಟ್ಟರೆ ಅವರು ಅಂತಹವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ. ಎಲ್ಲೊ ಅಲ್ಲಿ ಇಲ್ಲಿ ತಪ್ಪುಗಳನ್ನು ಕೆಲವು ಅಧಿಕಾರಿಗಳು ಮಾಡಿರಬಹುದು. ಸುಮ್ಮನೆ ಎಲ್ಲರ ಮೇಲೂ ಚಾಡಿ ಹೇಳಬಾರದು. ಇದು ಚೆನ್ನಾಗಿಲ್ಲ. ನ್ಯಾಯವಾಗಿ ಪೋಲೀಸರು ಕೆಲಸ ಮಾಡುವಂತೆ ಇರಬೇಕು ಮತ್ತು ಧರ್ಮದಿಂದ ಕೆಲಸ ಮಾಡುವ ನಿಷ್ಠೆಯುಳ್ಳವರು ಇಲ್ಲಿರಬೇಕು. ಲಾರಿಗಳನ್ನು ಹಿಡಿಯುವಾಗ ದುಡ್ಡನ್ನು ತೆಗೆದುಕೊಳ್ಳದೆ ಅಲ್ಲಿ ಬರುವ ದುಡ್ಡನ್ನು ಸರ್ಕಾರಕ್ಕೆ ಉತ್ಪತ್ತಿ ಬರುವ ಹಾಗೆ ಮಾಡಬೇಕು. ಇದರ ಬಗ್ಗೆ ನಾನೇ ಹಿಂದೆ ಒಂದು ಕೇಸನ್ನು ಹಿಡಿದುಕೊಟ್ಟು ಅಂಟೀ ಕರಪಷನ್ ಇಲಾಖೆಗೂ ಹಿಡಿದು ಕೊಟ್ಟಿದ್ದೇನೆ. ಇದರಿಂದ ಇಲ್ಲಿದ್ದ ಒಬ್ಬರು ಪೋಲೀಸು ಅಧಿಕಾರಿಗಳನ್ನು ಆಗ ಒಂಭತ್ತು ತಿಂಗಳು ಕಾಲ ಸಸ್‌ಪೆನ್‌ಷನ್‌ನಲ್ಲಿ ಕೂಡ ಇಟ್ಟಿದ್ದರು. ಟ್ಯಾಕ್ಸ್‌ಗಳನ್ನು ಕೊಡದೆ ತಪ್ಪಿಸಿಕೊಳ್ಳುವವರನ್ನು ಹಿಡಿದು ಅವರಿಂದ ಸರ್ಕಾರಕ್ಕೆ ಬರುವ ವರಮಾನವನ್ನು ಹೆಚ್ಚಿಸಿಕೊಳ್ಳಬೇಕು. ಕಟ್ಟು ನಿಟ್ಟಾಗಿ ಇಂತಹ ಕೆಲಸಗಳನ್ನು ಪೋಲೀಸರು ಮಾಡಬೇಕೆಂದು ಹೇಳುವಾಗ ಇವರಿಗೆ ಈಗ ಕೊಡುತ್ತಿರುವ ಸಂಬಳದ ಪ್ರಮಾಣ ಬಹಳ ಕಡಿಮೆ. ಇದನ್ನು ಸ್ವಲ್ಪ ಜಾಸ್ತಿ ಮಾಡಿದರೆ. ಸರ್ಕಾರಕ್ಕೆ ಉತ್ಪತ್ತಿ ಹೆಚ್ಚು ಬರುವಂತೆ ಮಾಡಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಬೆಂಗಳೂರು ಕಾರ್ಪೊರೇಷನ್ ಹಾಗೂ ಕೆಲವು ಮುನಿಸಿಪಾಲಿಟಿಗಳಲ್ಲಿ ಮತ್ತು ಟ್ರಸ್ಟ್ ಬೋರ್ಡಿನಲ್ಲಿ ಸರ್ಕಾರದ ಅಧಿಕಾರಿಗಳನ್ನು ಹಾಕುತ್ತಿದ್ದಾರೆ. ಇದರ ಬಗ್ಗೆ ಸೆಂಟ್ರಲ್ ಗವರ್ನಮೆಂಟಿನಲ್ಲಿ ಹಾಗೂ ಸ್ಟೇಟ್ ಗವರ್ನಮೆಂಟಿನಲ್ಲಿ ಒಂದು ಕಾನೂನು ಇದೆ. ಆದರೆ ಇವೊತ್ತು ಕಾರ್ಪೊರೇಷನ್‌ಗೆ ಒಂದು ಕಾಗದವನ್ನು ಒಬ್ಬರು ಎಂ. ಎಲ್. ಎ. ಆಗಲಿ ಇಲ್ಲವೇ ಎಂ. ಎಲ್. ಸಿ. ಅಥವಾ ಎಂ. ಪಿ. ಆಗಲಿ ಬರೆದರೆ ಅದಕ್ಕೆ ಜವಾಬೇ ಬರುತ್ತಿಲ್ಲ ಇದರ ಬಗ್ಗೆ ಸರ್ಕಾರದವರು ಇಲ್ಲಿರುವ ಅಧಿಕಾರಿಗಳ ಮೇಲೆ ಏಕೆ ತಕ್ಕ ಕ್ರಮ ಕೈಗೊಳ್ಳ ಬರದು ಎಂದು ನಾನು ಇಲ್ಲಿ ಕೇಳುತ್ತೇನೆ. ಇಲ್ಲೆಲ್ಲಾ ಪ್ರಾಯಶಃ ಐ ಎ. ಎಸ್. ಅಧಿಕಾರಿಗಳೇ ಇರಬೇಕೆಂದು ನೇಮಕ ಮಾಡುತ್ತಾರೆ. ಆದರೆ ಇವರ ಕೈಕೆಳಗೆ ಇರುವ ಅಧಿಕಾರಿಗಳು ಸಾರ್ವಜನಿಕರು ಯಾರಾದರೂ ಒಂದು ಕಾಗದ ಬರೆದರೆ ಅದಕ್ಕೆ ಒಂದು ಜವಾಬನ್ನೂ ಬರೆಯದೇ ಇದ್ದರೆ ಇದಕ್ಕೇನು ಹೇಳುವುದು. ನಾನು ಕೂಡ ಬರೆದ ಒಂದು ಕಾಗದಕ್ಕೆ ಮೂರು ವರ್ಷಗಳಿಂದಲೂ ಉತ್ತರ ಬಂದಿರಲಿಲ್ಲ ಎಂದು ಮಾನ್ಯ ಮಂತ್ರಿಗಳ ಕಡೆಗೆ ತಿಳಿಸಿದಾಗ ,ಅವರ ಒತ್ತಾಯದಿಂದ ನನಗೆ ಮೊನ್ನೆ ದಿನ ಒಂದು ಕಾಗದ ಬಂದಿದೆ.

ಈ ತರಹ ಇಲ್ಲಿರುವ ಅಧಿಕಾರಿಗಳೇ ತಪ್ಪು ಮಾಡಿದರೆ ಅವರ ಮೇಲೆ ಸರಕಾರ ತಕ್ಕ ಕಾರ್ಯಕ್ರಮವನ್ನು ಏಕೆ ತೆಗೆದುಕೊಳ್ಳಬಾರದು ? ಇಂದು ನಮ್ಮ ಕಾರ್ಪೊರೇಷನ್‌ನಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ ಮತ್ತು ಇಲ್ಲಿ ಭ್ರಷ್ಟಾಚಾರಗಳು ಬಹಳ ಹೆಚ್ಚಾಗುತ್ತಿವೆ. ನಾನು ಇದರ ಬಗ್ಗೆ ಸರ್ಕಾರಕ್ಕೆ ಕೂಡ ತಿಳಿಸಿದ್ದೇನೆ. ಇದಕ್ಕೆ ಸಂಬಂಧಪಟ್ಟ ಸೆಕ್ರಟರಿಗಳೇ ಆಗಲೀ ಇಲ್ಲವೇ ಕಾರ್ಪೊರೇಷನ್ನಿನಲ್ಲಿರುವ ಅಧಿಕಾರಿಗಳೇ ಆಗಲೀ ಅವರು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು. ಈ ರೀತಿ ಆತ್ಮಸಾಕ್ಷಿಯಿಂದ ಕೆಲಸ ಮಾಡುವ ಅಧಿಕಾರಿಗಳು ಇಲಾಖೆಯಲ್ಲಿದ್ದರೆ ಸಾರ್ವಜನಿಕರ ಎಷ್ಟೋ ಕಾಗದಗಳು ಬೇಗನೆ ವಿಲೇವಾರಿಯಾಗಲು ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ಕಾನೂನು ರಕ್ಷಣೆ ಮತ್ತು ಜನ ಸಾಮಾನ್ಯರ ಆಸ್ತಿಪಾಸ್ತಿಗಳ ರಕ್ಷಣೆ ಜನರ ಮಾನ ಮತ್ತು ಪ್ರಾಣ ರಕ್ಷಣೆ ಮಾಡುವ ರಕ್ಷಣಾ ಇಲಾಖೆ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಈಗಾಗಲೇ ಹಲವರು ಮಾತನಾಡುತ್ತಾ ಇಲ್ಲಿ ಹೇಳಿದರು. ಪೋಲೀಸು ಇಲಾಖೆಯನ್ನು ಎಲ್ಲರೂ ಬಯ್ಯುತ್ತಲೇ ಇರುತ್ತಾರೆ. ಪೋಲೀಸಿನವರೇ ಕುಡಿಯುತ್ತಾರೆ. ಜೂಜಾಡುತ್ತಾರೆ ಎಂದು ಹೇಳುತ್ತಾರೆ. ಪೋಲೀಸಿನವರಿಗೆ ಹಣ ಕೊಟ್ಟರೆ ಮರ್ಡರನ್ನು ಬೇಕಾದರೂ ಮಾಡಿಸುತ್ತಾರೆ. ಜನರಲ್ಲಿ ಮೊದಲು ಪೋಲೀಸರನ್ನು ಕಂಡರೆ ಎಷ್ಟು ಗೌರವ ಇತ್ತೋ ಅಷ್ಟು ಗೌರವ ಇಂದು ಅವರಿಗೆ ಇಲ್ಲ. ಪೋಲೀಸರನ್ನು ಕಂಡರೆ ಜನರಿಗೆ ಒಂದು ವಿಧವಾದ ತಾತ್ಸಾರ ಭಾವನೆ ಈಚೆಗೆ ಬರುತ್ತಿದೆ. ಇದರ ಬಗ್ಗೆ ನನ್ನ ಕ್ಷೇತ್ರದಲ್ಲೇ ಆದ ಒಂದು ಘಟನೆಯನ್ನು ಇಲ್ಲಿ ಹೇಳುತ್ತೇನೆ. ನಮ್ಮೂರಲ್ಲಿ ಒಬ್ಬ ಶ್ರೀಮಂತ ದುಡ್ಡಿದ್ದವನು ಸತ್ತ. ಇದು ಹೇಗೋ ಪೋಲೀಸಿನವರಿಗೆ ಗೊತ್ತಾಯಿತು. ಇದರ ಬಗ್ಗೆ ಯಾರೂ ಪೋಲೀಸರಿಗೆ ದೂರು ಕೊಡಲಿಲ್ಲ. ಇದನ್ನು ಹೇಗೋ ಇಲ್ಲಿನ ಪೋಲೀಸಿನವರು ತಿಳಿದುಕೊಂಡು ಸತ್ತವರ ಹೆಂಡತಿ ಬಳಿ ಬಂದು ನಿನ್ನ ಗಂಡನಿಗೆ ವಿಷ ಹಾಕಿ ಕೊಟ್ಟಿದ್ದೆ ಎಂದು ತಿಳಿದು ಬಂದಿದೆ. ಇದನ್ನು ಮುಚ್ಚಿಡಬೇಕಾದರೆ ದುಡ್ಡು ಎಷ್ಟು ಕೊಡುತ್ತೀಯೆ ಎಂದು ಅವರನ್ನು ಬೆದರಿಸಿ ಶೋಕದಲ್ಲಿದ್ದ ಹೆಂಡತಿಯ ಮೂಲಕ ಒಂದೆರಡು ಸಾವಿರ ರೂಪಾಯಿಗಳನ್ನು ಹೊಡೆದುಕೊಂಡು ಹೋದರು. ಆದರೆ ಇದು ಅಷ್ಟಕ್ಕೇ ನಿಲ್ಲಲಿಲ್ಲ. ಇನ್ನು ಸ್ವಲ್ಪ ದಿನವಾದ ಮೇಲೆ ಇವರ ಬಳಿ ಪುನಃ ಬಂದು

(ಶ್ರೀ ಕೆ. ಎಂ. ತಮ್ಮಯ್ಯ)

ಮೇಲಧಿಕಾರಿಗಳು ಇದರ ಬಗ್ಗೆ ಕೇಳುತ್ತಿದ್ದಾರೆ. ಅವರ ಬಾಯಿ ಮುಚ್ಚಲು ಇನ್ನಷ್ಟು ಹಣ ಕೊಡಬೇಕು ಎಂದು ಪೋಲೀಸರು ಮತ್ತೆ ಬೆದರಿಸಿದಾಗ ಅವರು ಗೋಳಾಡುತ್ತಾ ತಮ್ಮಲ್ಲಿದ್ದ ಆಸ್ತಿ ಬಂಗಾರ ಮಾರಿ ಇವರಿಗೆ ದುಡ್ಡು ಕೊಟ್ಟರು. ಹೀಗೆ ಜನ ಸಾಮಾನ್ಯರು ಕಷ್ಟವಾಗಿದೆ ಎಂದು ಪೋಲೀಸರಿಗೆ ದೂರು ಕೊಟ್ಟರೆ ಅವರನ್ನೇ ಹಿಡಿದು ಅವರ ಮೇಲೆ ಇಲ್ಲದ ಕಿರುಕುಳಗಳನ್ನು ತರಲು ಅವಕಾಶ ಮಾಡುತ್ತಿದ್ದಾರೆ. ಪೋಲೀಸಿನವರು ರಾತ್ರಿ ವೇಳೆ ಲಾರಿಗಳನ್ನು ಹಿಡಿದು ಬೇಕಾದ ಹಾಗೆ ಸಂಪಾದನೆ ಮಾಡುತ್ತಿದ್ದಾರೆ ಬಡವರನ್ನು ಯಾರು ಮರ್ಡರು ಮಾಡಲಿ ಅವರನ್ನು ಕೇಳುವವರೇ ಇಲ್ಲ. ನಮ್ಮ ಊರಿನ ತೋಟದ ಬಳಿ ಒಂದು ಲಾರಿ ಒಬ್ಬ ಮುದುಕನ ಮೇಲೆ ಹಾದು ಹೋಗಿ ಅವನು ಸತ್ತ. ಆದರೆ ಲಾರಿಯವನ ಮೇಲೆ ಕೇಸ್ ಹಾಕಿದರು. ಅದೆಲ್ಲಿ ಹೋಯಿತೋ ಯಾರಿಗೂ ಗೊತ್ತಾಗಲಿಲ್ಲ ಬಡವರಿಗೆ ಯಾವ ಸಹಾಯವೂ ಪೋಲೀಸರಿಂದ ಸಿಗುತ್ತಿಲ್ಲ. ಹಣವಿದ್ದವರಿಗೆ ಯಾವ ಸಹಾಯ ಬೇಕಾದರೂ ಸಿಗುತ್ತದೆ. ಹಿಂದೆ ಇಲ್ಲಿ ಒಂದು ಕಡೆಯಲ್ಲಿ ಯಾರೋ ಮೈನರು ಹುಡುಗಿಯನ್ನು ಅಪಹರಿಸಿದರು ಎಂದು ದೂರು ಬಂತು. ಆದರೆ ಇದಕ್ಕೆ ಪೋಲೀಸರ ಬಳಿ ಬಂದು ದೂರು ಕೊಟ್ಟರೆ ಇಲ್ಲಿನ ಪೋಲೀಸು ಅಧಿಕಾರಿಗಳು ಅವರನ್ನು ಮೇಜರು ಮಾಡಿ ಕೊಂಡು ಮದುವೆ ಮಾಡಿಕೊಳ್ಳಿ ಎಂದು ಸೂಚನೆ ಕೊಟ್ಟು ಕಳುಹಿಸಿದರು. ಇದು ಪೋಲೀಸಿನವರ ಆಡಳಿತದ ವೈಖರಿ. ಗ್ರಾಮಾಂತರ ಪ್ರದೇಶಗಳಲ್ಲಿ ಪೋಲೀಸಿನವರಿಂದ ಯಾರಿಗೂ ರಕ್ಷಣೆ ಎನ್ನುವುದೇ ಸಿಗುವುದಿಲ್ಲ. ಪ್ರತಿ ಹಳ್ಳಿಯಲ್ಲೂ ಒಂದೊಂದು ಪೋಲೀಸು ಸ್ಟೇಷನ್ ಇರುತ್ತದೆ ಇಲ್ಲಿ ನಾಲ್ಕು ಪೋಲೀಸರು ಒಬ್ಬರು ಹೆಡ್ ಕಾನ್‌ಸ್ಟೇಬಲ್ ಇರುತ್ತಾರೆ. ಇದರಲ್ಲಿ ಯಾವಾಗ ನೋಡಿದರು ಇಬ್ಬರು ಪೋಲೀಸಿನವರು ರಜಾದ ಮೇಲೇ ಇರುತ್ತಾರೆ; ಇದರಿಂದ ಸಾಮಾನ್ಯ ಜನರಿಗೆ ಯಾವ ರಕ್ಷಣೆಯೂ ಸಿಗುತ್ತಿಲ್ಲ ಪೋಲೀಸು ಇಲಾಖೆ ಬಹಳ ಹದಗೆಟ್ಟು ಹೋಗಿದೆ. ಎಲ್ಲಿ ಯಾವ ಕಳ್ಳತನ ಆಗಿರುವುದು ಪತ್ತೆ ಯಾಗುವುದಿಲ್ಲವೋ ಅಂತಹ ಕಡೆಗಳಲ್ಲಿ ಪೋಲೀಸರ ಕೈವಾಡ ಇದೆ ಎನ್ನುವ ಭಾವನೆ ಈಗ ಜನರಲ್ಲಿ ಬರುತ್ತಿದೆ. ಇಂತಹ ಪೋಲೀಸಿನವರಿಂದ ಜನರಿಗೆ ಯಾವ ರಕ್ಷಣೆಯೂ ಸಿಗುವುದಿಲ್ಲ. ಎಲ್ಲರೂ ಅಸೆಂಬ್ಲಿ ಮೆಂಬರುಗಳ ಕಡೆಗೆ ಬರುವುದಕ್ಕೆ ಆಗುತ್ತದೆಯೊ ಬಡಜನರ ಗತಿ ಏನು ಎನ್ನುವುದನ್ನು ಇವರು ಯೋಚಿಸುವುದೇ ಇಲ್ಲ. ಇವತ್ತು ಸರ್ಕಾರಕ್ಕೆ ಎಕ್ಸೈಜಿನಿಂದ ಲಂಚದ ರೂಪದಲ್ಲಿ ಲಕ್ಷಗಟ್ಟಲೆ ಹಣ ಬರುತ್ತಿದೆ. ಎಕ್ಸೈಜ್ ಕಂಟ್ರಾಕ್ಟದಾರರು ಪಾಪರ್ ಆಗುತ್ತಿದ್ದಾರೆ. ಕಂಟ್ರಾಕ್ಟದಾರರು ಹಣ ಕೊಡದಿದ್ದರೆ ಕಳಭಟ್ಟಿ ನಡೆಸುವವರಿಗೆ ಸಹಾಯ ಮಾಡುತ್ತೇವೆಂದು ಪೋಲೀಸರು ಹೇಳುತ್ತಿದ್ದಾರೆ. ಪೋಲೀಸಿನವರು ಈ ಸ್ಥಿತಿಗೆ ಬಂದಿರುವುದಕ್ಕೆ ಕಾರಣ ಇವರ ಮೇಲೆ ತನಿಖಾ ಅಧಿಕಾರಿಗಳು ಸರಿಯಾದಂತ ಕ್ರಮ ತೆಗೆದುಕೊಳ್ಳದಿರುವುದು. ಮೇಲಿನ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ ಪೋಲೀಸರಿಗೆ ಹಣ ಕೊಟ್ಟುಬಿಟ್ಟರೆ ಏನು ಕೆಲಸ ಬೇಕಾದರೂ ಆಗುತ್ತದೆ ಎಂಬ ಭಾವನೆ ಜನರಲ್ಲಿ ಬಂದಿದೆ. ಈ ಭಾವನೆಯನ್ನು ಮೊದಲು ಹೋಗಲಾಡಿಸಬೇಕು. ಇದಕ್ಕೆ ಸರ್ಕಾರದವರು ಏನು ಮಾಡಬೇಕು ಎಂದರೆ, ಹಣವನ್ನು ತೆಗೆದುಕೊಂಡವರು ಯಾವ ಅಧಿಕಾರಿಯೇ ಆಗಿರಲಿ, ಅವರು ಯಾವ ವಂಶಕ್ಕೇ ಸೇರಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಬೇಕು. ಆಗ ಬೇರೆ ಅಧಿಕಾರಿಗಳಿಗೆ ಭಯ ಬರುತ್ತದೆ, ಇವತ್ತು ಇವರಿಗೆ ಹಣದ ದಾಹ ಬಹಳ ಇದೆ. ಕೆಲಸ ಹೋದರೂ ಸರಿಯೆ, ಹಣ ಸಂಪಾದನೆ ಮಾಡಬೇಕೆಂಬ ಭಾವನೆ ಇವರಲ್ಲಿ ಬಂದಿದೆ. ಕೆಟ್ಟ ನಡತೆಯುಳ್ಳ ಅಧಿಕಾರಿಗಳನ್ನು ಕಂಪಲ್‌ಸರಿ ರಿಟೈರ್‌ಮೆಂಟ್ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಕೆಲವು ಅಧಿಕಾರಿಗಳು ಲಕ್ಷಾಂತರ ರೂಪಾಯಿಗಳ ಸಂಪಾದನೆ ಮಾಡಿಕೊಂಡಿರುವುದರಿಂದ ಕೆಲಸ ಹೋದರೂ ಭಯವಿಲ್ಲ, ಮುಂದೆ ವ್ಯಾಪಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇಷ್ಟೊಂದು ಹಣ ಮಾಡಿಕೊಂಡಿದ್ದರೂ ಕೂಡ ಸಂಬಳ ಸಾಲದು ಎಂದು ಹೇಳುತ್ತಿರುತ್ತಾರೆ ಅಕ್ರಮವಾಗಿ ಸಂಪಾದನೆ ಮಾಡಿರುವವರ ಮನೆಯಲ್ಲಿರುವ ಹಣವನ್ನು, ಬಂಗಾರವನ್ನು ಮತ್ತು ಬೆಳ್ಳಿಯನ್ನು ಸರ್ಕಾರದವರು ವಶಪಡಿಸಿಕೊಂಡರೆ ಅದರಿಂದ ಒಂದೊಂದು ಪ್ರಾಜೆಕ್ಟನ್ನೇ ಕಟ್ಟಬಹುದು. ಇವತ್ತು ವಿಜಿಲೆನ್ಸ್ ಕಮಿಷನ್ ಅವರು ನಾಲ್ಕಾಣೆ ಲಂಚ ತೆಗೆದುಕೊಳ್ಳುವವರನ್ನು, ೨ ಮೂಟೆ ಅಕ್ಕಿ ಇಟ್ಟುಕೊಂಡಿರುವವರನ್ನು ಹಿಡಿಯುತ್ತಿದ್ದಾರೆಯೇ ಹೊರತು, ಸಾವಿರಗಟ್ಟಲೆ ಲಂಚ ತೆಗೆದುಕೊಳ್ಳುವವರನ್ನು ಮತ್ತು ನೂರಾರು ಮೂಟೆ ಅಕ್ಕಿಯನ್ನು ಅಕ್ರಮವಾಗಿ ಇಟ್ಟುಕೊಂಡಿರುವವರನ್ನು ಹಿಡಿಯುತ್ತಿಲ್ಲ. ಇವತ್ತು ಕೆಲವು ಅಧಿಕಾರಿಗಳು ಹೆಂಡತಿಯ ಹೆಸರಿನಲ್ಲಿ ಎರಡು ಲಕ್ಷದ ಮನೆಯನ್ನು ಕಟ್ಟಿಸಿದ್ದಾರೆ. ಹಣ ಎಲ್ಲಿ ಬಂತು ಎಂದು ಕೇಳಿದರೆ ಮಾವ ಕೊಟ್ಟಿದ್ದು ಎಂದು ಹೇಳುತ್ತಾರೆ. ಅಂತಹವರ ಮಾವಂದಿರು ಉಪಾಧ್ಯಾಯ ವೃತ್ತಿಯನ್ನು ಮಾಡುತ್ತಿರುತ್ತಾರೆ. ಇಂತಹ ಅಧಿಕಾರಿಗಳನ್ನು ಮೊದಲು ಕೆಲಸದಿಂದ ತೆಗೆಯಿರಿ ಎಂದು ಹೇಳುತ್ತೇನೆ. ಕೆಲಸದಿಂದ ತೆಗೆಯುವುದರ ಜೊತೆಗೆ ಜೈಲಿಗೂ ಕಳಿಸಬೇಕು. ಆಗ ಬೇರೆ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಮೇಲಿನ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಿದರೆ ಕೆಳಗಿನ ನೌಕರರು ಸಹ ಚೆನ್ನಾಗಿ ಕೆಲಸ ಮಾಡುತ್ತಾರೆ. ಜನ ಸಾಮಾನ್ಯರಿಗೆ ನ್ಯಾಯ ದೊರೆಯಬೇಕಾದರೆ ಎರಡು ರೂಪಾಯಿ ಲಂಚ ತೆಗೆದುಕೊಳ್ಳುವ ಪೋಲೀಸ್ ಕಾನ್ಸ್‌ಟೇಬಲ್‌ನನ್ನು ಹಿಡಿಯುವ ಬದಲು ಸಾವಿರಗಟ್ಟಲೆ ಲಂಚ

ತೆಗೆದುಕೊಳ್ಳುವ ಮೇಲಿನ ಅಧಿಕಾರಿಯನ್ನು ಹಿಡಿಯಬೇಕು. ಪೋಲೀಸರಿಂದ ನಮ್ಮ ರಕ್ಷಣೆಯಾಗುತ್ತದೆ ಎಂಬ ಭಾವನೆ ಜನಸಾಮಾನ್ಯರಲ್ಲಿ ಬರಬೇಕಾದರೆ ದೊಡ್ಡ ಅಧಿಕಾರಿಗಳನ್ನು ಮೊದಲು ಹಿಡಿಯಬೇಕು. ಇವತ್ತು ನ್ಯಾಯವಾಗಿ ಮತ್ತು ದಕ್ಷತೆಯಿಂದ ಕೆಲಸ ಮಾಡುವ ಹಿರಿಯ ಅಧಿಕಾರಿಗಳು ಇದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಕೆಲವು ಅಧಿಕಾರಿಗಳು ಪಾಳೇಗಾರರಾಗಿದ್ದಾರೆ. ಇವರನ್ನು ಸರಿಪಡಿಸದಿದ್ದರೆ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಶ್ರೀರಂಗಪಟ್ಟಣದ ದೇವಸ್ಥಾನದಲ್ಲಿ ೨ ಲಕ್ಷ ರೂಪಾಯಿ ಬೆಲೆ ಬಾಳುವ ಸಾಮಾನುಗಳು ಕಳ್ಳತನವಾಗಿದ್ದರೂ ಕೂಡ ಇದುವರೆಗೆ ಅದನ್ನು ಹಿಡಿದಿಲ್ಲ ಎಂಬುದಾಗಿ ನನ್ನ ಸ್ನೇಹಿತರಾದ ದೊಡ್ಡಬೋರೇಗೌಡರು ಹೇಳಿದರು. ಇವತ್ತು ಯಾವ ಕೇಸ್ ಪತ್ತೆಯಾಗುವುದಿಲ್ಲವೋ ಆ ಕೇಸ್‌ನಲ್ಲಿ ಪೋಲೀಸರ ಕೈವಾಡ ಇದೆ ಎಂಬ ಭಾವನೆ ಬಂದಿದೆ. ವಿಗ್ರಹಗಳನ್ನೇ ಕದ್ದು ಹೊರದೇಶಗಳಿಗೆ ಸಾಗಿಸುತ್ತಿದ್ದಾರೆ. ಇವತ್ತು ಪೋಲೀಸ್ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗಬೇಕಾದರೆ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ದೊಡ್ಡ ದೊಡ್ಡ ಅಧಿಕಾರಿಗಳಿಗೆ ವಾಹನಗಳ ಸೌಲಭ್ಯ ಕೊಟ್ಟಿದ್ದೀರಿ. ಕೆಳಮಟ್ಟದ ಅಧಿಕಾರಿಗಳಿಗೆ ವಾಹನಸೌಲಭ್ಯ ಕೊಟ್ಟಿಲ್ಲ. ಒಂದು ಹಳ್ಳಿಯಲ್ಲಿ ಕೊಲೆಯಾದರೆ ಅಲ್ಲಿಗೆ ಹೋಗಲು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಜೀಪ್ ಇರುವುದಿಲ್ಲ. ನಮ್ಮನ್ನು ಬಂದು ಕೇಳುತ್ತಾರೆ. ಈ ರೀತಿ ನಿಧಾನ ಮಾಡಿಕೊಂಡು ಅಲ್ಲಿಗೆ ಹೋದರೆ ಅಲ್ಲಿ ಯಾವ ಸುಳಿವು ಕೂಡ ಸಿಗದಂತೆ ಮಾಡಿಬಿಟ್ಟಿರುತ್ತಾರೆ. ಆದ್ದರಿಂದ ವರ್ತಮಾನ ಬಂದಕೂಡಲೇ ಹೋಗುವುದಕ್ಕೆ ಅನುಕೂಲ ಇರುವಂತೆ ವಾಹನ ಸೌಕರ್ಯ ಒದಗಿಸಬೇಕು. ಇವತ್ತು ಹಳ್ಳಿಗಾಡಿನಲ್ಲಿ ಎಸ್. ಎಸ್. ಎಲ್. ಸಿ. ಆದಂತಹ ಅನೇಕ ಯುವಕರು ಇದ್ದಾರೆ. ಇಂತಹವರನ್ನು ಪೋಲೀಸ್ ಕಾನ್ಸ್‌ಟೇಬಲ್ ಕೆಲಸಕ್ಕೆ ತೆಗೆದುಕೊಳ್ಳದೆ ಅನರ್ಹರಾದವರನ್ನು ನೇಮಕ ಮಾಡಿಕೊಳ್ಳುತ್ತಿದ್ದೀರಿ ಪೇಟ ಹೊರುವುದಕ್ಕೆ ಅವರಿಗೆ ಶಕ್ತಿ ಇರುವುದಿಲ್ಲ. ತಾವು ಕೊಡುವ ಬೂಟ್ಸ್‌ನ್ನು ಹಾಕಿಕೊಂಡು ಅವರು ಪೆರೇಡ್ ಮಾಡುವ ಕಾಲಕ್ಕೆ ಒಂದೊಂದು ಕಾಲ ಒಂದೊಂದು ಕಡೆಗೆ ಹೋಗುತ್ತಿರುತ್ತದೆ. ಇಂತಹವರನ್ನು ನೇಮಕ ಮಾಡಿಕೊಳ್ಳುವ ಬದಲು ಜನಸಾಮಾನ್ಯರು ನೋಡಿದರೆ ಭಯವಾಗುವಂತಹರನ್ನು ನೇಮಕ ಮಾಡಿಕೊಳ್ಳಬೇಕು. ಇವತ್ತು ಈ ಪೋಲೀಸ್ ಡ್ರೆಸ್‌ಗೆ ಜನರು ಹೆದರುತ್ತಿದ್ದಾರೆಯೇ ವಿನಃ ಮನುಷ್ಯನಿಗೆ ಹೆದರುತ್ತಿಲ್ಲ. ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ. ಇದು ಸಾಲದು. ಇನ್ನೂ ಹೆಚ್ಚಿನ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು. ಅವರಿಗೆ ಹೊಟ್ಟೆ ತುಂಬುವಷ್ಟು ಸಂಬಳ ಕೊಡಬೇಕು. ತಪ್ಪು ಮಾಡಿದವರು ಸಣ್ಣವರೇ ಆಗಿರಲಿ, ದೊಡ್ಡವರೇ ಆಗಿರಲಿ, ಅವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕು. ಇವತ್ತು ಅನೇಕ ಕಡೆ ಚಳುವಳಿ ನಡೆಯುತ್ತಿರುವುದರಿಂದ ಪೋಲೀಸರ ಕರ್ತವ್ಯ ಜಾಸ್ತಿಯಾಗಿದೆ. ಅವರು ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ. ಮೊನ್ನೆನಾವು ಕಾರಿನಲ್ಲಿ ರಾಜಾಜಿನಗರದಿಂದ ಬರುತ್ತಿರುವಾಗ ಕನ್ನಡ ಚಳುವಳಿಗಾರರು ಚಳುವಳಿ ನಡೆಸುತ್ತಿದ್ದರು. ಪೋಲೀಸರು ಸಹ ಇದ್ದರು. ಆ ಚಳುವಳಿಗಾರರಲ್ಲಿ ಕೆಲವರು ಕಲ್ಲುಗಳನ್ನು ಹೊಡೆಯುತ್ತಿದ್ದರೆ ಮತ್ತೆ ಕೆಲವರು ಸೇರಿಕೊಂಡು ಯಾರೋ ಒಬ್ಬನನ್ನು ಎಳೆದುಕೊಂಡು ಹೋಗುತ್ತಿದ್ದರು. ಇದನ್ನೆಲ್ಲಾ ನೋಡಿಕೊಂಡು ಪೋಲೀಸಿನವರು ಸುಮ್ಮನೆ ನಿಂತಿದ್ದರೇ ಹೊರತು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇದನ್ನೆಲ್ಲಾ ನೋಡಿದರೆ ಪೋಲೀಸ್‌ನವರು ಜನಸಾಮಾನ್ಯರಿಗೆ ರಕ್ಷಣೆ ಕೊಡುತ್ತಾರೆಯೆ, ಎಂಬ ಭಾವನೆ ಬರುತ್ತದೆ. ಇದು ಸರಿಯಲ್ಲ. ಪೋಲೀಸಿನವರು ದಕ್ಷತೆಯಿಂದ ಕೆಲಸ ಮಾಡಬೇಕು.

ಇನ್ನು ಸಾಮಾನ್ಯಾಡಳಿತದ ಬಗ್ಗೆ ಹೇಳಬೇಕೆಂದರೆ ತಾಲ್ಲೂಕ್ ಕಛೇರಿಗೆ ಒಂದು ಅರ್ಜಿ ಕೊಟ್ಟರೆ ಉತ್ತರವನ್ನೇ ಕೊಡುವುದಿಲ್ಲ. ಜಿಲ್ಲಾಧಿಕಾರಿಯವರು ತಾಲ್ಲೂಕ್ ಕಛೇರಿಗಳಿಗೆ ಸರ್‌ಪ್ರೈಜ್ ವಿಸಿಟ್ ಕೊಡಬೇಕೆಂದು ಸರ್ಕಾರದ ಆದೇಶ ಇದೆ. ಅದರಂತೆ ಅವರು ವಿಸಿಟ್ ಕೊಟ್ಟಾಗ ತಾಲ್ಲೂಕ್ ಕಛೇರಿಗಳಲ್ಲಿ ಕೆಲವು ರೆಕಾರ್ಡ್‌ಗಳು ಇಲ್ಲದ ಹಾಗೆಮಾಡಿಬಿಟ್ಟಿರುತ್ತಾರೆ. ಅರ್ಜಿ ಕೊಟ್ಟರೆ ಕೆಲಸವಾಗುವುದಿಲ್ಲ. ಅದರ ಹಿಂದೆಯೇ ತಿರುಗಿದರೆ ಮಾತ್ರ ಕೆಲಸವಾಗುತ್ತದೆ. ಮೊನ್ನೆ ನಾನು ಒಬ್ಬರು ಅಂಡರ್‌ಸೆಕ್ರೆಟರಿಯವರನ್ನು ಬೆಳಗ್ಗೆ ೧೧ ಗಂಟೆಯ ಸಮಯದಲ್ಲಿ ನೋಡುವುದಕ್ಕೆ ಹೋದಾಗ ಅವರು ಬಾತ್‌ರೂಮ್‌ಗೆ ಹೋಗಿದ್ದರು. ಒಂದು ಗಂಟೆ ಕಾದರೂ ಬರಲಿಲ್ಲ. ಇವತ್ತು ಪ್ರಮೋಷನ್ ಕೂಡ ಇನ್‌ಫ್ಲೂಯೆನ್ಸ್ ಇದ್ದವರಿಗೆ ಸಿಗುತ್ತಿದೆ. ಮೈನರ್ ಕಮ್ಯುನಿಟಿಯವರಿಗೆ, ಬ್ಯಾಕ್‌ವರ್ಡ್ ಕಮ್ಯುನಿಟಿಯವರಿಗೆ ಪ್ರಮೋಷನ್ ಸಿಗದೆ ಕೊಳೆಯುತ್ತಿದ್ದಾರೆ. ಕೆಳಗೆ ಇದ್ದವರನ್ನು ಮೇಲೆ ಹಾಕಿ ಪ್ರಮೋಷನ್ ಕೊಟ್ಟಿದ್ದಾರೆ. ಈ ತಾರತಮ್ಯ ಹೋಗಬೇಕು. ನ್ಯಾಯ ದೊರಕುತ್ತದೆ ಎಂಬ ಭಾವನೆ ಅಧಿಕಾರಿಗಳಲ್ಲಿ ಬರಬೇಕು. ಎಲ್ಲರೂ ಒಂದೇ ಎಂಬ ಭಾವನೆ ಸರ್ಕಾರಕ್ಕೆ ಬರಬೇಕು. ತಾವು ರಾಜಾಂಶ ಸಂಭೂತರಂತೆ ಇದ್ದೀರಿ. ಎಲ್ಲರನ್ನೂ ಒಂದೇ ರೀತಿ ನೋಡಬೇಕು. ಆಗ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

‡ಶ್ರೀಮತಿ ಶಾರದವ್ವ ಎಂ. ಪಟ್ಟನ್ (ರಾಮದುರ್ಗ):—ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯೋಜನೆಯ ಕಾರ್ಯಾಚರಣೆಯಿಂದ ಹಿಂದುಳಿದ ಪ್ರದೇಶವೆಲ್ಲವು ಕ್ರಮೇಣವಾಗಿ ಮುಂದು ವರಿಯುತ್ತಾ ನಡೆದಿದ್ದು ಅಭಿನಂದನೀಯದ್ದಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಪಿಡಬ್ಲ್ಯುಡಿ ಇಲಾಖೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಇವರು ಇಂದು ರಾಜ್ಯದ ಚಿಕ್ಕ ಮತ್ತು ದೊಡ್ಡ ನೀರಾವರಿ ಯೋಜನೆಯನ್ನು ಯಶಸ್ವಿಯಾಗಿ ಮುಂದುವರೆಸುತ್ತಾ ನಡೆದಿರುವುದು ಹೆಮ್ಮೆಯನ್ನುಂಟುಮಾಡಿದೆ. ಆದರೂ ಕೂಡ ನಮ್ಮ ತಾಲ್ಲೂಕಿನಲ್ಲಿ ಯರಂಕಲಕೊಪ್ಪ ಹಳ್ಳಕ್ಕೆ ಬಂದಾರ ಕಟ್ಟುವುದು ಮತ್ತು ಚಿಪ್ಪಲಕಟ್ಟಿ ಹೊಸೂರು ಟ್ಯಾಂಕ್ ನಿರ್ಮಿಸುವಲ್ಲಿ ಮುಳುಗಡೆ ಪ್ರದೇಶದ ಜಮೀನುಗಳ ಅಕ್ವಿಜಿಷನ್ ಪ್ರಕರಣಗಳು ಮಂದಗತಿಯಿಂದ ಮುಂದುವರೆಯುತ್ತಿರುವುದು ಅಲ್ಲಿ ಅಧಿಕಾರಿಗಳು ಜಮೀನುದಾರರ ಭಿಡೆ ಮುಗವತ್ತುಗಳಿಗೆ ಮನಸ್ಸೋತು ವಿಳಂಬವಾಗುತ್ತಿರುವುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು ಎಂ. ಎಸ್. ಇ. ಬಿ. ಡಿಪಾರ್ಟ್‌ಮೆಂಟಿನಲ್ಲಿರುವ ಸೂಪರ್‌ವೈಜರರ ಲಂಚಗೊಳಿತನ ಮತ್ತೂ ನಮ್ಮ ತಾಲ್ಲೂಕಿನಲ್ಲಿ ಮಿತಿಮೀರಿ ನಡೆದಿದೆ. ತೋಂಡಿ ಮತ್ತು ಲೇಖಿಯಿಂದಲೂ ಮಾನ್ಯ ಉಪ-ಮಂತ್ರಿಗಳ ಗಮನಕ್ಕೆ ತಂದರೂ ಕೂಡ ಅಲ್ಲಿ ಸೂಪರ್‌ವೈಜರನ್ನು ವರ್ಗ ಮಾಡದೇ ೪–೫ ವರ್ಷವಾದರೂ ಅವನು ಸರ್ವಾಧಿಕಾರಿಯಂತೆ ನಡೆಯುತ್ತಿರುವನು. ಸರಕಾರವು ಇನ್ನು ಮೇಲಾದರೂ ಈ ತೊಂದರೆ ದೂರಮಾಡ ಬೇಕೆಂದು ಕೇಳಿಕೊಳ್ಳುವೆ.

ಎಂ. ಎಸ್. ಆರ್. ಟಿ. ಸಿ. ಬಸ್‌ನಿಲ್ದಾಣದಲ್ಲಿ ಪ್ರತಿಯೊಂದು ಜಿಲ್ಲಾ ತಾಲ್ಲೂಕುಗಳಲ್ಲಿ ಬಸ್ಸ್ಟ್ಯಾಂಡಿನ ಮಲಮೂತ್ರಾದಿಗಳ ಸ್ಥಳವನ್ನು ಸ್ವಚ್ಛವಾಗಿಡಲು ನೀರುಪೂರೈಸಿ ಅಲ್ಲಲ್ಲಿ ಖಾಯಂ ಭಂಗಿಗಳನ್ನು ಏರ್ಪಾಟು ಮಾಡಬೇಕು. ಬಸ್‌ರೂಟುಗಳನ್ನು ನಿರ್ಣಯಿಸುವಾಗ ಆಯಾ ಭಾಗದ ಎಂ. ಎಲ್. ಎ. ಮತ್ತು ಎಂ. ಎಲ್. ಸಿ.ಗಳ ಸಲಹೆಯನ್ನು ಪಡೆದುಕೊಳ್ಳಲು ಅವಕಾಶಕಲ್ಪಿಸಿಕೊಡಬೇಕು. ಬಸ್ಸ್ಟ್ಯಾಂಡುಗಳಲ್ಲಿ ಇತ್ತೀಚೆಗೆ ಜೇಬುಗಳ್ಳರ ಕಾಟ ಹೆಚ್ಚಾಗಿ ಪ್ರಯಾಣಿಕರು ತೊಂದರೆಗೀಡಾಗಿದ್ದು ಬಸ್‌ನಿಲ್ದಾಣ ಕಂಟ್ರೋಲರರು ಅಲ್ಲಿ ಮೊದಲು ಪಾಳಿ ಹಚ್ಚಿದ ಪ್ಯಾಸಂಜರರಿಗೆ ಕ್ಯೂ ಪಾಳಿಯಂತೆ ನಂಬರ್ ಚೀಟಿಗಳನ್ನು ಕೊಡುವಂತೆ ಏರ್ಪಾಡು ಮಾಡಬೇಕು. ಪ್ರಯಾಣಿಕರು ಹೆಣ್ಣುಮಕ್ಕಳನ್ನು ಹುಡುಗರನ್ನು ಕರೆದುಕೊಂಡು ಪ್ರಯಾಣ ಮಾಡುವುದು ಬಸ್ಸ್ಟ್ಯಾಂಡಿನ [illegible] ಈಗಿನ ಪದ್ಧತಿಯೇ ಮುಂದುವರೆದಲ್ಲಿ ಅನ್ಯಾಯ ಅನಾಹುತಗಳಾಗುವ ಸಂಭವವುಂಟು.

ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಯಲ್ಲಿಯ ಬಡರೋಗಿಗಳ ಗೋಳು ಕೇಳುವವರೇ ಇಲ್ಲದಾಗಿದೆ. ಅ[illegible] ಹೆಚ್ಚು ಗಮನ ಕೊಡಬೇಕಲ್ಲದೆ ಸ್ವಚ್ಛತೆಯ ಬಗ್ಗೆಯೂ ಹೆಚ್ಚು ಆಸ್ಥೆ ವಹಿಸಬೇಕು. ನಮ್ಮ ತಾಲ್ಲೂಕಿನ ಹೊಸಕೋಟೆ ಗ್ರಾಮಕ್ಕೆ ಡಾಕ್ಟರು ೮-೧೦ ತಿಂಗಳಿಂದಲೂ ಇಲ್ಲದೇ ಸಾವಿರಾರು ರೂಪಾಯಿ ಹಣ ಅಲ್ಲಿಯ ಪಾಪಿಗೆ ವ್ಯಥಾ ಖರ್ಚಾಗುವುದು; ತಪ್ಪಿಸುವ ಕುರಿತು ಈ ಸೆಷನ್ ಮುಗಿಯುವುದರೊಳಗಾಗಿಯಾದರೂ ಅಲ್ಲಿಗೆ ಡಾಕ್ಟರನ್ನು ಒದಗಿಸಬೇಕೆಂದು ಇಂದು ಹೆಲ್ತ್ ಮಂತ್ರಿಗಳನ್ನು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ. ಸ್ವಾಮಿ ನಾನು ಕೆಲವು ದಿನಗಳ ಹಿಂದೆ ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಗೆ ನಮ್ಮ ಸಂಬಂಧೀಕರೊಬ್ಬರನ್ನು ಖಾಯಿಲೆಯಾಗಿದ್ದವರನ್ನು ಕರೆದುಕೊಂಡು ಹೋಗಿದ್ದೆ. ಆ ಸಂದರ್ಭದಲ್ಲಿ ಆ ರೋಗಿಗೆ ಸ್ವಲ್ಪ ಗಂಜಿ ಬಿಸಿ ಮಾಡಿಕೊಡೋಣವೆಂದರೆ ಅಲ್ಲಿ ಕರೆಂಟ್ ಒಲೆ ಇರಲಿಲ್ಲ. ಆದ್ದರಿಂದ ಅಲ್ಲಿ ರೋಗಿಗಳಿಗೆ ಬಿಸಿ ಮಾಡಿಕೊಡಲು ಕರೆಂಟ್ ಒಲೆ ಇಟ್ಟು ಅದಕ್ಕಾಗಿ ಒಬ್ಬ ಖಾಯಂ ಆಯನನ್ನು ಇಡಬೇಕು.

ಪೋಲೀಸ್ ಸಿಬ್ಬಂದಿಯನ್ನು ಕುರಿತು ನಾಲ್ಕುಮಾತುಗಳನ್ನು ಹೇಳಬೇಕೆಂದಿದ್ದೇನೆ. ಅಪರಾಧಿಗಳಿಗಿಂತಲೂ ನಿರಪರಾಧಿಗಳೇ ಇವರ ಕೈಯಲ್ಲಿ ಹೆಚ್ಚಾಗಿ ಬಾಧೆ ಪಡುವಂತಾಗಿದೆ ಹೀಗಾಗಿ ನಿಜ ಆರೋಪಿಗಳ ವಿರುದ್ಧ ಸಾಕ್ಷಿ ಹೇಳಲು ಜನರು ಭಯಗೊಂಡಿದ್ದಾರೆ. ಇದರಿಂದ ಗೂಂಡಾಗಳ ಹಾವಳಿಯು ಪ್ರತಿತಾಲ್ಲೂಕಿನಲ್ಲಿ ಸರಕಾರದ ಕೈ ಮೀರುವಷ್ಟು ಮುಂದೆ ಹೋಗಿದೆ.

ಮಾನ್ಯರೇ ನಮ್ಮ ಜಿಲ್ಲಾಧಿಕಾರಿಗಳ ಮತ್ತು ಅಸಿಸ್ಟೆಂಟ್ ಕಮೀಷನರ ತಾಲ್ಲೂಕು ತಹಶೀಲ್ದಾರರ ಸಿಬ್ಬಂದಿಯನ್ನು ಮೂರುವರ್ಷಗಳಿಗೊಮ್ಮೆಯಾದರೂ ಕಡ್ಡಾಯವಾಗಿ ವರ್ಗ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಅದರಲ್ಲಿ ಸಮ್ಮ ತಾಲ್ಲೂಕಿನಲ್ಲಿ ಮತ್ತು ಪ್ರಾಂತ ಆಫೀಸಿನಲ್ಲಿ ನಡೆದಿರುವ ಸಿಬ್ಬಂದಿಯ ಚಲನವಲನ ಒರೇ ಮಾಮೂಲು ಕೊಡುವ ಕೊಡಿಸುವ ಏಜೆಂಟರಕಡೇ ಹೆಚ್ಚಾಗಿ ಒಲಿಯುತ್ತಿದ್ದು ಎಷ್ಟೋ ಜನ ಬಡರೆ ತರು ಕಂಗಾಲಾಗಿದ್ದಾರೆ.

ಇನ್ನು ಕೊನೆಯದಾಗಿ ಸಹಕಾರ ಸಂಘಗಳ ವಿಷಯದಲ್ಲಿ ಹೇಳುವುದಾದರೆ ಹಲವಾರು ಸಂಘಸಂಸ್ಥೆಗಳು ಚೆನ್ನಾಗಿ ನಡೆದಿರಬಹುದು. ಆದರೆ ನನಗೆ ತಿಳಿದಮಟ್ಟಿಗೆ ಸರಕಾರದ ಹಣ ದುರುಪಯೋಗಪಡಿಸಿಕೊಂಡು ದಿವಾಳಿ ತೆಗೆಯುವ ಸ್ಥಿತಿಯಲ್ಲಿ ಹಲವಾರು ಸೊಸೈಟಿಗಳು ನಮ್ಮ ತಾಲ್ಲೂಕಿನಲ್ಲಿದ್ದರೂ ಕೂಡ ಅವು ಹೇಗೆ ಆಡಿಟ್ ಆಗುತ್ತಿವೆಯೋ ದೇವರೇ ಬಲ್ಲ. ಆಡಿಟ್‌ನಲ್ಲಿಕೂಡ ಸರಿಯಾಗಿ ರಿಪೋರ್ಟ್ ಬಾರದೆ ಇದ್ದ ಸೊಸೈಟಿಗಳ ಮೇಲೆ ಕ್ರಮಕೈಗೊಳ್ಳುವ ಹೊಣೆ ಸರಕಾರದ್ದು ಇದೆಯೋ ಇಲ್ಲವೋ? ನನಗಂತೂ ನಮ್ಮ ತಾಲ್ಲೂಕಿನಲ್ಲಿ ನಡೆದ ಕೆಲವು ಸೊಸೈಟಿಗಳ ಅವ್ಯವಹಾರ ನೋಡಿ ಮೇಲಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವು ಎಂಥಾ ಅನ್ಯಾಯ ಮಾಡಿದರೂ ಕೇಳುವವರೇ ಇಲ್ಲದಂತಾಗಿದೆ. ಆದ್ದರಿಂದ ಸರಕಾರವು ಇತ್ತ ಹೆಚ್ಚು ಗಮನ ಕೊಡಬೇಕು. ತಾಲ್ಲೂಕಿನ ಪ್ರತಿನಿಧಿಗಳು ಮಾಡಿದ ಆರೋಪ ಇದ್ದಂತಸೊಸೈಟಿಗಳ ಚಲನವಲನದ ಬಗ್ಗೆ ಮೇಲಧಿಕಾರಿಗಳು ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ದುರ್ವ್ಯವಹಾರವನ್ನು ಕಂಡುಹಿಡಿದು ಸೊಸೈಟಿಯ ಆಡಳಿತಗಾರರ ಮೇಲೆ ಕ್ರಮ ಕೈಗೊಳ್ಳಲು ಯಾಕೆ ಹಿಂಜರಿಯುತ್ತಾರೋ ನನಗಂತೂ ಅರ್ಥವಾಗದಂತಾಗಿದೆ.

ಇನ್ನು ಎಜುಕೇಷನ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಹೇಳುವುದಾದರೆ ನಮ್ಮ ರಾಜ್ಯದ ಡಿ. ಪಿ. ಐ. ಅವರ ಗಮನಕ್ಕೆ ನಮ್ಮ ತಾಲ್ಲೂಕಿನ ಶೋರೇಬಾನ, ಮನಿಹಾಳ, ಗ್ರಾಮದ ನವಭಾರತಿ ಹೈಸ್ಕೂಲ್ ಪ್ರಕರಣ ವಿಷಯದಲ್ಲಿ ಎಷ್ಟೋ ಅವ್ಯವಹಾರ ನಡೆದಿದ್ದು ಅರ್ಜಿ ಮುಖಾಂತರ ಪತ್ರ ಮುಖಾಂತರ ಸಮಕ್ಷಮ ಕೂಡಾ ತಿಳಿಸಿದ್ದಾಯಿತು. ಸ್ವತಃ ಉಪ-ಮಂತ್ರಿಗಳೇ ರಾಮದುರ್ಗ ತಾಲ್ಲೂಕು ಟೂರು ಕೈಗೊಂಡಾಗ್ಯೆ ಸದರೀ ಹೈಸ್ಕೂಲಿಗೆ ವಿಜಟ್‌ಕೊಟ್ಟಾಗ್ಯೆ ಸರಕಾರದಿಂದ ಗ್ರಾಂಟ್ ಪಡೆಕೊಂಡ ಸೈನ್ಸ್ ಸಾಮಾನುಗಳೇ ಮಾಯವಾಗಿದ್ದು ಹಾಜರಿ ಬುಕ್ಕಿಗೂ ಹಾಜರಿ ಇರುವ ವಿದ್ಯಾರ್ಥಿಗಳಿಗೂ ಏನೂ ಸಂಬಂಧವಿಲ್ಲದೇ ಹೆಚ್ಚಿನ ಗ್ರಾಂಟು ಪಡೆದುಕೊಳ್ಳುವ ಉದ್ದೇಶದಿಂದ ಹಾಜರಿ ಹೆಚ್ಚಾಗಿ ತುಂಬುವುದು ಮತ್ತು ಸದರೀ ಸ್ಕೂಲಿನಲ್ಲಿ ವಿಜಿಟ್ ಬುಕ್ಕನ್ನೇ ಇಡದೇ ಇದ್ದುದು ಇವೆಲ್ಲಾ ಪ್ರತ್ಯಕ್ಷ ಕಂಡ ಉಪ-ಮಂತ್ರಿಗಳು ವಾಪಸ್ಸು ಬೆಂಗಳೂರಿಗೆ ಬರುವಷ್ಟರಲ್ಲಿ ಸದರೀ ಹೈಸ್ಕೂಲ್ ಹೆಡ್‌ಮಾಸ್ಟರರು ಸೆಕ್ರೆಟರಿಯವರು ಈ ಹಿಂದೆ ಸರಕಾರವು ಸಸ್ಪೆಂಡ್ ಮತ್ತು ಗ್ರಾಂಟ್ ತಡೆಹಿಡಿದದ್ದು ಉಪ-ಮಂತ್ರಿಗಳ ರಿಪೋರ್ಟ್ ಬರುವ ಮುಂಚೆ ಸದರೀ ಹೈಸ್ಕೂಲ್ ಆಡಳಿತಗಾರರು ಯಾರದೋ ಭಿಡೆ ಮುರವತ್ತು ಹಾಕಿ ಮಂತ್ರಿಗಳ ಮೇಲೆ ಒತ್ತಾಯ ತಂದು ಸಸ್ಪೆಂಡು ರದ್ದು ಪಡಿಸಿಕೊಂಡು ಗ್ರ್ಯಾಂಟ್ ಕೂಡಾ ಅಪಹರಿಸುವ ಹವ್ಯಾಸ ಮಾಡಿದ್ದು ನೋಡಿದರೆ ನನಗಂತೂ ಶೋಚನೀಯವಾಗಿದೆ. ಸದರೀ ಹೈಸ್ಕೂಲುಗಳ ಆಡಳಿತಗಾರರಗುಂಪು ಅದೇ ಸೋರೆಬಾನ ಮನಿಹಾಳದಲ್ಲಿ ಹಿಂದುಳಿದ ಸಮಾಜದ ಹಾಸ್ಟೆಲ ನಡೆಸುತ್ತೇವೆಂದು ಹಲವಾರು ವರ್ಷ ಕೊಟ್ಟಿರತಕ್ಕ ಪತ್ರಗಳನ್ನು ಸರಕಾರಕ್ಕೆ ಹಾಜರ ಮಾಡಿ ಪ್ರತಿವರ್ಷ ಒಂಭತ್ತು ಹತ್ತು ಸಾವಿರ ರೂಪಾಯಿಗಳನ್ನು ಎತ್ತಿಹಾಕುವುದು ಸ್ವತಃ ಸೋಷಿಯಲ್ ವೆಲ್‌ಫೇರ್ ಉಪ-ಮಂತ್ರಿಗಳು ಅಲ್ಲಿಗೆ ಟೂರು ಬಂದಾಗ್ಯೆ ಕಂಡುಹಿಡಿದು ಬೋರ್ಡಿಂಗ್ ಗ್ರ್ಯಾಂಟ್ ರದ್ದುಪಡಿಸಿದ್ದಾಯಿತು. ಹೀಗಿದ್ದರೂ ಕೂಡ ಅದೇ ಗುಂಪಿನವರು ಅದೇ ಶೊರೇಬಾನ ಮನಿಹಾಳ ಗ್ರಾಮದಲ್ಲಿ ಮತ್ತೊಂದು ಬೋರ್ಡಿಂಗ್ ನಡೆಸಿದ್ದೇವೆಂದು ಬೆಳಗಾಂವ ಡೆಪ್ಯುಟಿ ಕಮೀಷನರ್ ಮುಖಾಂತರ ಶಿಫಾರಸ್ಸು ಮಾಡಿಸಿ ಸರಕಾರದ ಮಂಜೂರಿಗಾಗಿ ಕಳುಹಿಸಿದ್ದಾರೆಂದು ವದಂತಿ ಇದೆ. ಇದು ನಿಜವಿದ್ದಲ್ಲಿ ತಾಲ್ಲೂಕ ಪ್ರತಿನಿಧಿಯಾದ ನನಗೆ ದಯವಿಟ್ಟು ಅಂಥಾ ಬೋರ್ಡಿಂಗ್ ಎಲ್ಲಿದೆ ನನಗಾದರೂ ತೋರಿಸಿ ಸರಿ ಇದ್ದರೆ ಗ್ರ್ಯಾಂಟ್ ಕೊಡಲು ಅಡ್ಡಿ ಇಲ್ಲವೆಂದು ಹೇಳುತ್ತಾ ಅಂಥಾ ಬೋರ್ಡಿಂಗ್ ಇಲ್ಲದೇ ಇದ್ದಲ್ಲಿ ಸರಕಾರವು ಇಂಥವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಸೂಚಿಸುವೆ. ಇಂದು ಸಭಾಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಎನ್. ಜಿ. ಹಾಲಪ್ಪ:— (ಚನ್ನಗಿರಿ) ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಆಚಾರ್ಯಕೃಪ್ಲಾನಿಯವರು ಒಂದುಕಡೆ ಹೇಳಿದ್ದಾರೆ ನಾವು ದೇಶಕ್ಕೆ ಜನತೆಗೆ ಏನುಕೊಡದಿದ್ದರೂ ಕ್ಲಿಯರ್ ಅಡ್ಮಿನಿಸ್ಟ್ರೇಷನ್ ಕೊಡಿ ಎಲ್ಲವು ಸರಿಹೋಗುತ್ತದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಸ್ನೇಹಿತರಾದ ಆಡಳಿತ ಪಕ್ಷದವರು ದೇಶಕ್ಕೆ ಒಂದು ಕ್ಲಿಯರ್ ಅಡ್ಮಿನಿಸ್ಟ್ರೇಷನ್ ಕೊಡದೆ ಅದಕ್ಕೆ ತದ್ವಿರುದ್ಧವಾಗಿ ಅಡ್ಮಿನಿಸ್ಟ್ರೇಷನ್ ನಡೆಸುತ್ತಿದ್ದಾರೆ.

ಇವೊತ್ತು ಈ ಸಭೆಯಮುಂದಿಟ್ಟಿರತಕ್ಕ ಪೋಲೀಸ್ ಡಿಮ್ಯಾಂಡನ್ನು ವಿರೋಧಿಸುತ್ತಾ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಬಹುಶಃ ನಮ್ಮದೇಶದಲ್ಲಿ ಬ್ರಿಟೀಷರ ಕಾಲದಲ್ಲಿ ಚಳುವಳಿಯಲ್ಲಿ ಎಷ್ಟು ಸಾರಿ ಫೈರಿಂಗ್ ಮಾಡಿದರೋ ಅದಕ್ಕಿಂತ ಹೆಚ್ಚು ಸಾರಿ ನಮಗೆ ಸ್ವರಾಜ್ಯಬಂದ ಮೇಲೆ ಇಂಡಿಯಾದೇಶದಲ್ಲಿ, ಮೈಸೂರು ದೇಶದಲ್ಲಿ ಫೈರಿಂಗ್ ಮಾಡಿದ್ದಾರೆ ಎಂದು ನಮಗೆಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇದನ್ನು ನೋಡಿದರೆ ಯಾವರೀತಿ ಪೋಲೀಸ್ ಅಡ್ಮಿನಿಸ್ಟ್ರೇಷನ್ ಸುಧಾರಣೆ ಮಾಡಿದ್ದಾರೆ ಎಂಬುದು ಅರ್ಥವಾಗುವುದಿಲ್ಲ. ಪೋಲೀಸ್‌ರು ನಮಗೆ ಸ್ನೇಹಿತರು. ಪೋಲೀಸ್ ಕೇಸುಗಳಲ್ಲಿ ನಾನು ಯಾವಾಗಲೂ ವಕಾಲತ್ತು ಮಾಡುತ್ತೇನೆ. ಆದ್ದರಿಂದ ಈ ಪೋಲೀಸಿನವರಲ್ಲಿ, ಪೋಲೀಸ್ ಇಲಾಖೆಯಲ್ಲಿ

(ಶ್ರೀ ಎನ್.ಜಿ ಹಾಲಪ್ಪ)

ಏನೇನು ಐಬು ಇದೆಯೆಂಬುದನ್ನು, ಏನೇನು ಮೋಸ ನಡೆಯುತ್ತಿದೆ ಎಂಬುದನ್ನೂ, ಯಾವರೀತಿ ಪೋಲೀಸಿನವರು ದುಡ್ಡು ಹೊಡೆಯುತ್ತಾರೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನನಗೆ ಗೊತ್ತಿರತಕ್ಕ ಕೆಲವು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಪೋಲೀಸಿನವರಿಗೆ ದುಡ್ಡು ಕೊಟ್ಟರೆ ಆಕ್ಚುಯಲ್ ಆಗಿ ಮರ್ಡರ್ ಆಗಿದ್ದುದನ್ನೂ ಮುಚ್ಚಿಹಾಕುತ್ತಾರೆ. ಅವನು ವಿಷ ಕುಡಿದು ಸತ್ತ, ಅಪಘಾತವಾಗಿ ಸತ್ತ ಎಂದು ಹೇಳಿ ದುಡ್ಡು ಹೊಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಈಗ ನಾನು ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಚಿಕ್ಕ ಗಂಗೂರಿನಲ್ಲಿ ಒಬ್ಬ ಪ್ಯಾಸನ್ ತೆಗೆದುಕೊಂಡು ಸತ್ತ. ಆದರೆ ಅಲ್ಲಿಯ ಸಬ್-ಇನ್‌ಸ್ಪೆಕ್ಟರ್ ಇನ್ನೊಂದು ಕಡೆ ಸೇರಿಕೊಂಡು, ಪೋಸ್ಟ್ ಮಾರ್ಟಂ ಮಾಡಬೇಕು, ತಲೆಗೆ ಪೆಟ್ಟು ತಗಲಿದೆ ಎಂದು ವರದಿ ಮಾಡಿದ. ಪೋಸ್ಟ್ ಮಾರ್ಟಂಗೆ ಕಳಿಸಿ, ಕೆಮಿಕಲ್ ಎಗ್ಸಾಮಿನೇಶನಿಗೆ ಕಳಿಸಿದರೆ, ಅಲ್ಲಿ ವಿಷ ಸೇವಿಸಿದ್ದಾರೆಂದು ತಿಳಿಯಿತು. ಆದರೂ ಅವನು ಇದರ ಮೇಲೆ ಬಂದು ಚಾರ್ಜ್ ಹಾಕಿ ಕೆಲವು ಹುಡುಗರನ್ನು ಫಿರ್ಯಾದಿಯನ್ನಾಗಿ ಮಾಡಿ ಅದು ಸೆಶನ್ ಕೋರ್ಟಿಗೆ ಬಂತು. ಅದಕ್ಕೆ ಒಬ್ಬನನ್ನು ಐ ವಿಟನೆಸ್ ಕೂಡ ಮಾಡಿದ್ದಾರೆ. ಅವನು ರಾತ್ರಿ ೧೨ ಗಂಟೆಗೆ ಬರುತ್ತಿದ್ದಾಗ್ಗೆ ಇವನನ್ನು ಹೊತ್ತುಕೊಂಡು ಹೋಗುತ್ತಿದ್ದರೆಂದು ಅವನ ವಿಟನೆಸ್. ನಂತರ ಇವರು ಕೇಸ್ ರಿಜಿಸ್ಟರ್ ಮಾಡಿಕೊಂಡು ಒಂದು ತಿಂಗಳಲ್ಲಿ ವಿಚಾರಣೆ ಮಾಡಿದ್ದಾರೆ. ಈ ವಿಚಾರದಲ್ಲಿ ಸೆಶನ್ ಜಡ್ಜರು ಬೈಲಾ ಅಪ್ಲಿಕೇಶನ್ ಮೇಲೆ ಫಿರ್ಯಾದಿಯನ್ನು ಬಿಟ್ಟರು. ನಂತರ ಸಬ್-ಇನ್ಸ್ಪೆಕ್ಟರನ್ನು ಜಡ್ಜು ಕರೆದು ಒಂದು ಮಾತು ಅವರಿಗೆ ಹೇಳಿದರು ನೀವು ಪೋಲೀಸ್ ಇಲಾಖೆಯ ಕೆಲಸಕ್ಕೆ ಸೇರಿ ಎಷ್ಟು ದಿವಸವಾಯ್ತು? ಎಂದು ಆಗ ಈ ಸಬ್-ಇನ್ಸ್‌ಪೆಕ್ಟರಿಗೆ ಮೈಯೆಲ್ಲಾ ಬೆವತು ಬಿಟ್ಟಿತು. ನಂತರ ತನ್ನ ತಪ್ಪನ್ನು ಆ ಸಬ್-ಇನ್ಸ್‌ಪೆಕ್ಟರ್ ಅರಿತುಕೊಂಡ. ಹೀಗೆ ಸೆಕ್ಷನ್ ೩೦೨ ರಲ್ಲಿ ಕೆಲವು ನಿರಪರಾಧಿ ಹುಡಗರನ್ನು ಸೆಶನ್ ಕೋರ್ಟಿಗೆ ಬರುವ ಹಾಗೆ ಮಾಡಿದ್ದಾರೆ, ಆ ಸಬ್-ಇನ್‌ಸ್ಪೆಕ್ಟರ್.

ಇನ್ನೊಂದು ವಿಚಾರದಲ್ಲಿ ಕೇಸನ್ನು ವಾಪಸ್ಸು ತೆಗೆದುಕೊಂಡರು. ಅದರ ಬಗ್ಗೆ ಮೇಲಿನ ಸೂಪರಿಂಟೆಂಡೆಂಟರು ತನಿಖೆ ಮಾಡಬೇಕೆನ್ನುವ ವಿಚಾರ ಯಾರಿಗೂ ಇಲ್ಲ. ಅದೇ ರೀತಿ ತಾಲ್ಲೂಕು ಬೋರ್ಡು ಚುನಾವಣೆಯ ಸಮಯದಲ್ಲಿ ಗಾಣದಕಟ್ಟೆ ಎಂಬಲ್ಲಿ ಒಬ್ಬ ಲಂಬಾಣಿ ಹೆಣ್ಣು ಮಗಳ ಮೇಲೆ ಒಬ್ಬ ಮೋಟಾರ್ ಬೈಕ್ ಬಿಟು ಬಿಟ್ಟ. ಆ ಸಮಯದಲ್ಲಿ ನಾನು ಅಲ್ಲೇ ಹೋಗುತ್ತಿದ್ದೆ. ನಾನು, ಇದರ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಹೋದೆ. ಆದರೆ ಮುಂದೆ ಆ ಕೇಸಿನ ಪತ್ತೆಯೇ ಇಲ್ಲ. ಅದನ್ನು ಈಗಿರುವಂತಹ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್-ಇನ್ಸ್‌ಪೆಕ್ಟರ್ ಸೇರಿಕೊಂಡು, ಕೇಸೇ ಇಲ್ಲದ ಹಾಗೆ ಮಾಡಿದ್ದಾರೆ. ಇದರ ಬಗ್ಗೆ ನಾನು ಡಿ ಐ ಜಿಗೆ ಮತ್ತು ಐಜಿಪಿಗೆ ಬರೆದಿದ್ದೇನೆ: ಮತ್ತು ಮುಖ್ಯಮಂತ್ರಿಯವರಿಗೂ ಬರೆದಿದ್ದೆನೆ. ಆದರೆ ಯಾವ ಕ್ರಮವೂ ಇನ್ನೂ ತೆಗೆದುಕೊಳ್ಳಲಿಲ್ಲ. ನಮ್ಮ ದೇಶದಲ್ಲಿ ಇವತ್ತು ಯಾರಾದರೂ ಕ್ರಿಮಿನಲ್ಸ್ ಇದ್ದರೆ, ಅವರು ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿದ್ದಾರೆಂದು ಹೇಳುತ್ತೇನೆ. ಅವರು ದರೋಡೆ ಮಾಡಿಸುತ್ತಿದ್ದಾರೆ, ಕಳ್ಳತನ ಮಾಡಿಸುತ್ತಿದ್ದಾರೆ, ಕೊಲೆ ಮಾಡಿಸುತ್ತಿದ್ದಾರೆ ಮತ್ತು ಲೂಟಿ ಕೂಡ ಮಾಡಿಸುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರು ಇದ್ದಾರೆ, ಅವರನ್ನು ಹೇಳುವವರೂ ಇಲ್ಲ, ಕೇಳುವವರೂ ಇಲ್ಲ.

ಇನ್ನೊಂದು ಕಿಡ್ನ್ಯಾಪಿಂಗ್ ಕೇಸ್. ಹುಡುಗಿಗೆ ೧೫ ವರ್ಷವಾಗಿದೆ. ತಂದೆ ಕೇಸ್ ಕೊಟ್ಟಿದ್ದಾನೆ. ಆದರೆ ಪೋಲೀಸ್ ಎವಿಡೆನ್ಸ್ ಕಲೆಕ್ಟ್ ಮಾಡುವುದಿಲ್ಲ. ಪೋಲೀಸರು ಹಣ ಜಾಸ್ತಿ ಯಾರು ಕೊಡುತ್ತಾರೆ, ಅವರ ಕಡೆ ಹೋಗುತ್ತಾರೆ. ನಿಜವಾದ ಅಪರಾಧಿ ಇಂಥ ಸಂದರ್ಭದಲ್ಲಿ ೪-೫ ಸಾವಿರ ರೂಪಾಯಿ ಜೇಬಿಗೆ ಹಾಕಿ ಬಿಟ್ಟ. ಇದರಿಂದಾಗಿ ಅಪರಾಧಿಯನ್ನು ನಿರಪರಾಧಿಯೆಂದು ಮಾಡಲು ಪ್ರಯತ್ನ ಮಾಡಿದ. ಸಬ್-ಇನ್ಸ್‌ಪೆಕ್ಟರ್ ಇಲ್ಲದಿದ್ದಾಗ ಅಲ್ಲಿಯ ಹೆಡ್‌ಕಾನ್‌ಸ್ಟೇಬಲ್ ಸ್ಕೂಲ್ ಎಂಟ್ರಿ ತೆಗೆದುಕೊಂಡು ಅಪರಾಧಿಯನ್ನು ಅರೆಸ್ಟ್ ಮಾಡಿ ಕೋರ್ಟಿಗೆ ಹಾಜರು ಮಾಡಿದ. ನಂತರ ಅವನನ್ನೂ ಹಾಗೆ ಮಾಡಿದ್ದಕ್ಕೆ ಸಸ್ಪೆನ್‌ಶನಿನಲ್ಲಿ ಇಟ್ಟರು. ಇಂಥ ಕೇಸುಗಳಲ್ಲಿ ಇಂಥವನನ್ನೆ ಜಾಮೀನಿಗೆ ಕರೆದುಕೊಂಡು ಬರಬೇಕೆಂದು ಹೇಳುತ್ತಾರೆ ಈ ರೀತಿ ನಮ್ಮ ದೇಶದ ಆಡಳಿತ ಇವತ್ತು ಇವರ ಕೈಯಲ್ಲಿ ಕೆಟ್ಟು ನಡೆಯುತ್ತಿದೆ. ಸರಿಯಾಗಿ ನಡೆಯುತ್ತಾ ಇಲ್ಲ, ನ್ಯಾಯ ದೊರಕುತ್ತಾ ಇಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಬರೆದಿದ್ದೇನೆ, ಮುಖ್ಯಮಂತ್ರಿಯವರಿಗೂ ಬರೆದಿದ್ದೇನೆ. ಆ ಹುಡುಗಿಯನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಎಲ್ಲಿಯೋ ಒಂದು ಭಾಗದಲ್ಲಿ ಇಟ್ಟಿದ್ದರು. ಅಲ್ಲಿಂದ ಯಾರೋ ಒಬ್ಬನು, ಆ ಹುಡುಗಿ ಕಾಗದ ಬರೆದ ಹಾಗೆ ಬರೆದು, ತನ್ನ ಸ್ವತ: ಇಚ್ಛೆಯಿಂದ ಹೋಗಿದ್ದೇನೆ ಎನ್ನುವಹಾಗೆ ಬರೆದಿದ್ದಾನೆ. ಈ ರೀತಿಯ ಒಂದು ದುರ್ವ್ಯವಸ್ಥೆ ಇದ್ದರೆ ಹೇಗೆ? ಈ ರೀತಿ ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿದೆ. ಅದೇ ರೀತಿ

ಅಲ್ಲಿ ಒಬ್ಬ ವೈಸ್‌ಚೇರ್‌ಮೇನ್ ಆಫ್ ಹೊಬ್ಬಿಗೆರೆ ವಿಲೇಜ್ ಪಂಚಾಯಿತ್, ಇವರನ್ನು ಯಾರೋ ಒಬ್ಬ ಶ್ರೀಮಂತನ ದಬ್ಬಾಳಿಕೆಯಿಂದ ಅರೆಸ್ಟ್ ಮಾಡಿಸಿದ್ದಾರೆ. ಅವನನ್ನ ಸಂತೆ ಬೆನ್ನೂರಿನಲ್ಲಿ ಇಡುವ ಬದಲು ಚನ್ನಗಿರಿಯಲ್ಲಿ ಇಟ್ಟಿದಾರೆ. ಅವನಿಗೆ ಬೈಲಾ ಕೊಟ್ಟರೂ. ಬೈಲಾ ಮೇಲೆ ಬಿಟ್ಟಿಲ್ಲ. ಈ ರೀತಿ ಪೋಲೀಸ್ ಇಲಾಖೆಯಲ್ಲಿ ದುರಾಡಳಿತ ನಡೆಯುತ್ತಿದೆ. ಅದನ್ನು ನೋಡಿದರೆ, ಹಿಂದಿನ ಬ್ರಿಟಿಷರ ಕಾಲದಲ್ಲಿ ಜನರಿಗೆ ಎಷ್ಟೋ ಸುಗಮವಾದ ಆಡಳಿತ ಇತ್ತು ಎಂದು ಹೇಳಬಹುದು. ಆದರೆ ಇವತ್ತು ಬಿಳಿ ಟೋಪಿಯ ರಾಜ್ಯಾಡಳಿತ ಬಂದು ಆಡಳಿತ ದುರಾಡಳಿತವಾಗಿದೆ. ನಮ್ಮ ಸಬ್-ಇನ್ಸ್‌ಪೆಕ್ಟರ್ ಇನ್‌ವೆಸ್ಟಿಗೇಶನ್ ಯಾದ ತರ ಮಾಡುತ್ತಾರೆಂದರೆ, ಯಾರಾದರೂ ೫೦ ಜನರು ಪಿರ್ಯಾದಿ ಕೊಟ್ಟು ಬಿಟ್ಟರೆ. ಇವರಿಗೆ ಇಷ್ಟವಿದ್ದ ವರನ್ನು ವಿಚಾರ ಮಾಡುವುದು ಮತ್ತು ಬಾಕಿ ವಿಟ್‌ನೆಸ್ ವಿಚಾರವೇ ಮಾಡುವುದಿಲ್ಲ. ಪಿರ್ಯಾದಿ ಕೊಡು ವಂತೆ ಮಾಡುವುದು ಮತ್ತು ಚಾರ್ಜ್‌ಶೀಟ್ ಹಾಕುವುದು. ಈ ರೀತಿಯ ದುರಾಡಳಿತ ಏಕೆನಡೆಯುತ್ತದೆ ಇದ ರಿಂದ ದೇಶದ ಜನರಿಗೆ ಯಾವ ರೀತಿಯ ರಕ್ಷಣೆ ಸಿಗುತ್ತದೆ, ಮತ್ತು ಲಾ ಅಂಡ್ ಆರ್ಡರ್ ಎಷ್ಟು ಮಟ್ಟಿಗೆ ಮೈಂಟೈನ್ ಮಾಡುತ್ತಾರೆಂದು ತಿಳಿಯಬಹುದು. ಇನ್ನು ಚನ್ನಗಿರಿಯ ಒಂದು ದೇವಸ್ಥಾನದ ವಿಚಾರದಲ್ಲಿ ಪೋಲೀಸರು ಕೆಟ್ಟ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ. ಆದರೂ ಸುಮ್ಮನೆ ದೇವಸ್ಥಾನದಲ್ಲಿ ಡಿಸ್ಪ್ಯೂಟ್ ಇದೆಯೆಂದು ಚಾರ್ಜ್ ಹಾಕುತ್ತಿದ್ದಾರೆ. ಈ ರೀತಿ ದುರಾಡಳಿತ ಲಂಚಕೋರತನ ದಿನೇ ದಿನೇ ಹೆಚ್ಚಾಗಿವೆ. ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರಿಗೆ ಹೊನ್ನಾಳಿ ತಾಲ್ಲೂಕಿನಲ್ಲಿ, ಬಹಳ ಸಂಬಂಧಿಗಳು ಇದ್ದಾರೆ. ಅವರು ಯಾವಾಗ ನೋಡಿದರೂ ಹೊನ್ನಾಳಿಗೆ ಹೋಗುತ್ತಾರೆ. ಬಸವ ಪಟ್ಟಣದಲ್ಲಿ ಮಾರ್ಕೆಟಿಂಗ್ ಸೊಸೈಟಿಯಲ್ಲಿ ೧೪ ಸಾವಿರ ರೂಪಾಯಿ ಕಳ್ಳತನವಾಯಿತು. ಅದನ್ನು ಪತ್ತೆಹಚ್ಚುವುದಕ್ಕೆ ಇನ್ನೂ ಆಗಿಲ್ಲ. ಪ್ರೆಸಿಡೆಂಟರು ಆಫೀಸರೇ ಕಳ್ಳತನ ಮಾಡಿದ್ದೆಂದು ಹೇಳುತ್ತಾರೆ. ಇನ್ನೂ ಡಿಟೆಕ್ಟ್ ಆಗಿಲ್ಲ ಪೋಲೀಸಿನವರು ಮಾರ್ಕೆಟಿಂಗ್ ಸೊಸೈಟಿಯವರು ದುಡ್ಡು ಕೊಟ್ಟರೆ ಏನಾದರೂ ಪ್ರಯತ್ನ ಮಾಡುತ್ತಾರೋ ಏನೊ ಇನ್ನು ಗೆದ್ದಹಟ್ಟಿ ಯಲ್ಲಿ ಒಂದು ಗಲಾಟೆಯಾಯ್ತು. ಅಲ್ಲಿ ಮುಸ್ಲಿಮರು ಸಹ ಹೆಚ್ಚಾಗಿದ್ದಾರೆ. ಆಗ ಫೈಯರ್ ಒಪನ್ ಮಾಡಿದರು. ಆದರೆ ಚಾರ್ಜ ಶೀಟ್ ಹಾಕಿರುವುದು ಅಲ್ಲಿರತಕ್ಕ ಕೊರಚ ಜನಾಂಗದವರ ಮೇಲೆ.

ಈ ರೀತಿಯಾಗಿ ದಿನೇ ದಿನೇ ದುರಾಡಳಿತ ನಡೆಯುತ್ತಿದೆ. ನಾನೇ ನಿನ್ನ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರು ಕೊಟ್ಟಿದ್ದೇನೆ. ನಮ್ಮ ದೇಶದಲ್ಲಿ ಕಾನೂನು ಇದೆಯೇ, ಸರ್ಕಾರ ಇದೆಯೇ ಎಂದು ನಾನು ಕೇಳಬೇಕಾಗಿದೆ. ಮೊದಲೇ ನಾನು ಈ ವಿಚಾರವನ್ನು ನಾನು ಐ.ಜಿ.ಪಿ.ಯವರ ಗಮನಕ್ಕೆ ತಂದಿದ್ದೇನೆ. I feel he is an absolutely useless gentleman. The earlier he is removed the better ಅವರಿಗೆ ಕಂಪಲ್ಸರಿ ರಿಟೈರ್‌ಮೆಂಟ್ ಕೊಡಿ. ಈ ಡಿಮ್ಯಾಂಡ್ ಇದ್ದರೂ ಅವರು ಈ ಸಭೆಗೆ ಬರುವುದಿಲ್ಲ. ಇಂತಹ ಆಫೀಸರನ್ನು ಇಟ್ಟುಕೊಂಡಿದ್ದೀರಿ. ಅವರು ಬೆಂಗಳೂರು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ, ಯಾರನ್ನಾದರೂ ವಿಚಾರಮಾಡಬೇಕೆಂಬ ಮನೋದೃಷ್ಟಿ ಅವರಿಗೆ ಇಲ್ಲ. ಇಂತಹ ಅಧಿಕಾರಿಗಳನ್ನು ನೀವು ಇಟ್ಟುಕೊಂಡರೆ ಜನತೆ ತಮ್ಮ ಆತ್ಮರಕ್ಷಣೆಗೋಸ್ಕರ ಪೊ ಲೀಸರ ಮೇಲೆ ಬೀಳುವ ಪ್ರಸಂಗ ಬರುತ್ತದೆ. ಸರ್ಕಾರ ಇನ್ನುಮುಂದೆ ಇಂತಹ ಪುಕಾರುಗಳು ಬಂದರೆ ಜಾಗ್ರತೆ ಯಾಗಿ ತೀರ್ಮಾನ ಮಾಡಬೇಕು, ಅನೇಕ ಜನರು ದುಡ್ಡು ಕೊಡುತ್ತಾರೆ. ಈ ರೀತಿಯಾಗಿ ದುರಾಡಳಿತ ನಡೆಯುತ್ತಾ ಇದೆ. ಆದ್ದರಿಂದ ಈ ಬೇಡಿಕೆಯನ್ನು ನಾನು ವಿರೋಧಿಸಿ ನನಗೆ ಅಧ್ಯಕ್ಷರು ಈಗ ಮಾತ ನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ (ಷಹಪೂರ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಸಾಮಾನ್ಯ ಆಡಳಿತ, ಪೋಲೀಸ್ ಮತ್ತು ಪ್ರಿಸನ್ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ಮೈಸೂರು ರಾಜ್ಯದಲ್ಲಿ ನಾಲ್ಕನೇ ಚುನಾವಣೆಯಾದ ನಂತರ ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ, ಅದನ್ನು ಬಿಚ್ಚುಮನಸ್ಸಿನಿಂದ ವಿಚಾರ ಮಾಡಿದರೆ ಮೈಸೂರು ರಾಜ್ಯದಲ್ಲಿ ಸಾಮಾನ್ಯ ಆಡಳಿತ ತಕ್ಕಮಟ್ಟಿಗೆ ಸರಿಯಾಗಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಆದರೆ ಸುಮಾರು ೨೦ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಚೆನ್ನಾಗಿ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನರಿಗೆ ತಕ್ಕ ಸೌಕರ್ಯಗಳು ಆಗಲಿಲ್ಲವೆಂದು ನಾನು ಹೇಳಬಯಸುತ್ತೇನೆ. ಆಡಳಿತದ ಮುಖಾಂತರ ಸೌಕರ್ಯಗಳು ತೀವ್ರಗತಿಯಲ್ಲಿ ಜನತೆಗೆ ಎಷ್ಟರಮಟ್ಟಿಗೆ ಮುಟ್ಟಬೇಕಾಗಿತೋ ಅಷ್ಟರಮಟ್ಟಿಗೆ ಮುಟ್ಟಿಲ್ಲ. ಅದರ್ಕೆ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಅಧಿಕಾರ ಸ್ಥಾನದಲ್ಲಿರತಕ್ಕವರು ಯಾರೇ ಆಗಲೀ ಅವರು ತಮ್ಮ ಅಧಿಕಾರವನ್ನು ಪ್ರಾಮಾಣಿಕವಾಗಿ ಚಲಾಯಿ ಸುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಪ್ರಜಾ ಪ್ರಭುತ್ವದಲ್ಲಿ ಇರತಕ್ಕ ಅಧಿಕಾರಿಗಳು ಬಿಚ್ಚುಮನಸಿನಿಂದ, ನಿಷ್ಪಕ್ಷಪಾತದಿಂದ ಮತ್ತು ಒಳ್ಳೆಯ ದಕ್ಷತೆ

(ಶ್ರೀ ಬಾಪೂ ಗೌಡ)

ಯಿಂದ ಕಾರ್ಯ ಮಾಡತಕ್ಕ ಒಂದು ವಾತಾವರಣ ಕಡಿಮೆಯಾಗಿದೆ. ಈ ಒಂದು ವಾತಾವರಣದಲ್ಲಿ ಎಷ್ಟುಮಟ್ಟಿಗೆ ಕೆಲಸಗಳು ಕಾರ್ಯಗತವಾಗಬೇಕೋ ಅಷ್ಟರಮಟ್ಟಿಗೆ ಆಗಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಿಕ್ಕಿಲ್ಲ. ಇಂದು ಈ ವರ್ಷದಲ್ಲಿ ಸಾಮಾನ್ಯ ಆಡಳಿತಕ್ಕೆ ತಕ್ಕಮಟ್ಟಿಗೆ ಧಕ್ಕೆ ಬರುವ ಪರಿಸ್ಥಿತಿ ಬಂದಿದೆಯೆಂದರೆ ಅದಕ್ಕೆ ಕಾರಣ, ರಾಜಕೀಯ ಪಕ್ಷಗಳ ಅಧಿಕಾರದ ಒಂದು ಲಾಲಸೆಗೆ ತುತ್ತಾಗಿರುವುದೇ ಎಂದು ಹೇಳಬೇಕಾಗಿದೆ. ಇಲ್ಲಿ ಕಾಂಗ್ರೆಸ್ ಪಕ್ಷ ಆಡಳಿತ ಪಕ್ಷವಾಗಿದೆ. ಅಧಿಕಾರದಲ್ಲಿ ಯಾವುದೇ ಪಕ್ಷ ವಿರಲಿ, ಆ ಪಕ್ಷ ಆಡಳಿತವನ್ನು ಸುಗಮವಾಗಿ ನಡೆಸಬೇಕು. ಇತರ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಸರ್ಕಾರದ ಅಧಿಕಾರವನ್ನು ವಹಿಸಿಕೊಂಡು ರಾಜ್ಯಭಾರಮಾಡುತ್ತಿದ್ದಾರೆ. ಈ ವರ್ಷದಲ್ಲಿ ಎಷ್ಟರಮಟ್ಟಿಗೆ ಬೇರೆ ಬೇರೆ ರಾಜ್ಯಗಳಲ್ಲಿ ಆಡಳಿತ ಪಕ್ಷಗಳು ಬದಲಾವಣೆ ಯಾಗಿವೆ ಎಂಬುದನ್ನು ವರ್ತಮಾನ ಪತ್ರಿಕೆಗಳ ಮುಖಾಂತರ ಮತ್ತು ಆಕಾಶವಾಣಿಯಿಂದ ಬರತಕ್ಕ ವರ್ತಮಾನಗಳನ್ನು ನೋಡಿದರೆ ಹೆಚ್ಚಿಗೆ ಕಲ್ಮಶವಾದ ವಾತಾವರಣವನ್ನು ಉಂಟುಮಾಡುವುದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಕಾರಣಭೂತವಾಗಿವೆ ಎಂಬು ದಾಗಿ ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದರು, ಕಲ್ಬುರ್ಗಿಯಲ್ಲಿ ಮತ್ತು ಅಜ್ಜಂಪುರದಲ್ಲಿ ಈ ಸರ್ಕಾರ ಉದ್ದೇಶಪೂರ್ವಕವಾಗಿಯೇ ಹೆದರಿಕೆಯನ್ನು ಬೇರೆ ಬೇರೆ ಇಲಾಖೆಗಳ ಮುಖಾಂತರ ಉಂಟುಮಾಡಿದ್ದಾರೆ, ಅಧಿಕಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಕೇಂದ್ರೀಕೃತ ಮಾಡತಕ್ಕ ವಾತಾವರಣವನ್ನು ಉಂಟುಮಾಡಿ ಅಧಿ ಕಾರ ದುರುಪಯೋಗಮಾಡತಕ್ಕ ಪ್ರಯತ್ನಮಾಡಬಾರದೆಂದು ಹೇಳಿದರು. ಈಗಿನ ಪರಿಸ್ಥಿತಿಯನ್ನು ನಾವು ಸ್ವಲ್ಪಮಟ್ಟಿಗೆ ವಿಚಾರ ಮಾಡಿ ನೋಡಿದರೆ ದೆಹಲಿಯಲ್ಲಿ ಒಂದು ಪ್ರಕರಣವಾಯಿತು. ಬ್ಯಾಂಕ್ ರಾಷ್ಟ್ರೀಕರಣ ಬಗ್ಗೆ ವರ್ಕಿಂಗ್ ಕಮಿಟಿಯಾಗುವ ಕಾಲಕ್ಕೆ ಕೆಲವು ಘಟನೆಗಳು ನಡೆದಿವೆ. ಮಾನ್ಯ ಶ್ರೀ ನಿಜಲಿಂಗಪ್ಪನವರೂ ಸಹ ವರ್ಕಿಂಗ್ ಕಮಿಟಿಯಲ್ಲಿದ್ದರು. ಅಂತಹ ಸಂದರ್ಭದಲ್ಲಿ ಅಲ್ಲಿರುವ ಜವಾಬ್ದಾರಿ ಜನರು ೮-೧೦ ಟ್ರಕ್‌ಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಲ್ಲೆ ಮಾಡತಕ್ಕ ಪ್ರಯತ್ನಮಾಡಿದರು. ಆದರೆ ದೆಹಲಿಯಲ್ಲಿ ಕೇಂದ್ರ ಸರ್ಕಾರವಿರುವುದರಿಂದ ಅದು ಇಡೀ ರಾಷ್ಟ್ರಕ್ಕೇ ಒಂದು ಪ್ರಧಾನ ಮಂತ್ರಿ ಗಳು ಇರತಕ್ಕ ಸ್ಥಳವಾಗಿರುವುದರಿಂದ, ಇಂತಹ ಕೆಲಸ ನಡೆದಾಗ ಅಂತಹ ಸಂದರ್ಭದಲ್ಲಿ ಯಾವ ಹೆಜ್ಜೆ ಯನ್ನು ತೆಗೆದುಕೊಂಡರು ಎಂದು ವಿಚಾರಮಾಡಿದರೆ ಅದು ಅಸಹ್ಯವಾಗಿ ಕಾಣುತ್ತದೆ.

SRI K. H, RANGANATH:—Shall we take it as revenge here ?

ಶ್ರೀ ಬಾಪೂಗೌಡ:—ಕೇಂದ್ರ ಸರ್ಕಾರದಲ್ಲಿ ನಾವು ಇವತ್ತು ಯಾರ ಮೇಲೂ ಚಾಲೆಂಜ್ ಮಾಡುತ್ತಾ ಇಲ್ಲ. ಅನೇಕ ಸಂದರ್ಭಗಳಲ್ಲಿ ಇಂತಹ ಪರಿಸ್ಥಿತಿ ದೇಶದ ಮುಂದೆ ನಿರ್ಮಾಣವಾಗುತ್ತದೆ. ಕಲ್ಬುರ್ಗಿ ಯಲ್ಲಿ ಹಿಂದೆ ಗಲಾಟೆಯಾದಾಗ ಹೆಚ್ಚು ಪ್ರಮಾಣದಲ್ಲಿ ಅದರ ಬಗ್ಗೆ ತಿಳುವಳಿಕೆಯನ್ನು ತೆಗೆದುಕೊಳ್ಳಲಿಲ್ಲ. ಗುಲ್ಬರ್ಗಾದಲ್ಲಿ ಎಂ.ಎಸ್.ಕೆ. ಮಿಲ್ ಬಗ್ಗೆ ಗಲಾಟೆಯಾದಾಗ ಯಾವರೀತಿಯಾದಂಥ ಸಮಾರಂಭಗಳು ಆಗಬಾರದು ಎಂಬುದಾಗಿ ಹೇಳಿದ್ದರೂ ಅಂತಹ ಪರಿಸ್ಥಿತಿಯಲ್ಲಿ ಜವಾಬ್ದಾರಿ ಜನರು ಕೇಂದ್ರ ಸರ್ಕಾರದ ಇಬ್ಬರು ಪಾರ್ಲಿಮೆಂಟ್ ಮೆಂಬರ್‌ಗಳು ಸಾರ್ವಜನಿಕ ಸಭೆಯನ್ನು ಮೊದಲು ಪ್ರಾರಂಭಮಾಡಿದರು. ಕೆಲವು ಇಂಡಿಕೇಟ್ ಸದಸ್ಯರು ತಪ್ಪುಮಾಡಿದರು. ಅದಕ್ಕೆ ಪರವಾನಿಗೆ ಕೊಟ್ಟಿದ್ದರೂ ಹೊರಗೆ ಮೀಟಿಂಗ್ ಮಾಡುವ ಕಾಲಕ್ಕೆ ಗಲಾಟೆ ಮಾಡಿದರು. ಇಂತಹ ಪರಿಸ್ಥಿತಿಯಲ್ಲಿ ಎಲ್ಲರೂ ಈ ಒಂದು ಪರಿಸ್ಥಿತಿಗೆ ಜವಾಬ್ದಾರರು ಎಂದು ಹೇಳಿದರೆ ತಪ್ಪಾಗಲಾರದು, ಇವತ್ತಿನ ದಿವಸ ಐ.ಜಿ.ಪಿ.ಯವರನ್ನು ತೆಗೆದು ಹಾಕಿದರೆ ಅಧಿಕಾರಗಳಲ್ಲಿರತಕ್ಕ ನೈತಿಕ ಮಟ್ಟ ಹೆಚ್ಚಿಸಲು ಅದು ಎಷ್ಟು ಪ್ರಮಾಣದಲ್ಲಿ ಉಪಯೋಗವಾಗು ತ್ತದೆ ಯೋಚನೆ ಮಾಡಬೇಕು. ಕೇವಲ ಬೇರೊಬ್ಬರನ್ನು ಚಾರ್ಜ್‌ಮಾಡಿ ನಾವು ಸರಿಯಾಗಿ ನಡೆಯದೇ ಹೋದರೆ ಅದು ತಪ್ಪಾಗುತ್ತದೆ. ಸಾಮಾನ್ಯ ದೃಷ್ಟಿಯಿಂದ ನೋಡಿದರೆ, ಅಧಿಕಾರದಲ್ಲಿರುವ ಜನರು, ಅಧಿಕಾರೇತರರಾಗಿರುವವರೂ ಪ್ರತಿಯೊಬ್ಬರೂ ಕೂಡ ಅಷ್ಟೇ ರೀತಿಯಿಂದ ಜವಾಬ್ದಾರರಾಗಿರುತ್ತಾರೆಂದು ನಾನು ತಿಳಿದಿದ್ದೇನೆ.

5-30 P. M.

ಈಗ ಸಾಮಾನ್ಯವಾಗಿ ಜಿಲ್ಲಾಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಎಷ್ಟು ತ್ವರಿತ ಗತಿಯಿಂದ ಫೈಲ್ಸ್‌ಮೂವ್ ಆಗಬೇಕೋ ಅದು ಆಗುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ಹೆಜ್ಜೆ ತೆಗೆದು ಕೊಂಡಿದ್ದಾರೆ ಎಂದು ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿ ಎಷ್ಟೋ ತರಹದ ಸಾಲಗಳನ್ನು ಕೊಟ್ಟಿದ್ದಾರೆ. ಆದರೆ ಆ ಸಾಲ ವಾಪಸ್ಸು ಕೊಟ್ಟಂಥ ಸಂದರ್ಭದಲ್ಲಿ ರೆಕಾರ್ಡಿನಲ್ಲಿ ಎಂಟ್ರಿ ಹಾಕಿರುವುದಿಲ್ಲ. ಹಣ ಕೊಟ್ಟಂಥ ರೈತ ಪುನಃ ಸಾಲ ವಾಪಸ್ ಕೊಡುವ ಪರಿಸ್ಥಿತಿ ಬಂದಿದೆ. ರೈತರು ಪಹಣಿ ಸಲುವಾಗಿ

ಅರ್ಜಿ ಹಾಕಿದರೆ ಅದಕ್ಕೆ ಮಾಮೂಲು ಕೊಡಬೇಕಾಗಿದೆ. ಕೋರ್ಟುಗಳ ವಿಷಯ ಮಾತನಾಡಿದರೆ ತಪ್ಪಾಡೀತು. ಆದರೆ ಹೈಕೋರ್ಟಿನಲ್ಲಿ ಫೈಲು ಬೇಕಾದರೂ ಅಲ್ಲಿಯೂ ಕೂಡ ಈ ಮಾಮೂಲು ಕೊಡ ಬೇಕಾಗುತ್ತದೆ. ಈ ರೀತಿ ದಿನಂಪ್ರತಿ ವ್ಯವಹಾರದಲ್ಲಿ ಮಾಮೂಲು ಕೊಡಬೇಕಾಗಿದೆ. ಮಾಮೂಲು ಇರಲಾರದೆ ಫೈಲು ಮೂವ್ ಆಗುವುದಿಲ್ಲ. ಆದುದರಿಂದ ತಪ್ಪುಮಾಡಿದ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕು. ಆದರೆ ಅಧಿಕಾರಿಗಳು ನಮ್ಮ ಕೈಯಲ್ಲಿ ಇಲ್ಲ ಎಂದು ಹೇಳುತ್ತಾರೆ. ಈಗ ಸರ್ವಿಸ್ ರೂಲ್ಸ್ ಪ್ರಕಾರ ಪ್ಯೂನನ್ನ ಕೂಡ ಸಸ್‌ಪೆಂಡ್ ಮಾಡುವುದಕ್ಕೆ ಅವಕಾಶವಿಲ್ಲ. ಪ್ಯೂನ್ ತಪ್ಪುಮಾಡಿದಾಗ ಅವನನ್ನು ಸಸ್‌ಪೆಂಡ್ ಮಾಡುವ ಮೊದಲು ಚಾರ್ಜ್ ಷೀಟ್ ಕೊಡಬೇಕು. ಅವನು ಉತ್ತರ ಕೊಡಬೇಕು,ಕಡೆಗೆ ಆತನು ಇನ್‌ಫ್ಲೂಯೆನ್ಸ್ ಮಾಡಿದರೆ ಸಸ್‌ಪೆಂಡ್ ಕೂಡ ಕೊಡುವುದಿಲ್ಲ. ಸಿನ್‌ಸಿಯರ್ ಆದ್ದ ಅಧಿಕಾರಿಗಳು ಕೆಲಸಮಾಡಲಿಕ್ಕೆ ಪ್ರಯತ್ನ ಮಾಡಿದರೆ ಎಷ್ಟೋ ವಿಘ್ನಗಳು ಬರುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಆಡಳಿತದಲ್ಲಿ ಒಂದು ಬಿಗು ಗ್ರಿಪ್ ಬರಬೇಕಾಗಿದೆ. ಸರ್ವಿಸ್ ರೂಲ್ಸ್‌ನಲ್ಲಿ ತಿದ್ದುಪಡಿ ಮಾಡಿದರೆ ಸರಿಹೋಗುತ್ತದೆ ಇಲ್ಲದೆ ಹೋದರೆ ಗ್ರಿಪ್ ಬಿಗು ಉಳಿಯುವುದಿಲ್ಲ. ಅದಾದನಂತರ ಸೀನಿಯಾರಿಟಿ ಲಿಸ್ಟ್ ಪ್ರಮೋಷನ್ಸ್ ವಿಚಾರ. ಜೂನಿಯರ್ ಮೋಸ್ಟ್ ಆಗಿದ್ದವರು ಸೀನಿಯರ್‌ಮೋಸ್ಟ್ ಆಗುತ್ತಾನೆ. ಒಬ್ಬ ಸಬ್‌ಇನ್‌ಸ್ಪೆಕ್ಟರ್ ಪ್ರಮೋಷನ್ ಆಗಬೇಕಾದರೆ ಎಸ್. ಪಿ. ಯನ್ನೋ ಡಿ. ಐ. ಜಿ. ಯನ್ನೊ ಸರಿಯಾಗಿ ನೋಡಿ ಕೊಂಡಿದ್ದರೆ, ಆಗ ಅವರ ವಿಮ್ಸ್ ಮತ್ತು ಫ್ಯಾನ್ಸಿಗೆ ತಕ್ಕಂತೆ ಪ್ರಮೋಷನ್, ಆಗುವ ಪರಿಸ್ಥಿತಿ ಇದೆ. ಒಬ್ಬ ರೆವಿನ್ಯೂ ಆಫೀಸರ ಮೇಲೆ ಉಚ್ಚ ಅಧಿಕಾರಿ ಅವರ ಆಫೀಸನ್ನು ಇನ್‌ಸ್ಪೆಕ್ಟ್ ಮಾಡಿ ಅವನ ಕಾನ್‌ಫಿಡೆಂಷಿಯಲ್ ರಿಪೋರ್ಟ್‌ನಲ್ಲಿ ಫೇರ್ ಎಂದು ಬರೆಯುತ್ತಾನೆ. ಎಂದು ಇಟ್ಟುಕೊಳ್ಳಿ. ಅದೇ ತಿಂಗಳ ಇನ್ನೊಂದು ಕಾನ್‌ಫಿಡೆಂಷಿಯಲ್ ರಿಪೋರ್ಟ್ ಬರೆದು very easy going ಎಂದು ಬರದರೆ ಅವನ ಪ್ರಮೋಷನ್ ನಿಂತುಹೋಗುತ್ತದೆ. ಉಚ್ಚ ಮಟ್ಟದ ಅಧಿಕಾರಿಗಳ ವಿಮ್ಸ್ ಅಂಡ್ ಫಾನ್ಸಿಯನ್ನು ಅನುಸರಿಸಿ ನಡೆಯುವವನಿಗೆ ಪ್ರಮೋಷನ್ ಸಿಕ್ಕುತ್ತದೆ. ಆದರೆ ಸಿನ್ಸಿಯರ್ ಆಗಿ ದಕ್ಷತೆ ಯಿದ್ದ ಅಧಿಕಾರಿಗೆ ಎಂದೂ ಪ್ರಮೋಷನ್ ಸಿಗುವುದಿಲ್ಲ. ಆ ದಿಸೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಲಿಂಗೇ ಗೌಡ ಎಂಬುವರು ೨೩ ವರ್ಷಗಳಿಂದಲೂ ತಹಸೀಲ್‌ದಾರರಾಗಿ ಕೆಲಸಮಾಡಿದ್ದಾರೆ. ಆತ ಸಾಯುವವರೆಗೂ ಕೂಡ ತಹಸೀಲ್‌ದಾರರಾಗಿ ಇರಬೇಕಾಯಿತು. ಅವರ ಕಾನ್‌ಫಿಡೆಂಷಿಯಲ್ ರಿಪೋರ್ಟಿನಲ್ಲಿ ಹಿ ಈಸ್ ಇನ್ ದಿ ಹಾಬಿಟ್ ಆಫ್, ವಿಜಟಿಂಗ್ ಟೆಂಪಲ್ಸ್ ಎಂದು ಬರೆದಿದ್ದಾರೆ. ಆದರೆ ಅವರ ಜೊತೆಗೆ ಇದ್ದವರು ಹೈದರಾಬಾದ್‌ನಲ್ಲಿ ಡೆಪ್ಯುಟೀ ಕಮಿಷನ್‌ರಾಗಿದ್ದಾರೆ ಈ ರೀತಿ ಆಫೀಸುಗಳು ಇನ್‌ಸಿನ್‌ಸೀಯರ್ ಆಗಿದ್ದರೂ ಅವರ ಮೇಲಧಿಕಾರಿಗಳು ಹೇಳಿದಂತೆ ನಡೆದರೆ ಅವರಿಗೆ ಪ್ರಮೋಷನ್ ಸಿಕ್ಕುತ್ತದೆ. ಎನ್ನುವ ವಾತಾವರಣದಲ್ಲಿ ಇದ್ದೇವೆ. ಇನ್ನು ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಪ್ರತಿಯೊಂದು ಕಡೆಯೂ ಮಾಮೂಲು ಕೊಡದೆ ಕೆಲಸವಾಗುವುದಿಲ್ಲ ಎಂದು ನನಗನಿಸುತ್ತದೆ. ಪಿ ಡಬ್ಲ್ಯೂ. ಡಿ. ಕಂಟ್ರಾಕ್ಟರುಗಳು ಆಫೀಸಿನಲ್ಲಿ ಮಾಮೂಲು ಕೊಡಬೇಕು. ಆರ್. ಟಿ. ಓ. ಆಫೀಸಿನಲ್ಲಿ ಮಾಮೂಲು ಕೊಡಬೇಕು. ಎಕ್ಸೈಜಂ ಕಂಟ್ರಾಕ್ಟರುಗಳು ಮಾಮೂಲು ಕೊಡಬೇಕು. ಹೀಗೆ ಈ ಮೂರು ಡಿಪಾರ್ಟ್‌ಮೆಂಟ್‌ಗಳಲ್ಲೂ ಮಾಮೂಲನ್ನು ಕೊಡುತ್ತಿದ್ದೇವೆ. ಇದನ್ನು ಆದಷ್ಟು ಕಡಿಮೆ ಮಾಡುವ ಪ್ರಯತ್ನ ಮಾಡಬೇಕು ಮತ್ತು ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಕಾನ್‌ಸ್ಟೇಬಲ್‌ಗಳಿಗೆ ಆದಷ್ಟು ಮಟ್ಟಿಗೆ ಮನೆಗಳನ್ನು ಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ:—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಜನರಲ್ ಅಡ್‌ಮಿನಿಸ್ಟ್ರೇಷನ್ ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಸುಮಾರು ೧೫ ಕೋಟಿ ಚಿಲ್ಲರೆ ಹಣವನ್ನು ಒದಗಿಸಬೇಕೆಂದು ಕೇಳಿರುವುದನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಶ್ರೀ ಷಾನ್ ಬಾಪು ಗೌಡರು ಮೊದಲು ಹೇಗಾದರೂ ಮಾತನಾಡಿರಲಿ ಕೊನೆಗೆ ಸ್ವಾರಸ್ಯವಾಗಿ ಚೆನ್ನಾಗಿ ಮಾತನಾಡಿದರು. ಇದ್ದದ್ದನ್ನು ಇದ್ದ ಹಾಗೆ ಹೇಳುವುದನ್ನು ಯಾವತ್ತೂ ಅಭ್ಯಾಸ ಮಾಡಿಕೊಂಡಿರುವುದಿಲ್ಲ. ಸೀನಿಯಾರಿಟಿ ಇಲ್ಲದೆ ಅಫಿಷಿಯಲ್ ಪ್ರಮೋಷನ್ಸ್ ಯಾವ ಯಾವ ಪ್ಲೇಸ್‌ಲ್ಲಿ ಯಾರು ಯಾರಿಗೆ ಕೊಡಬೇಕು ಎನ್ನುವುದನ್ನು ಇಟ್ಟುಕೊಂಡಿದ್ದಾರೋ ಅದನ್ನು ಸಂಪೂರ್ಣವಾಗಿ, ಬಿಟ್ಟು ಜಸ್ಟೀಸ್ ಪ್ರಕಾರ ಕೊಡಬೇಕೆಂದು ಮಾಡಿದರೆ ಆಗ ಆಫೀಸ್ ವರ್ಕ್‌ನಲ್ಲಿ ಇನ್‌ಟರೆಸ್ಟ್ ಇಟ್ಟು ಕೊಂಡು ಕೆಲಸ ಮಾಡಲಿಕ್ಕೆ ಅವಕಾಶ ಬರುತ್ತದೆ. ಬರೀ ಒಂದು ವರ್ಷದ ಆಡಳಿತದಲ್ಲಿ ನನ್ನ ಮನಸ್ಸಿಗೆ ಸಂತೋಷವಾಗಿದೆ ಎಂದು ಸ್ಟೇಟ್‌ಮೆಂಟ್ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ತನ್ನ ಮನಸ್ಸಿಗೆ ಸಂತೋಷವಾದರೆ ದೇಶಕ್ಕೆ ತೃಪ್ತಿಆದಂತಾಗುವುದಿಲ್ಲ. ಆಫೀಸರುಗಳಿಗೂ ತೊಂದರೆಗಳು ಇವೆ. ಯಾವ ರೀತಿ ಪರಿಹಾರ ಮಾಡಬೇಕು ಎನ್ನುವ ಕಡೆ ಮನಸ್ಸನ್ನು ಹರಿಸಲಿ. ೨೦-೧೫ ಘಂಟೆಯಲ್ಲಿ ರೆಕಾರ್ಡ ಫೈಸಲ್ ಮಾಡುತ್ತೇವೆ ಎಂದು ಭಾಷಣ ಮಾಡಿದರೆ ಆಗುವುದಿಲ್ಲ. ಹೈಕೋರ್ಟಿನಲ್ಲಿ ಹಾಕಿರುವ ರಿಟ್‌ನಿಂದ ಗೊತ್ತಾಗುತ್ತದೆ. ಆಫೀಸ್ ಕೆಲಸ ಮಾಡುತ್ತಾನೆಯೋ ಅಥವಾ ತನಗೆ ಪ್ರಮೋಷನ್ ಸಿಕ್ಕಿಲ್ಲ ತನಗೆ

(ಶ್ರೀ ಕೆ. ಎನ್. ವೀರಪ್ಪಗೌಡ)

ಅನ್ಯಾಯವಾಗಿದೆ ಎಂದು ಓಡಾಡುವುದರಲ್ಲಿ ವರ್ಕ್ ಮಾಡುತ್ತಾನೆಯೋ ಎನ್ನುವುದು ಗೊತ್ತಾಗುತ್ತದೆ. ಕೋರ್ಟಿನಲ್ಲಿ ರಿಟ್‌ಗಳ ಸಂಖ್ಯೆ ೧೫ ಸಾವಿರದಿಂದ ೨೦ ಸಾವಿರಕ್ಕೆ ಹೀಗೆ ಮೇಲಕ್ಕೆ ಹೋಗುತ್ತದೆ. ಆದರಿಂದ ಅವನು ಕೆಲಸ ಮಾಡುತಿದ್ದಾನೆಯೇ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ ಅವರ ಬುದ್ಧಿ, ಪ್ರಮೋಷನ್ ಕಡೆ ಹೋಗುತ್ತಾ ಇದೆ. ಕೆಲವರು ಮಂತ್ರಿಮಂಡಲದಲ್ಲಿ ಪ್ರಾಮುಖ್ಯತೆ ಹೊಂದಿರುವವರು ಸೆಲೆಕ್ಷನ್ ಪೋಸ್ಟ್ ಎಂದು ಮಾಡಿ ತಮ್ಮವರಿಗೆ ಕೊಡಿಸಿ ಕೊಡುತ್ತಿದ್ದಾರೆ. ಕೆಲವು ಕಡೆ ಐ. ಎ. ಎಸ್. ಆಫೀಸ್ ಹುದ್ದೆಗಳನ್ನು ಮಾಡುತ್ತಿದ್ದಾರೆ. ಈ ರೀತಿ ಅಲ್ಲಿ ಇರತಕ್ಕ ಆಫೀಸರುಗಳು ತಮಗೆ ಎಲ್ಲಿ ಪ್ರಮೋಷನ್ ಸಿಕ್ಕುತ್ತದೆಯೋ ಇಲ್ಲವೋ ಎಂದು ಆಲೋಚನೆ ಮಾಡುವುದರಲ್ಲಿ ಸಮಯ ಕಳೆಯುತ್ತಿದ್ದಾರೆ. ಇನ್ನು ಎಕ್ಸ್‌ಟೆನ್‌ಷನ್ ಕೊಡುವ ವಿಷಯ ಮಾನ್ಯ ಸಿದ್ದವೀರಪ್ಪನವರು ಆಗಲೇ ಮಾತನಾಡಿದ್ದಾರೆ. ಪೇಪರ್‌ನಲ್ಲಿ ಬರುತ್ತಾ ಇದ್ದದನ್ನು ನೋಡಿದ್ದೇನೆ. ಯಾರಿಗೂ ಇನ್ನು ಮುಂದೆ ಎಕ್ಸ್‌ಟೆನ್‌ಷನ್ ಕೊಡುವುದಿಲ್ಲ ಹಾಗೆ ಕೊಟ್ಟರೆ ಅಫಿಷಿಯಲ್ ಎಫಿಷಿಯೆನ್ಸಿ ಕಡಿಮೆ ಯಾಗುತ್ತದೆ. ಇದರಲ್ಲಿ ಇರುವ ಉತ್ಸಾಹ ಹೊರಟು ಹೋಗುತ್ತದೆ, ಅವರು ಇರುವ ಕಡೆ ರಿಟೈರ್ಡ್ ಆಗಬೇಕು ಎಂಬ ಮನೋಭಾವನೆ ಬರುತ್ತದೆ. ಅನ್ ಎಂಪ್ಲಾಯ್‌ಮೆಂಟ್ ಜಾಸ್ತಿ ಇರುವುದರಿಂದ ಎಂಪ್ಲಾಯ್‌ಮೆಂಟ್‌ಗೆ ಅವಕಾಶಮಾಡಿಕೊಡಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ತಮಗೆ ಯಾರುಬೇಕೋ ಅವರಿಗೆ ಎಕ್ಸ್‌ಪೀರಿಯನ್ಸ್ ಇದೆ ಎಂದು ಎಕ್ಸ್‌ಟೆನ್‌ಷನ್ ಕೊಡುತ್ತಾರೆ. ಯಾರಿಗೆ ಎಕ್ಸ್‌ಪೀರಿಯನ್ಸ್ ಇರುವುದಿಲ್ಲ.

ಮೂವತ್ತು ವರ್ಷ ಸರ್ವೀಸ್ ಮಾಡಿರುವಾಗ ಎಲ್ಲರಿಗೂ ಕೂಡ ಅನುಭವ ಇದ್ದೇ ಇರುತ್ತದೆ. ಎರಡು ಮೂರು ವರ್ಷ ಅವರ ಕೆಲಸದ ಅವಧಿಯನ್ನು ಮುಂದುವರಿಸುವುದು, ಅಥವಾ ಬೇರೆ ಇನ್ನೊಂದು ಯಾವುವಾದರೂ ಕಡೆ ಕೆಲಸ ಕೊಡಿಸುವುದು ಈ ಪದ್ಧತಿ ವಿಪರೀತವಾಗಿದೆ. ಎಫಿಷೆನ್ಸಿ ಜಾಸ್ತಿಯಾಗ ಬೇಕೆಂದು ಒಂದು ಕಡೆ ಹೇಳುತ್ತೀರಿ ಮತ್ತೊಂದು ಕಡೆ ಈ ರೀತಿ ತಮಗೆ ಬೇಕಾದವರನ್ನು ಮುಂದುವರಿ ಸುತ್ತೀರಿ, ಹೀಗೆ ಮಾಡುವುದರಿಂದ ಖಂಡಿತ ನಿಮ್ಮ ಆಡಳಿತದಲ್ಲಿ ದಕ್ಷತೆ ಹೆಚ್ಚಾಗುವುದಿಲ್ಲ. ೧೯೭೮ನೇ ಜನವರಿ ಇಸವಿಯಲ್ಲಿ ಒಂದು ಕಾಗದ ಬರೆದಿದ್ದೆ ಶೃಂಗೇರಿಯಲ್ಲಿ ೧೭೪-೧೭೬ನೇ ನಂಬರಿನಲ್ಲಿ ಹತ್ತು ಎಕರೆ ಅನ್ ಆತರೈಸ್ಡ್ ಆಕ್ಯುಪೇಷನ್ ಮಾಡಿಕೊಂಡಿದ್ದಾರೆ. ಅದರ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಇದವರೆಗೂ ಕೂಡ ಉತ್ತರ ಬಂದಿಲ್ಲ ಎಂದರೆ ಎಷ್ಟು ಮಟ್ಟಿಗೆ ಎಫಿಷನ್ಸಿ ಇದೆ ಎಂಬುದನ್ನು ತಾವೆ ತಿಳಿದುಕೊಳ್ಳಬಹುದು. ಒಂದು ಸಾರಿ ಹೋಂ ಮಿನಿಸ್ಟರು ಮತ್ತು ಚೀಫ್ ಮಿನಿಸ್ಟರು ಆಗಿರತಕ್ಕ ಮಂತ್ರಿಗಳು ಚಿಕ್ಕ ಮಂಗಳೂರಿಗೆ ಬಂದು ಟಿ.ಬಿ ನಲ್ಲಿ ಇದ್ದಾಗ ಅವರನ್ನು ಖುದ್ದು ಭೇಟಿ ಆಗಿದ್ದೆ, ಆಗ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಇದ್ದರು ಡಿ.ಎಸ್ ಪಿ ಮತ್ತು ಡಿ.ಸಿ. ಅವರು ಇದ್ದರು ಡಿಸ್ಟ್ರಿಕ್ಟ್ ಬ್ಯಾಂಕಿಗೆ, ಡೈರೆಕ್ಟರುಗಳನ್ನು ಚುನಾಯಿಸಲು ಓಟು ಮಾಡುವಾಗ ಯಾವ ಒಂದು ರೀತಿ ಹಣವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿದೆ, ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ ಅಲ್ಲಿ ಯಾವ ಅಧಿಕಾರಿ ಇದ್ದರೋ ಅವರನ್ನು ಟ್ರಾನ್ಸ್‌ಫರ್ ಮಾಡಿದರು, ಮಾಡಿದ ಕೆಲವೇ ದಿವಸಗಳಲ್ಲೇ ಅದು ಕ್ಯಾನ್ಸಲ್ ಆಯಿತು. ಈ ರೀತಿ ಆದರ ಯಾವ ರೀತಿ ಆಡಳಿತ ನಡೆಯುತ್ತಿದೆ ಅಂತ ಹೇಳಬೇಕು ? ನಾನು ಅಧಿಕಾರಿಗಳ ಮೇಲೆ ಹೆಚ್ಚು ದೂರು ಹೇಳುವುದಕ್ಕೆ ಹೋಗುವುದಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ದಿನ ಬೆಳಗಾದರೆ ಅವರು ಹೇಳಿದ ಹಾಗೆ ಮಾಡಬೇಕೇ ಹೊರತು ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ೧೯೭೮ನೇ ಇಸವಿಯ ನವಂಬರ್ ತಿಂಗಳಿನಲ್ಲಿ ಒಂದು ಕೇಸು ಹಾಕಿದರು ೧೯೭೯ನೇ ಇಸವಿ ಸೆಪ್ಟೆಂಬರವರೆಗೂ ಅದು ಫೈಸಲಾಗಲಿಲ್ಲ. ನಾನು ರಾಜಕೀಯಕ್ಕೆ ಪ್ರವೇಶ ಮಾಡಿ ೨೮ ವರ್ಷ ಆಯಿತು, ಶ್ರೀ ವೀರೇಂದ್ರ ಪಾಟೀಲರು ಪ್ರವೇಶ ಮಾಡಿ ಎಷ್ಟು ವರ್ಷವಾಯಿತೋ ನನಗೆ ತಿಳಿಯದು ಒಂದು ಎಕರೆ ಜಮೀನು ತೆಗದುಕೊಡಿಲ್ಲ, ಒಂದು ಮನೆ ತೆಗೆದುಕೊಂಡಿಲ್ಲ, ಬೆಂಗಳೂರಿನಲ್ಲಿ ಸೈಟು ತೆಗೆದುಕೊಂಡಿಲ್ಲ. ರಾಜಕೀಯದಲ್ಲಿರುವವರು ಅಧಿಕಾರಿಗಳನ್ನು ತಮಗೆ ಇಷ್ಟಬಂದ ಹಾಗೆ ಉಪಯೋಗಿಸಿಕೊಳ್ಳುವುದು ಅವರ ಕರ್ತವ್ಯ ಅಂತಉಪಯೋಗಿಸಿಕೊಳ್ಳುವುದಾದರೆ ಎಫೆಷಿಯಷನ್ಸಿ ಎಲ್ಲಿ ಉಳಿಯುತ್ತದೆ? ಈಗಲಾದರೂ ಸರ್ಕಾರದವರು ಎಚ್ಚೆತ್ತುಕೊಂಡು ಅಡ್ಮಿನ್‌ಸ್ಟ್ರೇಷನನ್ನು ಅಧಿಕಾರಿಗಳಿಗೆ ಬಿಟ್ಟುಬಿಡಿ. ನಾನು ಡಿ.ಸಿ ಅವರನ್ನು ನೋಡಿ ಎಷ್ಟು ತಿಂಗಳಾಯಿತೋ ಗೊತ್ತಿಲ್ಲ, ತಹಸಿಲ್ದಾರರ ಹತ್ತಿರ ನಾನು ಹೋಗಿಯೇ ಇಲ್ಲ. ಡೆಪ್ಯೂಟಿ ಕಮೀಷನರಿಗೆ ಫೋನ್ ಮಾಡುವ ಅಭ್ಯಾಸವನ್ನೇ ನಾನು ಇಟ್ಟುಕೊಂಡಿಲ್ಲ. ಸೀನಿಯಾರಿಟಿ ವಿಷಯದಲ್ಲಿ, ಪ್ರಮೋಷನ್ ಕೊಡುವುದರಲ್ಲಿ ಎಫಿಷಿಯನ್ಸಿ ಮೇಲೆ ಕೊಡಬೇಕು ಅಂತ ಹೇಳುತ್ತೇನೆ.

ಲೋಕೋಪಯೋಗಿ ಮಿನಿಸ್ಟರು ಶೃಂಗೇರಿಯಲ್ಲಿ ಪೋಲೀಸ್ ಕ್ವಾರ್ಟರ್ಸ್ ಓಪನ್ ಮಾಡಿದರು. ಅದು ಇನ್ನೂ ಪೂರ್ತಿಯಾಗಿರಲೇ ಇಲ್ಲ, ಅವರ ಹತ್ತಿರ ಪ್ರಾರಂಭೋತ್ಸವ ಮಾಡಿಸಬೇಕೆಂದು ಮಾಡಿದ್ದು ಆಯಿತು, ನೀರು ಇಲ್ಲ ದೀಪ ಇಲ್ಲ, ಬಡ ಕಾನ್‌ಸ್ಟೇಬಲ್‌ಗಳು ಅದಕ್ಕೆ ಹತ್ತು ರೂಪಾಯಿ

ಬಾಡಿಗೆ ಕೊಡಬೇಕು. ಮಂತ್ರಿಗಳು ಇಷ್ಟು ಸಲ ಪ್ರವಾಸ ಮಾಡುತ್ತಾರೆ ಯಾವುದಾದರೂ ಆಫೀಸಿಗೆ ಹೋಗಿ ಫೈಲು ತರಿಸಿಕೊಂಡು ಅದು ವಿಲೇವಾರಿಯಾಗದೆ ಇದ್ದರೆ ಏಕೆ ವಿಲೆವಾರಿ ಮಾಡಿಲ್ಲ ಎಂದು ಪ್ರಶ್ನಿಸಿದ್ದಾರೆಯೇ ಅಂತ ಕೇಳುತ್ತೇನೆ. ಎಲ್ಲೋ ಬರುತ್ತಾರೆ ನಾಲ್ಕು ಮಾತು ಆಡುತ್ತಾರೆ, ಮುಂದಿನ ಪ್ರೋಗ್ರಾಂಗೆ ಹೊತ್ತಾಯಿತು ಅಂತ ಹೊರಟು ಹೋಗುತ್ತಾರೆ. ಇಷ್ಟರಲ್ಲೇ ಆಯಿತೇ ಹೊರತು, ಸರ್ಕಾರಿ ಕೆಲಸಕ್ಕಾಗಿ ಬಂದಿದ್ದೇವೆ, ಸರ್ಕಾರದ ದುಡ್ಡನ್ನು ಖರ್ಚು ಮಾಡುತ್ತೇವೆ ಆದ್ದರಿಂದ ಫೈಲ್ ತರಿಸಿ ನೋಡಿ ಮೂರು ತಿಂಗಳವರೆಗೂ ವಿಲೇವಾರಿಯಾಗದಿದ್ದರೆ ಏಕೆ ನಿಂತಿದೆ ಅಂತ ಕೇಳಿ ಏಕೆ ಕ್ರಮ ತೆಗೆದು ಕೊಳ್ಳುವುದಿಲ್ಲ ? ಪೇಪರ್‌ನಲ್ಲಿ ಕಮಿಟಿ ಮಾಡುತ್ತೇವೆ ಅಂತ ಹೇಳುವುದು, ಅದು ಮಾಡುತ್ತೇವೆ ಇದು ಮಾಡುತ್ತೇವೆ ಅಂತ ಹೇಳುವುದು, ಅದು ಪೇಪರ್‌ನಲ್ಲಿ ಬಂದ ಕೂಡಲೇ ಜನ ತಮ್ಮ ಕಡೆಗೆ ಬರುತ್ತಾರೆ ಅಂತ ತಾವು ಭಾವಿಸಿದ್ದರೆ ಅದು ಶುದ್ಧ ತಪ್ಪು ಅಭಿಪ್ರಾಯ. ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ರಾತ್ರಿ ೮ ಗಂಟೆಗೆ ಬರುತ್ತಾರೆ ಅಂತ ಇತ್ತು, ೧೨ ಗಂಟೆಗೆ ಬಂದರು, ಅಧಿಕಾರಿಗಳು ರಾತ್ರಿಯೆಲ್ಲಾ ಕಾದುಕೊಂಡು ಕೂತಿದ್ದರು, ಕಾಫಿ ಇಲ್ಲ ತಿಂಡಿ ಇಲ್ಲ. ಪೋಲೀಸ್‌ನವರು ಬೇರೆ ಯಾರು ಇಲ್ಲದೇ ಇರುವ ಕಾಡು ಪ್ರದೇಶದಲ್ಲಿ ಕಾದುಕೊಂಡು ನಿಂತಿರಬೇಕು. ಇವರು ವ್ಯಾನ್ ಹೋಗಬೇಕು, ಜೀಪು ಹೋಗಬೇಕು ಹೋದ ಮೇಲೆ ಅವರು ಅಲ್ಲಿಂದ ಹೋಗಬೇಕು. ಇದನ್ನು ಪ್ರಜಾ ಪ್ರಭುತ್ವ ಅಂತ ಎಲ್ಲಿ ಕರೆಯುವುದಕ್ಕೆ ಸಾಧ್ಯ ? ಇದು ಸೋಷಿಯಲಿಸಂ ಅಲ್ಲ ಅಂತ ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ವಿ. ಎಲ್. ಶಿವಪ್ಪ (ತಿಪಟೂರು) : ಸ್ವಾಮಿ, ಈಗ ನಮ್ಮ ಈ ಸಭೆಯಲ್ಲಿ ಚರ್ಚೆಯಾಗುತ್ತಾ ಇರತಕ್ಕ ಜನರಲ್ ಅಡ್ಮಿನ್‌ಸ್ಟ್ರೇಷನ್ ವಿಚಾರ ಏನಿದೆ ಅದನ್ನು ನಡೆಸತಕ್ಕ ಜನ ಎಷ್ಟು ಮಟ್ಟಿನ ನೀತಿ ನಿಯಮ ಹಾಕಿಕೊಂಡಿದ್ದಾರೆ ಎಂಬುದನ್ನು ಯೋಚನೆ ಮಾಡಿದಾಗ ಈ ಆಡಳಿತದ ಬಗ್ಗೆ ತಿಳಿವಳಿಕೆ ಇದ್ದವರು ವಿಮರ್ಶೆ ಮಾಡಬಹುದೇ ವಿನಾ ಇಲ್ಲದೆ ಇದ್ದರೆ ಸಾಧ್ಯವಿಲ್ಲ. ದೇಶದ ಆಡಳಿತ ಒಂದು ಬಹಳ ದೊಡ್ಡದಾದ ಸಮಸ್ಯೆ. ಅದನ್ನು ನಡೆಸಿಕೊಂಡು ಹೋಗುವುದು ಬಹಳ ಕಷ್ಟದ ಕೆಲಸ, ಇದರ ಇತಿಹಾಸ ಅವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ, ಮಂತ್ರಿಯಾದವನು ಅಥವಾ ಸರ್ಕಾರ ನಡೆಸತಕ್ಕ ಮನುಷ್ಯನಲ್ಲಿ ಯಾವ ಒಂದು ಸತ ಚಾರಿತ್ರ್ಯ, ಒಳ್ಳೆಯ ಗುಣಗಳು ಇರಬೇಕು ಎಂಬುದನ್ನು ಇತಿಹಾಸದಲ್ಲಿ ಹೇಳಿದ್ದಾರೆ. ಅದನ್ನು ಇವತ್ತು ಈ ಆಡಳಿತಗಾರರು ನೋಡುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಚನ್ನಾಗಿತ್ತು. ಮನೆಯ ಯಜಮಾನ ಅಥವಾ ದೇಶದ ನಾಯಕ ದೇಶದ ಆಡಳಿತವನ್ನು ನಡೆಸುವಾಗ ಆತನಲ್ಲಿರಬೇಕಾದ ನಡತೆ ಮತ್ತು ಚಾರಿತ್ರ್ಯ ಇದನೆಲ್ಲಾ ವಿಮರ್ಶೆ ಮಾಡಕೂಡದು ಅಂದಾಗ ಉತ್ತಮವಾದ ಸಮಾಜ ನಿರ್ಮಾಣ ವಾಗತಕ್ಕ ಸನ್ನಿವೇಶವನ್ನು ನಾವು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ಆಡಳಿತ ನಡೆಸತಕ್ಕವರು ತಮ್ಮ ಜವಾಬ್ದಾರಿಯನ್ನು ತಮ್ಮ ರೀತಿ ನೀತಿಯನ್ನು ಯಾವ ಪ್ರಕಾರ ನಿಗದಿ ಮಾಡಿಕೊಳ್ಳಬೇಕೋ ಅದನ್ನು ಇವತ್ತು ನಾವು ಕಾಣುತ್ತಿಲ್ಲ ೫ ಕೋಟಿ ೧೩ ಲಕ್ಷ ೧೫ ಸಾವಿರ ರೂಪಾಯಿಗಳನ್ನು ಇವತ್ತು ನಾವು ಖರ್ಚು ಮಾಡುತ್ತಾ ಇದ್ದೇವೆ ನಮ್ಮ ಪಕ್ಕದ ಮದ್ರಾಸಿನಲ್ಲಿ ಇರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು, ನಮ್ಮ ಮೈಸೂರಿನಲ್ಲಿ ಇರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು. ಅವರು ಖರ್ಚುಮಾಡತಕ್ಕ ಹಣದ ಮೊತ್ತ ಎಷ್ಟು ನಮ್ಮ ಮೊತ್ತ ಎಷ್ಟು ಎಂಬುದನ್ನು ವಿಮರ್ಶೆ ಮಾಡಿದಾಗ ನಮಗೆ ಗೊತ್ತಾಗುತ್ತದೆ. ಟೋಪಿ ಹಾಕುವವರು ಕೋಟಿಗಟ್ಟಲೆ ಸಂಪಾದನೆ ಮಾಡುವರು. ಐ ಎ ಎಸ್ ಆಫೀಸರು, ಮ್ಯಾಜಿಸ್ಟ್ರೇಟರು ಮುಂತಾದವರು ಕೂಡ ದೊಡ್ಡ ಕೆಲಸಗಳಲ್ಲಿದ್ದರೂ ಅವರಿಗೆ ತಮ್ಮ ಹೆಂಡತಿಗೆ ಒಂದು ಸೀರೆ ತೆಗೆದುಕೊಡಲು ಅವಕಾಶವಿಲ್ಲ ಎಂದು ಕೆಲವರು ಹೇಳುವರು. ತಮಾಷೆ ಹೀಗೆ ಹೇಳುವುದುಂಟು. ಇದರಿಂದ ಜನರಿಗೆ ಅನುಮಾನ ಬರುವುದು. ಅಧಿಕಾರವರ್ಗ, ಆಡಳಿತ ನಡೆಸುವವರು ಸತ್ಯದಿಂದ ಕೆಲಸಮಾಡುವುದಿಲ್ಲವೇ ಎಂಬ ಅನುಮಾನಕ್ಕೆ ಇದು ಕಾರಣವಾಗುವುದು. ಅಧಿಕಾರಿಗಳೇ ಅನೀತಿ ಮಾರ್ಗಗಳಿಗೆ ಇಳಿದರೆ ಏನೂ ಮಾಡುವುದಕ್ಕಾಗುವುದೇ. ಪೋಲೀಸು ಇಲಾಖೆಯವರು ಕಲ್ಯಾಣನಿಧಿ ಎಂದು ವಸೂಲು ಮಾಡುತ್ತಿದ್ದರು, ತಿಪಟೂರಿನ ಒಂದು ಉದಾಹರಣೆ ಹೇಳುತ್ತೇನೆ. ಅದಕ್ಕೆ ಜನರೇ ವಾಲಂಟರಿಯಾಗಿ ಸಹಾಯಮಾಡುತ್ತಿದ್ದಾರೆಂದು ನಾನು ತಿಳಿದಿದ್ದೆ. ನನ್ನನ್ನು ಕೇಳಿದಾಗ ಅದರಿಂದ ಬಡವರಿಗೆ ಅನುಕೂಲವಾಗಬಹುದೆಂದು ನಾನು ೨೫೧ ರೂಪಾಯಿಗಳ ಚೆಕ್ಕನ್ನು ಕೊಟ್ಟೆ. ಆದರೆ ಕಳ್ಳತನ ಮಾಡುವವರು, ಕಾನೂನಿಗೆ ವಿರೋಧವಾಗಿ ನಡೆಯುವವರು, ಲಾರಿಯವರು, ಖಾಸಗಿಯಾಗಿ ವಾಹನ ಗಳನ್ನು ನಡೆಸುವವರು, ಕಾನೂನಿಗೆ ವಿರುದ್ಧವಾಗಿ ವ್ಯಾನ್‌ಗಳನ್ನು ಓಡಿಸುವವರು ಮುಂತಾದವರ ಬಳಿ ನಿಧಿ ವಸೂಲುಮಾಡಿ ನಂತರ ಪೋಲೀಸಿನವರು ವರ್ತಕರ ಬಳಿಗೆ ಬಂದರು. ಆಹಾರ ಧಾನ್ಯಗಳನ್ನು ಮಾರಾಟ ಮಾಡುವವರು ಡಿಕ್ಲರೇಷನ್ ಕೊಡಬೇಕು. ಲೆಕ್ಕ ಇಡಬೇಕು, ಎಂದಿರುವುದನ್ನು ಗಮನಿಸಿ, ನಿಧಿ ಕೊಡದಿದ್ದರೆ ಹೇಗಾದರೂ ಅವರನ್ನು ತೊಂದರೆಮಾಡಬಹುದು ಎಂದು ಹಿಂಸೆಮಾಡಿ

(ಶ್ರೀ ವಿ. ಎಲ್. ಶಿವಪ್ಪ)

ವರ್ತಕರು ಕೊಡದೆ ಇದ್ದಾಗ ನೋಡಿಕೊಳ್ಳುತ್ತೇವೆ ಎಂದು ಹೆದರಿಸಿ ಒಂದೆರಡು ಸಾವಿರ ಕೊಡಬೇಕೆಂದು ಒತ್ತಾಯಮಾಡಿದರು. ಹೀಗೆ ಮಾಡಿ ೮೫ ಸಾವಿರ ರೂಪಾಯಿ ವಸೂಲುಮಾಡಿದ್ದಾರೆಂಬ ವರ್ತಮಾನ ಇದೆ. ಯಾವ ಜನರ ರಕ್ಷಣೆಗೆ, ಸಮಾಜದ ಆಗುಹೋಗುಗಳನ್ನು ಕಾಪಾಡುವುದಕ್ಕೆ ಇರುವ ಹೋಂ ಇಲಾಖೆಯಲ್ಲಿ ಯೋಗ್ಯ ಅಧಿಕಾರಿಗಳಿಲ್ಲದಿದ್ದರೆ ಈ ದೇಶವನ್ನು ರಕ್ಷಣೆ ಮಾಡುವವರು ಯಾರು ? ಮುಖ್ಯ ಮಂತ್ರಿಗಳ ವಿಚಾರ ಹೇಳುವುದಾದರೆ ಡಿಸೆಂಬರು ಹತ್ತರಲ್ಲಿ ಗಲಾಟೆ ನಡೆದುದರ ಬಗ್ಗೆ ಟೆಲಿಗ್ರಾಂ ಮಾಡಿದೆ, ಕಾಗದ ಬರೆದೆ, ಜನರು ಮನವಿ ಮಾಡಿದರು. ಆದರೆ ಇದುವರೆಗೆ ಕಾಗದ ತಲ್ಪಿದೆ ಎಂದು ಕೂಡ ತಿಳಿಸಿಲ್ಲ. ಒಂದು ಜನಾಂಗದ ಲೂಟಿಯಾಗಿ ಪೋಲೀಸಿನವರಿದ್ದರೂ ಅವರಿಂದ ಸಹಾಯ ದೊರೆ ತಿಲ್ಲವೆಂದು ಹೇಳುವಾಗ ಬಂದು ನೋಡುತ್ತೇವೆ ಎಂದು ಕೂಡ ತಿಳಿಸಿಲ್ಲ. ಅದೂ ಬೇಡ, ಜನವರಿ ಹತ್ತರಂದು ಮೂರು ಜನ ಮಂತ್ರಿಗಳು ತಿಪಟೂರಿಗೆ ಬಂದರು. ಅವರ ಪ್ರೋಗ್ರಾಂ ಇರಲಿಲ್ಲ. ನನಗೆ ಬರುವ ವಿಚಾರ ತಿಳಿಸಿರಲಿಲ್ಲ ಒಂದು ಗುಂಪಿನ ಜನರಿಗೆ ಮಾತ್ರ ವಿಚಾರ ತಿಳಿಸಿದ್ದರು. ಮುಖ್ಯ ಮಂತ್ರಿಗಳು, ವಾರ್ತಾ ಮಂತ್ರಿಗಳು ಮತ್ತು ಸಹಕಾರ ಮಂತ್ರಿಗಳು ಬಂದರು. ಅಲ್ಲಿರುವ ಪ್ರವಾಸ ಮಂದಿರಕ್ಕೆಹೋಗಿ ಟೀ ತೆಗೆದುಕೊಂಡು ಮುಕ್ಕಾಲು ಗಂಟೆ ಇದ್ದು ಹೊರಟುಹೋದರು. ಅಲ್ಲಿ ಗಲಾಟೆಯಾಗಿದ್ದುದನ್ನು ತಿಳಿಸಿದ್ದರೂ ಕೂಡ ಅಲ್ಲಿಗೆ ಬಂದಿದ್ದರೂ ಕೂಡ ಏನು ನಡೆದಿದೆ ಎಂಬುದನ್ನು ಅವರು ವಿಚಾರ ಮಾಡಬೇಡವೇ ? ಜವಾಬ್ದಾರಿ ಸ್ಥಾನದಲ್ಲಿರುವವರೇ ಹೀಗೆ ಮಾಡಿದಮೇಲೆ ದೇಶದಲ್ಲಿ ಸುವ್ಯವಸ್ಥೆ ಹೇಗೆ ಇದ್ದೀತು ? ಮರ್ಯಾದೆ ಹೀಗೆ ಮಾಡಿದರೆ ಉಳಿಯುವುದೇ ? ಆಸ್ತಿ ರಕ್ಷಣೆ ಮಾಡಬೇಕು, ಸಮಾಜವನ್ನು ರಕ್ಷಣೆ ಮಾಡಬೇಕು ಎಂದು ತಾನೆ ಅಧಿಕಾರಿಗಳನ್ನಿಡುವುದು ? ಅವರು ಸರಿಯಾಗಿ ಕೆಲಸಮಾಡದಿದ್ದರೆ ಅವರಿಗೆ ಖರ್ಚುಮಾಡಲು ಹೇಗೆತಾನೆ ಮನಸ್ಸು ಬರುವುದು ? ಆಡಳಿತ ನಡೆಸುವವರಿಗೆ ರೀತಿನೀತಿ ಇಲ್ಲದಿದ್ದರೆ ಅದರಿಂದ ಹಾನಿಯಾಗುವುದು. ಹನ್ನೆರಡು ವರ್ಷಗಳಿಂದ ಕೆಡಿಸಿರುವ ರೀತಿನೀತಿ ಯನ್ನು ನೂರು ವರ್ಷವಾದರೂ ಸರಿಪಡಿಸುವುದಕ್ಕಾಗುವುದಿಲ್ಲ. ಯಾರನ್ನು ನೋಡಿದರೂ ಹಣ ಸಂಪಾದನೆ ಮಾಡಬೇಕು, ಸುಖವಾಗಿರಬೇಕು ಎಂಬ ಆಸೆಯುಳ್ಳವರಾಗಿರುವರೇ ಹೊರತು ತ್ಯಾಗ ಮಾಡಬೇಕು, ಯೋಗ್ಯರೀತಿಯಲ್ಲಿ ವರ್ತಿಸಬೇಕು ಎಂಬ ಭಾವನೆ ಅವರಿಗೆ ಇರುವುದಿಲ್ಲ. ಕೋ ಅಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರನ್ನು ನೋಡಿದರೆ ಹೆಂಡತಿ ಹೆಸರಿನಲ್ಲಿ ಇನ್‌ಷೂರೆನ್ಸ್ ಏಜೆನ್ಸಿ ಕೊಡಿಸಿ ಎಲ್ಲರಿಗೂ ಹಿಂಸೆ ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ? ಗಾಂಧಿ ಶಿಷ್ಯರು ತಮ್ಮ ನಡೆನುಡಿ ಹೇಗಿರ ಬೇಕೆಂಬುದನ್ನು ಗಮನಿಸಬೇಕು. ಅಧಿಕಾರವರ್ಗವಾಗಲೀ, ಸಾಮಾನ್ಯ ಜನರಾಗಲೀ ಅವರಿಗೆ ಆ ದೃಷ್ಟಿ ಇರಬೇಕು. ಹಾಗಿಲ್ಲದೆ ಪಾಪಕಾರ್ಯ ಮಾಡುತ್ತಾಹೋದರೆ ಅವರಿಗೆ ಸಹಕಾರ ಕೊಟ್ಟರೆ ದೇಶ ಉಳಿದೀತೇ? ಮಂತ್ರಿಗಳ, ಅಧಿಕಾರದಲ್ಲಿರುವವರ ಅಳಿಯ. ನೆಂಟ ತಪ್ಪು ಮಾಡಿದರೆ ಅದನ್ನು ಮುಚ್ಚಿಹಾಕಲು ಪ್ರಯತ್ನ ಮಾಡಿದರೆ ಎರಡು ಬಗೆಯಲ್ಲಿ ತಪ್ಪು ಮಾಡಿದಂತಾಗುವುದು. ಬೆಂದಮನೆಗೆ ಹಿರಿದದ್ದೇ ಲಾಭ ಎಂಬ ಹಾಗೆ ಸಿಕ್ಕಿದ್ದನ್ನು ದೋಚುತ್ತಿರುವರೇ ಹೊರತು ಆಡಳಿತ, ಜನರ ಕಷ್ಟಸುಖ, ಸಂಪ್ರದಾಯ ಮುಂತಾದುವುಗಳ ಕಡೆಗೆ ಯಾರೂ ಗಮನಕೊಡುತ್ತಿಲ್ಲ. ಹಿಂದೆ ಅಧಿಕಾರಿಗಳಲ್ಲಿ ಶ್ರದ್ಧೆ ಇತ್ತು. ಪಾಪಪುಣ್ಯದ ಭೀತಿ, ದಯದಾಕ್ಷಿಣ್ಯ ಇತ್ತು. ಈಗ ಅದೊಂದೂ ಇಲ್ಲ, ದೇಶದಲ್ಲಿ ಶಾಂತಿ ಯಿಲ್ಲ, ಹೀಗಾದರೆ ಮುಂದಿನ ಇತಿಹಾಸ ಹೇಗೆ ಬೆಳೆಯುವುದು ಎಂಬುದನ್ನು ಯೋಚನೆಮಾಡಬೇಕು. ಸರಿಯಾದ ಆಡಳಿತ ಈಗ ನಡೆಸದೆ ಇದ್ದರೆ ಮುಂದಿನ ಜನಾಂಗದ ಶಾಪಕ್ಕೆ ಗುರಿಯಾಗಬೇಕಾಗುವುದು. ಹಿಂದೆ ಪಾಪ ಮಾಡಲು ಹೆದರುತ್ತಿದ್ದವರು, ಈಗ ಬಹಳ ಅನ್ಯಾಯಮಾಡುತ್ತಿದ್ದಾರೆ. ದೇಶವನು ಕಟ್ಟಬೇಕಾದರೆ ಹೇಗೆ ಆಡಳಿತವಿರಬೇಕೆಂಬುದನ್ನು ಯೋಚನೆಮಾಡಬೇಕು. ಇಲ್ಲದಿದ್ದರೆ, ಬಹಳ ಪಾಪ ಮಾಡಿದಂತಾಗುವುದು. ಆಡಳಿತ ಶಿಥಿಲವಾಗಲು ಅವಕಾಶ ಕೊಡಬಾರದು. ಹಿಂದೆ ತುಕೋಳ್ ವರದಿಯನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು ನಿಧಾನವಾಗಿ ಯೋಚನೆ ಮಾಡುವು ದಾಗಿ ಹೇಳಿದರು. ಆದರೆ ಯಾರನ್ನೂ ಹೇಳದೆಕೇಳದೆ ಸಿಂಡಿಕೇಟ್ ಮತ್ತು ಇಂಡಿಕೇಟ್ ಆದಮೇಲೆ ತಕ್ಷಣ ಏನೋ ಒಂದು ಉದ್ದೇಶದಿಂದ ಹತ್ತು ಕೋಟಿ ರೂಪಾಯಿ ಮಂಜೂರು ಮಾಡಿ ವರದಿಯನ್ನು ಜಾರಿಗೆ ಕೊಟ್ಟರು. ನೀರಾವರಿ ಕಾರ್ಯಗಳಿಗೆ ಹಣವಿಲ್ಲ, ಅದಕ್ಕಾಗಿ ರಿಸೋರ್ಸಸ್ ಕಮಿಟಿ ರಚಿಸಿದೆ, ಸಂಪನ್ಮೂಲ ಹುಡುಕಬೇಕಾಗಿದೆ ಎಂದು ಹೇಳುತ್ತಿರುವಾಗ ಹತ್ತು ಕೋಟಿ ಒಂದು ವರ್ಷಕ್ಕೆ ಖರ್ಚು ಮಾಡುವುದರ ಅರ್ಥವೇನು ? ಕೊಡಲು ಕಾಲಾವಕಾಶ ಬೇಕು, ೫ ವರ್ಷಗಳಲ್ಲಿ ಬಡ್ಡಿ ಸೇರಿಸಿ ಕೊಡುತ್ತೇವೆ ಎಂದು ಹೇಳಬಹುದಾಗಿತ್ತು. ಅಂಥ ಶಕ್ತಿಯಿಲ್ಲದೆ ಆಡಳಿತ ನಡೆಸಿ ರೀತಿ ನೀತಿಯಿಲ್ಲದೆ ವ್ಯಯ ಮಾಡುವುದಾದರೆ ಮುಂದೆ ಬಹಳ ತೊಂದರೆಗೆ ಗುರಿಯಾಗಬೇಕಾಗುತ್ತದೆ ಎಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Speaker's Ruling re : *Statements in reply to Questions to be laid on the Table of the House.*

MR. SPEAKER.—Before adjourning the House, I have a ruling to give.

On 27th of January 1970 in respect of replies to Starred Question No. 78 by Sri H. N. Nanje Gowda regarding the collection and remission of land revenue, some statements were placed on the Table of the House, but were not printed as part of replies since the statements were very lengthy in nature. On that occasion, objection was taken for not making available copies of the statements appended to the reply and as I wanted to examine the matter, the question was held-over.

I have since gone through this question in the light of the practice in vogue in the Lok Sabha and obtaining in other Legislatures including the Mother of Parliament-House of Commons. I have found that everywhere, where very lengthy statements are referred to in replies to questions they are not printed and supplied to the members but only an indication is given that statements are laid on the Table which means that a few copies are kept on the Table of the House and also in the Library for reference by the concerned member and others.

Now there are two courses open to be followed in this case. One is to continue the existing practice *viz* laying a copy of the statement on the Table. The Second course is to convert the starred question into an unstarred one in which case alse a copy of the statement is laid in the Legislature Library. But, I propose to contime the existing practices as it is followed in other Legislatures also.

The House will now rise to meet again at 8-30 A.M. tomorrow.

The House adjourned at Two Minutes past Six of the Clock to meet at Thirty Minutes past Eight of the Clock on Friday the 13th March 1970.

WD—14711—GPB—550—3-8-70.